೫೦ ಕರ್ನಾಟಕ
KARNATAKA

ಕರ್ನಾಟಕ ಸರ್ಕಾರ

ವಿಜಯನಗರ ಅಧ್ಯಯನ

ಸಂಪುಟ - ೧೧

ವಿಜಯನಗರ ವಿಚಾರ ಸಂಕಿರಣ ೨೦೦೫ರಲ್ಲಿ ಮಂಡಿಸಿದ ಪ್ರಬಂಧಗಳು



ಸಂಪಾದಕರು

ಡಾ. ಆರ್. ಗೋಪಾಲ್

ಬಿ.ಎಂ. ಚಿಕ್ಕಮಾರೇಗೌಡ

ಟಿ.ಎಸ್. ಗಂಗಾಧರ

ವಿಜಯನಗರ ಅಧ್ಯಯನ

ಸಂಪುಟ ೧೧

ಹಂಪಿ ಉತ್ಸವ ೨೦೦೫ರಲ್ಲಿ ಮಂಡಿಸಿದ ಪ್ರಬಂಧಗಳು

ವಿಜಯನಗರ ಅಧ್ಯಯನ

ಸಂಪುಟ - ೧೧

ಹಂಪಿ ಉತ್ಸವ ೨೦೦೫ರಲ್ಲಿ ಮಂಡಿಸಿದ ಪ್ರಬಂಧಗಳು

ಸಂಪಾದಕರು

ಡಾ.ಆರ್. ಗೋಪಾಲ್

ಬಿ.ಎಂ. ಚಿಕ್ಕಮಾರೇಗೌಡ

ಟಿ.ಎಸ್. ಗಂಗಾಧರ

ಕರ್ನಾಟಕ ಸರ್ಕಾರ

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ

ಮೈಸೂರು

VIJAYANAGARA ADHYAYANA
Vol - 11

Publisher
Director
Directorate of Archaeology and Museums
Mysore - 570 001
Ph: 0821 - 2424673 / 4

First Print : 2006

Pages : 486

Price: Rs.195-00

DTP & Printed at
Harsha Printers
Mysore-570 004

ವಿಜಯನಗರ ಅಧ್ಯಯನ
ಸಂಪುಟ - ೧೧

ಪ್ರಕಾಶಕರು
ನಿರ್ದೇಶಕರು
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ
ಮೈಸೂರು - ೫೭೦ ೦೦೧
ದೂರವಾಣಿ : ೦೮೨೧ - ೨೪೨೪೬೭೩ / ೪

ಮೊದಲ ಮುದ್ರಣ : ೨೦೦೬

ಪುಟಗಳು : ೪೮೬

ಬೆಲೆ : ರೂ. ೧೯೫-೦೦

ಅಕ್ಷರ ಜೋಡಣೆ ಮತ್ತು ಮುದ್ರಣ
ಹರ್ಷ ಪ್ರಿಂಟರ್ಸ್
ಮೈಸೂರು - ೫೭೦ ೦೦೪

ಪ್ರಸ್ತಾವನೆ

ಉತ್ತರ ಭಾರತದಲ್ಲಿ ಗುಪ್ತಯುಗವಿದ್ದಂತೆ, ದಕ್ಷಿಣಭಾರತದ ಇತಿಹಾಸದಲ್ಲಿ ವಿಜಯನಗರ ಯುಗ ಕಾಣಿಸಿಕೊಳ್ಳುತ್ತದೆ. ಎರಡೂ ಸುವರ್ಣಯುಗ ಎಂಬ ಹೆಗ್ಗಳಿಕೆಗೆ ಪಾತ್ರವಾಗಿವೆ. ವಿಜಯನಗರ ಕಾಲದ ಸಾಧನೆಗಳನ್ನು ಹೆಸರಿಸುವಾಗ ರಾಜಕೀಯ, ಆಡಳಿತ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ಸಾಹಿತ್ಯಿಕ ಮುಂತಾದ ಅಂಶಗಳು ನಮ್ಮ ಸ್ಮೃತಿ ಪಟಲದ ಮುಂದೆ ಬಂದು ನಿಲ್ಲುತ್ತವೆ. ನಿಕೊಲೊ ಕೊಂತಿ, ವರ್ತೆಮ, ಬಾರ್ಬೋಸ, ಸೀಸರ್ ಫ್ರೆಡರಿಕ್, ನ್ಯೂನಿಜ್ ಮುಂತಾದ ವಿದೇಶೀಯರು ವಿಜಯನಗರ ಸಾಮ್ರಾಜ್ಯ ದಲ್ಲಿ ಕೆಲಕಾಲ ತಂಗಿದ್ದು, ಸಾಮ್ರಾಜ್ಯದಲ್ಲಿ ಸಂಚಾರ ಮಾಡಿ ತಾವು ಕಂಡದ್ದನ್ನು, ಕೇಳಿದ್ದನ್ನು ಮನಃಪೂರ್ತಿಯಾಗಿ ಮೆಚ್ಚಿಕೊಂಡು ತಮ್ಮ ಸುಮಧುರವಾದ ಭಾವನೆಗಳನ್ನು ದಾಖಲಿಸಿದ್ದಾರೆ. ಇವೆಲ್ಲವುಗಳಿಗೂ ಕಲಶವಿಟ್ಟಂತೆ ವಿಜಯನಗರದ ಅರಸರು, ಮಂತ್ರಿಗಳು, ಜನ ಸಾಮಾನ್ಯರೂ ಮಧ್ಯಕಾಲೀನ ಜನಗಳು ನಿಬ್ಬೆರಗಾಗುವಂತೆ ವಾಸ್ತುಶಿಲ್ಪ ಕೃತಿಗಳನ್ನು ನಿರ್ಮಿಸಿದ್ದಾರೆ. ಇಂದಿಗೂ ಇವು ಜಾಜ್ವಲ್ಯಮಾನವಾಗಿ ಪ್ರಕಾಶಿಸುತ್ತಿವೆ. ಕರ್ನಾಟಕ ಸರ್ಕಾರ ಪ್ರತಿವರ್ಷವೂ ನಡೆಸುತ್ತಿರುವ ಹಂಪಿ ಉತ್ಸವದ ಸಮಯದಲ್ಲಿ ಈ ನಿರ್ದೇಶನಾಲಯವು ವಿಚಾರಸಂಕಿರಣವನ್ನು ಏರ್ಪಡಿಸುತ್ತ ಬಂದಿದೆ. ಈ ವಿಚಾರ ಸಂಕಿರಣವನ್ನು ಹಂಪಿಯಲ್ಲಿ 2005ರ ನವೆಂಬರ್ ದಿನಾಂಕ 4 ಮತ್ತು 5ರಂದು ಏರ್ಪಡಿಸಿದ್ದಿತು. ಅದರಲ್ಲಿ ವಿದ್ವಾಂಸರು ಮಂಡಿಸಿದ ನಲವತ್ತೈದು ಪ್ರಬಂಧಗಳನ್ನು ವಿಜಯನಗರ ಅಧ್ಯಯನ ಮಾಲಿಕೆಯಲ್ಲಿ ಹನ್ನೊಂದನೆಯ ಕುಸುಮವಾಗಿ ಪ್ರಕಟಿಸಲಾಗು ತ್ತಿದೆ. ಈ ಉತ್ಸವವನ್ನು ಸನ್ಮಾನ್ಯ ಶ್ರೀ ಎಂ.ಪಿ. ಪ್ರಕಾಶ್, ಉಪ ಮುಖ್ಯಮಂತ್ರಿ, ಕರ್ನಾಟಕ ಸರ್ಕಾರ ಅವರು ಉದ್ಘಾಟಿಸಿ ಅದಕ್ಕೆ ಚಾಲನೆ ನೀಡಿದರು.

ಈ ವಿಚಾರ ಸಂಕಿರಣ ಸುಗಮವಾಗಿ ನಡೆಯಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಶ್ರೀಮತಿ ಉಷಾಗಣೇಶ್ ಭಾ.ಆ.ಸೇ. ಅವರು ಮಾರ್ಗದರ್ಶನ ನೀಡಿದ್ದರು. ಅವರಿಗೆ ಗೌರವಯುತ ಕೃತಜ್ಞತೆಗಳನ್ನು ಅರ್ಪಿಸು ವುದು ನನ್ನ ಆದ್ಯ ಕರ್ತವ್ಯ. ವಿಚಾರ ಸಂಕಿರಣದಲ್ಲಿ ಭಾಗವಹಿಸಿದ ಎಲ್ಲ ವಿದ್ವಾಂಸರಿಗೂ, ಇದಕ್ಕೆ ಸಹಕಾರ ನೀಡಿದ ಇಲಾಖೆಯ ಎಲ್ಲ ಸಹೋದ್ಯೋಗಿಗಳಿಗೂ ಮತ್ತು ಇದನ್ನು ಸುಂದರವಾಗಿ ಮುದ್ರಿಸಿದ ಹರ್ಷ ಪ್ರಿಂಟರ್ಸ್ ಅವರಿಗೂ ನನ್ನ ಕೃತಜ್ಞತೆಗಳು.

ಮೈಸೂರು
15-10-06

ಡಾ. ಆರ್. ಗೋಪಾಲ್

ಪರಿವಿಡಿ

ಸಮ್ಮೇಳನಾಧ್ಯಕ್ಷರ ಭಾಷಣ

ಡಾ.ಬಿ. ರಾಜಶೇಖರಪ್ಪ

'ವಿಜಯನಗರ ಇತಿಹಾಸ ಸಮ್ಮೇಳನ'ವನ್ನು ಉದ್ಘಾಟನೆ ಮಾಡಿದ ಕರ್ನಾಟಕ ಸರ್ಕಾರದ ಉಪಮುಖ್ಯಮಂತ್ರಿಗಳೂ ಸಾಂಸ್ಕೃತಿಕ ಕಾಳಜಿಗಳಿರುವ ಅಪರೂಪದ ರಾಜ ನೀತಿಜ್ಞರೂ ಆದ ಸನ್ಮಾನ್ಯ ಶ್ರೀ ಎಂ.ಪಿ. ಪ್ರಕಾಶ್ ಅವರೆ, ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತಿ ಉಷಾ ಗಣೇಶ್ ಅವರೆ, ಈ ಸಮ್ಮೇಳನವನ್ನು ಇಲ್ಲಿ ಆಯೋಜಿಸಿರುವ ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಇಲಾಖೆಯ ನಿರ್ದೇಶಕರಾದ ಡಾ. ಆರ್. ಗೋಪಾಲ್ ಅವರೆ, ಇಲ್ಲಿ ಸೇರಿರುವ ಎಲ್ಲಾ ಹಿರಿಯ ಕಿರಿಯ ಇತಿಹಾಸ ಪ್ರೇಮಿಗಳೆ.

ಇಂದು ನಾನು ಕೇವಲ ಈ ಸಮ್ಮೇಳನದ ಅಧ್ಯಕ್ಷ ಸ್ಥಾನದ ಕರ್ತವ್ಯ ನಿರ್ವಹಿಸ ಬೇಕಿದ್ದವನಾದರೂ, ಈ ಉದ್ಘಾಟನೆ ಸಮಾರಂಭದ ಅಧ್ಯಕ್ಷತೆ ವಹಿಸುವವರು ಆಗಮಿಸಿ ಲ್ಲದ ಕಾರಣ, ಇಲಾಖೆಯ ವರಿಷ್ಠಾಧಿಕಾರಿಗಳ ಆಶಯದಂತೆ, ನಾನೀಗ ಎರಡೂ ಸ್ಥಾನಗಳ ದ್ವಿಪಾತ್ರ ಕಾರ್ಯ ನಿರ್ವಹಣೆಯನ್ನು ಮಾಡಬೇಕಾಗಿ ಬಂದಿದೆ. ಮೊದಲಿಗೆ, ಈ ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ಈ ಬಾರಿ ನನ್ನನ್ನು ಆಯ್ಕೆ ಮಾಡಿರುವುದಕ್ಕೆ ನನ್ನ ಹಾರ್ದಿಕ ಕೃತಜ್ಞತೆಯನ್ನು ಹೇಳಬೇಕಾದ್ದು ನನ್ನ ಕರ್ತವ್ಯ. ಹಿಂದೆ ಎಷ್ಟೋ ಜನ ಹಿರಿಯರು ನಿರ್ವಹಿಸಿರುವ ಈ ಸ್ಥಾನಕ್ಕೆ ನಾನು ಎಷ್ಟರ ಮಟ್ಟಿಗೆ ಅರ್ಹನೋ ನನಗೆ ತಿಳಿಯದು. ಇಲಾಖೆಯವರ ಪ್ರೀತಿ ಅಭಿಮಾನಿಗಳಿಗೆ ಕಟ್ಟುಬಿದ್ದು, ಅತ್ಯಂತ ಸಂಕೋಚ ದಿಂದ ಮತ್ತು ವಿನಮ್ರತೆಯಿಂದ ಈ ಸ್ಥಾನವನ್ನು ಒಪ್ಪಿಕೊಂಡಿದ್ದೇನೆ. ನನ್ನ ಆಯ್ಕೆಗೆ ಕಾರಣರಾದ ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಇಲಾಖೆಯ ನಿರ್ದೇಶಕರೂ ಆತ್ಮೀ ಯರೂ ಆದ ಡಾ. ಆರ್. ಗೋಪಾಲ್ ಅವರಿಗೆ ಮತ್ತು ಅವರ ಇಲಾಖೆಯ ಎಲ್ಲ ಸನ್ಮಿತ್ರರಿಗೂ ನಾನು ತುಂಬ ಕೃತಜ್ಞನಾಗಿದ್ದೇನೆ. ಮೂಲತಃ ಸಾಹಿತ್ಯದ ವಿದ್ಯಾರ್ಥಿ ಯಾದ ನಾನು ಇತಿಹಾಸ ಕ್ಷೇತ್ರದಲ್ಲಿ ಕೆಲಸ ಮಾಡಲು ಮತ್ತು ಇಂಥ ಮನ್ನಣೆ ಪಡೆಯಲು ಪರೋಕ್ಷವಾಗಿ ಕಾರಣರಾದ ಎಲ್ಲ ಹಿತೈಷಿಗಳನ್ನೂ ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳು ತ್ತೇನೆ.

ಈಗಾಗಲೇ ಡಾ. ಗೋಪಾಲ್ ಅವರು ತಿಳಿಸಿದ ಹಾಗೆ, ಈಗ ನಡೆಯುತ್ತಿರುವ 'ವಿಜಯನಗರ ಇತಿಹಾಸ ಸಮ್ಮೇಳನ' 11ನೆಯದು. ಕರ್ನಾಟಕ ಸರ್ಕಾರ ಈಗ್ಗೆ ಹತ್ತು

ಹಲವು ವರ್ಷಗಳಿಂದ ವಿಜಯನಗರದ ಗತವೈಭವವನ್ನು ಎಲ್ಲರೂ ನೆನಪು ಮಾಡಿಕೊಳ್ಳುವ ಹಾಗೆ, 'ಹಂಪಿ ಉತ್ಸವ'ವನ್ನು ನಡೆಸುತ್ತ ಬಂದಿದೆ. ಹಂಪಿಯಲ್ಲಿ ನಡೆಯುವ ಉತ್ಸವದಲ್ಲಿ ಸಂಗೀತ ನೃತ್ಯ ಜನಪದ ಕಲೆಗಳು ನಾಟಕ ಇತ್ಯಾದಿಗಳು ನೋಡುಗರ ಕಣ್ಮನ ತಣಿಸುವಂತೆ ನಡೆಯುತ್ತ ಬಂದಿದೆ. ಅವುಗಳ ಜೊತೆಗೆ ಇಲ್ಲಿ ವಿಜಯನಗರ ಇತಿಹಾಸದ ಮಥನ ಕೂಡಾ ಆಗಲಿ ಎಂದು ಪ್ರತಿವರ್ಷ ಈ ಸಮ್ಮೇಳನವನ್ನು ಏರ್ಪಡಿಸುತ್ತ ಬಂದಿರುವುದೂ ಮತ್ತು ಇಲ್ಲಿ ಮಂಡಿಸಿದ ಸಂಪ್ರಬಂಧಗಳ ಸಂಪುಟವನ್ನೂ ಹೊರತರುತ್ತಿರುವುದೂ ಉಚಿತವಾಗಿದೆ. ಇಂಥ ಒಂದು ಸುಂದರ ಪ್ರಕ್ರಿಯೆಯಲ್ಲಿ ನಾವೆಲ್ಲ ಇಲ್ಲಿ ಸೇರಿದ್ದೇವೆ.

ನಾನು ಹಿಂದೆ ಬೇರೆಡೆ ಹೇಳಿರುವ ಒಂದೆರಡು ಮಾತುಗಳನ್ನು ಇಲ್ಲೂ ಪ್ರಾರಂಭದಲ್ಲಿ ಹೇಳಬೇಕೆನಿಸುತ್ತಿದೆ: ಮಹಾಜ್ಞಾನಿ ಅಲ್ಲಮಪ್ರಭು ಒಂದೆಡೆ ಹೀಗೆ ಹೇಳುತ್ತಾರೆ: 'ಹಿಂದನರಿಯದುದು ಮುಂದನೇನ ಬಲ್ಲುದೋ...' ಈ ಮಾತು ಅವರು ಯಾವ ಸಂದರ್ಭಕ್ಕೇ ಆಡಿರಲಿ, ಇತಿಹಾಸದ ಸಂದರ್ಭಕ್ಕಂತೂ ತುಂಬ ಪ್ರಸ್ತುತ ಎನಿಸುತ್ತದೆ. ಹಾಗೇ ಅವರು ಮತ್ತೊಂದು ಕಡೆ ಹೇಳುತ್ತಾರೆ: 'ಹಿಂದಣ ಅನಂತವನು ಮುಂದಣ ಅನಂತವನು ಒಂದು ದಿನ ಒಳಕೊಂಡತ್ತು ನೋಡಾ'. ಈ ಮಾತು ತುಂಬ ದೊಡ್ಡದು. ಹಿಂದೆ ಆಗಿ ಹೋದ ಅನಂತ ಯುಗಗಳು ಮುಂದೆ ಆಗಲಿರುವ ಅನಂತ ಯುಗಗಳು ಸಂಧಿಸುತ್ತಿರುವ ಇಂದಿನ ದಿನದಲ್ಲಿ ನಾವು ನಿಂತಿದ್ದೇವೆ. ಅವೆಲ್ಲವೂ ನಾವು ಇರುವ ಇಂದಿನ ದಿನದೊಳಗೆ ಅಂತರ್ಗತವಾಗಿವೆ, ಬೀಜರೂಪವಲ್ಲಿವೆ. ಜಗತ್ತು ನಡೆದು ಬಂದ ಚರಿತ್ರೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡುವುದಾದರೆ, ಪ್ರಭುದೇವರ ಆ ಮಾತು, ಹಿಂದಿನ ಅನೇಕ ಯುಗಗಳ ವಿದ್ಯಮಾನಗಳು ಹುದುಗಿರುವ ಮತ್ತು ಮುಂದಿನ ಅನೇಕ ಯುಗಗಳ ವಿದ್ಯಮಾನಗಳು ಅಂಕುರಿಸಲಿರುವ ಇಂದಿನ ದಿನ ಎಷ್ಟು ಮಹತ್ತ್ವದ್ದು ಎಂಬುದನ್ನು ಮನಸ್ಸಿಗೆ ತರುತ್ತದೆ. ಸ್ವಾಮಿ ವಿವೇಕಾನಂದರೂ ಕೂಡಾ ಹೇಳುತ್ತಾರೆ 'ಭೂತ ತಿಳಿಯದೆ ವರ್ತಮಾನದ ಗ್ರಹಿಕೆ ಪೂರ್ಣವಾಗದು; ಇವೆರಡೂ ತಿಳಿದಲ್ಲದೆ ಭವಿಷ್ಯತ್ತಿನ ಕನಸು ಅಸಾಧ್ಯ'. ಹೀಗೇ ಆಧುನಿಕ ಭಾರತದ ಸಂವಿಧಾನ ಶಿಲ್ಪಿ ಎನಿಸಿದ ಡಾ. ಬಿ.ಆರ್. ಅಂಬೇಡ್ಕರ್‌ರರು ಹೇಳಿರುವ ಮಾತೂ ತುಂಬ ಮುಖ್ಯವಾದದ್ದು; 'ಇತಿಹಾಸವನ್ನು ಅರಿಯದವರು ಇತಿಹಾಸವನ್ನು ಸೃಷ್ಟಿಸಲಾರರು'. ಈ ಮಾತುಗಳೆಲ್ಲ ನಾವು ಇತಿಹಾಸವನ್ನು ಗಂಭೀರವಾಗಿ ನೋಡುವಂತೆ ಮಾಡುತ್ತವೆ. ಆಧುನಿಕ ಇಂಗ್ಲಿಷ್ ಸಾಹಿತ್ಯದ ಪ್ರವರ್ತಕ ಟಿ.ಎಸ್. ಎಲಿಯಟ್ ಹೇಳುವಂತೆ 'ಇತಿಹಾಸ ಪ್ರಜ್ಞೆ ಅತ್ಯಂತ ಅವಶ್ಯಕವಾದದ್ದು; ನಾವು ಅದನ್ನು ಗಳಿಸಿಕೊಳ್ಳುವತ್ತ ವಿಮುಖವಾಗುವಂತೆಯೇ ಇಲ್ಲ'.

ಇಲ್ಲಿ ಅನೇಕ ಇತಿಹಾಸ ತಜ್ಞರು ಬಂದಿದ್ದಾರೆ. ಬೇರಾವುದಕ್ಕಿಂತ ವಿಜಯನಗರ ಇತಿಹಾಸದ್ದೇ ಸಮ್ಮೇಳನ ಹೀಗೆ ಪ್ರತಿವರ್ಷ ನಡೆಯುತ್ತಿರುವುದೇಕೆ? ಈ ಪ್ರಶ್ನೆಗೆ ಉತ್ತರ

ಎಲ್ಲರಿಗೂ ತಿಳಿದಂತೆ ಸ್ಪಷ್ಟವೇ ಇದೆ. ಕರ್ನಾಟಕ ಚರಿತ್ರೆಯಲ್ಲಿ ಅತಿ ಹೆಚ್ಚು ಭಾಗವನ್ನು ಆಕ್ರಮಿಸಿರುವುದು ವಿಜಯನಗರದ ಚರಿತ್ರೆ. ವಿಜಯನಗರದ ಕಾಲವನ್ನು ಕುರಿತು ನಡೆದಿರುವಷ್ಟು ಬಹುಮುಖವಾದ ಮತ್ತು ವ್ಯಾಪಕವಾದ ಅಧ್ಯಯನ ಬೇರಾವ ಅರಸೊತ್ತಿಗೆಯ ಕಾಲವನ್ನೂ ಕುರಿತು ನಡೆದಿಲ್ಲ. ವಿಜಯನಗರ ಕಾಲದಲ್ಲಿ ಸಂದ ಸಾಮಾಜಿಕ ಆರ್ಥಿಕ ಧಾರ್ಮಿಕ ಕಲೆ ಸಾಹಿತ್ಯ ಇತ್ಯಾದಿ ಕ್ಷೇತ್ರಗಳಿಗೆ ಸಂಬಂಧಿಸಿದ ಕೊಡುಗೆಯ ಪ್ರಮಾಣ ದೊಡ್ಡದು. ಇನ್ನೊಂದು ಯಾವ ಅರಸೊತ್ತಿಗೆಯ ಕಾಲದಲ್ಲೂ ಈ ಪ್ರಮಾಣದ ಕೊಡುಗೆ ಇಲ್ಲ ಎನ್ನುವಷ್ಟು ಬೃಹತ್ ಪ್ರಮಾಣದ್ದು ಮತ್ತು ವೈವಿಧ್ಯಮಯವಾದದ್ದು, ಎಂದರೆ ತಪ್ಪಾಗಲಾರದು. ಚರಿತ್ರೆಯ ರಚನೆಗೆ ಮತ್ತು ಪುನಾರಚನೆಗೆ ಬೇಕಾದ ಆಕರಗಳು - ಶಿಲಾ ಹಾಗೂ ಲೋಹ ಶಾಸನಗಳು ; ನಾಣ್ಯಗಳು ; ತಾಳೇಗರಿ ಮತ್ತು ಕಾಗದದ ಹಸ್ತಪ್ರತಿಗಳು; ವಂಶಾವಳಿ ಕೈಫಿಯತ್ತು ಬಖೈರು ನಾಮೆ ಪುರಾಣ ಸ್ಥಳಮಹಾತ್ಮೆಗಳು ; ವಾಸ್ತು ಮತ್ತು ಮೂರ್ತಿ ಶಿಲ್ಪ ರಚನೆಗಳು ; ರೇಖಾ ಚಿತ್ರಗಳು ಕಲಾಕೃತಿಗಳು; ಕೋಟೆ ಮಂಟಪ ಚಾವಡಿ ಮಠ ದೇವಾಲಯದ ವೇದಿಕೆಗಳು; ಶಿಷ್ಟ ಹಾಗೂ ಜಾನಪದ ಸಾಹಿತ್ಯ, ಆಚರಣೆ ನಂಬಿಕೆಗಳು ಇತ್ಯಾದಿಗಳು - ವಿಜನಯಗರ ಇತಿಹಾಸ ಕುರಿತಂತೆ ಪುಂಖಾನುಪುಂಖವಾಗಿ ಬೆಳಕಿಗೆ ಬರುತ್ತಲೇ ಇವೆ. ಅದರಿಂದಾಗಿ ಇತಿಹಾಸದ ಪುನಾರಚನೆ, ಪುನರ್ವಿಶ್ಲೇಷಣೆ, ಪುನರ್ವ್ಯಾಖ್ಯಾನ ನಡೆಯುತ್ತಲೇ ಇವೆ. ಇತಿಹಾಸ ಕುರಿತ ನಮ್ಮ ಅಧ್ಯಯನ ಸ್ಥೂಲದಿಂದ ಸೂಕ್ಷ್ಮದೆಡೆಗೆ ಸಾಗುತ್ತ ಬಂದಿರುವುದು ಒಂದು ಉತ್ತಮ ಬೆಳವಣಿಗೆ ಎನ್ನುವಲ್ಲಿ ಎರಡು ಮಾತಿಲ್ಲ.

ಇತಿಹಾಸವೆಂದರೆ ಕೇವಲ ರಾಜ ಮಹಾರಾಜರ ವೈಭವ ಸಂಘರ್ಷಗಳ ಕಥನವಲ್ಲ, ಅದೊಂದು ಗತಕಾಲದ ಬದುಕಿನ ಗ್ರಹಿಕೆ ಎಂಬ ಅಭಿಪ್ರಾಯ ಈಗಾಗಲೆ ಮಾನ್ಯವಾಗಿದೆ. ಇತಿಹಾಸದ ಬಗೆಗಿನ ಹಿಂದಿನ ದೃಷ್ಟಿ ಈಗ ಬದಲಾಗಿದೆ. ಇಂದು ನಾವು ಎಲ್ಲ ಆಕರಗಳನ್ನು ಅದರಲ್ಲೂ ಲಿಖಿತ ಆಧಾರಗಳನ್ನು ಆಯಾ ಆಧಾರ ಕರ್ತರ ದೃಷ್ಟಿ ಮಿತಿ ಇವುಗಳ ಬಗ್ಗೆ ನಿಷ್ಪಕ್ಷಪಾತವಾಗಿ ಪರಿಶೀಲಿಸಿ, ಅವುಗಳಲ್ಲಿಯ ಸತ್ಯಾಂಶಗಳನ್ನು ಕ್ರೋಢೀಕರಿಸುತ್ತಿದ್ದೇವೆ, ವಿಮರ್ಶಿಸುತ್ತಿದ್ದೇವೆ. ಅಂದರೆ ಆಯಾ ಲಿಖಿತ ಆಧಾರಗಳ ಹಿಂದಿನ ದೃಷ್ಟಿದೋಷ, ಆಮಿಷ, ಪಕ್ಷಪಾತ, ಪೂರ್ವಾಗ್ರಹಗಳ ಬಗ್ಗೆ ಎಚ್ಚರಿಕೆಯಿಂದ ತೂಗಿ ನೋಡಿದಾಗ ಸತ್ಯಾಂಶಗಳನ್ನು ಸೋಸಿ ತೆಗೆಯಲು ಸಾಧ್ಯವಾಗುತ್ತದೆ. ಇತಿಹಾಸವೆಂದರೆ ಒಮ್ಮೆ ಬರೆದ ಮೇಲೆ ಅಲ್ಲಿಗೆ ಮುಗಿದು ಹೋಗುವುದಲ್ಲ; ಹೊಸ ಹೊಸ ಆಧಾರಗಳು ಸಿಕ್ಕ ಹಾಗೆ ಅದು ಬೆಳೆಯುತ್ತ ಹೋಗುತ್ತದೆ. ಅಂದರೆ ಹೊಸ ಹೊಸ ಅಂಶಗಳು ಇತಿಹಾಸಕ್ಕೆ ಸೇರುತ್ತ ಹೋಗುತ್ತವೆ. ಹಾಗೆಂದೇ ನಾವು ಇತಿಹಾಸದ ಪುನಾರಚನೆ ಎಂಬ ಮಾತನ್ನು ಬಳಸುತ್ತೇವಲ್ಲವೆ? ಹಾಗಾಗಿಯೇ ಇತಿಹಾಸ ಕುರಿತ ಚರ್ಚೆ, ಪ್ರತಿಚರ್ಚೆ, ಮರುಚರ್ಚೆ ಅನಿವಾರ್ಯವಾಗುತ್ತವೆ. 'ವಾದೇ ವಾದೇ ಜಾಯತೇ ತತ್ತ್ವ ಭೋಧಃ' ಎಂಬ

ಮಾತು ಚರಿತ್ರೆಯ ವಿಷಯದಲ್ಲಂತೂ 'ಸತ್ಯಸ್ಯ ಸತ್ಯ'. ಇಂಗ್ಲಿಷ್ ಕವಿ ಷೆಲ್ಲಿ ಹೇಳುವ ಒಂದು ಮಾತು ಇಲ್ಲಿ ನೆನಪಿಗೆ ಬರುತ್ತದೆ. 'The More and more we study, the more and more we discover our ignorance'. ಈ ಜ್ಞಾನಪದ ದೃಷ್ಟಿ ವಿನಯಶೀಲ ದೃಷ್ಟಿ ನಮಗೆಲ್ಲ ಇರಬೇಕಾದದ್ದೆ.

ಇತಿಹಾಸ ಎನ್ನುವುದು ಕೇವಲ ರಾಜರಾಣಿಯರ ವಿಲಾಸ ಅಟ್ಟಹಾಸಗಳ ಕಂತೆಯಲ್ಲ'; ರಾಜಕೀಯ ಧರ್ಮಗಳ ವೈಭವೀಕರಣವಲ್ಲ - ಈ ವಾಸ್ತವವನ್ನು ನಾವೆಲ್ಲ ಒಪ್ಪಿಕೊಂಡಿದ್ದೇವೆ; ನಾವೀಗ ಜನಕೋಟಿಯ ಇತಿಹಾಸನ್ನು ಬರೆಯುವ ಕಾಲದಲ್ಲಿದ್ದೇವೆ. ಆಕರಗಳಲ್ಲಿ ರೂಢಿಗತ ಇತಿಹಾಸದ ಪದರ ಪದರಗಳಲ್ಲಿ ಸಾಮಾನ್ಯರ ಇತಿಹಾಸ ಹುದುಗಿರುತ್ತದೆ. ಅದನ್ನು ಹುಡುಕಿ ಹೊರ ತೆಗೆಯಬೇಕಾಗಿದೆ. ಒಂದು ರಾಜಪೀಠದ ಹಿಂದೆ ಸಾಮಾನ್ಯ ಇರುತ್ತಾನೆ; ಒಂದು ಧರ್ಮ ಪೀಠದ ಹಿಂದೆಯೂ ಸಾಮಾನ್ಯ ಇರುತ್ತಾನೆ. ಹೀಗೆ ಸಾಮಾನ್ಯರ ಇತಿಹಾಸಕ್ಕೆ ಅಕ್ಷರ ರೂಪ ಕೊಡುವ ಕೆಲಸ ಆರಂಭವಾಗಿದೆ. 'ಸಹನಾವವತು ಸಹನೌಭುನಕ್ತು ಸಹವೀರ್ಯಂಕರವಾವಹೈ...' ಎಂಬ ಉಪನಿಷತ್ತಿನ ಉಕ್ತಿ ಪ್ರಜಾಪ್ರಭುತ್ವವಾದಿಯಾದ ಕವಿವರ್ಯ ಕುವೆಂಪು ಅವರು ಹೇಳುವ "ಸರ್ವರಿಗೆ ಸಮಬಾಳು ಸರ್ವರಿಗೆ ಸಮಪಾಲು" ಎಂಬ, ಬದುಕಿನ ದೃಷ್ಟಿಯನ್ನು ಬಹುಹಿಂದೆಯೇ ಹೇಳಿದಂತಿದೆ. ಹೊಸ ವಿಚಾರ, ಹೊಸ ವ್ಯಾಖ್ಯಾನ, ಹೊಸಪ್ರತಿಪಾದನೆ, ಹೊಸಕ್ರಮ, ಹೊಸಹೆಜ್ಜೆ ಇವು ಸತ್ಯಶೋಧನ ಮಾರ್ಗದ ನಮ್ಮ ಮಂತ್ರವಾಗಬೇಕಾಗಿದೆ. ಹೀಗಾಗಿ ಇಂಥ ಒಂದೊಂದು ಸಮ್ಮೇಳನವೂ ವಸ್ತುನಿಷ್ಠ ಚರಿತ್ರೆಯತ್ತ ನಾವಿಡುವ ಒಂದೊಂದು ಹೆಜ್ಜೆಯಾಗುತ್ತದೆ. ಕನ್ನಡದ ಪಂಪ ಮಹಾಕವಿ ಕಾವ್ಯಕುರಿತು 'ಇದು ನಿಚ್ಚಂ ಪೊಸತು ಅರ್ಣವಂಬೋಲ್' (ಇದು ನಿತ್ಯವೂ ಹೊಸತು, ಸಮುದ್ರದ ಹಾಗೆ) ಎಂದಿರುವ ಮಾತು ಇತಿಹಾಸಕ್ಕೂ ಅನ್ವಯಿಸುತ್ತದೆ.

ಭೂತಕಾಲದ ಬಗೆಗಿನ ನಮ್ಮ ಗ್ರಹಿಕೆ ಸಕ್ರಮವಾಗಿದ್ದಾಗ, ಯಾವುದೇ ಪೂರ್ವಾಗ್ರಹಗಳಿಲ್ಲದ, ನಮ್ಮ ಇಷ್ಟಾನಿಷ್ಟಗಳನ್ನು ಹೇರಿರದ, ಮುಕ್ತ ವಸ್ತುನಿಷ್ಠ ಚರಿತ್ರೆಯ ಬರವಣಿಗೆ ಸಾಧ್ಯವಾಗುತ್ತದೆ. ಇತಿಹಾಸ ನಮ್ಮನ್ನು ಭಾವನಾತ್ಮಕವಾಗಿ ಕುರುಡರನ್ನಾಗಿ ಮಾಡಬಾರದು. ಹಾಗೆ ಆದಾಗ ನಾನಾ ರೀತಿಯ ತಪ್ಪುಗಳು ಘಟಿಸುವಂತಾಗಿ ಅದಕ್ಕೆ ನಾವೇ ಹೊಣೆಯಾಗುತ್ತೇವೆ. ಮಾನ್ಯ ಉಪಮುಖ್ಯಮಂತ್ರಿಗಳು ಹೇಳಿದ ಕೆಲವು ಮಾತುಗಳು ನನಗೆ ತುಂಬ ಇಷ್ಟವಾದುವು: "ಇತಿಹಾಸ ಸಮ್ಮೇಳನ ನಮ್ಮನ್ನು ಕುತೂಹಲಿಗಳನ್ನಾಗಿ ಮಾಡಬೇಕು". 'ವೈಭವೀಕರಣಗೊಂಡ ಇತಿಹಾಸ ವಸ್ತುನಿಷ್ಠ ಆಗುವುದಿಲ್ಲ". "ಹೇಳಬೇಕಾಗಿರುವ ಸಂಗತಿಯನ್ನು ಹೇಳದೆ ಹೋಗುವುದು ಕೂಡಾ ಇತಿಹಾಸಕ್ಕೆ ಎಸಗುವ ಅಪಚಾರವೇ".'ಇತಿಹಾಸದ ಬಗೆಗಿನ ಅವಜ್ಞೆ ನಮ್ಮ ಜನರಲ್ಲಿರಲು ಕಾರಣ ಅವರಲ್ಲಿದ್ದ ಸಂಕೋಚ ಪ್ರವೃತ್ತಿ ಮತ್ತು ಅವರ ಮೌಲ್ಯಗಳು' - ಈ ಮಾತುಗಳನ್ನು ಎಷ್ಟು ಬೇಕಾದರೂ

ವಿಸ್ತರಿಸಬಹುದು. ಆಚಾರ್ಯ ಬಿಎಂಶ್ರೀ ಅವರು ಹೇಳುತ್ತಾರೆ. 'ಕೊನೆಗೂ ನಿಲ್ಲುವುದು ಅಭಿಮಾನವಲ್ಲ, ಸತ್ಯ'; ಆಚಾರ್ಯ ತೀನಂಶ್ರೀ ಅವರು ಹೇಳುತ್ತಾರೆ: 'ಅಭಿಮಾನ ಸತ್ಯದ ಕಣ್ಣನ್ನು ಮುಚ್ಚಬಾರದು'- ಈ ಎರಡೂ ಹಿತನುಡಿಗಳು ಒಂದೇ ನಾಣ್ಯದ ಎರಡು ಮುಖಗಳಂತಿವೆಯಲ್ಲದೆ, ಇತಿಹಾಸ ಕ್ಷೇತ್ರದಲ್ಲಿ ಕ್ರಮಿಸುವ ನಮಗೆ ಸದಾ ಮಾರ್ಗದರ್ಶನವಾಗಿವೆ.

ಚರಿತ್ರೆಯನ್ನು ನಾವು ನೇತ್ಯಾತ್ಮಕ ದೃಷ್ಟಿಯಿಂದ ನೋಡಬೇಕಾಗಿಲ್ಲ ಎಂದು ನನಗನ್ನಿಸುತ್ತದೆ. ವಿಜಯನಗರ ಇತಿಹಾಸ ಕುರಿತಂತೆ ಬಂದಿರುವ ಎರಡು ಪ್ರಸಿದ್ಧ ಕೃತಿಗಳ (ಶೀರ್ಷಿಕೆಗಳ)ನ್ನು ಇಲ್ಲಿ ಪ್ರಸ್ತಾಪಿಸಬಹುದು: ಒಂದು ರಾಬರ್ಟ್ ಸಿವೆಲ್ ಅವರ 'A Forgotten Empire' (ಮರೆತು ಹೋದ ಸಾಮ್ರಾಜ್ಯ), ಇನ್ನೊಂದು ಸೂರ್ಯನಾರಾಯಣರಾವ್ ಅವರ 'An Empire never to be forgotten' (ಮರೆಯಲಾಗದ ಸಾಮ್ರಾಜ್ಯ). ಎರಡನೆಯ ಕೃತಿ ಮೊದಲನೆಯ ಕೃತಿಗೆ ಪ್ರತಿಕ್ರಿಯೆಯ ರೂಪವಾಗಿ ಬಂದದ್ದು ಎಂಬ ಮಾತಿದೆ. ಅಂದರೆ ಮೊದನೆಯ ಕೃತಿಯ ಶೀರ್ಷಿಕೆ ವಿಜಯನಗರ ಚರಿತ್ರೆಗೆ ಒಂದು ರೀತಿಯ ನೇತ್ಯಾತ್ಮಕ ಧ್ವನಿಯನ್ನು ಹೊಂದಿದಂತಿದೆ ಎನ್ನಿಸಿದ್ದೇ ಎರಡನೆಯ ಕೃತಿಯ ಶೀರ್ಷಿಕೆಯನ್ನು ಹಾಗೆ (ಇತ್ಯಾತ್ಮಕ ಧ್ವನಿಯನ್ನು ಹೊಂದಿದಂತೆ) ಇಡಲಾಗಿದೆ ಎಂದು ಹೇಳಲಾಗುತ್ತದೆ. ಈ ಎರಡೂ ಕೃತಿಗಳೂ ಕೂಡಾ ವಿಜಯನಗರದ ಬಗ್ಗೆ ಆ ಕಾಲಕ್ಕೆ ಲಭ್ಯವಿದ್ದ ಎಲ್ಲ ಆಕರಗಳನ್ನು ಬಳಸಿಕೊಂಡು ವಸ್ತುನಿಷ್ಠ ಚರಿತ್ರೆ ಬರೆಯಬೇಕೆಂಬ ಆಕಾಂಕ್ಷೆಯಿಂದಲೇ ಬರೆದವು ಎಂಬುದು ಆ ಎರಡೂ ಕೃತಿಗಳನ್ನು ನೋಡಿದಾಗ ಗೊತ್ತಾಗುತ್ತದೆ. ಸಿವೆಲ್ ಅವರು 'A forgotten empire' ಎಂದು ಹೆಸರಿಟ್ಟಿರುವಲ್ಲಿ, ಆ ಸಾಮ್ರಾಜ್ಯ ಕುರಿತು ನೇತ್ಯಾತ್ಮಕ ರೀತಿಯ ಧ್ವನಿ ಇದ್ದ ಹಾಗೇನೂ ಕಾಣುವುದಿಲ್ಲ; ಬದಲಿಗೆ ಇಂಥ ಸಾಮ್ರಾಜ್ಯವೂ ಮರೆತು ಹೋದಂತಾಯಿತಲ್ಲ ಎಂಬ ಒಂದು ರೀತಿಯ ವಿಷಾದದ ಧ್ವನಿಯೇ ಇರುವಂತಿದೆ. ಹಾಗಿರುವಾಗ 'An empire never to be forgotten' ಎನ್ನುವಲ್ಲಿಯೂ 'ಇಂಥ ಸಾಮ್ರಾಜ್ಯವೊಂದು ಎಂದೂ ಮರೆಯಬಾರದ್ದು' ಎಂಬ ಧ್ವನಿಯೇ ಇರುವುದರಿಂದ ಮೊದಲಿನದಕ್ಕೆ ಎರಡನೆಯದು ಒಂದು ಪ್ರತಿಕ್ರಿಯಾರೂಪದ್ದು ಎನ್ನುವ ಅಗತ್ಯವೇ ಇರಲಿಲ್ಲ ಎನ್ನಿಸುತ್ತದೆ.

ಈ ಸಾಮ್ರಾಜ್ಯ ಕುರಿತಂತೆ ಆಲೂರು ವೆಂಕಟರಾಯರಿಂದ ಹಿಡಿದು ಈವರೆಗೆ ಅನೇಕ ಲೇಖಕರು nostalgic ಆದ ಧ್ವನಿಯಲ್ಲಿ ಬರೆದಿರುವುದರಿಂದ ಅವರ ಕೃತಿಗಳೆಲ್ಲ ಶುದ್ಧ ಚರಿತ್ರ ಕೃತಿಗಳಾಗದೆ ಅವರವರ ಮಿತಿಯ ದೃಷ್ಟಿಯ ನಿಲುವಿನ ನಿರೂಪಣೆಗಳಾಗಿವೆ. ಇದಕ್ಕೆ ಪ್ರತಿಯಾಗಿ ಇನ್ನು ಕೆಲವರು ಈ ಸಾಮ್ರಾಜ್ಯ ಕುರಿತು ವಸ್ತುನಿಷ್ಠವಾದ ಗಂಭೀರ ಕೃತಿಗಳನ್ನು ನೀಡಿದ್ದಾರೆ. ಈಚೆಗೆ ವಿಜಯನಗರದ ಪ್ರಖ್ಯಾತ ದೊರೆ ಕೃಷ್ಣದೇವರಾಯನ ಬಗ್ಗೆ (ಶಾಸನಗಳಲ್ಲಿ ಕೃಷ್ಣರಾಯ ಎಂದೇ ಬರುವುದರಿಂದ ಹಾಗೆ ಕರೆಯುವುದೇ ಸೂಕ್ತ

ಎನಿಸುತ್ತದೆ, ಇರಲಿ), ಹಾಗೆಯೇ ಈ ಸಾಮ್ರಾಜ್ಯದ ಬಗ್ಗೆ ನೇತ್ಯಾತ್ಮಕವಾದ ನಿಲುವುಗಳು ವ್ಯಕ್ತಪಟ್ಟಿವೆ. ಉದಾಹರಣೆಗೆ, ಈ ಸಾಮ್ರಾಜ್ಯದಲ್ಲಿ ಸತಿಪದ್ಧತಿ ವ್ಯಾಪಕವಾಗಿತ್ತು; ವೇಶ್ಯೆಯರು ಬಹುಸಂಖ್ಯೆಯಲ್ಲಿದ್ದರು; ಗುಲಾಮತನ, ಪ್ರಾಣಿ ಬಲಿ ಮತ್ತು ಆಹುತಿ ರೂಪದ ನರಬಲಿ ಹೆಚ್ಚಿನ ಪ್ರಮಾಣದಲ್ಲಿದ್ದುವು ಮತ್ತು ರಾಣಿಯರು ಬಹುಸಂಖ್ಯೆ ಯಲ್ಲಿದ್ದರು; ಇಲ್ಲಿ ಕೆಲವು ಅಂಶಗಳು ಸಾಮಾನ್ಯರ ಬದುಕಿನ ಬಿಕ್ಕಟ್ಟಿಗೆ ಕಾರಣ ವಾಗಿದ್ದರೆ, ಇನ್ನು ಕೆಲವು ರಾಜರ ಶ್ರೀಮಂತರ ನಿರಂಕುಶ ವಿಲಾಸಕ್ಕೆ ಅಧಿಕಾರ ರಕ್ಷಣೆಗೆ ಪೂರಕವಾಗಿದ್ದುವು - ಈ ಮುಂತಾದ ಅಭಿಪ್ರಾಯಗಳು ಬಂದಿವೆ. ವಿಜಯನಗರದ ಅಥವಾ ಯಾವುದೇ ಸಾಮ್ರಾಜ್ಯದ ಚರಿತ್ರೆಯನ್ನು ಸಾರಾಸಗಟಾಗಿ ಟೀಕಿಸುವುದಾಗಲಿ ಅಥವಾ ಅಭಿಮಾನದ ಕಣ್ಣಿಂದ ವೈಭವಿಸುವುದಾಗಲಿ ಎರಡೂ ಸಲ್ಲ.

ವಿಜಯನಗರ ಸಾಮ್ರಾಜ್ಯದಲ್ಲಿ ಮೇಲೆ ಹೇಳಿದ ಅಂಶಗಳೆಲ್ಲ ಇದ್ದದ್ದು ನಿಜ. ಅಂಥ ಅಂಶಗಳು ಇತರ ಸಾಮ್ರಾಜ್ಯಗಳ ಸಂದರ್ಭದಲ್ಲೂ ಪ್ರಮಾಣಾಂತರದಲ್ಲಿ ಇದ್ದವುಗಳೇ. ಹಾಗಿರುವಾಗ ಇದೊಂದೇ ಸಾಮ್ರಾಜ್ಯದಲ್ಲಿ ಅವೆಲ್ಲ ಇದ್ದುವು ಎನ್ನುವುದು ಪಾಕ್ಷಿಕವಾದ ಹೇಳಿಕೆಯಾಗಬಹುದು. ಈ ಸಾಮ್ರಾಜ್ಯದ ಕಾಲಕ್ಕೆ ಬಹುಮೊದಲಿಂದಲೂ ಅಷ್ಟೇಕೆ, ಮಹಾಭಾರತದ ಕಾಲದಿಂದಲೂ ಸತಿಪದ್ಧತಿ ನಮ್ಮ ದೇಶದಲ್ಲಿ ಇದ್ದೇ ಇತ್ತು. ಮೊಗಲರ ಕಾಲದ ರಾಜಾಸ್ತಾನದಲ್ಲಿ ಜೋಹರ್ ಹೆಸರಿನ ಸತಿಪದ್ಧತಿಯ ಮಾರಣ ಹೋಮಕ್ಕೆ ಸರಿಮಿಗಿಲಾದದ್ದು ಇದೆಯೆ? ಅದಿರಲಿ, ಒಂದು ಪ್ರಮಾಣದಲ್ಲಿ ಅದು ಈಗಲೂ ಅಲ್ಲಿ ಇದೆ ಎನ್ನುವುದನ್ನು ನಾವು ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆಲ್ಲವೆ? ವಿಜಯನಗರ ಕಾಲಕ್ಕಿಂತ ಹೊಯ್ಸಳ ಕಾಲದಲ್ಲಿ ಕೂಡಾ ಸತಿಪದ್ಧತಿ ಕಡಿಮೆಯೇನಿರಲಿಲ್ಲ ಎಂಬುದನ್ನು ಆ ಕಾಲದ ವೀರಗಲ್ಲು ಮಾಸ್ತಿಕಲ್ಲುಗಳ ಪ್ರಮಾಣವೇ ಹೇಳುತ್ತದೆ. ಇನ್ನು ವೇಶ್ಯಾಪದ್ಧತಿ ಕೂಡಾ ವಿಜಯನಗರ ಕಾಲಕ್ಕೆ ಬಹುಪೂರ್ವದಿಂದಲೂ ಇರುವಂಥದ್ದೇ. ‘Prostitution is the oldest profession’ ಎನ್ನುವ ಚೀನೀ ಗಾದೆಯ ಮಾತು, ಮನುಷ್ಯನ ಸಾಮಾಜಿಕ ಬದುಕಿನ ಒಂದು ಅಪ್ರಿಯ ಸತ್ಯ. ಕೌಟಿಲ್ಯನ ‘ಅರ್ಥಶಾಸ್ತ್ರ’ದಲ್ಲೇ ವೇಶ್ಯೆಯರ ಮೇಲಿನ ತೆರಿಗೆ ರಾಜ್ಯದ ಬೊಕ್ಕಸದ ಒಂದು ಆದಾಯಮೂಲವಾಗಿದ್ದುದನ್ನು ನೋಡುತ್ತೇವೆ. ವೇಶ್ಯೆಯರ ಮೇಲಿನ ತೆರಿಗೆ ಸಂಗ್ರಹಕ್ಕೆ ‘ಗಣಿಕಾಧ್ಯಕ್ಷ’, ಮದ್ಯಪಾನದ ಮೇಲಿನ ತೆರಿಗೆ ಸಂಗ್ರಹಕ್ಕೆ ‘ಸುರಾಧ್ಯಕ್ಷ’ ಎಂಬ ಉನ್ನತಾಧಿಕಾರಿಗಳೇ ಆಗ ಇದ್ದರೆಂಬು ದನ್ನು ನಾವು ಮರೆಯುವಂತಿಲ್ಲ. (ವೇಶ್ಯಾವೃತ್ತಿಗೆ ಕೇವಲ ಭೋಗಲಾಲಸೆಯ ಮುಖ ವಷ್ಟೇ ಅಲ್ಲ, ಜೀವನ ನಿರ್ವಹಣೆಯ ಕಠೋರವಾದ ಮತ್ತೊಂದು ಮುಖವೂ ಇದೆ) ಹಾಗೇ ಗುಲಾಮ ಪದ್ಧತಿಯ ಬಗ್ಗೆ ಕೂಡಾ ಹೇಳಬೇಕಾಗುತ್ತದೆ. ಮನುಸ್ಮೃತಿ, ಯಾಜ್ಞ ವಲ್ಕ್ಯ ಸ್ಮೃತಿ, ಶುಕ್ರನೀತಿ, ಅರ್ಥಶಾಸ್ತ್ರ - ಇವುಗಳಲ್ಲೆಲ್ಲ ಮನುಷ್ಯನನ್ನು ಸರಕಿನಂತೆ ಮಾರುವಕೊಳ್ಳುವ ಪದ್ಧತಿಯ ಪ್ರಸ್ತಾಪವಿದೆ. ಹಾಗೆ ನೋಡಿದರೆ, ಸಾಂಪ್ರದಾಯಿಕವಾಗಿ

ಹೇಳುವ ಕೃತಯುಗದಲ್ಲೇ ಹರಿಶ್ಚಂದ್ರನ ಕಾಲಕ್ಕೇ ಆ ಪದ್ಧತಿ ಇದ್ದುದ್ದು ಕಾಣುವುದಲ್ಲವೆ? ಒಂದು ಕಾಲಕ್ಕೆ ರಾಜನೂ ಕ್ಷತ್ರಿಯನೂ ಪ್ರಖ್ಯಾತವಾದ ಸೂರ್ಯವಂಶಜನೂ ಆಗಿದ್ದ ಹರಿಶ್ಚಂದ್ರ ತನ್ನ ಹೆಂಡತಿ ಮಗ ಇವರನ್ನು ಮಾರಿದ ಸಂದರ್ಭ ಮತ್ತುತಾನು ಕೂಡಾ ಕೈಯಲ್ಲಿ ಹುಲ್ಲು ಹಿಡಿದುಕೊಂಡು ಕಾಶೀಪಟ್ಟಣದ ಪೇಟೆ ಬೀದಿಯಲ್ಲಿ ನಿಂತು ತನ್ನನ್ನು ಯಾರಾದರೂ ಹಣವಂತರು ಖರೀದಿಸಿ ಎಂದು ಕೂಗುತ್ತ ಓಡಾಡಿದ ಸಂದರ್ಭ, ಕಡೆಗೆ ಹೊಲೆಯನೊಬ್ಬನಿಗೆ ತನ್ನನ್ನು ಮಾರಿಕೊಂಡು ಅವನ ಸೇವಕನಾಗಿ ಕೆಲಸ ಮಾಡಿದ ಸಂದರ್ಭ - ಇವೆಲ್ಲ ಏನನ್ನು ಹೇಳುತ್ತವೆ?

ಇನ್ನು 'ದೇವರಿಗಾಗಿ' ಮತ್ತು ಮನುಷ್ಯನ ನಾಲಗೆಯ ರುಚಿಗಾಗಿ ಪ್ರಾಣಿಬಲಿ ಆಗುತ್ತಿದ್ದ ಬಗ್ಗೆಯೂ ವಿಜಯನಗರ ಸಾಮ್ರಾಜ್ಯವೊಂದನ್ನೇ ದೂಷಿಸಲು ಬರುವುದಿಲ್ಲ. ಅದು ಕೂಡಾ ಪೂರ್ವದಿಂದಲೂ ಇದ್ದದ್ದೇ. ವೇದಕಾಲದಲ್ಲಿ ಋಷಿಗಳು ಯಜ್ಞಯಾಗಾದಿಗಳ ನಂತರ ಪ್ರಾಣಿ ಹತ್ಯೆ ಮಾಡುತ್ತಿದ್ದುದಕ್ಕೆ ಮಾಂಸಭುಂಜನ ಮಾಡುತ್ತಿದ್ದುದಕ್ಕೆ, ಬುದ್ಧನ ಬಲಿಗಾಗಿ ಎಳೆದೊಯ್ಯುತ್ತಿದ್ದ ಪ್ರಾಣಿಯ ಬದಲಿಗೆ ತನ್ನನ್ನು ಬಲಿಕೊಡಿ ಎಂದು ಕೇಳಿದ್ದಕ್ಕೆ, ಈಗ ನಾವು ಏನು ಹೇಳಬಹುದು? ಕೆರೆ ಕೋಟೆ ಇತ್ಯಾದಿಗಳನ್ನು ಕಟ್ಟುವಾಗ ಕೊಡುತ್ತಿದ್ದ ಮನುಷ್ಯ ಆಹುತಿ, ಸ್ತ್ರೀ ಆಹುತಿ ಕೂಡಾ ವಿಜಯನಗರ ಕಾಲದಲ್ಲೊಂದರಲ್ಲೇ ಇದ್ದುದಲ್ಲ. ಹಾಗೇ ರಾಣಿಯರು ಬಹುಸಂಖ್ಯೆಯಲ್ಲಿದ್ದುದು, ರಾಜರು ಕೂಡಾ ವೇಶ್ಯಾಗಮನ ವಿಲಾಸಿಗಳಾಗಿದ್ದದ್ದು ಈ ಒಂದು ಸಾಮ್ರಾಜ್ಯ ಕಾಲದಲ್ಲಷ್ಟೇ ಅಲ್ಲ. ಮೇಲೆ ಹೇಳಿದ ಎಲ್ಲವೂ ಎಲ್ಲ ಸಾಮ್ರಾಜ್ಯಗಳ ಕಾಲದಲ್ಲೂ ಇದ್ದವುಗಳೇ. ಎಲ್ಲ ಸಾಮ್ರಾಜ್ಯಗಳೂ ಬಹುಶಃ ಇದ್ದದ್ದೂ ಹಾಗೇ. ಈ ಮೇಲಿನ ಚರ್ಚೆ ಕೇವಲ ವಿಜಯನಗರ ಕಾಲವನ್ನು ಸಮರ್ಥನೆ ಮಾಡುವ ದೃಷ್ಟಿಯದೂ ಅಲ್ಲ, ಅದಕ್ಕೆ ಅಸಂಗತ ಹಿರಿಮೆಯನ್ನು ಸ್ಥಾಪಿಸುವ ದೃಷ್ಟಿಯದೂ ಅಲ್ಲ. ವಿಜಯನಗರ ಸಾಮ್ರಾಜ್ಯ ಹಾಳಾಗಲು ಅದರ ನೈತಿಕ ಬಲಹೀನತೆಯನ್ನು ಕಾರಣವಾಗಿ ಪರಿಗಣಿಸುವುದರಿಂದ ಕೆಲವು ಸತ್ಯಗಳು ನಮಗೆ ಎರವಾಗಬಾರದಷ್ಟೇ? ವಿಜಯನಗರ ಸಾಮ್ರಾಜ್ಯದ ವಿಸ್ತಾರ, ಕಣ್ಣುಕುಕ್ಕುವ ಅದರ ಐಶ್ವರ್ಯ, ಅರಸರಲ್ಲಿ ಕಡಿಮೆಯಾದ ದೂರದರ್ಶಿತ್ವ, ಸದಾ ಈರ್ಷ್ಯಾಸೂಯೆಯಿಂದ ಸಮಯಕ್ಕಾಗಿ ಕಾಯುತ್ತಿದ್ದ ವೈರಿ ಸಮೂಹ, ಹೀಗೆ ಇನ್ನೂ ಏನೇನೋ ಅದು ಕಂಡ ದುರಂತಕ್ಕೆ ಕಾರಣವಾಗಿದ್ದರೆ ಆಶ್ಚರ್ಯವಿಲ್ಲ.

ಈ ಮೇಲಿನ ಅಂಶಗಳ ಜೊತೆಗೆ ಮತ್ತೊಂದು ಅಂಶವನ್ನು ಸಹ ಇಲ್ಲಿ ಪ್ರಸ್ತಾಪಿಸಬೇಕಾಗಿದೆ. ಪ್ರಸಿದ್ಧ ಇತಿಹಾಸ ವಿದ್ವಾಂಸರೊಬ್ಬರು, ಈ ಸಾಮ್ರಾಜ್ಯದ ಪತನಕ್ಕೆ ಪುರಂದರ ದಾಸರು ಕನಕದಾಸರ ಕೀರ್ತನೆಗಳು ಬೀರಿದ ಪ್ರಭಾವವೂ ಒಂದು ಕಾರಣ ; ಏಕೆಂದರೆ, ಅವು ಜನರ ಮನಸ್ಸನ್ನು ಮೃದುಗೊಳಿಸಿ ಅವರ ಕ್ಷಾತ್ರದಲ್ಲಿ ಕಡಿಮೆ ಮಾಡಿದವು ಎಂದು ಹೇಳಿರುವುದು ಸಹ ಒಂದು ಪಾರ್ಶ್ವಿಕವಾದ ಹೇಳಿಕೆಯಾಗಿದೆ. ವಿಜಯನಗರದ ಎಷ್ಟು

ಜನಕ್ಕೆ ಎಷ್ಟು ಸೈನಿಕರಿಗೆ ಆ ಸಂತರ ಕೀರ್ತನೆಗಳು ತಲುಪಿದ್ದುವು? ಅವರೆಲ್ಲ ಸಾತ್ವಿಕ ಪರಿವರ್ತನೆ ಹೊಂದಿದ್ದರೆ ? ಅದಕ್ಕೇನಾದರೂ ಪುರಾವೆಗಳಿವೆಯೆ? ಇಲ್ಲಿ ಉಪ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ: ಜೈನಧರ್ಮ ಮತ್ತು ಬೌದ್ಧ ಧರ್ಮಗಳ ಬಗ್ಗೆಯೂ ಅಂಥದೇ ಹೇಳಿಕೆ ಇದೆ ಎಂದು... ಒಂದು ಊಹೆಗೂ ಅದು ಸಂಭಾವ್ಯವೆನಿಸಬೇಕಾದರೆ ಒಂದು ಗಟ್ಟಿ ನೆಲೆಗಟ್ಟು ಇರಬೇಕಾಗುತ್ತದೆ. ಇಲ್ಲದಿದ್ದರೆ ಅಂಥ ಹೇಳಿಕೆಗಳು ವಾಸ್ತವದೂರವಾದ ಕಾಲ್ಪನಿಕ ಹೇಳಿಕೆಗಳಾಗುತ್ತವೆ. ಗುಜರಾತಿನ ಸೋಮನಾಥ ದೇವಾಲಯದ ಮೇಲೆ ಘುಜನಿ ಮಹಮ್ಮದ್ ಹದಿನೇಳು ಬಾರಿ ದಾಳಿ ಮಾಡಿ ಲೂಟಿ ಮಾಡಲು ಹೇಗೆ ಸಾಧ್ಯವಾಯಿತು? ರೋಮ್ ಸಾಮ್ರಾಜ್ಯ ಹಾಳಾಗಲು ಅದರ ದೌರ್ಬಲ್ಯಗಳೇನಿದ್ದುವು ಎಂಬುದನ್ನು ನಾವು ಇತಿಹಾಸದಲ್ಲಿ ಓದುತ್ತೇವೆ. ಆದರೆ ಒಂದು ಸಾಮ್ರಾಜ್ಯ ಅಳಿಯಲು ಯಾವಾಗಲೂ ಅವೇ ಅಥವಾ ಅಂಥವೇ ಕಾರಣಗಳಿರುತ್ತವೆ ಎನ್ನಬಹುದೆ? ಹಾಗಾದರೆ ಇತರ ಸಾಮ್ರಾಜ್ಯಗಳೂ ಏಕೆ ಅಳಿದುವು? ಅವುಗಳಿಗೂ ಇಂಥದೇ ಹಿನ್ನೆಲೆ ಇತ್ತೆನ್ನಬಹುದೆ? ಇಂಥ ಪ್ರಶ್ನೆಗಳೆಲ್ಲ ಸಾಲಾಗಿ ಬರುತ್ತವೆ.

ಈ ಸಾಮ್ರಾಜ್ಯದ ಕೆಲವು ಇತ್ಯಾತ್ಮಕ ಅಂಶಗಳನ್ನೂ ನಾವು ನೋಡಬೇಕಾಗುತ್ತದೆ. ಸಮಾಜ ಜಾತಿ ಇಲ್ಲವೆ ಆರ್ಥಿಕ ಸ್ಥಿತಿಗತಿಯ ದೃಷ್ಟಿಯಿಂದ ಕೆಳಸ್ತರದವರಿದ್ದವರನ್ನು ಮೇಲೆತ್ತಿ ಪ್ರಾಂತಪ್ರಭು ಸ್ಥಾನ ನೀಡಿದವರು ವಿಜಯನಗರ ಅರಸರು. ಚಿತ್ರದುರ್ಗ ಮತ್ತೋಡು ಹರತಿ ನಾಯಕನಹಟ್ಟಿ ಇವರೇ ಮುಂತಾದ ಪ್ರಾಂತ ಪ್ರಭುಗಳು ಬೇಡ ಮೂಲದವರಾದರೆ, ಬೂದಿಹಾಳಿನವರು ಗೊಲ್ಲರಾಗಿದ್ದರು. ಕೆಳದಿಯವರು ಮಲವರೆಂಬ ರೈತಾಪಿರ್ವಗ ವೀರಶೈವರು. ಹೀಗೆ ಇನ್ನೂ ಕೆಲವು ಉದಾಹರಣೆಗಳನ್ನು ನೋಡಬಹುದು. ವಿಜಯನಗರದ ಅರಸರು ಆಚರಿಸುತ್ತಿದ್ದ ಮಹಾನವಮಿ ಉತ್ಸವ ಕೇವಲ ರಾಜ ಶ್ರೀಮಂತಿಕೆ ಸೇನಾಶಕ್ತಿಯ ಪ್ರದರ್ಶನ ಮಾತ್ರವೇ ಆಗಿರಲಿಲ್ಲ. ಅದು ಜಾನಪದೀಯ ಕಲೆಗಳಿಗೆ, ಸಾಹಸ ಸ್ಪರ್ಧೆಗಳಿಗೆ ಕಾಳಗಗಳಿಗೆ ಒಂದು ಮುಖ್ಯ ಮಾಧ್ಯಮ ಕೂಡಾ ಆಗಿದ್ದಿರಬೇಕು. ನಾನು ಮಂಡಿಸಿದ ಪ್ರಬಂಧವೊಂದರ ವಿಷಯವನ್ನು ಇಲ್ಲಿ ಹೇಳ ಬೇಕೆನಿಸುತ್ತಿದೆ:

ವಿಜಯನಗರದ ದೊರೆ ಕೃಷ್ಣ (ದೇವ) ರಾಯನ ಕಾಲದಲ್ಲಿ, ನವರಾತ್ರಿಹಬ್ಬದ ಏಳನೆಯ ದಿನ ದೊರೆ ಹನ್ನೆರಡುಸಾವಿರ ವೀರ ಯೋಧರಿಗೆ ಒಂದು ಪ್ರಕಟಣೆ ಮಾಡಿಸುತ್ತಾನೆ. 'ನಾಲ್ಕು ಮಾರು ಉದ್ದ ಅಷ್ಟೆ ಅಗಲದ ಆಳವಾದ ಚೌಕ ಗುಂಡಿ ಯೊಂದರಲ್ಲಿ ಒಂದುಹಲಿ ಮತ್ತು ಒಂದು (ನಾಗರ)ಹಾವು ಇವನ್ನು ಯಾರು ಏಕಕಾಲದಲ್ಲಿ ಎದುರಿಸಿ ಕೊಲ್ಲುತ್ತಾರೋ ಅವರಿಗೆ ಬೇಡಿದ ಇಷ್ಟಾರ್ಥವನ್ನು ಸಲ್ಲಿಸುತ್ತೇವೆ'- ಎಂಬುದೇ ಆ ಪ್ರಕಟಣೆ. ಈಗ ತಿಮ್ಮರಾವುತ ಎಂಬ ಕುರುಬರಾವುತ ಜನಾಂಗಕ್ಕೆ ಸೇರಿದ ಯೋಧನೊಬ್ಬ ಬಂದು ಆ ಸವಾಲನ್ನು ಸ್ವೀಕರಿಸಿ, ಗುಂಡಿಯೊಳಕ್ಕೆ ಇಳಿದು ಧೈರ್ಯ

ಸಾಹಸಗಳಿಂದ ಆ ಹುಲಿ ಮತ್ತು ಹಾವು ಎರಡನ್ನೂ ಕೊಲ್ಲುತ್ತಾನೆ. ಸಂತುಷ್ಟನಾದ ದೊರೆ 'ನಿನಗೇನು ಬೇಕು ಕೇಳು' ಎಂದಾಗ ಅವನು ಹೇಳುತ್ತಾನೆ : 'ಸ್ವಾಮಿ ನಮ್ಮ ಜನಾಂಗದಲ್ಲಿ ಮದುವೆಯಾಗದ ಹೆಣ್ಣಿಗೆ 101 ವರಹ ತೆರ, ಮದುವೆಯ ಸುಂಕವಾಗಿ ಸರ್ಕಾರಕ್ಕೆ 7 ವರಹ ಒಟ್ಟು 108 ವರಹ ಸಲ್ಲಿಸಬೇಕಾಗಿದೆ; ಇಷ್ಟು ತೆರಿಗೆ ನೀಡಲು ಸಾಧ್ಯವಾಗದೆ ನಮ್ಮಲ್ಲಿ ಅನೇಕ ಯುವಕ ಯುವತಿಯರು ವಿವಾಹವಾಗದೆ ಹಾಗೇ ಉಳಿದಿದ್ದಾರೆ; ತಾವು ಕೃಪೆ ಮಾಡಿ ಸರ್ಕಾರಕ್ಕೆ ಸಲ್ಲಿಸಬೇಕಾದ 7 ವರಹವನ್ನೇ ತೆರೆದ ಮೊತ್ತವಾಗಿ ನಿಗದಿಮಾಡಿ, ಸರ್ಕಾರಕ್ಕೆ ಸಲ್ಲಿಸಬೇಕಾದ ಸುಂಕದ ಮೊತ್ತವನ್ನು ಪೂರ್ಣ ಮನ್ನಾ ಮಾಡಿದರೆ ತುಂಬ ಉಪಕಾರವಾಗುತ್ತದೆ' ಎಂದು. ಸುಪ್ರೀತನಾದ ದೊರೆ ಅದಕ್ಕೆ ಸಮ್ಮತಿ ನೀಡಿ, ಅವನನ್ನು ಸನ್ಮಾನಿಸಿ ಕಳಿಸಿಕೊಡುತ್ತಾನೆ.

ಇಲ್ಲಿ ನೋಡಿ : ಆ ವೀರ ತನ್ನ ಸಲುವಾಗಿ ಏನೂ ಕೇಳುವುದಿಲ್ಲ. ಅವನು ಒಂದು ಪ್ರಾಂತದ ಒಡೆತನ ಕೊಡಿ ಅಂತ ಕೇಳಿದ್ದರೂ ದೊರೆ ಅದನ್ನು ಅವನಿಗೆ ಕೊಡುತ್ತಿದ್ದ. ಆದರೆ, ಅದರ ಬದಲಿಗೆ, ಅವನು ತನ್ನ ಜೀವವನ್ನೇ ಅಪಾಯಕ್ಕೊಡ್ಡಿ ಮಾಡಿದ ಸಾಹಸಕ್ಕೆ ತನ್ನ ಪಾಲಿಗೆ ಬರುತ್ತಿದ್ದ ಎಲ್ಲ ಲಾಭವನ್ನೂ ತ್ಯಾಗ ಮಾಡಿ, ತನ್ನ ಜನಾಂಗದ ಹಿತವನ್ನು ಸಾಧಿಸುತ್ತಾನೆ. ಮುಂದೆ ಇದೇ ವೀರ ಅಗತು ಕುದುರೆಯನ್ನು ಏರಿ ಪಳಗಿಸುವ ಸಾಹಸ, ಹಲವು ಜಟ್ಟಿಗಳೊಡನೆ ಒಬ್ಬನೇ ಏಕಕಾಲದಲ್ಲಿ ಸೆಣಸುವ ಮಲ್ಲಕಲೆಯ ಸಾಹಸ, ಇಂಥ ಸಾಹಸಗಳನ್ನು ಮೆರೆಯುತ್ತಾನೆ. ಇತಿಹಾಸದಲ್ಲೇ ಮತ್ತೆಲ್ಲೂ ಕಾಣಲಾಗದ ಸಿರಿ-ಶಕ್ತಿಗಳ ಪ್ರದರ್ಶನದ ಮಹಾನವಮಿ ಉತ್ಸವ ಸಾಮಾನ್ಯ ಪ್ರಜೆಗಳಲ್ಲಿ ಅಸಾಧಾರಣ ಸಾಮರ್ಥ್ಯ ಉಳ್ಳವರನ್ನೂ ಪ್ರತಿಭಾಶಾಲಿಗಳನ್ನೂ ಧೀರ ಸಾಹಸಿಗರನ್ನೂ ಸ್ಪರ್ಧೆಗಳ ಮೂಲಕ ಬೆಳಕಿಗೆ ತರುವ ಒಳ್ಳೆಯ ಮಾಧ್ಯಮವೂ ಆಗಿತ್ತೆಂದು ಹೇಳಬಹುದು. ಅಲ್ಲಿ ಸಿಗುವ ಮನ್ನಣೆ, ಅನೇಕರನ್ನು ಸಾಹಸಕ್ಕೆ ಪ್ರೇರಿಸುತ್ತಿದ್ದಿರಬೇಕು.

ವಿಜಯನಗರದ ಅರಸರು ಮದುವೆ ಸುಂಕದ ವಿನಾಯಿತಿಯನ್ನು ಅನೇಕ ಕಡೆ ಮಾಡಿರುವುದೂ, ಅದರಂತೆಯೇ ನಾಯಿಂದ ಜನಾಂಗದವರ ಮೇಲೆ ವಿಧಿಸಿದ್ದ ಹಲವು ತೆರಿಗೆಗಳನ್ನು ಮಾನ್ಯ ಮಾಡಿರುವುದೂ ಅನೇಕ ಶಾಸನಗಳಿಂದ ತಿಳಿಯುತ್ತದೆ. ದೊರೆಗಳ ಆಡಳಿತ ನೀತಿ ಪ್ರಜೆಗಳ ಹಿತಕ್ಕೆ ಸ್ಪಂದಿಸುತ್ತಿದ್ದುದಕ್ಕೆ ಇವು ಸೂಚನೆ ಕೊಡುತ್ತವೆ. ಹಾಗೇ ಇನ್ನೊಂದು ಮುಖ್ಯ ಅಂಶ: ಕೃಷಿಗೆ ನೀರಾವರಿ ಅನುಕೂಲ ಕಲ್ಪಿಸುವಲ್ಲಿ ಅಪರೂಪದ ಪ್ರಯೋಗಗಳು ನಡೆದದ್ದು ವಿಜಯನಗರ ಕಾಲದಲ್ಲಿ. ಚಿತ್ರದುರ್ಗದ ಬಳಿಯ ಹೊನ್ನುಂದ (ಭೀಮಸಮುದ್ರ)ದ ಕೆರೆಗೆ, ದೂರದಲ್ಲಿದ್ದ ಜನ್ನಿಗೆ ಹಳ್ಳಕ್ಕೆ ಅಡ್ಡಗಟ್ಟೆ ಕಟ್ಟಿ ಅದರ ದಿಕ್ಕು ಬದಲಿಸಿ, ಹೊಸ ಕಾಲುವೆ ತೆಗೆದು ಆ ಕೆರೆಗೆ ಆ ಹಳ್ಳವನ್ನು ಒಂದು ಜಲಸಂಪನ್ಮೂಲವಾಗಿ ಪರಿವರ್ತಿಸಿದ್ದು, ಹಾಗೇ ಹರಿಹರದ ಬಳಿ ತುಂಗಭದ್ರಾ ನದಿಗೆ ಉಪನದಿಯಾಗಿದ್ದ ಹರಿದ್ರಾನದಿಗೆ ಅಣೆಕಟ್ಟು ಕಟ್ಟಿಸಿದ್ದು, ಆ ಅಣೆಕಟ್ಟು

ಒಡೆದಾಗ ಮತ್ತೆ ಪುನರ್ನಿರ್ಮಾಣ ಮಾಡಿಸಿದ್ದು, ಸಾಮಾನ್ಯ ಪ್ರಯೋಗಗಳೇನಲ್ಲ. ಇಂಥ ಪ್ರಯೋಗಗಳು ವಿಜಯನಗರದ ದೊರೆಗಳ ಪ್ರಜಾನುಕೂಲ ನೀತಿಯ ಜೊತೆಗೆ ಆ ಕಾಲದ ನೀರಾವರಿ ತಂತ್ರಜ್ಞಾನದ ಕೌಶಲಕ್ಕೂ ನಿದರ್ಶನಗಳಾಗಿವೆ.

ಇಲ್ಲಿ ಮತ್ತೊಂದು ಮಾತನ್ನೂ ಸೇರಿಸಬೇಕು. ಅದೆಂದರೆ ವಿಜಯನಗರ ಕಾಲದಲ್ಲಿ ಆದ ಬೃಹತ್ ಗಾತ್ರದ ದೇವಾಲಯಗಳು, ಮೂರ್ತಿ ಶಿಲ್ಪಗಳು, ಮಂಟಪಗಳು, ಕೈಸಾಲೆಗಳು ಇತ್ಯಾದಿಯಾದ ವಾಸ್ತು-ಶಿಲ್ಪ ರಚನೆ. ಅಂಥವನ್ನು ಅವರು ಕರ್ನಾಟಕ ಆಂಧ್ರಗಳಿಗಿಂತ ತಮಿಳುನಾಡಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನಿರ್ಮಿಸಿರುವುದನ್ನು ಕಾಣುತ್ತೇವೆ. ಅವರು ಅಲ್ಲೇ ಏಕೆ ಹೆಚ್ಚಾಗಿ ಅಂಥ ರಚನೆಗಳ್ನು ಮಾಡಿದರು?- ಈ ಪ್ರಶ್ನೆ ಬರುತ್ತದೆ. ತಮಿಳುನಾಡಿನಲ್ಲಿ ಬೃಹದಾಕಾರದ ದೇವಾಲಯಗಳನ್ನು ಮೊದಲಿಗೆ ಹೆಚ್ಚು ಪ್ರಮಾಣದಲ್ಲಿ ಕಟ್ಟಿದವರು ಮತ್ತು ಅಂಥ ರಚನೆಗಳಿಗೆ ಪ್ರಸಿದ್ಧರಾದವರು ಅಲ್ಲಿಯ ದೊರೆಗಳಾದ ಚೋಳರು. ಆ ಚೋಳರಂತೆ ಅಥವಾ ಅವರಿಗೆ ಸರಿಮಿಗಿಲೆನಿಸುವಂತೆ ತಮಿಳು ಪ್ರಜೆಗಳ ಮನಸ್ಸಿನಲ್ಲಿ ನಿಲ್ಲುವ ಆಕಾಂಕ್ಷೆಯಿಂದ ವಿಜಯನಗರದ ಅರಸರು ಅವರ ಕಡೆಯ ಪ್ರಮುಖರು ಅಲ್ಲಿ ಬೃಹತ್ ಗಾತ್ರದವೂ ಸಂಕೀರ್ಣವಾದವೂ ಆದ ದೇವಾಲಯಗಳನ್ನೂ ಮಂಟಪ ಕೈಸಾಲೆಗಳನ್ನೂ ಅಲ್ಲಿ ರಚಿಸಿರುವ ಸಾಧ್ಯತೆ ಕಾಣುತ್ತದೆ. ಇಂಥ ದೇವಾಲಯಗಳ ನಿರ್ಮಾಣದ ಹಿಂದೆ ದೊರೆಗಳೂ, ಅವರ ಕಡೆಯ ಪ್ರತಿಷ್ಠಿತರೂ ಇರುವಂತೆ ಸಾಮಾನ್ಯರೂ ಇದ್ದಾರೆ. ಅಂದರೆ ಅಂಥ ಅಸಾಧಾರಣ ಕಟ್ಟಡಗಳ ನಿರ್ಮಾಣ ಮಾಡಿಸಿದ್ದರ ಬಗ್ಗೆ ಹೇಳುವಾಗ ಅವನ್ನು ಮಾಡಿಸಿದ ರಾಜರೇ ಮೊದಲಾದ ಪ್ರತಿಷ್ಠಿತ ವರ್ಗದವರು ಮತ್ತು ಜೊತೆಗೆ ಅದನ್ನು ಕಟ್ಟುವಲ್ಲಿ ಶ್ರಮಿಸಿದ ಶಿಲ್ಪಿಗಳು, ಬೇರೆ ಬೇರೆಯ ಶ್ರಮಿಕ ವರ್ಗದವರು - ಹೀಗೆ ಎಲ್ಲರ ಸಾಧನೆಯಾಗಿ ಅದು ಮೂಡಿ ನಿಂತಿರುತ್ತದೆ ಎಂಬ ಪರಿಭಾವನೆ ನಮಗೆ ಇರಬೇಕಾಗುತ್ತದೆ. ಆಗ ಜನ ಸಾಮಾನ್ಯರ ಇತಿಹಾಸಕ್ಕೆ ನ್ಯಾಯ ಸಿಕ್ಕಲು ಸಾಧ್ಯವಾಗುತದೆ.

ನನ್ನ ಭಾಷಣ ಮುಗಿಸುವ ಮುನ್ನ ಒಂದು ಮಾತು; ವಿಜಯನಗರ ಇತಿಹಾಸ ಸಮ್ಮೇಳನದಲ್ಲಿ ಸೇರಿರುವ ನಾವೆಲ್ಲ ಕರ್ನಾಟಕದವರು. ಇದೇ ಇತಿಹಾಸದ ಮೇಲೆ ಕೆಲಸ ಮಾಡಿದ ಅನೇಕರು ಆಂಧ್ರ ಪ್ರದೇಶದಲ್ಲೂ ತಮಿಳುನಾಡಿನಲ್ಲೂ ಇರುವುದನ್ನು ಕೇಳಿದ್ದೇನೆ. ಇಂಥ ಸಮ್ಮೇಳನಕ್ಕೆ ಅಂಥ ವಿದ್ವಾಂಸರನ್ನು ಬರಮಾಡಿಕೊಂಡರೆ, ಅವರು ಕಂಡು ಕೊಂಡ ಹೊಸ ವಿಚಾರಗಳನ್ನು ನಾವು ನಮ್ಮ ಹೊಸ ವಿಚಾರಗಳನ್ನು ಅವರೂ ಅರಿತುಕೊಳ್ಳಲಿಕ್ಕೆ ಸದವಕಾಶ ದೊರೆತಂತಾಗುತ್ತದೆ. ಅಷ್ಟೇ ಅಲ್ಲ, ಅವರ ನಮ್ಮ ಪರಸ್ಪರ ಸಮ್ಮಿಲನ ನಮ್ಮ ಪರಸ್ಪರರ ದೃಷ್ಟಿ ಕೋನವನ್ನು ತಿದ್ದಿಕೊಳ್ಳಲೂ, ಸಾಮರಸ್ಯವನ್ನು ವೃದ್ಧಿಸಿಕೊಳ್ಳಲೂ ಸಹಕಾರಿಯಾಗುತ್ತದೆ. ಮುಂದಿನ ವರ್ಷದಿಂದ ಅಂಥ ಪ್ರಯತ್ನವನ್ನು ಇಲಾಖೆ ಕೈಕೊಳ್ಳುವಂತಾದರೆ ಒಳ್ಳೆಯದೆಂದು ನನ್ನ ಭಾವನೆ.

ಕನ್ನಡದ ಹಿರಿಯ ಕವಿ ಡಾ. ಜಿ.ಎಸ್. ಶಿವರುದ್ರಪ್ಪನವರು 'ಇತಿಹಾಸವೆಂಬುದೊಂದು ಕಗ್ಗತ್ತಲೆಯ ಸುರಂಗ' ಎಂದು ಬರೆದಿರುವ ಕವಿತೆಯೊಂದು ಇಲ್ಲಿ ನೆನಪಾಗುತ್ತಿದೆ. ಭೂತಕಾಲದ ಗರ್ಭದೊಳಗೆ ಮುಚ್ಚಿಹೋಗಿರುವ ಎಲ್ಲ ಇತಿಹಾಸವೂ ನಮಗೆಲ್ಲಿ ಸ್ಫುಟವಾಗಿದೆ? ನಾವಿನ್ನೂ ಆ ಕತ್ತಲ ಸುರಂಗದ ಗೋಡೆಗಳನ್ನು ತಡಕುತ್ತಿದ್ದೇವೆ. ಗುಹೆಯ ಸ್ವರೂಪ ನಮ್ಮ ಅರಿವಿಗೆ ಗ್ರಹಿಕೆಗೆ ಇನ್ನೂ ಪೂರ್ಣ ನಿಲುಕಿಲ್ಲ. ಆದರೆ, ಪ್ರಯತ್ನವಂತೂ ನಡೆಯುತ್ತಲೇ ಇದೆ. ವಸ್ತುಸ್ಥಿತಿ ಹೀಗಿರುವಾಗ ಅದರ ಸ್ವರೂಪ ಕುರಿತು ನಾವು ಏನೂ ಹೇಳ ಹೋಗುವುದೂ ಸಾಹಸವೆನಿಸಬಹುದು. ಇಲ್ಲಿ ಅನೇಕ ಇತಿಹಾಸ ಸಂಶೋಧಕರು ಸೇರಿದ್ದಾರೆ, ಹಿರಿಯರಿದ್ದಾರೆ, ಹೊಸಬರಿದ್ದಾರೆ. ನಾವೆಲ್ಲ ಗತ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಗಂಭೀರ ಕಾರ್ಯದಲ್ಲಿ ನಮ್ಮನ್ನು ತೊಡಗಿಸಿಕೊಂಡಿದ್ದೇವೆ. ಇತಿಹಾಸದ ಪೂರ್ಣ ಸ್ವರೂಪದ ದರ್ಶನಕ್ಕೆ ನಮ್ಮ ಒಂದೊಂದು ಚಿಕ್ಕ ಪಾಲನ್ನೂ ಕೊಡುತ್ತ ಹೋಗೋಣ ; ಪರಮ ಗಂತವ್ಯದತ್ತ ಹೆಜ್ಜೆ ಮುಂದುವರಿಸೋಣ. ಎಲ್ಲರಿಗೂ ನಮಸ್ಕಾರ.

೧. ಸಂಗಮ ಅರಸರ ಪ್ರಾಚೀನ ಶಾಸನಗಳು

ಡಾ. ಕೊ.ಸ. ಅಪರ್ಣ

ಕ್ರಿ.ಶ. 1336 ರಿಂದ 1346ರ ಅವಧಿಯನ್ನು ಸಂಗಮ ಅರಸರ ಆರಂಭಕಾಲ ಎಂದು ಗುರುತಿಸಬಹುದಾಗಿದ್ದು. ಈ ಅವಧಿಯ ಶಾಸನಗಳು ಕರ್ನಾಟಕದಲ್ಲಿ ಸು. 145 ದೊರೆತಿವೆ. ಇವುಗಳಲ್ಲಿ ಸು. 30 ಶಾಸನಗಳು ಸಂಗಮರನ್ನು ನೇರವಾಗಿ ಉಲ್ಲೇಖಿಸುತ್ತವೆ. ಆದರೆ, ಈ ಎಲ್ಲವೂ ಈ ಅವಧಿಯಲ್ಲೇ ಆಗಿದ್ದು, ಸಂಗಮ ಅರಸರ ಕಾಲದ ನೈಜ ದಾಖಲೆಗಳೆಂದು ಪರಿಗಣಿಸಲಾಗುವುದಿಲ್ಲ. ಶಿಲಾಶಾಸನಗಳು ಬಹುಪಾಲು ನಂಬಲರ್ಹ ವಾಗಿರುತ್ತವೆ. ಆದರೆ, ತಾಮ್ರ ಶಾಸನಗಳಲ್ಲಿ ಕೆಲವು ಕೂಟ ಶಾಸನಗಳಾಗಿರುತ್ತವೆ; ಇಲ್ಲವೇ ಮುಂದೊಂದು ಕಾಲದಲ್ಲಿ ಬರೆದ ದಾಖಲೆಗಳಾಗಿರುತ್ತವೆ. ಕೆಲವು ಐತಿಹ್ಯಗಳೂ ಇದರಲ್ಲಿ ಸೇರಿರುತ್ತವೆ. ಸಾಮಾನ್ಯವಾಗಿ ಎಲ್ಲ ರಾಜವಂಶಗಳ ಆರಂಭ ಕಾಲದ ಶಾಸನಗಳಲ್ಲಿ ಈ ತೊಡಕು ಇದ್ದೇ ಇರುತ್ತದೆ. ಹೀಗಾಗಿ, ಒಂದು ರಾಜವಂಶದ ಆರಂಭಕಾಲವನ್ನು ಗುರುತಿಸುವುದು ಕಷ್ಟವಾಗುತ್ತದೆ. ಸಂಗಮ ಅರಸರ ಆರಂಭಕಾಲದ ಶಾಸನಗಳಿಗೆ ಈ ಮಾತು ಹೆಚ್ಚು ಅನ್ವಯಿಸುತ್ತದೆ. ಸಂಗಮ ಅರಸರ ಆರಂಭಕಾಲಕ್ಕೆ ಸಂಬಂಧಿಸಿದಂತೆ ಈ ತೊಡಕನ್ನು ನಿವಾರಿಸುವ ಮತ್ತೊಂದು ಪ್ರಯತ್ನವೇ — ಈ ಲೇಖನ. ಇದರಲ್ಲಿ, ಸಂಗಮ ಅರಸರ ಆರಂಭಕಾಲದ ಶಾಸನಗಳನ್ನು ಕಾಲಾನುಕ್ರಮದಲ್ಲಿ ಅಧ್ಯಯನ ಮಾಡಲಾಗಿದೆಯಲ್ಲದೆ, ಆರಂಭಕಾಲದ್ದೆಂದು ಗುರುತಿಸಲ್ಪಟ್ಟಿರುವ ಶಾಸನಗಳನ್ನೂ ವಿಶ್ಲೇಷಿಸಲಾಗಿದೆ.

ಕೋಲಾರ ತಾಲ್ಲೂಕಿನ ವಾನರಾಸಿಯ ಶಾಸನವನ್ನು[1] ಇಲ್ಲಿ ಮೊದಲಿಗೆ ಗಮನಿಸಬಹುದು. ಇದರಲ್ಲಿ 'ಶ್ರೀಮತು ಮಹಾಮಂಡಳೇಶ್ವರ ಶ್ರೀ ವೀರಕಂಪಣವೊಡೆಯರು' ಎಂದು ಉಲ್ಲೇಖಿಸಲಾಗಿದ್ದು, ತೇದಿ ವಿವರವು 'ಪರಿಧಾವಿ ಸಂವತ್ಸರದ ಫಾಲ್ಗುಣ ಶು ೫ ಗು' ಎಂದಿದೆ. ಇದು ಕ್ರಿ.ಶ. 1313 ಫೆಬ್ರವರಿ 1 ಗುರುವಾರಕ್ಕೆ ಸೇರುತ್ತದೆ ಎಂದು ಸಂವತ್ಸರದ ಆಧಾರದ ವಸುಂಧರಾ ಫಿಲಿಯೋಜಾ ಅವರು ಹೇಳಿದ್ದಾರಲ್ಲದೆ, ಇದನ್ನು ಸಂಗಮರ ಪ್ರಾಚೀನ ಶಾಸನ' ಎಂದೂ ಗುರುತಿಸಿದ್ದಾರೆ.[2] ಇದರಲ್ಲಿ ಶಕವರ್ಷದ ಉಲ್ಲೇಖವಿಲ್ಲ. ವೀರಕಂಪಣನನ್ನು ಸಂಗಮನ ಪುತ್ರನಾದ ಕಂಪನಿಗೆ ಹೋಲಿಸುವುದಾದರೆ, ಅವನು ಈ ಪ್ರದೇಶದಲ್ಲಿ ಆಳುತ್ತಿರಲಿಲ್ಲ. ಬುಕ್ಕನ ಮಗನಾದ ಎರಡನೇ ಕಂಪನೆಂದು ಪರಿಗಣಿಸಿದರೂ, ಕ್ರಿ.ಶ. 1313 ರಿಂದ ಎಂದರೆ, ಅವನ ಕಾಲವು (ಕ್ರಿ.ಶ. 1374 ರವರೆಗೆ ಬದುಕಿರುತ್ತಾನೆ) ಸುಧೀರ್ಘವಾಗುತ್ತದೆ. ಆದ್ದರಿಂದ, ಈ ಶಾಸನದ

ಕಾಲವನ್ನು ರೈಸ್‌ರವರು ಗುರುತಿಸಿರುವಂತೆ, ಕ್ರಿ.ಶ.1373 ಎಂದಿಟ್ಟುಕೊಳ್ಳುವುದೇ ಸೂಕ್ತವಾಗಿದೆ.

ಒಂದು ಅಪ್ರಕಟಿತ ಶಾಸನವು ಆವನಿಯಲ್ಲಿದ್ದು, ಇದರ ಕಾಲವನ್ನು ಕ್ರಿ.ಶ. 1326 ಎಂದು ದೇವರ ಕೊಂಡಾರೆಡ್ಡಿಯವರು ಹೇಳಿದ್ದಾರೆ. ಈ ಶಾಸನದ ಪೂರ್ಣ ಪಾಠವು ಲಭ್ಯವಿಲ್ಲದ ಕಾರಣ ಇಲ್ಲಿ ಗಮನಿಸಲಾಗಿಲ್ಲ. ಚಾಮರಾಜನಗರ ತಾಲ್ಲೂಕಿನ ಗಣಗ ನೂರಿನ ಒಂದು ಶಾಸನದಲ್ಲಿ[3], 'ಶ್ರೀವೀರ ಹರಿಯಪ್ಪ ಒಡೆಯರ ದೇವಾರ ಕೊಮಾರ ತೋಟವನೂ ಮೂದಂಣ ಒಡೆಯರು' ಎಂದಿದೆ. ಇದನ್ನು ವಸುಂಧರಾ ಫಿಲಿಯೋಜಾ ಅವರು, ಹರಿಹರನ ತಮ್ಮ ಮುದ್ದಪನಿಗೆ ಹೊಂದಿಸಿ, ಕಾಲವನ್ನು ಒಂದನೇ ಹರಿಹರನ ಅವಧಿ, ಅಂದರೆ, ಕ್ರಿ.ಶ. 1327 ಎಂದಿದ್ದಾರೆ.[4] ಹರಿಹರ ಮತ್ತು ಮೂಂದಣನ (=ಮುದ್ದಪ?) ಉಲ್ಲೇಖ ಒಟ್ಟಾಗಿ ಇರುವುದರಿಂದ ಇದರ ಕಾಲ ಪ್ರಾಚೀನವೇ ಆಗುತ್ತದೆ. ಆದರೆ ಹರಿಹರನ ಮಗ (ತಮ್ಮನಿಗೂ ಹೀಗೆ ಹೇಳುವುದುಂಟು) ಎಂದಿರುವುದರಿಂದ, ಇದರಲ್ಲಿ ಕಾಲವನ್ನು ದೃಢಪಡಿಸುವಂತೆ ದಿನದ ಉಲ್ಲೇಖ ಇಲ್ಲದಿರುವುದರಿಂದ ಮತ್ತು ಹೆಸರು ಸರಿಯಾಗಿಲ್ಲದಿರುವುದರಿಂದ ಇದರ ಕಾಲವನ್ನು ಹಿಂದಕ್ಕೆ ಹಾಕದಿರುವುದು ಒಳಿತೆನಿಸುತ್ತದೆ. ಈ ಶಾಸನದ ಪರಿಷ್ಕೃತ ಆವೃತ್ತಿಯಲ್ಲಿ ಸಂಪಾದಕರು ಇವನನ್ನು ಹರಿಹರನ ಮಗ ಎಂದು ಒಪ್ಪದೆ, ಕಾಲವನ್ನು ಕ್ರಿ.ಶ. 1387 ಜನವರಿ 5 ಎಂದು ಹೇಳಿ, insufficient for verification' ಎಂದೂ ಹೇಳಿದ್ದಾರೆ. ಹೀಗಾಗಿ ಈ ಶಾಸನದ ಕಾಲದಲ್ಲಿ ಬೇರೆಲ್ಲೂ ಒಂದನೇ ಹರಿಹರನ ಉಲ್ಲೇಖ ದೊರೆಯುವುದಿಲ್ಲವಾದ್ದರಿಂದ, ಇದು ಎರಡನೇ ಹರಿಹರನ ಕಾಲಕ್ಕೆ, ಅಂದರೆ, ಕ್ರಿ.ಶ. 1387ಕ್ಕೆ ನಿಲ್ಲುತ್ತದೆ. ಕ್ರಿ.ಶ. 1333ರ ಮಲದೇವನಹಳ್ಳಿಯ ಶಾಸನವನ್ನಿಲ್ಲಿ ಗಮನಿಸಬಹುದು.[5] ಈ ಶಾಸನದಲ್ಲಿ 'ಶಕ 1273 ಶ್ರೀಮುಖ ಸಂವತ್ಸರದ ಭಾದ್ರಪದ ಬಹುಳ ೧೨ಲೂ ರಾಜಾಧಿರಾಜ... ಶ್ರೀವಿರ ಬುಕ್ಕಂಣೊಡೆಯರು ಪೃಥ್ವರಾಜ್ಯನಾಳುವಲ್ಲಿ' ಎಂದಿದೆ. ಇದರಂತೆ ನೋಡಿದರೆ, ಶಕ 1273 (ಕ್ರಿ.ಶ. 1351-52) ಖರ ಸಂವತ್ಸರದಲ್ಲಿದೆ; ಶ್ರೀಮುಖ ಸಂವತ್ಸರವು ಶಕ 1255 (ಕ್ರಿ.ಶ. 1333)ರಲ್ಲಿದೆ. ಶಾಸನ ಸಂಪಾದಕರು ಇದರ ಕಾಲವನ್ನು ಶ್ರೀಮುಖ ಸಂವತ್ಸರಕ್ಕೆ ಹೊಂದಿಸಿ, ಕ್ರಿ.ಶ. 1333, ಸೆಪ್ಟೆಂಬರ್ 6- ಎಂದು ಹೇಳಿದ್ದರೂ, 'the date details are irregular' ಎಂದಿದ್ದಾರೆ. ಒಂದನೇ ಬುಕ್ಕನು 'ರಾಜಾಧಿರಾಜನಾಗಿ ಆಳುತ್ತಿದ್ದ ಕಾಲ ವನ್ನು ಗಮನಿಸಿದರೆ, ಸಂವತ್ಸರವು ತಪ್ಪಾಗಿಯೆಂದು ಭಾವಿಸಿ, ಶಕವರ್ಷದ ಆಧಾರದಿಂದ ಇದರ ಕಾಲವನ್ನು ಕ್ರಿ.ಶ. 1351-52 ಎಂದು ಹೇಳುವುದೇ ಸೂಕ್ತವೆನಿಸುತ್ತದೆ.

ಕ್ರಿ.ಶ. 1336ಕ್ಕೆ ಸಂಬಂಧಿಸಿದಂತೆ ನಮಗೆ ಕೆಲವು ಶಾಸನಗಳು ದೊರೆಯುತ್ತವೆ. ಮೊದಲಿಗೆ, ಬಾಗೇಪಲ್ಲಿ ತಾಲ್ಲೂಕಿನ ಬೆಸ್ತರಪಲ್ಲಿಯ ಕೈ ಬರಹದ ಪ್ರತಿಯನ್ನು ಗಮನಿಸ ಬಹುದು.[6] ಸಂಗಮನ ತಂದೆ ಬುಕ್ಕ ಮತ್ತು ತಾಯಿ ಮಗಾಂಬಿಕಾ, ಸಂಗಮನ ಸತಿ - ಮಾನಾಂಬಿಕಾ ಮತ್ತು ಅವರ 5 ಜನ ಮಕ್ಕಳು - ಇವರನ್ನು ಶಾಸನವು ಉಲ್ಲೇಖಿಸಿದೆ

ಯಲ್ಲದೆ 'ಕ್ಷೋಣಿಪಾಲೋ ಹರಿಹರಪತಿ' ಎಂದು ಹೇಳಿದೆ. ಜೊತೆಗೆ ನಾಯಿಯನ್ನು ಮೊಲವು ಬೇಟೆಯಾಡಿದ ಕಥೆ, ವಿದ್ಯಾರಣ್ಯರ ಸಂಪರ್ಕ, ವಿದ್ಯಾರಣ್ಯಪುರ ಮಾಡಿದ್ದು, ಮತ್ತು ವಿದ್ಯಾನಗರದ ಉಲ್ಲೇಖವಿದೆ.[6] ಈ ಪ್ರತಿಯ ಕಾಲವನ್ನು ಕ್ರಿ.ಶ. 1336 ಎಂದು ರೈಸ್ ಅವರು ಹೇಳಿದ್ದಾರಲ್ಲದೆ, ಕೈ ಬರಹದ ಪ್ರತಿಯಾದ್ದರಿಂದ ಅಧಿಕೃತವೆಂದು ಒಪ್ಪಿಕೊಂಡಿಲ್ಲ. ಬಾ.ರಾ. ಗೋಪಾಲ್ ಅವರು ಇದರ ಕಾಲವನ್ನು ಕ್ರಿ.ಶ. 1336, ಏಪ್ರಿಲ್ 18 ಗುರುವಾರ ಎಂದು ಹೇಳಿದ್ದಾರೆ. ಇದರಲ್ಲಿ ಸಂಗಮನ ಮಕ್ಕಳ ಹೆಸರನ್ನು ಬಿಟ್ಟರೆ ಉಳಿದ ಯಾವ ವಿಷಯಗಳೂ ಚಾರಿತ್ರಿಕ ಸತ್ಯವನ್ನೊಳಗೊಂಡಿಲ್ಲ. ಸಂಗಮನ ತಂದೆ ಬುಕ್ಕನ ಹೆಸರನ್ನು ಗಮನಿಸುವುದಾದರೆ, ಕೋಲಾರ ಜಿಲ್ಲೆಯ ತಾಮ್ರಪಟಗಳನ್ನು ಬಿಟ್ಟರೆ (ಲಿಂಗಸುಗೂರು ತಾಲ್ಲೂಕಿನ ಹಾಲ್ಕಾವಟಗಿಯಲ್ಲಿ ಇತ್ತೀಚೆಗೊಂದು ಹೊಸದಾಗಿ ದೊರೆತಿದೆ), ಒಂದೇ ಒಂದು ಶಿಲಾಶಾಸನದಲ್ಲಿ ಮಾತ್ರ ಈ ಬುಕ್ಕನ ಉಲ್ಲೇಖವಿದೆ (ಅವನ ಸತಿಯ ಹೆಸರಿಲ್ಲ). ಆದರೆ ಇದೂ ಕೂಡಾ ಕ್ರಿ.ಶ. 1380ರದೇ ಹೊರತು ಸಮಕಾಲೀನವಲ್ಲ. ಹಾಗೆ ನೋಡಿದರೆ, ಸಂಗಮನ ಹೆಸರು ಶಿಲಾಶಾಸನದಲ್ಲಿ ಮೊದಲು ಸಿಗುವುದೇ - ಕ್ರಿ.ಶ. 1358ರಲ್ಲಿ ಅವನ ತಂದೆ ಬುಕ್ಕನೆಂದು ಇನ್ನೊಂದು ತಲೆಮಾರನ್ನು ನಂತರದ ಕಾಲದಲ್ಲಿ ಸೇರಿಸಲಾಗಿದೆ.[8] ಇನ್ನು, ವಿದ್ಯಾರಣ್ಯ ಮತ್ತು ವಿದ್ಯಾನಗರದ ಉಲ್ಲೇಖ,[9] 'ಶ್ರೀ ವಿರೂಪಾಕ್ಷ' ಎಂಬ 'ಒಪ್ಪ' ಕೂಡಾ ಕ್ರಿ.ಶ. 1336ಕ್ಕೆ ಹೊಂದುವುದಿಲ್ಲ. ಹೀಗಾಗಿ ಬೆಸ್ತರಪಲ್ಲಿಯ ಕೈ ಬರಹದ ಪ್ರತಿಯನ್ನು ಕ್ರಿ.ಶ. 1336ರದ್ದೆಂದು ಒಪ್ಪಲಾಗುವುದಿಲ್ಲ; ರೈಸ್ ಅವರೇ ಹೇಳಿರುವಂತೆ ಅಧಿಕೃತವೂ ಅಲ್ಲ. ನೆಲ್ಲೂರು ಜಿಲ್ಲೆಯ ಕಾಪಲೂರಿನ ತಾಮ್ರಪಟ,[11] ಪರಮಶಿವಮೂರ್ತಿಯವರು ಪ್ರಕಟಿಸಿರುವ ಹಾಲ್ಕಾವಟಗಿಯ ತಾಮ್ರ ಪಟಗಳೂ[12] ಕೂಡಾ ಇದೇ ವಿಷಯಗಳನ್ನು ಹೇಳುತ್ತಿವೆ. ಬೆಸ್ತರಪಲ್ಲಿಯ ಶಾಸನವನ್ನು ಬರೆದ ನಾಗಿದೇವನೇ ಈ ಎರಡು ಶಾಸನಗಳನ್ನೂ ಬರೆದಿರುವನೆಂದು ಪರಮಶಿವ ಮೂರ್ತಿಯವರು ಉಲ್ಲೇಖಿಸಿದ್ದಾರೆ. (ಈ ನಾಗಿದೇವನು ಮುದಿಯನೂರು ಮತ್ತು ಕೆಂಕೆರೆ ತಾಮ್ರಪಟಗಳನ್ನೂ ಕೆತ್ತಿರುವನಲ್ಲದೆ, ಈ ಎರಡೂ ಶಾಸನಗಳ ಕವಿ - ಕೋಟಿ ದೇವಾರಾಧ್ಯನ ಮಗ - ಮಲ್ಲಣಾರಾಧ್ಯ) ಒಂದೇ ತೇದಿ ವಿವರವುಳ್ಳ, ಒಂದೇ ವಿಷಯವನ್ನು ಒಳಗೊಂಡ, ಒಬ್ಬನೇ ವ್ಯಕ್ತಿ ರಚಿಸಿರುವ ಈ ಮೂರೂ ತಾಮ್ರಪಟಗಳು, ವಿಜಯ ನಗರ ಸ್ಥಾಪನೆಯಲ್ಲಿ ವಿದ್ಯಾರಣ್ಯರ ಪಾತ್ರವಿತ್ತೆಂಬ ಜನಜನಿತ ಐತಿಹ್ಯವನ್ನು ದಾಖಲಿಸಲೆಂದೇ ತಯಾರಾಗಿವೆ ; ಅಂದರೆ ಈ ಮೂಲಕ ವಿದ್ಯಾರಣ್ಯರ ಮಹತ್ವವನ್ನು ಹೆಚ್ಚಿಸಲೆಂದೇ ನಂತರದ ಕಾಲದಲ್ಲಿ ಉದ್ದೇಶಪೂರ್ವಕವಾಗಿ ರಚಿಸಿರುವ ಕೂಟ ಶಾಸನಗಳು. ಈ ಕಾರಣವಾಗಿ, ಹಾಲ್ಕಾವಟಗಿಯ ತಾಮ್ರಪಟವು ಹೇಳುವ ವಿಜಯನಗರ ಸ್ಥಾಪನೆಯ ಕಾಲವನ್ನಾಗಲೀ, ವಿಜಯನಗರದ ಸ್ಥಾಪನಾ ಹೆಸರು 'ವಿದ್ಯಾನಗರ' ಎಂಬುದನ್ನಾಗಲೀ, ವಿದ್ಯಾರಣ್ಯರ ವಿಷಯವನ್ನಾಗಲೀ ಒಪ್ಪಲಾಗುವುದಿಲ್ಲ. ಅಂತೇ, ಈ ತಾಮ್ರಪಟದ ಆಧಾರದಿಂದ ಬೆಸ್ತರಪಲ್ಲಿ ಮತ್ತು ಕಾಪಲೂರು ಶಾಸನಗಳ ನೈಜತೆಯನ್ನೂ

ಸ್ಥಾಪಿಸಲಾಗುವುದಿಲ್ಲ. ಮುಳಬಾಗಿಲು ತಾಲ್ಲೂಕಿನ ಕಾವತ್ತನಹಳ್ಳಿಯ ಶಾಸನವನ್ನು[14] ರೈಸ್ ಅವರು ಕ್ರಿ.ಶ. 1396ರ ಕಾಲದ್ದೆಂದು ಹೇಳಿದ್ದರೆ, ವಸುಂಧರಾ ಫಿಲಿಯೋಜಾ ಅವರು 'ಧಾತು' ಸಂವತ್ಸರದ ಆಧಾರದಿಂದ ಕ್ರಿ.ಶ.1336 ಮಾರ್ಚ್ 29 ಎಂದು ಹೇಳಿದ್ದಾರೆ. ಶಾಸನದಲ್ಲಿ, 'ಶ್ರೀವೀರಬುಕ್ಕಣ ಒಡೆಯಾರ್ಕು' ಎಂದಿದೆ. ಆದರೆ, ಇದರಲ್ಲಿ ಶಕವರ್ಷ ಅಥವಾ ದಿನದ ಉಲ್ಲೇಖವಿಲ್ಲ. ಅಲ್ಲದೆ, ಈ ಪ್ರದೇಶಕ್ಕೆ ಸಂಬಂಧಿಸಿದಂತೆ ಸಂಗಮರ ಆರಂಭಕಾಲದ ಶಾಸನಗಳು. ಕ್ರಿ.ಶ 1350ರ ನಂತರ ದೊರೆಯುತ್ತವೆ. (ಒಂದೇ ಒಂದು ಕ್ರಿ.ಶ. 1339ರ ಶಾಸನ ಮಾತ್ರ'... ಣ ಉಡೈಯರ್' ಎಂದಿದೆ) ಹೀಗಾಗಿ ಇಲ್ಲಿ ಉಲ್ಲೇಖಿಸಲ್ಪಟ್ಟಿರುವ 'ವೀರ ಬುಕ್ಕಣ ಒಡೆಯರು' ಎರಡನೇ ಬುಕ್ಕರಾಯನಾಗಿದ್ದು, ಇದರ ಕಾಲವು ರೈಸ್ ಅವರು ಹೇಳಿದಂತೆ ಕ್ರಿ.ಶ. 1396ಕ್ಕೆ ನಿಲುತ್ತದೆ.

ಚನ್ನರಾಯಪಟ್ಟಣ ತಾಲ್ಲೂಕಿನ ಆನೆಕೆರೆಯ ಶಾಸನದಲ್ಲಿ[15] 'ಶ್ರೀ ಮನ್ಮಹಾ ರಾಜಾಧಿರಾಜ ರಾಜಪರಮೇಶ್ವರ ಶ್ರೀವೀರಪ್ರತಾಪಹರಿಹರ ಮಹಾರಾಯರಿಗೆ' ಎಂದಿದೆಯಲ್ಲದೆ, 'ಪ್ರಮಾಥಿ ಸಂವತ್ಸರದ ಕಾರ್ತಿಕ ಶು೧' ಎಂದು ತೇದಿ ವಿವರವನ್ನು ನೀಡಿದೆ. ಈ ಶಾಸನದ ಕಾಲವನ್ನು ಶ್ರೀನಿವಾಸ ರಿತ್ತಿಯವರು ಕ್ರಿ.ಶ. 1339 ಎಂದಿದ್ದರೂ, ರೈಸ್ ಮತ್ತು ಬಾ.ರಾ. ಗೋಪಾಲ್ ಅವರು ಕ್ರಿ.ಶ. 1399 ಎಂದಿದ್ದಾರೆ. 'ವೀರಪ್ರತಾಪ' ಮತ್ತು 'ಮಹಾರಾಜಾಧಿರಾಜ' ಎಂಬುದು ಎರಡನೇ ಹರಿಹರನಿಗೇ ಅನ್ವಯಿಸುವುದರಿಂದ, ಇದು ಎರಡನೇ ಹರಿಹರನ ಕಾಲದ, ಅಂದರೆ, ಕ್ರಿ.ಶ. 1399ರ ಶಾಸನವೇ ಆಗಿದೆ. ಸಾಗರ ತಾಲ್ಲೂಕಿನ ಕುಗ್ವೆ ಗ್ರಾಮದ ಶಾಸನದಲ್ಲಿ,[16] 'ವೀರ ಹರಿಹರವೊಡೆಯರು ಪ್ರಿಥುವೀ ರಾಜ್ಯವನಾಳುವ ಕಾಲದಲ್ಲಿ, ಎಂದೂ, ತೇದಿಯನ್ನು 'ಪ್ರಮಾದಿ ಸಂವತ್ಸರದ ವೈಶಾಕ ಶು 3 ಆ' ಎಂದೂ ಹೇಳಲಾಗಿದೆ. ಎಫಿಮರೀಸ್ ಪ್ರಕಾರ ಈ ತೇದಿಯ ವಿವರಗಳು ಕ್ರಿ.ಶ. 1339 ಏಪ್ರಿಲ್ 13 ಮಂಗಳವಾರ ಅಥವಾ ಕ್ರಿ.ಶ. 1399 ಏಪ್ರಿಲ್ 9 ಬುಧವಾರಕ್ಕೆ ಹೊಂದುತ್ತವೆ. ಈ ಅವಧಿಗಳಲ್ಲಿ ಕ್ರಮವಾಗಿ ಮೊದಲನೇ ಹರಿಹರ ಮತ್ತು ಎರಡನೇ ಹರಿಹರ ಇರುವುದರಿಂದ ಈ ಸಂವತ್ಸರದ ಉಲ್ಲೇಖ ಸೂಕ್ತವಾಗಿರುವಂತಿದೆ; ಆದರೆ, ಯಾವುದೇ ತೇದಿಯೂ ಭಾನುವಾರಕ್ಕೆ ಹೊಂದುವುದಿಲ್ಲ ಎಂದು ಶಾಸನ ಸಂಪಾದಕರೇ ಹೇಳಿದ್ದಾರೆ. ಕ್ರಿ.ಶ. 1339ರಲ್ಲಿ ವೈಶಾಖ ಶುದ್ಧ 3ರ ಬದಲು ಶುದ್ಧ 2 (ದ್ವಿತೀಯ) ಎಂದಿಟ್ಟುಕೊಂಡರೆ, ಆ ದಿನ ಭಾನುವಾರವೇ ಆಗಿರುತ್ತದೆ. ಈ ಸಣ್ಣ ತಿದ್ದುಪಡಿಯೊಂದಿಗೆ ಈ ಶಾಸನದ ಕಾಲವನ್ನು ಕ್ರಿ.ಶ. 1339 ಏಪ್ರಿಲ್, 11 ಆದಿತ್ಯವಾರ ಎಂದು ಪರಿಗಣಿಸ ಬಹುದಾಗಿದೆ. 'ಪ್ರಿಥುವೀ ರಾಜ್ಯ' ಎಂದಿರುವುದು, ಬಿರುದಾವಳಿ ಇಲ್ಲದಿರುವುದೂ ಈ ತೇದಿಯನ್ನು ದೃಢೀಕರಿಸುತ್ತದೆ. ಒಂದು ತಮಿಳು ಶಾಸನವು ತಮಿಳುನಾಡಿನ ರಾಮಗಿರಿ ಯಲ್ಲಿ[17] ದೊರೆತಿದ್ದು, ಇದರಲ್ಲಿ 'ಮಹಾಮಂಡಳೇಶ್ವರ ವೀರ ಹರಿಹರರಾಯ' ಎಂಬ ಉಲ್ಲೇಖವಿದೆ. ಶಕವರ್ಷದ ಉಲ್ಲೇಖವಿರದ ಈ ಶಾಸನವೂ ಕೂಡಾ ಪ್ರಮಾದಿ ಸಂವತ್ಸರವನ್ನು ಉಲ್ಲೇಖಿಸುತ್ತಿದೆ. ಸೌರಮಾನ ತೇದಿಯ ಈ ಶಾಸನದ ಕಾಲವನ್ನು

ವಸುಂಧರಾ ಫಿಲಿಯೋಜಾ ಅವರು, ಕ್ರಿ.ಶ 1339 ಡಿಸೆಂಬರ್ 26 ಎಂದು ಹೇಳಿ, ಒಂದನೇ ಹರಿಹರನ ಕಾಲಕ್ಕೆ ಹಾಕಿದ್ದಾರೆ. ಇದೇ ಪ್ರಮಾಥಿ ಸಂವತ್ಸರದ ಮತ್ತೊಂದು ಶಾಸನವು ಕರ್ನೂಲ್ ಜಿಲ್ಲೆಯ ಕೋಡುಮೂರಿನಲ್ಲಿ[18] ದೊರೆತಿದ್ದು, ಇದರಲ್ಲಿ, ಹರಿಹರನು 'ಜಗತಾಪಿಗುತ್ತಿ'ಯಿಂದ ಆಳುತ್ತಿದ್ದನೆಂದಿದೆ. ಈ ಶಾಸನದ ತೇದಿ ವಿವರವು 'ಶಕ 1261 ಪ್ರಮಾಥಿ ಸಂವತ್ಸರದ ಮಾಘ ಬ 14 ಶು೧' ಎಂದಿದ್ದು, ಇದನ್ನು ಕ್ರಿ.ಶ. 1340 ಜನವರಿ 28 ಎಂದು ಹೊಂದಿಸಲಾಗಿದೆ. ಕ್ರಿ.ಶ. 1340ರ ಒಂದು ತಮಿಳು ಶಾಸನವೂ[19] 'ಮಹಾಮಂಡಳೇಶ್ವರ ಹರಿಯಪ್ಪ ಒಡೆಯರ ಪ್ರಿತ್ವೀರಾಜ್ಯ'ವೆಂದಿದೆ. (ಅನುವಾದ) ಇವೆಲ್ಲದರಿಂದ ಕ್ರಿ.ಶ. 1339 ಪ್ರಮಾಥಿ ಸಂವತ್ಸರದಲ್ಲಿ ಹರಿಹರನ ಆಳ್ವಿಕೆ ಇತ್ತೆಂದು ತಿಳಿಯಬಹುದಾಗಿದೆ. ಶಾಸನದಲ್ಲಿ ಬಿರುದಾವಳಿ ಇಲ್ಲದಿರುವುದೂ ಈ ತೇದಿಯನ್ನು ದೃಢೀಕರಿಸುತ್ತದೆ; ಮಾತ್ರವಲ್ಲದೆ, ಕುಗ್ವೆ ಶಾಸನದ ಅವಧಿಯನ್ನು ಪರೋಕ್ಷವಾಗಿ ಪ್ರಮಾಣೀಕರಿಸುತ್ತದೆ.

ಈ ನಂತರ ದೊರೆಯುವ ಕ್ರಿ.ಶ. 1340ರ ಬಾದಾಮಿ ತಾಲ್ಲೂಕಿನ ತಟ್ಟುಕೋಟೆಯ ಶಾಸನವು[20] ಗಮನಾರ್ಹವಾಗಿದೆ. ಈ ಶಾಸನದಲ್ಲಿ, ಮಹಾಮಂಡಳೇಸ್ವರಂ ಅರಿರಾಯ ವಿ(?)ಭಾಸೆಗೆ ತಪ್ಪುವ ರಾಯರ ಗಂಡ ಪೂರ್ವಪಶ್ಚಿಮ ಸಮುದ್ರಾಧಿಪತಿ ಶ್ರೀ ವೀರಹರಿಯಪ್ಪವೊಡೆಯರ' ಎಂಬ ಉಲ್ಲೇಖವಿದ್ದು, ಅವನ ನಿರೂಪದಂತೆ ಚಾಮೆ ನಾಯಕನು ದಾನ ನೀಡುತ್ತಾನಲ್ಲದೆ, ಕೋಟೆಯನ್ನೂ ಕಟ್ಟಿಸುತ್ತಾನೆ. ಕ್ರಿ.ಶ. 1341ರ ಬಾಣಸವಾಡಿಯ ಶಾಸನದಲ್ಲಿ[21] 'ಚತುಸ್ಸಮುದ್ರಾಧಿಪತಿ ವೀರಹರಿಯಪ್ಪವೊಡೆಯರು ಪ್ರಿತ್ವೀರಾಜ್ಯವಾಳುತ್ತಿದ್ದ'ನೆಂದು ಹೇಳಲಾಗಿದೆ. ಈ ಶಾಸನದಲ್ಲಿ, 'ಕಲಿಯುಗ ವರುಸಂ ೪೪೪೨... ೧೨೬೩ವಿಕ್ರಮ ಸಂವತ್ಸರದ.... ೫ ಸಂವತ್ಸರದ ಆಶ್ವಯುಜ ಶು ೧೦ ಮ...' ಎಂದು ತೇದಿ ವಿವರವಿದೆ. ಇದನ್ನು ಕ್ರಿ.ಶ. 1340ರ ಶಾಸನವೆಂದು ರೈಸ್ ಮತ್ತು ಬಾ.ರಾ. ಗೋಪಾಲ್ (ಕ್ರಿ.ಶ. 1340, ಅಕ್ಟೋಬರ್1 ಭಾನುವಾರ) ಅವರು ಹೇಳಿದ್ದಾರೆ. ದಿನದ ವ್ಯತ್ಯಾಸ ಬಿಟ್ಟರೆ, ಕಲಿಯುಗ, ಶಕವರ್ಷ ಮತ್ತು ಸಂವತ್ಸರ - ಎಲ್ಲವೂ ಶಾಸನೋಕ್ತವಾಗಿ ಸರಿಯಾಗಿದೆ. ಈ ಶಾಸನದ ಬಗ್ಗೆ ಬರೆಯುತ್ತಾ ಎಂ.ಜಿ. ಮಂಜುನಾಥ್ ಅವರು, ಶಾಸನದಲ್ಲಿ ಕಲಿಯುಗ '೪೪೪೭' ಇದೆ ಎಂದು ತಿದ್ದುಪಡಿ ನೀಡಿರುವರಲ್ಲದೆ, ಕಾಲವನ್ನು ತಾರಣ ಸಂವತ್ಸರಕ್ಕೆ ಹೊಂದಿಸಿ 'ಕ್ರಿ.ಶ. 1345 ಸೆಪ್ಟೆಂಬರ್ ೨೭ ಮಂಗಳವಾರ' ಎಂದು ಹೇಳಿದ್ದಾರೆ.[22] ಕಲಿಯುಗ ತಿದ್ದಿದ ಮೇಲೆ ಶಕವರ್ಷವೂ ತಿದ್ದುಪಡಿಗೊಳ ಗಾಗ ಬೇಕಾಗಿತ್ತು; ಅಥವಾ ಅಲ್ಲಿ '೧೨೬೩' ಎಂದೇ ಇದ್ದಲ್ಲಿ ಆ ವ್ಯತ್ಯಾಸವನ್ನು ಗಮನಿಸ ಬೇಕಾಗಿತ್ತು, (ಅಂತೇ, ಇಲ್ಲಿರುವುದು 'ವಿಕ್ರಮಶಕೆ'ಯೆಂದರೆ ಕಾಲ ಹೊಂದುವುದಿಲ್ಲ) ಕಲಿಯುಗ ಮುಂತಾದ ವಿವರಗಳು ಹೊಂದಾಣಿಕೆಯಾಗುತ್ತಿರುವಾಗ, '....೫' ಸಂವತ್ಸರವನ್ನು ಪರಿಗಣಿಸದೆ ರೈಸ್ ಅವರು ನೀಡಿರುವ ಪಾಠವನ್ನೇ ಒಪ್ಪಿಕೊಳ್ಳ ಬಹುದಾಗಿದೆ. ಬುಕ್ಕನನ್ನು ಉಲ್ಲೇಖಿಸುವ ಕ್ರಿ.ಶ. 1341ರ ಶಾಸನವೊಂದು ಮಂಡ್ಯ

ತಾಲ್ಲೂಕಿನ ಬೀಚೇನಹಳ್ಳಿಯಲ್ಲಿ ದೊರತಿದೆ.[23] ಬುಕ್ಕನನ್ನು ಹೆಸರಿಸುವ ಮೊದಲ ಶಾಸನವಿದು.

ಕ್ರಿ.ಶ. 1342ರದೆಂದು ಪರಿಗಣಿಸಲ್ಪಟ್ಟಿರುವ ಆನೆಗೊಂದಿಯ ಶಾಸನದ [24]ಕಾಲ ಕೂಡಾ ಪರಿಷ್ಕೃತವಾಗಬೇಕಾಗಿದೆ. ಚಿತ್ರಭಾನು ಸಂವತ್ಸರದ ಈ ಶಾಸನದ ತೇದಿಯು ಕ್ರಿ.ಶ. 1342 ಏಪ್ರಿಲ್ 8 ಸೋಮವಾರಕ್ಕೆ ಹೊಂದುವಂತೆಯೇ ಇದೆ. ಆದರೆ, ಇದರಲ್ಲಿ ಉಲ್ಲೇಖಿತರಾಗಿರುವ ವ್ಯಕ್ತಿಗಳ ಕಾರಣದಿಂದ ಈ ತೇದಿಯು ಹೊಂದಾಣಿಕೆಯಾಗುವುದಿಲ್ಲ. ಮುಖ್ಯವಾಗಿ, 'ಶ್ರೀಮಾನ್ಬುಕ್ಕಮಹೀಪತಿಃ ಉದುಬೂದ್ಬುಬೃತಸ್ತನ್ಮಾ ದ್ರಾಜಾ ಹರಿಹರೇಶ್ವರಃ' ಎಂದಿರುವುದರಿಂದ, ಇದು ಬುಕ್ಕನ ಮಗನಾದ ಎರಡನೇ ಹರಿಹರನ ಕಾಲಕ್ಕೆ, ಅಂದರೆ ಕ್ರಿ.ಶ. 1402ಕ್ಕೆ ಹೊಂದುತ್ತದೆ. ಕ್ರಿ.ಶ 1343ರದೆಂದು ಪರಿಗಣಿಸಲ್ಪಟ್ಟಿದ್ದ ಗಂಡಸಿಯ ಶಾಸನದ[25] ಕಾಲವನ್ನೂ ಕೂಡ ಈಚೆಗೆ ಪರಿಷ್ಕರಿಸಲಾಗಿದ್ದು, ಕ್ರಿ.ಶ. 1403ರದೆಂದು ಸಂಪಾದಕರು ನಿಗದಿಪಡಿಸಿದ್ದಾರೆ. ಶಾಸನದಲ್ಲಿ 'ಮಹಾರಾಜಾಧಿರಾದ ರಾಜಪರಮೇಶ್ವರ ಶ್ರೀ ವೀರಪ್ರತಾಪ ಹರಿಹರಮಹಾರಾಯರು' ಎಂದಿರುವುದರಿಂದ, ಕಾಲನಿರ್ಣಯವೂ ಸರಿಯಾಗಿದೆ. ಕ್ರಿ.ಶ. 1344ರ ತೇಕಲ್ಲಿನ ತಮಿಳು ಶಾಸನದಲ್ಲಿ, 'ಮಹಾಮಂಡಲೇಶ್ವರ ಅರಿರಾಯ ವಿಭಾಡ ಭಾಷೆಗೆ ತಪ್ಪುವ ರಾಯರ ಗಂಡ' - ಎಂಬ ಬಿರುದುಗಳಿದ್ದು, ಸೋಮಪ್ಪ ದಣ್ಣಾಯಕನನ್ನು 'ವೀರ ಕಂಪಣ ಉಡ್ಯೆಯರರ ರಾಜ್ಯ ಪ್ರತಿಪಾಲಕ' (ಅನುವಾದ) ಎಂದು ಗುರುತಿಸಿದೆ. ಎರಡನೇ ಕಂಪಣ ನನ್ನು ಪರೋಕ್ಷವಾಗಿ ಹೆಸರಿಸುವ ಮೊದಲ ಶಾಸನವಿದು.

ಕ್ರಿ.ಶ. 1344ರ ಎರಡು ತಾಮ್ರ ಪಟಗಳು[27] ಕೋಲಾರ ಜಿಲ್ಲೆಯ ಮುದಿಯನೂರು ಮತ್ತು ಕೆಂಕೆರೆಯಲ್ಲಿ ದೊರೆತಿವೆ. ಇವು ಮಹಾಕವಿ ನಾಚನಸೋಮನಿಗೆ 'ರಾಜಾಧಿರಾಜ ರಾಜಬುಕ್ಕರಾಯ'ನು ನೀಡಿದ ದಾನ ಪತ್ರಗಳಾಗಿವೆ. 'ಶಕಸ್ಯಾಬ್ಬೇರ(ಸಾಭ್ರ) ನಯನೇಂದುಭಿಃ ತಾರಣಾಬ್ದೇ'... ಎಂದು ಎರಡೂ ತಾಮ್ರಪಟಗಳಲ್ಲಿದೆ. ವಿಷಯ, ಈ ಎರಡೂ ತಾಮ್ರಪಟಗಳನ್ನು ರಚಿಸಿದವನು ಕೋಟಿ ದೇವಾರಾಧ್ಯನ ಮಗ - ಮಲ್ಲಣಾರಾಧ್ಯ; ಹಾಗೂ ಕೆತ್ತಿದವನು - ನಾಗಿದೇವ. ಒಂದೇ ತೇದಿ ವಿವರಗಳನ್ನೊಳ ಈ ತಾಮ್ರಪಟಗಳ ಕಾಲವನ್ನು ಕ್ರಿ.ಶ. 1344 ಮಾರ್ಚ್ 23 ಮಂಗಳವಾರ ಎಂದು ಬಾ.ರಾ. ಗೋಪಾಲ್ ಅವರು ಹೇಳಿದ್ದರೆ, ಮುದಿಯನೂರಿನ ತಾಮ್ರಪಟವನ್ನು ಕ್ರಿ.ಶ. 1344ರ ಕಾಲದ್ದೆಂದೂ, ಕೆಂಕೆರೆಯ ತಾಮ್ರಪಟದ ಕಾಲವನ್ನು ಕ್ರಿ.ಶ. 1370 ಎಂದೂ ರೈಸ್ ಅವರು ಹೇಳಿದ್ದಾರೆ. ಒಂದೇ ತೇದಿ, ಒದೇ ವಿಷಯವನ್ನು ಹೇಳುವ ಎರಡು ತಾಮ್ರ ಪಟಗಳಿರುವುದೇ ಇಲ್ಲಿ ಅನುಮಾನಾಸ್ಪದವಾಗಿದೆ. ಈ ತಾಮ್ರಪಟಗಳು ಉಲ್ಲೇಖಿಸುವಂತೆ ಕ್ರಿ.ಶ. 1344ರಲ್ಲಿ ಬುಕ್ಕನು ರಾಜ್ಯಭಾರಮಾಡುತ್ತಿರಲಿಲ್ಲ; ಹಾಗೂ ವಿದ್ಯಾರಣ್ಯರ ಉಲ್ಲೇಖ ಶಿಲಾಶಾಸನಗಳಲ್ಲಿ ಇರುವುದಿಲ್ಲ. ಹೀಗಾಗಿ, ಈ ಶಾಸನಗಳ ತೇದಿಯನ್ನೂ ಅನುಮಾನದಿಂದಲೇ ನೋಡುವಂತಾಗಿದೆ. ನಾಚನಸೋಮನ ಕಾಲವೂ

ಕೂಡಾ ನಿರ್ಣಯವಾಗದೆ ಇನ್ನೂ ಸಮಸ್ಯೆಯಾಗೇ ಉಳಿದಿದೆಯಾದ್ದರಿಂದ ಈ ತಾಮ್ರಪಟಗಳ ಕಾಲವನ್ನೂ ನಿರ್ಣಯಿಸಲಾಗುವುದಿಲ್ಲ. ಕ್ರಿ.ಶ. 1344ರಲ್ಲಿ ಇನ್ನೂ ಎರಡು ಶಿಲಾಶಾಸನಗಳು ದೊರೆತಿವೆ. ಇವುಗಳಲ್ಲಿ, ಚಪ್ಪರದಹಳ್ಳಿಯ ಶಾಸನವು[29] ಹರಿಯಪ್ಪ ಒಡೆಯರ್‌ನನ್ನು ಉಲ್ಲೇಖಿಸಿದರೆ, ಕೈವಾರದ ತಮಿಳು ಶಾಸನವು[30] ಬುಕ್ಕನನ್ನು ಉಲ್ಲೇಖಿಸಿದೆ. ಕೈವಾರದ ಶಾಸನದಲ್ಲಿ, ಮಹಾಮಂಡಳೇಶ್ವರ ಹರಿಹರರಾಯನ ಮಗ (-ಸೋದರ) 'ಬುಕ್ಕನ ಭುಜಬಲದ ಯಶಸ್ಸಿಗೆಂದು' ಅಲ್ಲಿನ ಭೀಮೇಶ್ವರ ದೇವಾಲಯದ ವರುಂದರುಂ ಪೆರುಮಾಳ್ ಮೊದಲಾದವರು ದೇವರಿಗೆ ಕೊಟ್ಟ ದಾನ ವನ್ನು ಹೇಳಿದ್ದು, (ಅನುವಾದ) ಗಮನಾರ್ಹವಾಗಿದೆ. ಕ್ರಿ.ಶ. 1344ರ ಪಿರಿಯಾಪಟ್ಟಣ ತಾಲ್ಲೂಕಿನ ದೊಡ್ಡ ಬೆಲ ಹಾಳುವಿನ ಶಾಸನದಲ್ಲಿ [31] ಮಹಾಪ್ರಧಾನ ಕೇತಯ ದಣ್ಣಾಯಕರು ರಾಘವ ದೇವಂಗೆ ನೀಡಿದ ದಾನವನ್ನು ಉಲ್ಲೇಖಿಸಲಾಗಿದೆ. ಜೊತೆಗೆ, 'ಆಯುಷ್ಯಂ ಬಲಮಾರೋಘ್ಯಂ ಯಶೋವೃದ್ಧಿ ಶ್ರಿಯಾವಹಂ ಹೋರರಾಶಿ ಗ್ರಹಾಣಾಂಚ ಪಕ್ಷನಕ್ಷತ್ರ ಶಾಸನಂ' ಎಂದಿದೆ. ಇಷ್ಟು ಸುದೀರ್ಘವಾದ ಆಶೀರ್ವಚನವಿರುವುದರಿಂದ, ಇದೂ ಬಹುಶಃ ಆಗ ಅಲ್ಲಿ ಇದ್ದ ಸಂಗಮಪುತ್ರರ ಯಶಸ್ಸಿಗಾಗಿ ನೀಡಿದ ದಾನವಿರಬಹುದೇ ಎಂಬ ಅನುಮಾನ ಬರುತ್ತದೆ.

ಕ್ರಿ.ಶ. 1345ಕ್ಕೆ ಸಂಬಂಧಿಸಿದಂತೆ 3 ಶಾಸನಗಳು ದೊರೆತಿವೆ. ಕಲುಕುಂಟೆಯ ಶಾಸನದಲ್ಲಿ [32] 'ಮಲ್ಲಿನಾಥವೊಡೆಯರು' ಎಂಬ ಉಲ್ಲೇಖವಿದ್ದರೂ, ಇವನು ಸಂಗಮ ಪುತ್ರನೇ / ಸಂಬಂಧಿಕನೇ ಎಂಬುದೇನೂ ಸ್ಪಷ್ಟವಿಲ್ಲ. ಈ ಅವಧಿಯ ಹರದನಹಳ್ಳಿಯ[33] ತಾಮ್ರಪಟವನ್ನು ಸಂಪಾದಕರು ಲಿಪಿ ದೃಷ್ಟಿಯಿಂದ 'ಕೂಟಶಾಸನ' ಎಂದಿದ್ದಾರೆ. ಇದರಲ್ಲಿನ 'ಶ್ರೀ ಪ್ರತಾಪ ಚಕ್ರವರ್ತಿ ಹೊಯ್ಸಳ ವೀರಬಲ್ಲಾಳ ದೇವರು' ಎಂಬ ಉಲ್ಲೇಖವೂ ಕೂಡಾ ಇದು ಕೂಟ ಶಾಸನವೆಂಬುದನ್ನು ಸ್ಪಷ್ಟಪಡಿಸುತ್ತಿದೆ. ಕ್ರಿ.ಶ. 1345ರ ಅತ್ತಾವರದ ಶಾಸನವು[34] ಗಮನಾರ್ಹವಾಗಿದೆ. ಇದರಲ್ಲಿ, ಮಂಗಳೂರು ರಾಜ್ಯವನ್ನಾಳುತ್ತಿದ್ದ ಶಂಕರದೇವ ಒಡೆಯರು ಬುಕ್ಕನ ರಾಜ್ಯಾಭ್ಯುದಯಕ್ಕೆಂದು ದಾನ ನೀಡಿರುವುದು ಮುಖ್ಯ ವಿಷಯವಾಗಿದೆ. ಈ ಶಾಸನದ ತೇದಿ ವಿವರವು 'ಪಾರ್ಥಿವ ಸಂವತ್ಸರ ಮಾಘ 14 ಸೋಮವಾರ' ಎಂದಿದ್ದು, ಇದಾದ 15-20 ದಿನಗಳ ನಂತರವಷ್ಟೇ ಸಂಗಮಪುತ್ರರು ಶೃಂಗೇರಿ ಮಠಕ್ಕೆ ಹೋಗಿದ್ದಾರೆಂಬುದು ಗಮನಾರ್ಹ ಅಂಶ.

ಕ್ರಿ.ಶ. 1346ರ ಶೃಂಗೇರಿಯ ಶಾಸನದ[35] ಪ್ರಕಾರ, ಹರಿಹರ, ಅವನ ತಮ್ಮಂದಿರುಗಳು, ಅಳಿಯವಲ್ಲಪ ದಣ್ಣಾಯಕ, ಕುಮಾರ ಸೋಮಣ್ಣೊಡೆಯ -ಎಲ್ಲರೂ ಒಟ್ಟಾಗಿ ಶ್ರೀಮಠಕ್ಕೆ ಹೋಗಿ ಅಲ್ಲಿನ ಪರಿಚಾರಕ ಬ್ರಾಹ್ಮಣರಿಗೆ 9 ಹಳ್ಳಿಗಳನ್ನು ದಾನವಾಗಿ ನೀಡಿದ್ದಾರೆ. 'ಪಾರ್ಥಿವ ಸಂವತ್ಸರದ ಫಾಲ್ಗುಣ ಬ 1 ಗುರುವಾರ'ದಂದು, ಅಂದರೆ, ಕ್ರಿ.ಶ. 1346 ಮಾರ್ಚ್ 9 ಗುರುವಾರದಂದು ಈ ಭೇಟಿ ನಡೆದಿದೆಯೆಂದು ತಿಳಿದು ಬರುತ್ತದೆ. ಈ ಹೊತ್ತಿಗೆ ನಾಲ್ಕನೇ ಬಲ್ಲಾಳನೂ ಗತಿಸಿದ್ದು, ಸಂಗಮರು ಅಧಿಕಾರವನ್ನು

ತಮ್ಮ ಕೈಗೆ ತೆಗೆದುಕೊಳ್ಳುತ್ತಾರೆ. ಈ ಹಿನ್ನೆಲೆಯಲ್ಲಿ, ಈ ಭೇಟಿಯು ಸಂಗಮ ಅರಸರ ಆರಂಭಕಾಲದ ಚರಿತ್ರೆಯ ದೃಷ್ಟಿಯಿಂದ ಮುಖ್ಯವಾದುದ್ದಾಗಿದೆ. ಈ ಶಾಸನದಲ್ಲಿ 'ಪೂರ್ವಾಪರ ಸಮುದ್ರಾಂತಂ ಜಿತ್ವಾ ಹರಿಹರೋಭುವಂ ಜಯೋತ್ಸವಂ ಖ್ಯಾಪ ಯಿತುಮಕರೋದ್ಧರ್ಮ ಮುತ್ತಮಂ ಎಂದಿದ್ದು, ಈ ಹೊತ್ತಿಗೆ ಪೂರ್ವಪಶ್ಚಿಮದ ನಡುವಿನ ಭೂಮಿಯನ್ನು ಹರಿಹರನು ಗೆದ್ದಿದ್ದನೆಂದು ಹೇಳಬಹುದಾಗಿದೆ. ಶಾಸನವು ತಿಳಿಸಿರುವಂತೆ. ಈ ಸಂದರ್ಭವೇ ಒಂದು 'ಜಯೋತ್ಸವ'. ಸಂಗಮ ಪುತ್ರರು ರಾಜ್ಯದ ಆಡಳಿತವನ್ನು ವಹಿಸಿಕೊಂಡ ಪರಿಸ್ಥಿತಿಯಲ್ಲಿ ಪಟ್ಟಾಭಿಷೇಕದಂತಹ ವೈಭವದ ಉತ್ಸವವು ಅಪ್ರಸ್ತುತವಾದ್ದರಿಂದ, ಇವರು ಯತಿಗಳ ಸನ್ನಿಧಿಯಲ್ಲಿ ಪಟ್ಟಾಭಿಷೇಕವನ್ನು ಸಾಂಕೇತಿಕ ವಾಗಿ ನೆರವೇರಿಸಿಕೊಂಡರು ಎನ್ನಬಹುದು.

ಕ್ರಿ.ಶ. 1346ರದೇ ಆದರೂ ಶೃಂಗೇರಿ ಭೇಟಿಯ ನಂತರದ ಕಾಲಕ್ಕೆ ಸೇರುವ ಕೆಲವು ಶಾಸನಗಳನ್ನಿಲ್ಲಿ ಗಮನಿಸಬಹುದು. ಮಾಲೂರು ತಾಲ್ಲೂಕಿನ ಹಳೇಪಾಳ್ಯದ ತಮಿಳು ಶಾಸನದಲ್ಲಿ[36] 'ಇದು ರಾಜಮುದ್ರೆಯೊದಿಗೆ ನೀಡಿದ ಆಜ್ಞೆ' (ಅನುವಾದ) ಎಂದಿದ್ದು, ಇದು ಕ್ರಿ.ಶ. 1346 ಏಪ್ರಿಲ್ 26ರ ಕಾಲಕ್ಕೆ, ಅಂದರೆ, ಅವರ ಶೃಂಗೇರಿ ಭೇಟಿಯ ನಂತರದ ಕಾಲಕ್ಕೆ ಸೇರುತ್ತದೆ. ಇದರಲ್ಲಿ ಹರಿಹರ, ಮುತ್ತಪ (-ಮುದ್ದಪ) ಇಬ್ಬರ ಹೆಸರೂ ಇವೆ. ಇದೇ ಮಾಲೂರು ತಾಲ್ಲೂಕಿನ ತೃಣಸಿಯ ತಮಿಳು ಶಾಸನವು[37] ಕ್ರಿ.ಶ. 1346 ಆಗಸ್ಟ್ 18ರದ್ದಾಗಿದ್ದು, 'ಮಹಾಮಂಡಳೇಶ್ವರ ಹರಿಯಪ್ಪ ಒಡೆಯರ್' ನನ್ನು ಬಿರುದುಗಳೊಂದಿಗೆ ದಾಖಲಿಸಿದ್ದರೆ, ಕ್ರಿ.ಶ. 1346 ಅಕ್ಟೋಬರ್ 8ರ ಬೆಂಗಳೂರು ತಾಲ್ಲೂಕಿನ ಸಾದರ ಮಂಗಲದ ಶಾಸನವು [38] ಇದರೊಂದಿಗೆ, ಹರಿಹರ ಮತ್ತು ಬುಕ್ಕ ಇಬ್ಬರೂ 'ಪ್ರಿತ್ವೀ ರಾಜ್ಯ'ವಾಳುತ್ತಿದ್ದರೆಂದು ಹೇಳಿದೆ (ಅನುವಾದ) ಕ್ರಿ.ಶ. 1346 ಅಕ್ಟೋಬರ್ 30ರ ಕೊಪ್ಪಳದ ಶಾಸನವು[39] 'ಶ್ರೀವೀರಹರಿಹರ ಮಹಾರಾಜ' ಎಂದು ಹೇಳಿರುವುದು ಮುಖ್ಯಾಂಶವಾಗಿದೆ. ತೀರ್ಥಹಳ್ಳಿ ತಾಲ್ಲೂಕಿನ ಚಟ್ನ ಕೊಡಗಿಯ ಶಾಸನವು ಹರಿಹರವನ್ನು 'ಮಹಾಮಂಡಳೇಶ್ವರ ಪೂರ್ವ ಪಶ್ಚಿಮ ದಕ್ಷಿಣ ಸಮುದ್ರಾಧಿಪತಿ' ಎಂದಿದೆ. ಈ ಶಾಸನವು ಹೇಳುವ 'ಶ್ರೀವೀರ ಹರಿಯಪ್ಪವೊಡೆಯರ ವಿಜಯ ರಾಜ್ಯೋದಯದಂದು' ಎಂಬ ಮಾತು ಇಲ್ಲಿ ಅರ್ಥಪೂರ್ಣವೆನ್ನಿಸುತ್ತದೆ. ಈ ಸಂದರ್ಭದಲ್ಲಿ ಕಿಕ್ಕಾಯಿ ತಾಯಿಯು ನೀಡಿದ ದಾನವನ್ನು ಉಲ್ಲೇಖಿಸುವ ಈ ಶಾಸನದ ಕಾಲ ಕ್ರಿ.ಶ. 1346 ನವೆಂಬರ್ 15 ಬುಧವಾರವಾಗಿದ್ದು, ಈ ಹೊತ್ತಿಗೆ ಅವರು ಪೂರ್ಣ ಅಧಿಕಾರ ಸೂತ್ರವನ್ನು ಹಿಡಿದಿದ್ದರೆನ್ನಬಹುದು. ದೊಡ್ಡಬಳ್ಳಾಪುರ ತಾಲ್ಲೂಕಿನ ಮೈಲಪ್ಪನ ಹಳ್ಳಿಯ ಶಾಸನವು [41] 'ಹರಿಯಪ್ಪವೊಡೆಯರು ಪ್ರಿತುವೀರಾಜ್ಯಂ ಮಾಡುತ್ತಿರಲಿ (ಲು)' ಎಂದು ಬಿರುದುಗಳೊಂದಿಗೆ ಉಲ್ಲೇಖಿಸಿದೆ. ಇದರಲ್ಲಿ ಕಾಲವನ್ನು 'ಶಕ... ೧೩೬೮ನೆಯ ವ್ಯಯ ಸಂವತ್ಸರ...' ಮುಂತಾಗಿ ಹೇಳಿದೆ. ಇದು ಕ್ರಿ.ಶ. 1300 (?) / 1406 ಎಂದು ರೈಸ್ ಅವರು ಹೇಳಿದ್ದಾರೆ. ಯಾವುದಕ್ಕೂ ವ್ಯಯ ಸಂವತ್ಸರವು

ಹೊಂದುವುದಿಲ್ಲ. ವ್ಯಯ ಸಂವತ್ಸರವು ಕ್ರಿ.ಶ. 1346 ಮತ್ತು 1406ರಲ್ಲಿದೆ. ಆದ್ದರಿಂದ ಶಕವರ್ಷವನ್ನು 1368ರ ಬದಲು 1268 ಎಂದಿಟ್ಟುಕೊಂಡರೆ ಕ್ರಿ.ಶ. 1346ಕ್ಕೆ ಈ ಶಾಸನವನ್ನು ಸೇರಿಸಬಹುದು; ಹರಿಹರ (I)ನ ಉಲ್ಲೇಖಕ್ಕೂ ಈ ಕಾಲ ಸರಿಹೊಂದುತ್ತದೆ. ಶ್ರೀನಿವಾಸ ರಿತ್ತಿಯವರೂ ಇದರ ಕಾಲವನ್ನು ಕ್ರಿ.ಶ. 1346, ಡಿಸೆಂಬರ್ 24 ಎಂದು ಸರಿಯಾಗಿ ನಿರ್ಧರಿಸಿದ್ದಾರೆ. ಕೋಲಾರ ತಾಲ್ಲೂಕಿನ ನುಕ್ಕನಹಳ್ಳಿಯ ಶಾಸನದಲ್ಲೂ[42] ವ್ಯಯ ಸಂವತ್ಸರವನ್ನೂ ಶಕ 1228ನ್ನೂ ಹೇಳಿದ್ದು, 'ಶ್ರೀಮನ್ಮಹಾಮಂಡ.... ರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರಬುಕ್ಕರಾಯರು ಪ್ರಿತ್ವೀರಾಜ್ಯಂಗೆಯಿವಲ್ಲಿ ಅವರ ಕುಮಾರ ಪ್ರತಾಪ ಹರಿಹರರಾಯರ ನಿರೂಪದಿಂ' ಎಂದೂ ಹೇಳಿದೆ. ಮೊದಲಿಗೆ, ಶಕ 1228 ಅಂದರೆ ಕ್ರಿ.ಶ. 1306ರಲ್ಲಿ ಸಂಗಮರ ಉಲ್ಲೇಖ ದೊರೆಯುವುದಿಲ್ಲ. ವ್ಯಯ ಸಂವತ್ಸರವು ಕ್ರಿ.ಶ. 1346ರಲ್ಲಿದ್ದು, ರೈಸ್ ಅವರು ಇದರ ಕಾಲವನ್ನು ಕ್ರಿ.ಶ. 1346ಕ್ಕೆ ನಿಗದಿಪಡಿಸಿದ್ದಾರೆ; ಆದರೆ ಉಲ್ಲೇಖಿತ ರಾಜ ಮತ್ತು ರಾಜಕುಮಾರನ ದೃಷ್ಟಿಯಿಂದ ಇದು ಹೊಂದುವುದಿಲ್ಲ. ಬುಕ್ಕರಾಯನು ಕ್ರಿ.ಶ. 1377ರವರೆಗೂ ರಾಜ್ಯವಾಳುತ್ತಿದ್ದನಲ್ಲದೆ, ಅವನ ಮಗ ಹರಿಹರನ ಉಲ್ಲೇಖವು ಕ್ರಿ.ಶ. 1361ರಲ್ಲೇ ದೊರೆಯುತ್ತದೆ.[43] ಹೀಗಾಗಿ ಇದರ ಕಾಲವನ್ನು ಕ್ರಿ.ಶ. 1361 - 77ರ ನಡುವೆ ಗುರುತಿಸಬೇಕಾಗುತ್ತದೆ. ಅಂದರೆ, ಶಾಸನೋಕ್ತ ಶಕವರ್ಷವನ್ನು 1228ರ ಬದಲು 1288 ಎಂದಿಟ್ಟುಕೊಂಡರೆ, ಇದರ ಕಾಲವನ್ನು ಕ್ರಿ.ಶ 1366 ಎಂದು ನಿಗದಿಪಡಿಸಬಹುದು. ಆದರೂ ಸಂವತ್ಸರದೊಂದಿಗೆ ಹೊಂದುವುದಿಲ್ಲವಾದ್ದರಿಂದ ಹೀಗೇ ಎಂದು ತೀರ್ಮಾನಿಸಲಾಗುವುದಿಲ್ಲ.

ಈ ಎಲ್ಲ ಶಾಸನಗಳನ್ನೂ ಒಟ್ಟಾರೆಯಾಗಿ ಗಮನಿಸಿದರೆ, ಕ್ರಿ.ಶ. 1336 ಅಥವಾ ಅದಕ್ಕೂ ಮುಂಚಿನ ಯಾವ ಶಾಸನಗಳೂ ಸರಿಯಾದ ತೇದಿಯನ್ನು ಉಲ್ಲೇಖಿಸುತ್ತಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಕೆಲವು ಕೂಟ - ತಾಮ್ರ ಪಟಗಳು ವಿವರಗಳು, ರಾಜವಂಶಾ ವಳಿಗಳು ಶಿಲಾಶಾನಗಳ ವಿವರಗಳೊಂದಿಗೆ ತಾಳೆಯಾಗುವುದಿಲ್ಲ. ಅಂತಹ ಶಾಸನಗಳು ಕಾಲನಿರ್ಣಯಕ್ಕೆ ಪ್ರಮುಖ ಆಧಾರವಾಗಲಾರವು. ಈ ಹಿನ್ನೆಲೆಯಲ್ಲಿ ಕೆಲವು ಶಾಸನಗಳನ್ನು ಪ್ರಾಚೀನವೆಂದು ಇಲ್ಲಿ ಪರಿಗಣಿಸಿಲ್ಲ. ಅಂತೆಯೇ, ಕ್ರಿ.ಶ. 1339-40ಕ್ಕೆ ಮೊದಲು ಸಂಗಮ ಪುತ್ರರ ಉಲ್ಲೇಖಗಳು ಅಲ್ಲೊಂದು ಇಲ್ಲೊಂದು ದೊರೆಯುತ್ತಿದ್ದರೂ ಪೂರ್ಣ ತೇದಿ ವಿವರಗಳನ್ನು ಒಳಗೊಂಡ ಶಾಸನಗಳಿಲ್ಲ. ಇವು ಆರಂಭಕಾಲದ ಶಾಸನಗಳಾದ್ದರಿಂದ ಸಂವತ್ಸರದ ಆಧಾರದಿಂದ ನಿಖರವಾಗಿ ಹೇಳಲಾಗುವುದಿಲ್ಲ. ಇಲ್ಲಿ, ಕ್ರಿ.ಶ. 1339ಕ್ಕೂ ಮುಂಚಿನ ಶಾಸನಗಳೆಂದರೆ, ಮೇಲೆ ಚರ್ಚಿಸಿರುವಂತೆ, ಸು. ಹದಿಮೂರು ವರ್ಷಗಳ ಕಾಲದ ಅಂತರವುಳ್ಳ (ಅಂದರೆ, 1313 ಕ್ರಿ.ಶ. 1326-27, ಕ್ರಿ.ಶ. 1336-39) ಒಂದೊಂದು ಶಾಸನಗಳು. ಒಂದು ರಾಜವಂಶವು ಬೆಳಕಿಗೆ ಬಂದ ನಂತರ ಸಾಮಾನ್ಯವಾಗಿ ಅವರ ಶಾಸನಗಳು ನಿರಂತರವಾಗಿ ದೊರೆಯುತ್ತವೆ. ಈ ಅವಧಿಯಲ್ಲಿ, ಕ್ರಿ.ಶ. 1339ರ ನಂತರ ವರ್ಷಾನುವರ್ಷ ಶಾಸನಗಳು ದೊರೆಯುತ್ತಿವೆ.

ಈ ದೃಷ್ಟಿಯಿಂದ ನೋಡಿದರೆ, ಸಾಗರ ತಾಲ್ಲೂಕಿನ ಕುಗ್ವೆಯ ಕ್ರಿ.ಶ. 1339ರ ಶಾಸನವು ಶಿಲಾಶಾಸನವಾಗಿರುವುದಲ್ಲದೆ, ಅದರ ತೇದಿಯನ್ನು ದೃಢಪಡಿಸುವಂತೆ ಇತರ ಶಾಸನಗಳೂ ಇವೆ. ಈ ನಂತರ ನಮಗೆ ಸಂಗಮರ ಶಾಸನಗಳೂ ದೊರೆಯುತ್ತಲೇ ಇವೆ. ಈ ಕಾರಣವಾಗಿ, ಬೇರೆ ಶಾಸನಗಳು ದೊರೆವವರೆಗೂ ಈ ಕುಗ್ವೆಯ ಶಾಸನವೇ ಸಂಗಮ ಅರಸರ ನಂಬಲರ್ಹ ಪ್ರಾಚೀನ ಶಾಸನ ಎಂದು ತೀರ್ಮಾನಿಸಬಹುದಾಗಿದೆ.

ಕ್ರಿ.ಶ. 1336ನ್ನು ಸೂಚಿಸುವ ಕೆಲವು ಅನಧಿಕೃತ ಮಾಹಿತಿಗಳ / ಶಾಸನಗಳ ಆಧಾರದಿಂದ, ಕ್ರಿ.ಶ. 1336ರಲ್ಲೇ ಸಂಗಮರ ರಾಜ್ಯ ಸ್ಥಾಪನೆಯಾಯಿತೆಂದು ಅಭಿಪ್ರಾಯ ಬಂದಿರುವಂತೆ ತೋರುತ್ತದೆ. ಕ್ರಿ.ಶ. 1336ರ ಕಾಲದ ತಾಮ್ರ ಶಾಸನಗಳು ಶಕ 1258 ಧಾತು ಸಂವತ್ಸರದ ವೈಶಾಕ ಶುಕ್ಲ ಸಪ್ತಮಿ ಆದಿತ್ಯವಾರ, ಅಂದರೆ, ಕ್ರಿ.ಶ. 1336 ಏಪ್ರಿಲ್ 18 ರಂದು ವಿಜಯನಗರವು ಸ್ಥಾಪನೆಯಾಯಿತು ಎಂದೇ ತಿಳಿಸಿವೆ. ಆದರೆ, 'ಹರಿಹರನ ಪ್ರಿತ್ವೀರಾಜ್ಯ'ವನ್ನು ಉಲ್ಲೇಖಿಸುವ ಸಂಗಮರ ಪ್ರಾಚೀನ ಶಾಸನ ದೊರೆತಿರುವುದೇ ಕ್ರಿ.ಶ. 1339ರಲ್ಲಿ. ಆದ್ದರಿಂದ, ಕ್ರಿ.ಶ. 1336 ರಿಂದಲೇ ಸಂಗಪುತ್ರರು ಈ ನಾಡಿನ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸಿದ್ದರು ಎಂದು ಮಾತ್ರ ಹೇಳಬಹುದಾಗಿದೆ. ಹೊಯ್ಸಳ ದೊರೆ ನಾಲ್ಕನೇ ಬಲ್ಲಾಳನು ಗತಿಸಿದ ನಂತರವಷ್ಟೇ ಅವರು ತಮ್ಮನ್ನು 'ರಾಜ'ರೆಂದು ಗುರುತಿಸಿಕೊಂಡಿದ್ದು. ಆದ್ದರಿಂದ ಮೂರನೇ ಬಲ್ಲಾಳನೇ ಇನ್ನೂ ಅಧಿಕಾರದಲ್ಲಿದ್ದ ಕ್ರಿ.ಶ. 1336ರಲ್ಲಿ ವಿಜಯನಗರ ಸ್ಥಾಪನೆಯೂ ಆಗಲಿಲ್ಲ; ಸಂಗಮರ ಪಟ್ಟಾಭಿಷೇಕವೂ ಆಗಲಿಲ್ಲ. ಕ್ರಿ.ಶ. 1346ರ ಶೃಂಗೇರಿ ಶಾಸನವೇ ಇವರ ರಾಜ್ಯಸ್ಥಾಪನೆಯ ಮೊದಲ ದಾಖಲೆ. ಇದೇ ಆ ಶಾಸನವು ಹೇಳವ 'ಜಯೋತ್ಸವ'. ಇದೇ ವರ್ಷ ದೊರೆಯುವ 5-6 ಶಾಸನಗಳು ಈ ರಾಜ್ಯೋದಯವನ್ನು ವಿವಿಧ ರೀತಿಯಲ್ಲಿ ದಾಖಲಿಸಿ, ದೃಢೀಕರಿಸಿವೆ. ಕ್ರಿ.ಶ. 1346ರಲ್ಲಿ ಶೃಂಗೇರಿಗೆ ದಾನ ಕೊಟ್ಟಿರುವುದರಿಂದ, ಕ್ರಿ.ಶ. 1345ರ ಕೊನೆಗೆ, ಅಂದರೆ ವಿಜಯ ದಶಮಿಯ ಸುಮಾರಿಗೆ ಹರಿಹರನು ರಾಜ್ಯ ಸೂತ್ರ ವಹಿಸಿಕೊಂಡಿರಬೇಕೆಂದೂ, ಈ ಕಾರಣವಾಗೇ ವಿಜಯದಶಮಿಯು ವಿಜಯನಗರದರಸರ ನಾಡ ಹಬ್ಬವಾಗಿತ್ತೆಂದೂ ಒಂದೆಡೇ ಹೇಳಲಾಗಿದೆ.[44] ಆದರೆ, ಇಂತಹ ಪ್ರಮುಖ ವಿಷಯಗಳಲ್ಲಿ ಘಟನೆ ಮತ್ತು ದಾನದ ನಡುವೆ ಇಷ್ಟೊಂದು ಅಂತರ ಇರಲಾರದು. ಆದ್ದರಿಂದ, ಕೆಲವು ವಿದ್ವಾಂಸರು ಗುರುತಿಸಿರುವಂತೆ, ಕ್ರಿ.ಶ. 1346 ಮಾರ್ಚ್ 9 ಗುರುವಾರವನ್ನು ಸಂಗಮ ಅರಸರ ರಾಜ್ಯ ಸ್ಥಾಪನೆಯ ಕಾಲ ಎಂದು ದೃಢೀಕರಿಸಲಾಗಿದೆಯಲ್ಲದೆ, ಕುಗ್ವೆಯ ಕ್ರಿ.ಶ. 1339ರ ಶಾಸನವನ್ನು ಸಂಗಮ ಅರಸರ ಪ್ರಾಚೀನ ಶಾಸನ ಎಂದು ಇಲ್ಲಿ ಗುರುತಿಸಲಾಗಿದೆ.

ಸಂಗಮ ಅರಸರ ಶಾಸನಗಳನ್ನು ಕುರಿತಂತೆ ಈ ಸುದೀರ್ಘ ವಿವರಣೆ ನೀಡಲು ಮುಖ್ಯ ಕಾರಣಗಳೆಂದರೆ, ಅವರ ಆರಂಭಕಾಲದ / ಆರಂಭಕಾಲದ್ದೆಂದು ಗುರುತಿಸಲ್ಪಟ್ಟಿರುವ ಶಾಸನಗಳನ್ನು ವಿಶ್ಲೇಷಿಸುವುದು ; ಆ ಮೂಲಕ ಸರಿಯಾದ ತೇದಿ ನಿರ್ಣಯ

ವನ್ನು ದೃಢೀಕರಿಸುವುದು ಮತ್ತು ತಪ್ಪಾಗಿದ್ದರೆ, ಸರಿಯಾದ ತೇದಿಯನ್ನು ನಿರ್ಧರಿಸಲು ಯತ್ನಿಸುವುದು. ಇನ್ನೊಂದು ಕಾರಣವೆಂದರೆ, ಸಂಗಮರ ಕಾಲಾನುಕ್ರಮ ಬೆಳವಣಿಗೆಯನ್ನು ಗುರುತಿಸುವುದು; ಆ ಮೂಲಕ ಅವರ ರಾಜ್ಯ ಸ್ಥಾಪನೆಯ ಕಾಲವನ್ನು ನಿರ್ಣಯಿಸುವುದು.

ಅಡಿ ಟಿಪ್ಪಣಿಗಳು

1. ಎಕ x ಕೋಲಾರ 205. (ವಾನರಾಸಿ) - ಕ್ರಿ.ಶ. 1373*
2. ವಸುಂಧರಾ ಫಿಲಿಯೋಜಾ - ವಿಜಯನಗರ ಸಾಮ್ರಾಜ್ಯ ಸ್ಥಾಪನೆ, ಪು,. 17
3. ಎಕ. iv (ಪ) ಚಾಮರಾಜನಗರ. 107 (ಗಣಗನೂರು) - ಕ್ರಿ.ಶ. 1387
4. ವಸುಂಧರಾ ಫಿಲಿಯೋಜಾ - ಪೂರ್ವೋಕ್ತ ಪು. 18
5. ಎಕ iv (ಪ) ಚಾಮರಾಜನಗರ. 227 (ಮಲದೇವನಹಳ್ಳಿ)- ಕ್ರಿ.ಶ. 1351- 52
6. ಎಕ x - ಬಾಗೇಪಲ್ಲಿ 70 (ಬೆಸ್ತರಪಲ್ಲಿ) (ಕೈಬರಹದ ಪ್ರತಿ) ತೆಲುಗು ಮತ್ತು ಸಂಸ್ಕೃತ - ಕ್ರಿ.ಶ. 1336
7. Gopal, B.R. - Vijayanagar Inscriptions - Vol - III - KN 1226
8. ಸಿ.ಎಸ್. ಅಪರ್ಣ - ಸಂಗಮರ ದೇವಾಲಯಗಳು (ಕರ್ನಾಟಕದ ಹಿನ್ನೆಲೆಯಲ್ಲಿ) (ಅಪ್ರಕಟಿತ ನಿಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ 2004, ಪು. 71
9. ಅದೇ ಪು. 47-50
10. ಅದೇ ಪು. 52
11. Sewell, R. (ed) Historical Inscriptions of South India, - VR ii, NL. 189 (B)
12. ಪರಮಶಿವಮೂರ್ತಿ, ಡಿ.ವಿ. - ವಿಜಯನಗರ ಅಧ್ಯಯನ, ಸಂ. 10, ಪು. 16-23
13. ಡಿ.ವಿ.ಜಿ. ಅವರು ಹೇಳಿರುವ, ಹಂಪೆಯ ದೇವಾಲಯದಲ್ಲಿರುವ ಒಂದು ಶಾಸನದ ಬಗ್ಗೆ ಗಡಿಯಾರಂ ರಾಮಕೃಷ್ಣಶರ್ಮ ಅವರು ಉಲ್ಲೇಖಿಸಿದ್ದಾರೆ. (ವಿದ್ಯಾರಣ್ಯ: ಒಂದು ಚಾರಿತ್ರಿಕ ಅಧ್ಯಯನ -ಪು. 46) ನನ್ನ ಗಮನಕ್ಕೆ ಬಂದಂತೆ, ಈ ಅವಧಿಯ ಯಾವ ಶಾಸನವೂ ಹಂಪೆಯಲ್ಲಿ ದೊರೆತಿಲ್ಲ.
14. ಎಕ x - ಮುಳಬಾಗಲು. 34 (ಕಾವುತ್ತನಹಳ್ಳಿ) (ತಮಿಳು)- ಕ್ರಿ.ಶ. 1396 (ಪಾಠ - ವಸುಂಧರಾ ಫಿಲಿಯೋಜಾ)
15. ಎಕ x (ಪ) - ಚನ್ನರಾಯಪಟ್ಟಣ 29 (ಆನೇಕೆರೆ) - ಕ್ರಿ.ಶ. 1399
16. ಎಂ.ಎ.ಆರ್. 1923 - (ಸಾಗರ) 78 - ಕುಗ್ವೆ - ಕ್ರಿ.ಶ. 1339
17. ಈ ತಮಿಳು ಶಾಸನದ ಪಾಠವನ್ನು ವಸುಂಧಾರ ಫಿಲಿಯೋಜಾ ಅವರ ಕೃತಿಯಿಂದ (ಪೂರ್ವೋಕ್ತ) ಆರಿಸಿಕೊಳ್ಳಲಾಗಿದೆ (ಪು. 20-21)

18. ಕವಿಶಾಸಂ V (ಭಾಗ 1) - (ಕರ್ನೂಲು) - 355 (ಕೋಡುಮೂರು) - ಕ್ರಿ.ಶ. 1340
19. ಎಕ IX - ಬೆಂಗಳೂರು 47 (ದೊಡ್ಡಕನ್ನಲ್ಲೆ) (ತಮಿಳು) - ಕ್ರಿ.ಶ. 1340
20. ಇಂ. ಆಂ X (1881) (ಬೀಳಗಿ) - 87 (ಪು. 63) - ತಟ್ಟು ಕೋಟೆ - ಕ್ರಿ.ಶ. 1339 - 40
21. ಎಕ IX - ನೆಲಮಂಗಲ. 19 (ಬಾಣಸವಾಡಿ) - ಕ್ರಿ.ಶ. 1341
22. ಮಂಜುನಾಥ, ಎಂ.ಜಿ. - ವಿಜಯನಗರ ಅಧ್ಯಯನ ಸಂ. 10 - ಪು. 5-15
23. ಎಕ VII (ಪ) ಮಂಡ್ಯ, 19 (ಬೀಚೇನಹಳ್ಳಿ)- ಕ್ರಿ.ಶ. 1341
24. ಕವಿಶಾಸನಂ II - ಗಂಗಾವತಿ 21 (ಆನೆಗೊಂದಿ) ಕ್ರಿ.ಶ. 1342 (ಸರಿಯಾದ ತೇದಿ - ಕ್ರಿ.ಶ. 1402) *
25. ಎಕ X (ಪ) - ಅರಸೀಕೆರೆ 198. (ಗಂಡಸಿ) - ಕ್ರಿ.ಶ. 1403
26. ಎಕ XVII - ಮಾಲೂರು 199 (ತೇಕಲ್ಲು) (ತಮಿಳು) - ಕ್ರಿ.ಶ. 1343
27. ಎಕ x ಮುಳಬಾಗಲು. 158 (ಮುಡಿಯನೂರು) ಮತ್ತು 46 (ಕೆಂಕೆರೆ) - ಕ್ರಿ.ಶ. 1344 ಮತ್ತು 1370 (?) (ತಾಮ್ರಪಟ) (ತೆಲುಗು ಮತ್ತು ಸಂಸ್ಕೃತ)

6ಎ. ಈ ವಿಷಯಗಳ ಬಗ್ಗೆ ವಿಚಾರಪೂರ್ಣ ವಿಶ್ಲೇಷಣೆಯನ್ನು ಪಿ.ಬಿ. ದೇಸಾಯಿ ಮುಂತಾದವರು 'History of Karnataka' ಕೃತಿಯಲ್ಲಿ ನೀಡಿದ್ದಾರೆ. (ಪು. 339-40ಇ)

29. ಎಕ IV (ಪ) ಪಿರಿಯಾಪಟ್ಟಣ 13 (ಚಪ್ಪರದಹಳ್ಳಿ) -ಕ್ರಿ.ಶ. 1344
30. ಎಕ X - ಚಿಂತಾಮಣಿ 89 (ಕೈವಾರ) (ತಮಿಳು) - ಕ್ರಿ.ಶ. 1344
31. ಎಕ IV (ಪ) - ಪಿರಿಯಾಪಟ್ಟಣ. 122 (ದೊಡ್ಡಬೆಲಹಾಳು) - ಕ್ರಿ.ಶ. 1344
32. ಎಕ XI - ಚಿತ್ರದುರ್ಗ 67 (ಕಲುಕುಂಟೆ)- ಕ್ರಿ.ಶ. 1345
33. ಎಕ IV (ಪ) - ಚಾಮರಾಜನಗರ. 292 (ಹರದನಹಳ್ಳಿ) (ತಾಮ್ರಪಟ)- ಕ್ರಿ.ಶ. 1345
34. ಸೌ. ಇಂ. ಇನ್ VII - (ಮಂಗಳೂರು). 179 (ಅತ್ತಾವರ) ಕ್ರಿ.ಶ. 1345
35. ಎಕ XI (ಪ) - ಶೃಂಗೇರಿ 1 (ಶೃಂಗೇರಿ) -ಕ್ರಿ.ಶ. 1346
36. ಎಕ x- ಮಾಲೂರು 39 (ಹಳೇಪಾಳ್ಯ) - (ತಮಿಳು)- ಕ್ರಿ.ಶ. 1346
37. ಅದೇ 61 (ತೃಣಸಿ) (ತಮಿಳು)- ಕ್ರಿ.ಶ. 1346
38. ಎಕ IX ಬೆಂಗಳೂರು 59 (ಸಾದರಮಂಗಲ) (ತಮಿಳು) - ಕ್ರಿ.ಶ. 1346
39. ಕವಿಶಾಸಂ (II) - ಕೊಪ್ಪಳ 31 (ಕೊಪ್ಪಳ) -ಕ್ರಿ.ಶ. 1346
40. ಎಕ VIII - ತೀರ್ಥಹಳ್ಳಿ. 154 (ಚಟ್ನಕೊಡಗಿ)- ಕ್ರಿ.ಶ. 1346
41. ಎಕ IX - ದೊಡ್ಡಬಳ್ಳಾಪುರ 66 (ಮೈಲಪ್ಪನಹಳ್ಳಿ) (ಕನ್ನಡ ಮತ್ತು ತಮಿಳು) - ಕ್ರಿ.ಶ. 1346

42. ಎಕ X ಕೋಲಾರ 200 ಮತ್ತು 201 (ನುಕ್ಕನಹಳ್ಳಿ) - ಕ್ರಿ.ಶ. 1346 (ಸರಿಯಾದ ತೇದಿ - 1366?)

43. ಎಕ IX - ಬೆಂಗಳೂರು 101 (ಕೋನಪ್ಪನ ಅಗ್ರಹಾರ) (ತಮಿಳು) ಕ್ರಿ.ಶ. 1361

* ಈ ವಾನರಾಸಿ ಶಾಸನ ಮತ್ತು ಆನೆಗೊಂದಿಯ ಶಾಸನದ (ಅಡಿ ಟಿಪ್ಪಣಿ - 24) ಕಾಲದ ಬಗ್ಗೆ ಈ ಮೋದಲೇ, ಅಂದರೆ ಮೇ 2004ರಲ್ಲಿ ಸಲ್ಲಿಸಲ್ಪಟ್ಟ ನನ್ನ ನಿಬಂಧ ದಲ್ಲೇ ಚರ್ಚಿಸಲಾಗಿದೆ.

*ನನ್ನ ಈ ಲೇಖನಕ್ಕೆ ತಮ್ಮ ಅಮೂಲ್ಯ ಸಲಹೆಗಳನ್ನು ನೀಡಿದ ಡಾ. ಕೆ.ಆರ್. ಗಣೇಶ್ ಅವರಿಗೂ, ಗೆಳತಿ ಡಾ. ವಸಂತಲಕ್ಷ್ಮಿಯವರಿಗೂ ಧನ್ಯವಾದಗಳು.

ಗ್ರಂಥ ಋಣ

- ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟಗಳು
- ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟಗಳು
- ವಸುಂಧರಾ ಫಿಲಿಯೋಜಾ - ವಿಜಯನಗರ ಸಾಮ್ರಾಜ್ಯ ಸ್ಥಾಪನೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು - 1980
- ಗಡಿಯಾರಂ ರಾಮಕೃಷ್ಣಶರ್ಮ (ಅನು, ರಾಮಚಂದ್ರರಾವ್ ಗುಮಾಸ್ತೆ) - ವಿದ್ಯಾರಣ್ಯ ಒಂದು ಚಾರಿತ್ರಿಕ ಅಧ್ಯಯನ ಸ್ವ-ಪ್ರಕಟಣೆ, ಕರ್ನೂಲು 2002
- ಗೋಪಾಲ್ ಆರ್., ಚಿಕ್ಕಮಾರೇಗೌಡ ಮತ್ತು ಮಂಜುನಾಥಯ್ಯ, ಟಿ.ಎಂ. (ಸಂ) ವಿಜಯನಗರ ಅಧ್ಯಯನ : ಸಂ - 10 ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.
- ಅಪರ್ಣ ಸಿ.ಎಸ್., - ಸಂಗಮರ ದೇವಾಲಯಗಳು (ಕರ್ನಾಟಕದ ಹಿನ್ನೆಲೆಯಲ್ಲಿ) - ಅಪ್ರಕಟಿತ ನಿಬಂಧ - ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004
- Gopal, B.R. & SrinivasaRitti - Inscriptions of Vijayanagara Rulers
- Gopal, B.R. - Vijayanagara Inscriptions
- Mysore Archaeological Reports - 1963
- South Indian Inscriptions - Vol- VII
- Sewell, R - Histroical Inscriptions of South India.
- Indian Anitquary - Vol. X

೨. ಇಮ್ಮಡಿ ಹರಿಹರನ ಕ್ರಿ.ಶ. 1397ರ ಅಪ್ರಕಟಿತ ತಾಮ್ರಶಾಸನ

ಡಾ. ಡಿ.ವಿ. ಪರಮಶಿವಮೂರ್ತಿ

ಹುಬ್ಬಳ್ಳಿಯಲ್ಲಿ ನೆಲೆಸಿರುವ ಈ ದತ್ತಾತ್ರೇಯ ಶಿವರಾಮ ಪುರೋಹಿತರ ಮನೆಯಲ್ಲಿ ಪೂಜಿಸಲ್ಪಡುತ್ತಿದ್ದ ಮೂರು ತಾಮ್ರ ಶಾಸನಗಳಲ್ಲಿ ಎರಡು ತಾಮ್ರ ಶಾಸನಗಳು ಈಗಾಗಲೇ ಬೆಳಕು ಕಂಡಿವೆ. ಇವುಗಳಲ್ಲಿ ಮೊದಲನೆಯದು ಇಮ್ಮಡಿ ಬಲ್ಲಾಳನ ಜೈನ ಶಾಸನವಾಗಿದ್ದು, ಎರಡನೆಯದು ಈಗಾಗಲೇ ಸಾಕಷ್ಟು ಚರ್ಚೆಗೆ ಒಳಗಾದ ವಿದ್ಯಾರಣ್ಯರ ತಾಮ್ರಶಾಸನವಾಗಿದೆ. ಪ್ರಸ್ತುತ ಶಾಸನವು ವಿಜಯನಗರದ ಅರಸ ಇಮ್ಮಡಿ ಹರಿಹರನ ಅವಧಿಯದಾಗಿದ್ದು ಮಹತ್ವದ ಶಾಸನಗಳಲ್ಲೊಂದು ಎಂಬ ಕೀರ್ತಿಗೆ ಪಾತ್ರವಾಗುತ್ತದೆ. ಶಾಸನವು ಏಳು ತಾಮ್ರದ ಹಲಗೆಗಳಿಂದ ಕೂಡಿದ್ದು ಮೊದಲ ಮತ್ತು ಏಳನೆಯ ಪತ್ರದಲ್ಲಿ ಒಂದು ಮುಖದಲ್ಲಿಯೂ, ಮಿಕ್ಕ ಪತ್ರಗಳಲ್ಲಿ ಎರಡೂ ಮುಖಗಳಲ್ಲಿಯೂ ಬರವಣಿಗೆ ಯಿದೆ. ಪ್ರತಿ ಹಲಗೆಯೂ 9.3 ಇಂಚು ಉದ್ದ, 6 ಇಂಚು ಅಗಲವಿದ್ದು ನಂದಿನಾಗರಿ ಲಿಪಿಯಲ್ಲಿ ಬಹಳ ಸ್ಫುಟವಾಗಿ ಬರೆಯಲಾಗಿದೆ. ಪ್ರತಿ ಪತ್ರದ ಮೇಲೂ ಕನ್ನಡದಲ್ಲಿ ಸಂಖ್ಯೆಯನ್ನು ನೀಡಿದೆ. ಕೊನೆಯ ಪತ್ರದಲ್ಲಿ ಶ್ರೀ ವಿರೂಪಾಕ್ಷ ಎಂದು ಕನ್ನಡದಲ್ಲಿ ಒಪ್ಪವಿದೆ. ಒಂದುವರೆ ಇಂಚು ವೃತ್ತ ಅಳತೆಯ ವರಾಹಮುದ್ರೆಯಿರುವ ಉಂಗುರಕ್ಕೆ ಏಳು ಪತ್ರಗಳನ್ನು ಕೂಡಿಸಲಾಗಿದೆ. ಶಾಸನವು ಒಟ್ಟು 243 ಸಾಲುಗಳ ಬರಹವನ್ನು ಹೊಂದಿದೆ. ಇದುವರೆಗೂ ಇಮ್ಮಡಿ ಹರಿಹರನ ಅವಧಿಯ ಇಷ್ಟು ದೀರ್ಘವಾದ ಶಾಸನ ದೊರಕಿರಲಿಲ್ಲ.

ಶ್ರೀ ವಿದ್ಯಾಶಂಕರಾಯ ನಮಃ ಎಂದು ಪ್ರಾರಂಭವಾಗುವ ಶಾಸನವು ನಮಸ್ತುಂಗ ಶಿರಶ್ಚುಂಬಿ ಎಂಬ ಪಾರಂಪರಿಕ ಶ್ಲೋಕದಿಂದ ಮುಂದುವರಿದಿದೆ. ನಂತರ ಸಂಗಮ ವಂಶದ ಮೂಲವನ್ನು ವಿವರಿಸುತ್ತದೆ. ಯಮುವಂಶದ ಸಂಗಮೇಶ್ವರನ ಮಕ್ಕಳು ಹರಿಹರ, ಕಂಪಣ, ಬುಕ್ಕ, ಮಾರ ಮತ್ತು ಮುದ್ದರು ಎಂಬ ಐದು ಜನ ಬಹಳ ಖ್ಯಾತಿ ಪಡೆದಿದ್ದರು. ಇವರಲ್ಲಿ ಬುಕ್ಕನಿಗೆ ಜನಿಸಿದವನೇ ರತ್ನದಂತಿದ್ದ ಹರಿಹರನು ಎಂದು ಶಾಸನ ವಂಶಾ ವಳಿಯನ್ನು ವಿವರಿಸುತ್ತದೆ. ಶಾಸನವು ಹರಿಹರನನ್ನು ರಾಜರಾಜಪರಮೇಶ್ವರ, ಪೂರ್ವ, ಪಶ್ಚಿಮ ದಕ್ಷಿಣೋತ್ತರ ಚತುಮುದ್ರೈಕ ನಾಯಕ, ಹಿಂದೂರಾಯ ಸುರತ್ರಾಣ, ಶರಣಾಗತ ವಜ್ರ ಪಂಜರ, ಸಕಲ ಭುವನ ಭಯಾನಕ, ವೈರಿಶಾರ್ದೂಲ ಮರ್ಧನ, ದಾನಚತುಷಷ್ಠಿ

ಕಲಾ ವಿಲಾಸ ಮುಂತಾದ ಬಿರುದುಗಳಿಂದ ಸ್ತುತಿಸಲಾಗಿದೆ. ಇಂತಹ ಕೀರ್ತಿ ಪಡೆದ ಹರಿಹರನು ಶಾಲಿವಾಹನ ಶಕ 1319, ಈಶ್ವರ ಸಂವತ್ಸರದ, ವೈಶಾಖಮಾಸ, ಅಮಾವಾಸ್ಯೆ, ಸೂರ್ಯಗ್ರಹಣದ ದಿವಸ ಅಂದರೆ ಕ್ರಿ.ಶ. 1397, ಮೇ 26, ಶನಿವಾರ ದಂದು ಏಚಿಭಟ್ಟನ ಪುತ್ರ ಮಾಧವಾರ್ಯನಿಗೆ ಮತ್ತು ಇತರೆ ಹಲವು ಬ್ರಾಹ್ಮಣರಿಗೆ ಕೊಪ್ಪಳ ಸೀಮೆಯ ತಳಕಲ್ಲು ಗ್ರಾಮವನ್ನು 220 ವೃತ್ತಿಗಳನ್ನಾಗಿ ವಿಂಗಡಿಸಿ ದಾನ ನೀಡಿದ್ದಾನೆ. ಒಟ್ಟು 77 ಜನ ಬ್ರಾಹ್ಮಣರಿಗೆ ದಾನ ನೀಡಿರುವನು. ತಳಕಲ್ಲು ಗ್ರಾಮವನ್ನು ಹರಿಹರಪುರವೆಂದು ಹೆಸರಿಟ್ಟು ದಾನ ನೀಡುವುದಲ್ಲದೆ ಆ ಗ್ರಾಮದಲ್ಲಿದ್ದ ಮಲ್ಲಿಕಾರ್ಜುನ, ಕಲ್ಲೇಶ್ವರ, ನಾಗದತ್ತ, ಭೀಮೇಶ್ವರ, ಲಕ್ಷ್ಮೀನಾರಾಯಣ, ಗ್ರಾಮದೇವತೆ ಹನುಮಂತ ದೇವರುಗಳಿಗೆ ದೂಪ, ದೀಪ, ನೈವೇದ್ಯ, ನಂದಾದೀಪ, ಪರ್ವ, ಉತ್ಸವ ಮುಂತಾದ ಕಾರ್ಯಗಳಿಗೂ ದಾನ ನೀಡಲಾಗಿದೆ. ದಾನ ನೀಡಿರುವ ಭೂಮಿಯ ಮೇರೆಯನ್ನು ಕನ್ನಡ ಭಾಷೆಯಲ್ಲಿಯೂ ನೀಡಿದ್ದು ಅದರಲ್ಲಿ ಹಲಗೇರಿ (ಹಲ್ಗೇರಿ), ಹಂದರಹಾಳು (ಹಂದ್ರಾಳು), ಕೌರೂರು (ಕವಲೂರು), ಹಂಚಿನಹಾಳು, ಬೆಣ್ಣೆಕಲ್ಲು ಗ್ರಾಮಗಳನ್ನು ಮತ್ತು ಅಲ್ಲಲ್ಲಿ ನೆಟ್ಟಿದ್ದ ಲಿಂಗಮುದ್ರೆ ಕಲ್ಲುಗಳನ್ನು ತಿಳಿಸಿದೆ. ಇಲ್ಲಿ ಉಲ್ಲೇಖಗೊಂಡಿರುವ ಗ್ರಾಮಗಳು ಈಗಲೂ ಅಸ್ತಿತ್ವದಲ್ಲಿವೆ. ಈ ಶಾಸನವನ್ನು ರಚಿಸಿ ನಿರ್ಮಿಸಿದವನು ನಾಗಿದೇವನ ಮಗನಾದ ಮುದ್ದಣಾಚಾರ್ಯ. ಇವರಿಗೂ ಕೂಡ ಎರಡು ವೃತ್ತಿಗಳನ್ನು ದಾನವಾಗಿ ನೀಡಲಾಗಿದೆ. ಶಾಸನ ರಚನಾಕಾರರಿಗೂ ದಾನ ನೀಡಿರುವುದು ಅಪರೂಪದ ವಿಷಯವಾಗಿದೆ. ಶಾಸನದ ಕೊನೆಯಲ್ಲಿ ಶಾಪಾಶಯವಿದ್ದು ಅಂತಿಮದಲ್ಲಿ ಶ್ರೀ ವಿರೂಪಾಕ್ಷ ಎಂಬ ಅಂಕಿತವಿದೆ. ಈ ಶಾಸನದ ಮಹತ್ವವನ್ನು ಈ ಕೆಳಗಿನಂತೆ ಗುರುತಿಸಬಹುದು.

1. ಇಮ್ಮಡಿ ಹರಿಹರನ ಆಳ್ವಿಕೆಯ ಅವಧಿಯನ್ನು ವಿದ್ವಾಂಸರು ಕ್ರಿ.ಶ. 1377 ರಿಂದ 1404 ಎಂದು ಗುರುತಿಸಿರುವರು. ಪ್ರಸ್ತುತ ಶಾಸನವು ಕ್ರಿ.ಶ. 1397, ಮೇ 26 ಶನಿವಾರದ ಅವಧಿಗೆ ಸೇರುತ್ತದೆ.
2. ಇದೂವರೆಗೂ ದೊರಕಿರುವ ಇಮ್ಮಡಿ ಹರಿಹರನ ಶಾಸನಗಳಲ್ಲಿ ಪ್ರಸ್ತುತ ಶಾಸನವೇ ಬಹುಶ ದೀರ್ಘವಾದ ಶಾಸನವಾಗಿದೆ. ಒಟ್ಟು 243 ಸಾಲುಗಳ ಬರಹವಿದೆ.
3. 77 ಜನ ಬ್ರಾಹ್ಮಣರಿಗೆ ಒಟು 220 ವೃತ್ತಿಗಳನ್ನು ವಿಭಾಗಿಸಿ ನೀಡಿರುವ ಈ ಶಾಸನ ಅತ್ಯಂತ ಹೆಚ್ಚು ವೃತ್ತಿಗಳನ್ನು ದಾನ ನೀಡಿರುವ ಶಾಸನಗಳ ಸಾಲಿಗೆ ಸೇರುತ್ತದೆ.
4. ಬ್ರಾಹ್ಮಣರುಗಳಿಗೆ ದಾನ ನೀಡುವಾಗ ಆ ಗ್ರಾಮದಲ್ಲಿದ್ದ ಇತರ ಗುಡಿಗಳನ್ನು ಉಲ್ಲೇಖಿಸಿ ದಾನ ನೀಡಲಾಗಿದೆ. ಅಲ್ಲದೆ ಶಾಸನದ ಅವಧಿಯಲ್ಲಿ ತಳಕಲ್ಲು

ಗ್ರಾಮದ ಗ್ರಾಮದೇವತೆ ಹನುಮಂತನಾಗಿದ್ದನು. ಎಂಬ ವಿಷಯ ಶಾಸನದಲ್ಲಿದೆ.

5. ಈ ಅವಧಿಯಲ್ಲಿ ತಳಕಲ್ಲು ಗ್ರಾಮವು ಕಾತರಿಕೆ ಸ್ಥಳಕ್ಕೆ ಸೇರಿತ್ತೆಂದೂ, ಕೊಪ್ಪಳ ಸೀಮೆಯಲ್ಲಿತ್ತೆಂದೂ, ಈ ಗ್ರಾಮಕ್ಕೆ ಇಮ್ಮಡಿ ಹರಿಹರನು ಹರಿಪುರವೆಂಬ ಹೆಸರಿಟ್ಟನೆಂದೂ ಶಾಸನದಿಂದ ತಿಳಿದು ಬರುತ್ತದೆ.

6. ಈ ಶಾಸನದ ರಚನೆಕಾರ ನಾಗದೇವನ ಮಗನಾದ ಮುದ್ದಣಾಚಾರ್ಯ. ಈ ನಾಗದೇವನು ಕ್ರಿ.ಶ. 1336ರ ಬೆಸ್ತರಹಳ್ಳಿ ಗ್ರಾಮದ ಶಾಸನ ಮತ್ತು ಕ್ರಿ.ಶ. 1344ರ ಬುಕ್ಕನ ಅವಧಿಯ ಮುಡಿಯನೂರು ಶಾಸನವನ್ನು ನಿರ್ಮಿಸಿದ್ದಾನೆ. ಇವನ ಮಗನೇ ಪ್ರಸ್ತುತ ಶಾಸನದ ನಿರ್ಮಾಣಕಾರ. ಹೀಗಾಗಿ ಶಾಸನ ಲಿಪಿಕಾರರ ಪರಂಪರೆಯನ್ನು ಈ ಶಾಸನ ತಿಳಿಸಿದೆ.

7. ಪ್ರಸ್ತುತ ಶಾಸನವನ್ನು ಹೊಂದಿರುವ ಕುಟುಂಬವು ಪಾರಂಪರಿಕವಾಗಿ ವಿಜಯನಗರದ ಅರಸರಿಂದ ದಾನವನ್ನು ಸ್ವೀಕರಿಸುತ್ತಿದ್ದರೆಂದು ಹೇಳಬಹುದು. ಏಕೆಂದರೆ ಇದೇ ಮನೆತನದಲ್ಲಿಯೇ ಕ್ರಿ.ಶ. 1336ರ ಅವಧಿಯ ವಿದ್ಯಾರಣ್ಯರ ತಾಮ್ರಶಾಸನ ದೊರಕಿರುವುದು. ಕ್ರಿ.ಶ. 1397ರ ಅವಧಿಯ ಶಾಸನವೂ ಇವರ ಮನೆತದಲ್ಲಿರುವುದರಿಂದ ವಿಜಯನಗರದ ಆರಂಭದ ಅರಸರ ಕಾಲದಿಂದಲೂ ಈ ಮನೆತನವು ದಾನವನ್ನು ಪಡೆದಿತ್ತೆಂದು ಹೇಳಬಹುದು.

8. ಶಾಸನ ಪಾಠವು ಬಹಳ ಕಡೆ ವ್ಯಾಕರಣ ದೋಷ ಮತ್ತು ಅಕ್ಷರ ದೋಷದಿಂದ ಕೂಡಿದೆ. ಆದರೆ ಸಾಮಾನ್ಯವಾಗಿ ತಾಮ್ರಶಾಸನಗಳಲ್ಲಿ ಕಂಡು ಬರುವ ಸುಧೀರ್ಘವಾದ ವಂಶಾವಳಿಯಾಗಲಿ, ಅರಸನ ಸ್ತುತಿಯಾಗಲಿ ಇಲ್ಲಿ ಕಂಡು ಬರುವುದಿಲ್ಲ. ಕೇವಲ 39 ಸಾಲುಗಳಲ್ಲಿ ಪಾರಂಪರಿಕ ವರ್ಣನೆಗಳನ್ನು ಮಾಡಿ 40ನೇ ಸಾಲಿನಿಂದ 227ನೇ ಸಾಲಿನವರೆಗೆ ಅಂದರೆ ಸುಮಾರು 187 ಸಾಲುಗಳಷ್ಟು ದಾನ ಪಡೆದ ಬ್ರಾಹ್ಮಣರ ವಿವರಗಳಿರುವುದು ಈ ಶಾಸನದ ವಿಶೇಷವಾಗಿದೆ.

(ಶಾಸನ ಪಾಠದ ತಯಾರಿಕೆಯಲ್ಲಿ ಹಲವಾರು ರೀತಿ ನೆರವಾಗಿರುವ ನನ್ನ ಸಂಶೋಧನ ವಿದ್ಯಾರ್ಥಿನಿ ಕುಮಾರಿ ಗಿರಿಜಾ ಅವರಿಗೆ ನನ್ನ ವಿಶೇಷ ಕೃತಜ್ಞತೆಗಳು. ಅದೇ ರೀತಿ ಶಾಸನ ಪಾಠವನ್ನು ಪರಿಷ್ಕರಿಸಲು ಸಹಕರಿಸಿದ ಮಿತ್ರರಾದ ಶ್ರೀ ಸರ್ವೋತ್ತಮ ಆಚಾರ್ಯ ಅವರಿಗೂ, ಶಾಸನವನ್ನು ಅಧ್ಯಯನಕ್ಕೆ ನೀಡಿದ ಶ್ರೀ ಶಿವರಾಮ ಪುರೋಹಿತ ಕುಟುಂಬವರ್ಗಕ್ಕೂ ನನ್ನ ವಿಶೇಷ ಕೃತಜ್ಞತೆಗಳು)

ಕ್ರಿ. ಸಂ.	ಗೋತ್ರ	ಶಾಖೆ	ತಂದೆ ಹೆಸರು	ದಾನ ಪಡೆದವರು	ವೃತ್ತಿಗಳ ಸಂಖ್ಯೆ
1.	ಹರಿತ	ಋಕ್ಷಾಖೆ	ಅಯಿಚಭಟ್ಟ	ಮಾಧವಾರ್ಯ	7
2.	ವಾಗೂಲ	ಯಜು	ಭೀಮಣಾರ್ಯ	ಕೂಚಿಭಟ್ಟ	8
3.	ಗೌತಮಿ	—	ನರಹರಿ	ನಾಗಿದೇವ	2
4.	ಭಾರ್ಗವ	ಋಗ್ವೇದಿ	ಗಂಗಣ	ಸಿಂಗಣಭಟ್ಟ	5
5.	ಗೌತಮ	ಸಾಮ	ಚಂಗದೇವ	ನಾರಸಿಂಹಭಟ್ಟ	3
6.	ಶ್ರೀವತ್ಸ	ಋಗ್ವೇದಿ	ನಾಗಣಾರ್ಯ	ನರಸಿಂಹಾರ್ಯ	5
7.	ಹರೀತ	ಯಜು	ಅನಂತ	ನೃಸಿಂಹ	3
8.	ಭಾರ್ಗವ	—	ಮಲ್ಲಿಭಟ್ಟ	ಪದ್ದಿಭಟ್ಟ	1
9.	ವಾಯು	—	ಅನಂತಾರ್ಯ	ಔಭಲಾರ್ಯ	2
10.	ವಿಷ್ಣುವರ್ಧನ	ಋಗ್ವೇದ	ಮಾಯಣ	ವಿಠಲಯ್ಯ	1
11.	ಭಾರದ್ವಾಜ	ಯಜುರ್ವೇದ	ಮಲ್ಲಿಭಟ್ಟ	ಅನ್ನದಾನಿ	3
12.	ವಿಶ್ವಾಮಿತ್ರ	ಋಗ್ವೇದಿ	ದೇವರಭಟ್ಟ	ವಿರೂಪಣಾರ್ಯ	5
13.	ವಿಶ್ವಾಮಿತ್ರ	ಯಜುರ್ವೇದ	ದೇವಣಾರ್ಯ	ನಾರಾಯಣ	2
14.	ವಾಶಿಷ್ಠ	—	ಕೃಷ್ಣ	ವಿಠಲಾರ್ಯ	2
15.	ಭಾರದ್ವಾಜ	ಯಜು	ಪೆದ್ದಿಭಟ್ಟ	ಅನಂತಾರ್ಯ	2
16.	ಕೌಂಡಿನ್ಯ	ಯಜು	ಮಾಯಣಾರ್ಯ	ಅನ್ನದಾನಿ	3
17.	ಹರೀತ	ಶುಕ್ಲಯಜು	ಔಭಲಾರ್ಯ	ಶಿಂಗಣಾರ್ಯ	2
18.	ಹರೀತ	ಶುಕ್ಲಯಜು	ಚೆಂನ್ನಿಭಟ್ಟ	ಔಭಲಾರ್ಯ	1
19.	ಕೌಶಿಕ	ಸಾಮಶಾಖೆ	ಕೃಷ್ಣಭಟ್ಟ	ಅನಂತಾರ್ಯ	2
20.	ಕೌಶಿಕ	ಯಜುರ್ವೇದ	ಪುರುಷೋತ್ತಮ	ವಿಷ್ಣುಭಟ್ಟ	1
21.	ವಾಶಿಷ್ಠ	—	ಪೋಚಿಭಟ್ಟ	ಮಂಗರಸ	1
22.	ವಾಗೂಲ	ಯಾಜುಷ	ವಿರುಪಣಾರ್ಯ	ನರಸಪ್ಪ	2
23.	ವಾಶಿಷ್ಠ	ಋಗ್ವೇದ	ವಿಠಲ	ಅನ್ನದಾನಿ	1
24.	ವಿಷ್ಣುವರ್ಧ	—	ಹಂಪಣಾರ್ಯ	ತಿರುಮಲ	3
25.	ವಿಶ್ವಾಮಿತ್ರ	ಋಗ್ವೇದ	ಔಭೂರ್ಯ	ಸಿಂಗಣಾರ್ಯ	4
26.	ಭಾರದ್ವಾಜ	ಯಜುರ್ವೇದಿ	ಅರಸಪಾರ್ಯ	ಲಿಂಗಣಾರ್ಯ	2
27.	ಜಾಮದಜ್ಞೆ	ಋಗ್ವೇದಿ	ಸಿರಿಭಟ್ಟ	ವಿರುಪಣಾರ್ಯ	1
28.	ಹರೀತ	—	ಔಭಲಾರ್ಯ	ನರಸಿಂಹಾರ್ಯ	3

ಕ್ರ. ಸಂ.	ಗೋತ್ರ	ಶಾಖೆ	ತಂದೆ ಹೆಸರು	ದಾನ ಪಡೆದವರು	ವೃತ್ತಿಗಳ ಸಂಖ್ಯೆ
29.	ಶ್ರೀವತ್ಸ	ಋಗ್ವೇದಿ	ರಾಮಕೃಷ್ಣ	ವಿಷ್ಣುಭಟ್ಟ	5
30.	ಶ್ರೀವತ್ಸ	ಋಗ್ವೇದಿ	ಗೋಪಿನಾಥ	ಕೃಷ್ಣಭಟ್ಟ	1
31.	ಜಮದಗ್ನಿ	ಋಗ್ವೇದ	ಹಂಪಣಾರ್ಯ	ವೀರಪ್ಪ	4
32.	ಕೌಶಿಕ	—	ಅನಂತಾರ್ಯ	ಸಿಂಗಣಾರ್ಯ	5
33.	ಜಾಮದಗ್ನಿ	ಋಗ್ವೇದಿ	ನರಹರಿ ಭಟ್ಟ	ಅನಂತಾರ್ಯ	1
34.	ಶ್ರೀವತ್ಸ	ಋಗ್ವೇದಿ	ಔಭಲಾರ್ಯ	ನೃಶಿಂಹಾರ್ಯ	5
35.	ಜಾಮದಗ್ನಿ	ಋಗ್ವೇದಿ	ಅಪಣಾರ್ಯ	ಶಿರಿಯಣಾರ್ಯ	4
36.	ವಿಶ್ವಾಮಿತ್ರ	ಋಗ್ವೇದಿ	ಮಲ್ಲಿಭಟ್ಟ	ಲಖಿಣಾರ್ಯ	1
37.	ಜಮದಗ್ನಿ	ಋಗ್ವೇದಿ	ಚೆನ್ನಿಭಟ್ಟ	ಮಾಧವಾರ್ಯ	5
38.	ಕಾಶ್ಯಪ	ಋಗ್ವೇದಿ	ಹೇಮಣಾರ್ಯ	ಮಲ್ಲಿಭಟ್ಟ	4
39.	ಭಾರ್ಗವ	ಋಗ್ವೇದ	ತಿಪ್ಪಣ್ಣ	ಕಸವಾಭಟ್ಟ	1
40.	ಶ್ರೀವತ್ಸ	ಬಹ್ವೃಚ	ಗೋಪಿನಾಥ	ಚೆಂನಿಭಟ್ಟ	1
41.	ಕಾಶ್ಯಪ	ಋಗ್ವೇದಿ	ತ್ರಿವಿಕ್ರಮ	ವಿಠಪಾರ್ಯ	1
42.	ಜಾಮದಗ್ನಿ	ಋಗ್ವೇದಿ	ಅಪ್ಪಣಾರ್ಯ	ಕಸಭಟ್ಟ	1
43.	ಕಾಶ್ಯಪ	ಋಗ್ವೇದಿ	ಔಭಲಾರ್ಯ	ಚೆಂನ್ನಿಗಭಟ್ಟ	4
44.	ಶ್ರೀವತ್ಸ	ಋಗ್ವೇದಿ	ಪರ್ವತಾರ್ಯ	ಹಂಪಣಾರ್ಯ	1
45.	ವಾಗ್ಘೂಲೆ	ಯಜು	ವಿಠಲಾರ್ಯ	ಸೂರಿಭಟ್ಟ	4
46.	ಜಾಮದಗ್ನಿ	ಋಗ್ವೇದಿ	ನೃಸಿಂಹಾರ್ಯ	ನಾರಾಯಣ	3
47.	ವಾಶಿಷ್ಠ	ಋಗ್ವೇದಿ	ದೇವಣಾರ್ಯ	ಲಿಂಗಣಾರ್ಯ	1
48.	ಆತ್ರೇಯ	ಯಜು	ಮಾಯಣಾರ್ಯ	ಶಂಣಾರ್ಯ	3
49.	ವಶಿಷ್ಠ	ಋಗ್ವೇದಿ	ಹೇಮಣಾರ್ಯ	ವಿಷ್ಣುಭಟ್ಟ	5
50.	ಭಾರ್ಗವ	ಬಹ್ವೃಚೋ	ದೇಚಿಭಟ್ಟ	ನಾಗಂಣ	3
51.	ಭಾರದ್ವಾಜ	ಯಜು	ನೃಸಿಂಹಾರ್ಯ	ನಂಜಿನಾಥ	1
52.	ಭಾರದ್ವಾಜ	—	ವಿಶ್ವನಾಥ	ವಿಷ್ಣುಭಟ್ಟ	4
53.	ವಶಿಷ್ಠ	ಬಹ್ವೃಚೋ	ಅನಂತಾರ್ಯ	ವಾಮನಾರ್ಯ	3
54.	ಜಮದಗ್ನಿ	ಋಗ್ವೇದಿ	ಶ್ರೀಧರಾರ್ಯ	ನಾಗದೇವ	5
55.	ಕಾಶ್ಯಪ	—	ವಿರೂಪಣಾರ್ಯ	ಲಿಂಗಣಾರ್ಯ	3
56.	ಆತ್ರೇಯ	ಯಜು	ದುಗ್ಗಣಾರ್ಯ	ಶಿಂಗಣಾರ್ಯ	2

ಕ್ರ. ಸಂ.	ಗೋತ್ರ	ಶಾಖೆ	ತಂದೆ ಹೆಸರು	ದಾನ ಪಡೆದವರು	ವೃತ್ತಿಗಳ ಸಂಖ್ಯೆ
57.	ಹರೀತ	ಯಜು	ದೇವರಭಟ್ಟ	ನೃಸಿಂಹಾರ್ಯ	2
58.	ವಶಿಷ್ಠ	ಋಗ್ವೇದ	ಕೇಶವಾರ್ಯ	ರಾಮಾಭಟ್ಟ	7
59.	ಭಾರದ್ವಾಜ	ಯಜು	ಚೆಂನ್ನಿಭಟ್ಟ	ಕಾಮಾಭಟ್ಟ	1
60.	ವಿಷ್ಣುವರ್ಧನ	ಬಹ್ವೃಚ	ದೇಚಿಭಟ್ಟ	ಕೃಷ್ಣಭಟ್ಟ	1
61.	ಕಾಶ್ಯಪ	ಋಗ್ವೇದ	ವಿಶ್ವನಾಥ	ವಿಷ್ಣುಭಟ್ಟ	1
62.	ವಿಶ್ವಾಮಿತ್ರ	ಋಗ್ವೇದ	ಹೊಂನಿಭಟ್ಟ	ಹಂಪಣಾರ್ಯ	1
63.	ಕೌಶಿಕ	ಬಹ್ವೃಚ	ಕೃಷ್ಣಭಟ್ಟ	ಮಾಧವಾರ್ಯ	2
64.	ವಶಿಷ್ಠ	ಋಗ್ವೇದಿ	ಶ್ರೀಧರಾರ್ಯ	ರಾಮಾಭಟ್ಟ	1
65.	ವಶಿಷ್ಠ	ಋಗ್ವೇದಿ	ಸಿರ್ಯಣಾರ್ಯ	ತಿಪ್ಪಣಾರ್ಯ	2
66.	ಹಾರಿತ	ಯಜು	ಅನಂತಾರ್ಯ	ನೃಸಿಂಹಾರ್ಯ	2
67.	ಹಾರಿತ	—	ಮಲ್ಲಿಭಟ್ಟ	ಮಾಯಿಭಟ್ಟ	5
68.	ಜಾಮದಗ್ನಿ	ಋಗ್ವೇದಿ	ದೇವಣಾರ್ಯ	ಮಾಯಿಭಟ್ಟ	5
69.	ಹಾರಿತ	ಯಜು	ಶ್ರೀಧರಾರ್ಯ	ಮಾಧವಾರ್ಯ	1
70.	ವಿಷ್ಣುವರ್ಧನ	ಋಗ್ವೇದಿ	ಶಿಂಗಣಾತ್ಮಜ	ತಿಮ್ಮಣಾರ್ಯ	6
71.	ವಿಶ್ವಾಮಿತ್ರ	ಋಗ್ವೇದಿ	ಕಾಮಾಭಟ್ಟ	ರಾಮಭಟ್ಟ	5
72.	ವಶಿಷ್ಠ	ಋಗ್ವೇದಿ	ಬೊಮ್ಮಣಾರ್ಯ	ಸಿರುಮಣಾರ್ಯ	1
73.	ಭಾರದ್ವಾಜ	—	ಅಪಣಾರ್ಯ	ಸಿದ್ಧಪಾರ್ಯ	6
74.	ಭಾರದ್ವಾಜ	ಯಜುರ್ವೇದ	ಗೋಪಿನಾಥ	ನೃಸಿಂಹಾರ್ಯ	1
75.	ಕಾಶ್ಯಪ	ಯಜುರ್ವೇದ	ಪೆದ್ದಿಭಟ್ಟ	ಆಚಿಭಟ್ಟ	4
76.	ಜಮದಗ್ನಿ	ಋಗ್ವೇದ	ಮಾಧವಾರ್ಯ	ಗೋಪಿನಾಥ	5
77.	ವಶಿಷ್ಠ	ಋಗ್ವೇದಿ	ರಾಮಕೃಷ್ಣಾರ್ಯ	ಶ್ರೀಧರಾರ್ಯ	4

ಶಾಸನ ರಚನಾಕಾರನಾದ ನಾಗಿದೇವನ ಮಗ ಮುದ್ದಣಾಚಾರ್ಯನಿಗೂ ಎರಡು ವೃತ್ತಿಗಳನ್ನು ನೀಡಲಾಗಿದೆ. ಶಾಸನದಲ್ಲಿ ದಾನ ನೀಡಿರುವ ವೃತ್ತಿಗಳನ್ನು 320 ಎಂದು ಸೂಚಿಸಿದೆ. ಆದರೆ ನೀಡಿರುವ ಸಂಖ್ಯೆಗಳನ್ನು ಗಮನಿಸಿದರೆ ಒಟ್ಟು 220 ಆಗುತ್ತದೆ. ಮಿಕ್ಕ ನೂರು ವೃತ್ತಿಗಳು ಲೆಕ್ಕಕ್ಕೆ ಸಿಗುತ್ತಿಲ್ಲ. ಗ್ರಾಮದೊಳಗಿನ ಆರು ದೇವಾಲಯಗಳಿಗೆ ದಾನವನ್ನು ನೀಡಿದ್ದು ಅವುಗಳ ವೃತ್ತಿಗಳ ಸಂಖ್ಯೆಯನ್ನು ನೀಡಿಲ್ಲ. ಬಹುಶಃ ಆ ದೇವಾಲಯಗಳಿಗೆ ನೂರು ವೃತ್ತಿಗಳನ್ನು ನೀಡಿ ಮಿಕ್ಕ ಇನ್ನೂರಾ ಇಪ್ಪತ್ತು ವೃತ್ತಿಗಳನ್ನು ವಿವಿಧ ಬ್ರಾಹ್ಮಣರುಗಳಿಗೆ ಹಂಚಿರಬೇಕು.

ಶಾಸನ ಪಾಠ

Plate - 1

1. ಶ್ರೀವಿದ್ಯಾ ಶಂಕರಾಯನಮಃ ನಮಃಸ್ತುಂಗ ಶಿರಶ್ಚುಂಬಿ ಚಂದ್ರಚೌಮರ
2. ಚಾರವೇ ತ್ರೈಲೋಕ್ಯನಗರಾರಂಭ ಮೂಲಸ್ತಂಭಾಯ ಶಂಭವೇ । ಗ
3. ಜಾನನೋ ವಿಜಯತೇ ದಂತಿಕೋಟಿ ದಧಾತಿಯಃ । ಗ್ರಾಮಾ ಹರಿ
4. ಹರ ಪ್ರಾಪ್ತಾಲಿಖಿತಂ ಲೇಖಿನೀ ಮಿವಾಸ್ರಂ । ತ್ತತ್ರಾಸೀಕ್ತತ್ತುರ್ಕಾ
5. ಮೆ ಭ್ಯೋಧರಾಂಧಾಮಮಿವೋಧರಾತ್ರಂ ಅ ಕೂಪರಾದಿ ಪಾರದ್ವಃಸ
6. ಭೂಪಾರಾದಿ ಸೂಕರಃ । ತ್ರಿಮೂರ್ತಿ ಭಾಜ ಭಜ ಜ್ಯೆ ಭಜತೇತ್ರಿ ಸಂ
7. ಧ್ಯಾತ್ರ ಈ ಮಯಃ ಯಸ್ತಿರ ಸಾದಿರ್ವರ್ಗಃ । ಸುಕರ್ಮ ಸಾಜಾಜ
8. ಗತಾಂತ್ರಯಾಣಾಂ ಪುಷ್ಮಾತುವಃ । ಸರ್ವಸುಖಾನಿ ಪುಷ್ಪತ್ರಿಲೋ
9. ಕೀ ಭರ್ತ್ತಾಪಿತ್ರಿಪುರ ಜಯಿನಾಮೂದ್ರನಧತ್ತತಃ । ಸುಧಾಭಿಃ ಕು
10. ರ್ವಾಣಃ ಸುಪರಿ ಸದಾಪಾರಣಾದ್ವಿಧಿಹರೇರ್ವಾಮಂಚ ಜುರ್ದತ
11. ಕಮಲ ರೋಚಿತಿಂಜರುಚ್ಯುಂ ಪ್ರಮೋದಯುಷ್ಮಾಕಂ ಪ್ರಥಯತು ನಿ
12. ಣಮಂ ಹಿಮಕರಃ । ಮಧ್ಯಮಾಪಯೋರಾಸೆ ರಾವಿರಾಸೀತ್ಸ ಚೈದ್ವ
13. ನಃ । ಲಕ್ಷ್ಮೀ ಕಲ್ಪಲತೌ ಕಾಮಧೇನು ಸಹೋದರಃ । ಕಲಾವಲಸ್ತ
14. ಕುಲೆ ಪಯಾತೆರುದ ಭೂದ್ಯದಂತೆ । ತದಾದಿಯ ತ್ಕುಲೈಲೋಕೆಖ್ಯಾತ
15. ನಾಸಾಪ್ತದಾಖ್ಯಯಾ । ಯಸ್ಮಿನ್‌ಯದು ಕುಲಶ್ಲಾಘೇಸಂಜಾತಃ ಸಂಗ
16. ಮೇಶ್ವರಃ । ಅಕರೋಗುಣರತ್ನಾನಾಂತಸ್ಮಾಶ್ರೀತ್ಸಂಗಮೇಶ್ವರಃ । ಸಂಗಮೇ
17. ಪೀ ಸರಸ್ವತ್ಯಾರ ಭೂದ್ಯತ್ರಾದಿ ದುರ್ಲಭಃ । ಆಸಂನ್ನಹರಿಹರಾ ಕಂಪ
18. ರಾಯ ಬುಕ್ಕಮಹೀಪತಿಃ । ಮಾರಪೂ ಮುದ್ದಪ. ತಿ ಕುಮಾರ ಖ್ಯಸ್ಯಭೂ
19. ಪತಿಃ । ಪಂಚನಾಮಾಭ್ಯಗತೆ ಷಾಂ ಪ್ರಖ್ಯಾತ ಇತಿದುರ್ಜಟೋ ಪ್ರಚಂಡ
20. ವಿಕ್ರಮಾಮಧ್ಯೆಪಾ. ವಸ್ಯಾದಿಪಾರ್ಯವಃ । ಪಾರಿಜಾತ ಇವಾಂ ಬೋ
21. ಧರುದಭೂದ್ಬುಕ್ಕ ಭೂಪತಿಃ । ಗೌರೀಕುಮಾರ ಮಲಭ್ಯವ ಬುಕ್ಕಮ
22. ಹೀ ಪಾಲೋ ಮಹೇಸ್ವರಃ ಶ್ಲಾಘ್ಯಾಂಯಸ್ಯತ್ರಿಹತ ಸಖರ್ಗಜ
ಮುಖಸಂಭೂತಿ
23. (ಕ) ಮಲೋಜ । ತಾಪಿತಾಸಂತಾದಿರ ಜಾತ್ಯೈಸೀಜಾರ್ಥ್ಯೆಸರ್ವಸತಾಂತಪಜಾತ
24. ಹರಿಹರಂ ಸತಾನಾನ್ಮಾಹರೀಹರತ್ವಥಾಃ । ಯ (ಜ್ಞೆ) ತ (ಜ್ಞಾ) ತಸ
25. ತಾಂ ಶಾ. ದಿತಾ ತಾಪಹಾರಿಣೇ । ಸಕುಚತ್ತಾತ ಪತ್ರಾಣೆಸ
26. ತಪತ್ರಾಣೇ ವೈರಿಣಿ ರಹತಿ ಸ್ಮಾಹರಿ ಹರಂದ್ಮಾಪ ತೌಸಾ
27. ತತಾವ್ಯಧಾಮಹಾಹತೆ ಪ್ರದೀದತೆ ಖಾತ್ರಿಯೋನತ ಸತೃವಾಃ । ಸ

28. ರ್ವ ರತ್ನ ನಿಥತಸ್ತಸಮಧ್ಯಾಸೀತ್ತನೂದ್ಭವಃ । ಮದ್ವೆ ಬುಕ್ಕ ಮಹಿ
29. ಪಾಲೋಮಣೀ ನಾಮಿವಕೌಸ್ತುಭಂ । ತಸ್ತಗೌರಾಂಬಿಕಾಜಾನೆ
30. ತನಯೋ ವಿನಯೋನತಃ । ಹೌರಗೌರಯಶಪೂರ ಹಾರೀ ಹರಿಹ
31. ರೇಶ್ವರಃ । ಶ್ವಸ್ತಿ ಸಮಸ್ತ ಭೂಮಂಡಲ ವರ್ತ್ತಮಾನ ಭುಜಾದಂಡರಾ
32. ಜಪರಮೇಶ್ವರ ಪೂರ್ವ ಪಶ್ಚಿಮದ ಸಿಣೋತ್ತರ ಚತುಃ ಸಮುದ್ರೈಕ
33. ನಾಯಕ ಭಾಷಾ ಲಂಘಿತ ರಾಜನ್ತಭುಜಂಗ ಹಿಂದೂರಾಯ ಸುರ
34. ತ್ರಾಣ ಸರಣಾಗತ ವಜ್ರಪಂಜರ ಸಕಲ ಭುವನ ಭಯಾನಕ
35. ತದುಷ್ಟಶಾರ್ದೂಲ ಮರ್ದನ ರಾಜ ಗುರು ಪಿತಾಮಹ ಷೋ
36. ಡಸ ಮಹಾರಾದಾನ ವಿಹಿತ । ಸುಚರಿ ತಾಯ ದಾನ ಚತುಷ
37. ಷ್ಠಿಕಲಾವಿಲಾಸದ ಪಣೆದಾದಿ ಬಿರುದಾವಳಿ ತಟಾಕ ಸ
38. ಯವೆ ಗ್ರಾಮಂ ಮಯಾತಿಷ್ಠಮಹೀಪತಿಃ । ತ । (ಸ್ಮ) ಗ್ರಾಮ ಪರಮ ಪ್ರೀತಿ
39. ರಾಜಾ ಹರಿಹರೇಸ್ವರಃ । ಧರ್ಮಮೂರ್ತಿ ಸ್ವಯಂನಾಮ್ನ ತಾದಸಂಗ್ರಾಮ
40. ಮುತ್ತಮಂ । ನಂದೆಗ್ನೀಂದು ಗುಣೆತೇ ೧೩೧೯ ಶಕೆ ಈಶ್ವರ ರವತ್ಸ
41. ರೈ ವೈಶಾಖ ಮಾಸಾಮಾವಾಸ್ಯಂ ದಿವಸೆ ಗ್ರಹಣೇರವೋ ॥ ತುಂಗಭ
42. ದ್ರೋ ನದೀ ತೀರೇ ವಿರೂಪಾಕ್ಷಸ್ಯ ಸಂನ್ನಿಧೌಃ । ಹಾರೀತಾನ್ವಯೋ
43. ತ್ರಾಯಂಬಕ ಚಾಮ ಮಹಾತ್ಮನೇ ಪ್ರಯಾಗಿ ನಾಮಕಂ ನಿತ್ಯಂಯೀ
44. ಚಿ ಭಟ್ಟಾಯ ದೀಷಡಂಗ ಸಹಿತಂ ವೇದಂ ವೇದಾರ್ಥಂ ವೇತ್ತಿ ಭೂಸು (ರ)
45. ಮಾಧವಾರ್ಯ ಇತಿ ಖ್ಯಾತೋತದ್ನಾಮೇನವ ಸಂತತಿ ಹಿಧ್ಯನ

Plate - 2A

46. ನ್ವಯಿಸಮಂಧೆ ಕೊಪಣ್ಯಸ್ಯ ಚ ಹೊಬ ತೌಕಾತರಿಕೆ ವೇಂಠೆ
47. ಗಂ ನಾಮಂ ತಳಕಲ್ಲು ಗ್ರಾಮ ಸಯುತಂ । ಗ್ರಾಮ ಗ್ರಾಸಮಿದಂ ನಾಮ
48. ತಲುಲು ಭಾಶಿತಿಸಸ್ತಿತಂ । ಯತಗ್ರಾಮ ಸಮುಪ್ತನಧನಧಾ
49. ನ್ಯ ಚ ಸಂಪದಾ ಗಗನೆ ಷುಷ್ಕಿಶ್ಚದ್ರಾಖ್ಯಾಖಾರೀ ಭೂಮಿಶ್ಚ
50. ಸಂಯುತಂ ತಟಾಕ ಕೂಪ ಕುಲ್ಯಾದಿ ನಿಧಿ ನಿಕ್ಷೇಪ ಪೂರ್ವ
51. ಕಂ ಜಲಪಾಷಾಣ ಸಂಯುಕ್ತಮಷ್ಟತೋಗೈಶ್ಚ ಸಯುತಂ ಅಷ್ಟ
52. ಸೀಮಾ ಶಮಾಯುಕ್ತಂ ಸಮಸ್ತ ಬಲಿ ಸಂಯುತಂ ಹಾರಿಜಾನ್ವ
53. ಯ ಗೋತ್ರಯ ರುಕ್ಸಾಖಾಧ್ಯಾಯಿನೇ ತಂತದಾ ಪ್ರಯಾಗೀಶ
54. ಚ ಭಟ್ಟಾಯ ಮಾಧವಾರ್ಯಾಯ ಧೀಮತೆಯೆನ್ಮುಖ್ಯಾದಿ ಓದ್ರೆ
55. ಭ್ಯೋ ವಿದ್ವ ಭೋನ್ನಪಪುಂಗವಃ । ಸಹಿರಂಣ್ಯೋದಕ ಧಾರಾ
56. ಪೂರ್ವಂ ಯಥಾವಿಧಿ ಭೋಕ್ತುಂ ದಾತುಂ ದಿಜೆ ಭೋಶ್ಚಪ್ರಾದಾದಚಂದ್ರ

57. ತಾರಕಂ । ತೆದ್ವಿಜ ಶ್ಚಾಪಿಸಂತುಷ್ಟಾ ಸಂಯುತಃ ಪರಯಾ ಮುದಾ
58. ರಾಜಾನ ಮಾಸಿಷಂ ಚಕ್ರೇ ಚಿರಂಜೀವಿ ಭವತ್ವಿತೆ । ಗೋತ್ರ
59. ಶಾಖಾಪಿತುರ್ನಾಮದ್ವಿಜಾನಾಂ ಚಯಥಾಸ್ಥಿತಂ ।ಲಿಖ್ಯಾ
60. ತೆ ವೃತ್ತಿ ಸಂಖ್ಯಾತ್ರ ವಿಂಶತ್ಯಾಧಿಕ ಸತತ್ರಯ । ಮಲ್ಲಿ
61. ಕಾರ್ಜುನ ದೇವಸ್ಯ ಪರ್ವಮಾಸೋತ್ಸವಾಯಚ । ಅಂಗ ರಂಗಾದಿ
62. ಭೋಗಂ ನಂದಾದೀಪ್ತಂ ತಯೈವಚನೈವೇದ್ಯಾಧ್ಯುಪಚಾರಾರ್ಥಂದ್ವೇ
63. ಕಂಚ ಪೃಧ್ವಿಕಂ ಮೂಲಿಸ್ತಾನಾಖ್ಯಾಕಲ್ಲಯ...ದೇವ
64. ಸ್ಯ ನೈವೇದ್ಯಾಧ್ಯೂಪಚಾರಕಾ ಏಕಖರೀಚ ಪೃಥ್ವೀಂಚ ಅ
65. ರ್ಪಿತಂ ಮರ್ವಮಾನ್ತಕಂ ನಾಗಧಾಖ್ಯಾದೇವಸ್ತ ನೈವೆದ್ಯಾ
66. ಧ್ಯುಪಚಾರರ್ಥಂಖರ್ಷ್ಣರ ದೇವಕಂಚ ಪೃಥ್ವೀಚ ಅರ್ಪಿತಂ ಸರ್ವ

Plate - 3

67. ಮಾನ್ತಕಂ । ಭೀಮೇಶ್ವರಾಖ್ಯ ದೇವಸ್ತ ನೈವೆದ್ಯಾದ್ಯುಪಚಾ
68. ರಕಂ ಖ್ಚರ್ಷ್ಣಕರೋಕಂಚ ಪೃಥ್ವೀಚ ಸರ್ವಮಾಂನ್ತಚ ದತ್ತವಾ
69. ನ್ ॥ ಲಕ್ಷ್ಮೀನಾರಾಯಣ ಸ್ಯೆವ ಅಭಿಷೇಖಾದ್ಯುಪಚಾರ
70. ಕೆ ನಿತ್ತ ನೈವೇದ್ಯ ನಂದಾ ಖ್ಯಾದೀಪ್ತೌಸರ್ವಷ್ಣವಾಯವ
71. ಖಾರೀತ್ರಯಂಚ ಪೃದ್ವಿಚ ಅರ್ಪಿತಂ ಸರ್ವಮಾನ್ತಕಂ ಗ್ರಾಮ
72. ದೇವತೆ ಹನುಮಂತದೇವಸ್ತದ್ಯುಪಚಾರಕಾದಾಷಾಢತ
73. ಚಸುಜೇತ್ರಂ ಅರ್ಪಿತಂ ಸರ್ವಮಾಂನ್ತಕಂ । ಹಾರೀತಾನ್ವಯ ಗೋ
74. ತ್ರಾಯರು ಕ್ಷಾಖಾಧ್ಯಾಯಿನೆತದಾಯೀಚೆ ಭಟ್ಟಾರ್ಯ ಪು
75. ತ್ರಾಯ ಮಾಧವಾರ್ಯಾಯ ಧೀಮತೆಯಜಮಾನಾಂಶಕ
76. ವೃತ್ತಿ ಅಚ(ತ್ರ)ಸಪ್ತಕಂ ಸಂಖ್ಯ ಕಾ ॥ ವಾಧೂಲೋಯಾಜು
77. ಷೋಧಿಮಾನುಗೌತಮಿಾತೀರ ವಾಸಿನ ಭೀಮಣಾರ್ಯ ಸುತ
78. ಕೂಚಿಭಟ್ಟೋಪಷ್ಟಾಸಮಸ್ನುತೆ ॥ ಗೌತಮೋಬಹ್ವೃಚೋಧೀಮಾ
79. ಹಕೆರೀನರಹರಾತ್ಮಜಃ । ನಾಗಿ ದೇವಾರ್ಯ ನಾಮಾಯಂ ವೃ
80. ತ್ತಿದ್ವಯ ಮಿಹಾಸ್ನುತೆ । ಮೌನ ಭಾರ್ಗವ ರುಗ್ವೆದಿ ಕೋಡತಿ
81. ಕೌಲಾರ ಗಂಗಣಾ ಸುತೋ ಸಿಂಗಣ ಭಟ್ಟಸ್ತು ವೃತ್ತಿ ಪಂ
82. ಚಕ ಮುಸ್ನುತೇ । ಗೌತಮ ಸಾಮಶಾಖೀಚ ಚಂಗ ದೇವಾ
83. ರ್ಯ ನಂದನಃ । ನಾರಸಿಂಹ ಭಟ್ಟ ವೃತ್ತಿ ತ್ರಯಮಿಹಾಸ್ನುತೆ
84. ಶ್ರೀವತ್ಸೋರುಗಧೀತಶ್ಚಕರವೆ ನಾಗಣಾತ್ಮಕ ನೃಸಿಂ
85. ಹಾರ್ಯ ಇತಿಖ್ಯಾತೋ ವೃತ್ತಿಪಂಚಕರ್ಮಸ್ನುತೆ / ಹಾರಿತೋ

Plate No. - A

86. ಯಾಜು ಷೋಧೀಮಾಂ ಅನಂತ್ತರ ಧ್ಯಾನಂದನಃ । ನೃಸಿಂಹ ತಾರಾ
87. ಧ್ಯಾನಾಮಾಯ ವೃತ್ತಿ ತ್ರಯ ಮಿಹಾಸ್ನುತೆ ॥ ಮೌನಭಾರ್ಗವ
88. ಗೋತ್ರೋಯೋ ಹೃಚೋ ಮಲ್ಲಿಭಟ್ಟಕಃ ಪೆದ್ದಿ ಭಟ್ಟೇತಿ ವಿ
89. ಖ್ಯಾತೋ ವೃತ್ತಿ ಮೆಕಾಂಮಿ ವಾಪ್ತವಾನ್ । ವಾಯು ಲೋಬಹ್ವೃ
90. ಚೋ ವಿದ್ವಾನ್ ಅನಂತಾರ್ಯ ತನೂಭವಃ ಔಭಲಾರ್ಯ ಇತಿ
91. ಖ್ಯಾತೋ ವೃತ್ತಿದ್ವಯ ಮಿಹಾಶ್ನುತೆ । ವಿಷ್ಣುವರ್ಧನ ಗೋತ್ರೋಯೋ
92. ರುಗ್ವೇದೀಮಾಯಣಾತ್ಮಜ ವಿಠಲಾಯೇತಿ ವಿಖ್ಯಾತೋ ವೃತ್ತಿ ಮೇ
93. ಕಾಮಿಹಾಶ್ನುತೆ । ಭಾರದ್ವಾಜೋಯಜುರ್ವೇದೀ ಮಲ್ಲಿಭಟ್ಟ ತನೂ
94. ದ್ಭವಃ ಅನ್ನದಾತ ಇತಿ ಖ್ಯಾತೋವೃತ್ತಿತ್ರಯ ಮಿಹಾಶ್ನುತೆ॥
95. ವಿಶ್ವಾಮಿತ್ರೋಷ್ಮರುಗ್ವೆದೀ ದೆವರೆ ಭಟ್ಟನಂದನಃ ವಿರೂಪಾ
96. ಣರ್ಯ ವಿಖ್ಯಾತೋ ವೃತ್ತಿ ಪಂಚಕ ಮಶ್ನುತೆ॥ ಮಿಶ್ವಾಮೀತ್ರೋಯ
97. ಜುರ್ವೆದೀದೆ ವಣಾರ್ಯತನೂದ್ಭವಃ ನಾರಾಯಣೇತಿ ವಿಖ್ಯಾ
98. ತೋ ವೃತ್ತಿದ್ವಯ ಮಿಹಾಶ್ನುತೆ ॥ ವಾಶಿಷ್ಠೋ ಬಹ್ವೃಚೋಧೀಮಾನ್
99. ರಾಯ ಕೃಷ್ಣಾತ್ಮಜ ಸುಧೀಃ ವಿಠಲಾರ್ಯ ಇತಿಖ್ಯಾತೋ ವೃತ್ತಿ
100. ದ್ವಯ ಮಿಹಾಸ್ನುತೇ ॥ ಭಾರದ್ವಾಜೋಯಜು ಶ್ಲುಕ ಪೆದ್ದಿಭಠ್ಠ ಸು
101. ತ ಸುಧೀಃ ಅನಂತಾರ್ಯ ಇತಿಖ್ಯಾತೋ ವೃತ್ತಿದ್ವಯ ಮಿಹಾಶ್ನು
102. ತೆ॥ ಕೌಂಡಿನ್ಯೋ ಶುಕ್ಲಯಜು ಮಾಯಣಾರ್ಯ ಸುತ ಸುಧೀಃ ಅಂನ್ನ
103. ದಾತ ಇತಿಖ್ಯಾತೋ ವೃತ್ತಿ ತ್ರಯ ಮಿಹಾಶ್ನುತೆ ॥ ಹಾರೀತೋ ಶುಕ್ಲ
104. ಯಜುಷೋ ಔಭಲಾರ್ಯ ತನೂದ್ಭವಃ ಸಿಂಗಣಾರ್ಯ ಇತಿ ಖ್ಯಾ
105. ತೋ ವೃತ್ತಿದ್ವಯ ಮಿಹಾಶ್ನುತೆ ॥ ಹಾರಿತೋ ಶುಕ್ಲಯಜುಷೋಚಿ

Plate - 4

106. ನಿ ಭಟ್ಟಸುತಃ ಸುಧೀ ಔಭಲಾರ್ಯ ಯಿತಿ ಖ್ಯಾತೋ ವೃತ್ತಿ
107. ಮೆಕಾಮಿಹಾಶುತೆ । ಕೌಶಿಕ ಸಾಮಸಾಖೀಯೋ ಕೃಷ್ಣಾ
108. ಭಟ್ಟ ತನೂಭವಃ ಅನಂತಾರ್ಯ ಇತಿ ಖ್ಯಾತೋ ವೃತ್ತಿದ್ವಯ
109. ಮಿಹಾಶ್ನುತೆ ॥ ಕೌಶಿಕೊಯಃ ಯಜುರ್ವೆದೀ ಪುರುಷೋತ್ತನಂ
110. ದನಃ ॥ ವಿಷ್ಣುಭಟೇತು ವಿಖ್ಯಾತೋ ವೃತ್ತಿಮೆಕಾಮಿಹಾಶ್ನುತೆ
111. ವಾಸಿಷ್ಠೋ ಬಹ್ವೃಚೋಧೀಮಾನ್ ಷೋಚಿಭಟ್ಟತ್ಮಜ ಸುಧೀಃ
112. ಮಂಗರಸ ಇತಿ ವಿಖ್ಯಾತೋ ವೃತ್ತಿ ಮೆಕಾಮಿಹಾಶ್ನು
113. ತೆ । ವಾಧಧೂಲಾಯಾಜುಷೋಧೀಮಾನ್ ವಿರುಪಾಹಾರ್ಯ ನಂದನಃ

114. ನರಸಪ ಇತಿ ವಿಖ್ಯಾತೋ ವೃತ್ತಿದ್ವಯಿ ಮಿಹಾಶ್ನುತೆ॥

115. ವಾಸಿಷ್ಠೋರುಗಧೀತಶ್ಚವಿಠ್ಠಲಾತನು ಭವಃ ಅನ್ನ

116. ದಾತಾರ್ಯ ವಿಖ್ಯಾತೋ ವೃತ್ತಿ ಮೆಕಾಮಿಹಾಶ್ನುತೆ। ವಿಷ್ಣುವ

117. ರ್ಧನ ಗೋತ್ರಾರ್ಯೋ ಬಹ್ವೃಚೋ ಹಪಣಾರ್ಯಕಂ ತಿರುಮಲೆ ಭಟ್ಟ

118. ನಾಮಾಯ ವೃತ್ತಿತ್ರಯ ಮಿಹಾಶ್ನುತೆ । ವಿಶ್ವಾಮಿತ್ರೋರುಗಧ್ಯೇ

119. ತಾ ಔಭಲಾರ್ಯ ತನುಭವಃ । ಸಿಂಗಣಾರ್ಯ ಇತಿ ಖ್ಯಾತೋ

120. ವೃತ್ತಿ ಚಾತುಷ್ಕಮಶ್ನುತೆ ಭರದ್ವಾಜೋಯಜುರ್ವೇದಿ ಅರಸ

121. ಪಾರ್ಯ ತನು ಭವಂ ಲಿಂಗಣಾರ್ಯ ಇತಿಖ್ಯಾತೋವೃತ್ತಿ ದ್ವಯ

122. ಮಿಹಾಶ್ನುತೇ ಜಾಮದ ಜ್ಞೋರುಗ್ವೇದಿ ಶಿರಿ ಭಟ್ಟ ಸುತಃ ಸುಧೀಃ

123. ವಿರೂಪಾಹಾರ್ಯ ವಿಖ್ಯಾತೋ ವೃತ್ತಿ ಮೆಕಾಮಿವಾಪ್ತವಾ

124. ನ್ ಹಾರೀತೋ ಹ್ವೃಚೋಧೀಮಾಔಭಲಾರ್ಯ ತನೂಭವಃ

125. ನೃಸಿಂಹಾರ್ಯ ಇತಿಖ್ಯಾತೋ ವೃತ್ತಿತ್ರಯ ಮಿಹಾಶ್ನುತೇ॥

Plate - 4A

126. ಶ್ರೀ ವತ್ಸೋರುಗಧೀತಶ್ಚರಾಮ ಕೃಷ್ಣಾರ್ಯ ನಂದನಃ ವಿಷ್ಣು

127. ಭಟ್ಟೇತಿವಿಖ್ಯಾತೋ ವೃತ್ತಿ ಪಂಚಕಮಹಾಶ್ನುತೇ। ಶ್ರೀವ

128. ತ್ಸೋರುಗಧೀತಶ್ಚ ಗೋಪಿನಾಥಾರ್ಯ ನಂದನಃ ಕೃಷ್ಣ ಭಟ್ಟೇತಿ

129. ವಿಖ್ಯಾತೋ ವೃತ್ತಿ ಮೆಕಾಮಿಹಾಶ್ನುತೇ । ಜಾಮದಜ್ಞೋಯ

130. ರುಗ್ವೇದೀ ಹಂಪಣಾರ್ಯ ತನೂಭವಃ ವೀರಪಾಹಾರ್ಯ ವಿ

131. ಖ್ಯಾತೋವೃತ್ತಿ ಚಾತುಷ್ಕಮಶ್ನುತೇ ॥ ಕೌಶಿಕೋ ಬಹ್ವೃಚೋಧೀಮಾ

132. ನ್ ಅನಂತಾರ್ಯ ತನೂದ್ಭವಃ । ಸಿಂಗಣಾರ್ಯ ಇತಿ ಖ್ಯಾತೋ ವೃ

133. ತ್ತಿ ಪಂಚಕ ಮಿಹಾಶ್ನುತೇ । ಜಾಮದ ಜ್ಞೋಯ ರುಗ್ವೇದೀನರಹರೀಭ

134. ಟ್ಟ ನಂದನಃ ಅನಂತಾರ್ಯ ಇತಿ ಖ್ಯಾತೋ ವೃತ್ತಿಮೆಕಾಮಿವಾ

135. ಪ್ತವಾನ್ । ಶ್ರೀವತ್ಸೋರುಗಧೀತಶ್ಚ ಔಭಲಾರ್ಯತನೂಭ

136. ವಃ ನೃಶಿಂಹಾರ್ಯ ಇತಿ ಖ್ಯಾತೋ ವೃತ್ತಿ ಪಂಚಕಮಶ್ನುತೇ ॥

137. ಜಾಮದಜ್ಞೋಯ ರುಗ್ವೇದೀ ಅಪಣಾರ್ಯತನೂಭವಃ ಶಿರಿಯ

138. ಣಾರ್ಯತಿ ವಿಖ್ಯಾತೋ ವೃತ್ತಿ ಚೌತುಷ್ಕಮಶ್ನುತೇ । ವಿಶ್ವಾಮಿತೋ

139. ಯ ರುಗ್ವೆದೀ ಮಲ್ಲಿಭಟ್ಟಸುತ ಸುಧೀಃ ಲಖಣಾರ್ಯೇತಿ ವಿಖ್ಯಾ

140. ತೋ ವೃತ್ತಿ ಮೆಕಾಮಿಹಾಶ್ನುತೇ । ಜಾಮದ ಜ್ಞೋಯರುಗ್ವೆದೀಚೆಂನಿಭಟ್ಟ

141. ಸುತ ಸುಧೀಃ ಮಾದವಾರ್ಯೋ ತಿವಿಖ್ಯಾತೋ ವೃತ್ತಿ ಪಂಚಕಮಶ್ನುತೇ ।

142. ಕಾಶ್ಯಪೋರುಗಧೀತಶ್ಚ ಹೆಮಣಾರ್ಯ ತನೂಭವಃ ಮಲ್ಲಿ ಭಟ್ಟೇತಿ

143. ವಿಖ್ಯಾತೋವೃತ್ತಿ ಚಾತುಷ್ಕಮಶ್ನುತೆ । ಮೌನಭಾರ್ಗವ ಗೋತ್ರೋ
144. ಯೋರುಗ್ವೇದೀ ತಿಪ್ಪಣಾತ್ಮಜಃ ಕಸವಾ ಭಟ್ಟೇತಿ ವಿಖ್ಯಾ
145. ತೋ ವೃತ್ತಿ ಮೆಕಾಮಿ ವಾಪ್ತವಾನ್ । ಶ್ರೀ ವತ್ಸೋ ಬಹ್ವೃ ಚೋ
146. ಗೋಪಿನಾಥಾತ್ಮಜಃ ಚೆಂನಿಭಾಟ್ಟಸ್ತೋ ವೃತ್ತಿಮೆಕಃ ॥
147. ಕಾಶ್ಯಪೋರುಗಧೀತಶ್ಚ ತ್ರಿವಿಕ್ರಮ ಸುತಸುಧೀಃ ವಿಠಪಾ
148. ರ್ಯೇತಿ ವಿಖ್ಯಾತೋ ವೃತ್ತಿ ಮೇಕಾ ಸಮಶ್ನುತೇ ॥ ಜಾಮದಜ್ಞೋಯರು
149. ಗ್ವೆದೀ ಅಪ್ಪಣಾರ್ಯಸುತಃ ಸುಧೀಃ ಕಸಭಟ್ಟೇತಿ ವಿಖ್ಯಾ
150. ತೋ ವೃತ್ತಿ ಮೆಕಾಮಿಷಿವಾಪ್ತವಾನ್ ॥ ಕಾಶ್ಯ ಪೋರುಗಧೀತಶ್ಚ
151. ಔಭಲಾರ್ಯ ತನೂಭವಃ ಚೆಂನಿಭಟ್ಟೇತಿ ವಿಖ್ಯಾತೋ ವೃತ್ತಿ
152. ಚಾತುಷ್ಕಮಶ್ನುತೇ ॥ ಶ್ರೀವತ್ಸೋರುಗಧೀತಶ್ಚಪರ್ವತಾ
153. ರ್ಯ ತನೂಭವಃ ಹಂಪಣಾರ್ಯೇತಿ ವಿಖ್ಯಾತೋ ವೃತ್ತಿ ಮೆಕಾಸ
154. ಮಶ್ನುತೇ ॥ ವಾದೂಲೋಯಾಜುಷೋಧಿಮಾನ್ ವಿಠಲಾರ್ಯ ತನೂಭ
155. ವಃ ಸೂರಿಭಟ್ಟೇತಿ ವಿಖ್ಯಾತೋ ವೃತ್ತಿ ಚಾತುಷ್ಕಮಶ್ನುತೇ ॥ ಜಾಮ
156. ದಜ್ಞೋಯರುಗ್ವೇದಿ ನೃಸಿಂಹಾರ್ಯ ತನೂದ್ಭವಃ ನಾರಾಯಣಾ ಇತಿ
157. ಖ್ಯಾತೋ ವೃತ್ತಿ ತ್ರಯಸಮಶ್ನುತೇ ॥ ವಾಷಿಷ್ಠೋರುಗಧೀತಶ್ಚದೆ
158. ವರ್ಣಾಯ ತನೂದ್ಭವಃ ಲಿಂಗಣಾರ್ಯ ಇತಿ ಖ್ಯಾತೋ ವೃತ್ತಿಮೆಕಾ
159. ಮಿವಾಪ್ತವಾನ್ । ಆತ್ರೆಯೋ ಯಾಜುಷೋಧಿಮಾನ್ಮಾಯಣಾರ್ಯ ತನೂ
160. ದ್ಭವಃ ಶಿಂಗಣಾರ್ಯೆತಿ ವಿಖ್ಯಾತೋ ವೃತ್ತಿ ತ್ರಯ ಮಿಹಾಶ್ನುತೆ ॥ ವಾಸಿ
161. ಷ್ಠೋರುಗಧೀತಶ್ಚ ಹೆಮಣಾರ್ಯ ತನೂದ್ಭವಂ ವಿಷ್ಣುಭಟ್ಟೆತಿ ವಿಖ್ಯಾತೋ
162. ವೃತ್ತಿ ಪಂಚಕಮಶ್ನುತೇ ॥ ಮೌನ ಭಾರ್ಗವ ಗೋತ್ರೋಯೋ ಹೃಚೋದೆ
163. ಚಿಭಟ್ಟಕಸುತೋ ನಾಗಂಣವಿಖ್ಯಾತೋವೃತ್ತಿತ್ರಯ ಮಿವಾಪ್ತವಾ
164. ನ್ ॥ ಭಾರದ್ವಾ ಜೋಯಾಜುರ್ವೆದೀ ನೃಸಿಂಹಾರ್ಯತನೂದ್ಭವನಂಜಿ
165. ನಾಥ ಇತಿ ಖ್ಯಾತೋ ವೃತ್ತಿಮೆಕಾಮಿವಾಪ್ತವಾನ್ ॥ ಭಾರದ್ವಾಜೋ
166. ದ್ಭವೋ ಧೀಮಾನ್ ವಿಸ್ವನಾಥ ಸುತಸುಧೀಃ ವಿಷ್ಣು ಭಟ್ಟೇತಿ ವಿಖ್ಯಾ
167. ತೋ ವೃತ್ತಿ ಚಾತುಷ್ಕಮಶ್ನುತೇ ॥ ವಾಶಿಷ್ಠೋ ಬಹ್ವೃಚೋಧಿಮಾನ್

Plate No. - 5A

168. ಅನಂತತಾರ್ಯಸುತಃ ಸುಧೀವಾಮನಾರ್ಯ ಇತಿಖ್ಯಾತೋ ವೃತ್ತಿ
169. ತ್ರಯ ಮಿಹಾಸ್ನುತೆ ॥ ಜಾಮದ ಜ್ಞೋಯರುಗ್ವೇದೀ ಶ್ರೀಧರಾರ್ಯ ಸು
170. ತ ಸುಧೀನಾಗದೇವ ಇತಿಖ್ಯಾತೋ ವೃತ್ತಿ ಪಂಚಕಮಶ್ನುತೆ॥
171. ಕಾಸ್ಯಪೋಬಹ್ವೃಚೋಧೀಮಾವಿರುಪಣಾರ್ಯಸುತಸುಧೀಃ ಲಿಂಗಣಾ

172. ರ್ಯೇತಿ ವಿಖ್ಯಾತೋ ವೃತ್ತಿತ್ರಯ ಮಿಹಾಶ್ನುತೆ॥ ಆತ್ರೇಯೋ ಯಾಜು
173. ಷೋಧೀಮಾನ್ ದುಗ್ಗ್ಗಣಾರ್ಯತನೂದ್ಭವಃ ಶಿಂಗಣಾರ್ಯೇತಿ ವಿಖ್ಯಾತೋ
174. ವೃತ್ತಿದ್ವಯಮಿಹಾಶ್ನುತೆ॥ ಹಾರಿತೋಯಾಜುಷೋಧೀಮಾನ್ ದೇವರೇ
175. ಭಟ್ಟನಂದನಃ ನೃಶಿಂಹಾರ್ಯ ಇತಿಖ್ಯಾತೋ ವೃತ್ತಿದ್ವಯಮಿಹಾಶ್ನು
176. ತೆ। ವಾಶಿಷ್ಠೋ॰ರುಗಧೀತಶ್ಚಕೆಷವಾರ್ಯಸುತಸುಧಿಃ ರಾಮಾ
177. ಭಟ್ಟೇತಿ ವಿಖ್ಯಾತೋ ವೃತ್ತಿ ಸಪ್ತಮಿ ಹಾಶ್ನುತೇ॥ ಭಾರದ್ವಾಜೋಯ
178. ಜುರ್ವೇದೀಚೆಂನ್ನಿಭಟ್ಟಸುತ ಸುಧೀಃ ಕಾಮಾಭಟ್ಟೇತಿ ವಿಖ್ಯಾ
179. ತೋ ವೃತ್ತಿ ಮೆಕಾಮಿಹಾಶ್ನುತೆ॥ ವಿಷ್ಣುವರ್ಧನ ಗೋತ್ರೋ॰ಯೋ ಬಹ್ವೃ
180. ಚೋದೇಚಿ ಭಕಃ ಕೃಷ್ಣಭಟ್ಟೇತಿ ವಿಖ್ಯಾವೃತ್ತಿಮೆಕಾಮಿಹಾಶ್ನುತೇ ।
181. ಕಾಸ್ಯಪೋರುಗಧಿತಶ್ಚ ವಿಶ್ವನಾಥಾತ್ಮಜ ಸುಧೀವಿಷ್ಣುಭ
182. ಟ್ಟೇತಿ ವಿಖ್ಯಾತೋವೃತ್ತಿ ಮೆಕಾಮಿಹಾಶ್ನುತೇ ॥ ವಿಶ್ವಾಮಿತೋರುಗ
183. ದ್ಯೆತಾಹೊಂನಿಭಟ್ಟ ಸುತಸುಧೀಹಂಪಣಾರ್ಯ ಇತಿ ಖ್ಯಾತೋ ವೃತ್ತಿ
184. ಮೆಕಾಮಿವಾನ್ ॥ ಕೌಶಿಕೋಬಹ್ವೃ ಚೋಧೀಮಾನ್ ಕೃಷ್ಣಭಟ್
185. ಸುತಃಸುಧೀಃ ಮಾಧವಾರ್ಯೇತಿ ವಿಖ್ಯಾತೋ ವೃತ್ತಿದ್ವಯ ಮಿಹಾ
186. ಸ್ನುತೇ ॥ ವಾಶಿಷ್ಠೋ॰ ಬಹ್ವೃಚೋಧೀಮಾನ್ ಶ್ರೀಧರಾರ್ಯತನೂ
187. ಭವಃ ರಾಮಾಭಟ್ಟೇತಿವಿಖ್ಯಾತೋ ವೃತ್ತಿ ಮೇಕಾಮಿಸ್ನುತೇ ॥ ವಾಶಿ

Plate No. -6


188. ಷ್ಠೋರುಗಧೀತಶ್ಚಸಿರ್ಯಣಾರ್ಯ ಸುತಸುಧೀ ತಿಪ್ಪಣಾರ್ಯೇತಿ
189. ವಿಖ್ಯಾತೋ ವೃತ್ತಿದ್ವಯಮಿಹಾಶ್ನುತೇ॥ ಹಾರಿತೋಯಾಜುಷೋಧೀಮಾ
190. ನ್ ಅನಂತಾರ್ಯತ ಭವನೃಸಿಹಾರ್ಯೇತಿ ವಿಖ್ಯಾತೋ ವೃತ್ತಿದ್ವ
191. ಯ ಮಿಹಾಶ್ನುತೆ ॥ ಹಾರಿ ತೋಯಾಜು ಷೋಧೀಮಾನ್ಮಲ್ಲಿ ಭಟ್ಟ ಸು
192. ತಸುಧೀಃ ಮಾಯಿ ಭಟ್ಟೇತಿ ವಿಖ್ಯಾತೋ ವೃತ್ತಿ ಪಂಚಕಮ ಶ್ನುತೆ ॥
193. ಜಾಮದಜ್ಞೋಯ ರುಗ್ವೆದೀ ದೆವಣಾರ್ಯ ತನೂತ್ಭವಃ ಮಾಯಿಭ
194. ಟ್ಟೇತಿ ವಿಖ್ಯಾತೋಪ್ತಂಚವೃತ್ತಿ ಸಮಶ್ನುತೇ ॥ ಹಾರಿತೋಯಾ
195. ಜುಷೋಧೀಮಾನ್ ಶ್ರೀಧರಾರ್ಯಸುತಃಸುಧೀಃ । ಮಾಧವಾರ್ಯೋ॰
196. ತಿ ವಿಖ್ಯಾತೋ ವೃತ್ತಿಮೆಕಾಸ್ಣಮಶ್ನುತೆ ॥ ವಿಷ್ಣುವರ್ಧನ ಗೋ
197. ತ್ರೋ॰ ಯೋರುಗ್ವದೀ ಶಿಂಗಣಾತ್ಮಜ ತೀಮ್ಮಣಾರ್ಯೇತಿ ವಿಖ್ಯಾತೋ
198. ಷ್ಠಷ್ಮವೃತ್ತೀಸ್ವರೋಭವತ್ ॥ ವಿಶ್ವಾಮಿತ್ರೋ॰ರುಗದ್ಯೆ ತಾಕಾಮಾ
199. ಭಟ್ಟಾತ್ಮಜ ಸುಧೀರಾಮಾಭಟ್ಟೇ ತಿವಿಖ್ಯಾತೋ ಪಂಚ ವೃತ್ತೀ
200. ಸ್ವರೋಭವತ್ತ್ ॥ ವಾಶಿಷ್ಠೋ॰ರುಗಧೀತಶ್ಚ ಭೋಮ್ಮಣಾರ್ಯ ತನೂ

201. ದ್ಭವಃ ಸಿರುಮಣಾರ್ಯೇತಿ ವಿಖ್ಯಾತೋ ವೃತ್ತಿ ಮೆಕಮಿಹಾಶ್ನುತೆ
202. ಭಾರದ್ವಾಜೋದ್ಭವೋಧೀಮಾನ್ ಅಪಣಾರ್ಯ ತನೂದ್ಭವಃ ಸಿದ್ಧಪಾ
203. ಯೇತಿವಿಖ್ಯಾತೋ ವೃತ್ತಿ ಷಟ್ಕಮಿಹಾಶ್ನುತೆ ॥ ಭಾರದ್ವಾಜೋಯ
204. ಜುರ್ವೇದೀ ಗೋಪಿನಾಥಾತ್ಮಜ ಸುಧೀನ್ಯಸಿಂಹಾರ್ಯ ಇತಿ ಖ್ಯಾ
205. ತೋ ಯೇಕವೃತ್ತಿ ಪತಿಶ್ಚಯೋ ಕಾಸ್ಯ ಪೋಯಾಜುಷೋಧೀಮಾನ್
206. ಪೆದ್ದಿಭಟ್ಟ ಸುತಸುಧೀ ಆಚಿಭಟ್ಟೇತಿ ವಿಖ್ಯಾತೋ ವೃತ್ತಿ ಚೌತುಷ್ಕ
207. ಮಶ್ನುತೆ ॥ ಜಾಮದ ಜ್ಞೋಯ ರುಗ್ವೇದೀಮಾಧವಾರ್ಯಸುತ ಸುಧೀ
208. ಗೋಪಿನಾಥತಿಖ್ಯಾತೋ ವೃತ್ತಿ ಪಂಚಕ ಮಶ್ನುತೆ ॥ ವಾಶಿ
209. ಷ್ಠೋರುಗಧೀತಶ್ಚರಾಮಕೃಷ್ಣಾರ್ಯ ನಂದನಃ ಶ್ರೀಧರಾ
210. ರ್ಯೇತಿ ವಿಖ್ಯಾ ವೃತ್ತಿ ಚಾತುಷ್ಕಮಶ್ನು॥ ತೈಸ್ಸೈಸಮನ್ವಿ
211. ತಾಶ್ಚಿಂಲ್ಯೈರ್ದೀಕ್ಷು ಪ್ರಾಚ್ಯಾದೀಷು ಕ್ರಮಾಸಿಮಾನೇ
212. ಸ್ಯಾಗ್ರಹಾರಸ್ಯ ಲಿಖ್ಯಂತೆ ದಷ ಭಾಷಯಾ॥ ತ
213. ಲುಲ ಬಾಲು ಸಹ ವಾದ ತ್ತಲ ಕಲ್ಲ ಗ್ರಾಮಕೆ ಪ್ರತೀ
214. ನಾಮವಾದ ಧರ್ಮ ಮೂರ್ತೀ ಹರೀಹರ ಪುರವಾದ
215. ಸರ್ವ ಮಾನ್ಯದ ಅಗ್ರಹಾರದ ಚತುಸಿಮಾ ವಿ
216. ವರ॥ ತಲ ಕಲ್ಲ ಗ್ರಾಮಕೆ ಮೂಡಲು ಹಲಿಗೆರೆಯ
217. ಹೊಲ ಸಿಮೆಯ ಹಲ್ಲದ ದಡದ ಹುಣಸೆ ಮರಮೆರೆ ॥
218. ಆಗ್ನೇಗೆ ಹನವಾಲಸಿ ಮೆಲು ಲಿಂಗ ಮುದ್ರೆ ಕಲ್ಲು ಮೆ
219. ರೆ । ತೆಂಕಲು ಹಂದರ ಹಾಲ ಹೊಲ ಸಿಮೆಲು ನೆಟ್ಟ ಲಿಂಗ
220. ಮುದ್ರೆ ಕಲು ಮೆರೆ । ನೈರುತ್ಯಕೆ ಕೌರು ಚ ಹಾದೀಲಿ
221. ನೆಟ್ಟಲಿಂಗ ಮುದ್ರೆ ಕಲು ಮೆರೆ। ಪಡುವಲು ಕೌರುರ
222. ಹಾದಿಯ ಗುಂಡು ಬಿದ್ದ ಕೆರೆ । ವಾಯಾವ್ಯಕೆ ಹೊಲ ಮೆ
223. ರೆಲಿ ಅರವಂಟ್ಟಿಗೆ ಕಟ್ಟೆಹೊಲದ ಮರ ಮೆರೆ । ಬ
224. ಡಗಲು ಹಂಚಿನ ಹಾಲ ಹೊಲ ಮೆರೆಲಿ ನೆಟ್ಟಲಿಂಗ
225. ಮುದ್ರೆ ಕಲು ಮೆರೆ । ಈಷಾನ್ಯಕೆ ಬೆಣೆಕಲ್ಲ ಹೊಲ ಮೆ
226. ರೆ ಲಿಂ ಮೂರೂರ ಮೂಗುಡ್ಡೆಲಿ ಹನುಮಂತ ದೇವರು ಇಂತಿ ದು


Plate No. -7

227. ಶ್ರೀಮದ್ ರಾಘುವ ರಾಜೇಂದ್ರ ತ್ರೈಲೋಕ್ಯ ಶಚರಾಚರಂ ನಸ
228. ಣೋಷ್ಮಿನ ಪಸ್ಯಾಮಿ ಸ್ವಯಂ ದತ್ತಾಪಹಾರಿಣಾ । ಗಂಣ್ಯತೇಪ
229. ಈವೋ ಭೂಮಿಗಂಣ್ಯ ತೇರ್ವಿಷ್ಟಿ ವಿಂದುವಃನಗಂಣ್ಯತು ವಿಧಾತ್ರಾ


230. ಯ ಬ್ರಂಹ್ಮಸಂಸ್ಥಾಪನ್ಯೆ ಫಲಃ ಅನ್ಯೇಷಾಂಡ್ಸ್ವರ್ದ್ಧಿತಂಭುಕ್ತೇಸ್ತಾಪಿ
231. ಸ್ವಡ್ಸ್ವರ್ದ್ಧಿತಂನತು ತತಃ ಕಂಸತರೋ ನೀಚಸ್ವದತ್ತಸ್ಯಾಪಹಾರಿಣಃ
232. ದಾನಪಾಲನ ಯೋರ್ಮಧ್ಯೇದಾನಾ ಛ್ರೇಯೋನು ಪಾಲನಂ ದಾನಾ ಸ್ವ
233. ರ್ಗಮವಾಪ್ನೋತಿ ಪಾಲನಾದಚ್ಯುತಂ ಪದಂ ॥ ಸ್ವದತ್ತಾದ್ವಿಗುಣಂ ಪು
234. ಣ್ಯಂ ಪರದತ್ತಾನು ಪಾಲನಂ ಪರದತ್ತಾಪ ಹಾರೇಣ ಸ್ವದತ್ತಾ
235. ನಿಷ್ಫಲಂ ಭವೇತ್ ಸ್ವದತ್ತಾಂ ಪರದತ್ತಾಂ ವಾಯೋ ಹರೇಚ್ಚ
236. ವಸುಂಧರಾಂ ಷಷ್ಠಿರ್ವರ್ಷ ಸಹ ಶ್ರಾಣಿ ವಿಷ್ಠಾಯಾಂಜಾಯತೇ
237. ಕ್ರಿಮಿ॥ ಯೇಕ್ಕೈವ ಭಗಿನೀ ಲೋಕೇ ಸರ್ವಷಾಮೇವ ಭೂಭುಜಾಂ
238. ನಭೋಗ್ಯಾ ನಖರ ಗ್ರಾಹ್ಯಾ ವಿಪ್ರದತ್ತಾ ವಸುಧರಾಂ । ಸಾ
239. ಮಾನ್ಯೋಯಂ ಧರ್ಮಸೇತುಂ ನೃಪಾಣಾಂ ಕಾಲೇಕಾಲೇ ಪಾಲ ನೀಯೋ
240. ಭವದ್ಭಿಃ ಸರ್ವಾನೇತಾನ್ ಭಾವಿನಃ ಪಾರ್ಥಿವೆಂದ್ರಾನ್ ಭೂಯೋಭೂಯೋಯಾ
241. ಚತೇರಾಮಚಂದ್ರಃ ॥ ನಾಗಿದೇವತನೂಜೇನಮುದ್ದಣಾಚಾರ್ಯ
242. ಸಿಲ್ಪಿನಾಲಿ ಖಿತಂ ಸಾಸನ ಚೈವ ವೃತ್ತಿದ್ವಯ ಮಿಹಾಶ್ನುತೆ ॥
243. ಶ್ರೀ ವಿರೂಪಾಕ್ಷ





2






2A























೩. ಹಂದಾಡಿಯ ಮೂರು ವಿಜಯನಗರ ಶಾಸನಗಳು - ಒಂದು ಅಧ್ಯಯನ

ಡಾ.ಬಿ. ಜಗದೀಶ ಶೆಟ್ಟಿ

ತುಳುನಾಡು ವಿಜಯನಗರ ಆಳ್ವಿಕೆಯ ಆರಂಭ ಕಾಲದಿಂದ ಅದರ ಭಾಗವಾಗಿತ್ತು. ವಿಜಯನಗರ ಅರಸರ ಆಡಳಿತ ಕಾಲದಲ್ಲಿ ಅದನ್ನು ಎರಡು ರಾಜ್ಯಗಳಾಗಿ ವಿಂಗಡಿಸಿದ್ದರು. ಅವೇ ಬಾರಕೂರು ರಾಜ್ಯ ಮತ್ತು ಮಂಗಳೂರು ರಾಜ್ಯ. ಅವುಗಳಿಗೆ ಪ್ರತ್ಯೇಕ ರಾಜ್ಯಪಾಲರುಗಳನ್ನು ನೇಮಿಸುತ್ತಿದ್ದರು. ಬಾರಕೂರು ರಾಜ್ಯದ ರಾಜಧಾನಿಯಾದ ಬಾರಕೂರು ಸೀತಾನದಿಯ ಉತ್ತರ ಭಾಗಕ್ಕೆ ಇರುವ ಒಂದು ಪ್ರಮುಖ ಬಂದರು. ಅದೇ ಸೀತಾನದಿಯ ದಕ್ಷಿಣಕ್ಕೆ ಇರುವ ಗ್ರಾಮ ಹಂದಾಡಿ. ಈ ಊರು ಇತಿಹಾಸ ಕಾಲದಲ್ಲಿ ಅನೇಕ ಚಟುವಟಿಕೆಗಳ ಕೇಂದ್ರವಾಗಿತ್ತು. ಅಲ್ಲಿನ ಪ್ರಮುಖ ದೇವಾಲಯ ಹೆಗ್ಗಡೆ ದೇವಸ್ಥಾನ ಅಥವಾ ಹೆಗ್ಗಡೆ ಗೋಪಾಲಕೃಷ್ಣ ದೇವಸ್ಥಾನ. ಈ ದೇವಸ್ಥಾನದಲ್ಲಿ ವಿಜಯನಗರ ಕಾಲದ ಮೂರು ಶಿಲಾಶಾಸನಗಳಿವೆ.[1] ಈ ಶಾಸನಗಳು ಪ್ರಕಟವಾಗಿದ್ದರೂ ಅವುಗಳ ವಿವರವಾದ ಅಧ್ಯಯನ ಆಗಿಲ್ಲ. ಹಾಗಾಗಿ ಈ ಶಾಸನಗಳಲ್ಲಿ ಕಂಡು ಬರುವ ಪ್ರತಿಯೊಂದು ಅಂಶದ ವಿವರವಾದ ಅಧ್ಯಯನ ಈ ಪ್ರಬಂಧದ ಉದ್ದೇಶ.

ಮೊದಲನೆಯ ಶಾಸನ[2] ವಿಜಯನಗರ ಸಾಳುವವಂಶದ ದೊರೆ ಇಮ್ಮಡಿ ನರಸಿಂಹನದ್ದು. ಇದು 33 ಸಾಲುಗಳನ್ನೊಳಗೊಂಡಿದ್ದು ಅದರ ತೇದಿ ಶಕ ವರ್ಷ 1414 ಸಂದು ವರ್ತಮಾನ ಪರಿಧಾವಿ ಸಂವತ್ಸರದ ವೈಶಾಖ ಶುದ್ಧ 15 ಎಂದರೆ ಕ್ರಿ.ಶ. 1492 ಮೇ. 11. ಇಮ್ಮಡಿ ನರಸಿಂಹನ ಆಳ್ವಿಕೆಯ ಕೆಲವೇ ಶಾಸನಗಳಲ್ಲಿ ಒಂದು. ರಾಜನ ಬಗ್ಗೆ ಹೇಳುವಾಗ ಶ್ರೀ ಮನ್ಮಹಾಮಂಡಳೇಶ್ವರ, ಮೇಧಿನಿ ಮಿಸರಗಂಡ, ಕಠಾರಿ ಸಾಳುವ ನರಸಿಂಹ್ವರಾಯ ಮಹಾರಾಯರ ಕುಮಾರ ಯಿಮ್ಮಡಿ ನರಸಿಂಹ್ವ ಮಹಾರಾಯ ಎಂದು ನಮೂದಿಸಲಾಗಿದೆ. ಆಗ ಬಾರಕೂರು ರಾಜ್ಯವನ್ನು ಹೊನಕಳಸ ರಾಯ ಆಳುತ್ತಿದ್ದ. ಅವನು ತ್ರಿಯಂಬಕರಾಯನ ಮಗ. ತ್ರಿಯಂಬಕ ರಾಯನು ರಾಜವಂಶಕ್ಕೆ ಸೇರಿದವನಾಗಿರಬೇಕೆಂಬುದು ಅವನಿಗೆ ನೀಡಿರುವ ಬಿರುದಿನಿಂದ ಸ್ಪಷ್ಟವಾಗುತ್ತದೆ. ಅವನನ್ನು ಶ್ರೀ ಮನ್ಮಹಾರಾಜಾಧಿರಾಜ ರಾಜ ಪರಮೇಶ್ವರ ಶ್ರೀ ವೀರ ವೀರ ಪ್ರತಾಪ ತ್ರಿಯಂಬಕರಾಯ ಎಂದು ಕರೆಯಲಾಗಿದೆ. ಅಲ್ಲದೆ ಕ್ರಿ.ಶ. 1492ರ ಕೋಟೇಶ್ವರ ಶಾಸನವೂ ಹೊನ್ನಕಳಸರಾಯನಿಗೆ ಮಹಾ ರಾಜಾಧಿರಾಜ ರಾಜಪರಮೇಶ್ವರ ಮತ್ತು

ವೀರಪ್ರತಾಪ ಬಿರುದುಗಳಿದ್ದುದಾಗಿ ತಿಳಿಸುತ್ತದೆ [3] ಹಾಗಾಗಿ ಡಾ.ಕೆ.ವಿ. ರಮೇಶ [4] ಹಾಗೂ ಡಾ.ಬಿ. ವಸಂತ ಶೆಟ್ಟಿ ತಿಳಿಸಿರುವಂತೆ [5] ಅವನು ಸಾಳುವ ವಂಶದ ಒಬ್ಬ ಪ್ರಮುಖ ಸದಸ್ಯ ಎಂಬುದಕ್ಕೆ ಎರಡು ಮಾತಿಲ್ಲ. ಆ ಸಂದರ್ಭದಲ್ಲಿ ತುಳುನಾಡಿನಲ್ಲಿ ರಾಜಕೀಯ ಅನಿಶ್ಚಿತತೆ ಉಂಟಾಗಿ ಮಂಗಳೂರು ರಾಜ್ಯ ಅವರ ಹಿಡಿತದಲ್ಲಿರಲಿಲ್ಲ. ಹಾಗಾಗಿ ಬಾರಕೂರು ರಾಜ್ಯವನ್ನು ತಮ್ಮ ಹಿಡಿತದಲ್ಲಿ ಉಳಿಸಿಕೊಳ್ಳಬೇಕು ಎಂಬ ದೂರದೃಷ್ಟಿಯಿಂದ ರಾಜವಂಶದ ಒಬ್ಬನನ್ನು ರಾಜ್ಯಪಾಲರಾಗಿ ನೇಮಿಸಿರುವ ಸಾಧ್ಯತೆ ಇದೆ. ಅವನು ಕ್ರಿ.ಶ. 1498ರ ವರೆಗೆ ಆ ಹುದ್ದೆಯಲ್ಲಿ ಮುಂದುವರಿದ ಬಗ್ಗೆ ಶಾಸನಿಕ ದಾಖಲೆಗಳಿವೆ. [6]

ಹೊನ್ನಕಳಸ ರಾಯನ ಆಳ್ವಿಕೆ ಕಾಲದಲ್ಲಿ ಬ್ರಹ್ಮಾವರ ಮೂಡಭಾಗದ ಹಂದಾಡಿಯ ಅಧಿವಾಸದಲ್ಲಿ ಬಾರಕೂರು ಕೋಟೆಕೇರಿಯ ಮಾಬು ಸೆಟ್ಟಿಯ ಬಳಿಯ ಹೊಸ ಬಂಣ ಸೆಟ್ಟಿಯ ಅಳಿಯ ಸಂಕು ಹೆಗ್ಗಡೆ ಪ್ರತಿಷ್ಟೆ ಮಾಡಿದ ಶ್ರೀ ಗೋಪಿನಾಥ ದೇವರಿಗೆ ದಿನಚರಿ ನಡೆವ ಹಾಗೆ ಶ್ರೀ ಬಲಿಯ ಖರ್ಚಿಗಾಗಿ 200 ಗದ್ಯಾಣಗಳನ್ನು ನೀಡಿದ ವಿವರ ಶಾಸನದಲ್ಲಿದೆ. ಈ 200 ಗದ್ಯಾಣಗಳ ಆದ್ಯಾಯವು ಬ್ರಹ್ಮಾವರದ ಬೇರೆ ಬೇರೆ ಭಾಗಗಳಾದ ಬೆಂಣೆಕುದುರು, ಮಡಪಾಡಿ ಮುಂತಾದ ಪ್ರದೇಶಗಳಿಂದ ಬರುವಂತಾದ್ದು ಎಂದು ವಿಧಿಸಲಾಗಿದೆ. ಈ ಶಾಸನದ ಪ್ರಕಾರ ದೇವಸ್ಥಾನದ ಸ್ಥಾಪಕ ಸಂಕು ಹೆಗ್ಗಡೆಗೆ ಹಂದಾಡಿಯ ಬೆಂಣೆಕುದುರಿನಲ್ಲಿ ಭೂಮಿಯಿದ್ದು, ಅದರ ಕಂದಾಯ ದಲ್ಲಿ 80 ಕಾಟಿ ಗದ್ಯಾಣ ದೇವಾಲಯಕ್ಕೆ ಹೋಗಬೇಕೆಂದು ತಿಳಿಸಲಾಗಿದೆ.

ಈ ಶಾಸನದಿಂದ ಅನೇಕ ವಿಷಯಗಳು ತಿಳಿದು ಬರುತ್ತದೆ.

(1) ಅನೇಕ ದೇವಸ್ಥಾನಗಳಲ್ಲಿ ಶಾಸನಗಳು ಸಿಗುತ್ತವೆ. ಆದರೆ ದೇವಾಲಯದ ಸ್ಥಾಪನೆಯ ಬಗ್ಗೆ ಹೇಳುವ ಶಾಸನಗಳು ತುಳುನಾಡಿನಲ್ಲಿ ಬೆರಳೆಣಿಕೆಯಷ್ಟು ಮಾತ್ರ ಇವೆ. ಇತರ ಶಾಸನಗಳಲ್ಲಿ ಬೇರೆ ಅನೇಕ ವಿವರಗಳಿದ್ದರೂ ಸ್ಥಾಪಕನ ಬಗ್ಗೆ ಮೌನ ತಾಳಿವೆ. ಆದರೆ ಈ ಶಾಸನ ದೇವಸ್ಥಾನದ ನಿರ್ಮಾಣದ ಬಗ್ಗೆ, ನಿರ್ಮಾಣದ ದಿನಾಂಕದ ಬಗ್ಗೆ ಸಾಕಷ್ಟು ವಿವರ ನೀಡುತ್ತವೆ.

(2) ಕ್ರಿ.ಶ. 1492ರ ಕಾಲಕ್ಕೆ ಬೆಂಣೆಕುದುರು (ಸುತ್ತಲೂ ನೀರಿನಿಂದ ಆವೃತವಾದ್ದರಿಂದ ಅದನ್ನು ಕುದುರು ಎಂದು ಕರೆಯುತ್ತಾರೆ) ಹಂದಾಡಿಯ ಭಾಗವಾಗಿತ್ತು. ಈಗಲೂ ಹಂದಾಡಿ ಗ್ರಾಮದ ಭಾಗವಾಗಿಯೇ ಮುಂದುವರಿಯುತ್ತಿದೆ.

(3) ಸ್ಥಾಪಕ ಸಂಕು ಹೆಗ್ಗಡೆ ಅಳಿಯ ಸಂತಾನ ಪದ್ಧತಿಯನ್ನು ಅನುಸರಿಸುವ ನಾಡವ ಜಾತಿಗೆ ಸೇರಿದ್ದವನು ಎಂಬುದು, ಅವರನ್ನು ಹೊಸಬಂಣ ಸೆಟ್ಟಿಯ ಅಳಿಯ ಸಂಕುಹೆಗ್ಗಡೆ ಎಂದು ಸಂಭೋದಿಸಿರುವುದರಿಂದ ಸ್ಪಷ್ಟವಾಗುತ್ತದೆ.

(4) ಹಿಂದೆ ಹಂದಾಡಿ ಮತ್ತು ಬಾರಕೂರಿನ ಕೋಟೆಕೇರಿ ಮಧ್ಯೆ ನಿಕಟ ಸಂಪರ್ಕ ವಿತ್ತೆನ್ನುವುದು ಅನೇಕ ಇತರ ಆಧಾರಗಳಿಂದ ಸಾಬೀತಾಗಿದೆ. ಅಲ್ಲಿನ ಮುಖ್ಯ ದೇವಾಲಯಗಳಲ್ಲಿ ಹಂದಾಡಿಯ ನಾಡವರಿಗೆ ವಿಶೇಷ ಸಂದರ್ಭಗಳಲ್ಲಿ ಈಗಲೂ ಮರ್ಯಾದೆ ಸಲ್ಲುತ್ತಿದೆ. ಹಂದಾಡಿಯ ಪ್ರಮುಖ ನಾಡವ ಮನೆತನದವರು (ನಾಲ್ಕು ಮನೆಯವರು) ಹೊಂದಿರುವ ಸಂಬಂಧಕ್ಕೂ ಐತಿಹಾಸಿಕ ಹಿನ್ನಲೆಯಿದೆ. ಪ್ರಾಯಶಃ ಸಂಕು ಹೆಗ್ಗಡೆ ಬಾರಕೂರಿನಲ್ಲಿ ಒಬ್ಬ ಪ್ರಭಾವಿ ಅಧಿಕಾರಿಯಾಗಿರಬೇಕು.

(5) ಆಗ ಬ್ರಹ್ಮಾವರ ಗ್ರಾಮದ ಪಡುಭಾಗದ ಗ್ರಾಮಿಣಿ ವಿಷ್ಣು ಒರಂಬಳ್ಳಿಯೆಂದೂ ಮೂಡುಭಾಗದ ಗ್ರಾಮಿಣಿಗಳು ಉಂಗುರಪಳ್ಳಿ ಮನೆತನದವರೆಂಬುದು ಸ್ಪಷ್ಟ. ಅಲ್ಲಿ ಸ್ಥಳೀಯ ಆಡಳಿತ ವಿಭಾಗಗಳನ್ನು ಹಾಗೂ ಸ್ಥಳೀಯ ಅಧಿಕಾರಿಗಳ ಬಗ್ಗೆ ತಿಳಿಯಲು ಸಾಧ್ಯ. ಬ್ರಹ್ಮಾವರವನ್ನು ವಿಜಯನಗರ ಕಾಲದಲ್ಲಿ ಮೂಡು ಮತ್ತು ಪಡು ಎಂಬ ಎರಡು ವಿಭಾಗಗಳನ್ನಾಗಿ ಮಾಡಿದ್ದರೆಂಬುದು ಶಾಸನದಿಂದ ತಿಳಿದು ಬರುತ್ತದೆ. ಅಲ್ಲದೆ ಗ್ರಾಮಿಣಿ ಎನ್ನುವ ಸ್ಥಳೀಯ ಅಧಿಕಾರಿಯನ್ನು ಶಾಸನ ಹೆಸರಿಸುತ್ತದೆ. ಗ್ರಾಮಿಣಿ ವಿಜಯನಗರ ಕಾಲಕ್ಕೆ ಹೆಚ್ಚು ಪ್ರಭಾವಶಾಲಿಯಾಗಿ ಕಂಡು ಬರುವುದು, ಹೆಚ್ಚಿನ ಶಾಸನಗಳಲ್ಲಿ ಅವನಿಗಿರುವ ಪ್ರಸ್ತಾಪದಿಂದ ಸ್ಪಷ್ಟ. ಅವರು ಭೂ ಮಾಲಿಕರೂ ಆಗಿದ್ದರು. ಅವರು ಎಷ್ಟು ಪ್ರಭಾವಶಾಲಿಗಳಾಗಿದ್ದರೆಂದರೆ, ಗ್ರಾಮಿಣಿಗಳಾಗಿದ್ದ ವಾರಂಬಳ್ಳಿಗಳಿಂದ ಗ್ರಾಮಕ್ಕೆ ವಾರಂಬಳ್ಳಿ ಎಂಬ ಹೆಸರು ಬಂದಿದೆ. [7] ಬ್ರಹ್ಮಾವರ, ಬಾರಕೂರಿನ ಶಾಸನಗಳು ಅವರು ಹೊಂದಿದ್ದ ಕೆಲವು ಸವಲತ್ತುಗಳನ್ನು ಹಾಗೂ ರಾಜ್ಯಪಾಲರುಗಳಿಂದ ಅವುಗಳಿಗೆ ತೊಂದರೆ ಉಂಟಾದಾಗ, ರಾಜರಿಗೆ ದೂರಿತ್ತು ಪರಿಹಾರ ಪಡೆದದ್ದನ್ನು ತಿಳಿಸುತ್ತವೆ. [8] ಇಲ್ಲಿ ಹೇಳಿರುವ ಮಧ್ಯಸ್ಥ ಇನ್ನೊಬ್ಬ ಮುಖ್ಯ ಅಧಿಕಾರಿ.[9]

ಈ ರೀತಿ ಸಂಕು ಹೆಗ್ಗಡೆಯಿಂದ ಸ್ಥಾಪಿಸಲ್ಪಟ್ಟ ದೇವಸ್ಥಾನ ಮುಂದಿನ ರಾಜ್ಯಪಾಲರುಗಳಿಂದ ಹಾಗೂ ಸಂಕು ಹೆಗ್ಗಡೆಯ ಕುಟುಂಬದವರಿಂದ ದಾನ ಧರ್ಮಗಳನ್ನು ಪಡೆಯಿತು. ಹಾಗಾಗಿ ಅದು ಅಂದು ಪ್ರಮುಖ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕೇಂದ್ರವಾಯಿತು. ಶಕವರ್ಷ 1464 ರಂದು ಐದನೆಯ ವೆಂಕಟಾದ್ರಿರಾಯನ ಒಂದು ಶಾಸನ ಇದಕ್ಕೆ ಮೊದಲ ಉದಾಹರಣೆ. [10] ಈ ಶಾಸನ ವೆಂಕಟಾದ್ರಿ ರಾಯರು ವಿಜಯ ನಗರದ ಅರಸನಾಗಿದ್ದಾಗ ಬಾರಕೂರು ರಾಜ್ಯವನ್ನು ಅಚ್ಚಪ್ಪ ಒಡೆಯ ಆಳುತ್ತಿದ್ದ. ಆಗ ಸಂಕು ಹೆಗ್ಗಡೆ ಕಟ್ಟಿಸಿದ ದೇವಾಲಯದಲ್ಲಿ, ಮಾಬು ಸೆಟ್ಟಿಯ ಬಳಿಯ ಯೀಸರ ಹಡುವಳನ ತಂಮ ಅಂಣು ಹಡುವಳನು ಮಠವನ್ನು ಸ್ಥಾಪಿಸಿ, ನೀಡಿದ ದಾನವನ್ನು ಶಾಸನ ತಿಳಿಸುತ್ತದೆ. ಗ್ರಾಮದವರ ಒಪ್ಪಿಗೆಯಿಂದ ದಾನ ನೀಡಲಾಯಿತೆಂದೂ ಶಾಸನದಲ್ಲಿದೆ. ಅದು ಅಂಣು ಹಡುವಳನು ಮಾಬುಸೆಟ್ಟಿಯ ಮನೆತನದವನೆಂದು ತಿಳಿಸುವುದರಿಂದ, ಅವನು

ಮತ್ತು ಸಂಕು ಹೆಗ್ಗಡೆ ಒಂದೇ ಕುಟುಂಬಕ್ಕೆ ಸೇರಿದವರು ಎನ್ನುವುದು ಖಚಿತ. ಈ ಶಾಸನ ದಾನ ಶಾಸನವಾಗಿದ್ದು ಇದರಿಂದ ಆ ಕಾಲದ ವ್ಯವಸಾಯ ಹಾಗೂ ಆರ್ಥಿಕ ವ್ಯವಸ್ಥೆಗೆ ಸಂಬಂಧಿಸಿ ಅನೇಕ ವಿಷಯಗಳನ್ನು ತಿಳಿದು ಕೊಳ್ಳಲು ಸಾಧ್ಯ.

(1) ದಾನ ನೀಡಿದ ಭೂಮಿಯ ಬಗ್ಗೆ ಹೇಳುವಾಗ ತಾನು ಬದ್ಧ ಬ್ರಹ್ಮಾದಾಯದ ಮೂಲದ ಬಾಳು ಎನ್ನುವಲ್ಲಿ, ಅವನು ಬ್ರಹ್ಮದಾಯ ಭೂಮಿಯನ್ನು ಹೊಂದಿದ್ದ ವಿಷಯ ತಿಳಿಯುತ್ತದೆ. ಬ್ರಹ್ಮಣನಲ್ಲದವನಾಗಿ, ಅವನು ಅದನ್ನು ಹೊಂದಿರುವುದು, ಅನೇಕ ಇತರ ಶಾಸನಗಳಲ್ಲಿ ವ್ಯಕ್ತವಾಗಿರುವಂತೆ ಬ್ರಹ್ಮಾದಾಯ ಭೂಮಿ ವರ್ಗಾವಣೆ ಯಾಗಿರುವುದಕ್ಕೆ ಉಧಾಹರಣೆಯಾಗಿದೆ.[11]

(2) ಭಂಡಾರಿತಿಯ ಬಗೆ ಎಂಬ ಉಲ್ಲೇಖ ಗಮನಾರ್ಹ. ಹೆಂಗಸರು ವಿಜಯನಗರ ಕಾಲದಲ್ಲಿ ಭೂ ಮಾಲಕಿಯರಾಗಿ ಕಂಡು ಬರುತ್ತಾರೆ. ಇದು ಅಳಿಯ ಸಂತಾನ ಪದ್ಧತಿಯ ಪ್ರಭಾವದಿಂದ ಇರಬಹುದು. ಯಾಕೆಂದರೆ ಭೂ ಮಾಲಕಿಯರಾಗಿ ಕಂಡು ಬರುವವರು ಅಳಿಯ ಸಂತಾನ ಪದ್ಧತಿಯನ್ನು ಒಪ್ಪಿಕೊಂಡಿದ್ದ ಜನವರ್ಗಕ್ಕೆ ಸೇರಿದವರು.

(3) ಚೋಳಿಕೇರಿಯ ಬಸ್ತಿಯ ಗಡಿ - ಬಾರಕೂರಿನ ಹತ್ತು ಕೇರಿಗಳಲ್ಲಿ ಒಂದಾದ ಚೋಳಿಕೇರಿಯ ಬಸದಿಯ ಅಸ್ತಿತ್ವವನ್ನು ಇದು ದೃಢೀಕರಿಸುತ್ತದೆ.

(4) ಆಗಿನ ಗೇಣಿ ಎಷ್ಟಿತ್ತು ಎನ್ನುವುದನ್ನು ಈ ಶಾಸನದಿಂದ ತಿಳಿದುಕೊಳ್ಳ ಬಹುದು. ಇಲ್ಲಿ ಸಿಗುವ ಉದಾಹರಣೆಗಳು.

i. ಬಿತ್ತುವ ಮೂಡೆ 2ಕ್ಕೆ ಗೇಣಿ ಮು 8

ii. ಒಂದು ಮೂಡೆ ಗದ್ದೆಗೆ 4 ಮೂಡೆ ಗೇಣಿ.

iii. ಬಿತ್ತುವ ಮೂಡೆ 6ಕ್ಕೆ ಗೇಣಿ ಮು. 30

iv. ಬಿತ್ತುವ ಮು 6 ಗೇಣಿ ಮು 15

v. ಬಿತ್ತುವ ಮು 2ಕ್ಕೆ ಗೇಣಿ ಮು 8

vi. ಬಿತ್ತುವ ಮು 1ಕೆ ಗೇಣಿ ಮು 4

vii. ಮು 2ಕ್ಕೆ ಗೇಣಿ ಮು 10.

ಇಲ್ಲಿ ಒಂದು ಉದಾಹರಣೆಯನ್ನು ಬಿಟ್ಟರೆ ಉಳಿದಂತೆ ಸಾಮಾನ್ಯವಾಗಿ 1 ಮೂಡೆ ಗದ್ದೆಗೆ ಕೆಲವೊಮ್ಮೆ 4 ಮತ್ತು ಕೆಲವು ಸಂದರ್ಭಗಳಲ್ಲಿ 5 ಮೂಡೆ ಗೇಣಿ ಸಂಗ್ರಹಿಸುತ್ತಿದ್ದ ಉದಾಹರಣೆ ಇದೆ. ಇಲ್ಲಿ ಭೂಮಿಯ ಫಲವತ್ತತೆ ಮತ್ತು ಕೃಷಿಗೆ ಅನುಕೂಲಕರ ಸನ್ನಿ ವೇಶ ಗೇಣಿಯ ನಿರ್ಧಾರದಲ್ಲಿ ಪ್ರಭಾವ ಬೀರುತ್ತಿತ್ತು. 1 ಮೂಡೆ ಗದ್ದೆಗೆ 4 ಮುಡಿ ಗೇಣಿ ಸಂಗ್ರಹಿಸುವಲ್ಲಿ ಬೆಟ್ಟು ಮಣ್ಣಿನ ಉಲ್ಲೇಖ ಹಾಗೂ 1 ಮೂಡೆ ಗದ್ದೆಗೆ 5ಮುಡಿ

ಗೇಣಿ ಸಂಗ್ರಹಿಸುವಲ್ಲಿ ಹರಿವ ತೋಡಿನ ಉಲ್ಲೇಖ ಬರುವುದು, ಗೇಣಿಯ ದರದಲ್ಲಿನ ವ್ಯತ್ಯಾಸವನ್ನು ಗ್ರಹಿಸುವಲ್ಲಿ ಸಹಕಾರಿಯಾಗಿದೆ.

(5) ವೈಯಕ್ತಿಕ ಭೂ ಒಡೆತನ ಮತ್ತು ಬೆಳೆಯುತ್ತಿದ್ದ ಬೆಳೆಗಳ (ಉದ್ವನಗದ್ದೆ) ಉಲ್ಲೇಖ ಈ ಶಾಸನದಲ್ಲಿದೆ.

(6) ಈ ಶಾಸನದಲ್ಲಿ ಕಂಡು ಬರುವ ತೆಟು ಎನ್ನುವುದು ತೆರಿಗೆಯ ಉಲ್ಲೇಖ. ತುಳುನಾಡಿನ ಹೆಚ್ಚಿನ ವಿಜಯನಗರ ಶಾಸನಗಳಲ್ಲಿ ಇದರ ಉಲ್ಲೇಖ ಕಂಡು ಬರುವುದರಿಂದ, ಅದು ಬಹಳ ಪ್ರಚಾರದಲ್ಲಿದ್ದ ತೆರಿಗೆ ಎಂಬುದು ಖಚಿತ. ಆದರೆ ಅದರ ದರ ಎಷ್ಟು ಎಂಬುದು ಸ್ಪಷ್ಟವಾಗುವುದಿಲ್ಲ. ಅದು ಪ್ರದೇಶದಿಂದ ಪ್ರದೇಶಕ್ಕೆ, ಕಾಲದಿಂದ ಕಾಲಕ್ಕೆ, ವ್ಯತ್ಯಾಸವಾಗುತ್ತಿತ್ತು. ಅದನ್ನು ಎರಡು ರೀತಿಯಲ್ಲಿ ನಿಗದಿ ಪಡಿಸುತ್ತಿದ್ದರು. (i) ಬಿತ್ತುವ ಬೀಜದ ಆಧಾರದ ಮೇಲೆ (ii) ಭೂಮಿಯಿಂದ ಬರತಕ್ಕ ಗೇಣಿಯ ಆಧಾರದ ಮೇಲೆ.

(7) ಹಲರು - ವ್ಯಾಪಾರಿ ಸಂಘ. ಅವರು ಭೂಮಾಲಕರಾಗಿದ್ದರು

(8) ಆರುವಾರ

ಆರುವಾರ ವಿಜಯನಗರ ಕಾಲದಲ್ಲಿ ಬಹಳ ಮುಖ್ಯವಾದ ಭೂ ಅಡವು ಪದ್ಧತಿ. ಕಿಟ್ಟಲ್ ಪ್ರಕಾರ ಇದೊಂದು ಭೂಮಿಯನ್ನು ವಶದಲ್ಲಿಟ್ಟುಕೊಂಡು ಅಡವು ಮಾಡುವುದು [12] ಮದ್ರಾಸ್ ಡಿಸ್ಟ್ರಿಕ್ಟ್ ಮ್ಯಾನುವೆಲ್‌ನಲ್ಲಿ ಸಹ ಇದೇ ಅಭಿಪ್ರಾಯವಿದೆ.[13] ಇನ್ನೊಂದು ಅಭಿಪ್ರಾಯ ಈ ಭೂ ಅಡವು ಪದ್ಧತಿಯಲ್ಲಿ ಯಾರಲ್ಲಿ ಭೂಮಿ ಅಡವು ಹಾಕಲಾಗಿದೆಯೋ ಅವನಿಗೆ ಭೂಮಿಯನ್ನು ಹಸ್ತಾಂತರಿಸಲಾಗುತ್ತಿತ್ತು. ಶಾಸನದ ಪ್ರಕಾರ ಆರು ವಾರದಲ್ಲಿ ಹಣ ಕೊಟ್ಟವನಿಗೆ ಭೂಮಿಯನ್ನು ಹಸ್ತಾಂತರಿಸಲಾಗುತ್ತಿತ್ತು.[14] ಹಾಗಾಗಿ ಕೊಟ್ಟ ಹಣಕ್ಕೆ ಪೂರ್ಣ ಭದ್ರತೆ ಇತ್ತು. ಇದು ಭೂ ಅಡವು ಪದ್ಧತಿ. ಡಾ.ಕೆ.ವಿ. ರಮೇಶ ಹೇಳುವಂತೆ ತೆರಿಗೆ ಅಲ್ಲ.[15] ಹೆಚ್ಚಿನ ಸಂದರ್ಭದಲ್ಲಿ ಬಡ್ಡಿ ಇಲ್ಲ, ಆದರೆ ಕೆಲವು ಸಂದರ್ಭಗಳಲ್ಲಿ ಬಡ್ಡಿ ತೆಗೆದುಕೊಂಡ ಉದಾಹರಣೆಗಳಿವೆ.

ಇನ್ನೊಂದು ಶಾಸನ ಅದೇ ವರ್ಷದಲ್ಲಿ ಬರಸಿದ್ದು.[16] ಅದು ಸಹ ವೆಂಕಟಾದ್ರಿ ರಾಯ ಹಾಗೂ ಅಚ್ಚಪ್ಪ ಒಡೆಯರನ್ನು ಕ್ರಮವಾಗಿ ರಾಜ ಹಾಗೂ ರಾಜ್ಯಪಾಲರಾಗಿ ಹೆಸರಿಸುತ್ತದೆ. ಸೂರ್ಯಗ್ರಹಣದಂದು ಬ್ರಂಹರ ಗ್ರಾಮದ ಹಂದಾಡಿ ಅಧಿವಾಸದಲ್ಲಿ ಕೋಟೆಕೇರಿಯ ಮಾಬುಸೆಟ್ಟಿ ಬಳಿಯ ಸಂಕು ಹೆಗ್ಗಡೆ ಕಟ್ಟಿಸಿದ ದೇವಾಲಯದಲ್ಲಿ ಸ್ಥಾಪಿಸಿದ ಎರಡು ಮಠದಲ್ಲಿ ದೇವರ ಪೂಜೆಗಾಗಿ ಸಂಕು ಹೆಗ್ಗಡೆ ಮನೆತನದ ಶಂಕರಲಿಂಗ ಶೆಟ್ಟಿ ಭೂಮಿಯನ್ನು ದಾನವಾಗಿ ಇತ್ತನೆಂಬುದು ಈ ಶಾಸನದಲ್ಲಿದೆ. ಈ ಶಾಸನವೂ ಮಹಿಳೆಯ ಭೂ ಮಾಲಕತ್ವ, ವೈಯಕ್ತಿಕ ಭೂ ಮಾಲಕತ್ವ ಅಧಿಕಾರಿಯ ಭೂ ಒಡೆತನ

ಮುಂತಾದ ವಿಷಯಗಳ ಬಗ್ಗೆ ತಿಳಿಸುತ್ತದೆ. ಅಲ್ಲದೆ ಇದರಲ್ಲಿ ತಿಳಿಸಲಾಗಿರುವ, ಕಂಮಾಱ ಮಾಳ ಬಿತ್ತುವ ಗದ್ದೆ ಎಂಬುದು ಕಂಮಾರನ ಭೂ ಮಾಲಕತ್ವವನ್ನು ಉಲ್ಲೇಖಿಸುತ್ತಾರೆ. ಅದರೊಂದಿಗೆ ಹಂದಾಡಿ ಕೊಳಕೆ ಗದ್ದೆಯ ಉಲ್ಲೇಖ ಮೂರನೆಯ ಬೆಳೆಯ ಬಗ್ಗೆ ತಿಳಿಸುತ್ತದೆ. ಈ ಶಾಸನ ದೇವರ ಪೂಜೆಗೆ ದಾನ ನೀಡಿದ್ದು ಮಾತ್ರವಲ್ಲ ಉಂಬ ಬ್ರಾಹ್ಮಣ ಜನ 24 ಕೆ ಖಜಾಯ ಪಾಯಸ ಶನಿವಾರ ಯೆಂಣೆ ಯಿಷ್ಟೂ ಆ ಚಂದ್ರಾರ್ಕವಾಗಿ ನಡೆವಂತೆ ವ್ಯವಸ್ಥೆ ಮಾಡಿದ್ದನ್ನು ತಿಳಿಸುತ್ತದೆ. ಹೆಣ್ಣು ಗಂಡು ಸಮಸ್ತರೂ ಒಪ್ಪಿ ದಾನ ಎಂಬುದಾಗಿಯೂ ಹೇಳಲಾಗಿದೆ.

ಈ ಶಾಸನಗಳಿಂದ ಆಗಿನ ಕಾಲದ ಆರ್ಥಿಕ ವ್ಯವಸ್ಥೆ, ಸಾಮಾಜಿಕ ಸ್ಥಿತಿಗತಿ, ಅಲ್ಲದೆ ಹಿಂದೆ ಹೆಗ್ಗಡೆ ದೇವಸ್ಥಾನ ಯಾವ ರೀತಿಯಲ್ಲಿ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕೇಂದ್ರವಾಗಿ ಪ್ರಸಿದ್ಧಿ ಪಡೆದಿತ್ತು ಎನ್ನುವ ವಿಷಯ ತಿಳಿಯುತ್ತದೆ. ಆದರೆ ಇಂದಿನ ಬದಲಾದ ಪರಿಸ್ಥಿತಿಯಲ್ಲಿ ಈ ದೇವಸ್ಥಾನ ಆರ್ಥಿಕವಾಗಿ ದುರ್ಬಲವಾಗಿದ್ದು ತನ್ನೆಲ್ಲಾ ವೈಭವವನ್ನು ಕಳೆದುಕೊಂಡು ಜೀರ್ಣಾವಸ್ಥೆಯಲ್ಲಿದೆ.

ಟಿಪ್ಪಣಿಗಳು

1. *ದಕ್ಷಿಣ ಭಾರತದ ಶಾಸನಗಳು.,* ಸಂಪುಟ 27. ಶಾ. ಸಂಖ್ಯೆಗಳು. 156, 185, 186.
2. ಅದೇ., ಶಾ.ಸಂಖ್ಯೆ 156.
3. ಬಿ.ವಸಂತ ಶೆಟ್ಟಿ., ಬಾರಕೂರು *(ಎ ಮೆಟ್ರೋಪೊಲಿಟನ್ ಸಿಟಿ ಆಫ್ ಆಂಟಿಕ್ವಿಟಿ, ಇಟ್ಸ್ ಹಿಸ್ಟರಿ ಎಂಡ್ ಕಲ್ಚರ್)* ಅಪ್ರಕಟಿತ ಪಿಎಚ್.ಡಿ. ಪ್ರಬಂಧ (ಮೈಸೂರು 1984) ಪು. 210.
4. ಕೆ.ವಿ. ರಮೇಶ *ಎ ಹಿಸ್ಟರಿ ಆಫ್ ಸೌತ್ ಕೆನರಾ.* (ಧಾರವಾಡ 1970) ಪು 205
5. ಬಿ. ವಸಂತ ಶೆಟ್ಟಿ. *ಪೂರ್ವೋಕ್ತ* ಪು. 210
6. ಅದೇ., ಪು. 211.
7. ಬಿ. ವಸಂತ ಶೆಟ್ಟಿ. *ಬ್ರಹ್ಮಾವರದ ಇತಿಹಾಸ* (ಬ್ರಹ್ಮಾವರ 1988) ಪುಟಗಳು. 50-52
8. ಅದೇ., ಪುಟ. 47-50
9. ಬಿ. ಜಗದೀಶ ಶೆಟ್ಟಿ. *ದಿ ಆಗ್ರೊ ಇಕಾನಮಿಕ್ ರಿಲೇಶನ್ಸ್ ಆಂಡ್ ಸೋಶಿಯಲ್ ಸ್ಟ್ರಕ್ಚರ್ ಇನ್ ದಕ್ಷಿಣ ಕನ್ನಡ ಕ್ರಿ.ಶ. 1000-1600.* ಅಪ್ರಕಟಿತ ಪಿಎಚ್.ಡಿ. ಪ್ರಬಂಧ. (ಮಂಗಳೂರು 1992) ಪು. 103
10. ದಕ್ಷಿಣ ಭಾರತದ ಶಾಸನಗಳು ಸಂಪುಟ 27. ಶಾಸನ ಸಂಖ್ಯೆ 186
11. ಬಿ. ಜಗದೀಶ ಶೆಟ್ಟಿ. *ಪೂರ್ವೋಕ್ತ.* ಪುಟಗಳು 112-113

12. *ಕಿಟ್ಟೆಲ್ ಕನ್ನಡ ಇಂಗ್ಲೀಷ್ ಡಿಕ್ಷನರಿ.* ಸಂಪುಟ 1 (ಮದ್ರಾಸ್ 1968) ಪುಟ. 168

13. ಜೆ.ಸ್ಟರಕ್. *ಮದ್ರಾಸ್ ಡಿಸ್ಟ್ರಿಕ್ಟ್ ಮ್ಯಾನುವಲ್ಸ್. ಸೌತ್ ಕೆನರಾ.* ಸಂಪುಟ 1 (ಮದ್ರಾಸ್ 1894) ಪು. 130

14. ಉಳ್ಳಾಲ ನರಸಿಂಗ ರಾವ್. ಎ. *ಕೆಸಾಮ್‌ವಾರ್ ಗ್ಲೋಸರಿ ಆಫ್ ಕನ್ನಡ ವರ್ಡ್ಸ್* (ದೆಹಲಿ 1985) ಪು. 49

15. ಕೆ.ವಿ. ರಮೇಶ *ಪೂರ್ವೋಕ್ತ* ಪು. 279

16. *ದಕ್ಷಿಣ ಭಾರತದ ಶಾಸನಗಳು.* ಸಂಪುಟ 27. ಶಾಸನ. ಸಂಖ್ಯೆ 185

ಶಾಸನ -1

1. ಶ್ರೀ ಗಣಾಧಿಪತಯೇಂ ನಮಃ [।*] ಶ್ರೀ ಸರಸ್ವತ್ಯೈ ನಮಃ [।*] ಶ್ರೀ ಗುರುಭ್ಯೋ ನಮಃ [।*] ನಿರ್ವಿಘ್ನಮ-

2. ಸ್ತು [।।*] ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ [।*] ತ್ರಯಿಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ[।।*]

3. ಸ್ವಸ್ತಿಶ್ರೀ ಜಯಾದ್ಭುದಯ ಶಾಲಿವಾಹನ ಶಕ ವರ್ಷ ೧೪೧೪ ಸಂದು ವರ್ತಮಾನ ಪರಿ -

4. ಧಾವಿ ಸಂತವ್ಸರದ ವಯಿಶಾಖ ಶು ೧೫ ಶುಲೂ ಶ್ರೀ ಮನ್ಮಹಾ ಮಂಡಳೇಶ್ವರ ಮೇದಿನಿ ಮೀ -

5. ಸರಗಂಡ ಕಠಾರಿಸಾಳುವ ನರಸಿಹ್ವರಾಯರ ಮಹಾರಾಯರ ಕುಮಾರ ಯಿಂಮಡಿ ನರಸಿಹ್ವ -

6. ರಾಯಮಹಾರಾಯರು ವಿಜೆನಗರಿಯ ಸಿಂಹ್ವಾಸನದಲೂ ಸಕಲ ಸಾಂಬ್ರಾಜ್ಯವನಾ

7. ಳುವ ಕಾಲದಲಿ ಶ್ರೀ ಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರಪ್ರತಾತ್ರಿಯಂಬಕ -

8. ರಾಯರಕುಮಾರರು ಹೊಂನಕಳಸರಾಯ ಮಹಾರಾಯರು ಬಾರಕೂರ ರಾಜ್ಯವನಾ

9. ಳುವ ಕಾಲದಲೂ ಬ್ರಂಹ್ಮರ ಗ್ರಾಮುದವೊಳಗೆ ಮೂಡಭಾಗದಲ್ಲಿ ಹಂದಾಡಿಯ ಅಧಿವಾ -

10. ಸದೊಳಗೆ ಕೋಟಿಕೇರಿಯ ಮಾಬುಸೆಟಿಯ ಬಳಿಯ ಹೊಸಬಂಣ ಸೆಟಿಯರ ಅಳಿಯ ಸಂ -

11. ಕುಹೆಗಡೆ ಪ್ರತಿಷ್ಟೆಯ ಮಾಡಿಸಿದ ಶ್ರೀಗೋಪಿನಾಥ ದೇವರ ದಿನಚರಿಯ ನಡವ ಶ್ರೀ ಬಲಿಯ

12. ಧರ್ಮ್ಮಾಕ್ಕೆ ನಾಲು ದೇವರ ಪ್ರತಿಷ್ಠೆಯಾದ ಪುಣ್ಯತಿಥಿಯಲೂ ಸಹಿರಂಣ್ಯೋದಕ ದಾನಧಾರಾ-

13. ಪೂರ್ವಕವಾಗಿ ಆಚಂದ್ರಾರ್ಕಸ್ತಾಯಿಯಾಗಿ ದಿನಚರಿ ಶ್ರೀ ಬಲಿನಡವಹಾಗೆ ಧಾರೆಯ

14. ನೆಱದು ಕೊಟ್ಟ ಗ ೨೦೦ಕ್ಕೆ ವಿವರ ಹಂದಾಡಿಯ ಅಧಿವಾಸದಿಂದ ಬೆಂಣೆಕಾದುರಿಂದ

15. ಸಂಕುಹೆಗ್ಗಡೆ ಬದ್ದಬಾಳು ತೆಱಕಾಟಿ ಗ [೮೦] ರಾಮ ಉಂಗುರ ಪಳಿಯ ಜಂನದ ಬಗೆಯಿ[0*]

16. ದ ಅರಮನೆಗೆ ತೆಱುವ ತೆಱವ ಮು ೪೮।। ಗೆ ಕಾಟಿ ಗ ೪೮।। ಮದಪಾಡಿ ಅರೆಊರ ಭಾ[ಗಿ]ಸ

17. ಸಂಕುಹೆಗ್ಗಡೆ ಬದಬಾಳು ತೆಱ ಕಾಟಿ ಗ ೨೦ ಮಧ್ಯಸ್ತ ಹೊಳನ ಅಪಣೆಯಲೂ ಹಂದಾಡಿಯ

18. ಊರ ಹಾದಿ ಮೊದಲ ಅಪ್ಪಣೆಯಲೂ ಅಂಣ ಉಂಗು[ರ*] ಪಳ್ಳಿ ಅಣ್ಣೆಯಿಂದ ಅಬ್ಬುಬೇ -

19. ಹಾದಿ ಬಗೆಯ ಹೊಂನು ಸಹ ಆ ಮನೆಗೆ ತೆಱ ಉಡು ನಾನಾ ಬಗೆಊ ಕಾಟಿ ಗ ೨೬ ।। ಆ[0*]

20. ತ್ತೂ ನಾನಾ ಬಗೆಯಿಂದ ಹಂದಾಡಿಯ ಅಧಿ [ವಾ*]ಸದಿಂದ ಅರಮನೆಗೆ ತೆಱುವ ಕಾಟಿಗ ೧೭೫ ಮ-

21. ತ್ತಂ ಪಡುವ ಭಾಗಿಯ ವೊಳಗೆ ಗ್ರಾಮಣಿ ವಿಷ್ಣುವೊರಂಬಳಿಯಿಂದ ತಂನೆ ಹದಿಮೊದ-

22. ಲಿಂದ ಅರಮನೆಗೆ ತೆಱುವ ಸಿದ್ಧಾಯದ ಹೊಂನಿನ ವೊಳಗೆ ಶ್ರೀ ಗೋಪಿನಾಥ ದೇವರಿಗೆ ಧಾರೆ-

23. ಯನೆಱದು ಕಾಟಿ ಗ ೨೫ ಉಭಯಂ ನಾನಾ ಬಗೆಊ ಕಾಟಿ ಗ ೨೪೦ ಅಕ್ಷರದಲೂ ಕಾಟಿ -

24. ಗದ್ಯಾಣ ಯಿಂನೂಱ ಹೊಂನನೂ ಶ್ರೀ ಗೋಪಿನಾಥ ದೇವರ ದಿನಚರಿ ನಡವ ಶ್ರೀ ಬಲಿಧರ್ಮಾಕ್ಕೆ -

25. ಹೊಂನಕಳಸರಾಯರೂ ಸಹಿರಂಣ್ಯೋದಕ ದಾನ[ಧಾರಾ] ಪೂ[ರ್ವಕ] ಆಚಂದ್ರಾರ್ಕಸ್ತಾಯಿ
26. ... ದಾನಸಾಲೆಯ ನಂಜಪ್ಪನ ಬಗೆಯೂ... ಊ.... ಋ ಅಪ್ಪಣೆಯಲೂ
27. .... ಕಾಟಿ ಗ ೧ ಸ[ಹ*]ವಾಗಿ ಧಾರೆನೆಜೆದುಕೊ.... ರಸಿ ನಡಿಸಿದ ಧರ್ಮ ಶಿಲಾಶಾಸ
28. [ಯಿಂ]ತಪ್ಪುದಕ್ಕೆ ಹೊಂನಕಳಸ ರಾಯರ ಸುಹಸ್ತದ ವೊಪ್ಪ ಕರಣಿಕ ಸಾಯ್ಬುಗಳ ವೊಪ್ಪ ಹಂದಾ-
29. [ಡಿ]ಯ ಊರವರ ವೊಪ್ಪ ಆಂಣುಂಗುರಪಳಿಯ ವೊಪ್ಪ ಯೀಶ್ವರ ಉಂಗುರಪಳಿಯ ವೊ-
30. ಪ್ಪ [ವಿಷ್ಣು]ವೊರಂಬಳಿಯ ವೊಪ್ಪ ಮಧಸ್ರಹೊಳನ ವೊಪ್ಪ ರಾಮಕೃಷ್ಣ ದೇವಗಳ ಬರಹ। ದಾನಪಾ -
31. ಲನಯೋರ್ಮಧ್ಯೇ ದಾನಾತ್ತ್ರೇಯೋನು ಪಾಲನಂ [।*] ದಾನಾಸ್ವರ್ಗ್ಗ ಮವಾಪ್ನೋತಿ ಪಾಲನಾದಚುತಂ ಪದಂ [।।*]
32. [ಸ] ದತ್ತಾಂ ಪರದತ್ತಾಂ ವಾ ಯೋ ಹರೇ ಕಿಂ ವಸುಂಧರಾ [।*] ಶಷ್ಟಿರ್ವರುಷ ಸಹಪ್ರಾಣಿ ವಿಷ್ಟಾಯಾಂ ಜಾಯ -
33. ತೇ ಕ್ರಿಮಿ । ಶುಭಮಸ್ತು [।*] ಮಂಗಳ ಮಹಾ ಶ್ರೀ ಶ್ರೀ ಶ್ರೀ

ಶಾಸನ - ೨

1. ಶ್ರೀ ಗಣಾಧಿಪತಯೇಂ ನಮ[ಃ-*] ಸರಸ್ವತ್ಯೆಂ ನಮ [ಃ-*] ಶ್ರೀ ಗುರುಭ್ಯೋಂ ನಮ[ಃ-*] ನಿರ್ವಿಘ್ನಮಸ್ತು.
2. ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ [।*] ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ [।।*]
3. ಸ್ವಸ್ತಿಶ್ರೀ ಜಯಾಭ್ಯುದಯ ಶಾಲಿವಾಹನಶಕ ವರುಷ ೧೪೬೪ ಸಂದು ಅಯಿದನೆಯ ವರ್ತಮಾನದ ಶುಭ -
4. ಕೃತು ಸಂವತ್ಸರದ ಆಶ್ವಿಜ ಶುದ್ಧ ೧೨ಯು ಬುಧವಾರ ಸೂರ್ಯೋದಯ ಪುಣ್ಯಕಾಲದಲು ಶ್ರೀ ಮ-
5. ನ್ಮಹಾರಾಜ ರಾಜಾಧಿ ಪರಮೇಶ್ವರ ಶ್ರೀ ವೀರಪ್ರತಾಪ ವೆಂಕಟಾದ್ರಿರಾಯ ಮಹಾರಾಯರು ವಿಜೈಯನಗರದ
6. ಸಿಹಾಸನದಲಿದ್ದು ಸುಖರಾಜ್ಯಂ ಗೆಯಿವಕಾಲದಲಿ ಆರಾಯರ ನಿರೂಪದಿಂದ ಅತ್ಯಪ್ಪವೊಡೆಯರು

7. ರಾಜ್ಯವನಾಳುವ ಕಾಲದಲೂ ಸಂಕುಹೆಗಡೆಯರು ಕಟಿಸಿದ ದೇವಾಲ್ಯದ ಶ್ರೀ ಗೋಪೀನಾಥ ದೇವರ ದಿವ್ಯಶ್ರೀ ಪಾ-

8. ದ ಪದ್ಮಂಗಳ ಸಂಸಿಧಿಯೂ ಮಾಬುಸೆಟಿಯ ಬಳಿಯ ಯೀಸರಹಡವಳನ ತಂಮ ಅಂಣುಹಡು-

9. ವಳನು ಕಟಿಸಿದ ಮಠದ ಧಂರ್ಮಕೆ ಬರಸಿದ ಶಿಲಾಶಾಸನದ ಕ್ರಮವೆಂತೆಂದರೆ ಬ್ರಹ್ಮೂರ ಗ್ರಾಮದೊಳ

10. ಗೆ ನಾನು ಬದ್ಧ ಬ್ರಹ್ಮದಾಯದ ಮೂಲಕ ಬಾಳ ಚತುಸ್ಸೀಮೆಯ ವಿವರ ಹಂದಾಡಿಯೊಳಗೆ [ಸ]ಳ-

11. ಯ ಗದ್ದೆ ಮೂಡಲು ಹರಿವ ಬಚಲಿಂದಂ ಪಡುವಲು ತೆಂಕಲು ಭಂಡಾರಿತಿಯ ಬಗೆಯಿಂದಂ ಬ-

12. ಡಗಲು ಪಡುವಲು ಉಗ್ರಪಳಿದೇವರ ದೇವಸ್ವದಿಂದಂ ಮೂಡಲು ಬಡಗಲು ಉಗ್ರಪಳಿದೇವರ ದೇ-

13. ವಸ್ವದ ಗಡಿಯಿಂದಂ ತೆಂಕಲು ಗದೆ ೧ ಕೆ ಬಿತ್ತು ಮು ೫ ಕ್ಕೆ ಗೇಣಿ ಮು ೨೦ಕೆ ತೆಱುಹ ೯ಲಕೆ ಮುಡಬಯಲೊ-

14. ಳಗೆ ನಂಜನಗದೆ ಮೂಡಲು ನಾರುಸೆಟಿಯರ ಗಡಿ ತೆಂಕಲು ಚೋಳಿಯಕೇರಿಯ ಬಸ್ತಿಯಗಡಿ ಪಡುವ -

15. ಲು ಬಿಂನಾರ ಬಳಿಯವರಗಡಿ ಬಡಗಲು ಬಿಂನಾರ ಬಳಿ ಯವರ ಗಡಿಯಿಂತೀ ಚತುಸ್ಸೀಮೆಯೊಳಗುಳ

16. ದು ಬಿತ್ತುವ ಮು ೨ಕೆ ಗೇಣಿ ಮು ಲಕೆ ತೆಱುವ ಹಣ ಲ೬ ಬಾಲಣ ತಿಂಮಯ್ಯನಕ [ಯ್ಲು] ಕೊಂಡಬಾಳು ಮೂಡಲು ದೆಶೆ -

17. ಲು ಅಂಣಿಸೆಟಿಯ ಮಠದ ಬಗೆ ಹೆಗಡೆಯವರ ಮಠದ ಬಗೆ ಅತ್ತಿಯಡಿ ಗದ್ದೆ ಯೆರಡು ಗದೆ ತೆಂಕಲು ಹೆಗ್ಗ -

18. ಡೆಯರ ಸಂತಾನದವರ ಗಡಿ ಪಡುವಲು ತಿಂಮರಾಯ ಸೆಟಿಗಡಿ ಬಡಗಲು ಹರಿವತೋಡಿನ ಗಡಿಯಿಂ -

19. ತೀ ನಾಲ್ಕು ಗಡಿಯಿಂದ ವೊಳಗುಳ ಗದ್ದೆ ೩ಕೆ ಬಿತ್ತುವ ಮು೬ಕೆ ಗೇಣಿ ಮು[೩]ಂಕೆತೆಱು ಹ ಲ೧ಂ ದಾಸರ

20. ಬಗೆ ಮೂಡಲು ಮೂರು ಕೇರಿಯ ಹಲರಗಡಿ ತೆಂಕಲು ಸೊಜೆ [ಗ] ಅಂಣಿಸೆಟಿ ಸಂತಾನದವರ ಗದೆ

21. ಪಡುವಲು ಮೂರುಕೇರಿಯ ಹಲರಗಡಿ ಬಡಗಲು ಮೂರುಕೇರಿಯ ಹಲರಗಡಿ ಅದಱ ಕೊಡಣ ಗ-

22. ದೆ ಮೂಡಲು ತೆಂಕಲು ಮೂರುಕೇರಿಯ ಹಲರಗಡಿ ಪಡುವಲು ದಾನಸಾಲೆಯಗಡಿ ಬಡಗಲು ತಿಂ-

23. ಮ ರಾಯಸೆಟ್ಟಿಯ ಗಡಿ ಯೀ ನಾಲ್ಕು ಗಡಿಯಿಂದಂ ವೊಳಗುಳದು ಬಿತ್ತುವ ಭೂಮಿ ಇಮು ೬ ಕೆಗೇ-

24. ಣಿ ಮು ೧೫ ಕೆ ತೆಱು ೮೪ ಅಲಿಹಿರಿಯದೇವರಿಗೆ ದೇವಸ್ವ ಅಕ್ಕಿ ಮು ೨ ಯಿಪ್ಪಡಿಲು ಮೂಡಲು

25. ನಾರಣ ಸೆಟಿ ಕುಡಿನೀರ ಧಂರ್ಮದಗಡಿ ತೆಂಕಲು ಕೋಟೆಯ ಕೇರಿಯ ಹಲರ ಗಡಿಪಡುವಲು

26. ಬಡಗಲು ಬೇಹಾರಿಗಳ ಗಡಿ ಯಿಂತೀ ನಾಲ್ಕು ಗಡಿಯಿಂದಂ ವೊಳದು ಬಿತ್ತು ಮು ೨೫ಗೆ ಗೇಣಿ ಮೂ

27. ರಕೆ ತೆಱು ೯[೧ ಚೆ]ಒಟಿಕೇರಿ ಮೂಡಲು ಕೋಟಿಕೇರಿ ಹಲರಬಗೆ ತೆಂಕಲು ನಾರುಸಟಿಯರ ಗಡಿಪ -

28. ಡು[ವ*]ಲು ನೀರು ಹರಿವ ಬಚ್ಚಲ ಗಡಿ ಬಡಗಲು ನೀರು ಹರಿವ ಬಚ್ಚಲು ನಾರುಸೆಟಿರ ಗಡಿ ಯಿಂತೀ

29. ನಾಲ್ಕು ಗಡಿಯಿಂದ ವೊಳಗೆ ಬಿತ್ತುವ ಘು ೩ ಕೆ ಗೇಣಿ ಮೂಲಕೆ ತೆಱುಲ್ ೩ ಬೆಂಣೆಪದು -

30. ರೊಳಗೆ ಕಂಕೆ ಗದೆ ಮೂಡಲು ಸಂಕಹೆಗಡೆಯಗಡಿ ತೆ[೦*]ಕಲು ಬಿಳಿಕೆಜೆಗಡಿ ಪಡುವಲು ಪೂ

31. ದುಗಸೆಟಿಗಡಿ ಬಡಗಲು ದೇವೆ... ಗಡಿ ಗಡಿಯಿಂತೀ ನಾಲ್ಕು ಗಡಿಯಿಂದ ವೊಳಗೆ ಬಿತ್ತುವ

32. ಮು ೨ಕೆ ಗೇಣಿ ಮು ೮ ಕೆ ಹ ೧೫ ವೊಳಗೆಜೆಮೂಡಲು [ದು]ಗುಸೆಟಿ ಸಂಕರನ ಸಂತಾನದವರ

33. ಗಡಿ ತೆಂಕಲು ಪಡುವಲು ನಾರಣಸೆಟಿ ಗಡಿ ಬಡಗಲು ಬೆಟು ಮಂಣು ನಾರುಸೆಟಿರ ಗಡಿ

34. ಯಿಂತೀ ನಾಲ್ಕು ಗಡಿಯಿಂದ ವೊಳಗುಳದು ಬಿತುವ ಮು ೧ ಕೆ ಗೇಣಿಮು ೪ ಕೆ ತೆ ಱು ೮೨ಮ.

35. ಪಾಡಿ ಕಂಕೆಗದೆ ಮೂಡಲು ಕೆಕುಡ ಮಕಳಗದೆ ತೆಂಕಲು ನಾರಣಸೆಟಿಗಡಿ ಪಡುವಲು

36. ಹರಿವಸಾಲಿನ ಗಡಿ ಬಡಗಲು ನಾರುಸೆಟರಗಡಿ ಯಿಂತೀ ನಾಲ್ಕು ಗಡಿಯಿಂದ ವೊಳಗುಳ

37. ..... ವಮು ೨ಕೆ ಗೇಣಿಮು 5ಕೆ ತೆಱುಲ್ ೨ ಉದ್ದಿ [ನಗ]ದ್ದೆ ಮೂಡಲು ಕೆಕುಡೆಮಕಳ

38. ಗಡಿ ತೆಂಕಲು ಅಡಪಂಕಳಗಡಿ ಪಡು[ವ*]ಲು ಕೋಟಿಕೇರಿ ಹಲರಗಡಿ ಬಡಗಲು ..

39. ಅಂಣು ಹಡುವಳನ ಗಡಿಯಿಂತೀ ನಾಲ್ಕು ಗಡಿಯಿಂದ ವೊಳಗೆ ಬಿತ್ತುವ ಮು ೨ ಕೆ ಗೇ -

40. ಣಿ ಮು ೧ಂಕೆ ತೆಱು ೮೮ ಆರುವಾರ ಚಕಾರೊಳಗೆ ದುಗ ಉಂಕ್ರಪಳಿ ಬಿಟ್ಟ -

41. ದು ಸಂಕರ ಗದ್ದೆಯ ಕೆಳಗಣ ಅಶದಗಡೆಯ ಮಲಣರು ಬಿತುವ ಮು ೧||

42. ಗೇಣಿ ಮು ೭ ಕೆ ಹಿರಿಯದೇವರ ದೇವನ ಮು ೧೮ ನಿಡುಂಪಳಿ ಉಳೂರದಿದೆ ಅಕಿ ಮು

43. ೧೯ ಹಂದಾಡಿ ನಾರು ಸೆಟಿ ಸಂತಾನದವರು ಬಿಟ್ಟ ಅರುವಾರ ಗಂಜಿಕೋಟಿ

44. .... ಅಕಿ ಮು ೧೭ ಅಂತು ಅಕಿಮು ೪೪ ಕೆತೆಱು ೪೪೪ ದೇವಸ್ವ ಅಕ್ಕಿಮು

45. ೪. ೫ ಗೆ ಅಕ್ಕಿಮು ೨ಂ [ಗ]ಳಿದು ಶುದ್ಧಮ ೧೩೩ನೂ ಅಕ್ಕಿಯನೂ...

46. ... ಸಹಿರಂಣ್ಯೋದಕ ದಾನದಾರಾದತ್ತವಾಗಿ ಹಂದಾಡಿಯಲೂರು ಸ-

47. ಮಸ್ತರ ವೊಪ್ಪದ್ಲಿ ಆಚಂದ್ರಾರ್ಕ್ಕ [ಸ್ಥಾ]ಯಿ ಯಲ್ಲಿ ನಡೆಯಲ[ಉ]ಳದೆಂದು ಬ -

48. ರಸಿದ ಶಿಲಾಶಾಸನ ಶುಭಮ[ಸ್ತು] ದಾನಪಾಲನಯೋರ್ಮ್ಮಧ್ಯೇ ದಾನಾಶ್ರೇಯೋನು ಪಾಲನಂ[।*] ದಾನಾಸರ್ಗ್ಗಮವಾ-

49. [ಪ್ನೋತಿ] ಪಾಲನಾದಚುತಂ ಪದಂ [॥*] ಸುದತ್ತಂ ಪರದತ್ತಂ

50. [ವಾ] ಯೋ ಹರೇತಿ ವಸುಂಧರಾ [।*] ಷಷ್ಟಿರ್ವ್ವರುಷ ಸಹಸ್ರಾ -

51. ಣಿ ವಿಷ್ಟಾಯಾಂ ಜಾಯತೇ ಕ್ರಿಮಿಃ [॥*]

ಶಾಸನ - ೩

1. ಶ್ರೀ ಗಣಾಧಿಪತಯೇ ನಮ[ಃ-*] ಶ್ರೀ ಸರಸ್ವತ್ಯೈ ನಮ [ಃ-*] ನಿರ್ವಿಘ್ನಮಸ್ತು [।*] ನಮಸ್ತುಂಗ ಶಿರಶ್ಚುಂಬಿ ಚಂದ್ರ -
2. ಚಾಮರ ಚಾರವೇ [।*] ತ್ರಿಯಿಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ [।।*]ಸ್ವಸ್ತಿಶ್ರೀ ಜಯಾಭ್ಯುದಯಕರ ಶಾಲಿವಾಹನ ಶಕವರು -
3. ಷ ೧೪೬೪ ಸಂದು ಅಯಿದನಯೆ ವರ್ತ್ತಮಾನ ಶುಭಕ್ರುತು ಸಂವತ್ಸರದ ಭಾದ್ರಪದ ಶುದ್ಧ ೧ಲು ಶುಕ್ರವಾರ ಸೂರ್ಯ್ಯಗ್ರಹಣ
4. ಪುಂಣ್ಯಕಾಲದಲು ಶ್ರೀ ಮನ್ಮಹಾರಾಜ ರಾಜಾಧಿಪರಮೇಶ್ವರ ಶ್ರೀ ವೀರ ಪ್ರತಾಪ ವೆಂಕಟಾದ್ರಿರಾಯ ಮಹಾರಾಯರು ವಿಜೆಯನಗರ ಸಿಂಹಾ-
5. ಸನದಲಿ ಯಿದ್ದು ಸುಖರಾಜ್ಯಂಗೆಯಿವ ಕಾಲದಲು ಆ ರಾಯರ ನಿರೂಪ ದಿಂದ ಅಚ್ಚಪ್ಪ ವೊಡೆಯರು ಬಾರಕೂರ ಸಿಂಹಾಸನವನಾಳುವ ಕಾಲದಲ್ಲಿ ಬ-
6. ರ[ದ*] ಶಿಲಾಶಾಸನದಕ್ರಮವೆಂತೆಂದರೆ ಬ್ರಂಹ್ಮರ ಗ್ರಾಮದ ಹಂದಾಡಿಯ ಅಧಿವಾಸದಲಿ ಕೋಟಕೇರಿಯ ಮಾಬುಸೆಟ್ಟಳಿಯ ಸಂಕು ಹೆಗ್ಗಡೆಯವರು ಕಟ್ಟಿ -
7. ಸಿದ ದೇವಾಲಯದ ಶ್ರೀ ಗೋಪಿನಾಥ ದೇವರ ದಿವ್ಯಶ್ರೀ ಪಾದಪದ್ಮಂಗಳ ಸಂನಿಧಿಯಲ್ಲಿ ಕಟ್ಟಿದ ಯೆರಡು ಮಠದಲ್ಲಿ ಉ ಆ ದೇವರ ಅಂಗರಂಗ ಭೋಗ
8. ಆ ಚಂದ್ರಾರ್ಕ್ಕವಾಗಿ ನಡವಂತಾಗಿ ಸಹಿರಂಣ್ಯೋದಕ ದಾನ (ದಾನ) ಧಾರದತ್ತವಾಗಿ ಆ ಸಂಕುಹೆಗ್ಗಡೆಯರಮೂಂಮ... ರು ಸೆಟ್ಟಿಯ
9. ಳಿಂದಿರು ಶಂಕರಲಿಂಗ ಸೆಟ್ಟಿಯರು ಅವರಕೂಡಣ ತಾಯಮಕ್ಕಳು ನಾಲುವರು ... ಸಹ
10. ವಾಗಿ ಧಾರೆಯನೆಱಿದು ಬಿಟಬಾಳು ಅಕ್ಕಿಯ ವಿವರ ತೆಂಕ ಒಂದು ಅಜರಾಡಿಯ ದೊಳಮಾಡಿದಲ್ಲಿ ಅಕ್ಕಿ ಮು ೧೪ ಸಾಲಬಳಿಯರ ಧರ್ಮ.....
11. ಕನ ಬಗೆಯ ಮೂಡಗದ್ದೆಗಳನಲ್ಲಿ ಮು ೯ ಹೊಂನಪ್ಪ ಬಿತ್ತುವಗದ್ದೆ ಮು ೩ ತಳಿಯಂಣುವ ಬಗೆ ಮು [೧] ೧ ಹೊಸಬುಸೆಟ್ಟಿ ನಾರಣನ ಬಗೆ ಮೂಱು
12. ಹುಲಿಗನಮಲ್ಲಿ ಗದ್ದೆ ಮು ೧ ವೊಡೆಯಡಿ ಗದ್ದೆಮು ೭ ಬಿಡಿರಡಿ ಗದ್ದೆ ಮು ೬ ಅಜ್ಜರಾಡಿ ಹಿರಿಯ ಗದ್ದೆ ಮು ೧೨ ರಾಮ ಉಂಗುರಪಳ್ಳಿಯ ಕಂ

13 ಬಳ ಗದೆ ನ ಮಲ್ಲಗದ್ದೆ ಮಕ್ಕಿ ಸಹ ಮು ೨೫ ಸೂರಿಯನ ವೊಳ ಮೂಡು
ಬಯಲುಗದ್ದೆ ಸಹ ಮು ೭ ಮರಾಳುವನ ಬಗೆಗದ್ದೆ ಮು ೧೨ ಜಿತಾರ

14 ಕಾಳಿಯ ಮಾದನಬಗೆ ಕಂನಂಪಳಿ ಬಗೆಸಹ ಮು ೭ ಮತ್ತಂ ಹಂದಾಡಿಮೂಲೆ
ಕೇಶನ ತಾಱು ಕೇಶನ ಮನೆ ಮುಂದಣಗದ್ದೆ ಸಹ ಮು ೧೨॥ ಅಜರಾಡಿ

15 ಯ ಬೆಟ್ಟಿನ ಮೂಡಣ ಗದೆ ಕೇಶನ ಗದ್ದೆಯ ಬಡಗಣಗದ್ದೆ ದೇವಾಲ್ಯದ
ಬಡಗಣಗದ್ದೆ ಸಹ ಮು ೧೩॥ಕೆಕುಡೆಯ ಮನೆ ಮಲ್ಲಗದ್ದೆ ಮು ೪ ತಂಮ್ಯ

16 ಣ ಬಿತ್ತುವ ಗದ್ದೆ ಮು ೨॥ಯಿಬ್ಬನ ಬಗ್ಗೆ ಮು ೧೨ ಬಸವನಸೆಟ್ಟಿ
ವೊಳಮಾಡು ಮು ೩೨ ಕಾಡಪಳಿ ಮು ೧೦ ಮರದ ಕೆಜೆ (ಯ)ಬಡಗಣ
ಗದ್ದೆಯ

17 ಲ್ಲಿ ಮು ೧೦ ಕೆಚಣನ ಬಗೆ ಮು ೨೫ ಆ ಬಗೆ ದೇವಾಲಯದ ಹಿಂದಣ
(ಗ)ದ ಮು ೬ ಹಸುರಿ ಬಗೆ ಮು ೩ ಗೆಜೆಯಣ ಸೆಟೆ ಬಗೆ ವೂಳಮಾರಿ

18 ನಲ್ಲಿ ಮು ೪೦ ತೆಂಕಬೆಯಿಸಿರಿಯಕ್ಕ ಭಂಡಾರಿತಿ ಬಗೆ ೪ ವೂರಂಬಳಿ
ಅಧಿವಾಸ ಪುರಾಣದ ಬಗೆ ಮು ೨೮.... ದು(ದು) ರ ಬಾ -

19 ಳ ಮಾಡಿನಲ್ಲಿ ಮು ೧೨ ಗಾವಳಿತಿಯ ವೊಳಮೂಡಿ ನಲ್ಲಿ ಮು ೨೧॥
ಕೊಠಾರಿತಿಯ ಮನೆಯ ಮೂಡಲು (ತ)ಲಸೆಯಕಳು ಬಿತ್ತುವ

20 ವೊಳಮಾಡು ಮು ೩|||೬ ಕೊಜಿಬಾ(ಳು)ದುದುರಬಾಳು ಮು ೬ ಮತ್ತಂ
ಆಬಗೆ ಕುದರನಬಾಳು ಮು ೧೫॥ ಬೆಂಣಕುದಿ

21 ಅಲಿಬೆಹಾರಿ ಬಗೆ ಚೆಂಮುಂಚನಿಂದ ಮು ೨೩ ಶಂಕರ ವಯಿದ್ಯನ
ಗೋವಿಂದನಿಂದ ಗುಜಾರಬಗೆ ಮು ೭ ॥ ಮಂಜನಬಗೆ ಮು ೬

22 ಗಣಪಉಚನಬಗೆ ಮು ೬೦ ಕಾಮವೈದ್ಯನ ಗೋವಿಂದನ ಬಾಳುಮುಖ
ತಂಗಾಡಿತಿ ಗೋವಿಂದಸೆಟಿ ಬಗೆ ಬಳಿಗೆ ವೊತ್ತಿನ ಬಾ

23 ಳು ಮು ೮॥ಮುಕುಂಬರ ಕಟು ಮಾಳಚ ಭಂಡಾರಿ ಮು ೧೬ ಕಲಿನಗದ್ದೆ
ಮು ೪ ದತ್ತದ ಗೋವಿಂದನ ಬಗೆ ಮಾಕವಮಲ್ಲ(ನ) ಗದ್ದೆ ಮು ೨

24 ಮತ್ತಂ ಬೆಂಣೆಕುದುದಲ್ಲಿ ಗುಜಾರರಬಗೆ ಮು ೫।ಅಂಣವೂರಂಬಳಿ ಬಗೆ
ಹನಂಟಿಗದ್ದೆ ಹೊಳೆ ಸಹವಾ

25 ಗಿ ಮುಳ ಸರಸ್ವತಿ ಗೋವಿಂದನ ವೂಳಮಾಡು ಮನಂಟಿ ಸಹ ಮು ೩
ಶಂಕರ ವೈದ್ಯನ ಗೋಳಿಯಡಿ ಗದ್ದೆ ಮು ೫ ಕುಂಞ

26 ನಾರಣನಗೋವಿಂದನಿಂದ ಮು ೧೦ ಆ ಬಗೆ ಕಂಜಿ ಮಾಳ ಬಿತ್ತುವ ಗದ್ದೆ
ಮು ೫ ಆಲಕೆಜೆಯ ಮೇಲಣಗದ್ದೆ ಅಂ

27 ಣ ಪೆರಣನಿಂದ ಮು ೧೬ ಹೊಳತಿ ಬಗೆ ಅರಳಿಯಡಿಯ ಗದ್ದೆ ಮು ೪ ಅಧಿಕಾರಿಯ ಬಗೆ ಮು ೩ (ಪೊಹ)ಳಿ

28 ಉದನಿಂದ ಮು ೩ ಸಂಕರ ಹೆರಣನಿಂದ ಮು ೩ ॥ ಅಂಣ್ಣಪ್ಪವೈದ್ಯನ ಗೋವಿಂದನ ಬಾಳು ಮು ೩।೧೬ದೆರಾಳುವಳ ಬಗೆ ಬಾ -

29 ಳು ದುಗಾಳುಪನಿಂದ ಮು ೪ ಹನಯನಿಂದ ಮು ೨ ।।।೫ ಗಮವೊಡನ ಸಂತಾನದವರಿಂದ ಮು ೧೦ ಶಿವಪವೊರಂಬಳಿ ಯಿ-

30 ದ ಮು ೯ ಕೊಟದಕ್ಕೆನ ಬಾಳು ಮು ೯ ವೊಜನ ತಾಖ ಮಂಜುವಿಂದ ಮು ೧೬ ತಿಂಮ್ಮಯ್ಯ ಸೆಟ್ಟಿಬಗೆ ಮಾಖುವ ಮನೆಯ

31 ಪಡುವತಾಖ ಮು ೨೦ ತಿಂಮಯಸೆ(ಟ್ಟಿ*) ಮಾಡಿದ ಧರ್ಮಕೆ (ನೆ)ರಕಮಕೊತಾ (ರಿ*)ತಿ ಯಿಂದ ಮು ೪।।। ಹೊಸಬೆಟ್ಟೆ ಬೆರ್ಮಲಿಂ ಮು ೩

32 ಪಕುಡಿಯ ಶಂಕರಭಟ್ಟ (ಕೃಷ್ಣ)ಭಟ್ಟನಿಂದ ಮು ೨ ಹಾ ೭ ಅಂಣಮಭಟ್ಟನಿಂದ ಮು೨ ।।। ಯೀಸರ ಭಟ್ಟನ ಗೋವಿಂದ-

33 ಂದ ನಾರಣನಿಂದ ಮು ೩।೩ ವಿಷ್ಣೋರಂಬಳಿಯರಿಂದ ಮು ೨।।। ಪಡುವಣಬಾಗಿ ರಾಮಮಯ್ಯರ ಮಗ ಶಂಕರ ಮಯನಿ-

34 ದ ಪಡುವ ಬಯಲಬಾಳು ಮು ೧೨ ಅಂಣವೊರಂಬಳಿಯರ ಬಗೆ ಮೂಡಮನೆಯ ಮಯ್ಯನಿಂದ ಮು ೨೦ ಕೃಷ್ಣ

35 ಮಯನಿಂದ ಮು ೧೦ ಶಿವಣಮಯನಿಂದ ಮು ೪ ಬಾಚಣಮಯನ ಮಗನಿಂದ ಮು ೪ ಕೋಡಿನ ಯೀಸರಸನಿಂದ ಕೊ-

36 ಳಂಬೆಯ ಗದ್ದೆ ಮು ೨ ಉಪಾಧ್ಯರಂಣನ ಬಾಳು ಮು ೧೦ ಕೊಚಿಟಿ ಸಂಕುಸೆಟಿ ಬಗೆ ಕೊಳಂಬೆಗದ್ದೆ ಮು ೬ ಬೈಕಾ -

37 ಡಿ ಬಡಗಮನೆಯ ಕುಂಜತ್ತನ ಗದ್ದೆ ಸಹ ಮು ೯ ತೆಂಕಮನೆಯ ಕುಂಜತ್ತನ ಬಾಳು ಮು ೨॥ ಯಿೂಶ್ವ-

38 ರ ಕಂಣಾರನ ಬಾಳು ಮು ೬॥ ... ವ ಬಗೆ ಬಯಲ ಗದ್ದೆ ವೊಗರಹಳಿ ಸಹ ಮು ೬॥ ಯೆಂಣೆಯ ಗದ್ದೆ ಮು ೨೦

39 ಸಂಖಿಯಮಲ ಗದ್ದೆ ತೋಟ ಮು೩೫ ಕೆಲ್ಲನಾರಣಾಳುವನ ವದ್ದ ಬಾಳು ಮು ೧೦ ತಿಂಮಯ್ಯನ ಹುಣಿಸೆಗದ್ದೆ ಮು ೬

40 ರಾಮಕುದುರನ ಬಾಳು ರಾಮೇಶರ ದೇವರ ಕೆ(ಜೆ)ಯ ಪಡುವಬಳಿಗದ್ದೆ ಮು ೭ ಮೂದಿಟಿ ಅಂತಹಾಕಿದ ಬಾಳು ಕುಂಜತ್ತ

41 ಳ ಕಯಲಿ ಕೊಂಡ ಹುಟಿನಬಾಳು ಮು ೮ ಗಂಠೆಯ ಕಲ್ಲಗದ್ದೆ ಮು ೧॥
ಅಂಣಕುದುರನ ಮನೆ ಬಾಳಿನಲ್ಲಿ ಮು ೩

42 ಮತ್ತಂ ಬಗನಹಾಳಿ ಅಕ್ಕಿ ಮು ೩ ಬಯಕಾಡಿ ಯೀಸರ ಕಂಣಾರನ
ಬಗೆಗದ್ದೆ ಅಕ್ಕಿ ಮು ೨ ಬೊಕಪಟ -

43 ಣ ಸೆಟಿ ಯೆಂತಸೆಟಿ ಮಲ್ಲಗದ್ದೆ ತೋಟ ಬಾಳು ಸಹ ಅಕ್ಕಿ ಮು ೨೦
ಹೊನ(ಕು)ಳ ನರಸಿಂಗ ಸೆಟಿಯ ಬೊಬ್ಬರಿಗ -

44 ನ ಗದ್ದೆ ಅಕ್ಕಿ ಮು ೬। ನರಸಿಂಗ ಸೆಟಿಯ ಹೊಸಮಾಟಮ ೫
ತೋಟದಲ್ಲಿ ಅಯಿರೊಡಿಯಲ್ಲಿ ಕೆಷದೆಯ ಹಿತ್ತಿ-

45 ಲಗದ್ದೆ ಮು ೧೭ ಹಂದಾಡಿ ಕೊಳಕ್ಕೆ ಗದೆ ಅಂಣು ಹಡುವಳ
ನಾರುವಿಂದ ಮು ೧ ಅಂತಿ(ಪಿ) ರಾಮಣ ಬಿತುವಸಾಲ

46 ಅಂಣಿಸೆಟಿಯ ಮನಯ ಮೂಡಸಾಲ ಬಳಿಯಗದ್ದೆ ಅಕ್ಕಿ ಮು ೧೧
ಪಡುವ ಚಗಿ ಉಪಾಧ್ಯಹಣನ

47 ಬಗೆ ಕೊಂಞಮ ಬರಂಬಳಿ ಬಿತುವ ಗದೆ ಮು ೭ ಯೀಸರ ನಾಯರ
ಮುದ್ದ ಬಿತ್ತುವ ಕೊಳಕೆ ಗದ್ದೆ ಮು ೬ ಆ(ಂ*)

48 ತು ನಾನಾ ಬಗೆ ಸಹ(ವಾ)ಗಿ ಅಕ್ಕಿ ಮು ೮೫೫ಯೀ
ಯೆಂಟುನೂಱಯಿವತ್ತ ಅಯಿದು ಮುಡಿ ಅಕ್ಕಿಯ ಬಾಳ

49 ಮೂಲದ ಮೂಲ ಆರುವಾರದ ಅರ್ಥ ಯಿವಱಲ್ಲಿ ಉಂಟಾದ
ಸರ್ವಸ್ವದಲ್ಲಿ ಅರ್ಥ ಬಂದರೂ ಉತ್ರಿಬಂದರೂ ಶ್ರೀಗೋಪೀ -

50 ನಾಥ ದೇವರಿಗೆ ಯೆಂದು ಬರಸಿದ ಧರ್ಮಶಿಲಾಶಾಸನ ಯೀ
ಶಾಸನದಲ್ಲಿ ಬರದಕ್ಕೆ ದೇವರ ಅಮೃತಪಡಿ (ಪರ್ವ) ಅಂಗರಂಗ

51 ಭೋಗ ಯೆರಡು ಮಠದಲ್ಲಿ ನಡೆವ ಧರ್ಮ ಆ ದು ಸಹ ಉಂಬ
ಬ್ರಾಹ್ಮಣಜನ ೨ಳಕೆ ಖಜಾಯ ಪಾಯಸ ಶನಿವಾರ

52 ಯೆಂಣೆಯಿಷ್ಟೂ ಆ ಚಂದ್ರಾರ್ಕ್ಕವಾಗಿ ನಡವಂತಾಗಿ ಬಿಟ್ಟ ಸರ್ವಸ್ವ ಯೀ
ದೇ(ವ)ರ ಸರ್ವಸ್ವದಲ್ಲಿ ನಾರು ಸೆಟ್ಟಿಯರ

53 ಸಂತಾನದ ನಾಲ್ವರು ತಾಯಮಕಳೊಳಗೆ ಆರೊಬರು ತಮಗೆ
ಅಕ್ಕಲೆಕಪಾಲು ಉಂಟೆಂದು ವೊ(ಬ)ಸೆಟೆಗೆ ವೊಂದು ಕೇ-

54 ರಿಯಹಲರಿಗೆ ವೊಂದು ನಾಡ ಬಲಾಳುಗಳು (ದೈ)ವದೇವರಿಗೆ ಕೊಟ್ಟರೆ
ಆನಪಾಲಿನ ಸರ್ವಸ್ವ ಅಕಲೆಕ ಯೇನುಂಟಾದ-

55 ರೂ ಗೋಪೀನಾಥ ದೇವರಿಗೆ ಹರವರಿ ಅವರು ಬಳಿ
ಕುಟುಂಬದಿಂದಲೂ ಮೂರು ಬಳಿಯಿಂದಲೂ ಹೊಱಗೆ

56 ಯಿದಱ ವಿಚಾರಣೆ ಮಾಬುಸೆಠಿಯ ಬಳಿ ದೇವಿಯರ ಬಳಿ ನಾಡುವ ಬಳಿ
ಯೀ ಮೂಱು ಬಳಿ ಕರ್ತರು (ಯೆ)ಮೆಂದು

57 ಶಂಕರಲಿಂಗ ಸೆಟಿಯರು ಅವರು ಕೂಡಣ ತಾಯಿಮಕ್ಕಳು ನಾರು ಸಟೆ
ತಿರು(ಮ)ಣ ಸೆಟಿ ಮುಂತಾ -

58 ದವರು ಮಹಾಲಿಂಗಸೆಟಿ ಅವರ ಕುಡಣ ತಾಯಿಮಕಳು ಲಿಂಗಸೆಟಿ
ಸೋಮಯಸೆಟಿ ರಾಜಸೆಟಿ

59 ಮಾಕುಸೆಟಿ ತಿಂಮಣಸೆಟಿ ಮುಂತಾದ ಹೆಂಣುಗಂಡು ಸಮಸ್ತರೂ ವೊಪ್ಪಿ
ಬಿಟ್ಟ ಸರ್ವಸ್ವ ಬರಸಿದ

60 ಶಾಸನ ಯಿ ದೇವರಿಗೆ ಬಿಟ್ಟ ಸರ್ವಸ್ವ ಹೊಱತಾಗಿ ಯಿ ನಾಲರು
ತಾಯಮಕ್ಕಳೊಳಗೆ ತಮಗೆ ಬಂ-

61 ದ ಅಕಲೆಕ ಯೇನುಂಟಾದದನು ಬದ್ಧಕಾಲಕ್ಕೆ ತಾವೆ ಬಾಳುವರು
ಹಾಕಿದರೆ ಗೋಪೀನಾಥ ದೇವರಿಗೆ ಹಾ -

62 ಕುವರಲ್ಲದೆ ಮುತ್ತಾರಿಗೂ ಕೊಡ ಸಲದು ಯೀ ಶಾಸನದ ವಖಣೆಗೆ
ಆರೊಬರು ತಪ್ಪಿದರೆ ವಾರಣಾಸಿಯಲಿ

63 ಸಾವಿರ ಗೋವಕೊಂದ ಪಾತಕಕೆ ಹೋಹರು॥
ದಾನಪಾಲನಯೋರ್ಮಧ್ಯೇ ದಾನಾಸ್ರೇಯೋನ್ರುಪಾಲನಂ(।*) ದಾ-

64 ನಾ ಸ್ವರ್ಗ್ಗಮವಾಪ್ನೋತಿ ಪಾಲನಾದಚು(ತ)ಂ ಪದಂ (॥*) ಸ್ವದತ್ತಂ
ಪರದತ್ತಂ ವಾಯೋ ಹರೇತಿ ವಸುಂಧ-

65 ರಾ(।*) ಷಷ್ಟಿರ್ವರುಷ ಸಹಸ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿ (॥*)
ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ

೪. ಕೃಷ್ಣದೇವರಾಯನ ಅಪ್ರಕಟಿತ ತಾಳೆ ಓಲೆ ಕೃತಿ

ಡಾ. ಎಸ್.ಜಿ. ಸಾಮಕ್

ವಿಜಯನಗರದ ಚಕ್ರವರ್ತಿ ಕೃಷ್ಣದೇವರಾಯ ಒಬ್ಬ ಪ್ರಖ್ಯಾತ ದೊರೆ ಮಾತ್ರ ವಾಗಿರದೇ ಪ್ರಸಿದ್ಧ ಕವಿಸಾಹಿತಿಯೂ ಆಗಿದ್ದನೆಂಬುದಕ್ಕೆ ಆತ ರಚಿಸಿರುವ ಅಮೂಕ್ತ ಮಾಲ್ಯದಾ, ಮದಲಸಾಚರಿತಂ, ರಸಮಂಜರಿ ಮುಂತಾದ ಕೃತಿಗಳೇ ಸಾಕ್ಷಿ. ಮದ್ರಾಸಿನ Government Oriental Manuscript Library ನಲ್ಲಿ ಅಪ್ರಕಟಿತ ತಾಳೆ ಓಲೆ ಗ್ರಂಥ ಒಂದಿದ್ದು (D.No. 18299) ಇದು ಆತನೇ ರಚಿಸಿದ ಕೃತಿಯಾಗಿದೆ. ಇಲ್ಲಿ ನೆರೆದಿರುವ ಸಾರಸ್ವತ ಲೋಕಕ್ಕೆ ಅದನ್ನು ಪರಿಚಯಿಸುವ ಪ್ರಯತ್ನವನ್ನು ಪ್ರಸ್ತುತ ಪ್ರಬಂಧದಲ್ಲಿ ಮಾಡಲಾಗಿದೆ. ಈ ಕೃತಿಯು 12" ಉದ್ದ ಹಾಗೂ 1¼" ಅಗಲದ 6 ತಾಳೆಗರಿಗಳ ಮೇಲೆ, ಪ್ರತಿ ಗರಿಗಳಲ್ಲಿ 4 ಸಾಲುಗಳಂತೆ ರಚಿಸಲಾಗಿದೆ. ಇದರ ಭಾಷೆ ಸಂಸ್ಕೃತ. ಒಟ್ಟು 12 ಶ್ಲೋಕಗಳನ್ನು ಇದು ಹೊಂದಿದ್ದು ಮೊದಲು ಮೂರು ಹಾಗೂ ಕೊನೆಯ ಶ್ಲೋಕಗಳು ಮಂದಾಕ್ರಾಂತ ಛಂದಸ್ಸಿನಲ್ಲಿದ್ದು ಉಳಿದು ಶ್ಲೋಕಗಳು ಅನುಷ್ಟುಪ್ ಛಂದಸ್ಸಿನಲ್ಲಿವೆ. ಮೊದಲ 3 ಶ್ಲೋಕಗಳಲ್ಲಿ ವೆಂಕಟೇಶ್ವರ, ಶಿವ ಹಾಗೂ ವಿಷ್ಣುವಿನ ಗುಣಗಾನವನ್ನು ಮಾಡಲಾಗಿದೆ. ನಾಲ್ಕನೇ ಶ್ಲೋಕದಿಂದ ಕೃಷ್ಣದೇವರಾಯನ ವಂಶಾವಳಿಯನ್ನು ವಿವರಿಸಲಾಗಿದೆ.

ಮೂಲ ಪಾಠ

ಕ್ಷೀರಾಮ್ಭೋಧಿತಪಃ ಫಲೇನ ಮಹತಂ ನೀರಾಜಿತೋ ರಮಯತ
ಸ್ತಾರಾಧೀಶದಿನಾಧಿಪಾನಯನೋ ಧಾರಾಧಾರಣ್ಯಾಮಲಃ
ಯೋವೇದಾಂತಭಿರಾಮ ಲಕ್ಷ್ಯ ಮಹಿಮಾ ದೇವೇಶ ಮುಖ್ಯೈಃ ಸ್ತುತಃ
ಸೋ ಯಂ ತಿಷ್ಠತು ಮಾಮಕೀನ ಹೃದಯೇ ಶ್ರೀವೈಙ್ಕಟೇಶಾಭಿಧಃ ||೧||

ಸಾಂದ್ರಾನಂದ ಧನಃ ಸಮಗ್ರ ಕರುಣಾಪೂರ್ಣ ನವಾಞ್ಜಲೋ
ಮಂದಾಕಿನ್ಯಧಿವಾಸ ಮಞ್ಜುಲಜಟಾಜೂಟೋ... ತಃ
ಕಲ್ಯಾಣಾಚಲ ಕರ್ಮುಕಃ ಕಲಯತಾಂ ಕಲ್ಯಾಣಮವ್ಯಾಹತಂ
ಚಂದ್ರಾಲಂಕೃತ ಮೌಲಿರದಿತನಯಾಶೃಂಗಾರಿತಾರಿಙ್ಗಃ ಶಿವಃ ||೨||

ಬ್ರಹ್ಮಾಂಡಾನ್ಯಖಿಲಾನಿ ಚೇನ್ನ ಸತತಂ ವ್ಯಾಪ್ತಾನಿ ತತಾದೃಶ
ಷ್ಯಾಕಾರಂ ಶಬ್ಧಮಾಂನ್ನದಾಮುಪಗತಂ ಭಸ್ಮೈವ ಸತ್ಯಾತ್ಮನಃ
ತಂ ವೇದಾಂತಯಬ್ಜಪ್ರಚರ್ಚಿತಗುನಂ ಲಕ್ಷ್ಮೀವಲ್ಲಭಂ
ನಿತ್ಯಾನಂದಮಜಂ ನಿರಸ್ತದುರಿತಂ ವಂದೇ ಮುಕುಂದಂ ವಿಭುಮ್ ||೩||

ಶ್ರೀಮಾನಭೂತ್ ತುರ್ವಸುವಂಶಮೌಲಿಃ ಶ್ರೀ ತಿಮ್ಮಭೂಪೋ ಜಗದೇಕವೀರಃ
ಸ ದೇವಕಿನಾಮ್ನಿ ಕಲತ್ರರತ್ನೇ ಪ್ರಾ ತ ಧೀರಂ ಸುಮತೀಶ್ವರಾಖ್ಯಮ್ ||೪||

ಸ ಕತ್ರುಮೀಶಃ ಸಕಲಾನುಕರ್ತುಂ ತಥಾನ್ಯ ಯಾ ಕರ್ತುಮಪಿ ಕ್ಷಿತೀಂದ್ರಾನ್
ಯಥಾರ್ಥಯಶ್ಚೀಶ್ವರನಾಮಧೇಯ ಮೇಕಾತಪತ್ರಾಗವನಿಂ ಪ್ರಶಸ್ತಿ ||೫||

ಸ ಬುಕ್ಕಮಾಂಬಾಂ ಪರಿಣೀಯ ತಸ್ಯಾಮೌದಾರ್ಥ ಗಾಂಭೀರ್ಯವಿವೇಕ ಶೌರ್ಯೈಃ
ದಾಕ್ಷಿಣ್ಯ ಕಾರುಣ್ಯನಯೈಶ್ಚ ಯುಕ್ತಂ ಲೇಭೇ ತನೂಜಂ ನರಕ್ಷಿತೀಶಮ್ ||೬||

ಸ ವಾಪ್ಯ ಏವಾವನಿಮರ್ಣ ವಾಂತಾಮಾಕ್ರಮ್ಯ ಶೌರ್ಯೇಂ ನಿರಬ್ಯುಶೇನ
ಮಾಂದಾತೃಮುಖ್ಯಾನ್ಮಹೀಪಾನ್ ಯಶೋವಿಶೇಷೈರಖಿಲಾನಜೈಷಿ ||೭||

ಬಾಹ್ವೋರ್ಬಲೇನಾರ್ಜಿತವಿತ್ತಜಾತಃ ಕೃತಾರ್ಥಮಿತ್ಯಾಖಿಲಮರ್ಥಿನಾರ್ಥಮ್
ಕಾಶೀ ಪ್ರಯಾಗಾದಿ ಮಹಾರ್ಹತೀರ್ಥ್ಯೆಃ ಮಹಾಂತಿ ದಾನಾನಿ ಮುಹ್ಯಶ್ಚಕಾರ ||೮||

ಕುಲೇಶಶೀಲೇನಗುಣೇನ ಭಕ್ತ್ಯಾ ಪ್ರೇಮಾನುಕೂಲ್ಯೇನ ಚ ಸಂಯುತಾಯಾಮ್
ನಾಗಾಂಬಿಕಾಯಾಂ ನಸಕ್ಷಿತೀಶಃ ಪ್ರಾಸೂತ ಮಾಂ ನ್ಯಕ್ ವೈರಿವರ್ಗಃ ||೯||

ಸೋ ಹಂ ಸ ತನ್ವಾನರ್ಥಗುಣಾನ್ವಿತಾಯಾಂ ತಿಮ್ಮಾಂಬಿಕಾಯಾಮಿಹ ತಿಮ್ಮಭೂಪಮ್
ಉತ್ಪಾದ್ಯ ನಾಮಾಸ್ಯ ಮಹಾರ್ಯಜಾತ್ಯೆ ಸಮರ್ಪಯಂ ವೆಂಕಟಶೈಲಭದ್ರ್ಯೆಃ ||೧೦||

ಏವಂ ಚ ಚೇತಸ್ಯನವಾಪ್ಯ ತೃಪ್ತಿಂ ವಾಚಾಪಿ ಪೂಜಾಂ ಕಲಯೆ ಕಥಂ ವಾ
ಶ್ರೀ ವೇಣ್ಕಟೇಶಾಧೀಶಿತುರಿತ್ಯುದಾರಂ ಚಿತ್ತೇ ವಿಚಾರಂ ಕಲಯನ್ನಯಾತ್ಯಮ್||೧೧||

ಉತ್ಸಾಹಂ ಮಮ ದೀಕ್ಷ್ಯ ಮದ್ಗುರುರಥ ಶ್ರೀ ವ್ಯಾಸತೀರ್ಥೋಮುನಿಃ
ಪರ್ಯಾಲೋಚ್ಯ ಪುರಾಣ ಶಾಸ್ತ್ರವಿವಿಧಾನ್ನಾಯೇತಿಹಾಸಾದಿಕಾನ್
ಲಬ್ಧಾಸ್ತತ್ರ ಕಥಾ ಹರೇಃ ಪಶುಪತೇಃ ಸಾಂಯಂ ನಿರಸ್ಯಾಯಿಕಂ
ವಿಷ್ಣು ಕೀರ್ತಯ ಸರ್ವ ಯೇತ್ಯುಪದಿಶನ್ ಮಃಯಂ ಮುದಾದತ್ತವಾನ್ ||೧೨||

ಸಾರಾಂಶ

ಕ್ಷೀರಸಮುದ್ರದಲ್ಲಿ ಮಾಡಿದ ಹಿರಿದಾದ ತಪಸ್ಸಿನ ಫಲದಿಂದ ಶೋಭಾಯಮಾನ ವಾಗಿ ತೋರುವ ಉರ ಸ್ಥಳವುಳ್ಳ ಚಂದ್ರ ಸೂರ್ಯರೇ ಕಣ್ಣುಗಳನ್ನಾಗಿ ಉಳ್ಳ ನೀಲಮೇಘ ಶ್ಯಾಮನಾದ, ವೇದವೇದಾಂತವಾಣೀಗಳಿಗೂ ಅಗಮ್ಯನಾದ ದೇವೇಶನಾದ ಶ್ರೀವೆಂಕಟೇಶ್ವರನು ನನ್ನ ಹೃದಯದಲ್ಲಿ ನೆಲೆಸಲಿ ||೧||

ನಿಬಿಡವಾದ ಆನಂದಮೂರ್ತಿಯಾದ ಸಮಗ್ರ ಕರುಣಾಮೂರ್ತಿಯಾದ, ಶಿರದಲ್ಲಿ ನೆಲೆಸಿದ ಗಂಗೆಯಿಂದ ಪದ್ವೆಯಾದ ಜಟಾಸಮೂಹವುಳ್ಳ... ಕಲ್ಯಾಣ ಪರ್ವತವೇ ಬಿಲ್ಲಾಗಿ ಹೊಂದಿದ ಚಂದ್ರನಿಂದ ಅಲಂಕರಿಸಲ್ಪಟ್ಟ ಶಿರವುಳ್ಳ ಪಾರ್ವತಿಯಿಂದ ಶೃಂಗರಿಸಲ್ಪಟ್ಟ ಶಿವನು ನಿರಂತರವಾಗಿ ಎಲ್ಲರಿಗೂ ಕಲ್ಯಾಣವನ್ನು ಉಂಟು ಮಾಡಲಿ ||೨||

ಯಾವನು ಅಖಿಲ ಬ್ರಹ್ಮಾಂಡವನ್ನು ಸತತವಾಗಿ ವ್ಯಾಪಿಸಿದ್ದಾನೋ, ಸತ್ಯಾತ್ಮ ಸ್ವರೂಪಿಯಾದ ಯಾವನಿಂದ ಪ್ರಪಂಚವೆಲ್ಲವೂ ವ್ಯಾಪಿಸಿದಯೋ, ವೇದಾಂತ ವಾಖ್ಯ ಗಳಲ್ಲಿ ಯಾವನ ಗುಣಗಾನ್ನು ವರ್ಣಿಸಲ್ಪಟ್ಟಿದೆಯೋ, ನಿತ್ಯಾನಂದ ಸ್ವರೂಪಿಯೂ, ಅಜನೂ, ಪಾಪಗಳನ್ನು ದೂರಮಾಡುವವನೂ ಆದ ಶ್ರೀದೇವಿ, ಭೂದೇವಿಯವರ ಪತಿಯಾದ ಸರ್ವಸಮರ್ಥನಾದ ಮುಕುಂದನನ್ನು ವಂದಿಸುತ್ತೇನೆ ||೩||

ಸಕಲ ಸಂಪತ್ತಿನಿಂದ ಕೂಡಿದ ಯಯಾತಿಯ ಮಗನಾದ ತುರ್ವಸುವಿನ ವಂಶದಲ್ಲಿ ತಿಮ್ಮಭೂಪನೆನ್ನುವ ಜಗದೇಕವೀರನಾದ ರಾಜನು ದೇವಕಿನಾಮಕಳಾದ ಪತ್ನಿಯಲ್ಲಿ ಸುಮತೀಶ್ವರನೆನ್ನುವ ಪುತ್ರನನ್ನು ಪಡೆದನು. ||೪||

ಸುಮತೀಶ್ವರನೆನ್ನುವ ರಾಜನು ಹೆಸರಿಗೆ ತಕ್ಕನಾಗಿ ಕರ್ತುಮಕರ್ತುಂ ಅನ್ಯತಾಕರ್ತು ಸಮರ್ಥನಾದ ಪರಮೇಶ್ವರನಂತೆ ಎಲ್ಲಾ ರಾಜರನ್ನು ಜಯಿಸಿ ಏಕಛಕ್ರಾಧಿಪನಾಗಿ ಭೂಮಿ ಯನ್ನು ಆಳಿದನು ||೫||

ಈ ಸುಮತೀಶ್ವರನು ಬುಕ್ಕಮಾಂಬಾ ಎನ್ನುವಳನ್ನು ವಿವಾಹವಾಗಿ ಅವಳಲ್ಲಿ ಗಾಂಭೀರ್ಯ ವಿವೇಕ ಶೌರ್ಯ ದಾಕ್ಷಿಣ್ಯ ಕಾರುಣ್ಯ ಸ ಮುಂತಾದ ಗುಣದಿಂದ ಕೂಡಿದ ನರಸನೆಂಬ ಮಗನನ್ನು ಪಡೆದನು. ||೬||

ಈ ನರಸರಾಜನು ಬಾಲ್ಯದಲ್ಲೇ ನಿರಂಕುಶವಾದ ಪ್ರಭುತ್ವದಿಂದ ಮಾಂದಾತ ಮುಂತಾದವರ ಪರಾಕ್ರಮದಂತೆ ವಿಶೇಷವಾದ ಕೀರ್ತಿಯನ್ನು ಹೊಂದಿದನು. ||೭||

ಬಾಹುಬಲದಿಂದ ಸಂಪಾದಿಸಿದ ದ್ರವ್ಯವನ್ನು ಬಡವರಿಗೆ ದಾನಮಾಡಿ ಕಾಶಿ ಪ್ರಯಾಗಾದಿ ತೀರ್ಥದಲ್ಲಿ ಮಹಾದಾನಗಳನ್ನು ಮಾಡುತ್ತಾ ಮಹಾದಾನವಂತನೆಂದು ಹೆಸರನ್ನು ಪಡೆದನು. ||೮||

ಈ ರಾಜನು ಕುಲಶೀಲಗುಣಾದಿಗಳಿಂದ ಕೂಡಿದ ಭಕ್ತಿಯಿಂದ ಪ್ರೇಮದಿಂದ ಯುಕ್ತಳಾದ ನಾಗಾಂಬಿಕಾ ಎಂಬ ನಾಮದೇಯವುಳ್ಳ ಪತ್ನಿಯಲ್ಲಿ ನನ್ನನ್ನು (ಕೃಷ್ಣದೇವ) ಪಡೆದನು. ||೯||

ಆ ನಾನು ತಿಮ್ಮಾಂಬಿಕಾ ಎನ್ನುವ ಪತ್ನಿಯಲ್ಲಿ ತಿಮ್ಮಭೂಪನೆನ್ನುವ ಮಗನನ್ನು ಪಡೆದು ತಿರುಪತಿಯಲ್ಲಿ ವೆಂಕಟೇಶ್ವರ ಸ್ವಾಮಿಗೆ ಈ ಮಗನನ್ನು ಅರ್ಪಿಸಿದನು ||೧೦||

ಇಷ್ಟನ್ನು ವೆಂಕಟೇಶ್ವರನಿಗೆ ಅರ್ಪಿಸಿದರೂ ಮನಸ್ಸಿಗೆ ಸಮಾಧಾನವಾಗದೇ ಇನ್ನೇನನ್ನು ಅರ್ಪಿಸಲಿ ? ಎಂದು ಮನಸ್ಸು ತವಕಿಸಿತ್ತಿದ್ದಿತು. ||೧೧||

ಈ ರೀತಿಯಲ್ಲಿ ನನ್ನ ಭಗವದ್ಭಕ್ತಿಯನ್ನು ನೋಡಿ ವ್ಯಾಸತೀರ್ಥ ಮುನಿಗಳು ಪುರಾಣ ಶಾಸ್ತ್ರಗಳಸಾರವನ್ನು ಪರ್ಯಾಲೋಚಿಸಿ ಅನವರತವೂ ಹರಿಯನ್ನು ಕೀರ್ತಿಸುವಂತೆ ಉಪದೇಶಿಸಿದರು. ||೧೨||

ಈ ಕೃತಿಯಲ್ಲಿ ಕಂಡು ಬರುವ ಬರುವ ವಂಶಾವಳಿ

ತಿಮ್ಮಭೂಪ
(ದೇವಕಿ ಪತ್ನಿ)
↓
ಸುಮತೀಶ್ವರ
(ಬುಕ್ಕಮಾಂಬ ಪತ್ನಿ)
↓
ನರಸ ರಾಜ
(ನಾಗಾಂಬಿಕಾ ಪತ್ನಿ)
↓
ಕೃಷ್ಣದೇವ
(ತಿಮ್ಮಾಂಬಿಕಾ ಪತ್ನಿ)
↓
ತಿಮ್ಮಭೂಪ

ರಾಬರ್ಟ್ ಸೀವೆಲ್ ರವರು ಈ ರೀತಿಯಲ್ಲಿ ವಂಶಾವಳಿಯನ್ನು ನೀಡಿದ್ದಾರೆ.

1. ತಿಮ್ಮ (ಪತ್ನಿ-ದೇವಕಿ)

↓

2. ಈಶ್ವರ (ಪತ್ನಿ - ಬುಕ್ಕಮ್ಮ)

↓

3. ನರಸ ಅಥವಾ ನರಸಿಂಹ (ಪತ್ನಿ-ನಾಗಲಾಳಿಂದ) 3 ಪತ್ನಿಯರು

↓

4. ಕೃಷ್ಣದೇವ (ಹೆಂಡತಿ?)

↓ ↓

ಮಗಳು (ರಾಮರಾಯನ ಹೆಂಡತಿ) — ಮಗಳು (ತಿರುಮಲರಾಯನ ಹೆಂಡತಿ)

ಪ್ರಸ್ತುತ ಕೃತಿಯಿಂದ ಈ ಕೆಳಕಂಡ ವಿಶೇಷತೆಗಳನ್ನು ಗುರುತಿಸಬಹುದು.

1. ಕೃಷ್ಣದೇವರಾಯನೇ ಈ ಕೃತಿಯಲ್ಲಿ ತನ್ನ 5 ತಲೆಮಾರಿನ ವಂಶಾವಳಿಯನ್ನು ನೀಡಿದ್ದಾನೆ.
2. ಅಕಾಲ ಮೃತ್ಯುವಿಗೆ ತುತ್ತಾದ ತನ್ನ ಮಗನ ಹೆಸರು ತಿಮ್ಮಭೂಪನೆಂದೂ ಆತ ತಿರ್ಮಾಂಬಿಕೆಗೆ ಹುಟ್ಟಿದವನೆಂದೂ ತಿಳಿಯುತ್ತದೆ.
3. ಇದೊಂದು ಅಪೂರ್ಣ ಕೃತಿಯಾಗಿರಬೇಕು. ಏಕೆಂದರೆ ವ್ಯಾಸ ತೀರ್ಥರು ವಿಷ್ಣುವಿನ ಯಾವ ಶ್ಲೋಕವನ್ನು ರಾಜನಿಗೆ ಉಪದೇಶಿಸಿದ್ದಾರೆಂಬ ವಿವರಣೆ ದೊರೆಯುವುದಿಲ್ಲ.

ಒಟ್ಟಿನಲ್ಲಿ ಈ ಕೃತಿಯನ್ನು ಇನ್ನೂ ಕೂಲಂಕುಶವಾಗಿ ಅಧ್ಯಯನ ನಡೆಸುವ ಅಗತ್ಯವಿದ್ದು ಅದು ವಿಜಯನಗರ ಇತಿಹಾಸ ರಚನೆಗೆ ಅದರಲ್ಲೂ ಕೃಷ್ಣದೇವರಾಯನ ಇತಿಹಾಸ ರಚನೆಗೆ ಮೂಲ ಆಕರವಾಗಲಿದೆ. ಈ ಹಸ್ತಪ್ರತಿಯನ್ನು ನನಗೆ ಅಧ್ಯಯನಕ್ಕೆ ನೀಡಿ ಮಾರ್ಗದರ್ಶನ ನೀಡಿರುವ ಪೂಜ್ಯ ಕೆಳದಿ ಶ್ರೀಗುಂಡಾ ಜೋಯಿಸರಿಗೆ ನನ್ನ ಅನಂತ ಧನ್ಯವಾದಗಳು.

೫. ಹಂಪೆ ಶಾಸನೋಕ್ತ ಮಹಿಳೆಯರು

ಡಾ. ಎಸ್.ಎಸ್. ಭಗವತಿ

ವಿಜಯನಗರದ ಕಾಲಕ್ಕೆ ಮಹಿಳೆ ಪುರುಷರಷ್ಟೆ ಸರಿಸಮಾನರಾದ ಸ್ಥಾನವನ್ನು ಪಡೆದು ಕಾರ್ಯ ಮಾಡಿರುವುದು ಕಂಡು ಬರುತ್ತದೆ. ಹಂಪೆ ಶಾಸನಗಳು ಈ ಮಾತಿಗೆ ಸಾಕ್ಷಿಯನ್ನೊದಗಿಸುತ್ತವೆ. ಈ ವಿಷಯವನ್ನು ಮೂರು ಭಾಗಗಳಲ್ಲಿ ವಿಭಾಗಿಸಿ ಅಭ್ಯಸಿಸ ಬಹುದು.

I. ರಾಣಿಯರು

II. ಹೆಗ್ಗಡತಿ

III. ಇತರ ಮಹಿಳೆಯರು

I. ರಾಣಿಯರು

ವಿಜಯನಗರದ ರಾಣಿಯರು ಸಾಮಾಜಿಕ, ಧಾರ್ಮಿಕ ಕಾರ್ಯಗಳಲ್ಲಿ ರಾಜರ ಜೊತೆ ಜೊತೆಗೆ ಕಾರ್ಯ ನಿರ್ವಹಿಸುತ್ತಿದ್ದರೆಂಬುದನ್ನು ಹಂಪೆ ಶಾಸನಗಳು ಎತ್ತಿ ಹೇಳುತ್ತವೆ.

ಬುಕ್ಕಯವೆ: ಕ್ರಿ.ಶ. 1397ರ ಶಾಸನ (ಹಂ.ಶಾ.ಸಂ. 57) ವೀರ ಹರಿಹರನ ರಾಣಿಯಾದ ಬುಕ್ಕಯವೆ ತನ್ನ ಗುರು ಭಾಸ್ಕರ ದೇವಯ್ಯನಿಗೆ ಪುಣ್ಯವಾಗಲೆಂದು ಜಡೆಯ ಶಂಕರದೇವರ ದೇವಸ್ಥಾನದಲ್ಲಿ ದೀಪಮಾಲೆ ಕಂಬವನ್ನು ನಿಲ್ಲಿಸಿದಳೆಂದು ತಿಳಿಸುತ್ತದೆ.

ಬುಕ್ಕಾಜಿ ಅಮ್ಮ : ಕ್ರಿ.ಶ. 1510ರ ಒಂದು ಶಾಸನ (ಹಂ.ಶಾ.ಸಂ. 32)ದಲ್ಲಿ ನರಸನಾಯಕನ ತಾಯಿ ಬುಕಾಜಿ ಅಮ್ಮ ಹಂಪೆಯ ತಿರುಮಲ ಭಟ್ಟನ ಮಗ ಸಾಇ ಭಟ್ಟನಿಗೆ ವಿರೂಪಾಕ್ಷದೇವರ ನೈವೇದ್ಯಕ್ಕಾಗಿ ಕಾಲ್ವಿಮುದ್ದಾನಹಳ್ಳಿಯಲ್ಲಿ ಭೂಮಿಯನ್ನು ಕೊಂಡುಕೊಂಡು ದಾನ ಬಿಟ್ಟದ್ದಾಗಿ ಹೇಳುತ್ತದೆ.

ಚಿನ್ನಾದೇವಿ ಮತ್ತು ತಿರುಮಲದೇವಿ: ಕ್ರಿ.ಶ. 1515ರ ಶಾಸನ (ಹಂ. ಶಾ.ಸಂ. 181) ಕೃಷ್ಣದೇವರಾಯನ ಪಟ್ಟದರಾಣಿಯಾದ ಚಿನ್ನಾದೇವಿ ಮತ್ತು ತಿರುಮಲದೇವಿ ಅಮ್ಮನವರು ವಿಠಲದೇವರಿಗೆ ಗೋಪುರವನ್ನು ಕಟ್ಟಿಸಿ ದೇವರ ನೈವೇದ್ಯ ಆರೋಗಣೆಗೆ ಚಿನ್ನದ ಹರಿವಾಣ, ಬಣ್ಣ, ಬೆಳ್ಳಿಯ ನೀಲಾಂಜನ ಹಲಗೆ, 9 ಹಿರಿಯ ಆರತಿ, 8.

ಪುರುಷಾಮೃಗದ ಆರತಿ, 3 ನಾಗಾರತಿ, 1 ಧೂಪಾರತಿ, 1ಖಡಬತ್ತಿ, 2 ಪ್ರತುಮೆ ಆರುತಿಗಳನ್ನು ದಾನಮಾಡಿದರೆಂದು ತಿಳಿಸುತ್ತದೆ.

ಕ್ರಿ.ಶ. 1518ರ ಇನ್ನೊಂದು ಶಾಸನ (ಹಂ. ಶಾ. ಸಂ.370)ದಲ್ಲಿ ತಿರುಮಲದೇವಿ ಅಮ್ಮ ಅವರು ಕುಮ್ಮರಗುಂಟೆ ಎಂಬ ಭೂಮಿಯನ್ನು ವಿಜಯನಗರದ ಅಂಜನಗಿರಿಯ ಕರಿಯ ತಿರುವೆಂಗಳನಾಥನಿಗೆ ತಿರುಮಲ ಮಹಾರಾಯರಿಗೆ ಪುಣ್ಯವಾಗಬೇಕೆಂದು ವಿಠಲೇಶ್ವರದೇವರ ಸನ್ನಿಧಿಯಲ್ಲಿ ದಾನ ನೀಡಿದಂತೆ ತಿಳಿಸುತ್ತದೆ.

ವರದಾಜಿ ಅಮ್ಮ: ಕ್ರಿ.ಶ1532ರ (ಹಂ.ಶಾ.ಸಂ. 33)ದಲ್ಲಿ ವರದಾಜಿ ಅಮ್ಮ ಬಾಲಕೃಷ್ಣದೇವರ ಅವಸರದ ಕಾರ್ಯಕ್ಕೆ ಒಂದು ದಿವಸಕ್ಕೆ 9 ಚಕ್ರಗದ್ಯಾಣದ ಲೆಕ್ಕದಲ್ಲಿ ವರ್ಷಕ್ಕೆ 3240 ಚಕ್ರಗದ್ಯಾಣವನ್ನು, ಬಾಲಕೃಷ್ಣ ದೇವರ ಚಿನ್ನದ ಉಯ್ಯಾಲೆಯ ತಿರುನಾಳು (ಹಬ್ಬದ ದಿನ; ಪರ್ವದ ದಿನ) 1ಕ್ಕೆ 300 ಚಕ್ರಗದ್ಯಾಣ, ಕೊಡೆ ತಿರುನಾಳು 1ಕ್ಕೆ 300 ಚಕ್ರಗದ್ಯಾಣ ಸೇರಿ ಒಟ್ಟು 3840 ಚಕ್ರಗದ್ಯಾಣಗಳನ್ನು ನೀಡಿ, ಪೂಜಾ ಪ್ರಸಾದವನ್ನು ಪಂಚಾನಾಥ, ಪರದೇಸಿ ಶ್ರೀ ವೈಷ್ಣವರಿಗೆ ನೀಡಬೇಕೆಂದು ತಿಳಿಸುತ್ತಾಳೆ.

ಹರಿಯಮ್ಮಾಜಿ: ಕ್ರಿ.ಶ. 1712ರ ಒಂದು ಶಾಸನ (ಹಂ.ಶಾ.ಸಂ. 31) (ಕೂಡ್ಲಗಿ ತಾಲೂಕ) ಬಾಗಳಿಯ ಹರಿಯಮ್ಮಾಜಿಯ ಕೊಟ್ಟೂರ ಬಸವೇಶ್ವರದೇವರಿಗೆ ಎಥಿನಹಾಳ ಗ್ರಾಮವನ್ನು ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ.

ಅಣ್ಣಲ ದೇವಿ : ಕಾಲದ ಉಲ್ಲೇಖವಿಲ್ಲದ ಒಂದು ಶಾಸನ (ಹಂ.ಪಾ. ಸಂ. 258) ಅಣ್ಣಲದೇವಿಯು ರಾಮಚಂದ್ರದೇವರಿಗೆ ಚಿನ್ನದ ಹರಿವಾಣ (ತಟ್ಟೆ) ಮತ್ತು ಬಟ್ಟಲು ಸಮರ್ಪಿಸಿದಳೆಂದು ತಿಳಿಸುತ್ತದೆ.

II. ಹೆಗ್ಗಡತಿ

ರಾಣಿಯರಂತೆ ಹೆಗ್ಗಡತಿಯರು ಧಾರ್ಮಿಕ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಬಗೆಗೆ ಹಂಪೆ ಶಾಸನಗಳು ಆಧಾರ ಒದಗಿಸುತ್ತವೆ.

ಉಮಾದೇವಿ : ಕಾಲದ ಉಲ್ಲೇಖವಿಲ್ಲದ ಒಂದು ಶಾಸನ (ಹಂ.ಶಾ.ಸಂ. 87)ದಲ್ಲಿ ಪಾಪವಿನಾಶಿ ತೀರ್ಥವನ್ನು ಹೆಗ್ಗಡತಿ ಉಮಾದೇವಿ ಜೀರ್ಣೋದ್ಧಾರ ಮಾಡಿಸಿದಂತೆ (?) ತಿಳಿಸುತ್ತದೆ.

III. ಇತರ ಮಹಿಳೆಯರು

ತಿರುಮಲಮ್ಮ : ಕ್ರಿ.ಶ. 1533ರ ಒಂದು ಶಾಸನ (ಹಂ.ಕಾ.ಸಂ.50) ಅಚ್ಯುತ ದೇವರಾಯನು ವಿಠಲೇಶ್ವರ ಸನ್ನಿಧಿಯಲ್ಲಿ ನೀಡಿದ ಸುವರ್ಣ ಮೇರು ದಾನದ ಬಗ್ಗೆ ಓದುವ ತಿರುಮಲಮ್ಮ "... ಬಾಣ ಪ್ರಾಣ ಪಯೋದಿ ಶೀತಕರ ಶಂಖ್ಯಾತೇ ಶಕೇವತ್ಸರೇ

ವಿಖ್ಯಾತೇ ವಿಜಯೇಚ ಮಾಸೆ ಸಹಿತ ಸ್ವಚ್ಛೇ ಚ ಪಕ್ಷೇ ಗುರೋವಾರೇ ವಿಷ್ಣು ದಿನೇ ಶುಭೇ ಪರಿಸರೇ ಶ್ರೀ ವಿಠಲದಿಶಿತುಃ ಧೀರ ಕಾಂಜನಮೇರು ದಾನ ಮಕರೋದ್ವೀ ರೋಚ್ಯುತಾಕ್ಷ್ಮಾಪತಿಃ" ಎಂಬ ಶ್ಲೋಕವನ್ನು ರಚಿಸಿದಳೆಂದು ತಿಳಿಸುತ್ತದೆ. ತಿರುಮಲಮ್ಮನ ಈ ಶ್ಲೋಕವನ್ನು ಗಮನಿಸಿದರೆ ಅವಳು ಅಂದು ಒಬ್ಬ ಶ್ರೇಷ್ಠ ಕವಯಿತ್ರಿಯಾಗಿರಬಹುದು. ಅವಳ ಕುರಿತು ಹೆಚ್ಚಿನ ಮಾಹಿತಿ ತಿಳಿದು ಬರುವುದಿಲ್ಲ.

ಮಾಟಮ್ಮ: ಕಾಲದ ಉಲ್ಲೇಖವಿಲ್ಲದ ಒಂದು ತೆಲುಗು ಶಾಸನ (ಹಂ.ಶಾ.ಸಂ. 19) ಬೋಜಸೆಟ್ಟಿಯ ಮಗ ಸಿರಿಗಿಸೆಟ್ಟಿಯ ಹೆಂಡತಿ ಮಾಟಮ್ಮಳು ಹಂಪೆಯ ಉಯ್ಯಾಲೆಗಾಗಿ ಕಂಬ ನಿಲ್ಲಿಸಿದ್ದನ್ನು ತಿಳಿಸುತ್ತದೆ.

ರಾಮಾಯಿ: ಕಾಲದ ಉಲ್ಲೇಖವಿಲ್ಲದ ಇನ್ನೊಂದು ಶಾಸನ (ಹಂ.ಶಾ.ನಂ. 116) ಮಟ್ಟರಸ ಮತ್ತು ಮಂಗಾಯರ ಮಗಳಾದ ರಾಮಾಯಿಯು ವಿರೂಪಾಕ್ಷ ದೇವರ ಕಳಸವನ್ನು ಕಂಡು ಕೃತಾರ್ಥಳಾದಳೆಂದು ಹೇಳುತ್ತದೆ. ಇವರಲ್ಲದೆ.

ಕಾವವ್ವೆ, ಕಾಮವ್ವೆ, ಕಾಮವ್ವೆ ನಾಯಕಿತಿ, ಕೋನಾಜಿ ಅಮ್ಮ, ಗಂಗವ್ವನಾಯಕಿತಿ, ಗಂಗಾದೇವಿ, ತಿಮ್ಮಾಜಯಮ್ಮ, ನಾಗಾಂಬಿಕಾ, ನಾಗಲಾದೇವಿ, ಪಂಪಾಂಬಿಕಾದೇವಿ, ಪಂಪಾದೇವಿ, ಪರ್ವತದೇವಿ, ಮಾದೇವಿ, ಮಾರಮ್ಮ, ಮಾರೋನಾಮಕಿತಿ, ಮುದೆಯಮ್ಮ, ಲಕ್ಮಲೆ, ಲಕ್ಕಾಂಬಿಕಾ, ಲಕ್ಷ್ಮಿದೇವಿ ಅಮ್ಮ, ಮಹಾಲಕ್ಷ್ಮೀ, ಮಣ ತಾಯಮ್ಮ, ಅಣ್ಣಮ್ಮ, ವೀರಮ್ಮ, ಗೌರಿ, ವರಗಂಗಾದೇವಿ, ಗಾಯತ್ರಿ, ಭಾಗೀರಥಿ, ಗಂಗಾಪರಮೇಶ್ವರಿ, ವೊಬಳದೇವಿ, ಬನದಮ್ಮ, ಕಲ್ಲಾಯಿ, ಮಾದಮ್ಮ, ಹಾಚಲೆ, ಕೌಶಲ್ಯಾ, ಸುಮಿತ್ರಾ, ಸಿಂಗಲೆ, ಸೋಮಲೆ, ವೆಂಗಳಮ್ಮ ಪೂವಾಯಿ, ಸಾತಾಯಿ, ಭಯಿರಾಯಿ ಎಂಬ ಮಹಿಳೆಯರ ಹೆಸರುಗಳು ಹಂಪೆ ಶಾಸನಗಳಲ್ಲಿ ಉಲ್ಲೇಖವಾಗಿವೆ. ಆದರೆ ಇವರ ಯಾವ ವಿವರಗಳೂ ದೊರೆಯುವುದಿಲ್ಲ.

ವಿಜಯನಗರ ಸಾಮ್ರಾಜ್ಯದಲ್ಲಿ ಬುಕ್ಕಯವೆಯಂತಹ ರಾಣಿಯರು ದೇವಸ್ಥಾನಗಳಿಗೆ ದೀಪ ಮಾಲೆ ಕಂಬವನ್ನು ನಿಲ್ಲಿಸಿರುವುದು, ಬುಕ್ಕಾಜಿ ಅಮ್ಮನಂತಹವರು ಭೂಮಿ ದಾನ ಮಾಡಿರುವುದನ್ನು ಗಮನಿಸಿದರೆ, ರಾಣಿಯರು ಅಂದು ರಾಜರ ಸರಿಸಮಾನವಾಗಿ ಸಾಮಾಜಿಕ ಕಾರ್ಯ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ದೇವಸ್ಥಾನಗಳಿಗೆ ದಾನದತ್ತಿಗಳನ್ನು ರಾಜರಂತೆ ರಾಣಿಯರೂ ನೀಡುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ.

ಉಮಾದೇವಿಯಂತಹ ಹೆಗ್ಗಡತಿ ತೀರ್ಥಗಳನ್ನು ಜೀರ್ಣೋದ್ಧಾರ ಮಾಡಿಸಿದ ಬಗ್ಗೆ ಹಂಪೆ ಶಾಸನಗಳು ಸಾಕ್ಷಿ ಒದಗಿಸುತ್ತವೆ. ಅಲ್ಲದೆ, ತಿರುಮಲಮ್ಮನಂತಹ ಶ್ರೇಷ್ಠ ಕವಿಯಿತ್ರಿಯರು ಶ್ಲೋಕ ರಚಿಸಿರುವುದು ಮತ್ತು ಸಾಮಾನ್ಯವರ್ಗದ ಮಹಿಳೆಯರು ಉಯ್ಯಾಲೆ ಕಂಬಗಳನ್ನು ನಿಲ್ಲಿಸಿದ ವಿಷಯವನ್ನು ಹಂಪೆ ಶಾಸನಗಳು ತಿಳಿಸುತ್ತವೆ. ಈ ಎಲ್ಲ ಅಂಶಗಳನ್ನು ಗಮನಿಸಿದರೆ ವಿಜಯನಗರ ಸಾಮ್ರಾಜ್ಯವನ್ನು ಸ್ತ್ರೀಯರು ಧಾರ್ಮಿಕ,

ಸಾಮಾಜಿಕ ಕಾರ್ಯಗಳಲ್ಲಿ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ. ಆದರೆ ಅವರು ರಾಜ್ಯಾಡಳಿತದಲ್ಲಿ ಭಾಗವಹಿಸಿದ ಮತ್ತು ಇತರ ಸಾಮಾಜಿಕ ಕಾರ್ಯಗಳನ್ನು ನಿರ್ವಹಿಸಿದ ವಿಷಯಗಳಾವುವು ಈ ಶಾಸನಗಳಲ್ಲಿ ಪ್ರಸ್ತಾಪವಾಗಿಲ್ಲ.

ಆಕರ

ಡಾ. ದೇವರಕೊಂಡಾರೆಡ್ಡಿ (ಸಂ): ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ :3. ಹಂಪಿ ಶಾಸನಗಳು. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹೊಸಪೇಟೆ 2000.

೬. ವಿಜಯನಗರದ ಕುಸ್ತಿಯ ಬಗ್ಗೆ ಎರಡು ಶಾಸನಗಳು

ಜೈನುಲ್ಲಾ ಬಳ್ಳಾರಿ

ವಿಜಯನಗರದಲ್ಲಿ ಕುಸ್ತಿಯ ಕಲೆಯು ಮಲ್ಲಕಾಳಗ, ಬಾಹುಯುದ್ಧ, ಗರಡಿ ವಿದ್ಯೆ ಮುಂತಾದ ಹೆಸರುಗಳಿಂದ ಅತ್ಯಂತ ಜನಪ್ರಿಯವಾಗಿತ್ತು. ಇದು ಸಮರ ಕಲೆಯ ಒಂದು ಭಾಗವಾಗಿ, ಮನರಂಜನೆಯ ಕ್ರೀಡಾ ಪ್ರದರ್ಶನವಾಗಿ ರಾಜರ ಮತ್ತು ಜನರ ಮನ್ನಣೆಗೆ ಪಾತ್ರವಾಗಿತ್ತು. ಅಬ್ದುಲ್ ರಜಾಕ್, ನ್ಯೂನಿಜ್, ಪಯಸ್, ಬಾರ್ಬೋಸಾ ಮುಂತಾದ ವಿದೇಶಿ ಪ್ರವಾಸಿಗರು ಕುಸ್ತಿಯಾಟವನ್ನು ಕಣ್ಣಾರೆ ಕಂಡು, ಹಲವು ಸನ್ನಿವೇಶ ಗಳನ್ನು ತಮ್ಮ ಪ್ರವಾಸಕಥನಗಳಲ್ಲಿ ದಾಖಲಿಸಿದ್ದಾರೆ. ಕನ್ನಡದ ಮಹಾಕವಿಗಳಾದ ಕುಮಾರ ವ್ಯಾಸ, ರತ್ನಾಕರವರ್ಣಿ, ಷಡಕ್ಷರದೇವ, ನಂಜುಂಡ ಮುಂತಾದ ಕವಿಗಳು ತಮ್ಮ ಕಾವ್ಯ ಕೃತಿಗಳಲ್ಲಿ ಕುಸ್ತಿಕಾಳಗದ ಸಂದರ್ಭಗಳನ್ನು ಜೀವಂತವಾಗಿ ಚಿತ್ರಿಸಿದ್ದಾರೆ. ಹಜಾರ ರಾಮದೇವಾಲಯ, ವಿಜಯವಿಠ್ಠಲಸ್ವಾಮಿ ದೇವಾಲಯ, ಅಚ್ಯುತ ದೇವರಾಯ ದೇವಾ ಲಯ, ವಿರೂಪಾಕ್ಷ ದೇವಾಲಯ, ಮಹಾನವಮಿ ದಿಬ್ಬ, ಕೋಟೆಯ ಹೆಬ್ಬಾಗಿಲು ಇತ್ಯಾದಿ ಕಟ್ಟಡ, ಗೋಡೆ ನಿರ್ಮಾಣಗಳಲ್ಲಿ, ಪಟ್ಟಿಕೆಗಳಲ್ಲಿ ಕೆತ್ತಲಾಗಿರುವ ಉಬ್ಬು ಶಿಲ್ಪಗಳಲ್ಲಿ ಕುಸ್ತಿಯಾಟದ ನಾನಾ ಸನ್ನಿವೇಶಗಳು ಸೇರಿಕೊಂಡಿವೆ. ಮಹಾನವಮಿ ಉತ್ಸವ ಹಬ್ಬ ಹರಿದಿನ ಇತ್ಯಾದಿ ಕೆಲವು ವಿಶೇಷ ಸಂದರ್ಭಗಲಲ್ಲಿ ಕುಸ್ತಿ ಪಂದ್ಯಾಟವನ್ನು ಏರ್ಪಡಿಸುತ್ತಿದ್ದರು. ರಾಜರು ಪ್ರಜೆಗಳು ಇತ್ಯಾದಿಯಾಗಿ ಎಲ್ಲರೂ ಇಂತಹ ಪಂದ್ಯಾಟ ಗಳನ್ನು ನೋಡಿ ಸಂತೋಷಪಡುತ್ತಿದ್ದರು, ಜಟ್ಟಿಗಳನ್ನು ಪ್ರೋತ್ಸಾಹಿಸುತ್ತಿದ್ದರು.

ಈ ಹಿನ್ನೆಲೆಯಲ್ಲಿ ವಿಜಯನಗರದ ಕುಸ್ತಿಯ ಕುರಿತು ಶಾಸನಗಳಲ್ಲಿ ಏನಾದರೂ ಉಲ್ಲೇಖಗಳು ಸಿಗುತ್ತವೆಯೇ ಎಂದು ನೋಡಿದಾಗ, ಮಾಹಿತಿಗಳು ದೊರೆಯುವುದಿಲ್ಲ. ಜನಜೀವನದ ಒಂದು ಭಾಗವಾಗಿದ್ದ ಈ ಕಲೆಯ ಬಗೆಗೆ ಆಧಾರ ನೀಡಬಲ್ಲ ಶಾಸನಗಳು ಬಹಳಷ್ಟು ಇಲ್ಲ. ಲಭ್ಯವಾಗಿರುವ ಶಾಸನಗಳ ಪೈಕಿ ಅಪರೂಪ ಎನ್ನುವಂತೆ ಎರಡು ಶಾಸನಗಳು ಮುಖ್ಯವಾಗಿ ಗಮನ ಸೆಳೆಯುತ್ತವೆ. ಮಾಲ್ಯವಂತ ಬೆಟ್ಟದಿಂದ ತಳವಾರ ಘಟ್ಟದ ಕಡೆಗೆ ಹೋಗುವ ರಸ್ತೆಯಲ್ಲಿ ಅಸಂಖ್ಯಾತ ಗೋರಿಗಳನ್ನು ವಸತಿ ವಿನ್ಯಾಸ ಗಳನ್ನು ಒಳಗೊಂಡಿರುವ ಒಂದು ಬೆಟ್ಟದ ತಪ್ಪಲು ಪ್ರದೇಶದಲ್ಲಿ ಒಂದು ಶಾಸನ ದೊರೆತಿದೆ. ವಿಜಯನಗರದ ಪ್ರಜೆಗಳಾಗಿದ್ದ ಮುಸ್ಲಿಮರು ವಾಸವಾಗಿದ್ದ ನೆಲೆಯಿದು. ಇಲ್ಲಿರುವ ಅಸಂಖ್ಯಾತ ಕುರುಹುಗಳನ್ನು ಆಧರಿಸಿ ನಡೆದಿರುವ ಶೋಧನೆಗಳು ಇದನ್ನು

ಸ್ಪಷ್ಟಪಡಿಸಿವೆ. ಇಲ್ಲಿರುವ ಅಹಮದ್‌ಖಾನ್ ಧರ್ಮಶಾಲೆ (ಮಸೀದಿ) ಹತ್ತಿರದಲ್ಲಿರುವ ಮಂಟಪದ ಗುಂಡಿನಲ್ಲಿ ಶಾಸನವೊಂದನ್ನು ಕೆತ್ತಲಾಗಿದೆ.

ಒಂದನೆ ಶಾಸನ : ಕುಸ್ತಿಯಲ್ಲಿ ಮುಸ್ಲಿಮರು

ಕ್ರಿ.ಶ. 1441ರ ಕಾಲದ ಈ ಶಾಸನವು ಮುಸ್ಲಿಮ್ ಪೈಲ್ವಾನನೊಬ್ಬನ ಬಗ್ಗೆ ಉಲ್ಲೇಖ ನೀಡುತ್ತದೆ. 'ಶ್ರೀಮತು ಹಾಮಾದಿಮ ಮೀರಿಪಾಲುವಾನನು ದಾವಿಮಯನ ಮಗ ಬರಿಯಮ ಕೊಟ್ಟ ಮನೆಯ ಕ್ರಯ ಗ(ದೆ) ಅಕ್ಷಾರದಲು ಆರುವರಾಹಕೆ ಬಿಟ್ಟ ಶಾಸನ ಮಲುಖಾನನ ಪಾಗೆ....'[1]. ಹಾಮಾದಿ ಮಮೀರಿ ಪಾಲುವಾನನು (ಮೀರ್ ಪಹಿಲ್‌ವಾನ್?) ಮತ್ತು ದಾವಿಮಯನ ಮಗ ಬರಿಯಮನು ಮಲುಖಾನನಿಗೆ ಮನೆಯೊಂದನ್ನು ಆರು ವರಾಹಗಳಿಗೆ ಕೊಂಡು ದಾನವಾಗಿ ಕೊಟ್ಟಿದ್ದು ಆ ಶಾಸನದ ಸಾರಾಂಶ.

ಈ ಶಾಸನದಲ್ಲಿ ಉಲ್ಲೇಖಗೊಂಡಿರುವ 'ಮೀರಿಪಾಲುವಾನ' ಎಂಬ ವ್ಯಕ್ತಿಯ ಹೆಸರು 'ಮೀರ್‌ಪಹೀಲ್‌ವಾನ್' ಆಗಿರಬಹುದೆ ಎಂದು 'ಹಂಪಿ ಶಾಸನ' ಸಂಪುಟದ ಸಂಪಾದಕರು 'ಕಂಸದಲ್ಲಿ ಈ ಹೆಸರಿನ ಮುಂದೆ ಪ್ರಶ್ನಾರ್ಥಕ ಚಿಹ್ನೆ'ಯಿಟ್ಟು ಸಂದೇಹ ವ್ಯಕ್ತಪಡಿಸಿದ್ದಾರೆ.[2] ಇದನ್ನು ಸ್ಪಷ್ಟಪಡಿಸುವ ಅಗತ್ಯವಿದೆ. ಕನ್ನಡ ಮತ್ತು ತೆಲುಗು ಶಾಸನಗಳ ಮಾಧ್ಯಮಕ್ಕೆ ವಿಜಯನಗರ ರಾಜಧಾನಿಯ ಮುಸ್ಲಿಮ್ ಪ್ರಜೆಗಳ ಹೆಸರುಗಳು ದಾಖಲೆಗೆ ಒಗ್ಗಿಕೊಳ್ಳುತ್ತಿದ್ದ ಪ್ರಾರಂಭಿಕ ಪ್ರಕ್ರಿಯೆ ಆಗತಾನೆ ಶುರುವಾಗಿದ್ದಂತೆ ತೋರುತ್ತದೆ. ಮುಸ್ಲಿಮ್ ಜನಪದರ ವಸ್ತುವಾಚಕ, ನಾಮವಾಚಕ ಪದಗಳನ್ನು ಉಚ್ಚಾರಕ್ಕೆ ತಕ್ಕಂತೆ ಬರಹಕ್ಕೆ ಇಳಿಸುವಾಗ ಅಲ್ಪಸ್ವಲ್ಪ ಕಾಗುಣಿತ ಬದಲಾವಣೆಗಳನ್ನು ಶಾಸನದ ಲಿಪಿಕಾರರು ಮಾಡಿಕೊಂಡಂತಿದೆ. ಆಹಮುದಖಾನ (ಅಹಮದ್ ಖಾನ್), ಮಸೂಜಿ (ಮಸೀದಿ), ಮಲುಖಾನ (ಮೌಲಾಖಾನ್), ಕಬಿರುರಾವುತ (ಕಬೀರ್ ರಾಹುತ), ಗುಂಮಥ (ಗುಮ್ಮಟ), ಮುರಿದ (ಮುರೀದ್), ಮಖಾತೀರ್ಥ (ತೀರ್ಥಸ್ಥಳ ಮಕ್ಕಾ), ಕಲಾಬನಾಣೆ (ಕರ್ಬಲಾ ಆಣೆ). ಇದೇ ರೀತಿ 'ಮೀರಿಪಾಲುವಾನ' ಎಂಬ ಬರಹದ ಉಚ್ಚಾರವು ಮೀರ್‌ಪಹಿಲ್ವಾನ್, ಮೀರ್‌ಪೈಲ್ವಾನ್ ಆಗಿದೆ. ಪೈಲ್ವಾನ್ ಎಂಬ ಪದವು ಆತನ ವೃತ್ತಿಗೆ ಅಥವಾ ಕರಗತ ಮಾಡಿಕೊಂಡಿದ್ದ ಕಲೆಗೆ ದ್ಯೋತಕವಾಗಿ, ಗುಣವಾಚಕ ಪದವಾಗಿ ಹೆಸರಿನ ಮುಂದೆ ಲಿಪಿಕಾರ ಸೇರಿಸಿದ್ದಾನೆ. ಆದ್ದರಿಂದ ಖಂಡಿತಾ ಈತ ಮಲ್ಲಕಲೆಯಲ್ಲಿ ಪಳಗಿದವನಾಗಿರಬೇಕೆಂಬ ಇತ್ಯರ್ಥಕ್ಕೆ ಬರಬಹುದಾಗಿದೆ.

ಇದನ್ನು ಇನ್ನಷ್ಟು ಆಧಾರಗಳ ಮೂಲಕ ಸಮರ್ಥಿಸಿ ನೋಡಬಹುದು.ಹಂಪಿ ಪರಿಸರದಲ್ಲಿ ದೊರೆತಿರುವ ಶಾಸನಗಳ ಪೈಕಿ ಸುಮಾರು ಹತ್ತು ಶಾಸನಗಳು, ಮುಸ್ಲಿಮರು ವಿಜಯನಗರದಲ್ಲಿ ಸಮೃದ್ಧ ಬದುಕು ಸಾಗಿಸಿದರೆಂಬುದನ್ನು ಉಲ್ಲೇಖಿಸುತ್ತವೆ. ಪ್ರಭುತ್ವದ ಆಡಳಿತಕ್ಕೆ ಸಂಬಂಧಪಟ್ಟ ಕೆಲವು ಸೇವೆಗಳಲ್ಲಿ, ಜನಜೀವನದ ವಿವಿಧ

ಕ್ಷೇತ್ರಗಳಲ್ಲಿ ಅವರು ಎಲ್ಲರಂತೆ ಪರಿಶ್ರಮ ಹೊಂದಿದ್ದರೆಂದು ತಿಳಿಯುತ್ತದೆ. ಮುಖ್ಯವಾಗಿ ಸೈನ್ಯಬಲದಲ್ಲಿ ಅವರಿಗೆ ಪ್ರಾಮುಖ್ಯತೆ ನೀಡಲಾಗಿತ್ತು. ವಿಜಯನಗರದ ಸೈನ್ಯವನ್ನು ಬಲಪಡಿಸುವುದಕ್ಕಾಗಿ ಎರಡನೇ ದೇವರಾಯನು ಅಶ್ವದಳ, ಪದಾತಿದಳ ಮತ್ತು ಬಿಲ್ಲುಪಡೆಯಲ್ಲಿ ಹಲವು ಬದಲಾವಣೆಗಳನ್ನು ಮಾಡಿಕೊಂಡಿದ್ದನೆಂದು ತಿಳಿಯುತ್ತದೆ. ಈ ಮೂರು ವಿಧದ ಸಮರಕಲೆಗಳಲ್ಲಿ ಮುಸಲ್ಮಾನರು ಹೆಚ್ಚಿನ ಪರಿಶ್ರಮ ಹೊಂದಿರುವುದನ್ನು ಅರಿತಿದ್ದ ಆತನು ತನ್ನ ಸೈನ್ಯ ಸಂಘಟನೆಯಲ್ಲಿ ಅವರು ಸೇರುವುದಕ್ಕೆ ಉತ್ತೇಜನ ನೀಡಿದ್ದನು. 'ಕ್ರಿ.ಶ.1430ರ ಶ್ರೀರಂಗಪಟ್ಟಣದ ಶಾಸನವೊಂದರ ಪ್ರಕಾರ ಎರಡನೇ ದೇವರಾಯನು ಸೈನ್ಯವ್ಯವಸ್ಥೆಯಲ್ಲಿ 10 ಸಾವಿರ ಮುಸ್ಲಿಮರ ಕುದುರೆ ಪಡೆಯನ್ನು ಹೊಂದಿದ್ದನು. ಯುದ್ಧ ಕಲೆಯಲ್ಲಿ ಪರಿಣತರಾದ ಮುಸ್ಲಿಮರನ್ನು ಸೇರಿಸಿಕೊಳ್ಳುವುದರ ಮೂಲಕ ಆತ ಸೈನ್ಯ ಸಂಘಟನೆಯನ್ನು ಬಲಪಡಿಸಿದನು. ಅವರಿಗೆ ಅನೇಕ ಜಾಗೀರುಗಳನ್ನು ನೀಡಿದನು. ವಿಜಯನಗರದಲ್ಲಿ ಮಸೀದಿಗಳನ್ನು ನಿರ್ಮಿಸು ವುದಕ್ಕೆ ಮತ್ತು ಮುಸಲ್ಮಾನರು ತಮ್ಮ ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಹೋಗುವುದಕ್ಕೆ ತನ್ನ ಅಧಿಕಾರಿಗಳಿಂದಾಗಲಿ, ಇತರ ಪ್ರಜೆಗಳಿಂದಾಗಲಿ ಅಡ್ಡಿಯಾಗಲಿ, ಅಪಚಾರವಾಗಲಿ ಆಗಕೂಡದೆಂದು ಆಜ್ಞೆ ಮಾಡಿದ್ದನು. ಅಲ್ಲದೆ ತನ್ನ ಸಿಂಹಾಸನದ ಮುಂದುಗಡೆ ಒಂದು ಉನ್ನತ ಪೀಠದಲ್ಲಿ ಪವಿತ್ರ ಕುರಾನಿನ ಪ್ರತಿಯನ್ನು ಇಡಬೇಕೆಂದು ಆಜ್ಞೆ ಮಾಡಿದ್ದನು. ಈ ಪವಿತ್ರ ಗ್ರಂಥಕ್ಕೆ ನಮಿಸುವುದರ ಮೂಲಕ ವಿಧೇಯ ರಾಗಿರುವಂತೆ ತನ್ನಲ್ಲೂ ವಿಶ್ವಾಸವನ್ನು ತೋರಬೇಕೆಂದು ಬಯಸಿದ್ದನು.'[3]

ಸೈನ್ಯದಕ್ಷತೆಯನ್ನು ಹೆಚ್ಚಿಸುವ, ಸುಧಾರಿಸುವ, ವಿಶೇಷ ತರಬೇತು ನೀಡುವ ಪ್ರಕ್ರಿಯೆ ಮೊದಲನೆ ದೇವರಾಯನ ಕ್ರಿ.ಶ. (1406-1422) ಕಾಲದಲ್ಲೇ ಆರಂಭವಾದಂತೆ ಕಾಣುತ್ತದೆ. 'ಒಂದನೇ ದೇವರಾಯನು ಅಶ್ವದಳದ ಮೌಲ್ಯವನ್ನು ಅರಿತವನಾಗಿದ್ದು ದರಿಂದ ಅರೇಬಿಯಾ ಮತ್ತು ಪರ್ಶಿಯಾ ದೇಶಗಳಿಂದ ಕುದುರೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಕೊಂಡುಕೊಂಡು ಅವುಗಳನ್ನು ಪಳಗಿಸಲು ಸಿಬ್ಬಂದಿಯನ್ನು ನಿಯಮಿಸಿ ದನು. ಅವನು ವಿದೇಶಿಯರನ್ನು ತನ್ನ ಸೇನೆಗೆ ನೇಮಕ ಮಾಡಿಕೊಂಡನು'[4] ಇದರಿಂದ ವಿಜಯನಗರದ ಸೈನಿಕ ವ್ಯವಸ್ಥೆಯಲ್ಲಿ ಸಮರ ಕಲೆಗಳನ್ನು ಕರಗತ ಮಾಡಿಕೊಂಡಿದ್ದ ಮುಸ್ಲಿಮರು ಅಸಂಖ್ಯಾತರಾಗಿದ್ದರು. ಅವರಲ್ಲಿ ಹಲವರು ಅಧಿಕಾರಿಗಳೂ ಆಗಿದ್ದರು. ಅಂತಹ ಅಧಿಕಾರಿಯೊಬ್ಬನ ಹೆಸರು ಕ್ರಿ.ಶ.1439ನೇ ಅವಧಿಯ ಹಂಪಿ ಶಾಸನ ವೊಂದರಲ್ಲಿ ಕಾಣಿಸುತ್ತದೆ. 'ಶ್ರೀ ವೀರಪ್ರತಾಪ ದೇವರಾಯ ಮಹಾರಾಯರ ಶ್ರೀಪಾದ ಸೇವೆಯಕಟಿಗೆಯ ಆಮುದಖಾನನು ರಾಯರಿಗೆ ಧರ್ಮವಾಗಬೇಕೆಂದು ಕಟಿಸಿದ ಧರ್ಮಸಾಲೆ ಬಾವಿ...'[5] ಇಲ್ಲಿ ಉಲ್ಲೇಖಿಸಲಾಗಿರುವ 'ಧರ್ಮಸಾಲೆ' ಮುಸ್ಲಿಮರು ಪ್ರಾರ್ಥನೆ ಸಲ್ಲಿಸುವ ಮಸೀದಿ ಎಂಬುದು ವಾಸ್ತು ನಿರ್ಮಾಣದ ಒಳಲಕ್ಷಣದಿಂದ

ದೃಢಪಟ್ಟಿದೆ. ಈ ಮಸೀದಿಯ ತೊಲೆಯ ಮೇಲೆ ಈ ಶಾಸನ ಕೆತ್ತಿಸಿದ ವ್ಯಕ್ತಿ ಬಹುಶಃ ದಂಡವನ್ನು ಹಿಡಿಯುತ್ತಿದ್ದ ಒಬ್ಬ ಅಧಿಕಾರಿ ಅಹಮದ್ ಖಾನ್'[6] ಎಂದೂ ಡಾ. ಚೆನ್ನಬಸಪ್ಪ ಎಸ್. ಪಾಟೀಲರು ಮತ್ತು 'ಕಟ್ಟಿಗೆ ಅಹಮದ್ ಖಾನ್ ಇಮ್ಮಡಿ ದೇವರಾಯನ ಅಂಗರಕ್ಷಕನಾಗಿದ್ದ. ಮಹಾರಾಜನಿಗೆ ಒಳ್ಳೆಯದಾಗಲೆಂದು ಆತ ಒಂದು ಅನ್ನಛತ್ರ ಕಟ್ಟಿಸಿದ. ಈಗಲೂ ಅದನ್ನು ನೋಡ ಬಹುದು. ಅದರ ಪಕ್ಕದಲ್ಲೆ ಆತನ ಗೋರಿಯೂ ಇದೆ'[7] ಎಂದು ಡಾ. ವಸುಂಧರಾ ಫಿಲಿಯೋಜಾ ಅವರು ತಿಳಿಸುತ್ತಾರೆ. ಇವರಿಬ್ಬರ ಉಲ್ಲೇಖಗಳನ್ನು ಅನುಸರಿಸಿ ಹೇಳುವುದಾದರೆ ಅಹಮದ್ ಖಾನ್ ಒಬ್ಬ ಸಾಮಾನ್ಯ ಪ್ರಜೆಯಾಗಿರದೆ ಇಮ್ಮಡಿ ದೇವರಾಯನ ಸೈನ್ಯದಲ್ಲಿ ಒಂದು ಪ್ರಮುಖ ಸ್ಥಾನ ಪಡೆದಿದ್ದನೆಂಬುದು ಖಚಿತವಾಗುತ್ತದೆ.

ಸಮರಕಲೆಯಲ್ಲಿ ನಿಷ್ಣಾತರಾದ ಮುಸ್ಲಿಮ್ ವೀರರ ಬಗ್ಗೆ ಮಾಹಿತಿಯನ್ನು ಕಲೆ ಹಾಕಲು ಕನ್ನಡದ ಗಂಡುಗಲಿ, ಕುಮ್ಮಟದುರ್ಗ -ಹೊಸಮಲೆದುರ್ಗದ ವೀರ ಕುಮಾರರಾಯನ ಕಾಲಕ್ಕೂ ಹೋಗಬಹುದು. ಕುಮಾರರಾಮನಿಗೆ ಆಪ್ತರಾಗಿದ್ದ, ಅಂಗರಕ್ಷರಾಗಿದ್ದ ಆತನ ವಾರಗೆಯ ಸುಮಾರು 100 ರಷ್ಟು ಸ್ನೇಹಿತರ ಪಡೆಯಲ್ಲಿ ಬಾದೂರಖಾನ (ಕುಮಾರರಾಮನ ಆಶ್ರಯ ಪಡೆದವ), ಮಹಿಮೆಯ ಕಾನ, ಅಬ್ದುಲ್‌ಖಾನ ಎಂಬುವರೂ ಇದ್ದರು. ಸಮರಕಲೆಯಲ್ಲಿ ಪಳಗಿದವರಾಗಿದ್ದ ಇವರು ಕುಮಾರರಾಮನ ನಡೆಸಿದ ಯುದ್ಧಗಳಲ್ಲಿ ಪಾಲ್ಗೊಂಡು ವೀರತನ ಮೆರೆದಿದ್ದನ್ನು ನಾವು ಕಾಣುತ್ತೇವೆ.[8]

ಈ ಮೇಲಿನ ಎಲ್ಲ ವಿಚಾರಗಳನ್ನು ತಾಳೆಹಾಕಿ ನೋಡಿದಾಗ, ವಿಜಯನಗರದ ಸೈನ್ಯದಲ್ಲಿದ್ದ ಯೋಧರಿಗೆ ಸಮರಕಲೆಯ ಒಂದು ಪ್ರಕಾರವಾಗಿದ್ದ ಕುಸ್ತಿಕಲೆ ಕರಗತ ವಾಗಿತ್ತು. ಈ ಪಡೆಯಲ್ಲಿರಬಹುದಾದ ಮೀರ್‌ಪೈಲ್ವಾನನು ಶಾಸನದ ಮಾಧ್ಯಮಕ್ಕೆ ದಾಖಲಾದ ಆ ಕಾಲದ ಓರ್ವ ಶ್ರೇಷ್ಠ ಕುಸ್ತಿಪಟು ಎಂದು ತೀರ್ಮಾನಕ್ಕೆ ಬರಬಹು ದಾಗಿದೆ.

ಇದಕ್ಕೆ ಪೂರಕವಾಗಿ ಇನ್ನಷ್ಟು ಆಧಾರಗಳನ್ನು ಸಮೀಕರಿಸಿ ನೋಡಬಹುದು. ವಿಜಯನಗರ ಪರಂಪರೆಯ ಭಾಗವಾಗಿ ಬೆಳೆದು ಬಂದಿರುವ ಮತ್ತು ಉಳಿದಕೊಂಡಿರುವ 'ಹೊಸಕೋಟೆ ತಾಲ್ಲೂಕಿನ ಗರಡಿಮನೆಗಳಲ್ಲಿ ಆಂಜನೇಯ, ಮೌಲಾಲಿ ಮತ್ತು ಕುಮಾರರಾಮರನ್ನು ಗರಡಿದೈವಗಳೆಂದು ಭಾವಿಸಿದ್ದಾರೆ. ಹಿಂದೂ-ಮುಸ್ಲಿಮ್ ಎಂಬ ಭೇದ ಭಾವನೆ ಇಲ್ಲದೆ ಇಲ್ಲಿ ಸಾಧನೆ ಮಾಡುತ್ತಾರೆ' ಎಂದು ಗರಡಿ ಸಂಪ್ರದಾಯದ ಬಗ್ಗೆ ಅಧ್ಯಯನ ನಡೆಸಿದ ಪಿಎಚ್.ಡಿ. ಮಹಾಪ್ರಬಂಧದಲ್ಲಿ ತಿಳಿಸಲಾಗಿದೆ'[9]. ಆಂಜನೇಯ, ಕುಮಾರರಾಮರು ವೀರತನಕ್ಕೆ ಪ್ರತೀಕವಾದಂತೆ ಮೌಲಾಲಿ ಸಹ ಆದರ್ಶ ಪ್ರಾಯರಾಗಿದ್ದಾರೆ. ಮಹಮ್ಮದ್ ಪೈಗಂಬರರ ಅಳಿಯರಾದ ಮತ್ತು ಹಸನ್ - ಹುಸೇನರ

ತಂದೆಯವರಾದ ಹಜ್ರತ್ ಇಮಾಮೆ ಅಲಿಯವರನ್ನು ಮುಸ್ಲಿಮರು 'ಶಕ್ತಿಯ ಸಂಕೇತ' (Symbol of Power)ವೆಂದು ಭಾವಿಸುತ್ತಾರೆ. ಹೀಗಾಗಿ ಗರಡಿ ಕಲೆಗೆ ಮತ್ತು ವೀರತನಕ್ಕೆ ಜನಪದರು ಇವರನ್ನು ಆದರ್ಶವಾಗಿ ಪರಿಗಣಿಸುವುದರಲ್ಲಿ ವಿಶೇಷಾರ್ಥವೂ ಅನನ್ಯತೆಯೂ ಪ್ರತಿಬಿಂಬಿತವಾಗುತ್ತದೆ.

ಈ ಹಿನ್ನೆಲೆಯಲ್ಲಿ ನೋಡಿದಾಗ ಹಂಪಿಯ ಗುಂಡುಕಲ್ಲಿನ ಮೇಲೆ ಶಾಶ್ವತವಾಗಿ ಶಾಸನದ ರೂಪದಲ್ಲಿ ಉಳಿದಕೊಂಡ 'ಮೀರಿಪಾಲುವಾನನು' ಮಲ್ಲಕಲೆಯಲ್ಲಿ ಅನುಭವ ಹೊಂದಿದ ಆ ಕಾಲದ ಪ್ರಸಿದ್ಧ ಪೈಲ್ವಾನಾಗಿರಬೇಕು ಎಂಬುದರ ಬಗ್ಗೆ ಅನುಮಾನ ಉಳಿಯಲಾರದು. ಮುಸ್ಲಿಮರನ್ನು ಉಲ್ಲೇಖಿಸುವ ಇತರ ಶಾಸನಗಳಾದರೂ (ಇವು ಹಂಪಿಯ ಶಾಸನಗಳು) ಏನನ್ನು ಹೇಳುತ್ತವೆ - ಮಿಯಾರಾವುತನಿಗೆ ಪುಣ್ಯವಾಗಬೇಕೆಂದು ಬಸವ.......... ನಾಯಕನು 'ಗೋರಿ' 'ಮಸೂಜಿ'ಯನ್ನು ಕಟ್ಟಿಸಿದ್ದಾನೆ. ಪಿಲಿಕುಂಚಲಕ ಎಂಬುವನು ಬಯಿರಾವುತನಿಗೆ ಬಾವಿಯನ್ನು ದಾನ ಮಾಡಿದ್ದಾನೆ. ಚಿಕ್ಕರಾಯರಿಗೆ ಪುಣ್ಯ ವಾಗಲೆಂದು ಶಕಲಜರಾವುತನು 'ಗುಂಮತ' ಕಟ್ಟಿಸಿದ್ದಾನೆ.. ವೀರಪ್ರತಾಪ ದೇವರಾಯನಿಗೆ ಒಳ್ಳೆಯದಾಗಲೆಂದು ಕಟ್ಟಿಗೆಯ ಆಮುದಖಾನನು ಧರ್ಮಸಾಲೆ (ಮಸೀದಿ) ಮತ್ತು ಬಾವಿಯನ್ನು ಕಟ್ಟಿಸಿದ್ದಾನೆ. ಹೀಗೆ ಈ ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಹೆಸರುಗಳು, ಮಾಡಿರುವ ದಾನಗಳು, ಕಟ್ಟಿಸಿರುವ ಗುಮ್ಮಟ ಮಸೀದಿಗಳ ಹಿನ್ನೆಲೆಯಲ್ಲಿ ಜಾತ್ಯಾತೀತ ಮನೋಭಾವವನ್ನು, ವಿಶೇಷ ಸಾಧನೆಗಳನ್ನು ಎತ್ತಿ ಹಿಡಿದಿವೆ. ಅದೇ ರೀತಿ ಮನೆಯನ್ನು ದಾನ ಮಾಡಿರುವ ವ್ಯಕ್ತಿ 'ಮೀರಿಪಾಲುವಾನ' ಹೆಸರಿನಲ್ಲಿನ ವಿಶೇಷತೆಯೇನೆಂದರೆ ಆತ ಪೈಲ್ವಾನಾಗಿದ್ದನೆಂಬುದೇ ಆಗಿದೆ.

ಇನ್ನು ಎರಡನೆಯ ಶಾಸನದ ಬಗ್ಗೆ ಪರಿಶೀಲಿಸೋಣ.

ಎರಡನೇ ಶಾಸನ : ಕುಸ್ತಿಯಲ್ಲಿ ಮಹಿಳೆಯರು

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದ ಕ್ರಿ.ಶ. 1446ರ ಶಾಸನವೊಂದು ಕುಸ್ತಿಕಾಳಗಕ್ಕೆ ಇನ್ನೊಂದು ಆಧಾರವನ್ನು ಒದಗಿಸುತ್ತದೆ ಮತ್ತು ಈ ಕ್ಷೇತ್ರದಲ್ಲಿ ಮಹಿಳೆಯರು ಸಹ ಪರಿಶ್ರಮ ಹೊಂದಿದ್ದರೆಂಬ ವಿಚಾರದ ಮೇಲೆ ಬೆಳಕು ಚೆಲ್ಲುತ್ತದೆ. 'ಎಪಿಗ್ರಾಫಿಯಾ ಕರ್ನಾಟಕ'ದ 7ನೇ ಸಂಪುಟದಲ್ಲಿ ಸೇರಿರುವ ಈ ಶಾಸನವನ್ನು ಉಲ್ಲೇಖಿಸುತ್ತಾ ಎಸ್. ಸರಸ್ವತಿ ನಾಣಯ್ಯ ಅವರು 'ನಾಗನಗೌಡನ ಮಗ ಮಾದಿಗೌಡನು ಕುಸ್ತಿಯಾಡುತ್ತಿರು ವಾಗ ಮರಣ ಹೊಂದಿ ಸ್ವರ್ಗ ಸೇರಿದನು. ಆತನ ಮಗಳು ಹರಿಯಕ್ಕ ತನ್ನ ತಂದೆಯನ್ನು ಕೊಂದ ಕುಸ್ತಿಪಟುವಿನೊಂದಿಗೆ ಕಾದು ತಾನೂ ಸ್ವರ್ಗಸೇರಿದಳು. ಈ ವೀರಗಲ್ಲನ್ನು ಅವರ ಚಿಕ್ಕಪ್ಪ ಚೆನ್ನ ನಿಲ್ಲಿಸಿದನು. ವೀರಗಲ್ಲಿನ ಮೇಲಿನ ಭಾಗದಲ್ಲಿ ಒಬ್ಬ ಕುಸ್ತಿಪಟು ನಿಂತಿದ್ದಾನೆ. ಅವನ ಎದುರಿಗೆ ನಿಂತಿರುವ ಹರಿಯಕ್ಕ ಎಡಗೈಯಲ್ಲಿ ಅವನ ಜುಟ್ಟು ಹಿಡಿದು ಬಲಗೈಯಲ್ಲಿ ಖಡ್ಗದಿಂದ ಅವನನ್ನು ಇರಿಯುತ್ತಿದ್ದಾಳೆ. ಇದರಿಂದ ಹರಿಯಕ್ಕ

ವಿಜಯನಗರ ಕಾಲದಲ್ಲಿ ಪ್ರಖ್ಯಾತ ಕುಸ್ತಿಪಟುವಾಗಿದ್ದಳು ಎಂಬ ತೀರ್ಮಾನಕ್ಕೆ ಬಂದಿದ್ದಾರೆ'[10]. 'ವಿಜಯನಗರದ ಕಾಲದ ಶಿಲ್ಪದಲ್ಲಿ ಮಹಿಳೆಯರು' ಕುರಿತು ಲೇಖನ ಬರೆದಿರುವ ಎಸ್.ಸರಸ್ವತಿ ಅವರು ಈ ಮೇಲಿನ ಪ್ರತಿಪಾದನೆಯನ್ನು ಸಮರ್ಥಿಸಿದ್ದಾರಲ್ಲದೆ, ಹರಿಯಕ್ಕ ಆ ಕಾಲದ ಪ್ರಸಿದ್ಧ ಕುಸ್ತಿಪಟು ಎಂಬುದನ್ನು ಒಪ್ಪಿಕೊಂಡಿದ್ದಾರೆ[11]. ಆದರೆ, 'ವಿಜಯನಗರ ಕಾಲದ ಸೈನ್ಯವ್ಯವಸ್ಥೆ ಮತ್ತು ಯುದ್ಧನೀತಿ'ಯ ಕುರಿತು ಸಂಶೋಧನ ಅಧ್ಯಯನ ನಡೆಸಿದ ಎಸ್.ವೈ. ಸೋಮಶೇಖರ್ ಅವರು ಹಿರಿಯಕ್ಕನನ್ನು ಕುಸ್ತಿಪಟುವಾಗಿ ಕಂಡೇ ಇಲ್ಲ. ಶತ್ರುವಿನೊಂದಿಗೆ ಹೋರಾಡಿದ ವೀರಮಹಿಳೆ. ಮಧ್ಯಯುಗದ ವೀರಮಹಿಳೆಗೆ ನೈಜ ದಾಖಲೆಯಾಗಿದೆ ಈ ಶಿಕಾರಿಪುರದ ವೀರಗಲ್ಲು ಎಂದು ತಮ್ಮ ಪ್ರಬಂಧದಲ್ಲಿ ಅಭಿಪ್ರಾಯ ಮಂಡಿಸಿದ್ದಾರೆ'[12].

ಮೇಲಿನ ಇಬ್ಬರ ಅಭಿಪ್ರಾಯಗಳಿಗೆ ಸೋಮಶೇಖರ್ ಅವರ ಅಭಿಪ್ರಾಯ ಸ್ವಲ್ಪ ಭಿನ್ನವಾಗಿದೆ. ಹರಿಯಕ್ಕನನ್ನು ವೀರಮಹಿಳೆಯ ಸ್ಥಾನದಲ್ಲಿ ನಿಲ್ಲಿಸುವುದೊಂದೇ ಅವರ ದೃಷ್ಟಿಯಾದಂತಿದೆ. ತನ್ನ ತಂದೆಯನ್ನು ಕುಸ್ತಿಯಾಟದಲ್ಲಿ ಕೊಂದ ಪ್ರತಿಸ್ಪರ್ಧಿ ಕುಸ್ತಿಪಟುವನ್ನು ಕಣದಲ್ಲಿ ಹಾಕಾಡಿ ಅವನ ಜುಟ್ಟನ್ನು ಹಿಡಿದು ಮಣಿಸುವಷ್ಟು ಮಟ್ಟಕ್ಕೆ ಬರಬೇಕಾದರೆ ಆಕೆ ಕುಸ್ತಿಪಟ್ಟುಗಳನ್ನು ಅರಿತವಳೇ ಆಗಿರಬೇಕು. ವೀರಗಲ್ಲಿನ ಚಿತ್ರ ಮತ್ತು ಇದಕ್ಕೆ ಸಂಬಂಧಿಸಿದ ವಿವರವು ಸರಿಯಾಗಿ ತಾಳೆಯಾಗುತ್ತದೆ. ಆದ್ದರಿಂದ ಕುಸ್ತಿ ಅಖಾಡಕ್ಕೆ ಇಳಿದು ತನ್ನ ವಿರೋಧಿ ಕುಸ್ತಿಯಾಳನ್ನು ಮುಗಿಸುವ ಹಂತಕ್ಕೆ ತಲುಪಿದ ಹರಿಯಕ್ಕ ಪಳಗಿದ ಓರ್ವ ಕುಸ್ತಿಪಟುವೂ ಹೌದು ಈ ದಿಶೆಯಲ್ಲಿ ಹೋರಾಡಿ ಮಡಿದ ವೀರಮಹಿಳೆಯೂ ಹೌದೆಂದು ಸ್ಪಷ್ಟವಾಗುತ್ತದೆ.

ವಿಜಯನಗರದ ಮಹಿಳೆಯರು ಮಲ್ಲಕಲೆಯಲ್ಲಿ ಪರಿಣತರಾಗಿದ್ದಾರೆ? ಅನ್ನುವುದಕ್ಕೆ ಶಾಸನಗಳು ಸಿಕ್ಕುವುದಿಲ್ಲ. ಶಿಕಾರಿಪುರದ ಶಾಸನವೊಂದೇ ಏಕೈಕ ಆಧಾರವಾಗಿ ನಿಲ್ಲುತ್ತದೆ. ಆದರೆ ಗರಡಿ ಸಾಧನೆಯ ಕ್ಷೇತ್ರದಲ್ಲಿ ವಿಜಯನಗರದ ಮಹಿಳೆಯರು ಪಾಲ್ಗೊಂಡಿದ್ದರು ಎಂಬುದನ್ನು ವಿದೇಶಿ ಪ್ರವಾಸಿಗರ ಉಲ್ಲೇಖಗಳಿಂದ, ಕೆಲವು ಸಾಹಿತ್ಯಕೃತಿಗಳಿಂದ ನಾವು ಗ್ರಹಿಸಬಹುದಾಗಿದೆ. ಕೃಷ್ಣದೇವರಾಯನ ಕಾಲಕ್ಕೆ ವಿಜಯನಗರಕ್ಕೆ ಭೇಟಿ ನೀಡಿದ್ದ ಪೋರ್ಚುಗೀಸ್ ಪ್ರವಾಸಿ ಡೊಮಿಂಗೋ ಪಯಸ್‌ನು ಅರಮನೆ ಪ್ರದೇಶದಲ್ಲಿ ಸುತ್ತಾಡುವಾಗ 'ಈ ಆವರಣದೊಳಗೆ ಸುಮಾರು 12,000 ಪರಿಚಾರಿಕೆಯರಿರುವರೆಂದು ಹೇಳುತ್ತಾರೆ. ಖಡ್ಗ ಗುರಾಣಿಗಳನ್ನು ಉಪಯೋಗಿಸಬಲ್ಲ, ಕುಸ್ತಿಯಾಡಬಲ್ಲ, ಅನೇಕ ತರದ ವಾದ್ಯಗಳನ್ನು ನುಡಿಸಬಲ್ಲ ಹೆಂಗಸರು ಇಲ್ಲಿದ್ದಾರೆ. ಅದೇ ರೀತಿ ಪಲ್ಲಕ್ಕಿ ಹೊರುವ ಹೆಂಗಸರು, ಅಗಸಗಿತ್ತಿಯರು, ದ್ವಾರಗಳ ಕಾವಲುಗಾರರು ಹೆಂಗಸರೇ'[13] ಎಂದು ಉಲ್ಲೇಖಿಸಿದ್ದಾನೆ. ಅಚ್ಯುತದೇವರಾಯನ ಕಾಲಕ್ಕೆ ವಿಜಯನಗರಕ್ಕೆ ಬಂದಿದ್ದ ಇನ್ನೊಬ್ಬ ಪೋರ್ಚುಗೀಸ್ ಪ್ರವಾಸಿ ಫೆರ್ನಾವೋನ್ಯೂನಿಜ್ (ಈತ ಕುದುರೆ

ವ್ಯಾಪಾರಿ) ಇಂತಹದೇ ಚಿತ್ರಣವನ್ನು ನೀಡುತ್ತಾನೆ - 'ಈ ರಾಜ ತನ್ನ ದ್ವಾರದೊಳಗೆ ನಾಲ್ಕು ಸಾವಿರಕ್ಕೂ ಹೆಚ್ಚು ಸ್ತ್ರೀಯರನ್ನು ಹೊಂದಿದ್ದಾನೆ. ಅವರೆಲ್ಲ ಅರಮನೆಯಲ್ಲಿ ಇರುತ್ತಾರೆ. ಕೆಲವರು ನೃತ್ಯಗಾರ್ತಿಯರಾಗಿರುತ್ತಾರೆ. ಇನ್ನು ಕೆಲವರು ರಾಜನ ಹೆಂಡಂದಿರನ್ನು ಮತ್ತು ಅರಮನೆಯೊಳಗಡೆ ರಾಜನನ್ನು ತಮ್ಮ ಹೆಗಲ ಮೇಲೆ ಹೋರುವ ಬೋಯಿಗಳು ಇರುತ್ತಾರೆ. ಏಕೆಂದರೆ ರಾಜನ ಮನೆಗಳು ದೊಡ್ಡವಿದೆ ಮತ್ತು ಒಂದು ಮತ್ತೊಂದರ ನಡುವೆ ಬಹಳ ಅಂತರವಿರುತ್ತದೆ. ಅವನಲ್ಲಿ ಕುಸ್ತಿ ಆಡುವ ಸ್ತ್ರೀಯರೂ ಮತ್ತು ಭವಿಷ್ಯ ಹಾಗೂ ಕಣಿ ಹೇಳುವ ಇತರರು ಇದ್ದಾರೆ. ಅವನಲ್ಲಿ ದ್ವಾರದೊಳಗೆ ಮಾಡಲಾದ ಖರ್ಚುಗಳನ್ನು ಲೆಕ್ಕ ಬರೆಯುವ ಸ್ತ್ರೀಯರೂ ಮತ್ತು ರಾಜ್ಯದ ಎಲ್ಲ ಆಗುಹೋಗುಗಳನ್ನು ಬರೆದು ಹೊರಗಿನ ಲೇಖಕರೊಂದಿಗೆ ತಮ್ಮ ಪುಸ್ತಕಗಳನ್ನು ಹೋಲಿಸಿ ನೋಡುವ ಕರ್ತವ್ಯವುಳ್ಳ ಇತರರೂ ಇದ್ದಾರೆ. ಅವನಲ್ಲಿ ಸಂಗೀತಕ್ಕೂ ಸ್ತ್ರೀಯರಿದ್ದಾರೆ. ಅವರು ವಾದ್ಯಗಳನ್ನು ನುಡಿಸುತ್ತಾರೆ ಮತ್ತು ಹಾಡುತ್ತಾರೆ. ರಾಜನ ಹೆಂಡಂದಿರೂ ಸಂಗೀತದಲ್ಲಿ ಪರಿಣಿತರಿರುವರು'[14].

ಅರಮನೆಯೊಳಗೆ ವಿವಿಧ ರೀತಿಯ ಸೇವೆಗೈಯ್ಯುವ ಪರಿಚಾರಿಕೆ (ದಾಸಿ)ಯರು ಮತ್ತು ಅವರ ವೃತ್ತಿ ವೈಶಿಷ್ಟ್ಯಗಳು ಇಬ್ಬರು ಪ್ರವಾಸಿಗರ ವರ್ಣನೆಯಲ್ಲಿ ಸಿಗುತ್ತವೆ. ಮಹಿಳಾ ಅಧ್ಯಯನಕ್ಕೆ ಒಂದು ವಿಶೇಷ ನೋಟ ಇಲ್ಲಿದೆ. ಅರಮನೆಯಲ್ಲಿ ಕುಸ್ತಿಯಾಡ ಬಲ್ಲ ದಾಸಿಯರನ್ನು ಸಹ ಅವರು ಉಲ್ಲೇಖಿಸಿದ್ದಾರೆ. ಮಹಿಳೆಯರ ಈ ಕುಸ್ತಿಯಾಟ ಅರಮನೆಯ ರಾಜ, ರಾಣಿಯರನ್ನು ಮನರಂಜಿಸುವ ಕ್ರೀಡೆಯಾಗಿತ್ತೆಂದು ಇದರಿಂದ ಗೊತ್ತಾಗುತ್ತದೆ. ಆದರೆ ಅವರು ಬಹಿರಂಗವಾಗಿ ಕುಸ್ತಿಪ್ರದರ್ಶನದಲ್ಲಿ ಭಾಗವಹಿಸುತ್ತಿದ್ದರೆ ಎನ್ನುವುದು ಗೊತ್ತಾಗುವುದಿಲ್ಲ. ಇದರಿಂದ ಅರಮನೆಯ ದಾಸಿಯರಲ್ಲಿ ಒಂದು ವರ್ಗವು ಮಲ್ಲಕಲೆಯಲ್ಲಿ ಪರಿಣತಿ ಹೊಂದಿತ್ತೆಂದು ತಿಳಿಯುತ್ತದೆ. ಹಂಪಿಯ ಹಜಾರರಾಮ, ವಿಜಯವಿಠ್ಠಲ, ಅಚ್ಯುತರಾಯ, ವಿರುಪಾಕ್ಷ ದೇವಾಲಯಗಳ, ಮಹಾನವಮಿ ದಿಬ್ಬಗಳಲ್ಲಿರುವ ಉಬ್ಬುಶಿಲ್ಪ ರಚನೆಗಳಲ್ಲಿ ಮಹಿಳೆಯರನ್ನು ಹೋರಾಟಗಾರರಾಗಿ, ಕುಸ್ತಿಪಟುಗಳಾಗಿ, ಅಂಗರಕ್ಷಕರಾಗಿ, ನೃತ್ಯಗಾರ್ತಿಯರಾಗಿ, ಸಂಗೀತಗಾರರಾಗಿ ಚಿತ್ರಿಸಿದ್ದಾರೆ. ಪ್ರವಾಸಿಗರು ನೀಡಿರುವ ವರ್ಣನೆಗಳಿಗೂ ಶಿಲ್ಪಗಳು ನೀಡುವ ಚಿತ್ರಣಕ್ಕೂ ಸಾಮ್ಯತೆ ಇರುವುದು ಸ್ಪಷ್ಟವಾಗುತ್ತದೆ.

ವಿಜಯನಗರ ಕಾಲದಲ್ಲಿ ವೇಶ್ಯಾವಾಟಿಕೆ ವೃತ್ತಿಗೆ ಇಳಿಯುವ ಮಹಿಳೆಯರು ಸಂಗೀತ ನೃತ್ಯಗಳ ಜೊತೆಗೆ ಮಲ್ಲವಿದ್ಯೆಯನ್ನು ಅರಿತಿರುವುದು ಅನಿವಾರ್ಯವಾಗಿತ್ತೆಂದು ಕೃಷ್ಣದೇವರಾಯನು ಬರೆದ 'ಆಮುಕ್ತಮಾಲ್ಯ'ದ ಕೃತಿಯಿಂದ ತಿಳಿಯುತ್ತದೆ. 'ವೇಶ್ಯೆಯರು ಸಂಗೀತ ವಿದ್ಯೆಯಲ್ಲಿ ವಿಶೇಷ ಸಾಧನೆ ಮಾಡುತ್ತಿದ್ದರು. ಅವರು ತಮ್ಮ ಹೆಣ್ಣು ಮಕ್ಕಳನ್ನು ದೇವದಾಸಿಯರನ್ನಾಗಿ ಬಿಡುತ್ತಿದ್ದರು. ವೇಶ್ಯೆಯರೆಂದು ಸಮಾಜದಲ್ಲಿ ಅವರ ಗೌರವ

ಗಳು ಕಡಿಮೆಯಾಗುತ್ತಿರಲಿಲ್ಲ. ಧನಿಕರು ಅವರನ್ನು ಪೋಷಿಸುತ್ತಿದ್ದರು. ಅವರು ಗುಡಿಗಳಲ್ಲಿ, ಅರಮನೆಗಳಲ್ಲಿ ನಿರಾತಂಕವಾಗಿ ಪ್ರವೇಶಿಸ ಬಹುದಾಗಿತ್ತು. ನಡುರಾತ್ರಿಯಲ್ಲಿ ವೇಶ್ಯೆಯರ ಕುಸ್ತಿ ಸಹ ನಡೆಯುತ್ತಿತ್ತು. ವೇಶ್ಯೆಯರಿಗೆ ನೃತ್ಯ ಕಲಿಸುವ ಗುರುಗಳಿಗೆ ರಾಯನು ಅನೇಕ ದತ್ತಿಗಳನ್ನು ಸಹ ಕೊಟ್ಟಿದ್ದನು.[15] 'ವಿಜಯನಗರದಲ್ಲಿ ಸೂಳೆಯರ ಸಂಖ್ಯೆ ಅಪಾರವಾಗಿತ್ತೆಂದೂ ಕೃಷ್ಣದೇವರಾಯನಿಗೆ ಈ ಸೂಳೆಗೇರಿ ಚೆನ್ನಾಗಿ ಪರಿಚಿತವಾಗಿರಬೇಕೆಂದು 'ಆಮುಕ್ತಮಲ್ಯ'ದಲ್ಲಿ ಮೇಲಿಂದ ಮೇಲೆ ಬರುವ ಸೂಳೆ ಗೇರಿಯ ವರ್ಣನೆಗಳಿಂದ ತಿಳಿಯುತ್ತದೆ.'[16] ಇದರಿಂದ ವ್ಯಕ್ತವಾಗುವ ಸಂಗತಿಯೆಂದರೆ, ಮಹಿಳೆಯರಲ್ಲಿ ಮುಖ್ಯವಾಗಿ ವೇಶ್ಯೆಯರ ಸಂಗೀತ, ನೃತ್ಯ ಮತ್ತು ಗರಡಿ ಕಲೆಗಳನ್ನು ತಮ್ಮ ವೃತ್ತಿಗೆ ಪೂರಕವಾಗಿ ಮೈಗೂಡಿಸಿಕೊಂಡಿದ್ದರೆಂಬುದು. ಇವರ ಬದುಕಿಗೆ ನೈತಿಕ ಮತ್ತು ಆರ್ಥಿಕ ಆಧಾರವಾಗಿ ಸೂಳೆಯಕೇರಿಗಳು ಪ್ರಮುಖ ಕೇಂದ್ರಗಳಾಗಿದ್ದವು. ವಿಜಯನಗರ ಕಾಲದಲ್ಲಿ ವ್ಯಾಪಾರದ ವಹಿವಾಟಿಗೆಂದೇ ಬಜಾರುಗಳ ವ್ಯವಸ್ಥೆ ಇದ್ದಂತೆ ವೇಶ್ಯೆಯರಿಗೆ ಸೂಳೆಬಜಾರು ಇತ್ತೆಂಬುದು ಖಚಿತ. ನರ್ತಕಿಯರನ್ನು ದೇವದಾಸಿಯರ ನ್ನಾಗಿ ಬಿಡುವ ಪದ್ಧತಿಗೆ ಪೂರಕವಾದ ತರಬೇತು, ತಯಾರಿಗಳು ಅಲ್ಲಿ ನಡೆಯುತ್ತಿರ ಬೇಕು.

ಇದಕ್ಕೆ ಪ್ರತ್ಯೇಕವಾಗಿ ಗರಡಿಸಾಧನೆ ಕುರಿತ ಉಲ್ಲೇಖವೊಂದು ಎ.ಎಸ್. ನಂಜುಂಡಸ್ವಾಮಿಯವರ 'ವಿಜಯನಗರ ಇತಿಹಾಸ' ಗ್ರಂಥದಲ್ಲಿ ಸಿಕ್ಕುತ್ತದೆ. 'ನೃತ್ಯ ಶಿಕ್ಷಣಕ್ಕೆ ಪೂರ್ವಭಾವಿಯಾದ ಅಂಗಸೌಷ್ಠವವನ್ನು ಬೆಳೆಸಿಕೊಳ್ಳಲು ಮಹಿಳೆಯರು ನಾನಾ ಬಗೆಯ ವ್ಯಾಯಾಮಗಳನ್ನು ಮಾಡಬೇಕಾಗಿದ್ದಿತು. ವಿಜಯನಗರದ ಅರಮನೆ ಯಲ್ಲಿ ಸ್ತ್ರೀಯರಿಗಾಗಿ ಪ್ರತ್ಯೇಕ ಗರಡಿಮನೆ ಇದ್ದಿತು'[17].

ಶಿಕಾರಿಪುರದ ಶಾಸನವನ್ನು ಬೆಂಬತ್ತಿ, ಮಹಿಳೆಯರು ವಿಜಯನಗರ ಕಾಲದಲ್ಲಿ ಮಲ್ಲವಿದ್ಯೆಯಲ್ಲಿ ಪರಿಣತರಾಗಿದ್ದರೇ ಎಂಬುದರ ಕುರಿತು ಕಲೆ ಹಾಕಿದ ವಿವರಗಳು ಹೌದೆಂದು ಪುಷ್ಟಿ ನೀಡುತ್ತವೆ. ಆದರೆ, ಬಹಿರಂಗ ಪ್ರದರ್ಶನಕ್ಕೆ ಇವರ ಸಾಧನೆ ದೊರೆ ಯುತ್ತಿರಲಿಲ್ಲ, ಪ್ರತ್ಯೇಕವಾಗಿ ನಡೆಯುತ್ತಿತ್ತು ಎಂದು ಗೊತ್ತಾಗುತ್ತದೆ. ಉನ್ನತ ವರ್ಗ ವನ್ನು ತೃಪ್ತಿಪಡಿಸಲೋಸುಗ ಮತ್ತು ತಮ್ಮ ಬದುಕಿಗಾಗಿ ಈ ಕಲೆಯನ್ನು ಪೂರಕವಾಗಿ ಕರಗತ ಮಾಡಿಕೊಂಡಿದ್ದರೆಂದೂ ಒಳನೋಟಗಳಿಂದ ತಿಳಿಯುತ್ತದೆ.

ಈ ಕುಸ್ತಿಕಲೆಗೆ ಆಧಾರವಾಗಿ ನಿಲ್ಲಬಲ್ಲ ಈ ಎರಡು ಶಾಸನಗಳು ಮತ್ತು ಇದನ್ನು ಅನುಸರಿಸಿ ಈ ಪ್ರಬಂಧದ ಟಿಪ್ಪಣಿಗಳನ್ನು ಮುಗಿಸುವಾಗ ಇನ್ನಷ್ಟು ಶಾಸನಗಳು ಅಲ್ಲಲ್ಲಿ ಇರಬಹುದೇ, ಇದ್ದರೆ ಬೆಳಕಿಗೆ ಬರುವ ಅವಶ್ಯಕತೆ ಎಂದು ಅನಿಸಿತು. ಮುಗಿಸುವ ಮುನ್ನ ಒಂದು ಮಾಹಿತಿ - 'ಅತ್ಯಂತ ಬಲಿಷ್ಠರಾದ ಆನೆಗೊಂದಿ ರಾಜರ ಮರ್ಯಾದೆಗೆ ಕುಂದು ಉಂಟಾಗುವಂತೆ ಊರಬಾಗಿಲಿಗೆ ತನ್ನ ಇಜಾರ ಕಟ್ಟಿಸಿ ಮೆರೆಯುತ್ತಿದ್ದ

ಬೀಮಾಜಟ್ಟಿ ಎಂಬುವನನ್ನು ಸೋಲಿಸಿದ ಜೋಡಿ ಮಲ್ಲಪ್ಪನಾಯ್ಕನಿಗೆ ಆನೆಗೊಂದಿ ರಾಜರಾದ ರಾಮರಾಯ ತಿರುಮಲರಾಜದೇವನು ಬುಕ್ಕಸಾಗರ ಹರಿಯಸಮುದ್ರ ಗ್ರಾಮಗಳ ನಡುವೆ ಇದ್ದ ಕಳಸಾಪುರ ಗ್ರಾಮವನ್ನು ಅದರ ಸಮೀಪವೇ ಇದ್ದ ಕಾಮಲಾಪುರದ ಕೆರೆಯ ಕೆಳಗಿನ 3 ಖಂಡುಗ ಬೀಜಾವರ್ರಿ ಭೂಮಿಯನ್ನು ಉಂಬಳಿಯಾಗಿ ಕೊಟ್ಟ'[18] ಈ ವಿಚಾರವನ್ನು ತಿಳಿಸುವ ತಾಮ್ರಶಾಸನದ ಬಗ್ಗೆ ಉಲ್ಲೇಖ ಸಿಕ್ಕಿತು. ಕನ್ನಡ ಲಿಪಿಯಿರುವ ತೆಲುಗು ಭಾಷೆಯ ಈ ತಾಮ್ರಪತ್ರದ ಕುರಿತು 'ನಾಯಕನಹಟ್ಟಿ ಪಾಳೆಯಗಾರರು' ಎಂಬ ಲೇಖನದಲ್ಲಿ ಮೀರಾಸಾಬಿಹಳ್ಳಿ ಶಿವಣ್ಣನವರು ಸಂಕ್ಷಿಪ್ತವಾಗಿ ಪ್ರಸ್ತಾಪಿಸಿದ್ದಾರೆ. ಬೀಮಾಜಟ್ಟಿ ಎಂಬುವವನು ಕುಸ್ತಿ ಪೈಲ್ವಾನನಾಗಿದ್ದನೇ ಎಂಬುದು ಆತನ ಹೆಸರಿನಿಂದಷ್ಟೇ ತಿಳಿಯಬೇಕು. ವಿಜಯನಗರದ ಪಾಳೆಯಗಾರರ ಕುರಿತಾದ ಚರಿತ್ರೆಗಳನ್ನು ಅಭ್ಯಸಿಸಿದರೆ ಆ ಕುಸ್ತಿ ಕಲೆಯ ಬಗ್ಗೆ ಮಾಹಿತಿಗಳು ಲಭ್ಯವಾಗಬಹುದೇನೋ?

ಗ್ರಂಥ - ಸಂದರ್ಭ ಸೂಚಿ

1. ಡಾ. ದೇವರಕೊಂಡಾರೆಡ್ಡಿ (ಸಂ.), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ 3 (ಹಂಪಿ ಶಾಸನಗಳು) (ಇನ್ನು ಮುಂದೆ ಕವಿಶಾ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2000, ಶಾಸನ ಸಂಖ್ಯೆ 312, ಪು. 225.
2. ಕವಿಶಾ. ಅದೇ ಸಂಪುಟ, ಪ್ರಸ್ತಾವನೆ ಪು.xlvi
3. ಡಾ.ಎಚ್.ಎಂ. ನಾಗರಾಜ, ದೇವರಾಯ II ಅಂಡ್ ಹಿಜ್ ಟೈಮ್ಸ್ (ಹಿಸ್ಟರಿ ಆಫ್ ವಿಜಯನಗರ) ಪ್ರಕಟಿತ ಪಿಎಚ್.ಡಿ. ಪ್ರಹಾಪ್ರಬಂಧ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಪು. 192
4. ಎ.ಎಸ್. ನಂಜಂಡಸ್ವಾಮಿ, ವಿಜಯನಗರದ ಇತಿಹಾಸ (ಇನ್ನು ಮುಂದೆ ವಿ.ಇ) ಸಮಾಜ ಪುಸ್ತಕಾಲಯ, ಧಾರವಾಡ, ನಾಲ್ಕನೇ ಮುದ್ರಣ, 1999, ಪು. 36
5. ಕವಿಶಾ, ಸಂ. 3, ಶಾಸನಸಂಖ್ಯೆ 311, ಪು. 224
6. ಡಾ. ಚನ್ನಬಸಪ್ಪ, ಎಸ್. ಪಾಟೀಲ, ಕಲೆ ಮತ್ತು ವಾಸ್ತುಶಿಲ್ಪ, ಕರ್ನಾಟಕ ಚರಿತ್ರೆ (ಸಂಪುಟ 3) (ಪ್ರ.ಸಂ. ಪ್ರೊ.ಬಿ. ಷೇಕಅಲಿ, ಸಂಪುಟ ಸಂಪಾದಕರು ಪ್ರೊ.ಕೆ.ಎಸ್. ಶಿವಣ್ಣ), ಪ್ರಸಾರಾಂಗ, ಕ.ವಿ.ಹಂ. 993, 363
7. ಡಾ. ವಸುಂಧರಾ ಫಿಲೋಯೋಜಾ, ವಿಶ್ವ ಪರಂಪರೆಯಾದಿಯಲ್ಲಿ ಹಂಪೆ, ಕರ್ಮವೀರ ದೀಪಾವಳಿ ವಿಶೇಷಾಂಕ 2000, ಪು. 17, (ಅಹಮದ್‌ಖಾನ್ ಕಟ್ಟಿಸಿದ ಕಟ್ಟಡವನ್ನು 'ಧರ್ಮಸಾಲೆ' ಎಂದು ಆತ ಕರೆದಿರುವುದರಿಂದ ಫಿಲಿಯೋಜಾ ಅವರು ಅದನ್ನು ಅನ್ನಛತ್ರವಾಗಿರಬೇಕೆಂದು ಊಹಿಸಿದ್ದಾರೆ. ಆದರೆ, ವಾಸ್ತವದಲ್ಲಿ ಈ ಕಟ್ಟಡ ಅನ್ನ ಛತ್ರವಲ್ಲ; ವಾಸ್ತು ನಿರ್ಮಾಣದ ಒಳಲಕ್ಷಣಗಳ ಪ್ರಕಾರ ಅದು ಮಸೀದಿ ಎಂದು ದೃಢಪಟ್ಟಿದೆ.)

8. ಡಾ.ಎಂ.ಎಂ. ಕಲಬುರ್ಗಿ (ಸಂ.,) ಕೊಮಾರರಾಮಯ್ಯನ ಚರಿತ್ರೆ (ಪ್ರಸ್ತಾವನೆ, ಪು. 27, 28, 37) ಪ್ರಸಾರಾಂಗ, ಕ.ವಿ.ಹಂ. 2001

9. ಯು. ಮಲ್ಲಿಕಾರ್ಜುನ, ಹೊಸಪೇಟೆ ತಾಲ್ಲೂಕಿನ ಗರಡಿ ಸಂಪ್ರದಾಯ, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ಹಂ, 2004, ಪು. 75.

10. ಎನ್. ಸರಸ್ವತಿ ನಾಣಯ್ಯ, ದಿ ಪೊಜಿಷನ್ ಆಫ್ ವಿಮೆನ್ ಡ್ಯೂರಿಂಗ್ ವಿಜಯ ನಗರ ಪಿರಿಯಡ್ (1336-1646), ಮೈಸೂರು, ಸರಸ್ವತಿ ಪಬ್ಲಿಕೇಶನ್, ಮೈಸೂರು 1992

11. ಎನ್. ಸರಸ್ವತಿ, ವಿಜಯನಗರ ಕಾಲದ ಶಿಲ್ಪದಲ್ಲಿ ಸ್ತ್ರೀಯರು, ವಿಜಯನಗರ ಅರಮನೆ (ಸಂ. 2), ಎಂ.ಎಲ್. ಶಿವಶಂಕರ, ಚನ್ನಬಸಪ್ಪ ಎಸ್. ಪಾಟೀಲ (ಸಂ.), ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 1997, ಪು. 01

12. ಎಸ್.ವೈ. ಸೋಮಶೇಖರ್, ವಿಜಯನಗರ ಕಾಲದ ಸೈನ್ಯವ್ಯವಸ್ಥೆ ಮತ್ತು ಯುದ್ಧ ನೀತಿ, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ಹಂ. 2000 ಪು. 38

13. ಎಂ.ಪಿ.ಪ್ರಕಾಶ್ (ಅನುವಾದ) ಡೊಮಿಂಗೋಸ್ ಪಿಯಾಸ್ ಕಂಡ ವಿಜಯನಗರ (ಮಂಟಪಮಾಲೆ - 59), ಪ್ರಸಾರಾಂಗ, ಕ.ವಿ.ಹಂ. 2000 ಪು. 8

14. ಸದಾನಂದ ಕನವಳ್ಳಿ, (ಅನು), ರಾಬರ್ಟ್ ಸಿವೆಲ್ (ಮೂಲ), ಮರೆತು ಹೋದ ಮಹಾಸಾಮ್ರಾಜ್ಯ ವಿಜಯನಗರ, ಪ್ರಸಾರಾಂಗ, ಕ.ವಿ.ಹಂ. 1992, ಪು. 406

15. ನಿರುಪಮಾ, ಆಮುಕ್ತಮಾಲ್ಯದ (ಮಂಟಪಮಾಲೆ - 63), ಪ್ರಸಾರಾಂಗ, ಕ.ವಿ.ಹಂ. 1999, ಪು. 16

16. ಅದೇ, ಪು. 15

17. ವಿ.ಇ., ಪು. 106

18. ಮೀರಾಸಾಬಿಹಳ್ಳಿ ಶಿವಣ್ಣ, ನಾಯಕನಹಟ್ಟಿ ಪಾಳೆಯಗಾರರು, ದಕ್ಷಿಣ ಕರ್ನಾಟಕ ಅರಸು ಮನೆತನಗಳು (ಸಂ. ಡಾ.ಎಂ.ವಿ. ವಸು), ಪ್ರಸಾರಾಂಗ, ಕ.ವಿ.ಹಂ., 2001, ಪು. 79-80.

೭. ಹಂಪೆಯಲ್ಲಿ, ಶ್ರೀಮಲ್ಲಿಕಾರ್ಜುನದೇವರಾಯರು ಸ್ವರ್ಗಸ್ಥರಾದ ಶಾಸನ

ಡಾ. ಟಿ.ಎಂ. ಮಂಜುನಾಥಯ್ಯ

ವಿಜಯನಗರ ಸಾಮ್ರಾಜ್ಯದ ಆಳ್ವಿಕೆ ನಡೆಸಿದ ಅರಸರು ಜಗತ್ಪ್ರಸಿದ್ಧರಾದವರು. ಈ ಅರಸರ ಕುರಿತಾಗಿ ಇರುವಷ್ಟು ಶಾಸನಗಳು ಬೇರಾವ ವಂಶದ ಅರಸರಿಗೆ ಸಂಬಂಧಿಸಿದ ಶಾಸನಗಳು ಇಲ್ಲವೆಂದು ಅಭಿಪ್ರಾಯ ಪಡಬಹುದಾಗಿದೆ.

ಹಂಪೆಯ ಪರಿಸರವು ಪುರಾತತ್ವಜ್ಞನರಿಗೂ ಇತಿಹಾಸಕಾರರಿಗೂ, ಕಲಾಕಾರರಿಗೂ ಹಾಗೂ ವಾಸ್ತುಶಾಸ್ತ್ರಜ್ಞರಿಗೂ ಇದೊಂದು ಜ್ಞಾನ ಭಂಡಾರವೆಂದರೆ ತಪ್ಪಾಗಲಾರದು. ಇಲ್ಲಿ ಸಂಶೋಧನೆಯ ಆಳಕ್ಕೆ ಇಳಿದಷ್ಟು ಉತ್ತಮ ಹಾಗೂ ತೃಪ್ತಿಕರವಾದ ಮಾಹಿತಿಗಳು ದೊರೆಯುತ್ತಿರುವುದು ಅತೀವ ಸಂತೋಷದ ವಿಷಯವಾಗಿದೆ. ಚಲನಚಿತ್ರ ಒಂದರ ಹಾಡಿನಲ್ಲಿ ಉಲ್ಲೇಖವಾಗಿರುವಂತೆ ಕಲ್ಲು - ಕಲ್ಲು ಕತೆ ಹೇಳುವುದಿಲ್ಲಿ ಎಂಬ ಮಾತು ಇಂದಿಗೂ ಸತ್ಯವೆ ಆಗಿದೆ.

ಸುಮಾರು ಎರಡುವರೆ ದಶಕಗಳ ಅವಧಿಯ ನನ್ನ ಸಂಶೋಧನಾ ಅನುಭವದಲ್ಲಿ ದೊರೆತಂತಹ ಶಾಸನಗಳು ಹಿಂದೆ ರಚಿತವಾದ ಇತಿಹಾಸಕ್ಕಿಂತ ಸ್ವಲ್ಪ ಭಿನ್ನವಾದ ಅಂಶ ಗಳನ್ನು ಹೊರಹಾಕಿರುವುದು ಸತ್ಯದ ವಿಷಯವಾಗಿದೆ.

ಹಂಪೆಯ ಪರಿಸರದಲ್ಲಿ ಸಂಶೋಧಿಸಲ್ಪಟ್ಟ ಶಾಸನಗಳು, ವಿಜಯನಗರ ಸ್ಥಾಪನೆ, ಸೈನಿಕ ವಾಸ್ತು ಕಲೆ, ದೇವಾಲಯ ವಾಸ್ತು ವಿನ್ಯಾಸ, ಅರಮನೆಗಳು, ನಗರಯೋಜನೆ, ನೀರಾವರಿ, ನೀರಿನ ಆಶ್ರಯಗಳು, ರಸ್ತೆಗಳು, ಆರ್ಥಿಕ, ಸಾಮಾಜಿಕ, ಧಾರ್ಮಿಕ ವಿದ್ಯಾ ಭ್ಯಾಸ, ರಾಜಕೀಯ ಆಡಳಿತವನ್ನು ಒಳಗೊಡಂತೆ ಹತ್ತು ಹಲವು ವಿಷಯಗಳು. ಇಂತಹ ಸನ್ನಿವೇಶದಲ್ಲಿ ಅರಸರ ಪಟ್ಟಾಭಿಷೇಕ ಕುರಿತಾದ ಶಾಸನಗಳು ಇರುವುವು. ಆದರೆ ಅರಸರು ಸ್ವರ್ಗಸ್ಥರಾದ ಶಾಸನಗಳು ದೊರೆತಿರುವುದು ವಿರಳ, ಕೇವಲ ಎರಡು ಶಾಸನಗಳು ಇಂತಹ ವಿಷಯಗಳನ್ನು ಒಳಗೊಂಡಿರುವುವು.

ಪ್ರಥಮವಾಗಿ ಶ್ರೀ ಬುಕ್ಕರಾಯರು ಸ್ವರ್ಗಸ್ಥರಾದ ಕುರಿತಾದ ಶಿಲಾಶಾಸನ 1986 ರಲ್ಲಿ ಸಂಶೋಧನೆಯಾಗಿ ಪ್ರಕಟವಾಗಿದೆ. ಆದರೂ ಇದರ ಕುರಿತಾಗಿ ಹೆಚ್ಚಿನ ಮಾಹಿತಿ ದೊರೆಯಲಿಲ್ಲ. ಕೇವಲ ಇದು ಒಂದು ಸಾಲಿನ ಶಾಸನ ಮಾತ್ರ, ಇದನ್ನು 1984-87

ವಿಜಯಗರ ಪ್ರೊಗ್ರೆಸ್ ಆಫ್ ರಿಸರ್ಚ್‌ನಲ್ಲಿ ಪ್ರಕಟಿಸಲಾಗಿದೆ. `ಶ್ರೀ ಬುಕ್ಕರಾಯರು ಸ್ವರ್ಗರಾದರು' ಎಂದು ಇರುವುದು. ಅದು ಹಂಪೆಯ ಶ್ರೀ ವಿರೂಪಾಕ್ಷ ರಥ ಬೀದಿಯ ದಕ್ಷಿಣ ಭಾಗದಲ್ಲಿ ಮತಂಗ ಪರ್ವತದ ಬಳಿ ಇದೆ.

ಎರಡನೆಯದಾಗಿ ಈಗ ದೊರೆತ ಶಾಸನ ಶ್ರೀ ಮಲ್ಲಿಕಾರ್ಜುನ ದೇವರಾಯರು ಸ್ವರ್ಗಸ್ಥರಾದ ಕುರಿತಾಗಿ ಇದೆ. ಈ ಎರಡು ಶಾಸನಗಳು ಸುಮಾರು 50 ಮೀಟರುಗಳ ಅಂತರದಲ್ಲಿವೆ. ಮಲ್ಲಿಕಾರ್ಜುನದೇವರಾಯರು ಪ್ರೌಢದೇವರಾಯರ ಮಗನಾಗಿದ್ದು ಕ್ರಿ.ಶ. 1446-1465ರ ಅವಧಿಯಲ್ಲಿ ವಿಜಯನಗರ ಸಾಮ್ರಾಜ್ಯದ ಅರಸರಾಗಿದ್ದರು. ಪ್ರೌಢದೇವರಾಯರ ಆಡಳಿತವನ್ನು ಕ್ರಿ.ಶ. 1464-65ರವರೆಗೂ ಮುಂದುವರಿಸಿದರು. ಶ್ರೀ ಮಲ್ಲಿಕಾರ್ಜುನರಾಯರ ಶಿಲ್ಪವಿರುವ ಶಾಸನ, ಹೂವಿನ ಬಾಗಿನಲ್ಲಿರುವ ಆಂಜನೇಯ ದೇವಾಲಯದ ಬಾಗಿಲಿನ ಮೇಲಿದೆ. ಇದರಲ್ಲಿ 'ಶ್ರೀ ಪ್ರೌಢದೇವೆಂದ್ರ ರಾಯರ ಮಗ ಮಲ್ಲಿಕಾರ್ಜುನ ರಾಯರು ಇವರು' ಎಂದೆ ಉಲ್ಲೇಖವಾಗಿದೆ.

ಮಲ್ಲಿಕಾರ್ಜುನ ದೇವರಾಯರು ಸ್ವರ್ಗಸ್ಥರಾದ ಶಾಸನ ಮತಂಗ ಪರ್ವತದ ಬಳಿ ಇದ್ದು ಸ್ವರ್ಗಸ್ಥರಾದ ವರ್ಷವನ್ನು ಉಲ್ಲೇಖಿಸುತ್ತಿರುವುದು. ಶಾಸನದ ಕಾಲ ಕ್ರಿ.ಶ. 1464 ಆಗಿದ್ದು, ಕನ್ನಡ ಲಿಪಿ ಮತ್ತು ಕನ್ನಡ ಭಾಷೆಯಲ್ಲಿದೆ. ಹಂಪೆಯ ಎದುರು ಬಸವಣ್ಣನ ಗುಡಿಯಿಂದ ಮಂತಗ ಪರ್ವತಕ್ಕೆ ಹತ್ತುವ ದಾರಿಯಲ್ಲಿ ಬಂಡೆಯ ಮೇಲಿರುವ ಶಾಸನದಪಾಠ

1. 74226
2. ಓಂ ಶ್ರೀ ಶ್ರೀ ಶ್ರೀ
3. ಜಯಾಭ್ಯುದಯ
4. ಶಾಲಿವಾಹನ....... ವರ್ಷ 1386
5. ಚಿ.ಕ. ಯ ಜು 1
6. ಮಲಿಕಾರ್ಜುನದೇವರಾ
7. ಯರು
8. ಸ್ವರ್ಗಸ್ಥರಾದರು

ಶಾಸನ ಉಲ್ಲೇಖಿಸುವಂತೆ ಶಕ ವರ್ಷ 1386 ಅಂದರೆ ಕ್ರಿ.ಶ. 1464ರಲ್ಲಿ ಶ್ರೀ ಮಲ್ಲಿಕಾರ್ಜುನದೇವರಾಯರು ಸ್ವರ್ಗಸ್ಥರಾದರೆಂಬ ವಿಷಯ ವ್ಯಕ್ತವಾಗುತ್ತದೆ. ಮಲ್ಲಿಕಾರ್ಜುನದೇವರಾಯರು ವಿಜಯನಗರದ ಅರಸು ಶ್ರೀ ಪ್ರೌಢದೇವರಾಯರ ಮಗನೆಂದು, ಹೂವಿನ ಬಾಗಿಲಿನ ಶಾಸನದಲ್ಲಿ ಉಲ್ಲೇಖವಿದೆ. ಶಾಸನದ ಮೊದಲನೇ ಸಾಲಿನಲ್ಲಿ 74226ಎಂಬ ಸಂಖ್ಯೆಗಳು ಇರುವುವು. ಈ ಸಂಖ್ಯೆ ಯಾವುದರ ಸೂಚನೆ ಎಂಬ ಅಂಶವನ್ನು ಬೆಳಕಿಗೆ ತರಬೇಕಾಗಿದೆ. ಆದರೂ ಈ ಶಾಸನದಲ್ಲಿ ಹೆಚ್ಚು ಆಳವಾಗಿ

ಅಕ್ಷರಗಳನ್ನು ಬರೆಯಲಾಗಿಲ್ಲ, ಅಸ್ಪಷ್ಟತೆಯಿಂದ ಕೂಡಿದೆ, ಸಂವತ್ಸರ, ಮಾಸ, ದಿನಗಳೂ ಸೂಚಿತವಾಗಿರುವುದಿಲ್ಲ. ಆದರೂ ಶಾಸನದ ಮುಖ್ಯ ವಿಷಯ ಮಾತ್ರ ಸ್ಪಷ್ಟ ವಾಗುವುದು.

ಈ ರೀತಿಯಾಗಿ ವಿಜಯನಗರ ಸಾಮ್ರಾಜ್ಯದ ಅರಸರು ಸ್ವರ್ಗಸ್ಥರಾದ ಉಲ್ಲೇಖ ವನ್ನು ನೀಡುವ ಶಾಸನಗಳು ರಾಜಧಾನಿ ಪರಿಸರದಲ್ಲಿ ಎರಡು ಮಾತ್ರ. ಈ ಶಾಸನದ ಪಶ್ಚಿಮ ಭಾಗದಲ್ಲಿ ಅತಿಸಮೀಪದಲ್ಲಿರುವ ಗುಹೆಯಲ್ಲಿ 'ಶ್ರೀ ಬುಕ್ಕರಾಯರು ಸ್ವರ್ಗರಾದರು' ಎಂಬ ಶಾಸನ ವಿಜಯನಗರ ಪ್ರೋಗ್ರೆಸ್ ಆಫ್ ರಿಸರ್ಚ್ - 1984 - 87ರ ವರದಿಯಲ್ಲಿ ಪ್ರಕಟವಾಗಿದೆ. ವಿಜಯನಗರ ಸಾಮ್ರಾಜ್ಯದ ಸ್ಥಾಪಕ ವಂಶ ಸಂಗಮ ಮನೆತನದ ಇಬ್ಬರು ಅರಸರಾದ ಬುಕ್ಕರಾಯ ಮತ್ತು ಮಲ್ಲಿಕಾರ್ಜುನರಾಯರು ಸ್ವರ್ಗಸ್ಥರಾದ ಶಾಸನಗಳು ಒಂದೇ ಸ್ಥಳದಲ್ಲಿರುವುದೊಂದು ವಿಶೇಷವಾಗಿದೆ.

ಮಲ್ಲಿಕಾರ್ಜುನ ದೇವರಾಯರ ಶಾಸನಗಳು ಬಳ್ಳಾರಿ ಜಿಲ್ಲೆಯಲ್ಲಿ ಕಡಿಮೆ ಸಂಖ್ಯೆ ಯಲ್ಲಿವೆ. ಉಳಿದಂತೆ ಕರ್ನಾಟಕದ ದಕ್ಷಿಣ ಭಾಗ, ಆಂಧ್ರ ಪ್ರದೇಶ ಹಾಗೂ ತಮಿಳು ನಾಡು ರಾಜ್ಯಗಳಲ್ಲಿ ವಿಶೇಷವಾಗಿ ಕಂಡು ಬರುತ್ತವೆ. ಪ್ರೌಢದೇವರಾಯರ ದಿಗ್ವಿಜಯ ಗಳಲ್ಲಿ ಮಲ್ಲಿಕಾರ್ಜುನರಾಯರ ಪಾತ್ರ ಹಿರಿದಾಗಿದೆ. ಆದರೆ ಈತನ ಆಡಳಿತದಲ್ಲಿ ಮಾತ್ರ ಅಷ್ಟೊಂದು ಪ್ರಬಲತೆ ಇರಲಿಲ್ಲವೆಂದು ಇತಿಹಾಸಕಾರರು ಅಭಿಪ್ರಾಯ ಪಡುತ್ತಾರೆ.

ಸ್ವರ್ಗಸ್ಥರಾದ ಶಾಸನಗಳ ಹಿನ್ನೆಲೆಯನ್ನು ಗಮನಿಸಿದರೆ, ಒಂದನೇ ಹರಿಹರ ಹಾಗೂ ಬುಕ್ಕರಾಯರ ಮಂತ್ರಿ, ಸಲಹೆಗಾರ ಹಾಗೂ ವಿಜಯನಗರ ಸಾಮ್ರಾಜ್ಯಕ್ಕೆ ಸ್ಥಾಪಕನಾದ ಮಹಾಮಂತ್ರಿ ಬೈಚ ದಂಡನಾಯಕನು ಹಂಪೆಯ ವಿರೂಪಾಕ್ಷದಲ್ಲಿ ಪರಮ ಪದವಿಯನೈದನು ಎಂದು ಅರುವನಹಳ್ಳಿ (ಮಂಡ್ಯ ಜಿಲ್ಲೆ ತಾ.)ಯ ಶಾಸನಗಳ ಉಲ್ಲೇಖ ವಿರುವುದರಿಂದ, ಹಂಪೆಯ ಶ್ರೀ ವಿರೂಪಾಕ್ಷನ ಸಾನ್ನಿಧ್ಯ ಬಹಳ ಮಹತ್ವದ್ದೆನಿಸಿರಲೇ ಬೇಕು. ಈ ಅರಸರ ಆತ್ಮ ಪರಮಾತ್ಮನಾದ ಶಿವನಲ್ಲಿ ಲೀನವಾಗಿ ಮುಕ್ತಿಯನ್ನು ಸಂಪಾದಿಸಿದರು, ಎಂಬ ಆಧ್ಯಾತ್ಮಿಕ ಭಾವನೆಗೆ ಪುಷ್ಟಿಯನ್ನೊದಗಿಸುತ್ತವೆ.

ನಿಂಬಾಪುರದ ಶಾಸನದಲ್ಲಿ ಮಲ್ಲಿಕಾರ್ಜುನರಾಯರ ವಂಶಾವಳಿ ಉಲ್ಲೇಖಿತ ವಾಗಿದೆ. ಇವರ ಆಳ್ವಿಕೆಯ ಅವಧಿಯಲ್ಲಿ ನಿರ್ಮಾಣವಾದ್ದು ಸೌಮ್ಯ ಸೋಮೇಶ್ವರ ದೇವಾಲಯ.

ಟಿಪ್ಪಣಿಗಳು

1. ARIE 1957-58 No. 204-205

2. M.S. Nagaraja Rao, 1983, Vijayanagara progress of Research - 1979-83, Directorate of Archaeology and Museums, Mysore.

3. B.R. Gopal, Vijayanagara Inscriptions Vol I No. 375-76

4. C.S. Patil 1995, Vijayanagara Hampi Inscriptions No. 370-71

5. Ibid No. 403

6. AR No. 2 S.I.I. IX part II No. 453:
   S.I.I. XVII, No. 26

7. PB. Desai, Srinivas Ritti, B.R. Gopal; 1981 (2nd edition) History of Karnataka P. 372

8. ದೇವರ ಕೊಂಡಾರೆಡ್ಡಿ, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - 3 ಸಂ. 398

9. T.M. Manjunathaiah: 1991, Saumya Someswara Temple Nimbapura, Vijayanagara progress of Research 1987-88. pp. 165-67 Directorate of Archaeology and Musems Mysore.

10. Epigraphia Carnatica vii Maddur Aruvanahalli

11. ಟಿ.ಎಂ. ಮಂಜುನಾಥಯ್ಯ, 2004, ಮಹಾಮಂತ್ರಿ ಬೈಚಯ್ಯ ದಂಡನಾಯಕ ವಿಜಯನಗರ ಅಧ್ಯಯನ ಸಂಪುಟ - 9 ಪು. 303-13

೮. ಹಂಪೆ ಶಾಸನೋಕ್ತ ಮಹಾಮಂಡಳೇಶ್ವರರು

ಡಾ. ಹನುಮಂತ ಮೇಲಿನ ಮನಿ

ಆಡಳಿತ ವಿಭಾಗಕ್ಕೆ ಸಂಬಂಧಿಸಿದ ಮಂಡಲ ಅಥವಾ ಪ್ರಾಂತದ ಒಡೆಯ ಮಂಡಳೇಶ್ವರ ನಾಗಿರುತ್ತಿದ್ದ. ಈತನನ್ನು ಮಂಡಲಾಧಿಪತಿ, ಮಾಂಡಲೀಕ, ಮಂಡಲೇಶ ಎಂದು ಪರ್ಯಾಯ ನಾಮದಿಂದ ಕರೆಯಲಾಗಿದೆ.

ವಿಸ್ತಾರವಾದ ಸಾಮ್ರಾಜ್ಯದ ಆಡಳಿತವನ್ನು ಚಕ್ರವರ್ತಿಯೊಬ್ಬನೇ ನೋಡಿಕೊಳ್ಳುವುದು ಅಸಾಧ್ಯವಾದುದರಿಂದ ಅದನ್ನು ವಿವಿಧ ವಿಭಾಗಗಳನ್ನಾಗಿ ವಿಂಗಡಿಸಲಾಗುತ್ತಿತ್ತು. ಇಂತಹ ವಿಭಾಗ ಇಲ್ಲವೆ ಮಂಡಲಗಳನ್ನು ವಂಶಪರಂಪರೆಯಾಗಿ ಬಂದ ಮಹಾಮಂಡಲೇಶ್ವರರು ಆಳುತ್ತಿದ್ದರು. ಆಡಳಿತದ ಅನುಕೂಲಕ್ಕಾಗಿ ಚಕ್ರವರ್ತಿಯಂತೆ ಮಂಡಳೇಶ್ವರರಲ್ಲಿಯೂ ಸ್ವತಂತ್ರದ ಮಂತ್ರಿ ಮಂಡಲ, ಅಧಿಕಾರ ವರ್ಗ ಮತ್ತು ಸೈನಿಕರಿರುತ್ತಿದ್ದರು. ಇವರು ಚಕ್ರವರ್ತಿಗೆ ಅಧೀನರಾಗಿ ಪ್ರತಿವರ್ಷ ಕಪ್ಪವನ್ನು ಕೊಡಬೇಕಾಗಿದ್ದಿತು. ಇವರು ವಂಶಪರಂಪರೆಯಾಗಿ ಬಂದ ಬಿರುದು, ರಾಜ ಚಿಹ್ನೆಗಳನ್ನು ಧರಿಸುತ್ತಿದ್ದರು. ಮಹಾಮಂಡಳೇಶ್ವರರ ಸ್ಥಾನಮಾನಗಳು ಅವರವರ ಅಧಿಕಾರ ಮತ್ತು ಕಾರ್ಯವ್ಯಾಪ್ತಿಗನುಗುಣವಾಗಿ ಬೇರೆ ಬೇರೆಯಾಗಿರುತ್ತಿದ್ದವು.

ಹಂಪೆ ಶಾಸನಗಳು ಹಲವಾರು ಮಹಾಮಂಡಳೇಶ್ವರರನ್ನು ಪ್ರಸ್ತಾಪಿಸಿವೆ. ಈಗ ಅವರ ವಿವರವನ್ನು ನೋಡಬಹುದು.

ತಿಮ್ಮರಾಜ

ಕ್ರಿ.ಶ. ೧೫೨೧ರ ಶಾಸನ " ಮಹಾಮಂಡಳೇಶ್ವರ ಚಿಕ್ಕ ತಿಮ್ಮಯ್ಯದೇವನ ಮಗ ತಿಮ್ಮರಾಜನು ಶ್ರೀ ರಾಮಚಂದ್ರದೇವರ ಅಮೃತಪಡಿ ಸೇವೆಗೆಂದು ಕೃಷ್ಣದೇವರಾಯನು ದಾನ ಮಾಡಿದ ಸೊಂಡೂರ ಸೀಮೆಯಲ್ಲಿನ ತಾಳೂರ ಗ್ರಾಮದಲ್ಲಿನ ಒಡೆದು ಹೋದ ಕೆರೆಯನ್ನು ದೊಡ್ಡ ಕೆರೆಯಾಗಿ ಕಟ್ಟಿಸಿ, ದೇವರಗುಡಿಯ ಮುಂದೆ ಉತ್ಸವ ಮಂಟಪ ಕಟ್ಟಿಸಿದನೆಂದು ತಿಳಿಸುತ್ತದೆ. ಅಲ್ಲದೆ, ರಾಮಚಂದ್ರ ದೇವಸ್ಥಾನದ ಕಾರ್ಯಕ್ಕೆ ತಿಮ್ಮರಾಜನ ಕರಣಿಕ ಮಂಗರಸ, ಮನುಷ್ಯ ಅಧಿಕಾರಿ ಅಲ್ಲಮರಸ, ಆಗಮಿಕ ನಾರಾಯಣ ಭಟ್ಟ, ಸ್ಥಾನಿಕ ಮಾಧವನು, ಸೇನಬೋವ ನರಸಯಗಳು ಕೆರೆಗಾಗಿ ಭೂಮಿಯನ್ನು ದಾನ ಮಾಡಿದರೆಂದು ತಿಳಿಸುತ್ತಿದೆ. ತಿಮ್ಮರಾಜ ತನ್ನ ತಂದೆ ಚಿಕ್ಕ ತಿಮ್ಮರಾಜ ಒಡೆಯ

ಮತ್ತು ತಾಯಿ ಕೋನಾಜ ಅಮ್ಮನವರಿಗೆ ಪುಣ್ಯವಾಗಬೇಕೆಂದು ಅದೇ ದೇವಸ್ಥಾನದಲ್ಲಿ ಉತ್ಸವಗಳನ್ನಾಚರಿಸಲು ಭೂಮಿಯಿಂದ ಬರುವ ಆಧಾಯದ ಒಂದು ಭಾಗವನ್ನು ದಾನ ಮಾಡಿದನೆಂದು ತಿಳಿಸುತ್ತದೆ".

ಮಲುಂಪಾಟಿ ಅಲ್ಲುಭೀಮರಾಜ

ಕ್ರಿ.ಶ. ೧೫೩೫ರ ಶಾಸನ "ಸದಾಶಿವರಾಯನ ಮಹಾಮಂಡಳೇಶ್ವರನಾದ ಆತ್ರೇಯಗೋತ್ರದ ಶುಕ್ಲಯಜುಶಾಖೆಯ ಯಲುಂಪಾಟಿ ಅಲ್ಲುಭೀಮರಾಜನ ಮಗ ಗೋಪಿರಾಜನಿಗೆ ಹಾಗೂ ತನ್ನ ತಂದೆ ತಾಯಿಗಳಿಗೆ ಪುಣ್ಯವಾಗಬೇಕೆಂದು ಚಿಕ್ಕತಿಮ್ಮಪನು ವಿಠಲೇಶ್ವರ ದೇವರ ಸನ್ನಿಧಾನದಲ್ಲಿ ನಡೆಯುವ ಕೆಲಸಕ್ಕೆ ಬತ್ತಿ, ನೂಲು, ಎಣ್ಣೆ ಮೊದಲಾದ ಪೂಜಾಸಾಮಗ್ರಿ ಮತ್ತು ೨೦೦ ಘಟ್ಟಿ ವರಹಗಳನ್ನು ದಾನ ನೀಡಿದನೆಂದು ತಿಳಿಸುತ್ತದೆ".

ತಿಮ್ಮರಾಜ

ಕ್ರಿ.ಶ. ೧೫೪೫ರ ತೆಲುಗು ಶಾಸನ "ಸದಾಶಿವರಾಯನ ಮಾಂಡಳಿಕ ಮಾಡರಾಜು ಮಲ್ಲರಾಜನ ಮೊಮ್ಮಗನೂ ವಲ್ಲಭರಾಜು ಮತ್ತು ವೆಂಗಳಮ್ಮನ ಮಗನೂ ಆದ ತಿಮ್ಮರಾಜನು ದೊಡ್ಡ ಅಂಗಡಿ ಬೀದಿಯ ಪಶ್ಚಿಮಕ್ಕೆ ಇರುವ ಮಾಧವ ದೇವರಿಗೆ ೨೫ ಅಂಕಣಗಳ ರಂಗಮಂಟಪಗಳನ್ನು ಕಟ್ಟಿಸಿದುದನ್ನು ಹೇಳುತ್ತಿದೆ. ತಿಮ್ಮರಾಜನು ತನ್ನ ತಂದೆ - ತಾಯಿಗಳಿಗೆ ಪುಣ್ಯವಾಗಲಿಯೆಂದು ಕಟ್ಟಿಸಿದ ಈ ಮಂಟಪವನ್ನು ದೇವರ ನಿತ್ಯೋತ್ಸವದ ಸಂದರ್ಭದಲ್ಲಿನ ನೃತ್ಯಗೀತ ವೈಭವಗಳಿಗೆ ಬಳಸಬೇಕೆಂದು ಕಟ್ಟಳೆ ವಿಧಿಸುತ್ತಾನೆ".

ಚಿಕ್ಕರಾಜು

ಕ್ರಿ.ಶ.1545ರ ಇನ್ನೊಂದು ಶಾಸನ "ಕಂದನವೋಲಿನ ಕಂದಾಲ ಶ್ರೀ ರಂಗಾಚಾರ್ಯರ ಶಿಷ್ಯ ಮತ್ತು ಜಂಬುಲದಿನ್ನೆಯ ಶ್ರೀ ರಂಗರಾಜುವಿನ ಮಗ ಮಹಾಮಂಡಳೇಶ್ವರ ಚಿಕ್ಕರಾಜು ವಿಠಲೇಶ್ವರದೇವಲ ದೇವಸ್ಥಾನದಲ್ಲಿರುವ ಲಕ್ಷ್ಮೀ ನಾರಾಯಣದೇವರ ಭಂಡಾರಕ್ಕೆ ದೇವರ ನಿತ್ಯಪೂಜೆಗೆಂದು ಗುಡ್ಡಂ ಗಂಗಾವತಿ ಸೀಮೆಯ ಕೆರೆಹಳ್ಳಿಯಲ್ಲಿ ೨ ವ್ರಿತ್ತಿಗಳನ್ನು ೭೫ ಘಟ್ಟಿ ವರಹಗಳಿಗೆ ಕೊಂಡು ಅದನ್ನು ಅಚ್ಯುತರಾಯಸಮುದ್ರಂ ಎಂದು ನಾಮಕರಣ ಮಾಡಿ ದಾನವಾಗಿ ಕೊಟ್ಟನೆಂದು ಹೇಳುತ್ತದೆ".

ರಘುನಾಥ

ಕ್ರಿ.ಶ.೧೫೫೪ ರ ಶಾಸನ "ಮಹಾಮಂಡಳೇಶ್ವರ ರಾಮರಾಜು ತಿರುಮಲರಾಜುವಿನ ಮಗ ರಘುನಾಥ ರಾಜಕತಾಲಪಾಲ್ಯಂನಲ್ಲಿ ಅಲಮೇಲಮಂಗಮ್ಮನ ದೇವಸ್ಥಾನವನ್ನು ಕಟ್ಟಿಸಿ ದೇವತೆಯ ದೀಪಾರಾಧನೆಗೆ ದಾನ ಮಾಡಿದನೆಂದು ತಿಳಿಸುತ್ತದೆ".

ಅವುಬಲರಾಜು

ಕ್ರಿ.ಶ. ೧೫೫೬ರ ಶಾಸನ " ಆತ್ರೇಯಗೋತ್ರದ ಮಹಾಮಂಡಳೇಶ್ವರ ರಾಮರಾಜು ಕೊನೇಟಯ್ಯದೇವ ಮಹಾರಾಜುವಿನ ಮಗ ಅವುಬಲರಾಜು ವಿಠಲೇಶ್ವರ ದೇವಸ್ಥಾನದ ವಾಯುವ್ಯ ದಿಕ್ಕಿಗೆ ಪ್ರಾಕಾರದ ಹೊರಗೆ ತಿರುಮಂಗಯಾಳ್ವರದೇವರಿಗೆ ಗರ್ಭಗೃಹ, ಶುಕನಾಸಿ, ಅಂತರಾಳಿಕ, ರಂಗಮಂಟಪಗಳನ್ನೊಳಗೊಂಡ ದೇವಸ್ಥಾನವನ್ನು ಕಟ್ಟಿಸಿದರೆಂದು ತಿಳಿಸುತ್ತದೆ. ಅಲ್ಲದೆ, ಅದೇ ವ್ಯಕ್ತಿ ದೇವರ ಸೇವೆಗೆ ಕೊಪ್ಪಳ ಸೀಮೆಯಲ್ಲಿನ ಅಬ್ಬೆಗೆರೆ, ಯಿಲಕಂಚ್ಚಿಸೀಮೆಯಲ್ಲಿನ ಕೆಚಿನ ಡೋಣಿ ಮತ್ತು ವಿಠಲಾಪುರ ಎಂಬ ಮೂರು ಗ್ರಾಮಗಳನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ".

ಶ್ರೀರಂಗರಾಜ ರಾಮರಾಜ ಅಯ್ಯ

ಕ್ರಿ.ಶ. ೧೫೫೭ರ ಶಾಸನ " ವೀರ ಸದಾಶಿವರಾಯನ ಮಂಡಲೇಶ್ವರನಾದ ಶ್ರೀ ರಂಗರಾಜ ರಾಮರಾಜ ಅಯ್ಯನು ಚಿಕ್ಕ ದೇವರ ಶಾಂತಿನಾಥ ಬಸದಿಗೆ ದೀವಟಿಗೆಗಾಗಿ ಅಂಗಡಿಯನ್ನು ನೀಡುತ್ತಾನೆ. ಚಿಕವೀರನರಸಣ್ಣನು ಏಳು ಅಂಕಣದ ಮಾಳಿಗೆಯನ್ನು ನಿರ್ಮಿಸಿ ದಾನ ನೀಡಿದನೆಂದೂ ತಿಳಿಸುತ್ತದೆ".

ರಾಮರಾಜ ತಿರುಮಲರಾಜ

ಕ್ರಿ.ಶ. ೧೫೬೦ರ ಶಾಸನ " ವಿಠಲಸ್ವಾಮಿಯ ಪಾದ ಸೇವಕನಾದ ಮೂರ್ತಿರಾಜು ವಿಠಲರಾಜು ಎಂಬುವವನು ತನ್ನ ತಾಯಿಯ ಪುಣ್ಯತಿಥಿಯ ಕಾರಣವಾಗಿ ದೇವರ ಅಮೃತಪಡಿ ಸಿತ್ಯ ನೈವೇದ್ಯ, ಬ್ರಾಹ್ಮಣರ ಭೋಜನಕ್ಕಾಗಿ ಹರಿಹರಪುರವನ್ನು ದಾನವಾಗಿ ನೀಡುತ್ತಾನೆ. ಈ ಗ್ರಾಮವು ಆತ್ರೇಯಗೋತ್ರದ ಯಜುಶಾಖೆಯ, ಸೋಮವಂಶದವನಾದ ಮಹಾಮಂಡಳೇಶ್ವರ ರಾಮರಾಜ ತಿರುಮಲರಾಜನ ನಾಯಕತನಕ್ಕೆ ಸೇರಿದ ಜಗತಾಪಿಗುತ್ತಿ (ಸೀಮೆ)ಯಲ್ಲಿತ್ತೆಂದು ತಿಳಿಸುತ್ತದೆ".

ಶ್ರೀರಂಗಯ್ಯದೇವ

ಕಾಲದ ಉಲ್ಲೇಖವಿಲ್ಲದ " ತೆಲುಗು" ಅಕ್ಷರ ಮತ್ತು ಭಾಷೆಯ ತ್ರುಟಿತ ಶಾಸನ ಮಹಾಮಂಡಳೇಶ್ವರ ರಾಮರಾಜ ಕೋನೇಟಯ್ಯದೇವ ಮಹಾರಾಜನ ಕುಮಾರ

ಶ್ರೀರಂಗಯ್ಯದೇವನು ದೇವಾಲಯದ ಪ್ರಾಕಾರದ ವಾಯುವ್ಯಕ್ಕೆ ೧೩೦ ಕೈಯಳತೆಯ ಜಾಗವನ್ನು ಬಿಟ್ಟಂತೆ ಹೇಳುತ್ತದೆ”.

ಚಿಕ್ಕತಿಮ್ಮರಾಜ ಕೊಂಡಯ್ಯ ದೇವ

ಕಾಲದ ಉಲ್ಲೇಖವಿಲ್ಲದ ಒಂದು ತ್ರುಟಿತ ಶಾಸನ” ಮಹಾಮಂಡಳೇಶ್ವರ ಚಿಕ್ಕ ತಿಮ್ಮರಾಜಕೊಂಡಯ್ಯದೇವನನ್ನು ಉಲ್ಲೇಖಿಸುತ್ತದೆ”.

ಹೀಗೆ ಹಲವಾರು ಜನ ಮಹಾಮಂಡಳೇಶ್ವರರು ದಾನವಿತ್ತ, ಸಾರ್ವಜನಿಕ ಕಾರ್ಯನಿರ್ವಹಿಸಿದ ಪ್ರಸ್ತಾಪ ಹಂಪೆ ಶಾಸನಗಳಲ್ಲಿ ಬಂದಿರುವುದಾದರೂ ಅವರ ಆಡಳಿತ ವಿಭಾಗ, ಆಡಳಿವತ ವ್ಯವಸ್ಥೆ ಮೊದಲಾದವುಗಳ ಬಗೆಗೆ ಏನೂ ತಿಳಿದುಬಾರದು.

ಟಿಪ್ಪಣಿ

೧. ಡಾ. ದೇವರಕೊಂಡಾರೆಡ್ಡಿ (ಸಂ):ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ:೩, ಹಂಪಿ ಶಾಸನಗಳು. ಪು. ೧೯೭. ಶಾಸನ ಸಂಖ್ಯೆ:೨೫೭.
೨. ಅದೇ ಪು. ೧೬೮. ಶಾ.ಸಂ.:೨೧೧
೩. ಅದೇ ಪು. ೨೧೩. ಶಾ.ಸಂ. : ೨೮೯
೪. ಅದೇ ಪು. ೧೫೯. ಶಾ.ಸಂ: ೨೦೫
೫. ಅದೇ ಪು. ೨೧೧. ಶಾ.ಸಂ:೨೮೮
೬. ಅದೇ ಪು. ೧೬೪. ಶಾ.ಸಂ:೨೦೯
೭. ಅದೇ ಪು. ೨೫೬. ಶಾ.ಸಂ:೩೫೧
೮. ಅದೇ ಪು. ೧೧೨. ಶಾ.ಸಂ:೧೩೮
೯. ಅದೇ ಪು. ೧೫೪. ಶಾ.ಸಂ:೧೯೯
೧೦. ಅದೇ ಪು. ೨೫೧. ಶಾ.ಸಂ:೩೪೬.

೯. ಹಂಪಿಯ ಶಾಸನೋಕ್ತ ಅಗ್ರಹಾರಗಳು

ಡಾ. ಬಿ.ವ್ಹಿ. ಶಿರೂರ

ಅಗ್ರ+ ಆಹಾರ ಎಂಬ ಎರಡು ಪದಗಳ ಸಮಾಸವೆ ಅಗ್ರಹಾರ ಎಂದು ಪ್ರೊ.ಡಿ. ಎಸ್. ನರಸಿಂಹಾಚಾರ್ ಅವರು ಹೇಳಿದ್ದಾರೆ. ಅಗ್ರ ಎಂದರೆ ಶ್ರೇಷ್ಠ, ಆಹಾರ ಎಂದರೆ ದೇಶ ಅಥವಾ ಸ್ಥಳ ಎಂಬರ್ಥವನ್ನು ಕಲ್ಪಿಸಲಾಗಿದೆ. ಹೀಗಾಗಿ ಅಗ್ರಹಾರವೆಂದರೆ ಶ್ರೇಷ್ಠರಿಗೆ ಕೊಟ್ಟಿರುವ ಊರು ಅಥವಾ ಸ್ಥಳ ಎಂದು ಹೇಳಲಾಗುತ್ತಿದೆ. ಸಾಮಾನ್ಯವಾಗಿ ಇದು ಬ್ರಾಹ್ಮಣರ ಪೋಷಣೆಗಾಗಿ ದಾನಕೊಟ್ಟ ಪ್ರದೇಶ, ಭೂಮಿ, ಬ್ರಾಹ್ಮಣರು ವಾಸವಾಗಿ ರುವ ಕೇರಿ, ಬೀದಿ ಎಂಬರ್ಥ ಹೊಂದಿದ್ದರೂ ಇಲ್ಲಿ ಎಲ್ಲರೂ ಬ್ರಾಹ್ಮಣರೆ ಇರಬೇಕೆಂದೇ ನಿಲ್ಲ; ಬೇರೆ ಜಾತಿಯ ಜನರೂ ಇರುತ್ತಿದ್ದರು. ಆದರೂ ಆ ಊರಿನ ಉತ್ಪತ್ತಿಯೆಲ್ಲ ಅಲ್ಲಿಯ ಬ್ರಾಹ್ಮಣರಿಗೆ ಮಾತ್ರ ಸಲ್ಲುತ್ತಿದ್ದಿತು. ಇಂಥ ಎಂಟು ಅಗ್ರಹಾರಗಳು ಹಂಪಿ ಶಾಸನದಲ್ಲಿ ಉಲ್ಲೇಖಗೊಂಡಿವೆ. ಈಗ ಅವನ್ನು ಅವಲೋಕಿಸಬಹುದು.

ಕಪಿಲಾಶ್ರಮದ ಬಳಿ ಇರುವ ಕ್ರಿ.ಶ. ೧೪೩೫ರ ಸಂಸ್ಕೃತ ಕನ್ನಡ ಹಂಪಿ ಶಾಸನ (ನಂ. 398) ವು ಕುಮಾರಗಿರಿ ಅಗ್ರಹಾರವನ್ನು ಉಲ್ಲೇಖಿಸುತ್ತದೆ. ಪ್ರೌಢದೇವರಾಯನು ವಿಜಯನಗರವನ್ನು ಆಳುತ್ತಿದ್ದಾಗ ತುಂಗಭದ್ರೆಯ ದಕ್ಷಿಣತೀರದ ಕುಮಾರಗಿರಿಯ ಅಗ್ರಹಾರದ ಬಳಿ ಸೋಮಲಾಪುರದಲ್ಲಿ ಹೊಸದಾಗಿ ಪ್ರತಿಷ್ಠೆಯಾದ ಸೌಮ್ಯ ಸೋಮೇಶ್ವರ ದೇವರ ಪೂಜೆಗಾಗಿ ಗ್ರಾಮವೊಂದನ್ನು ದಾನವಾಗಿ ನೀಡಿರುವುದನ್ನು ಹೇಳುತ್ತಿದೆ. ಆ ಗ್ರಾಮದ ಮೇರೆಯನ್ನು ಹೇಳುವಾಗ ಈ ಅಗ್ರಹಾರದ ಪ್ರಸ್ತಾಪವಾಗಿದೆ. ಹೀಗಾಗಿ ಇಲ್ಲಿ ಹೆಚ್ಚಿನ ವಿಷಯವೇನೂ ತಿಳಿದುಬಾರದು.

ನೆಲಮಟ್ಟಕ್ಕಿರುವ ಪ್ರಸನ್ನ ವಿರೂಪಾಕ್ಷ ದೇವಾಲಯದಲ್ಲಿರುವ ಕ್ರಿ.ಶ. ೧೫೧೩ರ ಹಂಪಿ ಶಾಸನ(ನಂ. 250) ಕೃಷ್ಣದೇವರಾಯ ತನ್ನ ತಂದೆ ನರಸಣ್ಣನಾಯಕ ಮತ್ತು ನಾಗಾಜಿ ಅಮ್ಮನವರ) ಒಳಿತಿಗಾಗಿ ಮತ್ತು ಪ್ರಸನ್ನ ವಿರೂಪಾಕ್ಷದೇವರ ಸೇವೆಗಾಗಿ ನಿಶ್ಚಿತ ಗ್ರಾಮಗಳಾದ ಕನ್ನಕಿಯ ಕಟೆ, ಬಂಕಾಪುರ, ನಾಗವಾಪುರ, ಗೌರಾಜಿಕೆರೆ, ಮೂರು ತೋಟ, ಎರೆ ಊರ ಅಗ್ರಹಾರದ ವೃತ್ತಿ ೧ ಮತ್ತು ವೋರುವಾಯ ಅಗ್ರಹಾರದ ವೃತ್ತಿ ೧ ಗಳನ್ನು ದಾನ ಮಾಡಿದುದಾಗಿ ಹೇಳುತ್ತಿದೆ. ಒಮ್ಮೆ ಅಗ್ರಹಾರವನ್ನು ಬ್ರಾಹ್ಮಣರಿಗೆ ದಾನವಿತ್ತ ಮೇಲೆ ಅದರ ಸಮಗ್ರ ಅಧಿಕಾರ ಸಾಮಾನ್ಯವಾಗಿ ಅಲ್ಲಿಯ ಬ್ರಾಹ್ಮಣರಿಗೆ ಇರುವುದುಂಟು. ಆದರೆ ಇಲ್ಲಿ ಕೃಷ್ಣದೇವರಾಯ ಎರೆಊರ ಮತ್ತು ವೋರುವಾಯ

ಅಗ್ರಹಾರದ ಒಂದೊಂದು ವೃತ್ತಿಯನ್ನು ದಾನವಿತ್ತನು ಎಂದಿರುವುದು ಬ್ರಾಹ್ಮಣರಿಗೆ ದಾನವಿತ್ತ ಮೇಲೂ ಅರಸನಿಗೆ ಈ ರೀತಿ ದಾನವೀಯುವ ಅಧಿಕಾರವಿರುತ್ತಿತ್ತು ಎಂಬುದು ಈ ಶಾಸನದಿಂದ ತಿಳಿದುಬರುತ್ತಿದೆ.

ಕ್ರಿ.ಶ. ೧೫೨೪ರ ಕಡಿರಾಂಪುರ ಹಂಪಿರಸ್ತೆಯ ಪೂರ್ವಕ್ಕೆ ತುರ್ತುಕಾಲುವೆಯ ಉತ್ತರಕ್ಕೆ ಇರುವ ವೈಷ್ಣವ ದೇವಾಲಯದ ಎದುರಿನ ಕಲ್ಲಿನಲ್ಲಿರುವ ಶಾಸನ (ನಂ.229) ನೆಳಲಹುಣಿಸಿ ಮತ್ತು ಯರಗುಡಿ ಅಗ್ರಹಾರಗಳನ್ನು ಈ ರೀತಿ ಪ್ರಸ್ತಾಪಿಸುತ್ತದೆ. 'ಆ ಗೋಪನಾಥ ದೀಕ್ಷಿತರು ರಘುನಾಥಗೆ ಅಮೃತಪಡಿಯ ನ್ಯಾಸ್ತಿಗೆ ಮಾಡಿ ನೆಳಲಹುಣಿಸಿ ಯೆಂಬ ಸರ್ವಮಾಂನ್ಯದ ಅಗ್ರಹಾರದಲ್ಲಿ ನಂಹಯೆದೇವಗಳ ಹೋಬಳಿಯಿಂದ ಶಾಸನಸ್ತವಾದ ಸಿಂಬಡುಗದ ಗದ್ದೆಯನು ಕೊಟ್ಟರು'. . . ಹಸ್ತಿನಾವತಿ ವಳಿತದ ಅರಕೆರೆವೇಂಟದ ಪ್ರತಾಪದೇವರಾಯಪುರವಾದ ಯರಗ್ನುಡಿಯೆಂಬ ಸರ್ವಮಾಂನ್ಯದ ಅಗ್ರಹಾರದಲ್ಲಿ ಕೊಂಡ ಪಂ.ಕೊ. ರದಕೆ ವೃತ್ತಿ ಹತ್ತನು ಶ್ರೀ ರಘುನಾಥ ದೇವರ ಅಮೃತಪಡಿಗೆ ಸಮರ್ಪಿಸಿದರು: ಹೀಗೆ ಅಗ್ರಹಾರಗಳ ಉತ್ಪನ್ನದ ಕೆಲವು ಭಾಗವನ್ನು ಇತರರು ಖರೀದಿಸಿ ದೇವಾಲಯಗಳ ವಿವಿಧ ಸೇವೆಗೆ ದಾನವಿತ್ತಿರುವುದು ಈ ಶಾಸನದಿಂದ ಸ್ಪಷ್ಟವಾಗುತ್ತಿದೆ. ಅಲ್ಲದೆ ಇಲ್ಲು ಯರಗುಡಿ ಅಗ್ರಹಾರ ಅರಸನ ಪ್ರಭಾವದಿಂದ ಪ್ರತಾಪದೇವಪುರವೆಂದು ನಾಮಕರಣಗೊಂಡಿರುವುದನ್ನು ಕಾಣಬಹುದಾಗಿದೆ. ಇಲ್ಲಿ ಇದನ್ನು ಸರ್ವಮಾನ್ಯ ಅಗ್ರಹಾರ ಎಂದು ಕರೆದು ಅದು ಎಲ್ಲ ತೆರಿಗೆಯಿಂದ ಮುಕ್ತ ವಾದುದು ಎಂದೂ ಹೇಳಲಾಗಿದೆ.

ಕ್ರಿ.ಶ. ೧೫೨೫ರ ತ್ರುಟಿತ ಶಾಸನ (ನಂ. 230) ಕೇವಲ ನೆಳಲಹುಣಿಸಿ ಅಗ್ರಹಾರ ವನ್ನು ಪ್ರಸ್ತಾಪಿಸಿದರೆ, ಚಿಕ್ಕಹುಡೆದೇವಾಲಯದ ದಕ್ಷಿಣ ಕಲ್ಲಿನ ಮೇಲಿರುವ ಕ್ರಿ.ಶ.1540 ರ ಶಾಸನ (ನಂ.326) ಹರಿಣಿಯ ಹಿರಿಯ ಅಬ್ಬರಾಜನ ಮಗ ತಿಮ್ಮರಾಜನು ವರದರಾಜ ಅಮ್ಮನ ಪಟ್ಟಣಕ್ಕೆ ಪೂರ್ವದಿಕ್ಕಿನ ಪೆನುಗೊಂಡೆ ಬಾಗಿಲ ಬಳಿ ರಘುನಾಥ ದೇವರನ್ನು ಪ್ರತಿಷ್ಠೆ ಮಾಡಿಸಿ, ದೇವರ ಅಮೃತಪಡಿಗಾಗಿ ದಾನ ನೀಡಿದುದನ್ನು ಹೇಳುತ್ತಿದೆ. ಮುಮ್ಮಡಿ ದೀಕ್ಷಿತರಿಗೆ ಕ್ರಯವಾಗಿ ಬಂದ ನೆಳಲಹುಣಿಸೆಯೆಂಬ ಸರ್ವಮಾನ್ಯ ಅಗ್ರಹಾರದ ಎರಡು ವೃತ್ತಿಗಳನ್ನು ತಿಮ್ಮರಾಜನು ಮುಂಮ್ಮಡಿ ದೀಕ್ಷಿತನಿಂದ ಕ್ರಯವಾಗಿ ಪಡೆದು, ರಘುನಾಥದೇವರಿಗೆ ಒಂದು ಖಂಡುಗ ಗದ್ದೆಯನ್ನು ದಾನ ನೀಡಿರುವುದನ್ನು ಈ ಶಾಸನ ತಿಳಿಸುತ್ತದೆ. ಇಲ್ಲಿಯೂ ಕೂಡ ನೆಳಲಹುಣಿಸೆ ಅಗ್ರಹಾರವನ್ನು ಸರ್ವಮಾನ್ಯ ಅಗ್ರಹಾರವೆಂದು ಕರೆಯಲಾಗಿದೆ. ಆದರೆ ಇಲ್ಲಿ ಮುಂಮ್ಮಡಿ ದೀಕ್ಷಿತರಿಗೆ ಕ್ರಯವಾಗಿ ಬಂದ ಅಂದರೆ ಬಹುಶಃ ಅವರೂ ಕೊಂಡಿರ ಬಹುದಾದ ವೃತ್ತಿಗಳನ್ನು ತಿಮ್ಮರಾಜನು ಕ್ರಯವಾಗಿ ಪಡೆದು ರಘುನಾಥದೇವರಿಗೆ ದಾನವನ್ನಿತ್ತರು ಎನ್ನಲಾಗಿದೆ.

ವಿಠಲದೇವಾಲಯದ ಗರ್ಭಗೃಹದ ಮುಂದಿನ ಮಂಟಪದ ಉತ್ತರ ಅಧಿಷ್ಠಾನ ದಲ್ಲಿರುವ ಕ್ರಿ.ಶ. ೧೫೫೪ರ ಕನ್ನಡ ಶಾಸನ (ನಂ. 187) ಮುಸರಿಮಡುವಿನ ರಾಮರಾಜ, ತಿಮ್ಮರಾಜಯನ ಮಗ ಮತ್ತು ಅರಸನ ಅಧಿಕಾರಿ(?) ಈ ಇಬ್ಬರು ವಿಜಯ ಸಮುದ್ರ ಅಗ್ರಹಾರ ಮತ್ತು ಮರಕೊಂಬನ ಹಳ್ಳಿಗೆ ಪ್ರತಿನಾಮವಾದ ತಿಮ್ಮಸಾಗರ ಅಗ್ರಹಾರ ಮುಂತಾದ ಗ್ರಾಮಗಳ ಉತ್ಪನ್ನವಾದ ಗಟ್ಟಿ ಗದ್ಯಾಣ, ವರಾಹಗಳನ್ನು ಬೆಳಗಿನ ಜಾವದ ಹರಿವಾಣ, ನಂದಾದೀಪಕ್ಕೆ ದಿನಕ್ಕೆ ೧ ಸೇರು ತುಪ್ಪ, ಗಂಧ, ಗಂಧ ಪರಿಮಳಕಲ್ಲದೆ ವಿಠಲದೇವರಿಗೆ ಮತ್ತು ಲಕ್ಷ್ಮೀದೇವಿಯಮ್ಮನವರಿಗೆ ದಿನಕ್ಕೆ ತಲಾ ಒಂದೊಂದರಂತೆ ಎರಡು ಹಾರಗಳನ್ನು ವರ್ಷಕ್ಕೆ ಏರ್ಪಾಟು ಮಾಡಿ ಅವುಗಳ ಬೆಲೆಯನ್ನು ನಿಷ್ಕರ್ಶ ಮಾಡಿರುವುದನ್ನು ಹೇಳುತ್ತಿದೆ. ಇಲ್ಲಿಯೂ ಕೂಡಾ ಮರಕೊಂಬನಹಳ್ಳಿ ತಿಮ್ಮಸಾಗರ ಅಗ್ರಹಾರ ಎಂಬ ಪ್ರತಿನಾಮ ಪಡೆದಿರುವುದರ ಉಲ್ಲೇಖವಿದೆ.

ಅದೇರೀತಿ ವಿಠಲಸ್ವಾಮಿದೇವಾಲಯದ ರಂಗಮಂಟಪದ ಪೂರ್ವದಿಕ್ಕಿನ ಗೋಡೆಯಲ್ಲಿರುವ ಕ್ರಿ.ಶ. ೧೫೬೪ರ ಶಾಸನ (ನಂ. 204) ಸದಾಶಿವರಾಯನು ವಿಜಯನಗರದಲ್ಲಿ ಆಳುತ್ತಿದ್ದಾಗ ಶ್ರೀನಿವಾಸಾಚಾರ್ಯ ಅಯ್ಯನೆಂಬುವನು ಮುಕ್ಕುಂದಿ ಅಗ್ರಹಾರದ ೨೦ ವೃತ್ತಿಯನ್ನೂ ಕೊಪ್ಪಳ ಸೀಮೆಯಲ್ಲಿರುವ ಮುದುಬೆಯನಹಳ್ಳಿ ಮುಂತಾದ ಹಳ್ಳಿಗಳನ್ನು ವೃತ್ತಿಗಳಾಗಿ ವಿಂಗಡಿಸಿ ದೇವರಸೇವೆಗೆಂದು ದಾನವಾಗಿ ಕೊಟ್ಟದ್ದನ್ನೂ ತಿಳಿಸುತ್ತಿದೆ.

ಮೇಲಿನ ಎಲ್ಲ ಶಾಸನಗಳಲ್ಲಿ ಅಗ್ರಹಾರದ ಪ್ರಮುಖ ಉದ್ದೇಶವಾದ ವಿದ್ಯಾಭ್ಯಾಸದ ಯಾವ ಪ್ರಸ್ತಾಪವೂ ಇಲ್ಲ. ಅವುಗಳಲ್ಲಿಯೆ ಕೆಲಭಾಗವನ್ನು ಕೊಂಡ -ಕೊಟ್ಟ ಪ್ರಸ್ತಾಪ ಮಾತ್ರ ಇಲ್ಲಿ ಬರುತ್ತಿರುವುದರಿಂದ ಅವು ಈ ಕಾಲಕ್ಕಾಗಲೇ ತಮ್ಮ ಮುಖ್ಯ ಉದ್ದೇಶದಿಂದ ಹಿಂದೆಗೆದಿದ್ದವೇನೋ ಎನ್ನಿಸುತ್ತಿದೆ.

ಇವಲ್ಲದೆ ಇನ್ನೂ ಹಲವಾರು ಅಗ್ರಹಾರಗಳ ಪ್ರಸ್ತಾಪವು ಇಲ್ಲಿಯ ಶಾಸನಗಳಲ್ಲಿ ಬರುತ್ತಿವೆ. ಕನಕಗಿರಿ ಗೋಪುರದಲ್ಲಿ ಪೂರ್ವಕ್ಕಿರುವ ಕಲ್ಲಿನ ಮೇಲಿನ ಕ್ರಿ.ಶ. ೧೩೭೯ರ ಶಾಸನ (ನಂ. 53) ಅಗ್ರಹಾರವೊಂದನ್ನು ಉಲ್ಲೇಖಿಸುತ್ತಿದೆ. (ಬಹುಶಃ ಹೆಬ್ಬಾಳು) ಹರಿಹರ ಮತ್ತು ಬುಕ್ಕರು ಕಾಲುವೆಗಳಿಂದ ಕೂಡಿದ ಅಗ್ರಹಾರವನ್ನು ಅಲ್ಲಿಯೆ ಬ್ರಾಹ್ಮಣರಿಗೆ ದಾನ ಮಾಡಿದರು. ಅಂತಹ ಅಗ್ರಹಾರಗಳು ಪ್ರತಿದಿನವೂ ತುಂಬಿ ಹರಿಯುವ ನದಿಯ ನೀರಿನಿಂದ ಕೂಡಿದ ಕಾಲುವೆಗಳಿಂದ ಕಂಗೊಳಿಸುತ್ತ ಪ್ರಶಸ್ತವಾಗಿದ್ದವು. ಈ ಕಾಲುವೆಗಳು ತುಂಗೆಯ ನೀರಿನಿಂದ ತುಂಬಿ ಹರಿಯುತ್ತ, ಭಗೀರಥನು ಭೂಮಿಗೆ ದೇವಗಂಗೆಯನ್ನು ತಂದಂತೆ ಹರಿಹರನು ತುಂಗೆಯನ್ನು ಕಾಲುವೆಗಳ ಮೂಲಕ ಹರಿಯುವಂತೆ ಮಾಡಿದ ಎಂದಿದೆ. ಇಲ್ಲಿಯೂ ಕೂಡಾ ಅಗ್ರಹಾರದ ಪ್ರಮುಖ ಉದ್ದೇಶವಾದ ವಿದ್ಯಾಭ್ಯಾಸದ ಪ್ರಸ್ತಾಪವಾಗದೆ ಅವು ತುಂಬಿ ಹರಿಯುವ ನದಿಯ

ನೀರಿನಿಂದ ಕೂಡಿದ ಕಾಲುವೆಗಳಿಂದ ಕಂಗೊಳಿಸುತ್ತಿದ್ದವು ಎಂದು ಮಾತ್ರ ಹೇಳಿರುವುದು ವಿಶೇಷವಾದುದಾಗಿದೆ.

ಹಸ್ತಗಿರಿ ರಂಗನಾಥದೇವಾಲಯದ ಮಂಟಪದ ಕಲ್ಲಿನ ಮೇಲಿರುವ ಕ್ರಿ.ಶ. ೧೫೬೦ರ ಸಂಸ್ಕೃತ ಮತ್ತು ತೆಲುಗು ಭಾಷೆಯ ಶಾಸನ (ನಂ.138) ಸದಾಶಿವನ ಆಳ್ವಿಕೆಯಲ್ಲಿ ವಿಠಲಸ್ವಾಮಿಯ ಪಾದಸೇವಕರಾದ ಮೂರ್ತಿರಾಜು ಮತ್ತು ವಿಠಲರಾಜು ಎಂಬುವವರು ತಮ್ಮ ತಂದೆ ಮೂರ್ತಿರಾಜು ಮತ್ತು ತಿರುಮಲಮ್ಮನವರಿಗೆ ಪುಣ್ಯವಾಗಲಿ ಯೆಂದು ವಿಠಲದೇವರ ಅಮೃತಪಡಿ, ದೀಪಾರಾಧನೆ, ನಿತ್ಯನೈವೇದ್ಯ ಮತ್ತು ಹರಿಹರ ಪುರದ ಅಗ್ರಹಾರವನ್ನು ಬ್ರಾಹ್ಮಣರ ಭೋಜನಕ್ಕಾಗಿ ದಾನ ನೀಡಿದುದನ್ನು ಹೇಳುತ್ತಿದೆ. ಈ ಗ್ರಾಮ ಅತ್ರೇಯ ಗೋತ್ರದ ಯಜುಶ್ಶಾಖೆಯ ಸೋಮವಂಶದ ಮಹಾಮಂಡಳೇಶ್ವರ ರಾಮರಾಜು ತಿರುಮಲರಾಜನ ನಾಯಕತ್ವಕ್ಕೆ ಸೇರಿದ ಜಗತಾಪಿಗುತ್ತಿಯಲ್ಲಿದ್ದಿತು.

ಹೀಗೆ ಹಂಪಿ ಶಾಸನದಲ್ಲಿ ಉಲ್ಲೇಖವಾದ ಅಗ್ರಹಾರಗಳು ಹರಿಹರ ಮತ್ತು ಬುಕ್ಕ (ಕ್ರಿ.ಶ. ೧೩೭೯), ಪ್ರೌಢದೇವರಾಯ (೧೪೫೫), ಕೃಷ್ಣದೇವರಾಯ (ಕ್ರಿ.ಶ. ೧೫೧೩) ಸದಾಶಿವರಾಯ (೧೫೬೪) ಕಾಲಾವಧಿಯಲ್ಲಿ ಕಂಡುಬರುತ್ತಿವೆ. ಸೋಮೇಶ್ವರ, ವಿರೂಪಾಕ್ಷ, ರಘುನಾಥ ಮತ್ತು ವಿಠಲದೇವರ ಸೇವೆಗಾಗಿ ಈ ಅಗ್ರಹಾರಗಳನ್ನು ದಾನವಾಗಿ ನೀಡಲಾಗಿದೆ. ರಾಜರು ತಮ್ಮ ತಾಯಿ-ತಂದೆಗಳಿಗೆ ಪುಣ್ಯವಾಗಲಿ ಎಂದು ಅಗ್ರಹಾರದ ಬ್ರಾಹ್ಮಣರಿಗೆ ಗ್ರಾಮ, ಗದ್ದೆಗಳನ್ನು ದಾನವಾಗಿ ನೀಡಿದ್ದಾರೆ. ಹರಿಹರ ಮತ್ತು ಬುಕ್ಕರು ಕಾಲವೆಯಿಂದ ಕೂಡಿದ ಅಗ್ರಹಾರವನ್ನು ದಾನ ಮಾಡಿರುವ ಪ್ರಸ್ತಾಪವೂ ಇಲ್ಲಿದೆ. ನೆಳಲಹುಣಸೆ ಮತ್ತು ಯರಗುಡಿಯಂತ ಅಗ್ರಹಾರಗಳು ಸರ್ವಮಾನ್ಯ ಅಗ್ರಹಾರಗಳೆಂದು ಪ್ರಸ್ತಾಪಗೊಂಡಿವೆ.

ಆದರೆ ಈ ಯಾವ ಶಾಸನಗಳಲ್ಲಿಯೂ ಆ ಅಗ್ರಹಾರಗಳ ಮಹಾಜನರ ಪಾಂಡಿತ್ಯ ವನ್ನಾಗಲಿ ಅವರು ಕಲಿಸುತ್ತಿದ್ದ ವಿಷಯವನ್ನಾಗಲಿ, ಅವರಿಗೆ ಕೊಡುತ್ತಿದ್ದ ಗೌರವ ಧನವನ್ನಾಗಲಿ, ಅಲ್ಲಿದ್ದ ವಿದ್ಯಾರ್ಥಿಗಳು ಅವರಿಗಿದ್ದ ಸೌಲಭ್ಯಗಳನ್ನಾಗಲಿ ಪ್ರಸ್ತಾಪಿಸು ತ್ತಿಲ್ಲ. ಬದಲಿಗೆ ದೇವರಿಗೆ ದಾನ-ದತ್ತಿ ಕೊಡುವುದುಕ್ಕೆ ಇತರರಿಗೆ ಮಾರಿಕೊಂಡುದನ್ನು ಪ್ರಸ್ತಾಪಿಸುತ್ತಿವೆ. ಇವುಗಳಿಂದ ಈ ಕಾಲದಲ್ಲಿ ಅಗ್ರಹಾರಗಳ ಉತ್ಪನ್ನ ಕಡಿಮೆಯಾಗಿರ ಬೇಕು. ಅದಕ್ಕಾಗಿ ಅಲ್ಲಿಯ ಬ್ರಾಹ್ಮಣರು ತಾವು ಹಿಂದೆ ಪಡೆದುಕೊಂಡುದನ್ನೆ ಮಾರಿ ಉಪಜೀವನ ಸಾಗಿಸುತ್ತಿದ್ದ ಸ್ಥಿತಿಯುಂಟಾಗಿರಬಹುದು ಎಂದು ಕಲ್ಪಿಸಬಹುದಾಗಿದೆ.

೧೦. "ಮೈಸೂರು ಜಿಲ್ಲೆಯಲ್ಲಿನ ಕೃಷ್ಣದೇವರಾಯನ ಶಾಸನಗಳು- ಒಂದು ವಿಶ್ಲೇಷಣೆ "

ಡಾ. ನಿರ್ಮಲ್‌ರಾಜ್

ಯಾವುದೇ ದೇಶ ಅಥವಾ ಪ್ರದೇಶದ ಇತಿಹಾಸ, ಸಂಸ್ಕೃತಿ, ಸಾಹಿತ್ಯ, ಭಾಷೆ ಮುಂತಾದವುಗಳ ಅಧ್ಯಯನಕ್ಕೆ ಶಾಸನಗಳು ಮುಖ್ಯ ಆಕರಗಳು. ಶಾಸನಗಳು ಒಂದು ನಾಡಿನ ಹಾಗೂ ಜನ ಸಮುದಾಯದ ಆಸ್ತಿ. ಶಾಸನಗಳನ್ನು ಸಾಮಾನ್ಯವಾಗಿ ಶಿಲೆ ಹಾಗೂ ತಾಮ್ರದ ತಗಡುಗಳ ಮೇಲೆ ಕೆತ್ತಲಾಗಿದೆ. ಶಾಸನಗಳನ್ನು ಪ್ರಶಸ್ತಿ ಶಾಸನ ಹಾಗೂ ದಾನ ಶಾಸನಗಳೆಂದು ಎರಡು ಗುಂಪುಗಳಾಗಿಯೂ ಸಹ ವಿಂಗಡಿಸಿಬಹುದು. ಪ್ರಾಚೀನ ಭಾರತದಾದ್ಯಂತ ಆಳ್ವಿಕೆ ನಡೆಸಿದ ಅನೇಕ ರಾಜ ಸಂತತಿಗಳ ಇತಿಹಾಸದ ಪುನರ್ ರಚನೆಗೆ ಶಾಸನಗಳೇ ಅಧಿಕೃತ ದಾಖಲೆಗಳಾಗಿವೆ. ವಂಶಾನುಕ್ರಮಣಿಕೆ, ಜಯಾ ಪಜಯ, ರಾಜ್ಯದ ಗಡಿಗಳು, ಆಳ್ವಿಕೆಯ ಕಾಲ ಮುಂತಾದ ಸಂಗತಿಗಳನ್ನು ಶಾಸನ ಗಳಿಂದಲೇ ಪತ್ತೆ ಹಚ್ಚಬಹುದಾಗಿದೆ. ಶಾಸನಗಳು ಸ್ಥಳೀಯ ಆಡಳಿತ, ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳ ಚಿತ್ರಗಳನ್ನು ಸಹ ಪ್ರತಿಬಿಂಬಿಸುತ್ತವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ **" ಮೈಸೂರು ಜಿಲ್ಲೆಯಲ್ಲಿನ ಕೃಷ್ಣದೇವರಾಯನ ಶಾಸನಗಳು -ಒಂದು ವಿಶ್ಲೇಷಣೆ"** ಎಂಬ ಸಂಶೋಧನಾ ಲೇಖನವನ್ನು ಸಿದ್ಧಪಡಿಸಿದ್ದು, ವಿಜಯನಗರ ಸಾಮ್ರಾಜ್ಯದ ಸುಪ್ರಸಿದ್ಧ ಹಾಗೂ ಇಡೀ ಭಾರತದಾದ್ಯಂತ ಶ್ರೇಷ್ಠ ಅರಸನೆಂದೇ ಖ್ಯಾತನಾದ ಶ್ರೀ ಕೃಷ್ಣದೇವ ರಾಯನು ದಕ್ಷಿಣ ಕರ್ನಾಟಕ ವಿಶೇಷವಾಗಿ ಮೈಸೂರು ಪ್ರದೇಶದೊಂದಿಗೆ ಹೊಂದಿದ್ದ ರಾಜಕೀಯ ಹಾಗೂ ಸಾಂಸ್ಕೃತಿಕ ಸಂಬಂಧಗಳನ್ನು ಮೈಸೂರು ಜಿಲ್ಲೆಯ ಶಾಸನಗಳ ಅಧ್ಯಯನದ ಮೂಲಕವೇ ಸಾದರಪಡಿಸಲಾಗಿದೆ.

ಮೈಸೂರು ಜಿಲ್ಲೆಯ ಶಾಸನಗಳು 2400ಕ್ಕೂ ಅಧಿಕವಾಗಿದ್ದು ಈ ಶಾಸನಗಳನ್ನು ಮೂರು ಎಪಿಗ್ರಾಫಿಯಾ ಕರ್ನಾಟಕ ಸಂಪುಟಗಳಲ್ಲಿ, ಅಂದರೆ ಸಂಪುಟ ಮೂರು, ನಾಲ್ಕು ಮತ್ತು ಐದರಲ್ಲಿ ಕ್ರಮವಾಗಿ ಪ್ರಕಟಿಸಲಾಗಿದೆ. ಸಂಪುಟ ಮೂರರಲ್ಲಿ ಗುಂಡ್ಲುಪೇಟೆ, ನಂಜನಗೂಡು ಹಾಗೂ ಹೆಗ್ಗಡದೇವನಕೋಟೆ ಈ ಮೂರು ತಾಲ್ಲೂಕುಗಳ ಒಟ್ಟು 786 ಶಾಸನಗಳು ದೊರಕುತ್ತವೆ. ಈ 786 ಶಾಸನಗಳಲ್ಲಿ 73 ಶಾಸನಗಳು ವಿಜಯನಗರ ಸಾಮ್ರಾಜ್ಯಕ್ಕೆ ಸೇರಿದ್ದು, ಅವುಗಳಲ್ಲಿ 22 ಶಾಸನಗಳು ಶ್ರೀ ಕೃಷ್ಣದೇವರಾಯನ ಕಾಲಕ್ಕೆ ಸೇರಿದವುಗಳಾಗಿವೆ.[1] ಹುಣಸೂರು, ಪಿರಿಯಾಪಟ್ಟಣ, ಕೃಷ್ಣರಾಜನಗರ, ತಿರುಮ

ಕೂಡಲು ನರಸೀಪುರ ಮತ್ತು ಮೈಸೂರು ತಾಲ್ಲೂಕುಗಳ ಶಾಸನಗಳು ನಾಲ್ಕನೇಯ ಸಂಪುಟದಲ್ಲಿಯೂ, ಚಾಮರಾಜನಗರ, ಯಳಂದೂರ ಮತ್ತು ಕೊಳ್ಳೇಗಾಲ ತಾಲ್ಲೂಕುಗಳ ಶಾಸನಗಳು ಐದನೇಯ ಸಂಪುಟದಲ್ಲಿಯೂ ಪ್ರಕಟವಾಗಿವೆ. ಸಂಪುಟ ನಾಲ್ಕರಲ್ಲಿ ಒಟ್ಟು 932 ಶಾಸನಗಳಿದ್ದು, ಇವುಗಳಲ್ಲಿ 97 ಶಾಸನಗಳು ವಿಜಯನಗರದರಸರಿಗೆ ಸಂಬಂಧಿಸಿದ್ದು ಅವುಗಳಲ್ಲಿ 23 ಶಾಸನಗಳು ಕೃಷ್ಣದೇವರಾಯನಿಗೆ ಸೇರಿದ ಶಾಸನಗಳಾಗಿವೆ.[2] ಅಂತೆಯೇ ಸಂಪುಟ ಐದರಲ್ಲಿ ಒಟ್ಟು 667 ಶಾಸನಗಳು ಲಭ್ಯವಿದ್ದು, ಅವುಗಳಲ್ಲಿ 50 ಶಾಸನಗಳು ವಿಜಯನಗರದರಸರಿಗೆ ಸೇರಿದವುಗಳಾಗಿದ್ದು, ಸುಮಾರು 13ಶಾಸನಗಳು ಕೃಷ್ಣದೇವರಾಯನ ಕಾಲಕ್ಕೆ ಸಂಬಂಧಿಸಿದ ಶಾಸನಗಳಾಗಿವೆ.[3] ಸಂಪುಟ ಆರರಲ್ಲಿ ಒಟ್ಟು 499 ಶಾಸನಗಳಿದ್ದು, ಆ ಪೈಕಿ 53 ಶಾಸನಗಳು ವಿಜಯನಗರ ಸಾಮ್ರಾಜ್ಯಕ್ಕೆ ಸೇರಿದ್ದರೇ, ಏಳು ಶಾಸನಗಳು ಕೃಷ್ಣದೇವರಾಯನ ಕಾಲಕ್ಕೆ ಸೇರಿದವುಗಳಾಗಿವೆ.[4] ಹೀಗೆ ಲಭ್ಯವಿರುವ ಒಟ್ಟು 2400 ಶಾಸನಗಳ ಪೈಕಿ 220 ಶಾಸನಗಳು ವಿಜಯನಗರ ದರಸರಿಗೆ ಸಂಬಂಧಿಸಿದ್ದು, ಅವುಗಳಲ್ಲಿ 58 ಶಾಸನಗಳು ಶ್ರೀ ಕೃಷ್ಣದೇವರಾಯನಿಗೆ ಸೇರಿದ ಶಾಸನಗಳಾಗಿವೆ. ಈ ಮೇಲ್ಕಂಡ ಶಾಸನಗಳನ್ನು ಸರಿಯಾಗಿ ಹಾಗೂ ಕ್ರಮಬದ್ಧವಾಗಿ ವಿಶ್ಲೇಷಣೆಗೊಳಪಡಿಸಿದರೆ ಶ್ರೀ ಕೃಷ್ಣದೇವರಾಯನು ಮೈಸೂರು ಪ್ರಾಂತ್ಯದೊಂದಿಗೆ ಹೊಂದಿದ್ದ ರಾಜಕೀಯ ಹಾಗೂ ಸಾಂಸ್ಕೃತಿಕ ಸಂಬಂಧಗಳನ್ನು ಅರ್ಥಮಾಡಿಕೊಳ್ಳಬಹುದಾಗಿದೆ.

ಮುಂದೆ ಕೆಲವು ಶಾಸನಗಳನ್ನು ಉದಾಹರಣೆಗೆ ತೆಗೆದುಕೊಂಡು ಶ್ರೀ ಕೃಷ್ಣದೇವರಾಯನು ಮೈಸೂರು ಪ್ರದೇಶದೊಂದಿಗೆ ಹೊಂದಿದ್ದ ಸಂಬಂಧಗಳನ್ನು ಪರಿಶೀಲಿಸಲಾಗಿದೆ. ತನ್ನ ಆಳ್ವಿಕೆಯ ಪ್ರಾರಂಭದಲ್ಲಿಯೇ ಕೃಷ್ಣದೇವರಾಯನು ಮೈಸೂರು ಪ್ರದೇಶಕ್ಕೆ ಅನಿವಾರ್ಯವಾಗಿ ಭೇಟಿ ನೀಡಬೇಕಾಗಿ ಬಂದಿತು. ಈ ಭೇಟಿಯು ಯಾವುದೇ ತೀರ್ಥಕ್ಷೇತ್ರ ಸಂದರ್ಶನ ಇಲ್ಲವೇ ಧಾರ್ಮಿಕ ಕಾರ್ಯ ಅಥವಾ ಪ್ರಜಾಪ್ರಗತಿಯ ವೀಕ್ಷಣೆಯ ಉದ್ದೇಶವಾಗಿರದೆ, ಈ ಭಾಗದಲ್ಲಿ ತಲೆದೋರಿದ್ದ ಪ್ರಮುಖ ದಂಗೆಯೊಂದನ್ನು ಅಡಗಿಸುವ ಸಲುವಾಗಿ ಕೈಗೊಂಡ ಧೀರ್ಘ ಕಾಲದ ಸೈನಿಕ ಕಾರ್ಯಾಚರಣೆಯಾಗಿತ್ತು. ಉಮ್ಮತ್ತೂರಿನ ಪ್ರಭುಗಳು ಸಾಮ್ರಾಜ್ಯದ ವಿರುದ್ಧ ದಂಗೆಯೆದ್ದಿದ್ದರು. ಈ ದಂಗೆಯನ್ನು ಅಡಗಿಸಲು ಕೃಷ್ಣದೇವರಾಯನು ಮೈಸೂರು ಪ್ರದೇಶಕ್ಕೆ ಭೇಟಿ ಕೊಡಬೇಕಾಯಿತು. ಧೀರ್ಘಕಾಲ ಸಂಭವಿಸಿದ ಈ ಮಹತ್ಕಾರ್ಯದಲ್ಲಿ ಅವನು ವಿಜಯಿಯಾಗಿ, ದಂಗೆಯನ್ನು ಅಡಗಿಸುವುದರ ಜೊತೆಗೆ ಮೈಸೂರು ಪ್ರದೇಶದ ಆಡಳಿತವನ್ನು ವ್ಯವಸ್ಥೆಗೊಳಿಸಿದ ಘಟನೆಯು ಚಾರಿತ್ರಿಕವಾಗಿ ಬಹಳ ಪ್ರಾಮುಖ್ಯತೆ ಪಡೆದುಕೊಂಡಿರುವು ದನ್ನು ನಾವು ಗಮನಿಸಬಹುದು. 15ನೇ ಶತಮಾನದ ಕೊನೆಯ ದಶಕದಲ್ಲಿ ಅಧಿಕಾರಕ್ಕೆ ಬಂದ ಸಂಗಮ ರಾಜರ ದುರ್ಬಲತೆ ಮತ್ತು ಸಾಳುವ ರಾಜನ ಸಿಂಹಾಸನಾರೋಹಣ

ವಿಜಯನಗರ ಸಾಮ್ರಾಜ್ಯದ ಪ್ರಾಬಲ್ಯಕ್ಕೆ ತಾತ್ಕಾಲಿಕವಾಗಿ ಹಿನ್ನೆಡೆಯಾಗಿ ಪರಿಣಮಿಸಿತ್ತಲ್ಲದೆ, ಉಮ್ಮತ್ತೂರು ಪ್ರಭುಗಳು ದಕ್ಷಿಣ ಕರ್ನಾಟಕ ಭಾಗದಲ್ಲಿ ಪ್ರಬಲರಾಗಲು ಕಾರಣವಾಯಿತು. ದೇವಣ್ಣ ಒಡೆಯರ್, ಮಲ್ಲರಾಜ ಒಡೆಯರ್, ಇಮ್ಮಡಿ ನಂಜರಾಜ ಒಡೆಯರ್, ಮುಖ್ಯವಾಗಿ ಗಂಗರಾಜ ಮೊದಲಾದ ಉಮ್ಮತ್ತೂರು ಪ್ರಭುಗಳು ದೊರೆತ ಸಂದರ್ಭವನ್ನು ಸದುಪಯೋಗಪಡಿಸಿಕೊಂಡು ರಾಜಾಧಿಕಾರದ ಹಲವು ಬಿರುದು ಬಾವಲಿಗಳನ್ನು ಹೊಂದಿದ್ದರಲ್ಲದೆ, ಶಿವನಸಮುದ್ರ, ಶ್ರೀರಂಗಪಟ್ಟಣ ಮೊದಲಾದ ಫಲವತ್ತಾದ ಕಾವೇರಿ ಕಣಿವೆ ಪ್ರದೇಶಗಳ ಮೇಲೆ ತಮ್ಮ ಅಧಿಪತ್ಯವನ್ನು ಸ್ಥಾಪಿಸಿಕೊಂಡು, ವಿಜಯನಗರ ಸಾರ್ವಭೌಮಾಧಿಕಾರಕ್ಕೇ ಸವಾಲೆಸೆದರು. ಇಂತಹ ಸಂದಿಗ್ಧ ಸನ್ನಿವೇಶದಲ್ಲಿ ಕ್ರಿ.ಶ.1511-12ರಲ್ಲಿ ಕೃಷ್ಣದೇವರಾಯನು ಉಮ್ಮತ್ತೂರು ಪ್ರಾಂತ್ಯಕ್ಕೆ ಹೆಚ್ಚಿನ ಆದ್ಯತೆ ನೀಡಿ, ಕೈಗೊಂಡ ನಿರ್ಣಾಯಕ ದಂಡಯಾತ್ರೆಯಲ್ಲಿ ಉಮ್ಮತ್ತೂರಿನ ಪ್ರಭುವಾದ ಗಂಗರಾಜನು ಪರಾಭವ ಹೊಂದಿದನು. ಶತ್ರು ಪ್ರದೇಶವನ್ನು ವಶಪಡಿಸಿಕೊಂಡ ಕೃಷ್ಣದೇವರಾಯನು ಶಾಶ್ವತವಾಗಿ ಈ ಪ್ರದೇಶವನ್ನು ಸಾಮ್ರಾಜ್ಯದ ಅಧೀನಕ್ಕೊಳಪಡಿಸಿ ಮತ್ತುಸುಗಮ ಆಡಳಿತ ನಿರ್ವಹಣೆಗಾಗಿ ಅದನ್ನು ಒಂದು ಹೊಸ ಪ್ರಾಂತ್ಯವನ್ನಾಗಿ ಮಾಡಿ, ಅದಕ್ಕೆ ಶ್ರೀರಂಗಪಟ್ಟಣವನ್ನು ಕಾರ್ಯಸ್ಥಾನವನ್ನಾಗಿ ಆಯ್ಕೆ ಮಾಡಿಕೊಂಡನು ಮತ್ತು ಶ್ರೀರಂಗಪಟ್ಟಣ ಪ್ರಾಂತ್ಯಕ್ಕೆ ವೀರಪ್ಪ ಒಡೆಯರ್ ಎಂಬುವವನನ್ನು ಸಾಮಂತನನ್ನಾಗಿ ನೇಮಿಸಿದನು. ಕೃಷ್ಣದೇವರಾಯನಿಂದ ಪರಾಜಯಗೊಂಡ ಉಮ್ಮತ್ತೂರು ಪ್ರಭುವಾಗಿದ್ದ ಗಂಗರಾಜನ ಮಗನೇ ಇವನಾಗಿರಬೇಕೆಂದು ಎರಡು ಶಾಸನಗಳು ಅಧಿಕೃತಗೊಳಿಸುತ್ತವೆ.[5] ನಂ.ಗೂ.110ನೇ ತಾಮ್ರ ಶಾಸನವು ಕೃಷ್ಣದೇವರಾಯನು ಉದಯಗಿರಿಯನ್ನು ಜಯಿಸಿದ ನಂತರ ಆ ವಿಜಯೋತ್ಸವದ ಸ್ಮರಣಾರ್ಥವಾಗಿ ನಂಜನಗೂಡಿನ ರಾಘವೇಂದ್ರಸ್ವಾಮಿ ಮಠದ ಅರ್ಚಕರಿಗೆ ಕೊಟ್ಟ ದಾನ ಶಾಸನವಾಗಿದೆ. ಇದರ ಕಾಲ ಕ್ರಿ.ಶ. 1512[6]. ಕ್ರಿ.ಶ.1513 ಅಕ್ಟೋಬರ್ 4ರ ವೇಳೆಗೆ ಉಮ್ಮತ್ತೂರಿನ ಪ್ರಭುವನ್ನು ಸೋಲಿಸಿ, ಸಾಳುವ ಗೋವಿಂದರಾಜನನ್ನು ತೆರಕಣಾಂಬಿ ಸೀಮೆಯ ಪ್ರಾಂತ್ಯಾಧಿಕಾರಿಯಾಗಿ ನೇಮಿಸಿದ ವಿಷಯವು ಗುಂಡ್ಲುಪೇಟೆಯ 136ನೇ ಶಾಸನದಿಂದ ತಿಳಿದು ಬರುತ್ತದೆ.[7]

ಕ್ರಿ.ಶ.1513ರ ನಂ.ಗೂ.389 ಮತ್ತು ಕ್ರಿ.ಶ.1517ರ ಗು.ಪೇ.1ಮತ್ತು1521ರ ಗು.ಪೇ.150ಈ ಮೂರು ತಾಮ್ರ ಶಾಸನಗಳ ಕರ್ತೃ ಸಭಾಪತಿ. ವಿಜಯನಗರದರಸನಾದ ಕೃಷ್ಣದೇವರಾಯನ ಹಲವಾರು ಶಾಸನಗಳ ಕರ್ತೃವಾದ ಈತನು ಚಿರಪರಿಚಿತ ಕವಿಯಾಗಿದ್ದಾನೆ.[8] ಈತನು ರಾಯನ ಆಸ್ಥಾನ ಕವಿಯಾಗಿದ್ದು ಮುಂದೆ ಅಚ್ಯುತರಾಯನ ಕಾಲದಲ್ಲೂ ಅದೇ ಸ್ಥಾನದಲ್ಲಿ ಮುಂದುವರೆದಂತೆ ಕಂಡುಬರುತ್ತದೆ.

ಚಾನ 233ನೇ ಭಂಡಿಗೆರೆಯ ಶಾಸನವು ಕ್ರಿ.ಶ.1513ರ ಕಾಲದಾಗಿದ್ದು, ಇದರಲ್ಲಿ ಕೃಷ್ಣದೇವರಾಯನ ಮಹಾ ಪ್ರಧಾನನೊಬ್ಬ (ಹೆಸರು ಅಳಿಸಿಹೋಗಿದೆ) ಭಂಡಿಗೆರೆಯ ಶ್ರೀ ಅಣಿಲೇಶ್ವರ ದೇವರಿಗೆ ಅಂಗಗರಂಗಭೋಗದ ಪೂಜೆಗಾಗಿ ಹರದನಹಳ್ಳಿಗೆ ಪೂರ್ವಾಭಿಮುಖವಾಗಿರುವ ಮಗ್ಗೆಯದ ಸೀಮೆಯ ಗದ್ದೆ ಹೊಲವನ್ನು ದಾನಮಾಡಿದ ವಿಷಯ ಕಂಡುಬರುತ್ತದೆ.[9] ಕೊಗಾ11ನೇ ತಗರಪುರ ಶಾಸನದಲ್ಲಿ ಮಹಾಪ್ರಧಾನ ಸಾಳುವ ಗೋವಿಂದರಾಜಯ್ಯನು ಮಲ್ಲಿಕಾರ್ಜುನನ ಮೊಮ್ಮಗ, ಬಾಲನಾಥನ ಮಗ ಸೋಮಯದೇವವೊಡೆಯನಿಗೆ ತಗವೂರು ಗ್ರಾಮವನ್ನು ದಾನವಾಗಿ ನೀಡಿದ್ದನ್ನು ಉಲ್ಲೇಖಿಸಲಾಗಿದೆ.[10] ಕ್ರಿ.ಶ.1515ನೇ ಡಿಸೆಂಬರ್ 10ರ ಚಾನ 162ನೇ ಹೊಂಗನೂರು ಶಾಸನವು ಸ್ವಾರಸ್ಯಕರವಾದ ಆಡಳಿತ ವ್ಯವಹಾರವನ್ನು ಕುರಿತು ತಿಳಿಸುತ್ತದೆ. ಈ ಶಾಸನದ ಪ್ರಕಾರ ದೊಡ್ಡಣ್ಣಶೆಟ್ಟಿ ಎಂಬುವವನಿಗೆ ಸೇರಿದ 10 ಅಂಕಣದ ಗೃಹ ನಿವೇಶನವನ್ನು ಅರಮನೆ ವಶಕ್ಕೆ ತೆಗೆದುಕೊಂಡು ಅದಕ್ಕೆ ಪ್ರತಿಯಾಗಿ ಅವನಿಗೆ ಅದೇ ಅಳತೆಯ ಬೇರೆ ನಿವೇಶನವನ್ನು ನೀಡಲಾಯಿತು. ಮತ್ತು ಈ ಸಂದರ್ಭದಲ್ಲಿ ಆಸ್ತಿ ಪತ್ರ ಒಡಂಬಡಿಕೆಯಾಯಿತೆಂಬುದಾಗಿ ಗೊತ್ತಾಗುತ್ತದೆ.[11] ಕ್ರಿ.ಶ. 1522 ಕ್ಕೆ ಸೇರಿದ ಕೊಗಾ 82ನೇ ಹನೂರು ಶಾಸನದಿಂದ ರಾಜರಾಜ ಅಥವಾ ರಾಚಯ್ಯನ ಮಗನಾದ ಸಾಳುವ ಗೋವಿಂದರಾಜನಿಗೆ ಉಮ್ಮತ್ತೂರ ನಾಯಕತನವನ್ನು ವಹಿಸಲಾಗಿತ್ತೆಂದು ತಿಳಿದು ಬರುತ್ತದೆ. ಪ್ರಸ್ತುತ ಶಾಸನದ ಪ್ರಕಾರ ಗೋವಿಂದರಾಜನು ತನ್ನ ನಾಯಕತನಕ್ಕೆ ಸೇರಿದ ಹೊಸನಾಡಸ್ಥಳದ ಕಲಿಯುಗವಾಡಿ ಗ್ರಾಮವನ್ನು ಕಾವೇರಿ ಕಪಿಲಾ ನದಿಗಳಿಗೆ ತಿರುಮ ಕೂಡಲು ನರಸೀಪುರದಲ್ಲಿ ಸೋಪಾನ (ಅಲರೆ)ಕಟ್ಟುವ ತಿರುಪಣಿ ಕೆಲಸಕ್ಕೆ ದಾನ ನೀಡಿದ್ದು ಕಂಡುಬರುತ್ತದೆ.[12]

ಕ್ರಿ.ಶ.1523ರ ಚಾನ 224ರ ಹರಳುಕೋಟೆ ಶಾಸನದಲ್ಲಿ ಗೋವಿಂದರಾಜನ ಕೈಕೆಳಗೆ ಮಾಗಣಿಕಾರನಾಗಿದ್ದ ತುರುಮುಡಿಪಾಕದ ತಿರುವೆಂಕಟ ಮೊದಲಿಯಾರನ ಮಗ ಜಡೆಯಾರು ಮೊದಲಿಯಾರು ಹಟ್ಟಿಲಕೋಟೆಯಲ್ಲಿ ವೀರಭದ್ರದೇವರ ಪ್ರತಿಷ್ಠೆ ಮಾಡಿಸಿದನ್ನು ನಿರೂಪಿಸಲಾಗಿದೆ. ದಾನ ನೀಡಿದ ಭೂಮಿ ಕಾಣಿಕೆಗಳನ್ನು ಆ ದೇವಸ್ಥಾನಕ್ಕೆ ಕರ್ತನಾದ ಅಲ್ಲಪ್ಪನಿಗೆ ಸಲ್ಲಿಸಲಾಯಿತು. ಮುಂದೆ ಮತ್ಯಾರಾದರೂ ದಾನ ನೀಡಿದರೆ ಅದು ಸಹಾ ಅಲ್ಲಪ್ಪನಿಗೇ ಸಲ್ಲಬೇಕೆಂದೂ, ದೇವರ ಪೂಜೆಗೆ ತನಗಿಷ್ಟ ಬಂದವರನ್ನು ಅರ್ಚಕರನಾಗಿ ನೇಮಿಸಿಕೊಳ್ಳುವ ಪೂರ್ಣಾಧಿಕಾರ ಅವನಿಗುಂಟೆಂದೂ, ಇವುಗಳ ಬಗ್ಗೆ ಪಾರುಪತ್ಯಗಾರನೂ ಪ್ರಶ್ನಿಸುವಂತಿಲ್ಲವೆಂದೂ ಹೇಳಿದೆ. ಮತ್ತು ದೇವಾಲಯದಲ್ಲಿ ಪೂಜೆ ಪುನಸ್ಕಾರಗಳನ್ನು ಸರಿಯಾಗಿ ವೇಳೆ ವೇಳೆಗೆ ತಪ್ಪದೆ ನಡೆಸಿಕೊಂಡು ಬರಬೇಕೆಂಬುದು ಅತಿಮುಖ್ಯವಾದ ನಿಬಂಧನೆಯಾಗಿತ್ತು.[13.]

ಚಾನ 100ನೇಯ ಶಾಸನವು ಉಮ್ಮತೂರಿನಲ್ಲಿದೆ. ಈ ಶಾಸನದ ಕಾಲ ಕ್ರಿ.ಶ.1527. ಅರಸ ಕೃಷ್ಣದೇವರಾಯನಿಗೆ ಧರ್ಮಕೀರ್ತಿಯಾಗಬೇಕೆಂದು ಅವಸರದ

ದೇಮರಸಯ್ಯನ ನಿರೂಪದ ಮೇಲೆ ಲಕ್ಕರಾಜ ತಿಮ್ಮರಾಜನು ದೇವಾಲಯವೊಂದರ (ದೇವಾಲಯದ ಹೆಸರು ಕೈ ಬಿಟ್ಟುಹೋಗಿದೆ) ಗರ್ಭಗೃಹ, ಸುಖನಾಸಿ ಮತ್ತಿತರ ಭಾಗ ಗಳನ್ನು ಜೀರ್ಣೋದ್ಧಾರಗೊಳಿಸಿದನ್ನು ಇದು ನಿರೂಪಿಸುತ್ತದೆ.[14]

ಕ್ರಿ.ಶ.1527ರ ಚಾನ 387ನೇ ಹೆಗ್ಗೊಠಾರದ ಶಾಸನದಲ್ಲಿ ಗೋವಿಂದರಾಜನಿಗೆ ಉಮ್ಮತ್ತೂರು ಸೀಮೆಯ ನಾಯಕತನವನ್ನು ಕೃಷ್ಣರಾಯನು ದಯಪಾಲಿಸಿದ್ದು ವ್ಯಕ್ತವಾಗುತ್ತದೆ. ಅರಸನ ನಿರೂಪದ ಮೇರೆಗೆ ಉಮ್ಮತ್ತೂರು ಸೀಮೆಯ ತಗಡೂರು ಸ್ಥಳಕ್ಕೆ ಸೇರಿದ ಹೆಗ್ಗೊಠಾರ ಹಾಗೂ ಅದರ ಉಪ ಗ್ರಾಮಪುರಗಳನ್ನು ಸರ್ವಸ್ವಾಮ್ಯ ಸಹಿತವಾಗಿ ಬಮ್ಮಾಪುರದ ಬಾಲಕೃಷ್ಣದೇವರ ಅಂಗರಂಗಭೋಗಾದಿ ಸೇವೆಗಳಿಗಾಗಿ ತುಂಗಭದ್ರಾ ನದಿತೀರದ ಪಂಪಾಕ್ಷೇತ್ರದ ವಿರೂಪಾಕ್ಷೇಶ್ವರನ ಸನ್ನಿಧಿಯಲ್ಲಿ ದಾನ ನೀಡಿಲಾಯಿತೆಂಬುದಾಗಿ ಉಲ್ಲೇಖವಿದೆ.[15]

ಕೃಷ್ಣದೇವರಾಯನ ಕಾರ್ಯಕರ್ತನಾದ ಕೃಷ್ಣರಾಯನಾಯಕನು ಕೋಟೆಯ ಸೀಮೆಯ, ತುಂಗಸ್ಥಳಕ್ಕೆ ಸಲ್ಲು ಸೆಟ್ಟಿಹಳ್ಳಿ ಗ್ರಾಮವನ್ನು ಶೈವ ಮಹಾದೇವದೇವರಿಗೆ ದತ್ತಿ ಬಿಟ್ಟ ವಿಷಯವನ್ನು ಪಿರಿಯಾಪಟ್ಟಣದ 123ನೇ ಸೆಟ್ಟಿಹಳ್ಳಿ ಶಾಸನವು ತಿಳಿಸುತ್ತದೆ. ಬಾಣಸಿಗ ವಿನಿಯೋಗದ ಬಗ್ಗೆಯೂ ಈ ಶಾಸನವು ಪ್ರಸ್ತಾಪಿಸುತ್ತದೆ. ಅರ್ಚಕರು, ಬಾಣಸಿಗರು ಮೊದಲಾದವರು ದೇವಾಲಯದ ಸಿಬ್ಬಂದಿ ವರ್ಗದವರಿಗೆ ದೇವರ ನೈವೇದ್ಯ ವನ್ನು ಹಂಚುವ ಪದ್ಧತಿ ಇಂದಿಗೂ ದಕ್ಷಿಣ ಭಾರತದ ದೇವಾಲಯ ಗಳಲ್ಲಿರುವುದನ್ನು ಈ ಶಾಸನವು ಪ್ರತಿಬಿಂಬಿಸುತ್ತದೆ.[16]

16ನೇ ಶತಮಾನಕ್ಕೆ ಸೇರಿದ ಕೊಗಾ 83ನೇ ಹನೂರು ಶಾಸನವು ಕುತೂಹಲಕರ ವಾಗಿದೆ. ಈ ಶಾಸನದ ಪ್ರಕಾರ ಆ ಊರಿನ ಕೆಲವು ಗೌಡುಗಳು ಮತ್ತು ಊರಮುಖಂಡರು ವಿಜಯನಗರಕ್ಕೆಹೋಗಿ ಅಲ್ಲಿ ಅರಸನಾದ ಕೃಷ್ಣದೇವರಾಯ, ಸಾಳುವ ತಿಮ್ಮರಸ, ಗೋವಿಂದರಾಜಯ್ಯ ಮುಂತಾದವರನ್ನು ಭೇಟಿ ಮಾಡಿದುದನ್ನು ಉಲ್ಲೇಖಿಸುತ್ತದೆ. ದುರಾದೃಷ್ಟವಶಾತ್ ಈ ಶಾಸನವು ಭಿನ್ನವಾಗಿದ್ದು, ಅವರ ಭೇಟಿಯ ಉದ್ದೇಶವಾಗಲೀ, ಅದರ ಪರಿಣಾಮವಾಗಲೀ ತಿಳಿದುಬರುವುದಿಲ್ಲ.[17]

ಕ್ರಿ.ಶ.1514ರ ತಿನ 245ನೇ ತಡಿಮಾಲಿಂಗಿಯ ಶಾಸನ ಹಾಗೂ ಕ್ರಿ.ಶ.1516ರ ಮೈ 194ನೇ ಗುರೂರು ಶಾಸನಗಳಲ್ಲಿ ಕೃಷ್ಣದೇವರಾಯನಿಗೆ ಸಂಬಂಧಿಸಿದ ಅನೇಕ ಬಿರುದುಬಾವಲಿಗಳ ಉಲ್ಲೇಖವಿದೆ. ಮತ್ತು ಶ್ರೀರಂಗಪಟ್ಟಣದ ಚಿಕ್ಕೊಡೆಯನ ಮಗ ವೀರಪ್ಪೊಡೆಯನು ಕೃಷ್ಣದೇವರಾಯನು ಅಪ್ಪಣೆಯಂತೆ ಗುರೂರಿನ ಗದ್ದೆ ಜಮೀನು ಗಳನ್ನು ಶಿವ ದೇವಾಲಯವೊಂದಕ್ಕೆ ದತ್ತಿಬಿಟ್ಟಿದನ್ನು ತಿಳಿಸುತ್ತದೆ.[18] ಅಂತೆಯೇ ಕೃಷ್ಣ ದೇವರಾಯನ ಸುಮಾರು ಆರು ಶಾಸನಗಳಲ್ಲಿ ಸಾಳುವ ಗೋವಿಂದರಾಜನು ಕಾಣಿಸಿ

ಕೊಂಡಿದ್ದಾನೆ. ಈ ಶಾಸನಗಳ ಪ್ರಕಾರ ಗೋವಿಂದರಾಜನು ಕೃಷ್ಣದೇವರಾಯನ ಬಾಗಿಲ ಸರ್ವಪ್ರಧಾನನೆಂದೂ,[19] ಮತ್ತು ಶಿರಪ್ರಧಾನನೆಂದೂ[20]ವರ್ಣಿತನಾಗಿದ್ದಾನೆ.

ತಿನ 105 ಮತ್ತು ತಿನ 106 ಈ ಎರಡು ಸೋಸಲೆಯ ಶಾಸನಗಳು ಕ್ರಿ.ಶ.1521ಕ್ಕೆ ಸೇರಿದ ತಾಮ್ರ ಶಾಸನಗಳಾಗಿದ್ದು, ಕೃಷ್ಣದೇವರಾಯನು ಸೋಸಲೆಯ ವ್ಯಾಸರಾಯ ಮಠದ ಸುಬ್ರಹ್ಮಣ್ಯತೀರ್ಥರ ಶಿಷ್ಯರಾದ ವ್ಯಾಸತೀರ್ಥರಿಗೆ ನೀಡಿದ ಗ್ರಾಮದತ್ತಿಗಳನ್ನು ತಿಳಿಸುತ್ತವೆ. ತಿನ 105ನೇ ಶಾಸನದಲ್ಲಿ ಕೃಷ್ಣರಾಯಪುರವೆಂಬ ಪ್ರತಿನಾಮಧೇಯವನ್ನು ಪಡೆದ ಜಕ್ಕರಾಯನ ಹಳ್ಳಿಯನ್ನೂ, [21] ತಿನ 106ನೇ ಶಾಸನದಲ್ಲಿ ಕನಕಗಿರಿಯಲ್ಲಿನ ಕನ್ನೇರುಮಡುಗು ಗ್ರಾಮವನ್ನೂ ದತ್ತಿಯಾಗಿ ಬಿಟ್ಟಂತೆ ತಿಳಿಸಿದೆ.[22] ಕ್ರಿ.ಶ.1519ರ ಮಾದಾಪುರದ ತಿನ 128ನೇ ಶಾಸನದ ಪ್ರಕಾರ ಗೋವಿಂದರಾಜನು ಉಮ್ಮತ್ತೂರು ಸೀಮೆಯ ಮೂಗೂರು ಸ್ಥಳಕ್ಕೆ ಮಾದವಪುರ ಗ್ರಾಮವನ್ನು ಉಮ್ಮತ್ತೂರಿನ ದೇವರಾಯ ಅರಸನ ಮಗ ನಂಜಯ್ಯ ಅರಸನಿಗೆ ಅಗ್ರಹಾರವಾಗಿ ಬಿಟ್ಟಂತೆಯೂ[23], ಕ್ರಿ.ಶ.1527ರ ತಿನ 258ನೇ ತೊಟ್ಟವಾಡಿ ಶಾಸನದ ಪ್ರಕಾರ ಉಮ್ಮತ್ತೂರಿನ ನಂಜಪ್ಪೊಡೆಯನ ಅಪ್ಪಣೆಯ ಮೇರೆಗೆ ನರಸಪ್ಪಯ್ಯನು ಚಾಮರಸನ ಮಗ ಹೊನ್ನಕಲಶದೇವನಿಗೆ ತೊಟ್ಟವಾಡಿ ಗ್ರಾಮವನ್ನು ಅಗ್ರಹಾರವಾಗಿ ಕೊಟ್ಟನೆಂದಿದೆ.[24]ತಿನ 258ನೇ ಶಾಸನದಲ್ಲಿ ಕಂಡುಬರುವ ನಂಜಯ್ಯ ಅರಸನೇ ಈ ಶಾಸನದ ನಂಜಪ್ಪೊಡೆಯನಾಗಿರಬಹುದೇ? ಎಂಬ ಸಂದೇಹವೂ ಈ ಸಂದರ್ಭದಲ್ಲಿ ಉಂಟಾಗುತ್ತದೆ. ಕ್ರಿ.ಶ.1528ರ ಪಾಂಪು 134ನೇ ಮೇಲುಕೋಟೆ ಶಾಸನವು ಬಹಳ ಮುಖ್ಯವಾಗಿದೆ. ಈ ಶಾಸನದ ಪ್ರಕಾರ ಕೃಷ್ಣ ದೇವರಾಯನು ತನಗೆ ನಾಯಕತನ ದಯಪಾಲಿಸಿದುದಕ್ಕಾಗಿ ದಂಡು ಅಹೋಬಳರ ಮಗನಾದ ಕೃಷ್ಣನಾಯಕನ ಶ್ರೀರಂಗಪಟ್ಟಣದ ದೇವಾಲಯಗಳಿಗೆ ಸಿಂಧಘಟ್ಟ ಸೀಮೆಯೊಳಗಿನ ಎರಡು ಗ್ರಾಮಗಳನ್ನು ದಾನ ಮಾಡಿದ ವಿಷಯವಲ್ಲದೆ, ಮೇಲುಕೋಟೆ ದೇವಸ್ಥಾನದ ಭೂಮಿಗಳನ್ನು ಉಳುಮೆಮಾಡುತ್ತಿದ್ದ ಒಕ್ಕಲಿಗರನ್ನೇ ತೊಂಡನೂರಿನ ದೇವಸ್ಥಾನಕ್ಕೆ ಸೇರಿದ ಭೂಮಿಗಳನ್ನು ಉಳುಮೆ ಮಾಡಲು ಕರೆದೊಯ್ಯಲಾಗುತ್ತಿತ್ತೆಂಬ ಕುತೂಹಲಕರ ಅಂಶ ತಿಳಿದುಬರುತ್ತದೆ.[25] ಇದರಿಂದೆ ಪ್ರಮುಖ ಧಾರ್ಮಿಕ ಕ್ಷೇತ್ರ ಗಳಾಗಿದ್ದ ಮೇಲುಕೋಟೆ ಹಾಗೂ ತೊಂಡನೂರು ದೇವಲಾಯಗಲು ಬ್ರಹ್ಮಾದಾಯದ ಮೂಲಕ ಭೂಒಡೆತನವನ್ನು ಹೊಂದಿದ್ದು, ಅವುಗಳನ್ನು ಉಳುಮೆಮಾಡಲು ಸ್ಥಳೀಯ ಒಕ್ಕಲಿಗರನ್ನು ಅಂದರೆ ರೈತಾಪಿ ಗೇಣಿದಾರರನ್ನು ಬಳಸಿ ಕೊಳ್ಳುತ್ತಿದ್ದವೆಂಬ ವಿಚಾರ ಗೊತ್ತಾಗುತ್ತದೆ.

ಹೀಗೆ ಮೈಸೂರು ಜಿಲ್ಲೆಯಲ್ಲಿನ ಕೃಷ್ಣದೇವರಾಯನ ಶಾಸನಗಳನ್ನು ವಿಶ್ಲೇಷಣೆ ಗೊಳಪಡಿಸಿದಾಗ ಹಲವು ಪ್ರಮುಖ ವಿಚಾರಗಳು ವ್ಯಕ್ತವಾಗುತ್ತವೆ. ಈ ಸಂದರ್ಭದಲ್ಲಿ ನಾವು ಗಮನಿಸಬೇಕಾದ ಮುಖ್ಯ ವಿಷಯವೇನೆಂದರೆ ಶ್ರೀ ಕೃಷ್ಣದೇವರಾಯ ಹಾಗೂ

ಮೈಸೂರು ಪ್ರದೇಶಗಳ ಸಂಬಂಧದ ಹಿನ್ನೆಲೆಯಲ್ಲಿ ಉಮ್ಮತ್ತೂರಿನ ಆಕ್ರಮಣ ಮತ್ತು ಶ್ರೀರಂಗಪಟ್ಟಣದಲ್ಲಿ ಆಡಳಿತ ಕೇಂದ್ರ ಸ್ಥಾಪನೆಯಂತಹ ಮಹಾತ್ಕಾರ್ಯವನ್ನು ಪರಿಶೀಲಿಸಿದಾಗ ಹಲವು ದ್ವಂದ್ವ ಹಾಗೂ ಗೊಂದಲಗಳು ಕಂಡುಬರುತ್ತವೆ. ಪ್ರಧಾನವಾಗಿ ಕೆಲವು ಶಾಸನಗಳಲ್ಲಿ ಕೃಷ್ಣದೇವರಾಯನು ಉಮ್ಮತ್ತೂರಿನ ಗಂಗರಾಜನನ್ನು ಸೋಲಿಸಿದ ಬಳಿಕ ಈ ಪ್ರದೇಶವನ್ನು ಸಾಳುವ ಗೋವಿಂದರಾಜನಿಗೆ ವಹಿಸಿಕೊಟ್ಟಿರುವುದನ್ನು ನಾವು ಕಾಣಬಹುದು. ಅಂತೆಯೇ ಕ್ರಿ.ಶ. 1512ರ ನಂತರದ ಮೈಸೂರು ಜಿಲ್ಲೆಯಲ್ಲಿನ ವಿಜಯ ನಗರಕ್ಕೆ ಸಂಬಂಧಿಸಿದ ಹೆಚ್ಚಿನ ಶಾಸನಗಳಲ್ಲಿ ಉಮ್ಮತ್ತೂರು ಹಾಗೂ ಸುತ್ತಮುತ್ತಲ ಪ್ರದೇಶಗಳ ಆಡಳಿತ ಹಾಗೂ ನಾಯಕತ್ವಕ್ಕೆ ಸಂಬಂಧಿಸಿದಂತೆ ಸಾಳುವ ಗೋವಿಂದ ರಾಜನಿಗೆ ಸಂಬಂಧಿಸಿದ ವಿಷಯಗಳು ಹೆಚ್ಚಾಗಿ ಕಂಡುಬರುತ್ತವೆ. ಆದುದರಿಂದ ಶಾಸನಗಳಾಧಾರದ ಹಿನ್ನೆಲೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಉಮ್ಮತ್ತೂರು ಗಂಗರಾಜನ ಪರಾಜಯದ ನಂತರ ಈ ಪ್ರದೇಶದ ಪ್ರಭುತ್ವವು ಅವನ ಮಗನಾದ ವೀರಪ್ಪ ಒಡೆಯನಿಗೆ ಲಭ್ಯವಾಯಿತ್ತೆಂಬುದಕ್ಕೆ ಹೆಚ್ಚಿನ ಪುಷ್ಟಿ ಸಿಗುವುದಿಲ್ಲ. ಜೊತೆಗೆ ಸಮಕಾಲೀನ ಸಾಹಿತ್ಯಾಧಾರಗಳಾದ ರಾಯವಾಚಕಮು, ಕೃಷ್ಣದೇವರಾಯ ವಿಜಯಮು, ಕೊಂಗುದೇಶ ರಾಸಕ್ಕಳಿನ್ ಚರಿತಮ್, ಪಾರಿಜಾತಾಪಹರಣಮು ಮೊದಲಾದ ಕೃತಿಗಳಲ್ಲಿ ಕಂಡುಬರುವ ಅಭಿಪ್ರಾಯಗಳಿಗೂ, ಶಾಸನಾಧಾರಗಳಲ್ಲಿ ದೊರಕುವ ಉಲ್ಲೇಖಗಳಿಗೂ ಪರಸ್ಪರ ವ್ಯತ್ಯಾಸಗಳಿರುವುದನ್ನು ಮತ್ತಷ್ಟು ಸಂಶೋಧನೆಗೆ ಒಳಪಡಿಸಿ ವಾಸ್ತವಿಕ ಅಂಶ ಗಳನ್ನು ಎತ್ತಿ ಹಿಡಿಯಬೇಕಾಗಿದೆ. ಅದರಂತೆ ವಿಜಯನಗರ ಹಾಗೂ ಮೈಸೂರು ಪ್ರದೇಶ ಗಳ ಸಂಬಂಧಗಳಿಗೆ ಅನ್ವಯಿಸುವಂತೆ ವಿದೇಶಿಬರಹಗಾರರಾದ ರಾಬರ್ಟ್ ಸೀವೆಲ್, ಫಾದರ್ ಲೂಯಿಸ್, ಪೆಯಸ್, ನ್ಯೂನೀಸ್ ಮುಂತಾದವರ ಹೇಳಿಕೆಗಳಲ್ಲೂ ಪ್ರಮಾಣೀ ಭೂತವಾದ ಹಾಗೂ ತುಲನಾತ್ಮಕವಾದ ಆಧಾರಗಳಿರುವುದಿಲ್ಲ. ಆದುದರಿಂದ ಮೈಸೂರು ಜಿಲ್ಲೆಯ ಶಾಸನಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದಾಗ ಕಂಡು ಬರುವ ಪ್ರಮುಖ ಅಂಶವೇನೆಂದರೆ ಉಮ್ಮತ್ತೂರಿನ ಗಂಗರಾಜನನ್ನು ಕೃಷ್ಣದೇವ ರಾಯನು ಅಡಗಿಸಿದ ಮೇಲೆ ಉಮ್ಮತ್ತೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳ ಅಧಿಕಾರವನ್ನು ಸಾಳುವ ಗೋವಿಂದರಾಜನಿಗೆ ವಹಿಸಿಕೊಟ್ಟು, ಇಲ್ಲಿನ ಆಡಳಿತ ವ್ಯವಸ್ಥೆಯನ್ನು ಕ್ರಮಬದ್ಧ ಗೊಳಿಸಿದನು. ಆದರೆ ಕೃಷ್ಣದೇವರಾಯನ ನಂತರ ಅಧಿಕಾರಕ್ಕೆ ಬಂದ ಅಚ್ಯುತರಾಯನ ಕಾಲದಲ್ಲಿ ಉಮ್ಮತ್ತೂರು ಪ್ರಭುಗಳು ಮತ್ತೆ ಅಧಿಕಾರವನ್ನು ಪಡೆದು ಆಡಳಿತದಲ್ಲಿ ಮುಂದುವರಿದಿರುವುದನ್ನು ಸಹ ಶಾಸನಗಳಲ್ಲಿ ನಾವು ಕಾಣ ಬಹುದು.

ಒಟ್ಟಾರೆ ಶ್ರೀ ಕೃಷ್ಣದೇವರಾಯನು ಅಧಿಕಾರಕ್ಕೆ ಬಂದ ಪ್ರಾರಂಭದಲ್ಲಿಯೇ ದಕ್ಷಿಣ ಕರ್ನಾಟಕದ ಕಾವೇರಿ ಕಣಿವೆ ಪ್ರದೇಶಗಳಲ್ಲಿ ಎದುರಾದ ಸಾಮಂತ ಪ್ರಭುಗಳ ಪ್ರಮುಖ ದಂಗೆಗಳನ್ನಡಗಿಸಿ, ಮೈಸೂರು, ಉಮ್ಮತ್ತೂರು, ಶ್ರೀರಂಗಪಟ್ಟಣ ಮುಂತಾದ ಆಯ

ಕಟ್ಟಿನ ಹಾಗೂ ಫಲವತ್ತಾದ ಪ್ರದೇಶಗಳ ಮೇಲೆ ಪುನಃ ವಿಜಯನಗರದ ಸಾರ್ವಭೌಮಾಧಿಕಾರವನ್ನು ಸ್ಥಾಪಿಸಿ, ಶ್ರೀರಂಗಪಟ್ಟಣವನ್ನು ಈ ಭಾಗದ ಆಡಳಿತ ಕೇಂದ್ರವನ್ನಾಗಿ ಸ್ಥಾಪಿಸಿ ಸುಭದ್ರ ಆಡಳಿತವನ್ನೇರ್ಪಡಿಸಿದನು.

ಈ ಸಂದರ್ಭದಲ್ಲಿ ಅವಿಧೇಯತೆ ಹಾಗೂ ಉದ್ಧಟನತದಿಂದ ವರ್ತಿಸಿದ ಉಮ್ಮತ್ತೂರು ಪ್ರಭುಗಳನ್ನು ಅಧಿಕಾರದಿಂದ ಹೊರಗಿಟ್ಟು ತನ್ನ ನಂಬಿಗಸ್ತನಾದ ಸಾಳುವ ಗೋವಿಂದರಾಜನನ್ನು ಮೈಸೂರು ಪ್ರದೇಶದ ಆಡಳಿತನಿರ್ವಹಣೆಗಾಗಿ ಅಧಿಕಾರಕ್ಕೆ ತಂದನು. ಈ ಸಂದರ್ಭದಲ್ಲಿಯೇ ಮೈಸೂರು ಪ್ರದೇಶದಲ್ಲಿ ಅಸ್ತಿತ್ವದಲ್ಲಿದ್ದ ಸೋಸಲೆಯ ಶ್ರೀ ವ್ಯಾಸತೀರ್ಥಮಠ, ನಂಜನಗೂಡಿನ ಶ್ರೀ ರಾಘವೇಂದ್ರಮಠ ಮುಂತಾದ ಮಠಮಾನ್ಯಗಳು, ದೇವಾಲಯಗಳು, ತೀರ್ಥಕ್ಷೇತ್ರ ಮೊದಲಾದವುಗಳಿಗೆ ಉದಾರವಾಗಿ ದಾನಪತ್ತಿಗಳನ್ನು ನೀಡಿ ತನ್ನ ಸ್ಥಾನಮಾನವನ್ನು ವೃದ್ಧಿಸಿಕೊಂಡನಲ್ಲದೆ, ತನ್ನ ಅಧಿಕಾರವನ್ನು ಮತ್ತಷ್ಟು ಧೃಡಪಡಿಸಿಕೊಂಡನು. ತನ್ಮೂಲಕ ದಕ್ಷಿಣ ಕರ್ನಾಟಕದಲ್ಲಿ ಕಂಡುಬರುವ ಪ್ರಮುಖ ಆಯಕಟ್ಟಿನ ಹಾಗೂ ಫಲವತ್ತಾದ ಕಾವೇರಿ ಕಣಿವೆ ಪ್ರದೇಶಗಳನ್ನು ಸಾಮ್ರಾಜ್ಯದ ವ್ಯಾಪ್ತಿಗೆ ಒಳಪಡಿಸಿಕೊಳ್ಳುವುದರ ಮೂಲಕ ಮೈಸೂರು ಪ್ರದೇಶದೊಡನೆ ಉತ್ತಮ ರಾಜಕೀಯ ಹಾಗೂ ಸಾಂಸ್ಕೃತಿಕ ಸಂಬಂಧಗಳನ್ನು ಹೊಂದಿದ್ದನೆಂಬುದಕ್ಕೆ ಮೈಸೂರು ಜಿಲ್ಲೆಯಲ್ಲಿ ಲಭ್ಯವಾಗಿರುವ ಅನೇಕ ಶಾಸನಗಳು ಚಾರಿತ್ರಿಕ ದಾಖಲೆಗಳಾಗಿವೆ.

ಅಡಿ ಟಿಪ್ಪಣಿಗಳು

1. ಎಫಿಗ್ರಾಫಿಯ ಕರ್ನಾಟಕ, ಸಂಪುಟ-3
2. ಎಫಿಗ್ರಾಪಿಯ ಕರ್ನಾಟಕ, ಸಂಪುಟ-4
3. ಎಫಿಗ್ರಾಪಿಯ ಕರ್ನಾಟಕ, ಸಂಪುಟ-5
4. ಎಫಿಗ್ರಾಪಿಯ ಕರ್ನಾಟಕ, ಸಂಪುಟ-6
5. ಎಫಿಗ್ರಾಪಿಯ ಕರ್ನಾಟಕ, ಸಂಪುಟ-5, ಮೈ-೧೧೬, ಎಕ-6,ಶ್ರೀಪ31
6. ಎಫಿಗ್ರಾಫಿಯ ಕರ್ನಾಟಕ, ಸಂಪುಟ-3, ನಂ.ಗೂ.-110
7. ಎಫಿಗ್ರಾಫಿಯ ಕರ್ನಾಟಕ, ಸಂಪುಟ-3,ಗು.ಪೇ-136
8. ಎಫಿಗ್ರಾಫಿಯ ಕರ್ನಾಟಕ, ಸಂಪುಟ-3, ನಂ.ಗೂ-389,ಗು.ಪೇ.-1,ಗು.ಪೇ-150
9. ಎಫಿಗ್ರಾಫಿಯ ಕರ್ನಾಟಕ, ಸಂಪುಟ-4,ಚಾನ-223
10. ಎಫಿಗ್ರಾಫಿಯ ಕರ್ನಾಟಕ, ಸಂಪುಟ-4,ಕೊಗಾ-11
11. ಎಫಿಗ್ರಾಫಿಯ ಕರ್ನಾಟಕ, ಸಂಪುಟ-4,ಚಾನ-162
12. ಎಫಿಗ್ರಾಫಿಯ ಕರ್ನಾಟಕ, ಸಂಪುಟ-4,ಕೊಗಾ-82

13. ಎಫಿಗ್ರಾಫಿಯ ಕರ್ನಾಟಕ, ಸಂಪುಟ-4,ಚಾನ-224

14. ಎಫಿಗ್ರಾಫಿಯ ಕರ್ನಾಟಕ, ಸಂಪುಟ-4,ಚಾನ-100

15. ಎಫಿಗ್ರಾಫಿಯ ಕರ್ನಾಟಕ, ಸಂಪುಟ-4,ಚಾನ-387

16. ಎಫಿಗ್ರಾಫಿಯ ಕರ್ನಾಟಕ, ಸಂಪುಟ-5,ಪಿ.ಪ-123

17. ಎಫಿಗ್ರಾಫಿಯ ಕರ್ನಾಟಕ, ಸಂಪುಟ-4, ಕೊಗಾ-83

18. ಎಫಿಗ್ರಾಫಿಯ ಕರ್ನಾಟಕ, ಸಂಪುಟ-5, ತಿ.ನ -132

19. ಎಫಿಗ್ರಾಫಿಯ ಕರ್ನಾಟಕ, ಸಂಪುಟ-5, ತಿ.ನ-245

20. ಎಫಿಗ್ರಾಫಿಯ ಕರ್ನಾಟಕ, ಸಂಪುಟ-5, ತಿ.ನ-225

21. ಎಫಿಗ್ರಾಫಿಯ ಕರ್ನಾಟಕ, ಸಂಪುಟ-5, ತಿ.ನ-105

22. ಎಫಿಗ್ರಾಫಿಯ ಕರ್ನಾಟಕ, ಸಂಪುಟ-5,ತಿ.ನ-106

23. ಎಫಿಗ್ರಾಫಿಯ ಕರ್ನಾಟಕ, ಸಂಪುಟ-5,ತಿ.ನ-128

24. ಎಫಿಗ್ರಾಫಿಯ ಕರ್ನಾಟಕ, ಸಂಪುಟ-5, ತಿ.ನ-258

25. ಎಫಿಗ್ರಾಫಿಯ ಕರ್ನಾಟಕ, ಸಂಪುಟ-6,ಪಾಂಪು-134


೧೧. ಸಾಳ್ವನರಸಿಂಹನ ಕಾಲದ ವ್ಯಾಸರಾಯ ಮಠದ ಅಪ್ರಕಟಿತ ತಾಮ್ರ ಶಾಸನ

ಗಿರಿಜಾ

ಸಂಡೂರು ತಾಲ್ಲೂಕಿನ ಬೊಮ್ಮಗಟ್ಟ ಗ್ರಾಮದಲ್ಲಿ ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ ಈ ಗ್ರಾಮದ ಭೀಮಸೇನರಾವ್ ಶಾನಭೋಗ ನಿವೃತ್ತ ಶಿಕ್ಷಕರ ಮನೆ ಯಲ್ಲಿ ಈ ತಾಮ್ರ ಶಾಸನ ದೊರೆತಿದೆ. ಇದು 6.3 ಇಂಚು ಉದ್ದ, 4:3 ಇಂಚು ಅಗಲವಾಗಿದೆ. ಇದು ಪ್ರಾರ್ಥನಾ ಶ್ಲೋಕದಿಂದ ಶಾಪಾಶಯದವರೆಗೂ ಒಟ್ಟು 27 ಸಾಲುಗಳನ್ನೊಳಗೊಂಡಿರುವ ಒಂದೇ ಮುಖದಲ್ಲಿ ಬರೆಯಲ್ಪಟ್ಟಿದೆ. ಶಾಸನದ ಮೇಲ್ಭಾಗದಲ್ಲಿ ಶ್ರೀ ಕುಮಾರಸ್ವಾಮಿ ಮತ್ತು ರಾಮಚಂದ್ರಾಯ ನಮಃ ಎಂದಿದೆ.

ವಿಜಯನಗರ ಸಾಮ್ರಾಜ್ಯದ ಸಾಳ್ವನರಸಿಂಹರಾಯನ ಅವಧಿಯ ಈ ಶಾಸನವು ದಾಸ ಶ್ರೇಷ್ಠರಾದ ವ್ಯಾಸರಾಯರ ಇತಿಹಾಸದ ಮೇಲೂ ಬೆಳಕು ಬೀರುತ್ತದೆ. ಈ ಶಾಸನವು ದಾನ ಶಾಸನವಾಗಿದ್ದು, ಈ ದಾನವನ್ನು ವ್ಯಾಸರಾಯರು ಹಂಪಿಯಲ್ಲಿದ್ದಾಗ ವಿಜಯನಗರ ರಾಜ್ಯಕ್ಕೆ ಸಲ್ಲುವ ಸೊಂಡೂರು ಪ್ರಾಂತ್ಯದ ತುಂಬರಗುದ್ದಿಗೆ ವ್ಯಾಸರಾಯ ಪುರವೆಂದು ಹೆಸರು ಬದಲಾಯಿಸಿ ವ್ಯಾಸರಾಯರಿಗೆ ದಾನ ನೀಡಿದ ವಿವರವಿದೆ. ಈ ದಾನವನ್ನು ನೀಡಿದ ಸಾಳ್ವ ಮನೆತನದ ಒಂದನೇ ನರಸಿಂಹನನ್ನು ಶಾಸನವು ಶ್ರೀ ಮದ್ರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರಪ್ರತಾಪ ಶ್ರೀ ಸಾಳೊನರಸಿಂಗರಾಯ ಎಂದು ಉಲ್ಲೇಖಿಸಿದೆ.

ಕ್ರಿ.ಶ.1490ರ ಕಾಲಾವಧಿಯ ಈ ಶಾಸನವು ನಮಸ್ತುಂಗ ಶಿರಶ್ಚುಂಬಿ ಎಂಬ ಶ್ಲೋಕದಿಂದ ಮುಂದುವರಿದಿದೆ. ನಂತರ ಶಾಲಿವಾಹನ ಶಕ 1256 ವಿಭವನಾಮ ಸಂವತ್ಸರದ ವೈಶಾಖ ಶುದ್ಧ 15ರಲು ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯ ಪದವಾಕ್ಯ ಪ್ರಮಾಣ ಪಾರಾವಾರವಾರಿಣ ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ದ್ಯಾನ ದಾರೀಣ ಅಷ್ಟಾಂಗ ಯೋಗಾನುಷ್ಠಾನ ಬ್ರತಪ್ರಶ್ಚಕ್ರವರ್ತಿ ಗುರು ಪರಂಪರಾ ವ್ಯಾಖ್ಯಾನ ಸಿಂಹಾಸನ ಪ್ರತಿಷ್ಠಾಪನಾಚಾರ್ಯ ಸಿಂಹಾಸನಾಧೀಶ್ವರ ಸಕಲ ವೇದಾರ್ತ ಪ್ರಕಾಶಿಕ ಸಾಂಖ್ಯತ್ರಯ ಪ್ರತಿಪಾಲಕ ನಿಗಮಾಗಮ ಸಾರ ಹೃದಯ ವೈದಿಕ ಮಾರ್ಗ ಪ್ರವರ್ತಕ ಸರ್ವತಂತ್ರ ಸ್ವತಂತ್ರ ಆದಿರಾಜಧಾನಿ ವಿದ್ಯಾನಗರ ಮಹಾರಾಜಧಾನಿ ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ ತುಂಗಭದ್ರ ತೀರವಾಸ ಋಷ್ಯಶೃಂಗ



ಸಂಡೂರು ತಾಲ್ಲೂಕಿನ ಬೊಮಗಟ್ಟ ಗ್ರಾಮದ ತಾಮ್ರಶಾಸನ ಸಾಳ್ವನರಸಿಂಹನ ಕಾಲದ ವ್ಯಾಸರಾಯ ಮಠದ ಅಪ್ರಕಟಿತ ತಾಮ್ರ ಶಾಸನ.

ಪುರವರಾಧೀಶ್ವರ ವ್ಯಾಸರಾಯ ಮುನಿಂದ್ರ ಆರ್ಯರು ಎಂದು ವ್ಯಾಸರಾಯರನ್ನು ಹಲವು ಬಿರುದುಗಳಿಂದ ಸ್ತುತಿಸಲಾಗಿದೆ.

ವ್ಯಾಸರಾಯರ ಮಠಕ್ಕೆ ಈ ಗ್ರಾಮವನ್ನು ದಾನ ನೀಡುವುದರ ಜೊತೆಗೆ ದೊಡ್ಡ ಕೆರೆಯನ್ನು ಕಟ್ಟಿಸಿ ಗ್ರಾಮದ ಗವುಡ ಶಾನಭೋಗ ಮತು ಸಮಸ್ತ ಪ್ರಜೆಗಳಿಗೆ ಅರ್ಪಿಸಲಾಗಿದೆ. ಈ ಕೆರೆಯ ಹಿಂದೆ ಗ್ರಾಮದ ಉತ್ಪತ್ತಿಯನ್ನು ಅನೇಕ ಕುಲಕಸುಬಿನವರಿಗೆ ಅಂದರೆ, ನಾಲ್ಕು ಯತ್ತಿನ ಗಳೆವು 1ಕ್ಕೆ ನಿತ್ಯ ಗುತ್ತಿಗೆ ಗ4 ಬೇಡಿಕೆ ಗ ೧೯ ಲಕ್ಕಯ್ಯ ಗೆ 59ದ ಪ್ರಕಾರ ಪ್ರಜೆಗಳಿಗೆ ಮತ್ತು ವ್ಯಾಸರಾಯರ ಮಠದ ದಾಸೋಹಕ್ಕೆ ಒಂದು ಖಂಡುಗ ದವಸ, ಗಳೆ 1ಕೊಟ್ಟು ನಡೆಸುವವರಿಗೆ, ಚಕ್ಕು ಬಂದಿಯನ್ನು ಮಾಡಿಕೊಟ್ಟ ಮಾನ್ಯದ ವಿವರ ಹೀಗಿದೆ.

ಸಾದರ ಚಿಕಂಣ, ಗವುಡನ ಕುಮಾರ ನಾರಾಯಣನಿಗೆ ನಾಲ್ಕು ಯತ್ತಿನ ಗಳೆವು 2, ವೆಂಕರಸ್ಯೆನ ಕುಮಾರ ತಿಂಮರಸಯಗೆ ನಾಲ್ಕು ಯತ್ತಿನ ಗಳೆ 2, ತಳವಾರ ಮುಡಿಗೊಂಡಲ ಚೆಂಗಿನಾಯ್ಕಗೆ ನಾಲ್ಕು ಯತ್ತಿನ ಗಳೆ 2, ಕಂಮಾರ ಮಲೊಜಗೆ ಗಳೆ 1, ಬಡಗಿ ದೊರೊಜಗೆ ಗಳೆ1, ಅಕ್ಕಸಾಲಿಗ ವೊರೊಜಗೆ ಗಳೆ 011, ಬಾರಿಕ ಕೊಂಡಗೆ ಗಳೆ 1, ಅಗಸ ನಾಗರಾಜಗೆ ಗಳೆ 011, ಕ್ಷೌರಿಕ ತಿಪ್ಪಗೆ ಗಳೆ 011, ಬೇಗಾರ ತಿಮ್ಮಗೆ ಗಳೆ 1, ಕುಂಬಾರ ತಿಮ್ಮಗೆ 011, ಮಾದಿಗ ಯಲ್ಲಜಗಲಿಗೆ ಗಳೆ 1, ಈ ಎಲ್ಲಾ ಕುಲಕಸುಬಿನ ಜನಾಂಗದವರಿಗೆ ಇಂತಿಷ್ಟು ಆದಾಯವನ್ನು ನೀಡಲಾಗಿದ್ದು, ಇದಕ್ಕೆ ಯಾರಾದರೂ ತಪ್ಪಿದರೆ ಮಾತಂಗ, ಮಾಲ್ಯವಂತ, ಋಷ್ಯಶೃಂಗ, ಕಿಷ್ಕಿಂದ, ಪಂಪಾಕ್ಷೇತ್ರ, ಈ ಪಂಚಕೋಶ ಮಧ್ಯದಲ್ಲಿ ಗೋವು ಬ್ರಾಹ್ಮಣರ ಕೊಂದ ಪಾಪಕ್ಕೆ ಹೋಗುವರೆಂದು ತಿಳಿಸಿರುವುದು ವಿಶೇಷವಾಗಿದೆ. ಕೊನೆಗೆ ಎಲ್ಲಾ ಶಾಸನಗಳಲ್ಲಿ ಕಂಡು ಬರುವಂತೆ 'ಸ್ವದತ್ತಾಂ ಪರದತ್ತಾಂ'ಎಂಬ ಶಾಪಾಶಯದಿಂದ ಶಾಸನವು ಮುಕ್ತಾಯವಾಗಿದೆ.

ಸಾಳುವ ನರಸಿಂಹನ ಅವಧಿಯ ಶಾಸನಗಳು ಹೆಚ್ಚು ದೊರೆತಿಲ್ಲ. ಈ ಶಾಸನದಲ್ಲಿ ಕಾಲವನ್ನು ಶಕ 1256 ಎಂದಿದ್ದು, ಕ್ರಿ.ಶ. 1334 ಆಗುತ್ತದೆ. ಆದರೆ ಈ ಅವಧಿಯಲ್ಲಿ ವಿಜಯನಗರ ಸ್ಥಾಪನೆಯಾಗಿರಲಿಲ್ಲ. ಸಾಳುವ ನರಸಂಹನು ವಿಜಯನಗರ ಸಾಮ್ರಾಜ್ಯ ವನ್ನು ಆಳಿದ್ದು ಕೇವಲ 1485 ರಿಂದ 1491 ರವರೆಗೆ ಆರು ವರ್ಷಗಳು ಮಾತ್ರ. ಈ ಶಾಸನದ ತೇದಿಯು ಅನುಮಾನಾಸ್ಪದವಾಗಿರುವುದರಿಂದ ಸಂವತ್ಸರದ ಆಧಾರದಿಂದ ಮಾತ್ರ ಇದರ ಕಾಲವನ್ನು ಕ್ರಿ.ಶ. 1490ಎಂದು ನಿರ್ಧರಿಸಬೇಕಾಗುತ್ತದೆ.

ಶಾಸನದಲ್ಲಿ ಬಳಸಿರುವ ಲಿಪಿ, ಶ್ಲೋಕದಿಂದ ಶಾಪಾಶಯದವರೆಗೂ ಕನ್ನಡ ಭಾಷೆಯಲ್ಲಿದೆ. ಇದರ ಲಿಪಿಯನ್ನು ಗಮನಿಸಿದರೆ ಸಮಾರು ನೂರು ನೂರೈವತ್ತು ವರ್ಷ ಗಳಷ್ಟು ಹಿಂದೆ ಬರೆಸಲ್ಪಟ್ಟ ಲಿಪಿಯಂತೆ ಕಾಣಿಸುತ್ತವೆ. ಶಾಸನ ಬಳಸಲ್ಪಟ್ಟ ಲೋಹದ ಹಲಗೆಯ ಸ್ವರೂಪವನ್ನು ಗಮನಿಸಿದರೂ ಸಹ ಸುಮಾರು ನೂರು ವರ್ಷಗಳಷ್ಟು ಹಿಂದಿನದಾಗಿ ಕಂಡು ಬರುತ್ತದೆ.

ಒಟ್ಟಾರೆಯಾಗಿ ಈ ಶಾಸನವು ಸಾಳ್ವ ನರಸಿಂಗರಾಯನ ಹಾಗೂ ವ್ಯಾಸರಾಯರ ಕುರಿತು ಮಹತ್ವದ ಬೆಳಕನ್ನು ಬೀರುವ ದಾನ ಶಾಸನವಾಗಿದ್ದರೂ, ಈ ಶಾಸನ ಉಲ್ಲೇಖದ ಕಾಲದ ಪ್ರಕಾರ ಕ್ರಿ.ಶ. 1334 ಆಗುತ್ತದೆ. ಈ ಶಾಸನದ ಸ್ವರೂಪ, ಬಳಸಿರುವ ಲಿಪಿ, ವ್ಯಾಕರಣ ದೋಷ, ಭಾಷೆ, ಶಾಪಾಶಾಯದ ನಂತರ ಶ್ರೀ ವಿರೂಪಾಕ್ಷ ಎಂಬ ಸಹಿ ಇಲ್ಲದಿರುವುದು, ಶಾಸನದ ಮೇಲ್ಭಾಗದಲ್ಲಿ ಯಾವ ಧರ್ಮದ ಚಿಹ್ನೆಗಳಿಲ್ಲ ದಿರುವುದು ಕೂಡ ಈ ಶಾಸನ ಕೂಟ ಶಾಸನವಾಗಿರಬೇಕು ಎಂಬ ಅನುಮಾನ ಉಂಟು ಮಾಡುತ್ತದೆ.

ಇದು ನಕಲಿ ಶಾಸನವಾದರೂ ಸಹ ಇದರ ಸೃಷ್ಟಿಯ ಹಿಂದಿನ ಲಾಭ ಯಾರಿಗೆ? ಎಂಬುದು ಕುತೂಹಲ ಮೂಡಿಸುತ್ತದೆ. ಕರೆ ಕಟ್ಟಿಸಿ ದಾನ ನೀಡಿದ ವಿಷಯವಿದೆ. ಆದರೆ ಗೌಡ-ಶಾನಭೋಗರು ದಾನ ಸ್ವೀಕರಿಸಿದ್ದಾರೆ. ದಾನದ ವಿಷಯದಲ್ಲಿ ಅನೇಕ ಕುಲಕಸುಬಿನವರಿಗೆ ದಾನ ನೀಡಿದೆ. ಮಠದ ಗುರುಗಳ ಹೆಸರನ್ನು ಇಡಲಾಗಿದೆ. ಹೀಗಾಗಿ ಮಠ, ಗುರುಗಳು ಮತ್ತು ಗೌಡ-ಶಾನುಭೋಗರ ನಡುವೆ ಯಾರಿಗೆ ಇದರಿಂದ ಲಾಭವಾಗಿದೆಯೆಂದು ಯೋಚಿಸಿದರೆ ಇದರಿಂದ ಗೌಡ-ಶಾನುಭೋಗರ ವಂಶದವರೆ ಈ ಕೆಲಸ ಮಾಡಿರಬೇಕೆಂದು ಅನುಮಾನ ಉಂಟಾಗುತ್ತದೆ.

(ಶಾಸನ ನೀಡಿದ ಭೀಮ್‌ಸೇನ್‌ರಾವ್ ಶಾನಭೋಗ ಕುಟುಂಬದವರಿಗೆ, ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಸಹಕರಿಸಿದ ನನ್ನ ಸಹೋದರರಾದ, ಬಿ.ಚಂದ್ರಶೇಖರ್ ಮತ್ತು ಬಿ.ಶಿವಪ್ರಕಾಶ್‌ರವರಿಗೆ ಈ ಪ್ರಬಂಧವನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ತಿದ್ದಿ, ಸಹಕರಿಸಿದ ನನ್ನ ಗುರುಗಳಾದ ಡಾ.ಡಿ.ವಿ. ಪರಮಶಿವಮೂರ್ತಿಯವರಿಗೆ ನನ್ನ ಕೃತಜ್ಞತೆಗಳು.)

ಪರಾಮರ್ಶನ ಗ್ರಂಥಗಳು

1. ಪುರಂದರದಾಸರು ಮತ್ತು ಶ್ರೀಮದ್ಭಾಗವತ ಒಂದು ತೌಲನಿಕ ಅಧ್ಯಯನ ಡಾ. ವಾಸುದೇವ ಅಗ್ನಿಹೋತ್ರಿ, 2004.
2. ಸಮಗ್ರದಾಸ ಸಾಹಿತ್ಯ ಸಂಪುಟ-3, ಭಾಗ-1, ಸಂ:ಡಾ.ಬಸವರಾಜ ಸಬರದ,2003.
3. ದಾಸರ ಪದಗಳು, ಡಾ.ಶ್ರೀನಿವಾಸ ಕುಲಕರ್ಣಿ,1997.
4. ವಿಜಯನಗರ, ಪ್ರೊ. ವಿ. ರಾಘವೇಂದ್ರರಾವ್, 1985
5. ಕರ್ನಾಟಕ ಇತಿಹಾಸ ದರ್ಶನ, ಡಾ.ಎಂ.ವಿ.ಕೃಷ್ಣರಾವ್, 1970.
6. ಸಮಗ್ರ ದಾಸ ಸಾಹಿತ್ಯ ಸಂಪುಟ-1, ಶ್ರೀಪಾದರಾಜರ ಮತ್ತು ಶ್ರೀವ್ಯಾಸರಾಯರ ಕೀರ್ತನೆಗಳು. ಸಂ: ಡಾ.ಶ್ರೀನಿವಾಸ ಹಾವನೂರು, 2003.
7. ಕನ್ನಡ ಸಾಹಿತ್ಯ ಚರತ್ರೆ, ರಂ.ಶ್ರೀ ಮುಗಳಿ, 1953.
8. ವಿಜಯನಗರದ ಇತಿಹಾಸ (ಕರ್ನಾಟಕ ಇತಿಹಾಸ ಮಾಲಿಕೆ) ಎ.ಎಸ್. ನಂಜುಂಡಸ್ವಾಮಿ, 1991.
9. ವಿಜಯನಗರ ಅಧ್ಯಯನ ಸಂಪುಟ-6, ಸಂ: ಪ್ರೊ.ಎಂ.ವಿ. ಕೃಷ್ಣಪ್ಪ ಇತರರು, 2001ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ.
10. ಕರ್ನಾಟಕ ಚರಿತ್ರೆ ಮಾಲೆ-3, ಪ್ರ.ಸಂ. ಪ್ರೊ. ಬಿ.ಷೇಕ್ ಅಲಿ, 1997.
11. ಕರ್ನಾಟಕದ ಪರಂಪರೆ-ಸಂಪುಟ 2, ಮೈಸೂರು ರಾಜ್ಯ ಸರಕಾರ 1970.

ಬೋಮ್ಮಗಟ್ಟ ಗ್ರಾಮದ ತಾಮ್ರಶಾಸನದ ಪಾಠ

1. ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೆ ತ್ರೈಲೋಕ್ಯ ನಗರಾರಂಭ ಮೂಲ ಸ್ತಂಭಾ
2. ಯ ಶಂಭವೆಸ್ವಸ್ತಿ ಶ್ರೀ ಜಯಾಬ್ಯುದಯ ಶಾಲಿವಾಹನ ಶಕ ವರುಷಂಗಳು 1256 ನೆಯ
3. ವಿಭವನಾಮ ಸಂವತ್ಸರದ ವೈಶಾಕ ಶು.15ರಲ್ಲಿ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯ
4. ಪದವಾಕ್ಯ ಪ್ರಮಾಣಗ್ನ ಪಾರಾವಾರವಾರಿಣಯಮಯ ಮಾಸನ ಪ್ರಾಣಾಯಮ ಪ್ರತ್ಯಾಹಾ
5. ರ ದ್ಯಾನ ದಾರೀಣನಮಾದ್ಯಷ್ಠಾಂಗ ಯೋಗಾನುಷ್ಠಾನ ಬ್ರತ ಪಶ್ಚಕ್ರವರ್ತಿ ಗುರುಪರಂಪರಾ ಪ್ರಾಪ್ತವ್ಯಾ
6. ಖ್ಯಾಯನ ಸಿಂಹಾಸನ।ಪ್ರತಿಷ್ಠಾಪನಾಚಾರ್ಯ ಸಿಂಹಾಸನಾಧಿಶ್ವರ ಸಕಲವೆದಾರ್ತ ಪ್ರಕಾಸಿಕ ಸಾಂಖತ್ರ
7. ಯ ಪ್ರತಿಪಾಲಕನಿಗಮಾಗಮಸಾರ ಹೃದಯ ವೈದಿಕ ಮಾರ್ಗಪ್ರವರ್ತಕ ಸರ್ವತಂತ್ರ ಸ್ವತಂತ್ರ
8. ಆಧಿರಾಜಧಾನಿ ವಿದ್ಯಾನಗರ ಮಹಾರಾಜಧಾನಿ ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ
9. ತುಂಗಭದ್ರಾ ತೀರವಾಸ ಋಷಿಶೃಂಗ ಪುರವರಾಧಿಶ್ವರ ವ್ಯಾಸರಾಯ ಮುನಿಂದ್ರ ಆರ‍್ಯರು ವಿದ್ಯಾ
10. ನಗರಕ್ಕೆ ಸಲುವ ಸೊಂಡೂರು ಮಲೆ ಪ್ರಾಂತ್ಯ ಶ್ರೀ ||1|| ಸುಕ್ಷೇತ್ರಕ್ಕೆ ಸಂನಿಧಿ ತುಂಬರಗುದ್ದಿಗೆ ಪ್ರ
11. ತಿನಾಮ ವ್ಯಾಸಾಪುರವೆಂಬ ಗ್ರಾಮವಂನು ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಶ್ರೀವೀರ ಪ್ರ
12. ತಾಪ ಶ್ರೀ ಸಾಳೊನರಸಿಂಗರಾಯರು ಪೃಥ್ವಿ ಸಾಮ್ರಾಜ್ಯದಲ್ಲು ಆಳುವಾಳಿಕೆಯಲ್ಲು ನಂಮ ಮಠ
13. ಕ್ಕೆ ಸುಧಾಗ್ರಾಮ ಮಾಡಿ ಸಮರ್ಪಿಸಲಾಗಿ ಗ್ರಾಮ ಪೂರ್ವವಾದುಯಂದು ಈ ಗ್ರಾಮಕ್ಕೆ ನಾವು ಸ್ವಥಾ ದೊ

14. ಡ್ಡ ಕೆರೆ ಕಟ್ಟಿಸಿ ಈ ಗ್ರಾಮದ ಸಮಸ್ತ ಬಾರ ಬಲೂತಿಗ ಉ.ಶಾನಭೋಗ ಸಮಸ್ತ ಪ್ರಜೆಗಳಿಗೂ ಬರ್ರಿ
15. ಕೊಟ್ಟ ಕಉಲು ಮಾಂನ್ಯದ ಕ್ರಮವೆಂತೆಂದರೆ ಆ। ಈ ಕೆರೆ ಹಿಂದೆ ಬಾರಾಬಲೂತಿಯವರಿಗೆ
16. ಆಯ ಕಟ್ಟು ಮಾಡಿ ಕೊಟ್ಟ ವಿವರಾ।ನಾಲ್ಕುಯತ್ತಿಗನಳೆವು 1ಕ್ಕೆ ನಿತ್ಯ ಗುತ್ತಿಗೆ ಗ 4 ಬೇಡಿಕೆ ಗೆ 19
17. ಲಖಯಂಗ 59ದ ಪ್ರಕಾರ ಪ್ರಜೆಗಳಿಗೆ ನಡಸಲುಳವರು ನವು ಮಠದಾಸೋಸುವದಕೆ ದವಸ ಖಂ।ಗಳೆ1
18. ಕೊಟು ನಡಸಲುಳವರು ।ಶ॥ ಬಾರಬಲಿ ತರಿಗೆ ಕೊಟ ಮಾನ್ಯ ।ದ ವಿವರವೂ।ಸಾದರ ಚಿಕಂಣ
19. ಗ ಉಡನ ಕುಮಾರ ನಾರಾಯಣಗ। ಗೆ ನಾಲ್ಕು ಯತ್ತಿನ ಗಳೆವು 2ಶಾ। ವೆಂಕರಸ್ಯೆನ ಕುಮಾರ ತಿಂಮರಸಯಗೆ
20. ನಾಲ್ಕುಯತ್ತಿನಗಳೆ 2 ತಳವಾರ ಮುಡಿಗೊಂಡಲ ಚಿಂಗಿಯನಾಯ್ಕಗೆ ನಾಲ್ಕು ಯತ್ತಿನಗಳೆ 2 ಕಂಮಾರ ಮಲೋಜ
21. ಗೆ ಗಳೆ 1 ಬಡಗಿ ದೊರೂಜಗೆ ಗಳೆ 1ಅಕ್ಕಸಾಲಿವೊರೊಜಗೆ ಗಳೆ 0॥ ಬಾರಿಕ ಕೊಂಡಗೆಗಳೆ 0॥ ಅಗಸ
22. ನಾಗರಾಜಗೆಗಳೆಂ॥ ಕ್ಷೌರಿಕ ತಿಪ್ಪಗೆ ಗಳೆ 0॥ ಬೆಗಾರ ತಿಂಮಗೆ ಗಳೆ 1 ಕುಂಬಾರ ತಿಮಗೆ ಗಳೆ0॥ಮಾ
23. ದಿಗಯಲ್ಲ ಜಗಲಿಗೆ ಗಳೆ1ಈ ಪ್ರಕಾರ ಬಾರ ಬಲೂತಿ ಮುಂತಾದ ಹನ್ನೆರಡು ಮಂದಿಗೂ ತಪ್ಪದೆ
24. ನಡಸಲುಳವರು ಈ ಕ ಉಲುವು ಆಯಕಟ್ಟಿಗೆ ಯಾರು ತಪ್ಪಿದರು ಮಾತಂಗ ಮಾಲ್ಯವಂತ ರುಷಿಶ್ಯಂ
25. ಗಕಿಷ್ಮಿಂದ ಪಂಪಾಕ್ಷೇತ್ರ ಈ ಪಂಚಕ್ಷೇಶ ಮಧ್ಯದಲ್ಲು ಗೋವು ಬ್ರಾಂಹ್ಮರಕೊಂದ ಪಾಪಕ್ಕೆ ಹೊಹ
26. ರೆಂದು ಬರ್ರಿಸಿಕೊಟಕವುಲು ಮಾಂನ್ಯದ ಆಯಕಟ್ಟು ಸ್ವದತ್ತಾಂ ಪರದತ್ತಾಂ ವಾಯೊಹರೆತವ
27. ಸುಂಧರಾ ಷಷ್ಠವರುಷ ಸಹಸ್ರಾಣಿ ವಿಷ್ಠಯಂ ಜಾಯತೆ ಕ್ರಿಮಿಃ।

೧೨. ವಿಜಯನಗರ ಇಮ್ಮಡಿ ಹರಿಹರನ ಕ್ರಾಕು ಶಾಸನ - ಪರಿಚಯ

ಡಾ. ಕೆಳದಿ ವೆಂಕಟೇಶ್ ಜೋಯಿಸ್

ವಿಜಯನಗರ ಚರಿತ್ರೆಯಲ್ಲಿ ಇಮ್ಮಡಿ ಹರಿಹರನ ಹೊರನಾಡು ಆಂಧ್ರದ ಶಾಸನ ಪಾಂಡಿಚೇರಿ ವಸ್ತುಸಂಗ್ರಹಾಲಯದಲ್ಲಿ ಪ್ರಕಟವಾದ ಶಾಸನದಂತೆ ಗಮನಾರ್ಹವಾದುದು. ಇದನ್ನು ಡಾ. ಎನ್.ರಮೇಶನ್ , ಎಂ.ಎ., ಪಿಎಚ್‌ಡಿ. ಐಎಎಸ್‌ರವರು ಪರಿಶೋಧಿಸಿ, ಶಾಸನ ಸಾಹಿತ್ಯಕ್ಕೆ ಉಪಕರಿಸಿದುದಕ್ಕೆ ವಿದ್ವಾಂಸರ ಪರವಾಗಿ ಕೃತಜ್ಞತೆಗಳು[1]

ಶಾಸನ ಸಾಮಗ್ರಿ ವಿವರ

ಐದು ತಾಮ್ರ ಪಟಗಳನ್ನೊಳಗೊಂಡ ಈ ಶಾಸನ ಆಂಧ್ರ ಪ್ರದೇಶದಲ್ಲಿ ನೆಲ್ಲೂರು ಜಿಲ್ಲಾ ಕಾವಲಿ ಸಮೀಪದಲ್ಲಿರುವ ಬ್ರಾಹ್ಮಣ ಕ್ರಾಕು ಎಂಬ ಹಳ್ಳಿಯಲ್ಲಿ ಭೂ ಶೋಧನೆ ನಡೆಸಿದಾಗ ಆ ಗ್ರಾಮದ ಶಾಲಾ ಉಪಾಧ್ಯಾಯ ಶ್ರೀ ಕೇಸರಿ ಸುಂದರರಾಮ ಶರ್ಮರವರಿಗೆ ಲಭಿಸಿದ್ದು ಈಗ ಅದು ಅವರ ವಶದಲ್ಲಿದೆ.

ಪ್ರಮಾಣ ಹಾಗೂ ಲಿಪಿ

ಶಾಸನವು ಮುದ್ರೆ ಉಂಗುರ ಮತ್ತು ತಾಮ್ರದ ಬಳೆಯನ್ನೊಳಗೊಂಡ ಉ ೩.೨x೩ ಅಗಲ ೨೦x೨ ಇದ್ದು ಲಿಪಿಯು ನಂದಿ ನಾಗರಿ, ಭಾಷೆ ಸಂಸ್ಕೃತವಾಗಿದ್ದು, ಓದಲರ್ಹವಾಗಿದೆ. ಶಾಸನದ ಮೇಲ್ಭಾಗದ ಚಿಕ್ಕ ರಂಧ್ರದಲ್ಲಿರುವ ಬಳೆಯ ವೃತ್ತಪ್ರಮಾಣ ೧೩x೩ ಸೆ.ಮೀ. ಮೊಹರು ಮತ್ತು ಬಳೆಯು ೮೭೬ ಗ್ರಾಂ ತೂಕವಿದೆ. ಹಳ್ಳಿಗಳ ಮೇರೆಯೂ ಸಹ ಸಂಸ್ಕೃತದಲ್ಲಿಯೇ ಇದೆ. ಶಾಸನದಲ್ಲಿ ೧೧೨ ಭಾಗವಿದೆ. ಕೊನೆಯ ಎರಡು ಭಾಗ ಶಾರ್ಧೂಲ ವಿಕ್ರೀಡಿತ ಮತ್ತು ಸ್ರಗ್ಧರ ಮಾತ್ರೆಯಲ್ಲಿದೆ. ಎರಡರಿಂದ ಇಪ್ಪತ್ತೊಂದು ಮತ್ತು ನೂರನಾಲ್ಕನೇ ಸಾಲುಗಳು ವಸಂತ ತಿಲಕ ಮಾತ್ರೆಯಲ್ಲಿದೆ. ಉಳಿದವು ಅನುಷ್ಟುಪ್ ಮಾತ್ರೆಯಲ್ಲಿದೆ. ಉಪಮಾ ಪ್ರಶಸ್ತಿಗಳು ಕೃತಕವೆನಿಸುತ್ತವೆ ೨೧೬ ಸಾಲುಗಳನ್ನೊಳಗೊಂಡ ಶಾಸನದ ಕಾಲ ಕ್ರಿ.ಶ. ೧೩೭೬. ಶಾಸನದ ಅಂತ್ಯದಲ್ಲಿ "ಶ್ರೀ ವಿರುಪಾಕ್ಷ" ಎಂಬುದಾಗಿ ಕನ್ನಡ ಮೋಡಿ ಲಿಪಿಯಲ್ಲಿದೆ. ಶಾಸನ ಲಿಪಿಕಾರ ಪೋಚನ ಸೂರಿ ಎಂದು ತಿಳಿದು ಬರುತ್ತದೆ.

ತಾಮ್ರ ಶಾಸನ ಪಟಗಳ ವಿವರ ಮತ್ತು ಒಟ್ಟು ೨೧೬ ಸಾಲುಗಳ ವಿವರಗಳನ್ನು ಈ ಕೆಳಗಿನಂತೆ ವಿಭಾಗಿಸಿ ಬರೆಯಬಹುದು.

೧ ನೇ ಹಲಗೆ ೨೪ ಸಾಲು	೧೪೫೨ ಗ್ರಾಂ	
೨ ನೇ ಹಲಗೆ ಮೊದಲ ಭಾಗ	೨೯ ಸಾಲು	
೨ ನೇ ಹಲಗೆ ಹಿಂಭಾಗ	೨೯ ಸಾಲು	೧೬೦೦ ಗ್ರಾಂ
೩ ನೇ ಹಲಗೆ ಮುಂಭಾಗ	೨೮ ಸಾಲು	
೩ ನೇ ಹಲಗೆ ಮುಂಭಾಗ	೨೮ ಸಾಲು	೧೪೭೨ ಗ್ರಾಂ
೪ ನೇ ಹಲಗೆ ಮುಂಭಾಗ	೨೬ ಸಾಲು	
೪ ನೇ ಹಲಗೆ ಹಿಂಭಾಗ	೨೮ ಸಾಲು	೧೩೪೬ ಗ್ರಾಂ
೫ ನೇ ಹಲಗೆ ಮುಂಭಾಗ	೨೪ ಸಾಲು	೧೭೦೦ ಗ್ರಾಂ

ತಿರುವನಂತಪುರದ ಡಾ. ವಿಶಾಲಾಕ್ಷಿಯವರು ನಂದಿನಾಗರಿ ಲಿಪಿ ಶಾಸನ ಕುರಿತು -

The southern variety of Nagari is known as Nandi Nagari. This script is not now in vogue. It is more perdominant in the Mysore region especially in the territories falling under Vijayanagar Empire. Most of the Sanskrit inscriptions of the Vijayanagara rulers are in the Nandinagari. They gave royal patronage to this script ಎಂಬುದಾಗಿ ಅಭಿಪ್ರಾಯ ಪಟ್ಟಿದ್ದಾರೆ. [೨]

ವಿಜಯನಗರದ ಇಮ್ಮಡಿ ಹರಿಹರನ ಈವರೆಗಿನ ಶಾಸನಗಳು

೧.	ಕೆ.ಎನ್ ೧೯೫	೮.೧.೧೩೭೫	ಮಳಗಾಲ
೨.	ಕೆ.ಎನ್. ೧೫೭	೨೭.೧೨.೧೩೭೯	ಜೋಡಿ ಲಕ್ಕೊಂಡಹಳ್ಳಿ
೩.	ಕೆ.ಎನ್. ೩೧೪	೩೧.೦೫.೧೩೭೯	ಹಂಪಿ
೪.	ಕೆ.ಎನ್. ೦೪೧	೨೪.೦೧.೧೩೮೧	ಬೇಲೂರು
೫.	ಕೆ.ಎನ್. ೦೮೮	೨೭.೧೦.೧೩೮೩	ಇಗ್ಗೆಯೂರು.
೬.	ಕೆ.ಎನ್.೦೧೮	೧೩೮೫-೮೬	ಕೂಮಸಂದ್ರ
೭.	ಕೆ.ಎನಂ. ೦೩೩	೨೮.೦೬.೧೩೮೬	ಬೆಂಗಳೂರು
೮.	ಕೆ.ಎನ್. ೩೧೫	----	ಕಲ್ಯ
೯.	ಕೆ.ಎನ್. ೨೧೨	೧೨.೧೧.೧೩೮೮	ಕಲ್ಯ
೧೦.	ಕೆ.ಎನ್. ೧೭೯	೧೦.೪.೧೩೯೧	ಅರಲಾಲು
೧೧.	ಕೆ.ಎನ್. ೧೮೦	೧೦.೭.೧೩೯೩	ಅರಲಾಲು

೧೨.	ಕೆ.ಎನ್ ೮೧	೪.೭.೧೩೯೫	ಹರೂರು
೧೩.	ಕೆ.ಎನ್. ೩೧೬	೮.೩.೧೩೯೫	ಹಂಪಿ
೧೪.	ಕೆ.ಎನ್. ೩೧೮	೪.೧೨.೧೩೯೭	ಹಂಪಿ
೧೫.	ಕೆ.ಎನ್. ೩೧೯	೧೧.೧೧.೧೩೧೯	ಹಂಪಿ
೧೬.	ಕೆ.ಎನ್. ೩೨೦	೧೦-೦೧. ೧೩೯೮	ಹಂಪಿ
೧೭.	ಕೆ.ಎನ್. ೧೮೧	೨೦.೧೨.೧೪೨೦	ಅರಲಾಲು
೧೮.	ಕೆ.ಎನ್. ೧೬೧	೮.೧೦.೧೪೦೧	ಕಿತಗನೂರು
೧೯.	ಕೆ.ಎನ್. ೧೬೬	೨೫.೪.೧೪೦೪	ಪಂಡಿತ ಅಗ್ರಹಾರ
೨೦.	ಕೆ.ಎನ್. ೨೪	-----	ನಾರಣಗಟ್ಟಿ
೨೧.	ಕೆ.ಎನ್. ೨೬೫	----	ಹೊರೆಬಲ

ಮುಂತಾಗಿ ಕನ್ನಡ ೧೪, ತಮಿಳು ಗ್ರಂಥ ೭, ನಾಗರಿಯಲ್ಲಿ ಸಂಸ್ಕೃತ ೨, ತೆಲುಗಿನಲ್ಲಿ ಸಂಸ್ಕೃತ ೧, ಸಂಸ್ಕೃತ ನಾಗರಿ ೨, ಕನ್ನಡದಲ್ಲಿ ಸಂಸ್ಕೃತ ೧. ನಾಗರಿಯಲ್ಲಿ ಸಂಸ್ಕೃತ ಕನ್ನಡ ೧, ಹೀಗೆ ಹಲವು ಶಾಸನಗಳಿವೆ. ಆದರೆ ಈ ಶಾಸನದ ಉಲ್ಲೇಖವಿಲ್ಲ.[೩]

ಈ ಶಾಸನದ ವೈಶಿಷ್ಟ್ಯ

ವಿಜಯನಗರ ಶಾಸನ ಸಂಪುಟದ ಸಂಪುಟ ೧ರಲ್ಲಿಯ ಕೆ.ಎನ್. ೩೧೯ನೇ ಶಾಸನದಲ್ಲಿರುವ ಕವಿ ವಿರೂಪಾಕ್ಷ ಪಂಡಿತ, ವಿವರಗಳೊಂದಿಗೆ ಈ ಶಾಸನದಲ್ಲಿ ಉಕ್ತವಾದ ೬೩ ಜನ ಋತ್ವಿಜರುಗಳು ಅವರ ಅರ್ಹತೆಗಳು ಗೋತ್ರಗಳು ಹಾಗೂ ಇತರೆ ವಿವರಗಳು ವಿಜಯನಗರದ ಹೊರನಾಡಿನ ಶಾಸನದ ಸಾಲಿನಲ್ಲಿ ಪ್ರಾಮುಖ್ಯತೆ ಪಡೆಯುತ್ತವೆ. ಈ ಶಾಸನದ ಬರವಣಿಗೆಯಲ್ಲಿ ವಿಶೇಷತೆ ಏನಿಲ್ಲವಾದರೂ ಅದು ೧೪ನೇ ಶತಮಾನದ ವಿಜಯನಗರ ಲಿಪಿಯನ್ನು ಹೋಲುತ್ತದೆ. ಶಾಸನವು ಸಾಹಿತ್ಯ ಅಂಶವನ್ನು ಒಳಗೊಂಡಿದ್ದು ಅದು ಅನುಷ್ಟುಪ್ ಛಂದಸ್ಸಿನಲ್ಲಿದೆ. ಪ್ರಾರಂಭದಲ್ಲಿ ಸರಸ್ವತಿ, ವಿಷ್ಣು ಶಿವ, ಪಾರ್ವತಿ, ಗಣಪತಿ, ಚಂದ್ರ, ಲಕ್ಷ್ಮಿ, ಅಮೃತ, ಕಾಮಧೇನು, ಶಿವ, ಪಶುಪತಿ, ಮೊದಲಾದ ದೇವತೆಗಳ ಪ್ರಾರ್ಥನೆಯೊಂದಿಗೆ ಪ್ರಾರಂಭವಾಗುತ್ತದೆ. ಶಾಸನದಲ್ಲಿ ಕವಿಯು ತನ್ನ ಮನೆದೇವರನ್ನು ತನಗೆ ಸಾಹಿತ್ಯದ ರಚನೆಯ ಶಕ್ತಿಯನ್ನು ಕೊಡುವಂತೆ ಪ್ರಾರ್ಥಿಸುತ್ತಾನೆ. ಶಿವನನ್ನು ಶಾಸ್ತ್ರ, ಆಗಮುಗಳ ಕರ್ತೃವೆಂದು ವರ್ಣಿಸುತ್ತಾನೆ. ಶಿವನಲ್ಲಿ ವಿಶೇಷವಾಗಿ ಆಶೀರ್ವಾದವನ್ನು ಬೇಡುತ್ತಾನೆ. ಇಲ್ಲಿ ಶಿವನನ್ನು ಕೆಂಪು ಬಣ್ಣದವನೆಂದೂ, ವಿರೂಪಾಕ್ಷನ ಅವತಾರವೆಂದೂ ಕರೆಯುತ್ತಾನೆ. ತದನಂತರದ ಸಾಲುಗಳಲ್ಲಿ ಇಂದು ವಂಶದ ಐತಿಹಾಸಿಕ ಘಟನೆಯನ್ನು ವಿವರಿಸುತ್ತಾನೆ. ಇದರಲ್ಲಿ

ಯದು, ಸಂಗಮ ನಂತರ ತೀರ ಬುಕ್ಕ ರಾಜನಾದ ಮಾಹಿತಿ ಇದೆ. ಮುಂದೆ ಬುಕ್ಕನ ಶೌರ್ಯ ಪರಾಕ್ರಮವನ್ನು ವಿವರಿಸಲಾಗಿದೆ. ಆತ ತನ್ನ ಹರಿತವಾದ ಖಡ್ಗದಿಂದ ಶತ್ರುಗಳನ್ನು ದರ್ಭೆಯನ್ನು ಕೊಯಿದ ರೀತಿಯಲ್ಲಿ ರಣರಂಗದಲ್ಲಿ ಕೊಲ್ಲುತ್ತಿದ್ದನೆಂದು ವಿವರಿಸಲಾಗಿದೆ. ಇವನ ಶೌರ್ಯ ಪರಾಕ್ರಮವನ್ನು ದಾವಾನಲ, ಸೂರ್ಯಕಾಂತ ವಜ್ರ ಮುಂತಾದವಕ್ಕೆ ಹೋಲಿಸಲಾಗಿದೆ. ನಂತರದಲ್ಲಿ ಬುಕ್ಕನ ಮಂತ್ರಿಯಾದ ಅನಂತರಸನ ವ್ಯಕ್ತಿತ್ವವನ್ನು ಹಾಗೂ ಆಡಳಿತದ ವೈಖರಿಯ ವಿವರಣೆ ಮಾಡಲಾಗಿದೆ. ಅನಂತರಸನು ಶತೃಗಳನ್ನು ಬೇಡರ ಬಲೆಯನ್ನು ಬೀಸಿ ಜಿಂಕೆಯನ್ನು ಹಿಡಿಯುುವ ಹಾಗೆ ಹಿಡಿಯುತ್ತಿದ್ದನೆಂಬುದಾಗಿ ವಿವರಿಸಲಾಗಿದೆ. ಮುಂದುವರೆದು ದೊರೆ ಬುಕ್ಕ ಆಡಳಿತದ ಕ್ಲಿಷ್ಟ ಸಮಸ್ಯೆಗಳನ್ನು ಮಂತ್ರಿಗೆ ವಹಿಸಿ ತನ್ನ ಹಸ್ತಿನಾಪುರದಲ್ಲಿ ತಾನು ಸುಖ ಸಂಕಥಾ ವಿನೋದದಿಂದ ನೆಮ್ಮದಿಯಿಂದ ಕಾಲಕಳೆಯುತ್ತಿದ್ದನೆಂದು ತಿಳಿಸುತ್ತಾನೆ. ಮುಂದೆ ಬುಕ್ಕನಿಗೆ ಹರಿಹರ ಜನಿಸಿದ ವಿವರಣೆ ಇದೆ. ಶಿವನಿಗೆ ತಾರಕಾಸುರ ಸಂಹಾರಿಯಾದ ಕೊಮಾರನ ಹಾಗೆ ಬುಕ್ಕನಿಗೆ ಹರಿಹರ ಜನಿಸಿದ್ದಾನೆ ಎಂಬುದಾಗಿಯೂ, ಬುಕ್ಕನನ್ನು ವಿಷ್ಣುವಿಗೂ ಹೋಲಿಸಿ ಹೇಳಲಾಗಿದೆ. ಮುಂದೆ ಹರಿಹರನ ಶಕ್ತಿ ಸಾಮರ್ಥ್ಯವನ್ನು ವರ್ಣಿಸಲಾಗಿದೆ. ಅವನ ಪ್ರಜೆಗಳು ಅವನನ್ನು ಚಂದ್ರನಿಗೆ ಸಮಾನನೆಂದು ಹೋಲಿಸಿ ಗಂಗೆ ಹೇಗೆ ಭೂಮಿಯನ್ನು ಪವಿತ್ರ ಮಾಡಿದ್ದಾಳೋ ಅದೇರೀತಿ ಹರಿಹರ ವಿದ್ವಾಂಸರನ್ನು ರಕ್ಷಿಸುತ್ತಿದ್ದನೆಂದು ವಿವರಿಸಲಾಗಿದೆ. ಹರಿಹರನ ಶೌರ್ಯ ಪರಾಕ್ರಮವನ್ನು ದಾವಾನಲ ಅಥವಾ ಕಲ್ಪಾನಲಕ್ಕೆ ಹೋಲಿಸಲಾಗಿದೆ. ಹರಿಹರ ತನ್ನ ಹರಿತವಾದ ಕತ್ತಿಯಿಂದ ಶತ್ರುರಾಜನನ್ನು ಧ್ವಂಸ ಮಾಡಿದ ವಿವರಣೆ ಹಾಗೂ ಅವನ ಖಡ್ಗವನ್ನು ವಿಷ್ಣುವಿನ ಖಡ್ಗವಾದ ನಂದಕಕ್ಕೆ ಹೋಲಿಸಲಾಗಿದೆ. ಆತನ ಹಸ್ತಗಳು ಕಲ್ಪವೃಕ್ಷ, ಕಾಮಧೇನುವನ್ನು ಬಹುಮಾನವಾಗಿ ಪಡೆದಿದ್ದವೆಂದು ಶಾಸನ ವಿವರಿಸುತ್ತದೆ. ಆತ ದಾನ ಕೊಡುವಾಗ ಮುತ್ತಾಗಿ ಮಾರ್ಪಟ್ಟು (ವೈದಿಕ ಬ್ರಾಹ್ಮಣರ ಕೈಲಿ) ನಂತರ ಅವು ಆನೆ ಕುದುರೆ ಮುಂತಾಗಿ ಮಾರ್ಪಡುತ್ತಿದ್ದವೆಂದು ತಿಳಿಸುತ್ತದೆ. ಮುಂದುವರೆದು ತನ್ನ ಮಗನ ಶೌರ್ಯ ಪರಾಕ್ರಮ ಯೋಗ್ಯತೆ ಮುಂತಾದನ್ನು ಗಮನಿಸಿದ ಬುಕ್ಕ ಹರಿಹರನಿಗೆ ಹಿಂದೂ ರಾಜ್ಯ ಸುರತ್ರಾಣವನ್ನು ನೀಡಿ ವಾನಪ್ರಸ್ಥದ ಕಡೆ ಗಮನ ಹರಿಸಿದನೆಂಬ ವಿಷಯ ಪ್ರಸ್ತಾಪಿಸ ಲಾಗಿದೆ. ಹಾಗೆಯೆ ಪೂರ್ಣ ದಿಕ್ಕಿನಲ್ಲಿ ಸೂರ್ಯ ಉದಯಿಸುವ ರೀತಿಯಲ್ಲಿ ಹರಿಹರ ಸಿಂಹಾಸನಾ ರೂಢನಾದ ವಿವರವಿದೆ. ಅನಂತರದಲ್ಲಿ ದಾನವನ್ನು ನೀಡಿದ, ಗ್ರಾಮ ಹಾಗೂ ಕಾಲದ ಬಗ್ಗೆ ವಿವರವಿದೆ. ಇದು ಶಕ ೧೨೯೮ ಅಂದರೆ ಕ್ರಿ.ಶ. ೧೩೭೬ರಲ್ಲಿ ಬರೆಸಿರುವುದಾಗಿ ತಿಳಿದುಬರುತ್ತದೆ. ಆ ದಿನ ಹರಿಹರನು ಕ್ರಾಕು ಗ್ರಾಮವನ್ನು ತನ್ನ ತಂದೆಗೆ ಪುಣ್ಯಸಿಗಲೆಂದು ಬ್ರಾಹ್ಮಣರಿಗೆ ದಾನ ನೀಡಿದ್ದಾಗಿದೆ. ಗ್ರಾಮದ ಸೀಮೆ ಅಥವಾ ಗಡಿಯನ್ನು ಅಲ್ಲಿ ದಾಖಲಿಸಲಾಗಿದೆ ಊರಿನ ಗಡಿಯ ವಿವರವೂ ಇಲ್ಲಿ ಬರುತ್ತದೆ.

ಗ್ರಾಮದ ಭೂಮಿಯನ್ನು ೬೪ ಭಾಗಗಳಾಗಿ (ಅಂಶ) ಮಾಡಿ ಬ್ರಾಹ್ಮಣರಿಗೆ ದಾನ ನೀಡಿದ್ದಾನೆ. ದಾನ ಪಡೆದ ಬ್ರಾಹ್ಮಣರ ಶಾಖೆ, ಗೋತ್ರ ವಿದ್ವಾಂಸರ ವ್ಯಕ್ತಿತ್ವ, ವಿದ್ಯಾಭ್ಯಾಸ ಮೊದಲಾದವುಗಳನ್ನು ಶಾಸನ ದಾಖಲಿಸುತ್ತದೆ. ೬೪ ಭಾಗಗಳಲ್ಲಿ : ೨೩ ೧/೨ ಭಾಗವನ್ನು ೨೪ ಋಗ್ವೇದ ಶಾಖಾ ಬ್ರಾಹ್ಮಣರಿಗೆ ೩೬ ೧/೨ ಭಾಗವನ್ನು ಯಜುರ್ವೇದ ಶಾಖಾ ಬ್ರಾಹ್ಮಣರಿಗೆ, ೨ ಭಾಗವನ್ನು ಸಾಮವೇದಿಗಳಿಗೆ, ಉಳಿದ ೨ ಭಾಗವನ್ನು ಗ್ರಾಮ ದೇವತೆಯಾದ ಕೇಶವ ಮತ್ತು ರಾಮೇಶ್ವರರಿಗೆ ನೀಡಿರುವುದನ್ನು ಹೇಳಲಾಗಿದೆ.

ಈ ಶಾಸನ ವಿಜಯನಗರ ಇತಿಹಾಸಕ್ಕೆ ಅತ್ಯಂತ ಅಮೂಲ್ಯವಾಗಿದೆ. ಅದರಲ್ಲಿ ಉಲ್ಲೇಖಿತ ಕಾಲಮಾನವೂ ೨.೨.೧೩೭೭ ಬುಧವಾರಕ್ಕೆ ಹೊಂದುತ್ತದೆ. (ಫಾಲ್ಗುಣ ಪ್ರಥಮ) ಬುಕ್ಕನ ಆಡಳಿತ ೧೩೭೭ಕ್ಕೆ ಕೊನೆಗೊಂಡ ಅಂಶ ಮತ್ತು ಇಮ್ಮಡಿ ಹರಿಹರನ ರಾಜ್ಯಭಾರ ಪ್ರಾರಂಭದ ಬಗ್ಗೆ ಖಚಿತ ಮಾಹಿತಿಯನ್ನು ಶಾಸನ ನೀಡುತ್ತದೆ. ಶಾಸನದ ಮತ್ತೊಂದು ಮಹತ್ವ ಹರಿಹರನ ಆಡಳಿತಾರಂಭ ಕಾಲ ಮತ್ತು ಬುಕ್ಕನ ಮರಣದ ವಿವರಣೆ ಈ ಶಾಸನದಿಂದ ತಿಳಿಯುತ್ತದೆ. ಶಾಸನ ಬುಕ್ಕ ಸತ್ತ ೧೨ನೇ ದಿನ ಕೊಟ್ಟಿದ್ದಾಗಿದೆ. ಈ ಶಾಸನದಲ್ಲಿ ಸಾಯಣಾಚಾರ್ಯನ ಉಲ್ಲೇಖವೂ ಮಹತ್ವದಲ್ಲಿ ಒಂದು. ಶಾಸನದಲ್ಲಿ ಉಲ್ಲೇಖಿಸಿರುವ ಪಾಕನಾಡು ಹಳ್ಳಿಯು ಈಗಲೂ ಆಂಧ್ರದ ನೆಲ್ಲೂರ್ ಜಿಲ್ಲೆಯಲ್ಲಿ ಬ್ರಾಹ್ಮಣ ಕ್ರಾಕು ಎಂಬ ಹೆಸರಿನಿಂದ ಅಸ್ತಿತ್ವದಲ್ಲಿದೆ. ಈ ಗ್ರಾಮ ಜಲದಂಕಿ ಗ್ರಾಮದ ದಕ್ಷಿಣದಲ್ಲಿದೆ. ಈ ಜಲದಂಕಿ ಎಂಬ ಗ್ರಾಮದಲ್ಲಿ ಈ ಶಾಸನ ದೊರೆತದ್ದಾಗಿದೆ. ಕ್ರಾಕು ಗ್ರಾಮವನ್ನು ಬುಕ್ಕರಾಯಪುರವೆಂದು ಪುನರ್ನಾಮಕರಣ ಮಾಡಲಾಗಿದೆ. ಶಾಸನದಲ್ಲಿ ಉಲ್ಲೇಖಿಸಿರುವ ಕಣುಮುಕುರಲಸ ಕಾಲುವೆ (ಚಾನಲ್) ಈಗಲೂ ಇಲ್ಲಿದ್ದು ಅದು ವಿಜಯನಗರ ಕಾಲದಲ್ಲಿಯೂ ಇತ್ತೆಂಬುದನ್ನು ಶಾಸನದಿಂದ ತಿಳಿಯಬಹುದಾಗಿದೆ[೪].

ಇದನ್ನು ಕನ್ನಡಿಗರಿಗೆ ಪರಿಚಯಿಸಲು ಪ್ರೋತ್ಸಾಹಿಸಿದ ಶ್ರೀ ಕೆಳದಿ ಗುಂಡಾ ಜೋಯಿಸ್‌ರಿಗೆ ಮತ್ತು ಶಾಸನ ಪ್ರತಿಯಲ್ಲಿ ಸಹಕರಿಸಿದ ಶ್ರೀ ಶರ್ಮರವರಿಗೆ ಕೃತಜ್ಞತೆಗಳು.

ಟಿಪ್ಪಣಿ

೧. ಪಾಂಡಿಚೇರಿ ಮ್ಯೂಜಿಯಂನಲ್ಲಿರುವ ವಿಜಯನಗರ ತಾಮ್ರಶಾಸನ, ಕೆಳದಿ ಗುಂಡಾ ಜೋಯಿಸ್, ವಿಜಯನಗರ ಅಧ್ಯಯನ ಸಂಪುಟ ೫ ಪ್ರಾ.ವ.ಸಂ.ನಿ, ಮೈಸೂರು, ಪುಟ ೭೬-೮೯.

೨. Nandi Nagari Script: Dr. Vishalakshi, p. 15 and 16; Lingustics Association, Triruvananthapuram, Kerala - 2003

Epigraphia Andhrika, Director of Archaeology and Museums, Govt of Andhra Pradesh, Vol 1, General Ediator; M.D. Abdul Waheed Khan, F.R.AS. London, Editor Venkataramanayya, M.A., ph.D. Dy. director: Epigraphy, II Plate xxxviii page 262-279.

೩. Vijayanagara Inscriptions: Vol I Ed: by Dr. B.R. Gopal, Published by Director of Archaeology and Museums, Government of Karnataka, Mysore.

The Histroy of Vijayanagara Empire, M.H. Rama Sharma, Bombay Popular prakashan 1978.

೪. ವಿಜಯನಗರಕಾಲದ ಘಟನಾವಳಿ ಸೂಚಿ - ಎಸ್.ರಾಜಶೇಖರ, ಸುಜಾತ ಪಬ್ಲಿಕೇಶನ್ಸ್, ಧಾರವಾಡ. ವಿಜಯನಗರ ಅಧ್ಯಯನ ಸಂಪುಟ ೫; ಹಂಪಿ ಉತ್ಸವ ೧೯೯೯ರಲ್ಲಿ ಮಂಡಿಸಿದ ಪ್ರಬಂಧಗಳು, ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ ಮೈಸೂರು ೨.

ಶಾಸನದಲ್ಲಿ ಕಂಡು ಬರುವ ವ್ಯಕ್ತಿನಾಮ, ಗೋತ್ರ, ವಿವರ, ದಾನಗಳ ವಿವರ ಮತ್ತು ವಿಶೇಷತೆ

ಸಂ	ಹೆಸರು	ತಂದೆಯ ಹೆಸರು	ಗೋತ್ರ	ದಾನ ವಿವರ	ಇತರೆ ವಿವರ
೧.	ರಾಯಪ್ಪ	ಬೊಮ್ಮರಸ	ಭಾರದ್ವಾಜ	೧. ಅಂಶ	ಮಹೌಜ, ಮನೆತನಕ್ಕೆ ಗೌರವ ತರುವವನು.
೨.	ಮಾಯಣ	ಅಪ್ಪನಾರ್ಯ	ವಿಶ್ವಾಮಿತ್ರ	೧. ಅಂಶ	ವೇದಾಂತ, ವ್ಯಾಕರಣ ಬಲ್ಲವ.
೩.	ಮಾಯನ	ದೇವನಾರ್ಯ	ಭಾರದ್ವಾಜ	೧. ಅಂಶ	ಕೋವಿದ.
೪.	ಪೆದ್ದಿಭಟ್ಟ	ಚೌಂಡಿಭಟ್ಟ	ಕಾಶ್ಯಪ	೧. ಅಂಶ	ವ್ಯಾಕರಣ ಪಂಡಿತ, ಋಗ್ವೇದ ಅಭ್ಯಾಸಿ
೫.	ರಾಮ	ರಾಮಯಾರ್ಯ	ಭಾರದ್ವಾಜ	೧. ಅಂಶ	ಲಕ್ಷಣ, ಋಗ್ವೇದ ಅರಿತವ
೬.	ಚೌಂಢಯರಾಯ	ಸೋಮಸೂರಿ	ಭಾರದ್ವಾಜ	೧. ಅಂಶ	ಋಗ್ವೇದ, ಸ್ಮಾರ್ತ ಬಲ್ಲವ
೭.	ಕೇಶವ	ಕೊರವಪ್ಪಯ್ಯ	ಅತ್ರೇಯ	೧. ಅಂಶ	ಋಕ್ ಮಾಹಿತಿ ನೀಡುವವ
೮.	ತಿಪ್ಪಯ್ಯ	ಮಾಧವಾರ್ಯ	ಗೌತಮ	೧. ಅಂಶ	ಋಕ್ ಮಾಹಿತಿ ನೀಡುವವ
೯.	ಸಿಂಗಯ	ಕೇಶವಾರ್ಯ	ಆಂಗೀರಸ	೧. ಅಂಶ	ಋಗ್ವೇದ ಪಾರಂಗತ
೧೦.	ಕಲ್ಲಿದೇವ	ವಿಷ್ಣುಭಟ್ಟ	ವಿಶ್ವಾಮಿತ್ರ	೧. ಅಂಶ	ಋಗ್ವೇದ ಪಾರಂಗತ, ಒಳ್ಳೆಯ ವ್ಯಕ್ತಿ
೧೧.	ಹೊನ್ನಪ್ಪಾರ್ಯ	ಸಾಯಪಾರಾಯ	ಶ್ರೀವತ್ಸ	೧. ಅಂಶ	ಋಗ್ವೇದ ಪಾರಂಗತ, ವೇದಾಂತಾಭ್ಯಾಸ
೧೨.	ಚಂದ್ರಸೂರಿ	ವಿಧ್ಯಾಧರ	ಕಾಶ್ಯಪ	೧. ಅಂಶ	ಪ್ರಧಾನಾಮ್ನಾಯ ಬಲ್ಲವ
೧೩.	ಪೊಚನರಾಯ	ಸಿಂಗಯಾರ್ಯ	ಭಾರದ್ವಾಜ	೧. ಅಂಶ	ಕರುಣೆ ಇರುವವನು

೧೪.	ನೃಹರಿ	ಪಿನ್ನಯಾರ್ಯ	ವಸಿಷ್ಠ	೧. ಅಂಶ	ಋಗ್ವೇದ ಪಾರಂಗತ, ನರಹರಿ ಭಕ್ತ
೧೫.	ಭೈವರಸ	ಪೆದ್ದಿಸುರಿ	ಗೌತಮ	೧. ಅಂಶ	ಋಗ್ವೇದದಲ್ಲಿಮೊದಲಿಗ, ವಿಧಾನ ಬಲ್ಲವ
೧೬.	ಶಿಂಗಯ	ಭೈರವಾರ್ಯ	ಕೌಂಡಿನ್ಯ	೧. ಅಂಶ	ಋಗ್ವೇದ ಬಲ್ಲವ, ಶ್ರೌತ, ಸ್ಮಾರ್ತ ಬಲ್ಲವ
೧೭.	ಜನ್ನಪ್ಪ	ಚೌಂಡಿಭಟ್ಟ	ವಿಶ್ವಾಮಿತ್ರ	೧. ಅಂಶ	ವಿಧಿ ಬಲ್ಲವ
೧೮.	ಶಿಂಗಯ	ಪಪ್ಪುವಿಠ್ಠಲ	ಕಾಶ್ಯಪ	೧. ಅಂಶ	ಋಗ್ವೇದ ಪಾರಂಗತ
೧೯.	ಅನ್ನಯ	ಅನ್ನಾರ್ಯ	ವಿಶ್ವಾಮಿತ್ರ	೧. ಅಂಶ	ಋಕ್ ಮತ್ತು ವಿಧಾನ ಪಾರಂಗತ
೨೦.	ನರಸಿಂಹ	ನಾರಾಯಣ	ಆತ್ರೇಯ	೧. ಅಂಶ	ಋಗ್ವೇದ ಪಾರಂಗತ
೨೧.	ಅಪ್ಪಯ್ಯ	ಪೋಚನಾರ್ಯ	ಭಾರದ್ವಾಜ	೧. ಅಂಶ	ಪ್ರಥಮಾಮ್ನಾಯ ಅಭ್ಯಾಸಿ
೨೨.	ದೇವನಾರ್ಯ	ನಾದಪಾರ್ಯ	ಶ್ರೀವತ್ಸ	೧. ಅಂಶ	ಶ್ರೇಯನಿಧಿ, ಋಗ್ವೇದ, ಸ್ಮಾರ್ತ ಬಲ್ಲವ
೨೩.	ಪಯಸಂ ಪೆದ್ದಿಸೂರಿ	ಚೌಂಡಯಾರ್ಯ	ಕಾಶ್ಯಪ	೧. ಅಂಶ	ಋಗ್ವೇದ ಅಂಗಗಳ ಅಭ್ಯಾಸಿ
೨೪.	ರಾಮಪ್ಪ	ಗೋಪಾಲಸೂರಿ	ಮೌದ್ಗಲ್ಯ	೧. ಅಂಶ	ಋಗ್ವೇದ ಪಾರಂಗತ.
೨೫.	ಸಾಯಾಣಾಚಾರ್ಯ	ಮಾಯಣಾಚಾರ್ಯ	ಭಾರದ್ವಾಜ	೧. ಅಂಶ	ವೇದಭಾಷ, ಯಜುರ್ವೇದ ಪಾರಂಗತ
೨೬.	ವಿಶ್ವೇಶ್ವರ	ಸುರಸುರೀಂದ್ರ	ಅತ್ರೇಯ	೧. ಅಂಶ	ಪದವಾಕ್ಯ ಪ್ರಮಾಣ ಬಲ್ಲವ
೨೭.	ರಾಮಚಂದ್ರ	ಕುಚಿಭಟ್ಟ	ಕಾಶ್ಯಪ	೧. ಅಂಶ	ತರ್ಕ, ತಂತ್ರ ತ್ರಿಕಾಂಡಿಯಲ್ಲಿ ಪವೀಣ

೨೮.	ನ್ರಿಹರಿ	ನಂದೀಸೂರಿ	ಕೌಶಿಕ	೧. ಅಂಶ	ಅದ್ವೈತ, ದ್ವೈತ, ಯಜುರ್ವೇದ ಪಾರಂಗತ
೨೯.	ರೆಲ್ಲಯ	ಸೂರೀಭಟ್ಟ	ಹಾರಿತ	೧. ಅಂಶ	ಯಜುರ್ವೇದ, ಶ್ರೌತ, ಸ್ಮಾರ್ತದಲ್ಲಿ ಪ್ರವೀಣ
೩೦.	ರಾಮಚಂದ್ರಾರ್ಯ	ನಾಗದೇವರಾಯ	ಭಾರದ್ವಾಜ	೧. ಅಂಶ	ಅಚಲಾನಂದ ಯಜುನಲ್ಲಿ ಪ್ರವೀಣ
೩೧.	ಶ್ರೀಗಿರಿ	ಶ್ರೀವಲ್ಲಭ	ಶ್ರೀವತ್ಸ	೧. ಅಂಶ	ಆಯುರ್ವೇದ, ಯಜುರ್ವೇದ ಪಾರಂಗತ
೩೨.	ನರಹರಿ	ಬೋದಯನಹರಿ	ಜಾಮದಗ್ನಿ	೧. ಅಂಶ	ಯಜುರಾಮ್ನಾಯದಲ್ಲಿ ಪ್ರವೀಣ
೩೩.	ಮಲ್ಲಯ	ವಿಶ್ವನಾಥ	ಗಾರ್ಗಿ	೧. ಅಂಶ	ಜ್ಯೋತಿಷ್ಯ, ಯಜುರ್ವೇದ ಪಾರಂಗತ
೩೪.	ಅನಂತ	ಅನ್ನಯಾರ್ಯ	ಕೌಶಿಕ	೧. ಅಂಶ	ಕಲಾನಿಧಿ ಮತ್ತು ವಿದ್ವಾನ್
೩೫.	ಸೂರ್ಯಾರ್ಯ	ತಿಪ್ಪನಾರ್ಯ	ಶಾಲಂಕಾಯಣ	೧. ಅಂಶ	ಶ್ರೌತ, ಸ್ಮಾರ್ತದಲ್ಲಿ ಪಾರಂಗತ
೩೬.	ಮಾಧವದೀಕ್ಷಿತ	ಸುರ್ಯಾರ್ಯ	ಭಾರದ್ವಾಜ	೧. ಅಂಶ	ಸೂರ್ಯಸಿದ್ಧಾಂತದಲ್ಲಿ ಪ್ರವೀಣ.
೩೭.	ಲಕ್ಕಪ್ಪ	ವಿಠ್ಠಪ್ಪ	ಭಾರದ್ವಾಜ	೧. ಅಂಶ	ಆಚಾರ್ಯ ಮತ್ತು ವಿದ್ವಾನ್
೩೮.	ಮಾಧವದೀಕ್ಷಿತ	ಅನ್ನಯಾರ್ಯ	ಹಾರಿತ	೧. ಅಂಶ	ಸ್ಮಾರ್ತ, ಶ್ರೌತದಲ್ಲಿ ಪಾರಂಗತ
೩೯.	ನೃಸಿಂಹಾರ್ಯ	ಶ್ರೀಕೇಸರಿ	ಕಾಶ್ಯಪ	೧. ಅಂಶ	ಯಜುರ್ವೇದ, ವೇದಾಂತ ಹಾಡುವವನು
೪೦.	ಭಾಸ್ಕರ	ಉಪ್ಪಯಭಟ್ಟ	ಕೌಶಿಕ	೧. ಅಂಶ	ತರ್ಕ, ತಂತ್ರ, ಯಜುರ್ವೇದ ಪಾರಂಗತ
೪೧.	ಪೋಚನ	ಮಂಚಯಾರ್ಯ	ಹಾರಿತ	೧. ಅಂಶ	ಸಿದ್ಧಾಂತವನ್ನು ತಿಳಿದವ
೪೨.	ಅನಂತಾರ್ಯ	ಪೆರುಮಾಡಿ	ಶ್ರೀವತ್ಸ	೧. ಅಂಶ	ಯಜುರ್ವೇದ ಶ್ರೌತ ಪಾರಂಗತ

೪೩.	ಪತಿಸುರಿ	ಜಕ್ಕಯಾರ್ಯ	ಶ್ರೀವತ್ಸ	೧. ಅಂಶ	ಶಾಬ್ದಿಕದಲ್ಲಿ ಮೊದಲಿಗ
೪೪.	ಕಾಮದೇವರಾಯ	ಅಪ್ಪಯಾರ್ಯ	ಹಾರಿತ	೧. ಅಂಶ	ಯಜುರ್ವೇದ ಪಾರಂಗತ
೪೫.	ನಿಟ್ಟಸಿಂಗಯ	ಪೋಚನಾರ್ಯ	ಹಾರಿತ	೧. ಅಂಶ	ಯಜುರ್ವೇದ ಮತ್ತು ಅದರ ಅಂಗ ಅಭ್ಯಾಸಿ
೪೬.	ಪೆದ್ದಿಸುರಿ	ಗೋವಿಂದಾರ್ಯ	ಹಾರಿತ	೧. ಅಂಶ	ಉತ್ತಮ ಗುಣವುಳ್ಳವನು
೪೭.	ಮಲ್ಲಿಕಾರ್ಜುನ	ಲಕ್ಕಯಾರ್ಯ	ಕೌಶಿಕ	೧. ಅಂಶ	ಯಜುರ್ವೇದಿ
೪೮.	ಕಾಮಯಾರ್ಯ	ಸಿಂಗಯಾರ್ಯ	ಭಾರದ್ವಾಜ	೧. ಅಂಶ	ಶಾಂತಿ ಮತ್ತು ಪುಣ್ಯ ಬಗೆ ತಿಳಿದವ
೪೯.	ಅಯ್ಯಲು	ಮುಮ್ಮಡಿಭಟ್ಟ	ಅತ್ರೇಯ	೧. ಅಂಶ	ಅಂಗ, ಕಲಾ ಜೊತೆಗೆ ಯಜುರ್ವೇದ ಅಭ್ಯಾಸಿ
೫೦.	ಮಲ್ಲಯ್ಯ	ಗಂಗಾಧರ	ಕಾಶ್ಯಪ	೧. ಅಂಶ	ಜ್ಯೋತಿಷ್ಯ ಬಲ್ಲವ
೫೧.	ನ್ರಿಹರಿ	ಕೇದರಾರ್ಯ	ಶ್ರೀವತ್ಸ	೧. ಅಂಶ	ಯಜುರ್ವೇದ, ಅದ್ವೈತ, ದ್ವೈತ ಪಾರಂಗತ
೫೨.	ಶಿಂಗಯಾರ್ಯ	ವಿಶ್ವನಾಥ	ಭಾರದ್ವಾಜ	೧. ಅಂಶ	ಯಜುರ್ವೇದ ಬಲ್ಲವ
೫೩.	ಅಣ್ಣಯಾರ್ಯ	ದೇವರಾರ್ಯ	ಪರಾಶರ	೧. ಅಂಶ	ಯಜುರಾಗಮ ಅಭ್ಯಾಸಿ
೫೪.	ಅಹೋಬಲರಾಯ	ರಾಮಸೂರಿ	ಸಲ	೧. ಅಂಶ	ಸಾಮ ತಂತ್ರ ಯಜುರ್ವೇದ ಅಭ್ಯಾಸಿ
೫೫.	ಭೈರವ	ಭೀಮಾರ್ಯ	ಗೌತಮ	೧. ಅಂಶ	ಮಂತ್ರ, ಯಜುರ್ವೇದ ಅಭ್ಯಾಸಿ
೫೬.	ಶಿಂಗಾರ್ಯ	ಕುಕ್ಕುಟ್ಟಪ್ಪಯ	ಭಾರದ್ವಾಜ	೧. ಅಂಶ	ಸಭಾಶಾಸ್ತ್ರ ಬಲ್ಲವ
೫೭.	ಅಪ್ಪಯ್ಯಭಟ್ಟ	ಪೆಮ್ಮಯಾರ್ಯ	ಶ್ರೀವತ್ಸ	೧. ಅಂಶ	ಆಗಮದ ವಿವಿಧತೆ ಬಲ್ಲವ

೫೮.	ನರಹರಿ	ಅಪ್ಪಯಾರ್ಯ	ಆತ್ರೇಯ	೧. ಅಂಶ	ಜ್ಯೋತಿಷ ಬಲ್ಲವ
೫೯.	ಅಣ್ಣಯ್ಯ	ಮಲ್ಲಯಾರ್ಯ	ಶಾಂಡಿಲ್ಯ	೧. ಅಂಶ	ಕವೀಶ್ವರ, ಯಜುರ್ವೇದ ಪ್ರಮುಖ
೬೦.	ಪೊಚನ	ಅಧಿತ್ಯಸೂರಿ	ಶ್ರೀವತ್ಸ	೧. ಅಂಶ	ಕವೀಶ್ವರ, ಯಜುರ್ವೇದ ಪಾರಂಗತ
೬೧.	ಬೊಮಬಳಕಂತಿ	ನಾಗದೇವ	ಹಾರಿತ	೧. ಅಂಶ	ತಾಂತ್ರಿಕ, ತಾರ್ಕಿಕ, ಯಜುರ್ವೇದ ಪಾರಂಗತ
೬೨.	ವಾಸುದೇವ	ಶಲ್ಲರುರಾಯ	ಗೌತಮ	೧. ಅಂಶ	ತಂತ್ರ, ಸಾಮದೇವ ಪಾರಂಗತ
೬೩.	ಶ್ರೀ ವಿಠ್ಠಲ	ಶಲ್ಲರುರಾಯ	ಗೌತಮ	೧. ಅಂಶ	ವಾಸುದೇವನ ಸಹೋದರ ಸಾಮವೇದ ಮತ್ತು ತಂತ್ರಪಾರಂಗತ
೬೪.	ದೇವರುಗಳು				
	ಗ್ರಾಮದೇವರು	ಕೇಶವಸ್ವಾಮಿ	೧. ಅಂಶ		
		ರಾಮೇಶ್ವರ	೧. ಅಂಶ		

ಶಾಸನ ಪಾಠ

೧. ಯಾ ಸಾಹಿತ್ಯ ಲತಾಕಂದಂ ಯಾ ಸಂಗೀತಸುಧಾಸ್ಪದಂ (ಮಾ) ।

೨. ಯಾ ಪದಂ ಸಂಪದಾಂ ನಿತ್ಯಂ ಸಾಮಾಂ ಪಾತು ಸರಸತೀ ॥

೩. ಯದ್ಧಂತಕಾಂತಿರನೀ ಮವಲಂಬಮಾನಾ ಕಾದಂಬರಿನಿ ಮಿವ ತ

೪. ಟಿಲ್ಲತಿಕಾ ವಿಭಾತಿ । ಪಾಯಾದ್ವರಾಹ ವಪುಶಾಪರಿದೀ

೫. ಪ್ಯಮಾನಂ ಪದ್ಮಾಪತೇಸ್ತದಿದ ಮುಚ್ಚತರಂ ಸ್ವರೂಪಂ (ಮ್) ॥ ಯಸ್ಯಾಚ್ಛದಂ

೬. ತ ಮುಕುಲ ಪ್ರತಿವಿಂವಿತಾನಿ ಸಂಬೊರ್ಮುಖಾನಿ ಸಮುದೀಕ್ಷ ಗೀ

೭. ರಿಂದ್ರಕನ್ಯಾ । ಭಾತೀತಿ ಪಂಚಕಮಲೀ ಸರದ್ವಿದು ಗರ್ಬೆ ಸಂಮೊ

೮. ದತೇ ಪ್ರತಿಕಲಂ ಸ ಗಜಾನನೊವ್ಯಾತ್ ॥ ಲಕ್ಷ್ಮೀಸುಧಾಸರ

೯. ಭಿಕೌಸ್ತುಭಕಲ್ಪಬೂಜಬ್ರಾತ ಸ್ಸುಧಾಕರ ಕರಸ್ಫುರಣಾ

೧೦. ಭಿರಾಮ । ಚಂದ್ರತ್ವದೀಯ ವಪುರೇಧಿತ ಸರ್ವಲೊಕಂ ಚೂಡಾಮಣಿ

೧೧. :ಪಶುಪತೆ ರವತಾನ್ನಿತಾಂತಂ (ಮ್) ಯಾ ಶಾಲಿಮಂಜರಿಕಯಾಂಚಿ

೧೨. ತಪಾಣಿಪದ್ಮಾಯಾ ಜೀವಜೀವನಕಲಾ ಸಕಲಾತ್ಮಿಕಾಯಾ

೧೩. ಯಾಂತಃ ಸ್ಫುರ ತ್ತಟಿದಿತಿ ಪ್ರವಿಬೌವ್ಯ ಮಾನಾ ಸಾಂನ್ನಿದ್ಯ ಮಾವ

೧೪. ಹತು ಸಾ ಸರಸಾನುಬಂಧಂ (ಮ್) ಆಧರ ಕಂದಮಖಿಲಾಗಮವ

೧೫. ಲ್ಲಾರೀಣಾ ಮಾಕ್ರೀಡಭೂಮಿಲ್ರಮಿತಾರ್ಯ ಪದದ್ರುಮಾಣಾಂ (ಮ್) ಆರಕ್ತ

೧೬. ಕಾಂತಿ ರಗಜಾಪತಿ ರಬ್ಜಮೌಲಿಕಾಕಲ್ಪ ಮಾಕಲಯತಾದ

೧೭. ವನೀಮನಂತಾಂ (ಮ್) ॥ ಅಸ್ತಿ ಪ್ರಶಸ್ತಿ ಚರಿತೊಯದ್ಯರಿಂದು ವಂಶೇ ವಂಶೇ

೧೮. ಸ್ಯ ಸಂಗಮ ಮಹೀಪತಿ ರಾವಿರಾಸೀತ್ । ತಸ್ಮಾದಶೇಶ ಧರಣೀ ।

೧೯. ಭರಣಾರ್ಹಭಾಹುಃ ಶ್ರೀ ವೀರಭುಕ್ಕನೃಪತಿ ನೃಪತೀಂದುರಾಸೀತ್ ॥

೨೦. ಯಸ್ಯಾಸಿದೇನು ರಸಿತಾ । ಸಿಶಿತಾಗ್ರಧಾರಾ ಸಂಗ್ರಾಮಸೀಪ್ನಿರಿಪು

೨೧. ಜೀವತೃಣಾಂಕುರಾಣಿ। ಆಘ್ರಾಯ ಸರ್ವಭುವನೇಷು ಮುಹುರ್ದುರ್ಹಾನಾಕ್ಷೀ

೨೨. ರಂಯಶಾಂ ಸ್ಯಹಃ ಸಂಚರತೇ ವೃಶೇಣ ॥ ಕಾಂತಾರ ಸೀಮನಿದವಾನ

೨೩. ಲ ಮದ್ರಿಶ್ರಂಗೇಮಾರ್ತಂಡಕಾಂತದಹನಂ ಲವಣಾಂಬುರಾಶೌ। ಅ(ಔ)

೨೪. ರ್ವಾನಿಲಂ ಚ ರಿಪವಃ ಪರಿವೀಕ್ಷ್ಯತತ್ರ ತತ್ರ ಭ್ರಮಂತ್ಯಹಹ ಶಂ

೨೫. ಕಿತ ಯತ್ ಪ್ರತಾಪಾ॥ ತಸ್ಯ ಪ್ರಬೂತ ಮಹಿಮಾ

೨೬. ನೃಪನೀತಿಮೂರ್ತಿಃ ಕೀರ್ತಿಪ್ರತಾಪ ಪರಿಪೂರಿತ ಭೂ

೨೭. ನಭೋಂತಃ। ಸರ್ವೋಪಧಾ ಸ್ಚತಿ ವಿಶುದ್ಧ ಮತಿಪ್ರಸಾರ

೨೮. ಶ್ರೀಮಾನನಂತರಸ ಅವಿರಭೂತ್ ಪ್ರಧಾನಂ(ಮ್)॥ ಯನ್ನೀತಿವಾಗು

೨೯. ರಿಕ ಯಾರಿಮೃಗಾಗೃಹೀತಾ ಸ್ವಾಂ ಸ್ವಾಂಮಹೀಮಭಿನವಾ ಮಭಿತ

೩೦. ಸ್ತ್ಯಜಂತಿ। ಯತ್ಪಾದಪೀಠ ಗರುಡೋಪಲಕಾಂತಿಜಾಲದೂರ್ವಾಂಕುರ

೩೧. ನನುತ ಏವ ಪುನಶ್ಚರಂತಿ॥ ತಸ್ಮಿನ್ ಪ್ರಧಾನ ತಿಲಕೇ ಖಿಲಸಿದ್ದ (ಮಂ)

೩೨. ತ್ರೇ ಭಾರಂಭುವಃ ಪರಿನಿಧಾಯಸ ಬುಕ್ಕಭೂಪಃ ಅಧ್ಯಾಸ್ಯ

೩೩. ಹಸ್ತಿನಗರಂ ನಗರಾವತಂಸಂ ವೀರಪ್ರಯಾಸಂಹ ಸಮಸ್ತಸುಖಾ

೩೪. ನ್ಯಯುಂಕ್ತ ॥ ವೀರಾರಿಹಾ ಹರಿಹರೊ ಧರಣೀಶ್ವರೊ ಭೂತ್ತಸ್ಮಾತ್ಕುಮಾ

೩೫. ರ ಇವ ತಾರಕಜಿ ನ್ಮಹೇಶಾತ್। ಯೋ ದಾನವಾರಿರಿವ ರಾಜತಿ ಶಂ

೩೬. ಖಚಕ್ರ ಪಾಣಿರ್ಮಹೇಂದ್ರ ಇವಸಾಂಕುಶವಜ್ರಪಾಣಿ॥ ಕಿಂಚಂದ್ರಮಾಃಪ್ರ

೩೭. ತಿಕಲಂ ವಿಬುಧಾಂಧಿನೋತಿ ಕಿಂ ಜಾಹ್ನವೀ ಕಲಯತೇ ವಿಮಲಂ ಸಮಸ್ತಂ (ಮ್)

೩೮. ಕಿಂ ಕ್ಷೀರವೀರಿನಿಧಿರಾತನುತೇ ಪ್ರಮೋದಂ ಲಕ್ಷ್ಮೀಪತೇ ರಿತಿಯದೀಯ

೩೯. ಯಶಸ್ತುವಂತಿ॥ ದಾವಾನಲಃ ಕಿಮುತವಾವಡವಾನಲೋವಾಕಲ್ಪಾನಲೋ

೪೦. ಯಮಿತಿಶಾತ್ರವ ಭೂಮಿಪಾಲ್ಯೈಃ । ದಂದಹ್ಯಮಾನ ಹೃದಯ್ಯೈಃ ಪ್ರವಿತರ್ಕ್ಯಮಾ

೪೧. ಣೋ ಯಸ್ಯ ಪ್ರತಾಪತಪನಃ ಪರಿತೋವಿಭಾತಿಃ ॥ ಯಸ್ಯಾಸಿರುಗ್ರಮ

೪೨. ಹಿಮಾ ಬಹುಶೋರಣೇಷುಹತ್ವಾಸಪತ್ನ ನಿಕರಾನಥನಂದಕೊಭೂತ್ ।

೪೩. ಪಾಣಿಸ್ತು ದೈವತತರೂನ್ಸಹ ಕಾಮದೇನುನ್ಸಿತ್ವಾಮುಕುಂದ ಚರಿತಂ ನಿತರಾ

೪೪. ಮಯಾಸೀತ್ ॥ ಯದ್ದಾನವಾರಿಪೃಷತಾ ವಿದುಷಾಂಕರೇಷುಮುಕ್ತಾಫಲಂ

೪೫. ತಿರಥಹಸ್ತಿ ತುರಂಗಮಂತಿ। ರತ್ನಾನಿ ಭೂರಿಕನಕಾಮರ ಭೂರುಹಂತಿ

೪೬. ಧೇನ್ವಾದಿ ಧಾನ್ಯ ಮಣಿಮಂದಿರ ವಿಭ್ರಮಂತಿತಂ ಹಿಂದುರಾಯ ಸುರತ್ರಾ

೪೭. ಣ ಮಖಂಡಶೌರ್ಯ ಮಾತ್ಮೋದ್ಭವಂ ಹರಿಹರಂ ಧರಮೀಶತಾರ್ಹಂ (ಮ್) ವಿಜ್ಞಾ

೪೮. ಯ ಬುಕಧರಣೀಪತಿರಾತ್ಮ ನೈವಸ್ವಂ ಧರ್ಮಸಂಚಯಮಸಾವ

೪೯. ನು ಬೊಕ್ತು ವೈಭತ್ ।। ತೇನ ಕ್ಷಿತೀಂದ್ರ ತಿಲಕೇನ ಕೃತಾಭಿಷೇಕ

೫೦. ಸ್ಸಿಂಹಾಸನಂ ಜಯರಮಾಜನನ ಪ್ರಧಾನಂ (ಮ್) ಆರುಹ್ಯ ರೋಹಣ

೫೧. ಗಿರಿಂ ದ್ಯುಮಣೀರ್ಯಥಾ ಸೌ ಬೂರಂಜನಂ ಹರಿಹರೊ ವಿಜಯಂ ಚ ಧ

೫೨. ತ್ತೇ।। ಶಾಕೇಶ್ವನಂದದಿನಕೃದ್ ಗಣಿತೇ ೧೨೯೮ ನಲೇಬ್ದೇ ಸಾರೇತಿ

೫೩. (ಧೌ) ಪ್ರಥಮಕೇ ಬಹುಲೇ ತಪಸ್ಯೇ ಕ್ರಾಕುಂ ಫಲಾಂಚಿತ ಮುದಂಚಿತ ಮಗ್ರಹಾ

೫೪. ರಂ ಮುಕ್ತ್ಯೈಪಿತು ಹರಿಹರೊ ಯ ಮದಾ(ದ್) ದ್ವಿಜೆಭ್ಯಃ।। ಯಃ

೫೫. ಪಾಕನಾಟಿ ವಿಷಯೇ ಸವಿಧೇಪಯೋಧೇ ಕ್ರಾಕುರ್ವಿ

೫೬. ಭಾತಿ ಫಲಿತೋ ಜಲದಂಕಿಯಾಮ್ಯೇ। ಶ್ರೀ ಬುಕ್ಕರಾಯ ಪು

೫೭. ರ ಮಾಹ್ವಯತೋವಿಧಾಯ ಸದ್ವಿಪ್ರಸಾದಕೃತತಂ ಸಹಸರ್ವಭೋಗ್ಯೈಃ।।

೫೮. ಅಥಸೀಮಾಃ ಪ್ರವಕ್ಷ್ಯಂತೇ ಗ್ರಾಮ ಸ್ವಾಸ್ಯ ಚಿರಂಭವಾಃ।ಪಾಂತುರಾಯ

೫೯. ರ್ಜಮ್ಮಿ ಮಂಗುಹ ಪುಟ್ಟಶ್ಚೋಪ್ಪಿಪೋದಾನ್ವಿತಃ ।। ಕನುಮ(ರ್ಲ)ಕಾಲುವಾ ಪ್ರಾಚ್ಯಾ

೬೦. ಮಾಗ್ನೆಯ್ಯಾಂ ವೀಡಲಿಹ್ರದ। ದಿ ಸ್ಯವಾಚ್ಯಾಂ ನಿಲ್ಪುರಾಯದಿರ್ನ್ನೋದೋಯ

೬೧. ಲ ಸಂಜ್ಞಕಃ ನಕ್ಕಲೋಪಪದೋ ಗಟ್ಟು ರ್ನಿಲ್ಪುರಾಯಿಶ್ಚಕೀರ್ತಿತಃ। ನೈ

೬೨. ರೃತ್ಯಾಂ ಕುಡುಮುರಾಲ ಗಟ್ಟುಶ್ಚಿರತರೋ ಮತಃ।- ಪ್ರತೀಚ್ಯಾಂ ವೀಡಲೀ ವೆಂ

೬೩. ಚಃ ಕುಂಚಃ ಕಲವುಲಾಹ್ವಯಃ । ಚೀಕಿರೇಂಗುಲ ಕುಂಟಶ್ಚ ಕುಂಟಃ ಕೇಣ್ ದುಲ್ಲ್ನ।।

೬೪. ಸಂಜ್ಞಕಃ ।। ತಥಾಮ್ರೋತುಗ್ರಮಾಗುಶ್ಚವಾಯವ್ಯಾಂಕಾಮಸಾಗರಃ।

೬೫. ಕಟ್ಟಃ ಕಾಮಸಮುದ್ರಸ್ಯ ವಿಶೃತೋ ರೆಂಟಕುಂಟಲುಃ।। ಆರಿಕುಂಡಂ ಚೋ

೬೬. ದ್ವಿಮಂಗುರುದೀಬ್ಯಾಮುರರೀಕೃತಃ । ಐಶಾನ್ಯಾಂ ಬೋಲ್ಲಪೋತಾಯ
೬೭. ಕುಂಟಃ ಪ್ರಾಕ್ತನ ಸಂವತಃ ॥ ಗಜೇಂದ್ರೈರಷ್ಟಭಿರಿವ ಧ್ರಿಯಮಾಣಾ
೬೮. ವಸುಂಧರಾ । ಸಹಸೀಮಭಿರಷ್ಟಾಭಿರ್ದಿಗ್ಭಿರ್ಗ್ರಾಮಃ ಪ್ರಕಾಶತೇ ॥
೬೯. ಅಂಶಾಸ್ತತ್ರಚತುಃ ಷಷ್ಟಿಸ್ತೇನಾಕಲ್ಪ್ಯಂತ ಭೂಭುಜಾ । ಅಂಶಾಧೀಶಾಃ
೭೦. ಪ್ರವಕ್ಷ್ಯಂತೇ ಶಾಖಾ ಗೋತ್ರಾಹ್ವಯಾನ್ವಿತಂ (ಮ್) ॥ ಮಹೌಜಾ ಮೇರುವದ್ವೀರೊ ಮಾ
೭೧. ನೀ ಬೊಮ್ಮರಸಾತ್ಮಜಃ । ಋಗ್ವೇದೀರಾಯಪಾಮಾತ್ಯೋ ಭಾರದ್ವಾಜಾನ್ವ
೭೨. ಯಾಗ್ರಣೀ ॥ ವೇದಾಂತ ವ್ಯಾಕೃತಿಸ್ಥಾನಮಪ್ಪಣಾರ್ಯ ತನೂಭವಃ । ಋ
೭೩. ಗ್ವೇದೀ ಮಾಯಣಸುಧೀರ್ವಿಶ್ವಾಮಿತ್ರಸ್ಯ ಗೋತ್ರಜ ॥ ಪ್ರಥಮಾಮ್ನಾಯ ಪಾ
೭೪. ರೀಣಃ ಪ್ರಶಮಾಭರಣಾನ್ವಿತಃ । ಭಾದ್ವಾಜೋ ದೇವಣಾರ್ಯರುತೋ ಮಾ
೭೫. ಯಣ ಕೋವಿದಃ ॥ ಯಃ ಶಾಬ್ದಿಕಾಗ್ರಣೀಸ್ತರ್ಕ ವಿದ್ಯಾಮೂಲಮೃಚಾಂ
೭೬. ಪದಂ (ಮ್) ಕಾಶ್ಯಪಃ ಪೆದ್ದಿಭಟ್ಟೋಸೌ ಚೌಂಡಿಭಟ್ಟತನೂಭವಃ ॥ ಋಗ್ವೇದೀ
೭೭. ತದ್ವಿಧಾನಜ್ಞಸ್ತಲ್ಲಕ್ಷಣ ವಿಹಾರಭೂಃ । ರಾಮಯಾರ್ಯಸುತೋರಾಮೋ
೭೮. ಭರದ್ವಾಜನ್ವಯೋದಯಃ ॥ ಋಗ್ವೇದ ಜನ್ಮಭವನಂ ಭವನಂ ಸ್ಮಾ
೭೯. ರ್ತ ಸಂಪದಾ (ಮ್) ಭರದ್ವಾಜಶ್ಚೌಂಡಯಾರ್ಯ(:) ಸೋಮಸೂರಿ ವರಾತ್ಮಜತಃ ॥
೮೦. ಋಗ್ವೇದ ನಿಧಿರಾತ್ರೇಯ ಸಚ್ಚರಿತ್ರ ವಿಭೂಷಣಃ ॥ ಕೇಶವಃ ಕರು
೮೧. ಣಾ ಭೂಮಿಃ ಕೋರವಪ್ಪಯ ನಂದನಃ ॥ ಅಹುರ್ಯದನ್ವಯಂತ (ತ್) ಜ್ಞ ಋ
೮೨. ಚಾಮುತ್ಪತ್ತಿಕಾರಣಂ(ಮ್) ಮಾಧವಾರ್ಯಂಸುತಃ ಸೋಯಂಗೌತಮ
೮೩. ಸ್ತಿಪ್ಪಯಾಭಿದಃ ॥ಋಗ್ವೇದ ವೇದಿನಾ ಮಾದ್ಯಃ
೮೪. ಕೇಶವಾರ್ಯ ತನೂಭವಃ । ಆಂಗಿರಸ ಗೌರಿವೀ
೮೫. ತ ಗೋತ್ರಃ ಶಿಂಗಾಯ ಕೋವಿದಃ ॥ ಋಚಾಂ ಪ್ರಧಾ
೮೬. ನ ಪದವೀ ವಿಷ್ಣು ಭಟ್ಟಸ್ಯ ನಂದನಃ । ವಿಶ್ವಾಮಿತ್ರಃ ಕಲ್ಲಿ
೮೭. ದೇವಸುಧೀಃ ಸುಕೃತಿನಾಂ ವರಃ ॥ ಸುಧೀರಧೀತ ವೇದಾಂತಃ ಸಾ

೮೮. ಯಪ್ಪಾರ್ಯ ತನೂಭವಃ । ಶ್ರೀವತ್ಸ ಗೋತ್ರ ಸಂಭೂತೋ ಹೊನ್ನಪ್ಪಾರ್ಯ ಋ

೮೯. ಚಾಂ ಪದಂ (ಮ್) ॥ ವಿಜ್ಞಾತ ಪ್ರಥಮಾಮ್ನಾಯೋ ವಿದ್ಯಾಧರ ಬುಧಾತ್ಮಜಃ ಕೃ

೯೦. ಪಾನಿಧಿಶ್ಚಂದ್ರ ಸೂರಿಃಕಾಶ್ಯಪಾನ್ವಯಸಂಭವಃ ॥ ಶಿಂಗಯಾರ್ಯಾ

೯೧. ತ್ಮಜೋಧೀಮಾನ್ಭಾರಧ್ವಾಜಾನ್ವಯೋದ್ಭವಃ ಋಗ್ವೇದೀಕರುಣಾಸಿಂಧುಃ ಪೋ

೯೨. ಚನಾರ್ಯೋ ಮಹಾಯಶಾಃ॥ ವಸಿಷ್ಟಃ ಪಿನ್ನಯಾರ್ಯಾತ್ಮ ಜಾತೋಚಾತ

೯೩. ಕೃಪಾಂತರಃ । ಅಂತರಾಸಕ್ತ ನೃಹರಿರ್ನೃ ಹರಿಮೂರ್ತಿಮಾನೃಚಾಂ (ಮ್) ॥ ಯ ಋ

೯೪. ಗ್ವಿದಾಮಗ್ರಸರಸ್ತದ್ವಿಧಾನವಿದಾಮಪಿ । ಗೌತಮೋ ಭೈರವಸ್ಸೋಯಂ ಪೆದ್ದಿ

೯೫. ಸೋರಿತನೂ ಭವಃ॥ ಅಧೀತ ಪ್ರಥಮಾಂಮ್ನಾಯ ಶ್ರೌತಸ್ಮಾರ್ತಕಲಾನಿಧಿಃ ಕೌಂ

೯೬. ಡಿನ್ಯಃ ಶಿಂಗಯಸುಧೀ ಭೈರವಾರ್ಯ ತನೂಭವಃ ॥ ವಿಧಿಜ್ಞೋ ವಿದ್ವದಾನಂದೋ

೯೭. ವಿಶ್ವಾಮಿತ್ರ ಕೂಲೋದ್ಭವ । ಚೌಂಡಿ ಭಟ್ಟಸುತೋವಿದ್ವಾನೃಗ್ವೇದೀ ಜನ್ನಪಾ

೯೮. ಭಿದಃ। ಪ್ರಧಾನಮೃಗ್ವಿದಾಂ ಪಾತಂ ಪರಂ ಸುಕೃತ ಸಂಹತೇಃ। ಕಾಶ್ಯಪಶ್ಶಿಂ

೯೯. ಗಯಃ ಶ್ರೀಮಾನ್ವಿಪ್ಪ ವಿಠ್ಠಲ ನಂದನಃ ॥ ವಿಶ್ವಾಮಿತ್ರಃ ಪವಿ

೧೦೦. ತ್ರಾಂತಃ ಪುತ್ರೋನ್ನಯ ಮನೀಷಿಣಃ । ಆಧಾರಸ್ಸವಿಧಾನಾನಾಂ ಋ

೧೦೧. ಚಾಮನ್ನಯ ಕೋವಿದಃ॥ ಆತ್ರೇಯ ಗೋತ್ರಸ್ಸನ್ಮೈತ್ರೀಪಾತ್ರಮೃಗ್ವೇದಪಾ

೧೦೨. ರಗಃ ನರಸಿಂಹೋ ಮಹಾ ಪ್ರಾಜ್ಞೋನಾರಾಯಣ ಭುಧಾತ್ಮಜಃ ॥ ಭಾ

೧೦೩. ದ್ವಾಜಾನ್ವಯ ಜನಿಃ ಪೋಚನಾರ್ಯತನೂಭವಃ ಪ್ರಥಮಾಮ್ನಾಯ ಪ

೧೦೪. ದವೀ ಶ್ರೀಮಾನಪ್ಪಯ ಗೋವಿದಃ ॥ ಋಗ್ವಿದಾಮಗ್ರಣೀರ

೧೦೫. ಗ್ರಗಾವೀಸ್ಮಾರಕಲಾವಿದಾಂ (ಮ್) ಶ್ರೇಯೋನಿಧಿರ್ದೇವಣಾರ್ಯ(:) ಶ್ರೀವತ್ಸೋ

೧೦೬. ನಾದಪಾರ್ಯಜಃ॥ಯದೀಯ ಮಾನಸೇ ಸಾಂಗ ಋಗ್ವೇದಃ ಪರಿಜೃಂಭಾತೆ। ಸ

೧೦೭. ಪಾಯಸಂ ಪೆದ್ದಿಸೂರಿಃ ಕಾಶ್ಯಪಶ್ಚೌಂಡಯಾರ್ಯಭೂಃ ॥ ಏತೇ ಪ್ರತ್ಯೆ

೧೦೮. ಕ ಮಂಶೇಶಾ ಅಥಾರ್ಧಂಶಾಧಿನಾಯಕಃ॥ಗೋಪಾಲಸೂರಿತನಯ್ಯ ಶ್ರೀ

೧೦೯. ಮೌದ್ಗಲ್ಯಗೋತ್ರಜೋ ವಿದ್ವಾನ್ರಾಪಪ್ಪೋರ್ಧಾಂ

೧೧೦. ಸಕಾಧಿಪಃ । ಏವಂ ಸಮ್ಮಿಲಿತಾಃ ಸಾರ್ಧತ್ರಯೋವಿಶತಿ ರಂಶಕಾಃ ॥

೧೧೧. ಯೋ ವೇದ ಭಾಷ್ಯಕೃದ್ಧೀಮಾನ್ಮಾಯಣಾಚಾರ್ಯನಂದನಃ ।

೧೧೨. ಅಸೌಶ್ರೀ ಸಾಯಣಾಚಾರ್ಯೋ ಭಾರದ್ವಾಜೋ ಯಜುರ್ನಿಧಿಃ ॥

೧೧೩. ಪದವಾಕ್ಯ ಪ್ರಮಾಣಾನಾಂ ಪಧಾನಂ ಯಜುಷಾಂ ಪದಂ (ಮ್)

೧೧೪. ಆತ್ರೇಯ ಸ್ಸೂರ ಸೂರೀಂದ್ರ ಸೂನುರ್ವಿಶ್ವೇಶ್ವರೋ ಬುಧಃ॥ ತಿಕಾಂಡಿ ಕೂಚಿಭಟ್ಟಾ

೧೧೫. ರ್ಯ ತನೂಜಸ್ತರ್ಕತಂತ್ರಭೂ । ಕಾಶ್ಯಪೋ ಯಜುಷಾಂ ಸೀಮಾ ರಾಮಚಂದ್ರೋ ಬುಧಾ

೧೧೬. ಗ್ರಣೀ॥ಅದ್ವೈತ ದ್ವೈತ ಸದನಂ ಯಜುಷಾಂ ಮಪಿ ನಂದಿಸೂರಿಸುತೋವಿ

೧೧೭. ದ್ವಾನ್ನರ್ಹರಿಃ ಕೌಶಿಕಾಗ್ರಣೀಃ ಯಜುರ್ವಿದಾಮಗ್ರಸರ (:) ಶ್ರೌತಸ್ಮಾ

೧೧೮. ರ್ತ ವಿದಾಮಸಿ । ಹಾರೀತಃ ಸೂರಿಭಟ್ಟಸ್ಯ ಸೂಮ ರೇಲ್ಲಯ ಕೋವಿದಃ ॥

೧೧೯. ನಂದನೋ ನಾಗದೇವಾರ್ಯ ಸ್ಯಾಚಲಾನಂದ ವತ್ಸಲಃ । ರಾಮಾಚಾ

೧೨೦. ರ್ಯೋ ಭರದ್ವಾಜೋ ದ್ವೈತಭೂರ್ಯಜುಷಾಂ ಗೃಹಂ(ಮ್) ॥ ಆಯುರ್ವೇದ ವಿದಾಂಸೀಮಾ

೧೨೧. ಯಜುರ್ವೇದ ವಿದಗ್ರಣಿ । ಶ್ರೀವತ್ಸಃ ಶ್ರೀಗಿರಿರ್ವಿದ್ವಾನ್ ಶ್ರೀವ

೧೨೨. ಲ್ಲಭ ಬುಧಾತ್ಮಜಃ ಆಧೀತಯಜುರಾಂನಾಯೋ ಬೋಧಾಯನ ಹ

೧೨೩. ರೇಃ ಸ್ತುತಃ । ವಿದ್ವಾನ್ನರಹರಿರ್ಜಾಮದಗ್ನ್ಯಾಮ್ಸೌ ನ್ವಯೋದ್ಭವಃ ।

೧೨೪. ಜ್ಯೋತಿಶ್ಯಾಸ್ತ್ರ ಯದುರ್ವೇದೋ ಯದನ್ವಯವಿಭೂಷಣಂ (ಮ್) । ಸ ವಿಶ್ವ

೧೨೫. ನಾಥ ತನಯೋ ಗಾರ್ಗ್ಯೋ ಮಲ್ಲಪಕೋವಿದಃ॥ ಅನ್ನಯಾರ್ಯಸುತೋ

೧೨೬. ವಿದ್ವಾನನ್ಮ್ಹಃ ಶಾಂತಮಾನಸಃ । ಕಲಾನಿಧಿರ್ಯಜುರ್ವೇದೀ ಕೌ

೧೨೭. ಶಿಕಾನ್ವಯ ಸಂಭವಃ ॥ ಶಾಲಂಕಾಯನವಂಶ್ಯೋಯ (:) ಶ್ರೌತಸ್ಮಾರ್ತ

೧೨೮. ವಿಹಾರಭೂಃ । ಸೋಯಂ ಯಜುರ್ವಿತ್ ಸೂರ್ಯರ್ಯಸ್ತಿ ಪ್ಪನಾರ್ಯತನೂಭವಃ ।

೧೨೯. ಅಧೀತ ಸೂರ್ಯಸಿದ್ಧಾಂತ ಸ್ಸೂರಯಾರ್ಯತನೂಭವಃ ಭಾರದ್ವಾಜೋಯ

೧೩೦. ಜುರ್ವೇದೀ ದೈವಜ್ಞಃ ಶರಣಾಭಿದಃ । ಭಾರದ್ವಾಜಾನ್ವಯೋದ್ಭೂತಃ

೧೩೧. ಪ್ರಭೂತಾಚಾರ ಭೂಷಣಃ । ವಿಠ್ಠಪ್ಪತನಯೋವಿದ್ವಾನ್ ಲಖ್ಖಪ್ಪೋ

೧೩೨. ಯಜುಷಾಂ ಮಹೀ ॥ ಹಾರೀತ (:) ಶ್ರೌತಸದನಂ ಸ್ಮಾರ್ತಮೂರ್ತಿ ರ್ದಾರಧೀಃ

೧೩೩. ಅನ್ನಯಾರ್ಯಾತ್ಮಜೋಧೀತಯಜುರ್ಮಾಧವದೀಕ್ಷಿತಃ॥ ಯಜುಃ ಸಾಂ

೧೩೪. ಗಂ ಸವೇದಾಂತಂ ಸ್ವತಂತ್ರಂ ಯತ್ರಬೇಲತಿ। ಕಾಶ್ಯಪೋಸೌ ನೃಸಿಂಹಾರ್ಯ (:)

೧೩೫. ಶ್ರೀಕೇಸರಿ ಬುಧಾತ್ಮಜಃ ॥ ಯತ್ಕುಲಂ ಕಲಯಂತ್ಯಾರ್ಯಾಸ್ತರ್ಕ ತಂತ್ರಂಯ

೧೩೬. ಜುರ್ಗೃಹಾಂ(ಮ್) । ಕೌಶಿಕೋಪ್ಪಯ ಭಟ್ಟಾತ್ಮಜಾತೋಸೌ ಭಾಸ್ಕರೋ ಬುಧಃ॥ ಮಂ

೧೩೭. ಚನಾರ್ಯತನೂಜಾತೋ ಹಾರಿತೋ ಯಜುಷಾಂನಿಧ್ಧಿಃ । ಸಿದ್ಧಾಂತ ಸಂಹಿತಾ

೧೩೮. ಹೋರಾವೇದೀ ಪೋಚನದ್ವೈತವಿತ್ ॥ ಯಜುರ್ವೇದ ವಿದಾಂಗ್ರಸರ (:) ಶ್ರೌತ

೧೩೯. ವಿದಾಮಪಿ । ಶ್ರೀವತ್ಸವಂಶ್ಯೋನಂತಾರ್ಯ ಪೇರು

೧೪೦. ಮಾಡಿ ಬುಧಾತ್ಮಜಃ । ಕಲಾವಾನ್ ಶಾಬ್ದಿಕಾ

೧೪೧. ಗೀಯೋ ಬುಕ್ಕಯಾರ್ಯ ತನೂಭವಃ । ಪೋತ ಸೂರಿರ್ಯ

೧೪೨. ಜುರ್ವೇದೀ ಶ್ರೀಪಸ್ಯ (:) ಶ್ರೀವಿಲಾಸಭೂಃ ॥ ಪ್ಪಯಾರ್ಯಾತ್ಮಜೋ

೧೪೩. ವಿದ್ವಾನ್ಯಜುರ್ವೇದ ವಿದಾಂವರಃ । ಹಾರೀತಃ ಕಾಮದೇವಾರ್ಯಾಃ

೧೪೪. ಸೂರ್ಯಾನಂದ ಗುಣೋದಯಃ ॥ ಯಸ್ಮಿನ್ಸಾಂಗಂ ಯಜುರ್ಭಾತಿ ಹಾ

೧೪೫. ರೀತಾನ್ವಯ ಮಂಡನೇ । ಪೋಚನಾರ್ಯಸುತಃ ಸೋಯಂ ನಿಟ್ಟಶಿಂ

೧೪೬. ಗಿಯ ಕೋವಿದಃ । ಏತೇ ಪ್ರತ್ಯೇಕ ಮಂಶೇಶಾ ಅಥಾರ್ಧಾಂಶಾ

೧೪೭. ಧಿನಾಯಕಃ । ಗುಣಾಧಾರೋ ಯದುರ್ವೇದೀ ಗೋವಿಂದಾರ್ಯತನೂ

೧೪೮. ಭವಃ ॥ ಹಾರೀತಾನ್ವಯಭೂಃ ಪೆದ್ದಿ ಸೂರಿ ರರ್ಧಾಂಶಕಾಧಿಪಃ ॥

೧೪೯. ಅಥಾವಶಿಷ್ಟಾ ಭಾಗೇಶಾಃ ಕಥ್ಯಂತೇ ಯಾಜು,ಆಃ ॥ ಕ್ರಮಾತ್ ಲ

೧೫೦. ಖ್ಪಿಯಾರ್ಯಸ್ಯ ತನಯೋ ಲೀಲಾಶಾಲಾಯಜುಶ್ರಿಯ । ಕೌಶಿ

೧೫೧. ಕಾನ್ವಯ ಸಂಜಾತಃ ಕೃಪಾವಾನ್ಮಲ್ಲಿಕಾರ್ಜುನಃ ॥ ಭೂಮಿರ್ಗಯಾಂ

೧೫೨. ತ ಪುಣ್ಯಾನಾಂ ಭಾರದ್ವಾಜಾನ್ವಯೋದ್ಭವಃ । ಕಾಮಯಾರ್ಯೋ ಯಜುರ್ವೇದೀ

೧೫೩. ಶಾಂತಿಮಾನ್ಸಿಂಗಯಾರ್ಯಜಃ । ಯಸ್ಮಿನ್ಮುಂಮಡಿಭಟ್ಟಸ್ಯ ಸೂನೋಃ

೧೫೪. ಸಾಂಗಂ ಯಜುಃ ಕಲಾಃ । ಪ್ರಕಾಶಂತೇ ಸ್ವತಃ ಸೋಽಯಮಾತ್ರೇಯೋಽಯ್ಯಲುಕೋ

೧೫೫. ವಿದಃ । ಜೊಯ್ತಿರ್ವಿಧ್ಯಾನಿಧಿ ಜ್ಯೋರ್ತಿತಿರ್ಗಂಗಾಧರ ಬುಧಾತ್ಮಜಃ ।

೧೫೬. ಕಾಶ್ಯಪೋ ಜಯುರಾಂನಾಯ ವೇತ್ತಾ ಮಲ್ಲಯ ದೈವವಿತ್ ॥ ಯದ್ವಂಶೋ

೧೫೭. ಯಜುಷಾಂ ಮೂಲಂ ದ್ವೈತಾದ್ವೈತ ವಿದಾಮಪಿ ॥ ಕೇದಾರಾರ್ಯಸುತಸ್ಸೋ

೧೫೮. ಯಂ ಶ್ರೀವತ್ಸೋ ನೃಹರಿರ್ಬುಧಃ ॥ ಭರ್ಗಸೇವಾಸಮಾಸಕ್ತೊ ಭಾರ್ಗ

೧೫೯. ವಾನ್ವಯ ಸಂಭವಃ । ಶಿಗಯಾರ್ಯೋ ಯಜುರ್ವೇದೀ ವಿಶ್ವನಾಥಬುಧಾ

೧೬೦. ತ್ಮಜಃ ॥ ಪರಾಶರಾನ್ವಯೋದ್ಭೂತೋ ದೇವರಾರ್ಯಸ್ಯನಂದನಃ । ಅ

೧೬೧. ನ್ನಯಾರ್ಯೋಽಧ್ಯೈರ್ಯಭೂಮಿರಧೀತ ಯಜುರಾಗಮಃ ॥ ಶಾಲಾವತಃ

೧೬೨. ಶಮಾದ್ವಾರಃ ಶಾಲಾ ಶೇಷಯಜುಶ್ರೀಯಃ । ಅಹೋಬಲಾರ್ಯ):) ಶ್ಚ

೧೬೩. ಯಾರ್ಢ್ಯೋ ರಾಮಸೂರಿತನೂಭವಃ ॥ ಭೀಮಾರ್ಯತನಯೋ ಧ್ಯೆರ್ಯಧ

೧೬೪. ರಣೀ ಗೌತಮಾನ್ವಯಃ ।ಮಂತ್ರವೇದೀ ಯಜುರ್ವೇದೀ ಮಾನೀ ಬೈರವ

೧೬೫. ಕೋವಿದಃ ॥ ಶ್ರೌತ ಮೂಲಂ ಸ್ಮಾರ್ತಮೂಲಂ ಯಜು

೧೬೬. ರ್ಮೂಲಂ ಯದನ್ವಯಃ । ಸಿಂಗಯೋಽಸೌ ಭರದ್ವಾಜಃ

೧೬೭. ಕೊಂಕಟಪ್ಪಯ ನಂದನಃ । ಪೆಮ್ಮಯಾರ್ಯಾತ್ಮಜಃ ಶ

೧೬೮. ಬ್ದಶಾಸ್ತ್ರಾಲಂಕೃತಿಪಾರಗಃ । ಅಪ್ಪಾಯ ಭಟ್ಟೋಯಜುಷಾಂ

೧೬೯. ಸೂತಿ(:) ಶ್ರೀವತ್ಸವಂಶಜಃ ॥ ಅಪಯಾರ್ಯಾಜೋಧೀತ ಯ

೧೭೦. ಜುರಾತ್ರೇಯಗೋತ್ರಜ । ವಿದ್ವಾನ್ನರಹರಿ (:) ಸ್ವಮಾನ್ವಿಜ್ಞಾತ

೧೭೧. ವಿವಿಧಾಗಮಃ ॥ ಶ್ರೀಮಾನ್ ಜ್ಯೋತಿರ್ವಿದಾಂ ಸೀಮಾಯುಜುಷಾಂ

೧೭೨. ಮಲ್ಲಯಾರ್ಯಜಃ । ಶ್ರೀಮಾನನ್ನಯ ದೈವಜ್ಞ (:) ಶಾಂಡಿಲ್ಯಾನ್ವಯ

೧೭೩. ಸಂಭವಃ ॥ ಅದೀತಯಜುರಾದಿತ್ಯಸೂರಿಸೂನುಃ ಕವೀಶ್ವರಃ ।

೧೭೪. ಜ್ಯೋತಿಃ ಕಲಾಕುಲಗೃಹಂ ಶ್ರೀವತ್ಸಃ ಪೋಚನೋ ಬುಧಃ ॥ ತಾಂ

೧೭೫. ತ್ರಿಕಸ್ತಾರ್ಕಿಕ (:) ಶ್ರೀಮಾನ್ನಾಗದೇವ ಬುಧಾತ್ಮಜಃ । ಹಾರೀತೋ ಯಜುರಾಕಾ

೧೭೬. ರೋ ಬೊಮ್ಮಕಂಟಯೌಭಲಃ ಸುಧೀಃ ॥ ಏತೇ ಪ್ರತ್ಯೇಕ ಮಂಶೇಶಾ ಏತದಂಶಾಸ್ತು

೧೭೭. ಸಂಖ್ಯಯಾ। ಸಾರ್ಧಾಷಟ್ ಸಂಯುತಾ ತಿಂಶದೇವಂ ಸಂಯುಗುದೀರಿತಾಃ ॥ ಶಲಾರು

೧೭೮. ರಾಯತನಯಃ ಶಲಾವ್ಯಾಕೃತಿತರ್ಕಯೋಃ। ಗೌತಮಃ ಸಾಮವೇದಾಡ್ಯೋ ವಾ

೧೭೯. ಸುದೇವಃ ಕಲಾನಿಧಿಃ । ಪುತ್ರಃ ಶಲ್ಲಾರುರಾಯಸ್ಸ ವಿದುಷೋ ವಿದುಷಾಂ ವರಃ ।

೧೮೦. ಅಧೀತ ಸಾಮವೇದಾ (:) ಶ್ರೀ ವಿಠ್ಠಲೋಗೌತಮಾನ್ವಯಃ॥ ಏತೌ ಪ್ರತ್ಯೇಕ ಮಂಶೇಶೌ

೧೮೧. ದ್ವಾವುಕ್ತೌ ಸಾಮವೇದಿಸೌ । ಶ್ರೀ ಪಾದಕಮಲೋದ್ಭೂತಾ ವಿಭಾತಿ ವಿ

೧೮೨. ಬುಧಾಪಗಾ ॥ ಯಸ್ಯಾಸೌ ಕೇಶವಃ ಶ್ರೀಮಾನೆತದ್ ಗ್ರಾಮಾಧಿದೈವತಂ (ಮ್) ।

೧೮೩. ರಾಮೇಶ್ವರೋ ರಾಜಮೌಲೀ ರಾಮಚಂದ್ರ ಪ್ರತಿಷ್ಠಿತ॥ ಯೋಸೌ ವಿಭಾತಿ

೧೮೪. ಗೌರೀಶ ಏತದ್ ಗ್ರಾಮಾಧಿ ದೈವತಂ(ಮ್) ಏತೌ ಪ್ರಾತ್ಯೇಕ ಮಂಶೇಶೌ ದ್ವಾ

೧೮೫. ವುಕ್ತೌ ಸಾಮವೇದಿಸೌ । ಕೇಶವೇಶ್ವಶೌ ಭಾಗಾ ಋಗ್ವಂದಿನಾಂಸಾರ್ಥತ್ರ ಯೋಮಿಶತಿ

೧೮೬. ರೀರಿತಾಃ। ಯಜುರ್ವಿದಾಂ ಪುನಃ ಸಾರ್ಥಷಟ್ ತ್ರಿಂಶತ್ ಪರಿಕೀರ್ತಿತಾಃ ॥ ದ್ವಾ

೧೮೭. ಸಾಮವೇದಿನೋ ರ್ಭಾಗೌ ದ್ವೌ ಭಾಗೌ ಕೇಶವೇಶಯೋಃ । ಏವಂ ಭಾಗಾಶ್ಚತು
೧೮೮. ಷ್ಪಷ್ಟಿರೇವ ತದ್ಭಾಗಯೋಗಿನಃ ॥ ಪ್ರೋಕ್ತಾಃ ಪಂಚಯುತಷಷ್ಠೆ ಬುಕ್ಕ
೧೮೯. ರಾಯ ಪುರಾದಿಪಾಃ । ಸಾಷ್ಟೈಶ್ವಯಾಃ ಸಾಷ್ಟಭೋಗಾಃ ಸಾನಂದೌ
೧೯೦. ದಾರ್ಯಮಾಸತೇ ॥ ಸರ್ವಮಾನ್ಯಂ ಹರಿಹರಸ್ಯಾಜ್ಞಯಾ ಪರಿಪಾಲಿ
೧೯೧. ತಂ(ಮ್)। ತಮಂಗುಲ್ಯಾಪಿ ನಿರ್ದೇಷ್ಟುಂ ಶಂಕತೇ ರಾಜಪೂರುಷಾಃ ॥ ಸರ್ವೇ
೧೯೨. ತೇ ಶಂಕರಾಃ ಸರ್ವಮಂಗಲಾಸಕ್ತ ಮಂದಿರಾಃ। ವಿಜಯಂತೇ ತರಾಂ
೧೯೩. ವಿಪ್ರಾ ಬುಕ್ಕರಾಯ ಪುರೆನಿಶಂ (ಮ್)॥ ಪಾಥೋಧರಶ್ರಿ
೧೯೪. ಖಿವರಾ ನಿವಸಾಭಿಲಾಷಾನ್ ಪದ್ಮಾಕರಂ ಕವಿ
೧೯೫. ವರಾನಿವ ಸಾನು ಬಂಧಾನ್ । ಶ್ರೀ ಬುಕ್ಕರಾಯ ಪುರಮೇತದ
೧೯೬. ಮೂನ್ ದ್ವಿಜೇಂದ್ರಾನಾನಂದತ್ವನುಕಲಂ ಸರಸಾಭಿರಾಮಂ(ಮ್) ಸಾ
೧೯೭. ಮಾನ್ಯೋಯಂ ಧರ್ಮಸೇತುರ್ನೃಪಾಣಾಂ ಕಾಲೇ ಕಾಲೇ ಪಾಲನೀಯೋ
೧೯೮. ಭವದ್ಭಿಃ । ಸರ್ವಾನೇತಾನ್ಭಾವಿನಃ ಪಾರ್ಥಿವೇಂದ್ರಾನ್ಭೂಯೋ ಭೂಯೋ ಯಾ
೧೯೯. ಚತೇ ರಾಮಚಂದ್ರಃ ॥ ಬಹುಭಿರ್ವಸುಧಾವತಾ ರಾಜಭಿಃ
೨೦೦. ಸಗರಾದಿಭಿಃ । ಯಸ್ಯ ಯಸ್ಯ ಯದಾಭೂಮಿ ತಸ್ಯತಸ್ಯ
೨೦೧. ತದಾಫಲಂ (ಮ್) ದಾನ ಪಾಲನಯೋರ್ಮಧ್ಯೇ ದಾನಾಚ್ಛ್ರೇಯೋನು
೨೦೨. ಪಾಲನಂ(ಮ್) । ದಾನಾತ್ಸ್ವರ್ಗಮವಾಪ್ನೋತಿ ಪಾಲನಾದಚ್ಯುತಂ
೨೦೩. ಪದಂ(ಮ್) ಸತ್ರುಣಾಪಿ ಕೃತೋಧಮಃ ಪಾಲಣಿಯಃ ಪ್ರಯತ್ನತ ।
೨೦೪. ಶುತ್ರುರೇವ ಹಿಶತ್ರುಸ್ಸ್ಯಾದ್ಧರ್ಮಶ್ಯತ್ರುರ್ನಕಸ್ಯಚಿತ್ ॥ ಸ್ವ
೨೦೫. ದತ್ತಂ ಪದತ್ತಂ ವಾ ಯೋ ಹರೇತ ವಸುಂಧರಾ (ಮ್) ಷಷ್ಠಿರ್ವರ್ಷ ಸ ।
೨೦೬. ಹಸ್ರಾಣಿ ವಿಷ್ಟಾಯಾಂ ಜಾಯತ್ ಕ್ರಿಮಿಃ ॥ ಸಹಸ್ರೇಣ ತಟಾಕಾ
೨೦೭. ನಾಮಶ್ವಮೇಧ ಶತೇನ ಚ ॥ ಗವಾಂ ಕೋಟಿ ಪ್ರದಾನೇನಭೂಮಿ
೨೦೮. ಹರ್ತಾ ನಶುಧ್ಯತಿ ॥ ಏಕೈವ ಭಗಿನೀ ಲೋಕೇ ಸರ್ವೇಷಾಂ ಭೂ
೨೦೯. ಭುಜಾಮಪಿ ॥ ನ ಭೋಗ್ಯಾ ನಕರಗ್ರಾಹ್ಯಾ ವಿಪ್ರದತ್ತಾವಸುಂ
೨೧೦. ಧರಾ ॥ (॥॥) ಶ್ರೀಮದ್ರಾಮಕಥಾ ಪ್ರಧಾನವಿಭುದ (:) ಶ್ರೀಪಾದ ಪದ್ಮಾಲಿನಾ

೨೧೧. ಶ್ರೀಮದ್ರಾಮಕೃಪಾ ವಿಪಾಕ ವಿಲಸದ್ವಿದ್ಯಾನವದ್ಯಾತ್ಮನಾ ।

೨೧೨. ಶ್ರೀಮತ್ಶೋಬಚನ ಸೂರಿಣಾ ವಿರಚಿತಂ ಸತ್‌ಸೂಕ್ತಿ ಮುಕ್ತಾನ್ವಿತಂ


೨೧೩. ಶ್ರೀಮಚ್ಛಾಸನ ಮೇತದತ್ರ ಜಯತಾದಾಚಂದ್ರ ಮತಾರಕಂ(ಮ್)॥

೨೧೪. ಏತಸ್ಮಿನ್ನಗ್ರಹಾರೇ ಹರಿಹರ ಧರಣೀಪಾಲದಾನಾಂಬುರಾಶೇ ರುತ್ಪನ್ನೇತೀ ವರಮ್ಯೇ

೨೧೫. ಸ್ಫುರದುರು ಮಹಿಮೋದಾರಸೀಮಾಭಿರಾಮೇ । ಸದ್ವೃತ್ತೆ ಸತ್ ಪ್ರಕಾಶೇ ಸತತಗುಣಯುತೇ ಸತ್ಪದಂ

೨೧೬. ಸಂಶ್ರಿತಾನಾಮಂಶಾನಾಂ ನಾಯಕಾಯಾವನಿ ಸುರನಿಕಯಾಸ್ತು ಶಸ್ತಾ ಪ್ರಶಸ್ತಿಃ ॥






I PLATE - II SIDE
The Kraku grant of Harihara II




II PLATE - I SIDE
The Kraku grant of Harihara II




II PLATE - II SIDE
The Kraku grant of Harihara II




III PLATE - I SIDE
The Kraku grant of Harihara II



III PLATE - II SIDE
The Kraku grant of Harihara II




III PLATE - II SIDE
The Kraku grant of Harihara II



IV PLATE - I SIDE

The Kraku grant of Harihara II



IV PLATE - I SIDE
The Kraku grant of Harihara II ·



V PLATE
The Kraku grant of Harihara II

೧೩. ಶಾಸನಗಳ ಹಿನ್ನೆಲೆಯಲ್ಲಿ ಹಾಡುವಳ್ಳಿ ಇತಿಹಾಸ

ಕೆ. ಜಿ. ಭಟ್‌ಸೂರಿ

ಪೀಠಿಕೆ

ಹಾಡುವಳ್ಳಿ ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನಿಂದ ಪೂರ್ವ ಪಶ್ಚಿಮಾಭಿಮುಖವಾಗಿ 9 ಕಿ.ಮೀ. ಅಂತರದಲ್ಲಿದೆ. ಸಂಗೀತಪುರ ಎಂಬುದು ಈ ಊರಿನ ಹಳೆಯ ಹೆಸರು[1] ಹಾಡುವಳ್ಳಿಯನ್ನು ಸಂಗೀತಪುರವೆಂದೂ ಶಾಸನಗಳೂ ಹೆಸರಿಸುತ್ತವೆ. ಹಿಂದೊಮ್ಮೆ ವೈಭವದ ಉನ್ನತ ಶಿಖರವನ್ನೇರಿದ್ದ ಹಾಡುವಳ್ಳಿ ಇಂದು ಐತಿಹಾಸಿಕ ಪ್ರಸಿದ್ಧಿ ಪಡೆದ ಸುಂದರ ಸ್ಥಳ. 14 ರಿಂದ 16ನೇ ಶತಮಾನದವರೆಗೆ ಇದು ಸಾಳುವ ಅರಸರ ರಾಜಧಾನಿ.

ಅಂದಿನ ಹಾಡುವಳ್ಳಿ ರಾಜ್ಯ ಇಂದಿನ ಉತ್ತರ ಕನ್ನಡ ಜಿಲ್ಲೆಯ ದಕ್ಷಿಣೆ ತುದಿಯಿಂದ ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ಹಾಗೂ ಪಶ್ಚಿಮ ಭಾಗಗಳನ್ನೊಳಗೊಂಡಿತ್ತು. ಅಂದರೆ ಇದು ಕುಂದಾಪುರದಿಂದ ಹೊನ್ನಾವರದ ಗಡಿಯವರೆಗೂ ಹಾಡುವಳ್ಳಿ ರಾಜ್ಯದ ಗಡಿಯೆನ್ನಬಹುದು. ನಡುವಣ ಬೈಂದೂರು ಭಟ್ಕಳ, ಕಾಯ್ಕಿಣಿ ಊರುಗಳು ಹಾಡುವಳ್ಳಿ ರಾಜ್ಯದ ಮುಖ್ಯ ಕೇಂದ್ರ ಸ್ಥಳಗಳಾಗಿದ್ದವು. ಗೇರುಸೊಪ್ಪೆ ಹಾಡುವಳ್ಳಿ ರಾಜ್ಯಕ್ಕೆ ಅಂಟಿಕೊಂಡಿದ್ದ ಇನ್ನೊಂದು ರಾಜ್ಯ. ಗೇರುಸೊಪ್ಪೆ ಅರಸರು ಮತ್ತು ಹಾಡುವಳ್ಳಿ ಅರಸರು ಸಂಬಂಧಿಕರು. ಗೇರುಸೊಪ್ಪೆ ಅರಸರಂತೆ ಹಾಡುವಳ್ಳಿ ಅರಸು ಮನೆತದನವರೂ ಅಳಿಯ ಸಂತಾನ ಕಟ್ಟನ್ನು ಪಾಲಿಸಿಕೊಂಡು ಬಂದವರು. ಕ್ರಿ.ಶ. 1488ರ ಒಂದು ಶಾಸನದಲ್ಲಿ ಹಾಡುವಳ್ಳಿ ಜೈನ ಅರಸರು ಸೋಮವಂಶಕ್ಕೆ ಸೇರಿದ್ದು, ಕಾಶ್ಯಪ ಗೋತ್ರದವರಾಗಿದ್ದರು ಎಂದಿದೆ.[2]

ಸಾಳುವ ಅರಸು ಮನೆತನ (ರಾಜಕೀಯ ಮತ್ತು ಸಾಂಸ್ಕೃತಿಕ ಹಿನ್ನೆಲೆ)

ಮಹಾಭಾರತದಲ್ಲಿ ಉಲ್ಲೇಖಿಸಲ್ಪಟ್ಟ ಸಾಳುವರ ಜೊತೆ ಸಂಬಂಧ ಹೊಂದಿರಬಹುದಾದ ಎರಡು ಪ್ರಮುಖ ಶಾಖೆಗಳು ಗೇರುಸೊಪ್ಪೆ ಮತ್ತು ಹಾಡುವಳ್ಳಿಯಿಂದ ಆಳಿದುದನ್ನು ಶಾಸನಗಳು ಸ್ಪಷ್ಟಪಡಿಸುತ್ತವೆ. ವಿಜಯನಗರವನ್ನು ಆಳಿದ ತುಳು ಅರಸು ಮನೆತನ ಈ ಶಾಖೆಗೇ ಸಂಬಂಧಿಸಿದವರಿರಬೇಕು.[3] ಈ ಅರಸು ಮನೆತನದವರು 14ನೇ ಶತಮಾನದಿಂದ ಬೆಳಕಿಗೆ ಬಂದವರೆಂದು ಶಾಸನಗಳು ಸ್ಪಷ್ಟಪಡಿಸುತ್ತವೆ.

ಹೊನ್ನನೆಂಬುವನು ಈ ಅರಸು ಮನೆತನದ ಮೂಲ ವ್ಯಕ್ತಿ. ಈತನು ಹೊಯ್ಸಳ ಚಕ್ರವರ್ತಿ ವೀರಬಲ್ಲಾಳನ ಸೈನಿಕನಾಗಿದ್ದನು. ಹೊನ್ನನು ಹೊಯ್ಸಳರ ಅವನತಿಯ ಲಾಭವನ್ನು ಪಡೆದು ಗೇರುಸೊಪ್ಪೆ ರಾಜ್ಯವನ್ನು ಸ್ಥಾಪಿಸಿದನು. ಈ ಮನೆತನದ ಇನ್ನೊಬ್ಬ ಅರಸು ಹೈವ, ಕಲಿಕಾಲದ ಕರ್ಣ, ಗಂಡುಗಲಿಗಳ ಗಂಡ, ನೃಪಕುಲ ಕಠಾರಿ ಮತ್ತು ಮಹಾಮಂಡಲೇಶ್ವರನೆಂಬ ಬಿರುದುಗಳನ್ನು ಪಡೆದಿದ್ದನು. ಹಾಡುವಳ್ಳಿ, ಭಟ್ಕಳ, ಹೊನ್ನಾವರ, ಗೇರುಸೊಪ್ಪೆ, ಚಂದಾವರ ಮತ್ತುಗೋಕರ್ಣ ಪ್ರದೇಶಗಳನ್ನು ವಿಜಯ ನಗರ ಅರಸರ ಸಾಮಂತನಾಗಿ ಹೈವನು ಆಳಿದನು. ಈತನ ನಂತರ ಯಾದವೀ ಕಲಹ ಈ ಅರಸು ಮನೆತನದಲ್ಲುಂಟಾಗಿ ಇವರ ರಾಜ್ಯ ಎರಡು ಭಾಗವಾಯಿತು. ಇವೇ ಹಾಡುವಳ್ಳಿ ಮತ್ತು ಗೇರುಸೊಪ್ಪೆ. ಹಾಡುವಳ್ಳಿಯಲ್ಲಿ ಹೈವನ ಮಗ ಸಂಗೀರಾಯ ಮತ್ತು ಗೇರುಸೊಪ್ಪೆಯಲ್ಲಿ ಹೈವನ ಅಳಿಯ ಸಂಗಮ ಅರಸರಾದರು. [4] ಹೈವನ ಅಳಿಯ ಸಂಗಮ ಸಂಗಮನ ಮಗ ಕೇಶವನೆಂದು ಹೇಳಿದರೆ[5] ಇನ್ನೂ ಕೆಲವರು ಎರಡನೆಯ ಮಂಗರಾಜನು ರಾಜನು ತೀರಿದ ಮೇಲೆ ಅಳಿಯ ಕೇಶವನು ಪ್ರಾಪ್ತ ವಯಸ್ಸಿನಾಗಿಲ್ಲದ ಪ್ರಯುಕ್ತ ಹೈವರಸನ ಮಗನೆಂಬ ರೀತಿಯಲ್ಲಿ ಸಂಗೀರಾಯನೆ ರಾಜ್ಯದ ಆಡಳಿತ ಸೂತ್ರವನ್ನು ವಹಿಸಿಕೊಂಡನೆಂದು ಹೇಳುತ್ತಾರೆ. ಸಂಗೀರಾಯನ ಆಳ್ವಿಕೆಗೆ ಸೇರಿದ ಕಾಯ್ಕಿಣಿಯ ಶಾಸನ 1421ರ ಶಾಸನವು ರಾಜಕೀಯ ದೃಷ್ಟಿಯಿಂದ ಮಹತ್ವದ್ದಾಗಿದೆ.[6]

ಈವರೆಗೆ ದೊರೆತಂತೆ ಈ ಮನೆತನಕ್ಕೆ ಸೇರಿದ ಪ್ರಾಚೀನ ಶಾಸನ ಕ್ರಿ.ಶ. 1408ರ ಭಟ್ಕಳ ಶಾಸನ. ಹಾಡುವಳ್ಳಿ ಮನೆತನದ ಪರಿಚಿತ ದೊರೆ 14ನೇ ಶತಮಾನದ ಕೊನೆಗಾಲ ದಲ್ಲಿ ಆಳುತ್ತಿದ್ದ ಹೈವ ಭೂಪ. ಇತನಿಗೆ ಸಾಳುವೇಂದ್ರನೆಂಬ ಹೆಸರೂ ಇತ್ತು. ಆತನ ರಾಣಿ ಭೈರಾದೇವಿ ಇವನ ಉತ್ತರಾಧಿಕಾರಿ. ಇವನ ಮಗನಾದ ಮಲ್ಲಿರಾಯ ಮಲ್ಲ ರಾಯನ ಅಕಾಲಿಕ ಮರಣದಿಂದಾಗಿ ಆತನ ಸೋದರ ಸಂಗೀರಾಯ ಪಟ್ಟಕ್ಕೆ ಬಂದ [7]. ಪರಾಕ್ರಮಶಾಲಿಯಾದ ಈ ರಾಜ ತನ್ನ ವರಿಷ್ಠರಾದ ವಿಜಯನಗರದ ಸಾಮ್ರಾಟರ ಅಧೀನತ್ವವನ್ನು ಧಿಕ್ಕರಿಸಲು ಯತ್ನಿಸಿ ಅನೇಕ ಯುದ್ಧಗಳನ್ನು ನಡೆಸಿದನು.[8] ಕ್ರಿ.ಶ. 1423ರ ಶಾಸನವೊಂದು ಹಾಡುವಳ್ಳಿ ದೊರೆ ಸಂಗಿಭೂಪನು ನಗಿರೆಯ ಹೈವ ಭೂಪನ ಮತ್ತು ವೇಣುಪುರ ಭೈರವರಾಣಿಯ ಮಗನೆಂದಿದೆ. [9] ಇನ್ನೊಂದು ಶಾಸನದಲ್ಲಿ ನಗಿರೆಯ ಹೈವರಸನ ಒಡೆಯನ ಮಗನೆಂಬುದನ್ನು ಸ್ಪಷ್ಟಪಡಿಸಿದೆ.[10] ಸಂಗೀರಾಯನು ಕಲಿಗಳ ಮುಖದ ಕೈಕಟಕ ಸೂರೇಕಾರ, ಹುಸಿವರಶೂಲ, ಕಡಿತಲೆಯ ಮಲ್ಲೆ, ವೈರಿ ಮಂಡಲೀಕರ ಗಂಡ, ಮತ್ತು ಏಕಾಂಗವೀರ ಬಿರುದುಗಳನ್ನು ಪಡೆದಿದ್ದನು.[11] ಈ ಬಿರುದುಗಳನ್ನು ಸಂಗೀರಾಯನು ಸ್ವತಂತ್ರ ದೊರೆಯೆಂಬುದನ್ನು ಸ್ಪಷ್ಟಪಡಿಸುತ್ತದೆ. ಜೀವಂದ ಷಟ್ಪದಿ ಯನ್ನು ಬರೆದ ಕನ್ನಡ ಕವಿ ಕೋಟೇಶ್ವರ ಇವನ ಆಸ್ಥಾನದಲ್ಲಿದ್ದ. ಸಂಗೀತಪುರದ ಹೈವಭೂಪನ ಮಗ ತನ್ನ ಆಶ್ರಯದಾತನೆಂದು ಈ ಕವಿ ಹೇಳಿದ್ದಾನೆ.[12] ಈ ಕವಿಯ ಕಾಲ ಕ್ರಿ.ಶ. 1440.

ಕ್ರಿ.ಶ. 1415ರಲ್ಲಿ ವಿಜಯನಗರ ಸಾಮ್ರಾಟರ ವಿರುದ್ಧ ದಂಗೆಯೆದ್ದು ಹೋರಾಡಿದ ವಿಷಯವನ್ನು ಮೇಲೆ ಪ್ರಸ್ತಾಪಿಸಿದೆ. ಈ ದಂಗೆಯನ್ನು ಅಡಗಿಸುವ ಸಲುವಾಗಿ ಬಾರಕೂರು ರಾಜ್ಯವನ್ನಾಳುತ್ತಿದ್ದ ಮಹಾ ಪ್ರಧಾನ ಶಂಕರದೇವ ಒಡೆಯನು ಮಾಡಿದ ಯುದ್ಧದಲ್ಲಿ ಸಂಗೀರಾಯನ ಭಟನಾದ ಮಾಬುನಾಯಕನು ವೀರ ಸ್ವರ್ಗವೇರಿದನು[13] ಈ ವಿಷಯ ಕಾಯ್ಕಿಣಿ ಶಾಸನದಲ್ಲಿದೆ. ಈ ಶಾಸನಗಳ ಹೊರತಾಗಿ ಕ್ರಿ.ಶ. 1423, 1431 ರ ಶಾಸನಗಳೂ ಸಂಗೀರಾಯ ಒಡೆಯನ ಆಳ್ವಿಕೆ ಕುರಿತು ಪ್ರಸ್ತುತಪಡಿಸುತ್ತವೆ.[14].

ಸಂಗೀರಾಯನ ತಂದೆ ನಗಿರೆ ರಾಜ್ಯದ ಒಡೆಯನೂ ಆದ ಹೈವರಸನು ಕ್ರಿ.ಶ 1398 ರಲ್ಲಿ ಚೌಟರ ದಂಗೆಯನ್ನು ಅಡಗಿಸುವಲ್ಲಿ ಮಹಾಪ್ರಧಾನ ದಂಡಪ್ಪನಾಯಕನಿಗೆ ನೆರವಾಗಿದ್ದನು.[15] ಹೈವರಸನ ಕಾಲದಲ್ಲಿ ಹಾಡುವಳ್ಳಿ ಮತ್ತು ನಗಿರೆ ಅರಸು ಮನೆತನದವರು ವಿವಾಹ ಸಂಬಂಧ ಬೆಳೆಸಿದ್ದರಾದರೂ ಸಂಗೀರಾಯ ಒಡೆಯ ಮತ್ತು ನಗಿರೆಯ ಕೇಶವರಾಜ ಒಡೆಯನಿಗೆ ಪರಸ್ಪರ ವಿರೋಧತನವಿತ್ತು. ಎರಡನೆ ಮಗನು ತೀರಿಕೊಂಡಾಗ ಅವನ ಅಳಿಯನಾದ ಕೇಶವರಾಜ ಪ್ರಾಪ್ತವಯಸ್ಕನಾಗಿರಲಿಲ್ಲ. ಇದೇ ಕಾರಣದಿಂದ ಹೈವರನಸ ಮಗನೆಂಬ ರೀತಿಯಂತೆ ನಗಿರೆ ಮನೆತನದ ಸಂಬಂಧಿಯಾದ ಸಂಗೀರಾಯನೇ ನಗಿರೆ ರಾಜ್ಯದ ಆಡಳಿತವನ್ನು ಮಾಡುತ್ತಿದ್ದನು.[16] ಕ್ರಿ.ಶ.1417ರ ಈ ಶಾಸನ ಸಂಗೀರಾಯನನ್ನು ನಗಿರೆಯ ದೊರೆಯೆಂದು ವರ್ಣಿಸುತ್ತದೆ. ಆದರೆ ಕೇಶವರಾಜನು ವಯಸ್ಸಿಗೆ ಬಂದ ನಂತರವೂ ನಗಿರೆಯ ಸಿಂಹಾಸನವನ್ನು ಬಿಟ್ಟು ಕೊಡಲು ಸಂಗೀ ರಾಯನು ಅಡ್ಡಿ ಮಾಡಿರಬೇಕು. ಅಥವಾ ಹಾಡುವಳ್ಳಿ ಮತ್ತು ಗೇರುಸೊಪ್ಪೆಯನ್ನು ಒಂದುಗೂಡಿಸಲು ಪ್ರಯತ್ನಿಸಿರಬೇಕು. ಆದರೆ ಕೇಶವದೇವ ಒಡೆಯ ಕ್ರಿ.ಶ. 1422ರಲ್ಲಿ ಸಂಗೀರಾಯ ಒಡೆಯನನ್ನು ಹೊಡೆದೋಡಿಸಿ ತಾನೇ ನಗಿರೆಯ ರಾಜನಾದನು. ಅಲ್ಲದೇ ಕೇಶವದೇವ ಒಡೆಯನು ಕ್ರಿ.ಶ. 1422-23ರಲ್ಲಿ ಹಾಡುವಳ್ಳಿ ರಾಜ್ಯದ ಮೇಲೂ ದಂಡೆತ್ತಿ ಹೋದನು. ಈ ಯುದ್ಧದಲ್ಲಿ ಕೇಶವದೇವ ಒಡೆಯನಿಗೆ ಆತನ ಅಳಿಯ ಸಂಗಮನು ನೆರವಾದನು [17] ಶಾಸನಗಳ ಆಧಾರದಲ್ಲಿ ಹೇಳುವುದಾದಲ್ಲಿ ಕೇಶವರಾಯನು ಆಳ್ವಿಕೆಯ ಕೊನೆಯ ವರ್ಷ ಕ್ರಿ.ಶ. 1425 [18].

ಕೇಶವದೇವ ಒಡೆಯನಂತೆ, ಆತನ ಅಳಿಯ ಸಂಗೀರಾಯ ಒಡೆಯನು ಸಂಗೀರಾಯ ಒಡೆಯನೂ ಹಾಡುವಳ್ಳಿಯ ಸಂಗೀರಾಯ ಒಡೆಯನೊಡನೆ ವಿರೋಧ ಬೆಳೆಸಿದ್ದನು. ಈ ವಿರೋಧವೇ ಕ್ರಿ.ಶ. 1430ರಲ್ಲಿ ಯುದ್ಧವಾಗಿ ಪರಿಣಾಮ ಬೀರಿತು. [19] ಇಲ್ಲಿಯ ವರೆಗೆ ನಗಿರೆಯ ಸಂಗೀರಾಯನ ಬೆಂಬಲಿಗನಾಗಿದ್ದ ಅಸಕಳಿಯ ಭೈರವದೇವ ಒಡೆಯನು ಯುದ್ಧ ಪ್ರಾರಂಭವಾಗುತ್ತಿದ್ದಂತೆ ಹಾಡುವಳ್ಳಿಯ ಸಂಗೀರಾಯನು ಪಕ್ಷಪಾತಿಯಾದನು. ಇದರಿಂದ ಕುಪಿತಗೊಂಡ ನಗಿರೆಯ ಸಂಗೀರಾಯನು ಹೊನ್ನಾವರ ರಾಜ್ಯದ ಅಂದಿನ ರಾಜ್ಯಪಾಲನಾದ ಲಖಣ್ಣ ಒಡೆಯನ ಸಹಕಾರವನ್ನು ಬೇಡಿದನು. ನಗಿರೆಯ ಸಂಗೀರಾಯ ಹೊನ್ನಾವರ ರಾಜ್ಯದ ರಾಜ್ಯಪಾಲನಾದ ಲಖಣ್ಣ ಒಡೆಯನ ಸಹಕಾರದೊಂದಿಗೆ ಹಾಡು

ವಳ್ಳಿಯ ಮೇಲೆ ದಂಡೆತ್ತಿ ಬಂದ ವಿವರವನ್ನು ಕಾಯ್ಕಿಣಿ ಶಾಸನವು ಸ್ಪಷ್ಟೀಕರಿಸುತ್ತದೆ.[20] ಈ ಯುದ್ಧಗಳ ಪರಿಣಾಮದಿಂದ ಎರಡು ತುಂಡರಸುಗಳ ವೈಯಕ್ತಿಕ ದ್ವೇಷದಿಂದ ಸಾವುನೋವುಗಳಾಗುತ್ತಿದ್ದವೇ ವಿನಃ ಈ ಯುದ್ಧಗಳಿಂದ ಜಯಾಪಜಯಗಳ ನಿರ್ಧಾರ ವಾಗುತ್ತಿರಲಿಲ್ಲ ಅಥವಾ ಗಡಿ ಪ್ರದೇಶಗಳ ಕೆಲವು ಗ್ರಾಮಗಳು ಒಬ್ಬರ ಕೈ ಬಿಟ್ಟು ಇನ್ನೊಬ್ಬರ ಕೈ ಸೇರುತ್ತಿದ್ದಿರಬಹುದು. [21]

ಪ್ರಾರಂಭದಲ್ಲಿ ಹೊನ್ನಾವರದಲ್ಲಿ ಆಳುತ್ತಿದ್ದ ವಿಜಯನಗರ ರಾಜ್ಯಪಾಲರಿಗೂ ನಗಿರೆ ಅರಸರಿಗೂ ಒಳ್ಳೆಯ ಬಾಂಧವ್ಯವಿದ್ದುದರಿಂದ ಹಾಡುವಳ್ಳಿ ಅರಸರ ಮೇಲೆ ಯುದ್ಧ ಸಾರುವಂತಾಯಿತು. ಸಂಗೀರಾಯನು ಕ್ರಿ.ಶ. 1408ರಿಂದ ಕ್ರಿ.ಶ. 1449ರವರೆಗೆ ಆಳಿರಬೇಕು. 41 ವರ್ಷಗಳ ಕಾಲ ಆಳಿದ ಪರಾಕ್ರಮಶಾಲಿಯಾದ ಈ ದೊರೆ ವಿಜಯ ನಗರ ಸಾಮ್ರಾಟರ ಅಧೀತ್ವವನ್ನು ಧಿಕ್ಕರಿಸಲು ಯತ್ನಿಸಿ ಅನೇಕ ಯುದ್ಧಗಳನ್ನು ಮಾಡಿ ದನು. ಜೀವಂಧರ ಷಟ್ಪದಿ ಬರೆದ ಕನ್ನಡ ಕವಿ ಕೋಟೇಶ್ವರ ಈತನ ಆಸ್ಥಾನದಲ್ಲಿದ್ದನು. ಸಂಗೀತಪುರ ಹೈವಭೂಪನ ಮಗ ಸಂಗಮರಾಯನು ತನ್ನ ಆಶ್ರಯದಾತನೆಂದ ಈ ಕವಿ ಹೇಳಿದ್ದಾನೆ. [22] ಸೂರ್ಯನಾಥ ಕಾಮತ್‌ರವರು ಅವರ ಸಂಶೋಧನಾ ಗ್ರಂಥದಲ್ಲಿ[23] ಸಂಗೀರಾಯನ ಹಿರಿಯ ಸಹೋದರ ಮಲ್ಲಿರಾಯನು ಸಂಗೀರಾಯನಿಗಿಂತ ಮೊದಲನೆ ಯವನೆಂದಿದೆ. ಕ್ರಿ.ಶ.1408ರ ಶಾಸನದಲ್ಲಿ ಸಂಗೀರಾಯನ ಹಿರಿಯ ಸಹೋದರ ಮಲ್ಲಿರಾಯನ ಮರಣವನ್ನು ಉಲ್ಲೇಖಿಸಿ, ನಂತರ ಸಂಗೀರಾಯ ಪಟ್ಟಕ್ಕೆ ಬಂದನೆಂಬು ದನ್ನು ಸ್ಪಷ್ಟೀಕರಿಸಿದೆ. ಶಾಸನದಲ್ಲಿ ಮಲ್ಲಿರಾಯನು ಸಂಗೀರಾಯನ ಕಿರಿಯ ಸಹೋದರ ಅನುಜ ಎಂದಿದೆ. ಆದರೆ ಈ ಶಾಸನ ಮಲ್ಲಿರಾಯನ ಮರಣಾನಂತರ ಸಂಗೀರಾಯನ ಆಳ್ವಿಕೆ ಕುರಿತು ಉಲ್ಲೇಖಿಸಿಲ್ಲ[24]

ಸಂಗೀರಾಯನ ನಂತರ ಸಂಗೀರಾಯನ ಮತ್ತು ಶಂಕರಾಂಬೆಯ ಹಿರಿಯ ಮಗ ಇಂದಗರಸನು ಪಟ್ಟಕ್ಕೆ ಬಂದನು. ಕುಂದಾಪುರ ತಾಲ್ಲೂಕಿನ ಬೈಂದೂರ ಶಾಸನವೇ ಇಂದಗರಸನಿಗೆ ಸಂಬಂಧಿಸಿದಂತೆ ಪ್ರಾಚೀನ ಉಲ್ಲೇಖ ದೊರಕಿರುವದು. ಈ ಶಾಸನದ ಕಾಲ ಕ್ರಿ.ಶ. 1449 [25]ರ ಶಾಸನವೊಂದು ಸಾಗರ ತಾ. ಹೊಗೆಕೆರೆಯಲ್ಲಿ ದೊರೆತಿದ್ದು ಇಂದ್ರರಸನು ಅಲ್ಲಿಯ ಪಾರ್ಶ್ವನಾಥ ಬಸದಿಗೆ ದಾನ ನೀಡಿದ ನ್ನು ದಾಖಲಿಸಿದೆ [26]. ಈ ವೇಳೆಗೆ ನಗಿರೆಯ ಸಿಂಹಾಸನಕ್ಕಾಗಿ ಒಳ ಜಗಳ ಪ್ರಾರಂಭವಾಯಿತು. ಕ್ರಿ.ಶ. 1461ರಲ್ಲಿ ನಗಿರೆಯ ಸಿಂಹಾಸನ ಭೈರವದೇವ ಒಡೆಯನ ತಮ್ಮನಾದ ಇಮ್ಮಡಿ ಭೈರವ ದೇವನ ಪಾಲಿಗಾಯಿತು. ಇವನು ಪಟ್ಟಕ್ಕೆ ಬಂದ ನಂತರ ತನ್ನ ತಮ್ಮನಾದ ಅಂಬಿಗರಾಯ ನನ್ನು ನಗಿರೆ ರಾಜ್ಯದ ದೊರೆಯೆಂದು ಘೋಷಿಸಿದನು. ಅಂಬಿಗರಾಯರಸನನ್ನು ಯುವರಾಜಪದವಿಗೇರಿಸಿದುದು ಅಂಬಿಗರಾಯರಸನ ಹಿರಿಯ ಅಣ್ಣ ತಿಪ್ಪರಸನಿಗೆ ಒಪ್ಪಿಗೆ ಯಾಗಲಿಲ್ಲ. ಈ ಜಗಳವನ್ನು ಉಪಶಮನ ಮಾಡುವುದಕ್ಕೋಸ್ಕರ ತಿಪ್ಪರಸನನ್ನು ಅಥವಾ ಮಲ್ಲಿರಾಯನನ್ನು ಜಂಟಿರಾಯನೆಂದು ಘೋಷಿಸಿದನು. ಆದರೂ ಇವರಿಬ್ಬರಲ್ಲಿ

ಪರಸ್ಪರ ವಿರೋಧ ಬೆಳೆಯುತ್ತಲೇ ಬಂದು ಕ್ರಿ.ಶ. 1471ರಲ್ಲಿ ಯುದ್ಧವುಂಟಾಯಿತು. ಈ ಒಳಜಗಳದಿಂದ ತನಗೇನಾದರೂ ಲಾಭವಾಗಬಹುದೆಂದು ಹಾಡುವಳ್ಳಿ ಮಹಾ ಮಂಡಲೇಶ್ವರ ಇಂದಗರಸ ಒಡೆಯನು ಚಿಕ್ಕ ಭೈರವನ ಪಕ್ಷ ಹಿಡಿದನು. ಈ ಯುದ್ಧದಲ್ಲಿ ಮಲ್ಲಿರಾಯನ ಭಟನೊಬ್ಬನು ಮೃತಪಟ್ಟ ವಿಷಯವನ್ನು ಕಾಯ್ಕಿಣಿಯಲ್ಲಿನ ವೀರಗಲ್ಲು ಶಾಸನ ತಿಳಿಸುತ್ತದೆ. [27]

ಕ್ರಿ.ಶ. 1508 ರಲ್ಲಿ ಹುಟ್ಟಿದ ಬೈಂದೂರು ಶಾಸನ ಇವನ ಆಳ್ವಿಕೆಗೆ ಸೇರಿದ್ದರಿಂದ ಇಂದಗರಸ ಒಡೆಯನು ಕನಿಷ್ಠ ಪಕ್ಷ ಅರವತ್ತು ವರ್ಷಗಳ ಕಾಲ ರಾಜ್ಯವಾಳಿದನೆಂದು ತಿಳಿಯಬಹುದು.[28] ಇಂದಗರಸ ನಂತರ ಆತನ ಮಗ ಎರಡನೇ ಸಂಗೀರಾಯನು ಆಳ್ವಿಕೆಗೆ ಬಂದನು. ಸಾಗರದ ಕ್ರಿ.ಶ.1491ರ ಶಾಸನವೊಂದು ಈ ಆಧಾರವನ್ನು ತಿಳಿಸುತ್ತದೆ. [29] ಇಮ್ಮಡಿ ಸಂಗೀರಾಯನು ಎಷ್ಟು ಕಾಲ ಆಳಿದನೆಂಬುದು ಸ್ಪಷ್ಟವಾಗಿಲ್ಲ. ಸುಮಾರು ಕ್ರಿ.ಶ. 1471ರ ಕಾಲಕ್ಕೆ ಈತನ ಆಳ್ವಿಕೆ ಕೊನೆಗೊಂಡಿರಬೇಕು ಏಕೆಂದರೆ ಈತನ ಮಗ ಇಂದ್ರದೇವ ಒಡೆಯನು ಇಮ್ಮಡಿ ಇಂದ್ರ ಅಥವಾ ಇಮ್ಮಡಿ ಸಾಳುವೇಂದ್ರ ಅಥವಾ ಇಮ್ಮಡಿ ಇಂದಗರಸ ಒಡೆಯ ಹಾಡುವಳ್ಳಿ ರಾಜ್ಯವನ್ನಾಳಿದನು [30] ಇಮ್ಮಡಿ ಇಂದಗರಸ ಒಡೆಯನು ಕ್ರಿ.ಸ. 1471 ರಿಂದ 1507ರ ವರೆಗೆ ರಾಜ್ಯಭಾರ ಮಾಡಿದನು. ಕ್ರಿ.ಶ.1507ರ ಶಾಸನವೊಂದು ಇಮ್ಮಡಿ ಇಂದಗರಸ ಒಡೆಯನು ಹಾಡವಳ್ಳಿಯ ರಾಜ್ಯವನ್ನಾಳಿದ ನೆಂಬುದನ್ನು ಪ್ರಸ್ತುತಪಡಿಸುತ್ತದೆ. [31] ಕ್ರಿ.ಶ. 1488ರ ಸಾಗರದ ಶಾಸನ ಸಾಳುವೇಂದ್ರನು ಸಂಗೀತಪುರದ ರಾಜನೆಂದಿದೆ.[32]. ಕ್ರಿ.ಶ. 1491ರ ಶಾಸನ ಸಾಳುವೇಂದ್ರನು ಸಂಗೀರಾಯನ ಮಗನೆಂದೂ ಈ ಸಂಗೀರಾಯನು ಇಂದ್ರರಸನು ಸಂಗೀತಪುರದ ದೊರೆಯೆಂದು ಹೇಳುತ್ತದೆ. [33] ಇಂದಗರಸ ಒಡೆಯನು ಸಂಗೀತಪುರ ಪಟ್ಟಣದಿಂದಲೇ ಬಿದಿರುನಾಡಿ ಮತ್ತು ಉಳಿದ ರಾಜ್ಯಗಳನ್ನಾಳುತ್ತಿದ್ದನು. ವೇಣುಪುರ ಅಥವಾ ಬಿದಿರು ನಾಡು ಹಾಡುವಳ್ಳಿ ರಾಜ್ಯದ ಭಾಗವಾಗಿತ್ತೆಂಬುದನ್ನು ಶಾಸನದಲ್ಲಿ ಹೇಳಿದೆ. [34] ಭಟ್ಕಳದ ಹತ್ತಿರ ಶಿರೂರಿನಲ್ಲಿ ಇತ್ತೀಚಿನ ಒಂದು ಶಾಸನ ಇಂದಗರಸ ಒಡೆಯನು ಹೈವೇಂದ್ರ, ಕೊಂಕಣ, ತುಳು, ಕೇರಳ, ಮುಂತಾದ ರಾಜ್ಯಗಳನ್ನು ಪ್ರತಿಪಾಲಿಸುತ್ತಿದ್ದ ನೆಂದಿದೆ. ಅಲ್ಲದೇ ಇದೇ ಶಾಸನದಲ್ಲಿ ಮಯೂರ ವರ್ಮರಾಯರು ಸಂಗೀರಾಯರು ತಮ್ಮ ಹಜಾಜಿ ಮಲ್ಲಿರಾಜ ಒಡೆಯರು ಎಂದು ದಾಖಲಿಸಿರುವುದು. ಗಮನಿಸಬೇಕಾದ ಅಂಶ[35] ಇತ್ತೀಚೆಗೆ ಹಾಡುವಳ್ಳಿಯ ಆಕಲಂಕ ಬ್ರಹ್ಮನ ಚಂದ್ರಸೂಧಾ ಸೇನೆಯೆಂಬ ಕೃತಿಯೊಂದು ಹೊಸದಾಗಿ ಬೆಳಕಿಗೆ ಬಂದಿದ್ದು ದೇವರಸನು ಸಂಗಮೇಶನ ಸುತನೆಂದೂ ದೇವರಸ ಮತ್ತು ಮೂರನೆಯ ಮಗನೆಂದಿದೆ[36] ಧರ್ಮಸ್ಥಳ ಮಂಜೂಷಾ ವಸ್ತು ಸಂಗ್ರಹಾಲಯ ದಲ್ಲಿ ಇಡಲಾದ ತಾಮ್ರಶಾಸನದಲ್ಲಿ ಸಂಗೀರಾಯನಿಗೆ ದೇವರಾಯ ಮತ್ತು ಗುರು ರಾಯರೆಂಬ ಮಕ್ಕಳಿದ್ದರೆಂಬುದನ್ನು ತಿಳಿಸುತ್ತದೆ.[37]

ಇಮ್ಮಡಿ ಇಂದಗರಸನ ನಂತರ ಆತನ ಮಗ ಮಹಾ ಮಂಡಲೇಶ್ವರ ದೇವರಸ ಒಡೆಯನು ಸಂಗೀತಪುರದಿದ ಬೈಂದೂರು ಮತ್ತು ಉಳಿದ ರಾಜ್ಯಗಲನ್ನಾಳುತ್ತಿದ್ದನು.[38] ದೇವರಸ ಒಡೆಯನ ನಂತರ ಗುರುರಾಯ ಒಡೆಯನು ಪಟ್ಟಕ್ಕೆ ಬಂದನು ಸಂಗೀತಪುರದಿಂದಲೇ ಈತನು ಭಟ್ಕಳ ಮತ್ತು ಉಳಿದ ರಾಜ್ಯಗಳನ್ನಾಳುತ್ತಿದ್ದನು. [39] ಗುರುರಾಯ ಒಡೆಯನು ಇಮ್ಮಡಿ ಸಂಗೀರಾಯನ ಮಗನೆಂಬುದನ್ನು ಕ್ರಿ.ಶ. 1527ರ ಶಾಸನವೊಂದು ತಿಳಿಸುತ್ತದೆ.[40] ಕ್ರಿ.ಶ.1531ರ ಶಾಸನ ಗುರುರಾಯ ಒಡೆಯನು ವಿಜಯ ನಗರದ ದೊರೆ ಅಚ್ಯುತರಾಯನ ಮಾಂಡಲೀಕನೆಂದು ತಿಳಿಸುತ್ತದೆ.[41] ಗುರುರಾಯ ಒಡೆಯನು ನಗಿರೆ ರಾಜ್ಯದ ಮೇಲೆ ದಂಡೆತ್ತಿ ಹೋಗುವಾಗ, ನಗಿರೆ ರಾಜ್ಯದ ಆಧಿಪತ್ಯವನ್ನು ಇಮ್ಮಡಿ ದೇವರಾಯನು ವಹಿಸಿದ್ದನು. ದಂಡೆತ್ತಿ ನಗಿರೆ ರಾಜ್ಯವನ್ನು ಸಮೀಪಿಸುತ್ತಿದ್ದಂತೆ, ಇಮ್ಮಡಿ ದೇವರಾಯನು ತಿರುಗಿ ಬಿದ್ದುದರಿಂದ ಹಾಡುವಳ್ಳಿಯ ಗುರುರಾಯ ಒಡೆಯನು ಸೋಲನ್ನಪ್ಪಿಬೇಕಾಯಿತು. ಆದರೆ ಗುರುರಾಯ ಒಡೆಯನ ನೆಚ್ಚಿನ ಭಟನಾದ ಈಶ್ವರದೇವ ನಾಯಕನು ಧೈರ್ಯದಿಂದ ಹೋರಾಡಿ ಗುರುರಾಯ ಒಡೆಯನನ್ನು ಸರ್ವನಾಶದಿಂದ ತಪ್ಪಿಸಿ ತಾನು ಮರಣವನ್ನಪ್ಪಿದನು.[42]

ಗುರುರಾಯ ಒಡೆಯನ ನಂತರ ಈತನ ಸೋದರಳಿಯ ಸೋದರಿ ಪದ್ಮಾಂಬಿಕೆಯ ಮಗ ದೇವರಾಯನು ಕ್ರಿ.ಶ. 1530 ರಿಂದ 1540ರ ವರೆಗೆ ಆಳಿರಬೇಕು [43] ಈ ದೇವ ರಾಯನು ಸೋದರಿ ಬೈರಾಂಬೆಯ ಮಗಳು ಆತನ ಮಗಳ ಪತಿಯೂ ಆತ ಚೆನ್ನಾದೇವಿ ದೇವರಾಯನ ಉತ್ತರಾಧಿಕಾರಿಣಿ [44]. ಈ ವೇಳೆಗೆ ಹಾಡುವಳ್ಳಿ ತುಳುನಾಡಿನ ವ್ಯಾಪ್ತಿಗೆ ಒಳಪಟ್ಟಿದ್ದು. ಅದು ತುಳುನಾಡಿನಲ್ಲಿ ಜನಪ್ರಿಯವಾಗಿದ್ದ ಅಳಿಯ ಸಂತಾನ ಪದ್ಧತಿ ಯಂತೇ ಸೋದರಿಯ ಮಕ್ಕಳಿಗೆ ಉತ್ತರಾಧಿಕಾರ ಹಾಡುವಳ್ಳಿ ರಾಜ್ಯದಲ್ಲೂ ಉತ್ತರಾಧಿ ಕಾರ ಬರುವುದು ಹದಿನಾರನೇ ಶತಮಾನದಿಂದ ರೂಢಿಗೆ ಬಂದಿತು,[45] ಅಂದರೆ ಆಸ್ತಿ ಅಥವಾ ಸಂಪತ್ತಿನ ಹಕ್ಕು ಗಂಡುಮಕ್ಕಳಿಗೆ ಹೋಗುವ ಬದಲು ಹೆಣ್ಣು ಮಕ್ಕಳಿಗೆ ಹೋಗುವುದು ಈ ಪದ್ಧತಿಯ ಅರ್ಥ.

ದೇವರಾಯನ ಆಳ್ವಿಕೆಯ ನಂತರ ಚೆನ್ನಾದೇವಿಯ ಆಳ್ವಿಕೆ ಕ್ರಿ.ಶ.1540 ರಿಂದ ಪ್ರಾರಂಭವಾಗಿರಬೇಕು. ದೇವರಾಯ ಅಥವಾ ಇಮ್ಮಡಿಯ ದೇವರಸ ಒಡೆಯನು ಚೆನ್ನಾದೇವಿಯ ಚಿಗಪ್ಪನೆಂದು ಶಾಸನವೊಂದು ಪ್ರಸ್ತುತಪಡಿಸುತ್ತದೆ.[46] ಇವಳ ಆಳ್ವಿಕೆಯ ಕುರಿತು ಪೋರ್ಚಗೀಸ್ ದಾಖಲೆಗಳೂ ಇವೆ. ಇವಳ ಮನೆತನದವರು ಪೋರ್ಚುಗೀಸರಿಗೆ ಮೊದಲು ಸಲ್ಲಿಸುತ್ತಿದ್ದ ಕಾಣಿಕೆಯನ್ನು ಚನ್ನಮ್ಮದೇವಿ ನಿಲ್ಲಿಸಿದಳು ಎಂದು ಗ್ಯಾಸ್ಪರ್ ಕೊರಿಯಾ ತಿಳಿಸಿದ್ದಾನೆ.[47] ಇದರಿಂದಾಗಿ ಗೋವೆಯ ಪೋರ್ಚುಗೀಸ್‌ನ ಮಂಡಲಾ ಧಿಕಾರಿ ಅಲ್ಫಾನ್ಸೋ ಡಿಸೋಜ ಇವಳ ವ್ಯಾಪಾರ ಕೇಂದ್ರವಾದ 1200 ಸೈನಿಕರನ್ನು ತಂದು ಭಟ್ಕಳವನ್ನು ಸುಟ್ಟು ಸೂರೆ ಮಾಡಿದನು. [48] ಈ ಯುದ್ಧದ ನಂತರ ರಾಣಿ ಫರಂಗಿಗಳಿಗೆ ಕಪ್ಪವನ್ನು ಕೊಡಬೇಕಾಯಿತು. ಕ್ರಿ.ಶ. 1546 ಕೈ ಸೇರಿದ ಎರಡು ಶಾಸನಗಳು ಈ

ರಾಣಿಗೆ ಸೇರಿದ ಕೊನೆಯ ದಾಖಲೆಗಳಾಗಿವೆ.[49] ಚೆನ್ನಾದೇವಿಯ ನಂತರ ಅವಳ ಸೋದರಿ ಚೆನ್ನಾಭೈರಾದೇವಿ ಪಟ್ಟಕ್ಕೆ ಬಂದಳು. ಪಟ್ಟಕ್ಕೆ ಬಂದ ಆರಂಭದ ದಿನಗಳಲ್ಲಿ ಇವಳ ಸೋದರ ಮಾವನಾದ ಕೃಷ್ಣದೇವರಸನು ಆಡಳಿತದ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದನು. ಕ್ರಿ.ಶ. 1542 ರ ಶಾಸನವೊಂದು[50] ಕಾಯ್ಕಿಣಿ ಅರಮನೆಯಲ್ಲಿದ್ದ ಕೃಷ್ಣದೇವರಸು ಹಾಡುವಳ್ಳಿ ದೊರೆಯೆಂದು ಸೂಚಿಸುತ್ತದೆ. ಬಹುಶಃ ಕೃಷ್ಣದೇವರಸನು ಹಾಡುವಳ್ಳಿ ದೊರೆಯಾಗಲು ಕಾರಣ ಚೆನ್ನಭೈರಾದೇವಿ ಚಿಕ್ಕವಳಿದ್ದಿರಬೇಕು. ಕ್ರಿ.ಶ. 1542ರಲ್ಲಿ ಪೋರ್ಚುಗೀಸ್‌ನು ನಡೆಸಿದ ವೀರಕೃತ್ಯಗಳಿಂದ ಬರಿದಾಗಿದ್ದ ಭಟ್ಕಳ ಮತ್ತೆ ಪುನಃ ಚೇತರಿಸಿತು.[51]

ಧರ್ಮಸ್ಥಳದ ಮಂಜೂಷಾ ವಸ್ತುಸಂಗ್ರಹಾಲಯದಲ್ಲಿ ಶಾಸನದಲ್ಲಿ ಚೆನ್ನದೇವಿ ಮತ್ತು ಭೈರಾದೇವಿಯ ಆಳ್ವಿಕೆಯನ್ನು ತಿಳಿಸುತ್ತದೆ. ಇನ್ನೊಂದು ಶಾಸನ, ಚೆನ್ನಾದೇವಿ ಕ್ರಿ.ಶ. 1548ರ ವರೆಗೆ ಆಳ್ವಿಕೆ ಮಾಡಿದ್ದನ್ನು ತಿಳಿಸುತ್ತದೆ.[52] ಇವರ ಮಂತ್ರಿಯಾದ ದೇವಿಸೆಟ್ಟಿಯ ಮಗ ಹೊನ್ನಾವರದಲ್ಲಿ ಶಾಂತೀಶ್ವರ ಬಸದಿ ಕಟ್ಟಿಸಿದನೆಂದು ತಿಳಿಸುತ್ತದೆ. ಈ ರಾಜರ ಪರಂಪರೆಯನ್ನು ಹೇಳುವುದಲ್ಲದೆ ಇವರು ಕದಂಬಾನ್ವಯವರೆಂದೂ... ಮತ್ತು ಶ್ರೀ ಶಂಕರಾಂಬೆ, ಇವರ ಮಕ್ಕಳು ಮಲ್ಲಿಯಾರ, ಸಾಳ್ವೇಂದ್ರದೇವ ಮತ್ತು ಶ್ರೀ ಗುರು ರಾಯ ಒಡೆಯರೆಂದು ಶಾಸನ ತಿಳಿಸುತ್ತದೆ. ಇನ್ನೊಂದು ಶಾಸನ[53] ಮಹಾಮಂಡಲೇ ಶ್ವರ ಭೈರಾದೇವಿ ಅಮ್ಮನವರ ವರಕುಮಾರಿಯರು ಚೆನ್ನಭೈರಾದೇವಿ ಎಂದು ತಿಳಿಸುತ್ತದೆ.

ಚೆನ್ನಭೈರಾದೇವಿ ಕ್ರಿ.ಶ. 1560ರಲ್ಲಿ ವಿಜಯನಗರದ ದೊರೆಗಳ ಆಧಿರಾಜತ್ವವನ್ನು ಮಾನ್ಯ ಮಾಡಿದ್ದಳೆಂಬ ಜೊತೆಗೆ ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ಭಾಗಗಳೂ ಇವಳ ರಾಜ್ಯಕ್ಕೆ ಸೇರಿದ್ದವು.[54] ಹಾಡುವಳ್ಳಿ ಮತ್ತು ಗೇಸುಸೊಪ್ಪೆಯನ್ನು ಒಂದುಗೂಡಿಸಿದ ಚೆನ್ನಾಭೈರಾದೇವಿ ಕೆಲವು ಕಾಲವರ್ಷ ಗೇರುಸೊಪ್ಪೆಯಲ್ಲಿ ಇನ್ನು ಕೆಲವು ವರ್ಷ ಭಟ್ಕಳದಲ್ಲಿ ರಾಜಧಾನಿಯನ್ನಾಗಿ ಮಾಡಿ ರಾಜ್ಯಭಾರ ಮಾಡಿದಳು. ಶಾಸಗಳು ಚೆನ್ನಾಭೈರಾದೇವಿಯನ್ನು ಹೈವತುಳು ಕೊಂಕಣಗಳನ್ನಾಳುತ್ತಿರುವ ಮಹಾಮಂಡಲೇಶ್ವರ ಎಂದೇ ಪ್ರಸ್ತುತಪಡಿಸುತ್ತದೆ.[55]

ಮೆಕೆಂಜಿಸಂಗ್ರಹದಲ್ಲಿನ[56] 1579ರ ಶಾಸನ ವೀರಮ್ಮನ ಕುಮಾರತಿಯರಾದ ವೀರ ಒಡೆಯರ ಸಂಜಾತೆಯಾದ ಶ್ರೀಮನ್ ಮಹಾಮಂಡಳೇಶ್ವರ ಸಾಳುವ ಕೃಷ್ಣದೇವರಸರವರ ಹೆಂಡತಿಯಾದ ಪಟ್ಟಮಹಾದೇವಿಯರೆನಿಸಿದ ಶ್ರೀಮನ್ ಮಹಾಮಂಡಳೆಶ್ವರ ಚೆನ್ನಭೈರಾದೇವಿಯಮ್ಮ ಎಂದು ದಾಖಲಿಸುತ್ತದೆ. ಕ್ರಿ.ಶ.1587ರ ಶಾಸನ[57] ಶ್ರೀ ಮನ್ಮ ಹಾಮಂಡಲೇಶ್ವರರು ಸಾಳುವ ಇಮ್ಮಡಿ ಚೆನ್ನ ಭೈರಾದೇವಿಯಮ್ಮನವರಿಗೆ ಸಕಲ ಸಾಮ್ರಾಜ್ಯಾಭ್ಯುದಯಕ್ಕೆ ಕಾರಣವಾಗಿ ಸಿರಿಯ ಮಲ್ಲಣ್ಣ ಒಡೆಯರ ಬೆಳಗೋಳದ

ಗೊಮ್ಮಟನಾಥ ಸ್ವಾಮಿಗೆ ಮಹಾಮಸ್ತಾಭಿಷೇಕ ಮಾಡಿಸಿದರೆಂದು ಹೇಳಿದೆ. ಇಮ್ಮಡಿ ಚೆನ್ನಭೈರಾದೇವಿ ಎಂದು ಉಲ್ಲೇಖಿಸಿರುವುದು ಈ ಶಾಸನದ ವಿಶೇಷತೆ.

ವಿಜಯನಗರದ ಚಕ್ರವರ್ತಿ ಸದಾಶಿವರಾಯನಿಗೆ ಇವಳ ರೇವುಗಳಾದ ಹೊನ್ನಾವರ, ಭಟ್ಕಳ, ಅರೇಬಿಯಾ ಮತ್ತು ಪರ್ಶಿಯಾ ಕೊಲ್ಲಿಗಳಿಂದ ಕುದುರೆಗಳು ಬರುತ್ತಿದ್ದವು. ಈ ಕಾರಣದಿಂದ ಚೆನ್ನಾಭೈರಾದೇವಿಯೊಡನೆ ಸದಾಶಿವರಾಯನು ಮೈತ್ರಿಯಿಂದಿದ್ದನು. ಚೆನ್ನಭೈರಾದೇವಿ ವಿಜಾಪುರದ ಆದಿಲ್‌ಶಾಹಿ ಮನೆತನದೊಡನೆಯೂ ಮೈತ್ರಿಯಿಂದಿದ್ದಳು. ಇವರಿಬ್ಬರೂ ಒಂದಾಗಿ ಕರಾವಳಿಯಲ್ಲಿ ಆಗುತ್ತಿದ್ದ ಲೂಟಿ ಮತ್ತು ಅಕ್ರಮ ವ್ಯವಹಾರ ವನ್ನು ಮಾಡುತ್ತಿದ್ದ ಪೋರ್ಚುಗೀಸರನ್ನು ಹದ್ದಿನಲ್ಲಿಡುವ ಉದ್ದೇಶದಿಂದ ಕ್ರಿ.ಶ. 1569 ರಲ್ಲಿ ಒಪ್ಪಂದ ಮಾಡಿಕೊಂಡರು. ಅಲ್ಲದೆ ಪೋರ್ಚುಗೀಸರು ದಕ್ಷಿಣ ಕನ್ನಡ ಜಿಲ್ಲೆ ಯಲ್ಲಿರುವ ಬಸ್ರೂರನ್ನು ಮುತ್ತಿಗೆ ಹಾಕಿದರು. ಆದರೆ ಬಸ್ರೂರಿನ ರಕ್ಷಣೆಗೆ ಚೆನ್ನ ಭೈರಾದೇವಿ ಮೂರು ಸಾವಿರ ಸೈನಿಕರನ್ನು ಅಲ್ಲಿ ಆಳಿಕೊಂಡಿದ್ದ ಸೂರಾಲಿನ ತೋಳಾಂತರ ಅರಸರಿಗೆ ಕಳುಹಿಸಿ ತನ್ನ ವರ್ಚಸ್ಸು ಬೀರಿದಳು. ಕ್ರಿ.ಶ.1572 ರಲ್ಲಿ ಮಲಬಾರಿನ ಕಲ್ಲಿಕೋಟೆ, ಬದಾಗಾರ್ ಜಿರಕಲ್ ಮತ್ತು ಕನ್ನಾನೂರಿನ ರಾಜರುಗಳು ಚೆನ್ನಭೈರಾದೇವಿ ಮೈತ್ರಿ ಬಯಸಿದ್ದರು. ಪೋರ್ಚುಗೀಸರನ್ನು ಓಡಿಸುವ ತಂತ್ರದಿಂದ ಚೆನ್ನಭೈರಾದೇವಿ ಕಲ್ಲಿಕೋಟೆ, ಜಾಮೋರಿನನೊಜನೆ ಒಪ್ಪಂದ ಮಾಡಿಕೊಂಡಿದ್ದಳು. ಈಕೆಯ ವ್ಯಾಪಾರ ಕೆಂಟಿ ಆರೇಬಿಯಾ, ಪರ್ಶಿಯನ್ ಕೊಲ್ಲಿಯವರೆಗೆ ವಿಸ್ತಾರ ವಾಗಿತ್ತು.[58]

ಬಿಳಗಿ ಮತ್ತು ಕೆಳದಿ ಅರಸರೊಡನೆ ಚೆನ್ನಭೈರಾದೇವಿಯ ಸಂಪರ್ಕ ಉತ್ತಮ ವಾಗಿರಲಿಲ್ಲ. ಬಿಳಗಿ ನರಸಿಂಗ ಅಥವಾ ರಂಗರಾಜ ಚೆನ್ನಭೈರಾದೇವಿಯೊಡನೆ ಕದನ ಪ್ರಾರಂಭಿಸಿದನು. ಕ್ರಿ.ಶ.1573ರಲ್ಲಿ ಇವನು ಗೇರುಸೊಪ್ಪೆ ರಾಜ್ಯವನ್ನು ಆಕ್ರಮಿಸಿ, ಹಳದೀಪುರದವರೆಗೆ ಬಂದನು. ಇದನ್ನು ತಿಳಿದ ರಾಣಿ ತನ್ನ ಚದುರಂಗ ಬಲದಿಂದ ಹಳದಿಪುರದಲ್ಲಿ ಬಿಳಗಿ ಸೈನ್ಯವನ್ನು ಹಿಮ್ಮೆಟ್ಟಿಸಿದಳು[59]

ಚೆನ್ನಭೈರಾದೇವಿ ಪೋರ್ಚುಗೀಸರ ಸಂಪರ್ಕದಿಂದ ಹೆಚ್ಚು ಪ್ರಸಿದ್ಧಿಗೆ ಬಂದ ಳೆಂಬುದು ಪೋರ್ಚುಗೀಸ್ ದಾಖಲೆಗಳಿಂದ ವ್ಯಕ್ತವಾಗುತ್ತದೆ. ಗೋವೆಯಲ್ಲಿ ಪೋರ್ಚು ಗೀಸರು ಬಲಶಾಲಿಗಳಾಗಿದ್ದರು. ವಿಜಾಪುರ ಆದಿಲ್‌ಶಾಹಿಗಳು ಮಲೆನಾಡು ಕರಾವಳಿ ತೀರದ ಸಣ್ಣ ಪುಟ್ಟ ರಾಜರುಗಳ ಮೇಲೆ ದಂಡೆತ್ತಿ ಬಂದು ತೊಂದರೆಯನ್ನುಂಟು ಮಾಡುತ್ತಿದ್ದರು. ಅದರಲ್ಲೂ ಹೆಚ್ಚಾಗಿ ಮಲೆನಾಡಿನಲ್ಲಿ ಕೆಳದಿರಾಜ್ಯ ತಲೆ ಎತ್ತಿ ವಿಜಯ ನಗರ ಅರಸರ ಸಹಾಯದಿಂದ ವಿಸ್ತಾರವಾಗತೊಡಗಿತು. ಕ್ರಿ.ಶ.1569-70 ರಲ್ಲಿ ಪೋರ್ಚುಗೀಸರೊಡನೆ ಹೋರಾಡುವ ಸಂದರ್ಭ ಬಂದೊದಗಿತು. ಯುದ್ಧ ನೌಕೆ ಯಲ್ಲಿದ್ದ ಪೋರ್ಚುಗೀಸರು ಹೊನ್ನಾವರ ಬಂದರಿನಲ್ಲಿ ಇಳಿಯಲು ಯತ್ನಿಸಿದಾಗ ಚೆನ್ನ ಭೈರಾದೇವಿ ಧೈರ್ಯದಿಂದ ಇವರ ಯತ್ನವನ್ನು ವಿಫಲಗೊಳಿಸಿದಳು. ಅಲ್ಲದೇ ಕ್ರಿ.ಶ. 1570ರಲ್ಲಿ ವಿಜಾಪುರ ಸಲ್ತಾನ ಇಬ್ರಾಹಿಂ ಆದಿಲ್‌ಶಾಹಿ ಮತ್ತು ಜಾಮೋರಿನೊಡಗೂಡಿ

ಪೋರ್ಚುಗೀಸರನ್ನು ಹೊನ್ನಾವರದಿಂದ ಹೊಡೆದೋಡಿಸುವ ಇರಾದೆಯಿಂದ ಭೀಕರ ಕದನವನ್ನುಂಟು ಮಾಡಿ ಪೋರ್ಚುಗೀಸರಿಗೆ ಅಪಾರ ನಷ್ಟವನ್ನುಂಟು ಮಾಡಿದಳು [60]. ಈ ಯುದ್ಧದ ನಂತರ ಪೋರ್ಚುಗೀಸರು ಚೆನ್ನಭೈರಾದೇವಿಯ ಘನತೆಗೆ ಭಂಗಬಾರದ ರೀತಿಯಲ್ಲಿ ಕರಿಮೆಣಸಿನ ವ್ಯಾಪಾರವನ್ನು ನಡೆಸಿಕೊಂಡು ಬಂದರು. ನಾಲ್ಕು ದಶಕಗಳಿಗೂ ಹೆಚ್ಚು ಕಾಲ ಗೇರುಸೊಪ್ಪೆ ರಾಣಿಯಾಗಿ ಮೆರೆದಳು. ಪೋರ್ಚುಗೀಸರು ಇವಳನ್ನು ಕರಿ ಮೆಣಸಿನ ರಾಣಿಯೆಂದೇ ಕರೆಯುತ್ತಿದ್ದರು [61]

ಒಟ್ಟಿನಲ್ಲಿ ಚೆನ್ನಭೈರಾದೇವಿಯ ಕಾಲ ಒಂದು ಪರ್ವಕಾಲವೆಂದು ತಿಳಿಯಬೇಕು ಏಕೆಂದರೆ 160 ವರ್ಷಗಳವರೆಗೆ ಹಾಡುವಳ್ಳಿ ರಾಜಮನೆತದವರು ಕಾದಾಡಿಕೊಡಿದ್ದು 160 ವರ್ಷಗಳ ನಂತರ ಚೆನ್ನಭೈರಾದೇವಿಯ ಕಾಲದಲ್ಲಿ ಮತ್ತೊಮ್ಮೆ ಒಂದಾದವು [62]. ಶಾಸನಗಳಲ್ಲಿ ಚೆನ್ನಭೈರಾದೇವಿಯನ್ನು ನಗಿರೆ, ಹೈವ, ತುಳು, ಕೊಂಕಣ ರಾಜ್ಯಗಳನ್ನಾಳಿದಳು ಎಂದಿದೆ. ಆದರೆ ಚೆನ್ನ ಭೈರಾದೇವಿ ಹಾಡುವಳ್ಳಿ ಮತ್ತು ಗೇರುಸೊಪ್ಪೆ ರಾಜ್ಯಭಾರ ಮಾಡುತ್ತಿರುವಾಗಲೇ ಪೋರ್ಚುಗೀಸ್ ಮತ್ತು ಕೆಳದಿ ನಾಯಕರ ವಿರುದ್ಧ ಯುದ್ಧ ಮಾಡಿದಳು. ಆಗಿಂದಾಗ್ಗೆ ಆಗುತ್ತಿದ್ದ ಕದನಗಳು ರಾಣಿ ಚೆನ್ನಭೈರಾದೇವಿಯನ್ನು ಸಿಂಹಾಸನದ ಮೇಲಿನಿಂದ ಕೆಳಗಿಳಿಸುವ ಪ್ರಯತ್ನ ಆರಂಭವಾಗಿರಬೇಕು. ಕೆಳದಿ ವೆಂಕಟಪ್ಪ ನಾಯಕನು ದಳವಾಯಿ ಲಿಂಗಣ್ಣನೊಡನೆ ಭಾರೀ ಸೇನೆಯನ್ನು ಕಳುಹಿಸಿ ರಾಣಿ ಚೆನ್ನ ಭೈರಾದೇವಿಯನ್ನು ಕೈ ಸೆರೆ ಹಿಡಿದನು. ಹಾವಿನ ಹಳ್ಳಿ, ಕರವೂರು (ಕರೂರು?) ಗೇರುಸೊಪ್ಪೆ, ಚಂದ್ರಗಿರಿ, ಗೋವರ್ಧನ ಗಿರಿ, ವಡ್ಡಿಮೇದಿನ, ಮುಂತಾದ ಆಕೆಯ ಆಳ್ವಿಕೆಗೆ ಒಳಪಟ್ಟಿದ್ದ ಕೋಟೆಗಳನ್ನು ವಶಮಾಡಿಕೊಂಡು ಅವಳು ಬಳಸುತ್ತಿದ್ದ ವಿಚಿತ್ರತರ ವಸ್ತುಗಳು, ವಾಹನಗಳು, ಬಟ್ಟೆಗಳು ಮುಂತಾದ ಸರ್ವಸ್ವವನ್ನು ಸ್ವಾಧೀನ ಮಾಡಿಕೊಳ್ಳಲಾಯಿತು. ರಾಣಿಯ ಸಮಗ್ರ ಸಂಪತ್ತನ್ನು ಕೆಳದಿ ರಾಜ್ಯಕ್ಕೆ ಸೇರಿಸಲಾಯಿತು. [63] ಅನಂತರ ಚೆನ್ನಭೈರಾದೇವಿ ಸೆರೆಮನೆಯಲ್ಲಿ ಅಸುನೀಗಿದಳು. ಚೆನ್ನಭೈರಾದೇವಿಗೆ ಸಂಬಂಧಿಸಿದಂತೆ ಈವರೆಗೆ ದೊರೆತ ಕೊನೆಯ ಶಾಸನ ಕ್ರಿ.ಶ. 1599ರ ಕಾಲಕ್ಕೆ ಸೇರಿದೆ. [64] ಚೆನ್ನಭೈರಾದೇವಿ ಆಡಳಿತ ಕಾಲ ಕೆಚ್ಚು, ಅಭಿಮಾನ, ವ್ಯಾಪಾರಾಭಿವೃದ್ಧಿ, ಸಾಹಸ, ಮತಸಹಿಷ್ಣತೆ, ಆಡಳಿತಶಕ್ತಿ ಇವು ಮುಂದಿನ ಪೀಳಿಗೆಗೆ ಮಾರ್ಗದರ್ಶನವಾಗಿದೆ. ಶಾಸನಗಳ ಜೊತೆಗೆ ಪೋರ್ಚುಗೀಸ್ ದಾಖಲೆಗಳೂ ಕೂಡ ಚೆನ್ನಭೈರಾದೇವಿ ನಡೆಸಿದ ಹಲವಾರು ಯುದ್ಧ, ವ್ಯಾಪಾರ, ಆಡಳಿತ ವಿಷಯಗಳಿಗೆ ಸಂಬಂಧಿಸಿದಂತೆ ಇನ್ನಷ್ಟು ಪುಷ್ಟಿ ನೀಡಿವೆ.

ಆಧಾರ ಗ್ರಂಥಗಳು

1. ರಮೇಶ ಕೆ.ವಿ. ತುಳುನಾಡಿನ ಇತಿಹಾಸ, ಗೀತಾಬುಕ್ ಹೌಸ್, ಮೈಸೂರು 1969, ಪು. 94
2. ಎಫಿಗ್ರಾಫಿಯಾ ಕರ್ನಾಟಿಕಾ, VIII, ಸಾಗರ, ನಂ. 163
3. ಸೂರ್ಯನಾಥ ಕಾಮತ್, ಕರ್ಣಾಟಕದ ಪರಂಪರೆ, ಸಂ. II ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು 1992, ಪುಟ 211
4. ವಸಂತ ಮಾಧವ, ಗೇರುಸೊಪ್ಪೆಯ ಸಾಳ್ವರು 'ಉತ್ತರ ಕನ್ನಡ ದರ್ಶನ' ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು 1986, ಪುಟ 47
5. ಹಂಪ ನಾಗರಾಜಯ್ಯ (ಸಂ) ಸಾಳ್ವ ಕವಿಯ ಸಾಳ್ವಭಾರತ, ಪ್ರಸ್ತಾವನೆ ಪ್ರಕರಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ 1976
6. ರಮೇಶ ಕೆ.ವಿ. ಪೂರ್ವೋಕ್ತ
7. ಕರ್ನಾಟಕ ಇನ್ಸ್‌ಕ್ರಿಪ್‌ಷನ್ಸ್ (ಕ.ಇ): ಸಂ. I, 1939-40 ನಂ. 39
8. ಸೂರ್ಯನಾಥ ಕಾಮತ್, ಅದೇ ಪುಟ 211
9. ಕ.ಇ.ಸಂ. I ಅದೇ ನಂ. 49
10. ಕ.ಇ.ಸಂ. I, ಅದೇ ನಂ 40
11. ಅದೇ
12. ಸೂರ್ಯನಾಥ ಕಾಮತ್, ಪೂರ್ವೋಕ್ತ, ಪು. 211
13. ಕ.ಇ.ಸಂ. I, ನಂ. 40
14. ಅದೇ, ನಂ. 44, 45
15. ರಮೇಶ ಕೆ.ವಿ. ಪೂರ್ವೋಕ್ತ, ಪು. 94
16. ಕ.ಇ.ಸಂ. I, ನಂ. 41
17. ಅದೇ, ನಂ. 42, 44, 45
18. ಅದೇ ನಂ. 47
19. ಅದೇ ನಂ. 50
20. ಅದೇ
21. ರಮೇಶ ಕೆ.ವಿ. ಪೂರ್ವೋಕ್ತ ಪು. 96
22. ಸೂರ್ಯನಾಥ್ ಕಾಮತ್, ಪೂರ್ವೋಕ್ತ
23. ಸೂರ್ಯನಾಥ್ ಕಾಮತ್, ತುಳುವಾಸ್ ಇನ್ ವಿಜಯನಗರ ಟೈಮ್ಸ್ (ಪಿ.ಹೆಚ್.ಡಿ. ಸಂಶೋಧನಾ ಗ್ರಂಥ)

24. ಗುರುರಾಜ ಭಟ್ ಪಿ, ಸ್ಟಡೀಸ್ ಇನ್ ತುಳುವ ಹಿಸ್ಟರಿ ಅಂಡ್ ಕಲ್ಚರ್, ಕಲ್ಯಾಣಪುರ, ಸೌತ್ ಕೆನರಾ, 1975, ಪು. 212
25. ಆನ್ಯುವಲ್ ರಿಪೋರ್ಟ್ ಆಪ್ ಸೌತ್ ಇಂಡಿಯನ್ ಎಪಿಗ್ರಫಿ (ಎ. ಆರ್.ಎಸ್.ಐ.ಇ), 1929-30,ನಂ. 537
26. ಎ.ಆರ್. 1929-30, ನಂ. 537
27. ಕ.ಇ. ಸಂ. I ನಂ. 61
28. ಎ.ಆರ್.ಎಸ್.ಐ.ಇ. 1929-30 ನಂ. 541
29. ಎ.ಕ.ಸಂ. VIII, ಸಾಗರ ನಂ. 164
30. ಕ.ಇ.ಸ. I, ನಂ. 61, (1939-40)
31. ಎ.ಆರ್.ಆಯ್.ಇ. 1929-30ನಂ. 541
32. ಎ.ಕ., ಸಂ. VIII ಪ್ರಸ್ತಾಪನೆ
33. E.C.V. VIII ಸಾಗರ. 163
34. ಎ.ಆರ್.ಆಯ್, 1929-30 ನಂ. 541
35. ಎಸ್.ಡಿ. ಶೆಟ್ಟಿ, ಗೇರುಸೊಪ್ಪ ಮತ್ತು ಹಾಡುವಳ್ಳಿ ಸಾಳುವರು, ತುಳು ಕರ್ನಾಟಕದ ಅರಸು ಮನೆತನಗಳು, ಕರ್ನಾಟಕದ ರಾಜಸಂಸ್ಥಾನಗಳು, (ಸಂ. ಹೇರಂಜೆ ಕೃಷ್ಣಭಟ್ ಮತ್ತು ಎಸ್.ಡಿ. ಶೆಟ್ಟಿ) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ 2000, ಪು. 29
36. ಅದೇ ಪು. 30
37. ಅದೇ
38. ಎ.ಆರ್.ಆಯ್. ಇ. 1929-30 ನಂ. 539
39. ಕ.ಇ.ಸಂ. III ನಂ. 70, 1939-40
40. ಅದೇ
41. ಕ.ಇ.ಸಂ. III, 1939-40 ನಂ. 71
42. ಕ.ಇ.ಸಂ. III ಭಾಗ I ನಂ. 8
43. ಅದೇ ನಂ. 85
44. ಅದೇ 1939-40, ನಂ. 75-76
45. ಸೂರ್ಯನಾಥ ಕಾಮತ್, ಪೂರ್ವೋಕ್ತ ಪು. 212
46. ಕ.ಇ.ಸಂ. III, 1939-40, ನಂ. 75
47. ತ್ರಿ ವೊಯೇಜಸ್ ಆಫ್ ಗಾಮಾ, ನಂ. IV, 252, ಲಂಡನ್, 1989
48. ಡೇವರ್ಸ್ ಎಫ್.ಸಿ.ದಿ. ಪೋರ್ಚುಗೀಸ್ ಇನ್ ಇಂಡಿಯಾ, ನಂ. 460-61
49. ಕ.ಇ. III, 1939-40, ನಂ. 75,76

50. ಅದೇ
51. ಆಯ್.ಹೆಚ್.ಆರ್.ಸಿ. XVIII, 52
52. ಮಂಜುವಾಣಿ ಮಾಸಪತ್ರಿಕೆ ಜೂನ್ 1989 ಗೇರುಸೊಪ್ಪೆ ತಾಮ್ರಶಾಸನ
53. ಅದೇ
54. ಎ.ಆರ್.ಎಸ್.ಐ.ಇ. 192, ನಂ. 540
55. ವಸಂತ ಮಾಧವ ಉತ್ತರ ಕನ್ನಡ ಜಿಲ್ಲೆ ದರ್ಶನ ಗೇರಸೊಪ್ಪೆಯ ಸಾಳ್ವರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು. 49
56. ಮೆಕೆಂಜಿ ಸಂಗ್ರಹ - ಶಾಸನ ನಂ. 300 ಪು. 483-84
57. ಅದೇ ಶಾಸನ ನಂ. 298 ಪು. 480-82
58. ಅದೇ
59. ಅದೇ, ಪು. 51
60. ಅದೇ, ಪು. 51
61. ಸೂರ್ಯನಾಥ ಕಾಮತ್, ಅದೇ ಪು. 213
62. ಭಟ್ ಸೂರಿ ಕೆ.ಜಿ. ಗೇರುಸೊಪ್ಪೆಯ ಜೈನವಾಸ್ತು ಮತ್ತು ಮೂರ್ತಿಶಿಲ್ಪ, ಕರ್ನಾಟಕ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ ಮೈಸೂರು, 1996, ಪು.8
63. ಗುಂಡಾ ಜೋಯಿಸ್, ಕೆಳದಿ ನೃಪವಿಜಯ V, ಪು. 120
64. ಕ.ಇ. III, 1939-40, ನಂ. 85

೧೪. ಹಂಪಿ ಪರಿಸರದ ಹಸ್ತಪ್ರತಿ ಲಿಪಿಕಾರ : ಹಂಪಸಾಗರದ ಶೇಷೇಂದ್ರಾಚಾರ್

ಡಾ. ಎಫ್.ಟಿ. ಹಳ್ಳಿಕೇರಿ

ವಿಶ್ವವಿಖ್ಯಾತ ಹಂಪಿ ಪರಿಸರ ಹರಿಹರ, ರಾಘವಾಂಕ, ಚಾಮರಸ, ಲಕ್ಕಣ್ಣ, ದಂಡೇಶ, ಕಲ್ಲುಮಠದ ಪ್ರಭುದೇವ ಮೊದಲಾದ ನೂರಾರು ಕವಿಗಳ ಆಶ್ರಯತಾಣವಾಗಿತ್ತು. ಈ ಪರಿಸರದಲ್ಲಿ ಕವಿಗಳ ಹಾಗೆಯೇ ಸಾಕಷ್ಟು ಸಂಖ್ಯೆಯಲ್ಲಿ ಹಸ್ತಪ್ರತಿ ಲಿಪಿಕಾರರು ಆಗಿ ಹೋಗಿದ್ದಾರೆ. ಅಂಥವರಲ್ಲಿ ಪ್ರಸಿದ್ಧರಾದವರು, ಹಂಪಸಾಗರದ ಶೇಷೇಂದ್ರಾಚಾರ್.

ಇತಿವೃತ್ತ ವಿಚಾರ


ಶೇಷೇಂದ್ರಾಚಾರ್ ಅವರು ಮೂಲತಃ ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕು ಹಂಪಸಾಗರದ ಯಾತಗಿರಿಮಠದ ಶ್ರೀ ಗುರೇಂದ್ರ ಸ್ವಾಮಿಗಳವರ ಪುತ್ರ. ತುಂಗಭದ್ರ ಜಲಾಶಯದ ಹಿನ್ನೀರಿನಿಂದ ಹಂಪಸಾಗರ ಗ್ರಾಮ ಮುಳುಗಡೆಯಾಗಿ ಸ್ಥಳಾಂತರಗೊಂಡಿತು. ಆಗ ಶೇಷೇಂದ್ರಾಚಾರ್ ಮನೆತನದವರು ನದೀ ಆಚೆಯ ಕೊಪ್ಪಳ ಜಿಲ್ಲೆಯ ಮುದ್ದಾಬಳ್ಳಿಗೆ ವಲಸೆಹೋಗಿ ನೆಲೆಯೂರಿದರೆಂದು ಹೇಳಬಹುದು. ಹಸ್ತಪ್ರತಿ ಪ್ರಶಸ್ತಿಯಲ್ಲಿ ಉಲ್ಲೇಖವಾದಂತೆ ಇವರ ಕಾಲ ಸುಮಾರು ಶಾ. ಶಕೆ. ೧೮೨೫. ಅಂದರೆ ಕ್ರಿ.ಶ.೧೯೦೩ರಲ್ಲಿ ಇವರು ಹಸ್ತಪ್ರತಿಗಳ ಲಿಪಿ ಕಾರ್ಯದಲ್ಲಿ ನಿರತರಾಗಿದ್ದರೆಬುಂದು ಸ್ಪಷ್ಟವಾಗುತ್ತದೆ.

ಶೇಷೇಂದ್ರಾಚಾರ್ ಅವರಿಗೆ ಹಂಪೆ ವಿರೂಪಾಕ್ಷನಲ್ಲಿ ತುಂಬ ಭಕ್ತಿ ಗೌರವ. ಸಾಮಾನ್ಯವಾಗಿ ತಮ್ಮ ಪ್ರತಿಯೊಂದು ಹಸ್ತಪ್ರತಿಯ ಆದಿಯಲ್ಲಿ ಈತನನ್ನು ಸ್ಮರಿಸಿದ್ದಾರೆ. ಅಲ್ಲದೇ 'ಇತಿಶ್ರೀ ಮದ್ವಿಶ್ವಕರ್ಮ ಕುಲೋತ್ಪನ್ನಯ ಯಾತಗಿರಿ ಮಠೋಪನಾಮಕ ಶ್ರೀ ಶೇಷೇಂದ್ರಾಚಾರ್ ವಿರಚಿತಯಾಂ ಶ್ರೀ ಹಂಪಿ ಶೃಂಗಾರಾಷ್ಟಕ ಪರಿಸಮಾಪ್ತ ಮಂಗಳ ಮಹಾಶ್ರೀ" ಎಂಬ ಹೇಳಿಕೆಯಿಂದ ಹಂಪಿ ಶೃಂಗಾರಾಷ್ಟಕ ಎಂಬ ಸ್ತೋತ್ರ ರೂಪದ ಕಿರುಕೃತಿಯನ್ನು ರಚಿಸುವುದರ ಮೂಲಕ ಶೇಷೇಂದ್ರಾಚಾರ್ ಅವರು ತಮ್ಮ ಕಾವ್ಯಪ್ರೌಢಿಮೆಯನ್ನು ಮೆರೆದಿದ್ದಾರೆ.[೧] ಈ ಕೃತಿಯ ಪ್ರತಿ ಪದ್ಯದ ಕೊನೆಯಲ್ಲಿ ವಿರೂಪಾಕ್ಷಲಿಂಗ ದಯಾನಿಧೆ ಮಮಪಾಲಯಾ ಎಂದು ಪ್ರಾರ್ಥಿಸಲಾಗಿದೆ. ಅಲ್ಲದೇ ಸ್ವಾಮಿ, ಧೀರ, ಪರಮಶ್ರೀ, ಚನ್ನಶ್ರೀ, ತೋಷಶ್ರೀ, ಹೀಗೆ ನಾನಾ ರೀತಿಯಾಗಿ

ವಿರೂಪಾಕ್ಷನನ್ನು ಕೊಂಡಾಡಲಾಗಿದೆ. ಹೇಮಕೂಟ ತ್ರಿಕೂಟಗಳ ಮಧ್ಯದಲ್ಲಿರುವ ಭಿಷ್ಟಪ್ಪಯ್ಯನ ಗೋಪುರ, ಉದ್ಧಾನ ವೀರಭದ್ರೇಶ್ವರ, ಉಗ್ರನರಸಿಂಹ, ಬಡವಿಲಿಂಗ, ಕಿನ್ನರೇಶ್ವರ, ಮಾಲ್ಯವಂತ, ಕಾಶಿವಿಶ್ವನಾಥ, ಶೃಂಗೇರಿಮಠ ಇತ್ಯಾದಿ ಈ ಪರಿಸರದ ದೇವಾಲಯ ಮತ್ತು ಮಠಗಳ ಹೆಸರುಗಳನ್ನು ಶೇಷೇಂದ್ರಾಚಾರ್ ಅವರು ಈ ಕಿರುಕೃತಿಯಲ್ಲಿ ಉಲ್ಲೇಖಿಸಿದ್ದಾರೆ. ತೆಂಗು, ದ್ರಾಕ್ಷಿ, ಮರುಗಮಲ್ಲಿಗೆ, ಕಮಲ ಕಾರಂಜಿ ಗಳಿಂದ ಸುಂದರ ಮನೋಹರವಾಗಿ ಹಂಪೆಯು ಕಂಗೊಳಿಸುತ್ತಿತ್ತೆಂದು ಚಿತ್ರಿಸಿರುವುದು ಕವಿಯ ಸೃಜನ ಶೀಲತೆಗೆ ನಿದರ್ಶನವಾಗಿದೆ.

ಲಿಪಿಕಾರ ಶೇಷೇಂದ್ರಾಚಾರ್

ಹಸ್ತಪ್ರತಿ ಲಿಪಿಕಾರರಾಗಿ ಶೇಷೇಂದ್ರಾಚಾರ್ ಅವರು ಹಿರಿಯಣ್ಣ ಕವಿಯ ಹಯರತ್ನಶ್ರೇಣಿ, ಕೋಳೂರು ಶಂಕರಕವಿಯ ಮೌನೇಶ್ವರ ಪುರಾಣ ಹಾಗೂ ವೈದ್ಯ ಸರ್ವಸಾರ ಸಂಗ್ರಹ ಇತ್ಯಾದಿ ಹತ್ತಾರು ಕೃತಿಗಳನ್ನು ಪ್ರತಿ ಮಾಡಿದ್ದಾರೆ. ಅಕ್ಷರಗಳನ್ನು ದುಂಡಾಗಿ ಬರೆಯುತ್ತಿದ್ದ ಶೇಷೇಂದ್ರಾಚಾರ್ ಅವರು ಕೆಲವು ಹಸ್ತಪ್ರತಿಗಳಲ್ಲಿ ವಿಷಯಕ್ಕೆ ಸಂಬಂಧಿಸಿದಂತೆ ಚಿತ್ರಗಳನ್ನೂ ಬಿಡಿಸಿರುವುದು ಅವರ ಕಲಾಕೌಶಲ್ಯತೆಗೆ ನಿದರ್ಶನವಾಗಿದೆ.



ಶೇಷೇಂದ್ರಾಚಾರ್ ಅವರ ಬರವಣಿಗೆಯ ಮಾದರಿ



ಶೇಷೇಂದ್ರಾಚಾರ್ ಅವರ ಕಲಾ ಕೌಶಲ್ಯ

೧. ಹಿರಿಯಣ್ಣ ಕವಿಯ ಹಯರತ್ನಶ್ರೇಣಿ

ಶಾಲಿಹೋತ್ರನನ್ನು ಅನುಸರಿಸಿ ಕನ್ನಡದಲ್ಲಿ ಅಶ್ವಶಾಸ್ತ್ರ ಕುರಿತು ಹಲವಾರು ಕೃತಿಗಳು ರಚನೆಗೊಂಡಿವೆ. ಅವುಗಳ ಸಾಲಿಗೆ ಸೇರುವ ಮತ್ತೊಂದು ಕೃತಿಯಾಗಿದೆ, ಹಯರತ್ನಶ್ರೇಣಿ. ೭ ಸಂಧಿ, ೧೪೨ ಷಟ್ಪದಿ ಪದ್ಯಗಳನ್ನೊಳಗೊಂಡ ಈ ಕಿರುಕೃತಿ ಹರಪನಹಳ್ಳಿ ಪಾಳೆಯಗಾರ ಬಾಗುಳಿ ಬಸಪ್ಪನಾಯಕನಲ್ಲಿ ಪುರೋಹಿತನಾಗಿದ್ದ ಹಿರಿಯಣ್ಣ ಈ ಕೃತಿಯ ಕರ್ತೃ. ಕುದುರೆಗಳ ಲಕ್ಷಣ, ಸ್ವರೂಪ, ಪ್ರಕಾರ, ಅವುಗಳಿಗೆ ಕಾಯಿಲೆಗಳು, ಔಷಧಿಗಳು ಮುಂತಾದ ಸಂಗತಿಗಳನ್ನು ಇಲ್ಲಿ ನಿರೂಪಿಸಲಾಗಿದೆ[೧].

ದಪ್ಪನೆಯ ಕಾಗದರೂಪದ ಈ ಪ್ರತಿ ಕೊಪ್ಪಳ ಜಿಲ್ಲೆಯ ಮುದ್ದಾಬಳ್ಳಿಯ ಶ್ರೀ ಗುರುನಾಥ ಸ್ವಾಮಿ ಅವರ ಮನೆಯಲ್ಲಿ ದೊರೆಕಿದ್ದು, ಈಗ ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರ (ಕ್ರಮಾಂಕ ಅ೫೫)ದಲ್ಲಿ ಸಂರಕ್ಷಣೆಗೊಳ್ಳುತ್ತಿದೆ[೨]. ಹಸ್ತಪ್ರತಿಯ ಆರಂಭ ಪುಟದ ಮೇಲ್ಭಾಗದಲ್ಲಿ "ಶ್ರೀ ರೂಢಾಚಾರ್ಯ ಆನೆಗೊಂದಿ ಸಂಸ್ಥಾನದ ಪಾಂಚಾಳಗುರು ಶೇಷೇಂದ್ರಸ್ವಾಮಿ ಗುರೇಂದ್ರ ಯಾತಗಿರಿ ಮೂಲಮಠ ಹಂಪಸಾಗರ ಮುದ್ದಾಬಳ್ಳಿ ಕೊಪ್ಪಳ ನಿಜಾಮ ಇಲಾಖೆ" ಎಂದಿದೆ. ಕೃತಿಯ ಆದಿ ಮತ್ತು ಅಂತ್ಯಗಳಲ್ಲಿ ಶೇಷೇಂದ್ರಾಚಾರ್ ಅವರು ಹೀಗೆ ಹೇಳಿಕೊಂಡಿದ್ದಾರೆ.

ಆದಿ :

> "ಓಂನಮಃ ಶ್ರೀ ಪಂಪಾವೀರೂಪಾಕ್ಷ ಪ್ರಸನ್ನ ॥ ಅಶ್ವಶಾಸ್ತ್ರವಿದು॥ ಪೂರ್ವಕಾಲದಲ್ಲಿ ಅಶ್ವಲಾಯನ ರುಷಿಯು ಶಾಲಿಹೋತ್ರ ಮುನಿಕೂಡಿಕೊಂಡು ಯಜ್ಞ ಮಾಡಿದ

ವ್ಯಾಖ್ಯಾದಲ್ಲಿ ಹುಟ್ಟಿದ ಶಾಸ್ತ್ರವಿದು. ಗೀರ್ವಾಣ ಭಾಷೆಯಲ್ಲಿ ಗ್ರಂಥರೂಪದಿಂದಿರ್ದ ಋಷಿಪ್ರಣೀತಕ್ಕೆ ಈ ಕಾಲದ ಪಂಡಿತರು ಅಂದರೆ ಹರಪನಹಳ್ಳಿ ಶೀಮೆಗೆ ಅರಸನಾದ ಬಾಗಳಿ ಬೂದಿ ಬಸಪ್ಪನಾಯಕನ ಅರಮನೆ ಪುರೋಹಿತರೂ ಉಚ್ಚಂಗಿದುರ್ಗದ ಹಿರಿಯಣ್ಣಪ್ಪನೆಂಬ ಕವಿಯು ಕನ್ನಡ ಭಾಷೆಯ ಭಾಮಿನಿ ಷಟ್ಪದಿ ರೂಪದಿಂ ಬರದು ಲೋಕೋಪಚಾರ ಮಾಡಿರುವನು. ಮುದ್ದಾಬಳ್ಳಿ ಮಾಲೀಪಾಟೀಲ ಹಚ್ಚನಗವುಡರ ಅಸಲಪ್ರತಿ ನೋಡಿ ಇದನ್ನು ತರ್ಜುಮಿ ಮಾಡಿರುತ್ತದೆ.

"ಶ್ರೀ ಮನೃಪ ಶಾಲಿವಾಹನ ಶಕ ೧೮೪೩ನೇ ದುರ್ಮತಿನಾಮ ಸಂವತ್ಸರದ ವೈಶಾಕ ಶುದ್ಧ ೨ಸೋಮವಾರ ಉದಯಕಾಲ ಶುಭಮುಹೂರ್ತದಲ್ಲಿ ಬರೆದಿದೆ"

ಅಂತ್ಯ :

"ದುರ್ಮತಿ ಸಂವತ್ಸರದ ವೈಶಾಕ ಶುದ್ಧ ೪ ಶುಕ್ರವಾರ ಮಧ್ಯಾಹ್ನದಲ್ಲಿ ಸಮಾಪ್ತ ಮಾಡಿದಕ್ಕೆ ಮಂಗಳಮಸ್ತು । ಮಂಗಲಮಹಾಶ್ರೀ ಶ್ರೀ । ಪಂಪಾವಿರೂಪಾಕ್ಷವರ ಪ್ರಸನ್ನ । ಶ್ರೀರಸ್ತು।"

ಮೇಲಿನ ಉಲ್ಲೇಖಗಳಿಂದ ಇದು ಕ್ರಿ.ಶ. ೧೯೨೧ ರಲ್ಲಿ ಶೇಷೇಂದ್ರಾಚಾರ್ ಅವರು ಮುದ್ದಾಬಳ್ಳಿಯ ಮಾಲಿಪಾಟೀಲ ಹಚ್ಚನಗೌಡರ ಬಳಿಯಿದ್ದ ಪ್ರತಿಯನ್ನು ನೋಡಿ ಲಿಪಿಗೈದಿರುವರು.

೨. ಕೋಳೂರು ಶಂಕರ ಕವಿಯ ಮೌನೇಶ್ವರ ಚರಿತೆ

ಧರ್ಮಸಮನ್ವಯಕಾರನೆನಿಸಿದ ತಿಂಥಿಣಿ ಮೋನಪ್ಪಯ್ಯನನ್ನು ಕುರಿತು ರಚನೆಗೊಂಡ ಮೊದಲಕೃತಿಯಾಗಿದೆ, ಕೋಳೂರು ಶಂಕರ ಕವಿಯ ಮೋನಪ್ಪಯ್ಯನ ಚರಿತೆ. ೧೧ ಸಂಧಿ, ೧೧೧೦ ಸಾಂಗತ್ಯ ಪದ್ಯಗಳನ್ನೊಳಗೊಂಡ ಈ ಕೃತಿಯು ಪೂರ್ಣಗೊಂಡಿದ್ದು "ಶಾಲಿವಾಹನ ಶಖ ಸಾವಿರದರೈನೂರ ಮೇಲೆಯಿಪ್ಪತ್ತಾರನೆಯ ಸಾಲು ಸದ್ಭಾವ ಸಂವತ್ಸರದ ಮಾಘದೊಳು ಶುದ್ಧ ವೈಶಾಖ ತಿಥಿಯೊಳು ಸುಧಾಕರವಾಸರೆ ಅಶ್ವಿನಿ ನಕ್ಷತ್ರದಲ್ಲಿ". ಅಂದರೆ ೧೬೨೬ರಲ್ಲಿ ರಚನೆಗೊಂಡಿದೆ. ಪ್ರತಿ ಅಧ್ಯಾಯದ ಆರಂಭದಲ್ಲಿ ಕಥೆಗೆ ಪೂರಕವಾಗುವಂತೆ ಬಸವಣ್ಣ ಅಲ್ಲಮಪ್ರಭುದೇವ, ಚನ್ನ ಬಸವಣ್ಣ ಇತ್ಯಾದಿ ಶಿವಶರಣರ ವಚನಗಳನ್ನು ಕವಿ ಉಲ್ಲೇಖಿಸಿದ್ದಾನೆ. ಚಾಮರಸನು ಚಿತ್ರಿಸಿದ ಪ್ರಭುದೇವನ ವ್ಯಕ್ತಿತ್ವದ ನಿರೂಪಣಾ ಮಾದರಿಯಲ್ಲಿಯೇ ಮೋನಪ್ಪಯ್ಯನ ವ್ಯಕ್ತಿತ್ವ ಮತ್ತು ಸಾಧನೆಯನ್ನು ಈ ಕೃತಿಯಲ್ಲಿ ಚಿತ್ರಿಸಲಾಗಿದೆ.

ಅತ್ಯಂತ ತೆಳುವಾದ ಕಾಗದದ ಈ ಪ್ರತಿಯೂ ಮುದ್ದಾಬಳ್ಳಿಯಲ್ಲಿಯೇ ದೊರೆತಿದ್ದು, ಈಗ ಕನ್ನಡ ವಿಶ್ವವಿದ್ಯಾಲದ ಹಸ್ತಪ್ರತಿ ಭಂಡಾರ (ಕ್ರಮಾಂಕ. ೮೬೨) ದಲ್ಲಿದೆ. ಆರಂಭದ ಮತ್ತು ಕೊನೆಯ ಪುಟಗಳಲ್ಲಿ ತಿಂಥಿಣಿ ಮೋನಪ್ಪಯ್ಯ ಹಾಗೂ ಶಂಕರ ಕವಿಯ ವರ್ಣನಾತ್ಮಕ ರೇಖಾ ಚಿತ್ರಗಳಿರುವುದು ಈ ಪ್ರತಿಯ ವೈಶಿಷ್ಟ್ಯವಾಗಿದೆ. ಆದಿ ಮತ್ತು ಅಂತ್ಯಭಾಗಗಳಲ್ಲಿ ಲಿಪಿಕಾರನಿಗೆ ಸಂಬಂಧಿಸಿದ ವಿವರಗಳು ಹೀಗಿವೆ.

ಆದಿ:

"ಶ್ರೀರಸ್ತು। ಈ ಪುರಾಣವನ್ನೂ ಓದತಕ್ಕ ಧಾಟಿ ಸಾಂಗತ್ಯವದೇ ಯೀಗ ನೂತನವಾಗಿ ಓದಬೇಕೆಂಬ ಅಪೇಕ್ಷೆಯಿದ್ದವರು ಬೇರೆ ಥರಹ ಅಂದ್ರೆ ಶ್ರೀಕೃಷ್ಣರ ದೇವರ ಲಗ್ನದಲ್ಲಿ ಸುಬದ್ರಿಯು ಬಾಗಲುಕಡದ ಹಾಡು ಅಂದ್ರೆ। ರಂಗನ ಪರಿಣಯದ್ಯೆದನೆ ದಿವಸದಿ ಮಂಗಲೋಕಳಿಯನಾಡಿ । ಯಂಬ ಹಾಡಿನ ಮೆಲುಪಲ್ಲದಂತೆ ಓದಬಹುದು ನಾಟಕದಲ್ಲಿ । ಕಂದಪದ್ಯದ ಹಾಗೆ ಓದರೀ ಚಮತ್ಕಾರವಾದ ಬಾಮಿನಿಯ ಹಾಗಾದರು ಓದಲಿಕ್ಕೆ ಬರುತ್ತದೆ ಮುಖ್ಯವಾಗಿಯಿರತಕ್ಕದ್ದು ಚಾರಿತ್ರಗಳ ವರ್ಜಯಿರುವದೂ।"

"ಶ್ರೀಮದ್ವಿಶ್ವಕರ್ಮ ಪರಬ್ರಹ್ಮಣೇ ನಮಃ। ಶ್ರೀಮತ್ಕಾಳಿಕಾಂಬಾಯ ನಮಃ ಶ್ರೀ । ಮೌನೇಶ್ವರದೇವರ ಪುರಾಣವನ್ನು ಬರಿಯುವದಕ್ಕೆ ನಿರ್ವಿಘ್ನಮಸ್ತು। ಶ್ರೀರಸ್ತು। ಶಂಕರಕವಿ ವಿರಚಿಸಿದ ಶರಣಮೋನಯ್ಯನ ಸತ್ಕಥಾಮೃತ ಸಜ್ಜನಶುದ್ಧ ಶವಾಚಾರ ಲಿಂಗಾಂಗ ಸಮರಸ ಸ್ವಾನುಭಾವಿಗಳು ತಮ್ಮ ಶಿಶುವಿನ ಶಿಶುವೆಂದು ಬಾಲಕರ ತೊದಲು ನುಡಿಯು ತಪ್ಪನೆನಿಸದೆ ಯೆತ್ತಿಮುದ್ದಾಡುವಂತೆ ಯಿದರಲ್ಲಿ ಕುಂದುಕೊರತೆಗಳಿದ್ದರೆ ವೋದಿಹೇಳಿ ಕೇಳುವುದು। ಯಿಂತಿವರ ಪಾದಾರವಿಂದಕ್ಕೆ ನಮೋನಮೋಯೆಂಬೆನೂ।"

ಅಂತ್ಯ :

"ಶ್ರೀ ಮನ್ಮಹಾ ಮೌನೇಶ್ವರ ದೇವರ ಪಾದಪೂಜಿತರಾದ ಲಿಂಗನಬಂಡೀ ಮಠದ ಲಿಂಗೈಯ್ಯನವರ ಗರ್ಭಸಂಜಾತರಾದ ಮೌನಯ್ಯನವರು ಸ್ವಹಸ್ತದಿಂದ ಹಳೆಪ್ರತಿಯಿದ್ದಂತೆ ಬರದುಯಿದ್ದ ಹೊಸಪ್ರತಿಯನ್ನು ನೋಡಿ ಮತ್ತೊಮ್ಮೆ ಪ್ರತಿ ಮಾಡಿರುತ್ತದೆ। ಸದರಿ ಮೌನಯ್ಯನವರು ಬರದ ಪ್ರತಿಯು ಮುಗಿದ ಮಿತಿ ಶ್ರೀ ಮನೃಪ ಶಾಲಿವಾಹನ ಶಖದಾ ೧೭೮೬ನ್ನೆಯ ರಕ್ತಾಕ್ಷಿನಾಮ ಸಂವತ್ಸರದ ಜೇಷ್ಠ ಬಹುಳ ೨ ಬಿದ್ಗಿ ಮಂಗಳವಾರ ಉತ್ರಾಷಾಢ ನಕ್ಷತ್ರ ಹಗಲು ಯೇಳನೇ ತಾಶಿನಲ್ಲಿ ಗುರುಹೋರೆಯಲ್ಲಿ ಮುಗಿದ ಶ್ರೀ ಮೌನೇಶ್ವರ ಪುರಾಣವನ್ನು ಮತ್ತೂ ಹಂಪಸಾಗರದಲ್ಲಿಯಿರುವ ಯಾತಗಿರಿ ಮಠದ ಶ್ರೀ ಗುರೇಂದ್ರ ಸ್ವಾಮಿಗಳವರ ಪುತ್ರರಾದ ಶೇಷೇಂದ್ರಸ್ವಾಮಿಗಳವರು ಶಾಲಿವಾಹನ ಶಖ ೧೮೨೫ ಶೋಭನಕೃತು ಸಂ। ರದ ಆಶ್ವೀಜ ಶು ೬ ಸ್ಥಿರವಾರ ಪೂರ್ಣ ಮಾಡಿದ್ದು । ಯಿ ಪುರಾಣವನ್ನು ಬರಿಯುವದಕ್ಕೆ ಪೂರ್ವದಲ್ಲಿ ನಿಜಾಂ ಇಲಾಖೆ ಕೊಪ್ಪಳದಲ್ಲಿ ಯಿರುವಂತೆ ವೇದಮೂರ್ತಿ ಧರ್ಮಾಚಾರಿಯವರ ಮನಿಯಲ್ಲಿ ಯಿರುವಂತ್ತ ಹಳೆಪುರಾಣವನ್ನು ಸ್ವಹಸ್ತದಿಂದ ಬರದು ಇದ್ದಂಥ ನೆನಪು।

ಯಿ ಪುರಾಣ ಓದತಕ್ಕ ಧಾಟಿ ಯಿರತಕ್ಕದ್ದು ಸಾಂಗತ್ಯ ವರ್ಜಿ । ಯೀಗ ನೂತನವಾಗಿ ಓದಬೇಕೆಂಬ ಅಪೇಕ್ಷೆಯಿದ್ದವರು ಶ್ರೀ ಕೃಷ್ಣದೇವರು ಸುಬದ್ರಿಯರು ಮಾಡಿದ ಬಾಗಲ ಕಟ್ಟುವ ಹಾಡು ಅಂದ್ರೆ । ಗುರ್ತು ರಂಗನ ಪರಿಣಯದ್ಯೆದನೆ ದಿವಸದಿ ಮಂಗಳೋಕಳಿಯನಾಡೀ । ಯೆಂಬ ಹಾಡಿನ ಧಾಟಿಯಂತೆ ಓದಬೇಕು.

> ಯಿದರ ಮೆಲಾಗಿ ಓದಬೇಕೆಂಬವರೂ ತಮ್ಮ ಬುದ್ಧಿ ಚಾಪಲ್ಯದಿಂದ ಯಿಷ್ಟ ಪ್ರಕಾರ ಓದಬಹುದು ನಾಟಕದ ಪದ ವರ್ಜವಾದರು ಓದಬಹುದು ಶೋಭನಕೃತು ಸಂವತ್ಸರದ ಆಶ್ವೀಜ ಶುದ್ಧ ೬ ಸ್ಥಿರವಾರು ಸಂಪೂರ್ಣವಾಗಿರುತ್ತದೆ. ನನ್ನ ತಪ್ಪೆನಾದರು ಯಿದ್ದರೆ ಓದುವರು ತಿದ್ರಿ ಮೌನೇಶ್ವರ ಪುರಾಣವು ಸಮಾಪ್ತವು"

ಈ ಉಲ್ಲೇಖಗಳಿಂದ ಈ ಪ್ರತಿಗೆ ಮೂಲ, ೧೭೮೬ರಲ್ಲಿ ಪ್ರತಿ ಮಾಡಿದ ಲಿಂಗನ ಬಂಡಿ ಮಠದ ಲಿಂಗಯ್ಯನವರ ಗರ್ಭಸಂಜಾತರಾದ ಮೌನಯ್ಯನವರ ಪ್ರತಿ. ಶೇಷೇಂದ್ರಾ ಚಾರ್ ಅವರು ಈ ಪ್ರತಿಯನ್ನು ೧೮೨೫ರಲ್ಲಿ ನಕಲು ಮಾಡಿಕೊಂಡಿದ್ದಾರೆಂದು ತಿಳಿದುಬರುತ್ತದೆ. ಅಲ್ಲದೇ ಕೊಪ್ಪಳದಲ್ಲಿ ಇರುವ ವೇದಮೂರ್ತಿ ಧರ್ಮಾಚಾರಿಯವರ ಮನೆಯಲ್ಲಿರುವಂಥ ಹಳೆಪುರಾಣವನ್ನು ನೋಡಿ ಈ ಕೃತಿಯನ್ನು ಬರೆದಂಥ ನೆನಪು ಎಂದು ನಿರೂಪಿಸಲಾಗಿದೆ"[೫]. ಈ ಕೃತಿಯನ್ನು ಓದುವ ಕ್ರಮದ ಬಗ್ಗೆ ಹೇಳಿರುವುದು, ತಪ್ಪುಗಳಿದ್ದರೆ ತಿದ್ದಿ ನಿಮ್ಮ ಶಿಶುವೆಂದು ತಿಳಿಯಿರಿ ಎಂದು ವಿನಂತಿಸಿಕೊಂಡಿರುವುದು ಲಿಪಿಕಾರನ ಪ್ರಾಮಾಣಿಕತೆಗೆ ನಿದರ್ಶನವಾಗಿದೆ.

೩. ವೈದ್ಯಸರ್ವಸಾರ ಸಂಗ್ರಹ

ವೈದ್ಯಪದ್ಧತಿಯಲ್ಲಿ ಅತ್ಯಂತ ಪ್ರಾಚೀನವಾದ ಆಯುರ್ವೇದವು ಇಂದಿಗೂ ತನ್ನ ಅನನ್ಯತೆಯನ್ನು ಉಳಿಸಿಕೊಂಡಿದೆ. ಕನ್ನಡದಲ್ಲಿ ಇದಕ್ಕೆ ಸಂಬಂಧಿಸಿದಂತೆ ಅನೇಕ ಹಸ್ತಪ್ರತಿಗಳು ಲಭ್ಯವಿದೆ. ಅಂಥವುಗಳಲ್ಲಿ ವೈದ್ಯಸರ್ವಸಾರ ಸಂಗ್ರಹ ಪ್ರಮುಖವಾಗಿದೆ. ವೈದ್ಯ ವಿಷಯಕ್ಕೆ ಸಂಬಂಧಿಸಿದ ಅನೇಕ ವಿಷಯಗಳನ್ನು ಈ ಗ್ರಂಥ ತಿಳಿಸುತ್ತದೆ. ಮೂಲತಃ ಮುದ್ದಾಬಳ್ಳಿಯ ವಿಶ್ವಕರ್ಮ ಸಮುದಾಯಕ್ಕೆ ಸೇರಿದ ಚೂಡಪ್ಪ ಆನಂದಪ್ಪ ದೇವಪುರದ ಅವರಿಗೆ ಸೇರಿದ ಈ ಗ್ರಂಥವನ್ನು ಶೇಷೇಂದ್ರಾಚಾರ್ ಅವರು ಪ್ರತಿ ಮಾಡಿಕೊಂಡ ಬಗ್ಗೆ ಹೀಗೆ ಹೇಳಿಕೊಂಡಿರುವರು. ಕಾಗದ ರೂಪದ ಈ ಹಸ್ತಪ್ರತಿಯೂ ಸಹಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರ (ಕ್ರಮಾಂಕ. ೮೬೬)ದಲ್ಲಿ ಸಂರಕ್ಷಣೆಗೊಳ್ಳುತ್ತಿದೆ.

ಆದಿ :

> "ಶ್ರೀ ಮದ್ವಿಶ್ವಕರ್ಮ ಕುಲೋತ್ಪನ ಚೂಡಪ್ಪ ಆನಂದಪ್ಪ ದೇವಪುರದ ಸಾಕಿನ ಮುದ್ದಾಬಳ್ಳಿ ತಾಲ್ಲೂಕು ಕಿಲ್ಲೆ ಕೊಪ್ಪಳ ಜಾಹಗೀರ ನಿಜಾಮ ಸರಕಾರ ಹೈದ್ರಾಬಾದ್ ಇವರ ವೈದ್ಯಸರ್ವಸಾರಸಂಗ್ರಹ ಪುಕ್ತಕವಿದು ಪುರಾತನರು ಬರೆದ ಪ್ರತಿಯಂತೆ ತರ್ಜುಮೆ ಮಾಡಿದೆ ಶ್ರೀ ಸರ್ವಾಥಸಿದ್ಧಿ ಗಣಪತಿಯೇ ನಮಃ ಶ್ರೀ ಶಾರದಾಂಬಾಯೆ ನಮಃ ವೈದ್ಯಶಾಸ್ತ್ರವಿದನ್ನು ಬರೆಯುವುದಕ್ಕೆ ನಿರ್ವಿಘ್ನಮಸ್ತು ಆಯುರಾರೋಗ್ಯ ಅಭಿವೃದ್ಧಿಮಸ್ತು.

ಅಂತ್ಯ:

"...... ರೋಗಪರಿಹರಿತೆಂಬಲ್ಲಿಗೆ ಪೂರ್ವೀಕರಿಂದ ರಚಿತವಾದದ್ದು ವೈದ್ಯಕ ಶಾಸ್ತ್ರಮಂ ಮತ್ತೂ ನಕಲಾಗಿ ಬರೆದು ಮುಗಿಸಿದ್ದು ಮಿತಿ ವೃತ್ತ ಸ್ವಸ್ತಿಶ್ರೀ ನೃಪಶಾಲಿ ವಾಹನ ಶಕ ಇಂದುರ್ದಿಶಾಸ್ನರುತೌ ಆನಂದಾಬ್ಧಿಸುಜೇಷ್ಠ ಮಾಸ ಶಿತಪಕ್ಷೆ ಮನ್ವಾಂತರೋತಿಥೌ ಸ್ಥಿರವಾರೆ ಅಭಿಜಿತ್ ಮಹೂರ್ತ ಸಮಯೆ ಯಿ ವೈದ್ಯಶಾಸ್ತ್ರ ಸುಭೌ ದಯದಿಂ ಪೂರ್ಣವ ಮಾಡ್ದೆ ಮಂಗಳಮಹಾ ಶ್ರೀ ಶ್ರೀ ವಿಶ್ವಕರ್ಮನೇ ಜೈ

ಶ್ರೀ ಮಂಗಲ ಮಹೇಶ್ವರಿ ಶುಭಂ ಭವಂತು ಶ್ರೀ ಶ್ರೀ ಶ್ರೀ ವಿಶ್ವಕರ್ಮ ಪಾಂಚಾಲಬ್ರಾಹ್ಮಣ ಗುರುಪರಂಪರೆ ಸದ್ಗುರು ಶ್ರೀ ರೂಢಾಚಾರ್ಯಸ್ವಾಮಿ ಸುವಂಶೋದ್ಧಾರ ಯಾತಗಿರಿ ಮೂಲಮಠ ಹಂಪಸಾಗರ ಮುಕ್ಕಂ ಮುದ್ದಾಬಳ್ಳಿ ಮಠ ನಿವಾಸರಾದ ಶ್ರೀ ಗುರೇಂದ್ರ ಸ್ವಾಮಿಗಳವರ ಗರ್ಭಸಂಜಾತ ಶ್ರೀ ಶೇಷೇಂದ್ರಚಾರ್ ಗುರುಸ್ವಾಮಿಗಳ ಬರಹವು ಶ್ರೀ ಶ್ರೀ "

ಸಂಸ್ಕೃತ ಭಾಷೆಯ ಮೇಲೆಯೂ ಅವರಿಗೆ ವಿಶೇಷವಾದ ಜ್ಞಾನವಿತ್ತು. ಇದಕ್ಕೆ ಮೇಲಿನ ಪ್ರಶಸ್ತಿಗಳಲ್ಲಿನ ಮಾತುಗಳು ಸಾಕ್ಷಿಯಾಗಿವೆ. ಹೀಗೆ ಹಸ್ತಪ್ರತಿಗಳ ನಕಲು ಮಾಡುವುದರ ಮೂಲಕ ಕನ್ನಡ ಕಾವ್ಯ ಪುರಾಣಗಳ ಪರಿಚಲನೆ ಮತ್ತು ಪ್ರಸಾರಕ್ಕೆ ದುಡಿದ ಶೇಷೇಂದ್ರಾಚಾರ್ ಅವರ ಬರಹಗಳ ಬಗ್ಗೆ ಇನ್ನೂ ವ್ಯಾಪಕ ಶೋಧ ಮತ್ತು ಅಧ್ಯಯನ ನಡೆಯಬೇಕಾದುದು ಅವಶ್ಯವಿದೆ.

ಕೊನೆ ಟಿಪ್ಪಣಿಗಳು

೧. ಈ ಕೃತಿಯ ಪೂರ್ಣಪಠ್ಯಕ್ಕಾಗಿ ನೋಡಿ : ಕಂಠ ಪತ್ರ೨, ಲೇ.ಎಫ್.ಟಿ. ಹಳ್ಳಿಕೇರಿ, ವಿಕಾಸ ಪ್ರಕಾಶನ, ಹೊಸಪೇಟೆ, ೨೦೦೪ ಪು. ೧೪೧

೨. ಏಕೈಕ ಹಸ್ತಪ್ರತಿಯ ಸಹಾಯದಿಂದ ನಾನು ಪರಿಷ್ಕರಿಸಿದ ಈ ಕೃತಿಯನ್ನು ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗವು ೨೦೦೩ರಲ್ಲಿ ಪ್ರಕಟಿಸಿದೆ.

೩. ಶೇಷೇಂದ್ರಾಚಾರ್ ಅವರು ಪ್ರತಿ ಮಾಡಿದ ಎಲ್ಲ ಹಸ್ತ ಪ್ರತಿಗಳು ಮುದ್ದಾಬಳ್ಳಿಯ ಏಕದಂಡಗಿಮಠದ ಶ್ರೀ ಗುರುನಾಥ ಸ್ವಾಮಿಗಳವರ ಮನೆಯಲ್ಲಿ ದೊರೆತಿವೆ. ಶ್ರೀ ಗುರುನಾಥಸ್ವಾಮಿ ಅವರು ಶೇಷೇಂದ್ರಾಚಾರ್ ಅವರ ಮೊಮ್ಮಗ. ಹೀಗಾಗಿ ಲಿಪಿಕಾರನ ಮನೆಯಲ್ಲಿಯೇ ಈ ಹಸ್ತಪ್ರತಿಗಳು ದೊರೆತಿರುವುದು ವಿಶೇಷತೆಯಾಗಿದೆ.

೪. ಈ ಕೃತಿಯ ಪರಿಷ್ಕರಣ ಕಾರ್ಯವನ್ನು ಈಗ ನಾನು ಕೈಗೆತ್ತಿಕೊಂಡಿದ್ದೇನೆ.

೫. ಕೊಪ್ಪಳದಿಂದ ಮುದ್ದಾಬಳ್ಳಿಗೆ ಹೋಗುವ ರಸ್ತೆಯ ಬಲಭಾಗಕ್ಕೆ ಅಂದರೆ ಕೊಪ್ಪಳ ನಗರದ ಕೊನೆಯ ಭಾಗದಲ್ಲಿ ವಿಶ್ವಕರ್ಮ ಸಮುದಾಯಕ್ಕೆ ಸೇರಿದ ಮಠವೊಂದಿದೆ. ಅದೇ ಧರ್ಮಾಚಾರಿಯವರ ಮನೆಯೆಂದು ಹೇಳಲಾಗುತ್ತಿದೆ.

೬. ಶೇಷೇಂದ್ರಾಚಾರ್ ಅವರು ಸಂಸ್ಕೃತದ ಅನೇಕ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

೧೫. ಚಕ್ರವರ್ತಿ ತಿರುಮಲನ ಜನನ ಮತ್ತು ಮರಣ - ಒಂದಿಷ್ಟು ಹೊಸ ವಿಚಾರಗಳು

ಡಾ. ಕೆ.ಜಿ. ಗೋಪಾಲಕೃಷ್ಣರಾವ್

ನಮ್ಮ ದೇಶದ ಇತಿಹಾಸದಲ್ಲಿ ವಿಜಯನಗರ ಒಂದು ರೋಚಕ ಅಧ್ಯಾಯ. ಈ ಅಧ್ಯಾಯದ ಅತಿ ಪ್ರಸಿದ್ಧ ಚಕ್ರವರ್ತಿ ಕೃಷ್ಣರಾಯ. ಈತನ ಮಗ ತಿರುಮಲನ ಬಗೆಗೆ ಮಾಹಿತಿಗೋಸ್ಕರ ಬೆರಳಣಿಕೆಯಷ್ಟು ಶಾಸನಗಳನ್ನು ಬಿಟ್ಟರೆ ನಾವು ಪೋರ್ಚುಗೀಸ್ ಕುದುರೆ ವ್ಯಾಪಾರಿ ನ್ಯೂನಿಜನನ್ನು ಮೊರೆಹೋಗಬೇಕೆಂದರೆ ನಮ್ಮ ಪೂರ್ವಜರಿಗೆ ಇತಿಹಾಸವನ್ನು ದಾಖಲಿಸುವ ಬಗ್ಗೆ ಇದ್ದ ಅಲಕ್ಷ್ಯ ನಮ್ಮ ಗಮನಕ್ಕೆ ಬರುತ್ತದೆ.

ಅತೀ ಕಡಿಮೆ ವಿವರ ಇರುವ ತಿರುಮಲನ ಬಗ್ಗೆ ನಮ್ಮ ಇತಿಹಾಸಕಾರರು ಆಸ್ಥೆಯಿಂದ ಬರೆದಿರುವುದು ಇನ್ನೂ ಅಲ್ಪ. ಸಿವೆಲ್ ಸಾಹೇಬರ 'ಮರೆತು ಹೋದ ಸಾಮ್ರಾಜ್ಯ'ದಲ್ಲಿ ನ್ಯೂನಿಜನ ವರದಿಯಲ್ಲಿ ಮಾತ್ರ ತಿರುಮಲನವೃತ್ತಾಂತ ಬಂದಿದೆ.[1] ಹಂಪೆ ವಿಶ್ವವಿದ್ಯಾಲಯದ 'ಕರ್ನಾಟಕ ಚರಿತ್ರೆ'ಯಲ್ಲಿ ಒಂದೇ ಪ್ಯಾರಾದಲ್ಲಿ ತಿರುಮಲನ ಇತಿಹಾಸ ಮುಗಿದಿದೆ. [2] ಎಂ.ವಿ. ಕೃಷ್ಣರಾಯರ 'ಕರ್ನಾಟಕ ಇತಿಹಾಸ ದರ್ಶನ'ದಲ್ಲಿ ಕೆಲವೇ ಸಾಲುಗಳಲ್ಲಿ ತಿರುಮಲನ ಇತಿವೃತ್ತ ಮುಗಿದಿದೆ. [3] ಬಾ.ರಾ.ಗೋಪಾಲ್ ಮತ್ತು ಸೂರ್ಯನಾಥಕಾಮತ್ ಅವರೂ ಹೆಚ್ಚಿನ ವಿವರಗಳನ್ನೇನೂ ನೀಡುವುದಿಲ್ಲ. ಈ ಎಲ್ಲ ಇತಿಹಾಸಕಾರರೂ ನ್ಯೂನಿಜನ ವರದಿಯನ್ನು ಯಥಾವತ್ತಾಗಿ ಉದಾಹರಿಸುತ್ತಾರೆಯೇ ಹೊರತು ಪ್ರಕಟಿತ ಶಾಸನಗಳಲ್ಲೇ ಇರುವ ಮಾಹಿತಿಯನ್ನು ಉಪಯೋಗಿಸಿಕೊಂಡು ತಿರುಮಲನ ಜನನ, ಮರಣ ಅಥವಾ ಪಟ್ಟವಾದ ದಿನವನ್ನು ನಿರ್ಧರಿಸಲು ಪ್ರಯತ್ನ ಪಟ್ಟಂತಿಲ್ಲ.

ಈಗ ತಿರುಮಲನ ಜನ್ಮದಿನವನ್ನು ಖಚಿತವಾಗಿ ಹೇಳಲು ಸಾಧ್ಯವೆ ನೋಡೋಣ. ಈ ಸಂದರ್ಭದಲ್ಲಿ ಸಾಳ್ವಗೋವಿಂದರಾಜನ ಗುಂಡ್ಲುಪೇಟೆ - 19[4] ಶಾಸನವನ್ನು ಗಮನಿಸ ಬೇಕು. ಈ ಶಾಸನ ಇತಿಹಾಸಕಾರರ ಗಮನವನ್ನು ಹೆಚ್ಚು ಸೆಳೆದಂತಿಲ್ಲ. ಪಾಠ ಹೀಗಿದೆ:

1. ಶ್ರೀಮತು ಶ್ರೀಮನ್ಮಹಾಮಂಡಲೇಶ್ವರ ಶ್ರೀ
2. ಕೃಷ್ಣರಾಯರಿಗೆ ಪುತ್ರೋತ್ಸವವಾದ ಕಾಲ ತಮಜಗಳ ನಿ
3. ರೂಪದಿಂದ ಗೋಪಿಂದರಾಜಗಳು ಬಹುಧಾನ್ಯ ಸಂವತ್ಸರದ
4. ಶ್ರಾವಣ ಶುದ್ಧ 12 ದ್ವಾದಶಿಯಲ್ಲಿ ಮತಲಿ.. ದಾನ. ಶ್ರೀನಿ
5. ವಾಸ ಪಂಡಿತರು ತಿರುಮಲ ಪಂಡಿತರಿಗೆ.... ಇತ್ಯಾದಿ.

ಈ ಶಾಸನ ತಿರುಮಲನ ಜನ್ಮದಿನವನ್ನು ಸ್ಪಷ್ಟವಾಗಿ ಬಹುಧಾನ್ಯ ಶ್ರಾವಣ ಶುದ್ಧ ದ್ವಾದಶಿ ಎಂದರೆ 19-7-1518 ಎಂದು ಹೇಳುತ್ತದೆ. ನ್ಯೂನಿಜನ ವರದಿಯಿಂದಲೂ ಈ ಸಂವತ್ಸರವನ್ನು ಸರಿಯೆಂದು ಊಹಿಸಬಹುದು.

ಇಲ್ಲೊಂದು ಅನುಮಾನ ಕಾಡುತ್ತದೆ. ಕೃಷ್ಣರಾಯನಿಗೆ ಪುತ್ರೋತ್ಸವವಾದಾಗ ದಾನ ಕೊಡಬೇಕಾದವನು ಕೃಷ್ಣರಾಯನೇ, ರಾಜಧಾನಿಯಲ್ಲಿ. ಆದರೆ ಇಲ್ಲಿ ಸಾಳ್ವ ಗೋವಿಂದ ರಾಜ ದಾನ ಕೊಟ್ಟಿದ್ದಾನೆ. ಗೋವಿಂದರಾಜ ಕ್ರಿ.ಶ. 1518ರಲ್ಲಿ ಉಮ್ಮತ್ತೂರು ರಾಜ್ಯ ವನ್ನು ತೆರಕಣಾಂಬಿಯಿಂದ ಆಳುತ್ತಿದ್ದ. ಹೀಗೇಕಾಯಿತು? ಉತ್ತರ ಸುಲಭವಾಗಿದೆ. ಕೃಷ್ಣರಾಯನ ಪಟ್ಟದರಸಿ, ತಿರುಮಲನ ತಾಯಿ, ತಿರುಮಲದೇವಿ ನ್ಯೂನಿಜನೇ ಹೇಳು ವಂತೆ ಶ್ರೀರಂಗ ಪಟ್ಟಣದ ರಾಜಕುವರಿ - ಕುಮಾರ ವೀರಪ್ಪೊಡೆಯನ ಮಗಳು. ಪುತ್ರೋತ್ಸವಕ್ಕೆ ತವರಾದ ಶ್ರೀರಂಗಪಟ್ಟಣಕ್ಕೇ ಬಂದಿರಬೇಕು. ಶ್ರೀರಂಗಪಟ್ಟಣವನ್ನು ಆಳುತ್ತಿದ್ದ ಗೋವಿಂದರಾಜ ಕನ್ನಗ್ರಜನ ಆಜ್ಞೆಯಂತೆ ಭಾವೀ ಚಕ್ರವರ್ತಿ ಹುಟ್ಟಿದ ದಿನವೇ ದಾನ ಕೊಟ್ಟಿದ್ದಾನೆ.

ಇನ್ನು ತಿರುಮಲನ ಮರಣವನ್ನು ಕುರಿತ ಮಾಹಿತಿಯ ಬಗ್ಗೆ ಗೊಂದಲವಿದೆ. ಮೊದಲು ಅನಂತಪುರ ಜಿಲ್ಲೆಯ ರೊದ್ದನಾಡಿನ ಈ ಶಾಸನವನ್ನು ನೋಡೋಣ.[5] 1526ನೇ ಇಸವಿ ಮಾರ್ಚ್ 25 ರಂದು ಹೊರಡಿಸಲಾದ ಈ ಶಾಸನ ಹೀಗೆ ಹೇಳುತ್ತದೆ:

'ಶಕ 14446ರ ಕಾರಣ ಜ್ಯೇಷ್ಠ ಶು 6, ಭಾನುವಾರದಂದು ಕೃಷ್ಣರಾಯನು ಮೃತ ನಾಗಲು ರೊದ್ದನಾಡು ಅನಾಯಕವಾದಾಗ ಅಳಿಯರಾಮರಾಯನು ಸಿಂಹಾಸನವನ್ನೇರಿ ಆಡಳಿತವನ್ನು ಸ್ಥಿರೀಕರಿಸಿ ರೊದ್ದಹೋಬಳಿಯ ರೆಡ್ಡಿ ಮತ್ತು ಕರಣಂ ಅವರ ಅಧಿಕಾರ ವನ್ನು ಪುನಃ ಸ್ಥಾಪಿಸಿದನು'

ಈ ಶಾಸನದ ಪ್ರಕಾರ ಕೃಷ್ಣರಾಯನ ಮರಣ ತಾರಣ ಸಂವತ್ಸರದಲ್ಲಾಯಿತು ಎಂದರೆ 8-5-1524ರಲ್ಲಿ

ತೆಲುಗು ಚಾಟುಪದ್ಯ ಮಾದರಿಯ ಅಲ್ಲಸಾನಿ ಪೆದ್ದನನದೆನ್ನಲಾದ ಒಂದು ಪದ್ಯ ವನ್ನು ನೋಡೋಣ. ಈ ಪದ್ಯವನ್ನು ವೇದಮು ವೆಂಕಟರಾಯಾ ಶಾಸ್ತ್ರಿಗಳು ತಮ್ಮ ಆಮುಕ್ತ ಮಾಲ್ಯದ ವ್ಯಾಖ್ಯಾನದಲ್ಲಿ ಉದಾಹರಿಸಿದ್ದಾರೆ.[6] ಸಾರಾಂಶದಲ್ಲಿ ಈ ಚಾಟು ಪದ್ಯವು ಕೃಷ್ಣರಾಯನು ತಾರಣ ಸಂವತ್ಸರದ ಜ್ಯೇಷ್ಠ ಶುದ್ಧ 6 ಎಂದರೆ 8-5-1524ರಲ್ಲಿ ಮರಣಿಸಿದನು.

ರೊದ್ದನಾಡಿನ ಶಾಸನವೂ ಇದಕ್ಕೆ ಸಂಬಂಧವಿಲ್ಲದ ಚಾಟುಪದ್ಯವೂ ಕೃಷ್ಣರಾಯನು ಕ್ರಿ.ಶ. 1524 ತಾರಣದಲ್ಲಿ ಮರಣಿಸಿದನೆನ್ನುತ್ತವೆ. ಕೃಷ್ಣರಾಯನ ಮರಣ ಕ್ರಿ.ಶ. 1529 ರಲ್ಲಿ ಆಯಿತೆನ್ನುವುದು ಎಲ್ಲರಿಗೂ ತಿಳಿದ ವಿಷಯ. ಆದ್ದರಿಂದ ಇಲ್ಲಿ ಶಾಸನ ಕವಿ ಮತ್ತು ಚಾಟು ಪದ್ಯ ಕವಿ ಚಕ್ರವರ್ತಿ ತಿರುಮಲ ಎನ್ನುವುದಕ್ಕೆ ಬದಲಾಗಿ ಕೃಷ್ಣರಾಯ ಎನ್ನುತ್ತಿದ್ದಾರೆಯೆ? ಹಾಗಾದರೆ ತಿರುಮಲರಾಯನ ಮರಣ 8-5-1924 ರಲ್ಲಾಯಿತೆ

ಎಂಬ ಪ್ರಶ್ನೆ ಏಳುತ್ತದೆ. ಈ ಶಾಸನ ಕೂಟವಿದ್ದರೂ ಇರಬಹುದು. ಆದರೂ ಕ್ರಿ.ಶ. 1524ರ ಗಲಭೆಯ ಪರಿಸ್ಥಿತಿಯನ್ನು ನಂಬಬಹುದೆಂದು ತೋರುತ್ತದೆ. ತನ್ನ ಒಬ್ಬನೇ ಮಗ ತನ್ನ ಕಣ್ಣೆದುರಿಗೇ ಸತ್ತಾಗ ಕೃಷ್ಣರಾಯ ದುಃಖತಪ್ತನಾಗಿ ಆಡಳಿತವನ್ನು ಕಡೆಗಣಿಸಿದಾಗ ಮಹಾಪ್ರಧಾನ ಸಾಳ್ವ ತಿಮ್ಮರಸನೂ ಇಲ್ಲವಾದಾಗ ರಾಜ್ಯದಲ್ಲಿ ಅನಾಯಕತೆ ತಲೆದೋರಿರಬೇಕು. ಆಗ ರಾಮರಾಯ ಅಧಿಕಾರ ಚಲಾಯಿಸಲು ಪ್ರಯತ್ನಪಟ್ಟಿರಬೇಕು. ಆದರೆ ಕೃಷ್ಣರಾಯ ಚೇತರಿಸಿಕೊಂಡು ಪುನಃ ಆಡಳಿತ ಸೂತ್ರಗಳನ್ನು ವಹಿಸಿಕೊಂಡಾಗ ರಾಮರಾಯ ನೇಪಥ್ಯಕ್ಕೆ ಸರಿದಿರಬೇಕು. ಇದೊಂದು ಊಹೆ ಆದರೆ ಸುಮಾರು ಇದೇ ಕಾಲಘಟ್ಟದಲ್ಲಿ ಬಂಕಾಪುರದ ಮಾದಣ್ಣ ಒಡೆಯ ದಂಗೆಯೆದ್ದುದನ್ನು ಕೆಳದಿ ನೃಪ ವಿಜಯ ದಾಖಲಿಸುತ್ತದೆ[7]. ಹಾಗೆಯೇ ಮದುರೆಯಲ್ಲಿ ನಾಗಮನಾಯಕನ ದಂಗೆಯೂ ಪ್ರಾಯಶಃ ಇದೇ ಕಾಲದ್ದು. ನ್ಯೂನಿಸನೂ ತಿರುಮಲ ತನ್ನ ಆರನೇ ವಯಸ್ಸಿನಲ್ಲಿ ತೀರಿಕೊಂಡ ಎಂದು ಹೇಳುವುದರಿಂದ ತಿರುಮಲನ ಮರಣ ತಾರಣ ಸಂವತ್ಸರದಲ್ಲೇ ಆಗಿರಬೇಕು.

ಈಗ ತಿರುಮಲನ ಶಾಸನಗಳಿಂದ ಸಿಗುವ ಮಾಹಿತಿಯನ್ನು ಪರಿಶೀಲಿಸೋಣ.

ಇದುವರೆಗೆ ನನ್ನ ಗಮನಕ್ಕೆ ತಿರುಮಲನ 12 ಶಾಸನಗಳು ಬಂದಿವೆ. ಮೊದಲನೆಯ ಶಾಸನ ಯಳಂದೂರು 64 [8]. ಇದು ಕ್ರಿ.ಶ. 1523ರ ಸ್ವಭಾನು ಸಂವತ್ಸರದ್ದು. ಆದರೆ ಶಾಸನದಲ್ಲಿ ತಿರುಮಲನಿಗೆ ಚಕ್ರವರ್ತಿ ಲಾಂಛನಗಳನ್ನು ಹೇಳಿಲ್ಲ. ತಿರುಮಲನಿಗೆ ಪಟ್ಟವಾದ ಸೂಚನೆ ಮೊದಲ ಬಾರಿಗೆ ಸಿಕ್ಕುವುದು ಅವನ 11-4-1524ರ ಪಿರಿಯಾಪಟ್ಟಣ 138ರ ಶಾಸನದಲ್ಲಿ.[9] ಎಂದರೆ 1524ರ ಚೈತ್ರಕ್ಕಾಗಲೇ ಅವನ ಪಟ್ಟವಾಗಿತ್ತು. ತಿರುಮಲರಾಯನ ಕೊನೆಯ ಶಾಸನ ಮಾಗಡಿ 82.[10] ಕ್ರಿ.ಶ. 1524ರ ನವೆಂಬರ್ ತಿಂಗಳಿನದು. ಪಟ್ಟವಾದ ಏಪ್ರಿಲ್ ತಿಂಗಳಿನಿಂದ ಕೊನೆಯ ನವೆಂಬರ್ ಶಾಸನದವರೆಗೆ ಸರಿಯಾಗಿ 8 ತಿಂಗಳು ಕಳೆದಿದೆ. ನ್ಯೂನಿಜ್ ಕೂಡ ತಿರುಮಲ ಪಟ್ಟವಾದ ಎಂಟು ತಿಂಗಳಿಗೆ ತೀರಿಕೊಂಡ ಎಂದು ಸ್ಪಷ್ಟವಾಗಿ ಹೇಳಿದ್ದಾನೆ. ಆದ್ದರಿಂದ ತಿರುಮಲನ ಮರಣ ಕ್ರಿ.ಶ. 1524ರ ಡಿಸೆಂಬರ್ ನಂತರ ಆಗಿರಬೇಕು. ನ್ಯೂನಿಜ್ ಇದನ್ನು 6 ವರ್ಷಗಳ ಬಾಲಕ ಅವಿರತನಾದ ಎಂಟು ತಿಂಗಳ ಪಟ್ಟಾಭಿಷೇಕದ ಉತ್ಸವದ ಆಯಾಸವನ್ನು ತಾಳಲಾರದೆ ಕೊನೆಯುಸಿರು ಎಳೆದನೆಂದು ಹೇಳುತ್ತಾನೆ. [11]

ಈಗ ಕೊಂಚ ಭಿನ್ನವಾದ, ಕುತೂಹಲಕರವಾದ ವಿಷಯಕ್ಕೆ ಬರೋಣ. ಗುಂಡ್ಲುಪೇಟೆ ಶಾಸನದಂತೆ ತಿರುಮಲ ಹುಟ್ಟಿದ್ದು 19.7.1518ರಂದು. ಪಟ್ಟವಾದದ್ದು ಕ್ರಿ.ಶ. 1524ರ ಏಪ್ರಿಲ್ ತಿಂಗಳಲ್ಲಿ ಮತ್ತು ಮರಣ ಕ್ರಿ.ಶ.1524ರ ಡಿಸೆಂಬರ್ ತಿಂಗಳಲ್ಲಿ. ಆದರೆ ಆರೋಗ್ಯವಂತನಾದ, ಸಕಲ ಸೌಕರ್ಯ, ಅನುಕೂಲಗಳಲ್ಲಿ ಬೆಳೆದ ಆರುವರ್ಷದ ಬಾಲಕ ಉತ್ಸವಗಳಿಂದ ಬಳಲಿ ಮರಣಿಸುವುದು ಸಾಧ್ಯವೆ? ಇಲ್ಲ ಎಂದೆನಿಸುತ್ತದೆ. ಹಾಗಾದರೆ ಈ ಬಾಲ ಚಕ್ರವರ್ತಿಯ ಆರೋಗ್ಯ ಹೇಗಿತ್ತು? ಇದರ

ಬಗ್ಗೆ ದೃಢ ಸೂಚನೆ ಸಿಗುವುದು ಇನ್ನೊಂದು ಪ್ರಮುಖ ಶಾಸನದಲ್ಲಿ. ಇದು ಕೃಷ್ಣರಾಯನ ಅಧಿಕಾರಿ ರಾಯಸಂ ಕೊಂಡಮರಸಯ್ಯನ ಚೋಳ ಸಮುದ್ರದ ಶಾಸನದಲ್ಲಿ[12] ಈ ಶಾಸನದ ತೇದಿ ಕ್ರಿ.ಶ. 1517ನೇ ಇಸವಿ ಡಿಸೆಂಬರ್ 1ನೇ ತಾರೀಖು. ಈ ಶಾಸನದ 26, 27 ಮತ್ತು 28ನೇ ಸಾಲುಗಳು.

'ಮಹಾ ಪ್ರಧಾನಂ ರಾಯಸ್ತ ಕೊಂಡಮರಸಯ್ಯನವರು ತಂದು ಸ್ವಾಮಿ ಕೃಷ್ಣರಾಯ ಮಹರಾಯರಿಗೆ ಸಂತಾನಾಭಿವೃದ್ಧಿಯಾಗಬೇಕೆಂದು ಚವುಡೇಶ್ವರಿ...'

ಡಿಸೆಂಬರ್ 1, 1517ನೇ ತಾರೀಖಿನ ಈ ಶಾಸನ ಸ್ಪಷ್ಟವಾಗಿ ಹೇಳುತ್ತದೆ - 'ಸಂತಾನಾಭಿಉದ್ರುದ್ಧಿಯಾಗಲಿ' ಎಂಬ ಪದ, ಎಂದರೆ ಶಾಸನದ ತಾರೀಖಾದ ಡಿಸೆಂಬರ್ 1ರವರೆಗೂ ತಿರುಮಲ ದೇವಿಗೆ ಪುತ್ರೋತ್ಸವವಾಗಬಹುದಾದ ಯಾವ ಸೂಚನೆಯೂ ಇರಲಿಲ್ಲ. ಎಂದರೆ ಆಕೆ ಕ್ರಿ.ಶ. 1517ರ ಡಿಸೆಂಬರ್ 1ನೇ ತಾರೀಖಿನವರೆಗೂ ಗರ್ಭಿಣಿ ಯಾಗಿರಲಿಲ್ಲ. ಡಿಸೆಂಬರ್‌ನ ಹದಿನೈದನೇ ದಿನವೇ ಪಟ್ಟ ಮಹಿಷಿ ತಿರುಮಲದೇವಿ ಗರ್ಭಿಣಿಯಾದಳೆಂದು ಭಾವಿಸೋಣ. ಸಾಮನ್ಯವಾಗಿ ನವಮಾಸಗಳು ಕಳೆದ ನಂತರವೇ ಜನನ. ಪ್ರಸೂತಿ ಶಾಸ್ತ್ರದ ಪ್ರಕಾರ ಒಂಭತ್ತು ಕ್ಯಾಲೆಂಡರ್ ತಿಂಗಳುಗಳು ಮತ್ತು 8 ದಿನಗಳು ಕಳೆದ ನಂತರವೇ ದಿನಗಳು ತುಂಬುತ್ತವೆ ಮತ್ತು ಜನನದ ನಿರೀಕ್ಷೆ. ಆದರೆ ಇಲ್ಲಿ ತಿರುಮಲನ ಜನ್ಮದಿನವಾದ 19-7-18ಕ್ಕೂ ತಿರುಮಲದೇವಿ ಗರ್ಭಿಣಿಯಾದ ಅತಿ ಪ್ರಾಚೀನ ತೇದಿಯಾದ 15ನೇ ಡಿಸೆಂಬರ್ 1517ಕ್ಕೂ ಇರುವ ಅಂತರ ಕೇವಲ 7 ತಿಂಗಳು 10 ದಿನ. ಹೀಗಾಗಿ ತಿರುಮಲ ದಿನಗಳು ತುಂಬುವುದಕ್ಕೆ 1 ತಿಂಗಳು 20 ದಿವಸ ಮುಂಚೆಯೇ ಹುಟ್ಟಿದ ಪ್ರಿಮೆಚೂರ್ ಇಸ್‌ಫೆಂಟ್. (Premature infant)

ದಿನ ತುಂಬುವುದಕ್ಕೆ ಮುಂಚೆಯೇ ಹುಟ್ಟಿದ ಮಕ್ಕಳಿಗೆ ಕೆಲವು ನ್ಯೂನತೆಗಳು ಇರುತ್ತವೆ. ದೇಹದ ಅಂಗಾಂಗಳು ಪೂರ್ಣ ಬೆಳೆದಿಲ್ಲವಾಗಿ ಪೂರ್ಣ ಪ್ರಮಾಣದ ಕಾರ್ಯಕ್ಷಮತೆ ಇರುವುದಿಲ್ಲ. ಎಂದರೆ ಅಂಗಾಂಗಳು ತಮ್ಮ ಕೆಲಸಗಳನ್ನು ಇನ್ನೂ ಕಲಿತಿರುವುದಿಲ್ಲ. ನವಜಾತ ಶಿಶುವಿನ ರಕ್ತ ವಯಸ್ಕರ ರಕ್ತಕ್ಕಿಂತ ಬೇರೆ ಇರುತ್ತದೆ. ಯಕೃತ್ತು ಪೂರ್ಣ ಬೆಳೆದಿರುವುದಿಲ್ಲ. ಈ ಎರಡೂ ಕಾರಣಗಳಿಂದ ಮಗುವಿಗೆ ರೋಗ ನಿರೋಧಕ ಶಕ್ತಿ ಕಡಿಮೆ ಇದ್ದು. ಈ ಮಕ್ಕಳು ಪದೇ ಪದೇ ಸೋಂಕು ರೋಗಗಳಿಗೆ ತುತ್ತಾಗುತ್ತಾರೆ. ಅದರಲ್ಲೂ ಶ್ವಾಸಕೋಶ ಮತ್ತು ಕರುಳಿನ ಸೋಂಕು ಬೇನೆಗಳಿಗೆ ಪದೇ ಪದೇ ಅವಕಾಶವಾಗುತ್ತದೆ. ದಿನಕ್ಕೆ ಮುಂಚೆ ಹುಟ್ಟಿದ್ದರಿಂದ ಇರುವ ಶಕ್ತಿಹೀನತೆಯ ಜೊತೆಗೆ ಸೋಂಕುರೋಗಗಳಿಂದ ಉಂಟಾದ ನಿಶ್ಶಕ್ತಿಯೂ ಸೇರಿ ಈ ಮಕ್ಕಳ ಆರೋಗ್ಯ ಇನ್ನೂ ಹದಗೆಟ್ಟು 'ರೋಗಿಷ್ಟ'ನೆಂಬ ಹಣೆಪಟ್ಟಿ ಬರುತ್ತದೆ. ಈ ಕಾರಣದಿಂದಾಗಿ ತಿರುಮಲ ಅಶಕ್ತ ಹಾಗೂ ರೋಗಿಷ್ಟ ಬಾಲಕನಾಗಿರಬೇಕು. ಹೀಗೆಂದೇ ಆರುವರ್ಷದ ಬಾಲಕ ಎಂಟು ತಿಂಗಳ ಕಾಲ ಎಡೆಬಿಡದೆ ನಡೆದ ಪಟ್ಟಾಭಿಷೇಕ ಉತ್ಸವಗಳ ಆಯಾಸ ವನ್ನು ತಾಳಲಾರದೆ ಕೊನೆಯುಸಿರೆಳೆದಿರಬೇಕು. ಇದಕ್ಕೆ ಪೂರಕವಾಗಿ ಕೆಲವು ಸಂಗತಿಗಳಿವೆ.

ಕೃಷ್ಣರಾಯ ತಿರುಪತಿಯ ತಿಮ್ಮಪ್ಪನ ಅವಿಚ್ಛಿನ್ನ ಭಕ್ತ. ತನ್ನ ಅವಿರತ ದಂಡಯಾತ್ರೆಗಳ ಮಧ್ಯೆಯೂ ಆರುಬಾರಿ ತಿರುಪತಿಗೆ ಚಿತ್ತೈಸಿದ್ದಾನೆ. ಕ್ರಿ.ಶ. 1513 ಒಂದೇ ವರ್ಷದಲ್ಲಿ ಮೂರು ಬಾರಿ ತಿರುಪತಿಯಾತ್ರೆ ಮಾಡಿದ್ದಾನೆ. ಮನೆಮಂದಿಗೆಲ್ಲಾ ತಿಮ್ಮಪ್ಪನ ಹೆಸರನ್ನೇ ಇಟ್ಟಿದ್ದಾನೆ. ಹೀಗಿರುವಾಗ ತನ್ನ ಒಬ್ಬನೇ ಮಗನನ್ನು ತಿರುಪತಿಗೆ ಒಮ್ಮೆಯೂ ಕರೆದೊಯ್ದ ದಾಖಲೆಯಿಲ್ಲ. ತಿರುಪತಿಯಲ್ಲಿ ತಿರುಮಲನ ಒಂದು ಶಾಸನವೂ ಇಲ್ಲ. ಅಷ್ಟೇಕೆ ತಿರುಮಲ ಯಾವ ದೇವಸ್ಥಾನವನ್ನೂ ಸಂದರ್ಶಿಸಿ ದಾನ ಕೊಟ್ಟದಾಖಲೆಯಿಲ್ಲ. ರಾಜಧಾನಿಯನ್ನು ಬಿಟ್ಟು ಹೊರಗೆ ಹೋಗಿರದ ಸಾಧ್ಯತೆಯೂ ಇದೆ. ತಿರುಮಲ ಹುಟ್ಟಿದ ಮೇಲೆ ಕೃಷ್ಣರಾಯ ಸಪತ್ನೀಕನಾಗಿ ತಿರುಪತಿಗೆ ಕ್ರಿ.ಶ. 1521ರಲ್ಲಿ ಭೇಟಿಕೊಟ್ಟ ದಾನ ಶಾಸನಗಳಲ್ಲಿ ತಿರುಮಲನ ಹೆಸರಿಲ್ಲ. ಇವೆಲ್ಲ ತಿರುಮಲ ರೋಗಿಷ್ಟ, ಅಶಕ್ತ ಎಂದೇ ಬೆರಳು ಮಾಡಿ ತೋರಿಸುತ್ತವೆ.

ಹೀಗಾಗಿ ಕೃಷ್ಣರಾಯನ ಮಗ ಚಕ್ರವರ್ತಿ ತಿರುಮಲನ ಮರಣ ಈ ಅಸಾಮಾನ್ಯ ಕಾರಣಗಳಿಂದಾಗಿ ಕ್ರಿ.ಶ. 1524ರ ಡಿಸೆಂಬರ್ ವೇಳೆಗೆ ಆಯಿತು. ಈ ಸಾವಿನ ಪರಿಣಾಮ ಮಹಾಪ್ರಧಾನ ಸಾಳ್ವ ತಿಮ್ಮರಸನ ಮೇಲೆ ಎಷ್ಟು ಘೋರವಾಗಿತ್ತೆಂದರೆ ಅದಕ್ಕೆ ಇನ್ನೊಂದು ಲೇಖನವೇ ಬೇಕಾದೀತು ಎಂದು ಹೇಳಿ ಈ ಲೇಖನವನ್ನು ಮುಗಿಸುತ್ತೇನೆ.

ಅನುಬಂಧ

ತಿರುಮಲ ರಾಯನ ಶಾಸನಗಳು

1. ಬಹುಧಾನ್ಯ ಸಂವತ್ಸರ. ಶಕವರ್ಷ 1440
   ಇ.ಸಿ. 4 ಗುಂಡ್ಲುಪೇಟೆ 19 ಶ್ರಾವಣ ಶು. 12 19-7-1518
   ಇ.ಆರ್.ಐ.ಇ., ಬಿ 697/ 1922 ಕಾರ್ತಿಕ ಶು.12 30-10-1518
2. ಸ್ವಭಾನು ಸಂವತ್ಸರ. ಶಕವರ್ಷ 1445
   ಇ.ಸಿ. 4 ಯಳಂದೂರು. ಶ್ರಾವಣ ಶು 10 22-7-1523
3. ತಾರಣ ಸಂತ್ಸರ. ಶಕವರ್ಷ 1446 (ತೇದಿಸಹಿತ)
   ಇ.ಸಿ. 4 ಪಿರಿಯಾಪಟ್ಟಣ 138 ವೈಶಾಖ ಶುದ್ಧ 8 11-4-1524
   ಇ.ಸಿ ix ಮಾಗಡಿ 6. ವೈಶಾಖ ಶು. 13 16-4-1524
   ಎ.ಆರ್.ಐ.ಇ. ಬಿ 416 / 1938 - 39 ಶ್ರಾವಣ ಬ 9 25-7-1524
   - ಅದೇ - ಬಿ. 201/1929 - 30 ಸಿಂಹ ಸು.21 -8-1524
   - ಅದೇ - ಬಿ. 181 / 1913. ಕಾರ್ತೀಕ ಶು. 12 7-11-1524
   - ಅದೇ - ಬಿ. 139 / 1896 ಕಾರ್ತೀಕ ಶು. 12 7-11-1524
   - ಅದೇ - ಬಿ. 132/ 42-43 ವೃಶ್ಚಿಕ ಸು 12 10-11-1524
   ಇ.ಸಿ. ix ಮಾಗಡಿ 82 ಮಾರ್ಗಶಿರ ಶು. 12 27-11-1524

4. ತಾರಣ ಸಂವತ್ಸರ ಶಕವರ್ಷ 1446 (ತೇದಿ ರಹಿತ)
ಎ.ಆರ್.ಐ.ಇ. ಬಿ. 91/1912
ಎಂ.ಇ.ಆರ್. 1912 ಪುಟ 55

5. ವ್ಯಯ ಸಂವತ್ಸರ ಶಕವರ್ಷ 1448
ಎ.ಆರ್.ಐ.ಇ ಬಿ 605 / 1929 - 30 ಕಾರ್ತೀಕ ಸು. 12 16-10-1526

ಟಿಪ್ಪಣಿಗಳು

1. 'ಮರೆತು ಹೋದ ಸಾಮ್ರಾಜ್ಯ' ರಾಬರ್ಟ್ ಸಿವೆಲ್. ಕನವಳ್ಳಿ ಅನುವಾದ ಕನ್ನಡ ವಿಶ್ವವಿದ್ಯಾಲಯ. ಹಂಪಿ. 1992. ಪುಟ 384
2. 'ಕರ್ನಾಟಕ ಚರಿತ್ರೆ' ಸಂಪುಟ ಮೂರು. ಸಂಪಾದಕರು ಪ್ರೊ. ಬಿ. ಷೇಕ್ ಅಲಿ ಮತ್ತು ಪ್ರೊ. ಬಿ. ಶಿವಣ್ಣ, ಕನ್ನಡ ವಿಶ್ವವಿದ್ಯಾಲಯ ಹಂಪಿ. ವಿದ್ಯಾರಣ್ಯ 1997. ಪುಟ 44
3. 'ಕರ್ನಾಟಕ ಇತಿಹಾಸ ದರ್ಶನ' ಪ್ರೊ. ಎಂ.ವಿ. ಕೃಷ್ಣರಾವ್ ಮತ್ತು ಕೇಶವಭಟ್ಟ. ಸಹಕಾರೀ ಪ್ರಕಾಶನ. 1970. ಪುಟ 383.
4. E.C.3 ಗುಂಡ್ಲುಪೇಟೆ 19
5. ಎ.ಆರ್.ಐ.ಇ. 1946-47 ಶಾಸನ ಸಂಖ್ಯೆ ಎ-12
6. 'ಆಮುಕ್ತ ಮಾಲ್ಯದ - ಸಂಜೀವಿನಿ ವ್ಯಾಖ್ಯಾನಮು' ವೇದಮು ವೆಂಕಟರಾಯಾ ಶಾಸ್ತ್ರಿ. ವೇದಮು ವೆಂಕಟರಾಯಾ ಶಾಸ್ತ್ರಿ ಅಂಡ್ ಬ್ರದರ್, ನಂ. 4 ಮಲ್ಲಿಕೇಶ್ವರ ಸ್ವಾಮಿ ದೇವಾಲಯದ ಬೀದಿ, ಮದ್ರಾಸ್ - 1. 2ನೇ ಆವೃತ್ತಿ, 1927. ಪುಟ 3
7. 'ಕೆಳದಿ ನೃಪ ವಿಜಯ' ಗದ್ಯಾನುವಾದ: ಕೆಳದಿ ಗುಂಡಾಜೋಯಿಸ್. ಕನ್ನಡ ಸಾಹಿತ್ಯ ಪರಿಷತ್ತು 1976. ಪುಟ 68
8. E.C. 4 ಯಳಂದೂರು 64
9. E.C. 4 ಪಿರಿಯಾಪಟ್ಟಣ 138
10. E.C. IX ಮಾಗಡಿ 82
11. 'ವಿಜಯನಗರ' ವಿ. ಫಿಲಿಯೋಜಾ, ನ್ಯಾಷನಲ್ ಬುಕ್ ಟ್ರಸ್ಟ್ ಡೆಲ್ಲಿ. 1977, ಪುಟ 205
12. ಎಸ್.ಐ.ಐ. IX, Dt II, ಸಂಖ್ಯೆ 507.

೧೬. ವಿಜಯನಗರ ನಾಣ್ಯಗಳು : ಒಂದು ಹೊಸ ಶೋಧನೆ

ಸಿ.ಬಿ. ಪಾಟೀಲ

ವಿಜಯನಗರ ಸಾಮ್ರಾಜ್ಯದ ನಾಣ್ಯಗಳು ಮತ್ತು ಅವುಗಳ ಚಲಾವಣೆ ಪದ್ಧತಿ ಅದರ ರಾಚಕೀಯ ಮತ್ತು ಸಾಂಸ್ಕೃತಿಕ ವಿಷಯದಷ್ಟೇ ರೋಚಕವಾಗಿದೆ. ವಿಜಯನಗರದ ದೊರೆಗಳು ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳನ್ನು ಮುದ್ರಿಸುತ್ತಿದ್ದು ಅವುಗಳನ್ನು ಗದ್ಯಾಣ, ತಾರ ಮತ್ತು ಹಣ ಎಂದು ಕರೆಯಲಾಗುತ್ತಿತ್ತು. ಒಂದೊಂದು ಮೌಲ್ಯದ ನಾಣ್ಯಕ್ಕೂ ಏಕ ಪ್ರಕಾರವಾದ ತೂಕವನ್ನು ನಿಗದಿಗೊಳಿಸಿ ಸಾಮ್ರಾಜ್ಯದ ಎಲ್ಲಾ ಭಾಗ ದಲ್ಲೂ ಚಲಾವಣೆಗೆ ಬಿಡಲಾಗಿತ್ತು. ವಿಜಯನಗರ ಸಾಮ್ರಾಜ್ಯದಲ್ಲಿ ಚಿನ್ನದ ನಾಣ್ಯಗಳು ಹೆಚ್ಚಿನ ಚಲಾವಣೆಯಲ್ಲಿದ್ದು ನಂತರದ ಸ್ಥಾನದಲ್ಲಿ ತಾಮ್ರದ ನಾಣ್ಯಗಳಿದ್ದು, ಬೆಳ್ಳಿಯ ನಾಣ್ಯಗಳು ವಿರಳವಾಗಿದ್ದವು.ನಾಣ್ಯಗಳ ಮೇಲೆ ಸಾಮಾನ್ಯವಾಗಿ ಕಂಡು ಬರುವ ಚಿನ್ಹೆ ಗಳೆಂದರೆ ಶಂಖ, ಚಕ್ರ, ಅಂಕುಶ, ಡಮರು, ಖಡ್ಗ, ಗರುಡ, ನಂದಿ, ಆನೆ, ಗಂಡ ಭೇರುಂಡ, ಸಿಂಹ ಮತ್ತು ವರಾಹ. ಇದಲ್ಲದೇ ದೇವತೆಗಳ ಚಿತ್ರಗಳಿಗೂ ಹೆಚ್ಚಿನ ಪ್ರಾಮುಖ್ಯತೆ ಯನ್ನು ನೀಡಿದ್ದುದಕ್ಕೆ ಅವರ ನಾಣ್ಯಗಳ ಮೇಲೆ ಮುದ್ರಿಸುತ್ತಿದ್ದ ಮಹೇಶ್ವರ (ಶಿವ), ಬ್ರಹ್ಮ, ವಿಷ್ಣು, ನರಸಿಂಹ ಮತ್ತು ಇವರುಗಳ ಜೊತೆಗೆ ಅವರ ಪತ್ನಿಯರಾಂದತಹ ಉಮಾ (ಪಾರ್ವತಿ), ಸರಸ್ವತಿ, ಲಕ್ಷ್ಮಿ ಚಿತ್ರಗಳು, ಅಲ್ಲದೇ ವೆಂಕಟೇಶ್ವರ, ಬಾಲಕೃಷ್ಣ ಮತ್ತು ಶ್ರೀರಾಮ ಚಿತ್ರಗಳೇ ಸಾಕ್ಷಿ. ಹಿಂದಿನ ಪದ್ಧತಿಯನ್ನೆ ಅನುಸರಿಸಿ, ವಿಜಯನಗರದ ಅರಸರು ತಮ್ಮ ಅನುಕೂಲಕ್ಕೆ ತಕ್ಕಂತೆ ತಮ್ಮದೇ ವಿಧವಾದ ಹೊಸಮಾದರಿಯ ನಾಣ್ಯಗಳನ್ನು ಅಚ್ಚು ಹಾಕಿಸುತ್ತಿದ್ದರು. ಅದಲ್ಲದೆ ಉಪಯೋಗಿಸು ತ್ತಿದ್ದ ಲೋಹ, ವಿಧಾನ ಚಿನ್ಹೆ, ದೇವಾದೇವತೆಗಳ ವೈವಧ್ಯತೆ, ಮತ್ತು ಐತಿಹ್ಯಗಳನ್ನು ವಿಧಿವತ್ತಾಗಿ ಮುದ್ರಿಸುವಲ್ಲಿ ಈ ಅರಸರು ಕರ್ನಾಟಕ ನಾಣ್ಯ ಚರಿತ್ರೆಯಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದ್ದಾರೆ.


ಶೋಧನೆ

ವಿಜಯನಗರ ಕಾಲದವ ನಿಧಿಗಳು ಆಗಿಂದಾಗ್ಗೆ ಕರ್ನಾಟಕ ಮತ್ತು ಆಂಧ್ರ ಪ್ರದೇಶದ ಭಾಗದಲ್ಲಿ ಬೆಳಕಿಗೆ ಬರುತ್ತಿರುತ್ತವೆ. ಅದೇ ರೀತಿ ಉತ್ಖನನ ಮಾಡುವ ಸಮಯದಲ್ಲಿಯೂ ದೊರೆಯುತ್ತಿರುತ್ತವೆ. ಅಂತಹ ಸ್ಥಳಗಳೆಂದರೆ ಹಂಪಿ ಮತ್ತು ಚಿತ್ರದುರ್ಗ ಮುಂತಾದವುಗಳು. ಅಂತಹ ನಿಧಿಯೊಂದು ಇತ್ತೀಚೆಗೆ ವಿಜಯನಗರ

ಸಾಮ್ರಾಜ್ಯದ ರಾಜಧಾನಿಯಾದ ಹಂಪಿಯಲ್ಲಿ ದೊರೆತಿದೆ. ಆ ನಿಧಿಯ ಒಂದು ವಿಶ್ಲೇಷಣೆಯೇ ಈ ಪ್ರಬಂಧದ ಉದ್ದೇಶ.

ನಾಣ್ಯಗಳು ದೊರೆತ ಸ್ಥಳ

ನಾಣ್ಯಗಳ ಶೋಧನೆ ಹಾಗೂ ಅವು ದೊರೆತ ಸ್ಥಳ, ನಾಣ್ಯ ಚರಿತ್ರೆಯಲ್ಲಿ ಬಹು ಮುಖ್ಯವಾದ ಅಂಶವಾಗಿವೆ. ವಿಜಯನಗರದಲ್ಲಿ ನಿರ್ಮಿಸಲಾಗಿರುವ ವಸತಿಗೃಹಗಳು ಮತ್ತು ಅರಮನೆಯ ಆವರಣಗಳು ಬೃಹತ್ ರಕ್ಷಣಾ ಗೋಡೆಗಳಿಂದ ಆವೃತಗೊಂಡಿವೆ. ಅಂತಹ ಆವರಣಗಳಲ್ಲಿ ರಾಜಪ್ರಾಂಗಣವೂ ಒಂದ (ಚಿತ್ರ1) ಇದರಲ್ಲಿ ಒಳಗೊಂಡಿರುವ ಪ್ರಮುಖ ಕಟ್ಟಡಗಳೆಂದರೆ ಮಹಾನವಮಿ ದಿಬ್ಬ, ರಾಜರ ಸಭಾ ಮಂಟಪ, ದೊಡ್ಡ ಕೊಳಗಳು ಮತ್ತು ವಿವಿಧಾಕಾರದ ಪುಷ್ಕರಣಿಗಳು. ಈ ರಾಜಪ್ರಾಂಗಣಕ್ಕೆ ಎರಡು ಆವರಣ



ಗೋಡೆಗಳಿವೆ. ಅದು ದಕ್ಷಿಣ, ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಲ್ಲಿದ್ದು, ಈ ಎರಡು ಗೋಡೆಗಳ ಮಧ್ಯೆ ಮಾರ್ಗವಿದೆ. ಈ ಆವರಣ ಗೋಡೆಗಳ ಹೊರಮೈಯನ್ನು ನಯಗೊಳಿಸಿದ ಹಾಗೂ ಬೆಣೆಯಾಕಾರದ ಬೃಹತ್ ಕಲ್ಲುಗಳನ್ನು ಅಭಿಮುಖವಾಗಿ ಎರಡೂ ಕಡೆಯಿಂದಲೂ ಜೋಡಿಸಿ, ಅವೆರಡರ ಮಧ್ಯಭಾಗವನ್ನು ಮಣ್ಣು ಮತ್ತು ಕಲ್ಲುಗಳಿಂದ ತುಂಬಿ ನಿರ್ಮಿಸಲಾಗಿದೆ. ಈ ಗೋಡೆಗಳು ದುರಸ್ಥಿಯ ಸ್ಥಿತಿಯಲ್ಲಿದ್ದುದರಿಂದ ಭಾರತೀಯ ಪುರಾತತ್ವ ಸರ್ವೇಕ್ಷಣೆಯ ಬೆಂಗಳೂರು ವಲಯ ಗೋಡೆಗಳ ಪುನರ್ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿತು.


ರಾಜಪ್ರಾಂಗಣದ ಪೂರ್ವದ ಹೊರ ಆವರಣಗೋಡೆಯ ಸಂರಕ್ಷಣೆ ಕಾರ್ಯ ಭರದಿಂದ ನಡೆದಿದ್ದು, ಅದರ ಒಂದೊಂದೇ ಕಲ್ಲನ್ನು ಬಿಚ್ಚಿ ಪುನರ್ ನಿರ್ಮಾಣ ಮಾಡಲು ಕಲ್ಲುಗಳ ಮಧ್ಯಭಾಗದಲ್ಲಿ ತುಂಬಿದ್ದ ಮಣ್ಣನ್ನು ತೆಗೆದು ಸ್ವಲ್ಪ ದೂರದಲ್ಲಿ ಹಾಕ ಲಾಗಿತ್ತು. ಈ ಮಣ್ಣಿನ ರಾಶಿಯಿಂದ ಸೂರ್ಯನ ಬೆಳಕಿಗೆ ಮಿನುಗುವ ಲೋಹದ ತುಂಡೊಂದು ಅಲ್ಲೆ ಕೆಲಸದಲ್ಲಿ ನಿರತಳಾಗಿದ್ದ ಶ್ರೀಮತಿ ರಮಣಮ್ಮ ಎಂಬುವವರ ಕಣ್ಣಿಗೆ ಬಿತ್ತು. ಅದನ್ನು ಕೂಡಲೆ ತೆಗೆದು ಶ್ರೀ ನರಸಿಂಹಪ್ರಸಾದ್ ಎಂಬುವವರ ಕೈಗೆ ಕೊಡಲಾಗಿ, ಅವನು ಇದು ನಾಣ್ಯವೆಂದು ತಿಳಿದು ಎಲ್ಲಾ ಕೆಲಸಗಾರರಿಗೂ ಸರಿಯಾದ ರೀತಿಯಲ್ಲಿ ಮಣ್ಣನ್ನು ಶೋಧಿಸುವಂತೆ ತಿಳಿಸಿದನು. ಅದರಂತೆ ಶೋಧಿಸಿದಾಗ ಶ್ರೀ ಶೇಖರ್, ಬಸವರಾಜ ಮತ್ತು ಭೀಮ ಎಂಬ ಕೆಲಸಗಾರರಿಗೆ ಮತ್ತೆ ಮೂರು ನಾಣ್ಯಗಳು ದೊರೆತವು. ನಂತರ ಗೋಡೆಯನ್ನು ಅಧಿಷ್ಠಾನದವರೆಗೂ ಶೋಧಿಸಿ ಮಧ್ಯಾಹ್ನದವರೆಗೆ ಮೂವತ್ತೆರಡು ಚಿನ್ನದ ನಾಣ್ಯಗಳನ್ನು ಕ್ರೋಢೀಕರಿಸಲಾಯಿತು. ಒಟ್ಟಾರೆ ದಿನದ ಕೊನೆಯಲ್ಲಿ ನಲ್ವತ್ತು ನಾಣ್ಯಗಳನ್ನು ಸಂಗ್ರಹಿಸಲಾಯಿತು. ಈ ನಾಣ್ಯಗಳು ಆವರಣ ಗೋಡೆಯ ಎರಡನೇ ಮತ್ತು ಮೂರನೇ ಸ್ತರದ ಮಧ್ಯದಲ್ಲಿ ದೊರೆತಿವೆ. (ಚಿತ್ರ2)

ನಿಧಿ

ಈ ನಾಣ್ಯಗಳು ಬಂಗಾರದ ನಾಣ್ಯಗಳಾಗಿದ್ದು, ಈಗ ತಾನೆ ಮುದ್ರಣದಿಂದ ಮುದ್ರಿಸಿ ತಂದಂತೆ ಕಾಣುತ್ತವೆ. ಇವುಗಳು ಯಾವುದೇ ಸವಕಳಿಯಾದಂತೆ ಕಾಣದೆ ತುಂಬಾ



ಹೊಳಪುಳ್ಳವುಗಳಾಗಿವೆ. ಈ ನಾಣ್ಯಗಳು ಎರಡು ವಿಧದಲ್ಲಿವೆ. ಮೂವತ್ತೊಂಬತ್ತು ನಾಣ್ಯಗಳು ಒಂದು ಗುಂಪಾದರೆ ಉಳಿದ ಒಂದೇ ಒಂದು ನಾಣ್ಯ ಮತ್ತೊಂದು ವಿಧವಾಗಿದೆ. (ಚಿತ್ರ 1ಅ ಹಾಗೂ 1ಬ). ಮೊದಲನೇ ಗುಂಪಿನ ನಾಣ್ಯಗಳು ವೃತ್ತಾಕಾರ ವಾಗಿದ್ದು, ದಪ್ಪ ಮತ್ತು ಅಗಲವುಳ್ಳವು ಗಳಾಗಿವೆ. ಇವುಗಳ ಒಂದೊಂದು ನಾಣ್ಯದ ತೂಕ ಸಾಮಾನ್ಯವಾಗಿ 7.8 ಗ್ರಾಂ, ಸುತ್ತಳತೆ 18-20 ಮಿ.ಮಿ ಮತ್ತು ಇದರ ದಪ್ಪ 2 ಮಿ.ಮೀ. ಇದೆ. ಮೊದ ಲನೇ ಗುಂಪಿನ ನಾಣ್ಯದ ಮೇಲ್ಮುಖದಲ್ಲಿ ಸಕಲಾಭರಣ







ಭೂಷಿತವಾದ ಚತುರ್ಭುಜ ಶ್ರೀನಿವಾಸ (ಶ್ರೀ ವೆಂಕಟೇಶ್ವರ)ನು ಉದ್ದವಾದ ಕರಂಡ ಮುಕುಟವನ್ನು ಧರಿಸಿ, ಕೀರ್ತಿ ಮುಖ ಹಾಗೂ ಮಕರ ತೋರಣಗಳ ಕೆಳಗೆ ನಿಂತಿದ್ದಾನೆ. ಬಲಗಡೆಯ ಹಿಂಬದಿ ಕೈಯಲ್ಲಿ ಚಕ್ರ, ಎಡಗಡೆಯ ಹಿಂಬದಿ ಕೈಯಲ್ಲಿ ಶಂಖ, ಬಲಭಾಗದ ಕೆಳಗಡೆಯ ಕೈ ವರದ ಮುದ್ರೆಯ ಲ್ಲಿದ್ದು, ಎಡಗಡೆಯ ಕೆಳಭಾಗದ ಕೈ ತೊಡೆಯ ಮೇಲೆ ಇರಿಸಿ ಕೊಂಡು ಅಭಯ ಮುದ್ರೆಯಲ್ಲಿ ನಿಂತಿರುವಂತೆ ಮುದ್ರಿಸಲಾಗಿದೆ. ಈ ನಾಣ್ಯದ ಹಿಂಭಾಗದಲ್ಲಿ ದೇವನಾಗರಿಯ ಮೂರು ಸಾಲಿನ ಲಿಪಿಯಿದ್ದು, ಅದನ್ನು ಶ್ರೀ / ಕೃಷ್ಣರಾ/ಯ ಎಂದು ಬರೆಯಲಾಗಿದೆ. (ಚಿತ್ರ 2ಅ ಹಾಗೂ 2ಬ)



ಎರಡನೇ ಗುಂಪಿಗೆ ಸೇರಿದ ನಾಣ್ಯವೂ ಚಿನ್ನದ್ದಾಗಿದ್ದು, ಅದೂ ಕೂಡ ವೃತ್ತಾಕಾರವಾಗಿದೆ. ಅದರ ತೂಕ 1.7 ಗ್ರಾಂ, ಸುತ್ತಳತೆ 10 ಮಿಮೀ ಹಾಗೂ ದಪ್ಪ 2 ಮಿಮೀ ನಾಣ್ಯದ ಮುಮ್ಮುಖದಲ್ಲಿ ನರಸಿಂಹ ಪದ್ಮ ಪೀಠದ ಮೇಲೆ ಪದ್ಮಾಸನದಲ್ಲಿ ಲಕ್ಷ್ಮಿ ಸಮೇತವಾಗಿ ಕುಳಿತಿದ್ದಾನೆ. ಇಬ್ಬರೂ ಅಲಂಕಾರಭೂಷಿತರಾಗಿ ಕಿರೀಟಧಾರಿಗಳಾಗಿದ್ದಾರೆ. ನರಸಿಂಹ ಚತುರ್ಭುಜ ನಾಗಿದ್ದು, ಬಲಭಾಗದ ಕೆಳಗಿನ ಕೈ ಅಭಯ ಮುದ್ರೆಯಲ್ಲಿಯೂ, ಮೇಲ್ಭಾಗದ ಕೈಯಲ್ಲಿ ಚಕ್ರವನ್ನು, ಎಡಭಾಗದ ಕೆಳಗಿನ ಕೈಯನ್ನು ಲಕ್ಷ್ಮಿಯ ಭುಜದ ಮೇಲೆ ಇಟ್ಟಿದ್ದಾನೆ ಮತ್ತು ಮೇಲ್ಭಾಗದ ಕೈಯಲ್ಲಿ ಶಂಖವಿದ್ದು ಲಕ್ಷ್ಮೀಯ ಹಿಂಬದಿಯಲ್ಲಿದೆ. ಲಕ್ಷ್ಮಿಯು ಅಂಜಲಿ ಹಸ್ತಳಾಗಿರುವಂತೆ ಚಿತ್ರಿಸಲಾಗಿದೆ. ನಾಣ್ಯದ ಹಿಮ್ಮುಖದಲ್ಲಿ ದೇವನಾಗರಿಯ ಮೂರು ಸಾಲುಗಳ ಲಿಪಿಯಿದ್ದು ಅದನ್ನು ಶ್ರೀ ಪ್ರ/ (ತಾ)ಪ ಹರಿ/ಹರ ಎಂದು ಓದ ಬಹುದಾಗಿದೆ. (ಚಿತ್ರ 3ಅ ಹಾಗೂ3ಬ)

ಚರ್ಚೆ

ಮೊದಲನೇ ಗುಂಪಿಗೆ ಸೇರಿದ ನಾಣ್ಯಗಳ ಬಗ್ಗೆ ಹೇಳುವುದಾದರೆ, ಕೃಷ್ಣದೇವರಾಯನು (1509-29) ಒರಿಸ್ಸಾದ ಗಜಪತಿ ಪ್ರತಾಪರುದ್ರನ ಮೇಲೆ ವಿಜಯ



ಸಾಧಿಸಿ, ಉದಯಗಿರಿ ಮತ್ತು ಕೊಂಡ ವೀಡುಗಳನ್ನು ವಶಪಡಿಸಿಕೊಂಡಿರುವುದು ಎಲ್ಲ ರಿಗೂ ತಿಳಿದ ವಿಷಯ (ದೇಸಾಯಿ 1981). ಅನಂತರ ರಾಜಧಾನಿಗೆ ಹಿಂದಿ ರುಗುವ ಮಾರ್ಗದಲ್ಲಿ ತಿರುಪತಿಗೆ ಭೇಟಿ ನೀಡಿ, ದಿನಾಂಕ 6.7.1514) ರಂದು ಶ್ರೀ ವೆಂಕಟೇಶ್ವರನಿಗೆ ಮೂವತ್ತು ಸಾವಿರ ಚಿನ್ನದ ವರಹಗಳಿಂದ ಕನಕಾಭಿಷೇಕ ಮಾಡುತ್ತಾನೆ



ಮತ್ತು ಚಿನ್ನಾಭರಣ ಗಳನ್ನು ದೇವರಿಗೆ ಸಮರ್ಪಿಸುತ್ತಾನೆ (ರಾವ್ 2004) ಹಾಗೆಯೇ ಕೃಷ್ಣದೇವರಾಯನು ಮುಂಬದಿಯಲ್ಲಿ ಶ್ರೀ ವೆಂಕಟೇಶ್ವರನ ಚಿತ್ರವಿರುವ ಮತ್ತು ಹಿಂಬದಿಯಲ್ಲಿ ನಾಗರಿ ಲಿಪಿ ಯಲ್ಲಿ ತನ್ನ ಹೆಸರನ್ನುಳ್ಳ ನಾಣ್ಯ ಗಳನ್ನು ಕನಕಾಭಿಷೇಕದ ಸಲು ವಾಗಿ ಅಚ್ಚು ಮಾಡಿಸಿದ್ದನು. ಈ ನಾಣ್ಯವು ಸಾಮಾನ್ಯ ಗದ್ಯಾಣದ 52 ಗ್ರೈನ್ ತೂಕಕ್ಕಿಂತ ಎರಡುಪಟ್ಟು ಹೆಚ್ಚಾಗಿದ್ದು 120 ಗ್ರೈನ್ ತೂಕವುಳ್ಳದ್ದಾಗಿದೆ. ಇವು ವೆಂಕಟೇಶ್ವರ ಅಥವಾ ಶ್ರೀನಿವಾಸ ಮಾದರಿ ನಾಣ್ಯಗಳೆಂದು ಪ್ರಸಿದ್ಧಿಪಡೆದವು. ಇವನ ನಂತರ ಆಡಳಿತ ನಡೆಸಿದ ಮೊದಲನೇ ಶ್ರೀರಂಗರಾಯ (1572-85), ಎರಡನೇ ವೆಂಕಟಪತಿರಾಯ (1586-1614) ಹಾಗೂ ನಾಲ್ಕನೇ ಶ್ರೀ ರಂಗರಾಯರೂ ಕೂಡ ಕೃಷ್ಣ ದೇವರಾಯನ ಮಾದರಿಯಲ್ಲೇ ನಾಣ್ಯವನ್ನು ಚಲಾವಣೆಗೆ ತಂದಿದ್ದರು (ನರಸಿಂಹ ಮೂರ್ತಿ 1991).

ಮೊದಲನೇ ಗುಂಪಿಗೆ ಸೇರಿದ ಎಲ್ಲಾ ಮೂವತ್ತೊಂಬತ್ತು ನಾಣ್ಯಗಳ ಮುಮ್ಮುಖ ದಲ್ಲಿ ವೆಂಕಟೇಶ್ವರ ಮತ್ತು ಹಿಮ್ಮುಖದಲ್ಲಿ ಶ್ರೀ /ಕೃಷ್ಣ ರಾ/ಯ ಎಂದು ಮೂರು ಸಾಲುಗಳಿದ್ದು, ಇವು ಎಲ್ಲ ರೀತಿಯಲ್ಲಿಯೂ ವೆಂಕಟೇಶ್ವರ / ಶ್ರೀನಿವಾಸ ಮಾದರಿ ನಾಣ್ಯಗಳಾಗಿದ್ದು, ವಿಜಯನಗರ ಕಾಲದ ನಾಣ್ಯಗಳೆಂದು ಖಂಡಿತವಾಗಿ ಹೇಳಬಹು ದಾಗಿದೆ.

ಈಗ ಸಹಜವಾಗಿ ಉದ್ಭವಿಸುವ ಪ್ರಶ್ನೆ, ಈ ನಾಣ್ಯಗಳನ್ನು ಯಾರು ಮತ್ತು ಯಾವಾಗ ಹೊರಡಿಸಿರಬಹುದು ಎಂಬುದು? ಈ ಮೊದಲೇ ಹೇಳಿದಂತೆ, ಒಂದನೇ

ಗುಂಪಿಗೆ ಸೇರಿದ ವೆಂಕಟೇಶ್ವರ ನಾಣ್ಯಗಳನ್ನು ಕೃಷ್ಣದೇವರಾಯನು ತಿರುಪತಿ ವೆಂಕಟೇಶ್ವನಿಗೆ ಕನಕಾಭಿಷೇಕ ಮಾಡುವ ಸಲುವಾಗಿ ಟಂಕಿಸಿದ್ದಾನೆ. ಎರಡನೆಯದಾಗಿ, ಈ ನಾಣ್ಯಗಳು ನಮಗೆ ರಾಜಪ್ರಾಂಗಣದ ಆವರಣ ಗೊಡೆಯ ತಳಭಾಗದ ಎರಡನೇ ಹಾಗೂ ಮೂರನೇ ಸ್ತರಗಳ ಮಧ್ಯ ದೊರೆತಿರುವುದರಿಂದ, ಇವುಗಳನ್ನು ಆವರಣ ಗೋಡೆಯನ್ನು ನಿರ್ಮಿಸುವ ಸಮಯದಲ್ಲೇ ಇಡಲಾಗಿತ್ತು. ಅಲ್ಲದೆ ಕ್ರಿ.ಶ. 1565 ರಕ್ಕಸ ತಂಗಡಿ ಯುದ್ಧದಿಂದ ತನ್ನ ವೈಭವವನ್ನು ಕಳೆದುಕೊಂಡ ವಿಜಯನಗರ ಮತ್ತೆ ಅಂತಹ ವೈಭವವನ್ನು ಕಾಣದೆ ನಂತರ ಬಂದ ಅರಸರು ಪೆನುಗೊಂಡ ಮತ್ತು ಚಂದ್ರಗಿರಿಯನ್ನು ತಮ್ಮ ರಾಜಧಾನಿಯಾಗಿ ಮಾಡಿಕೊಂಡು ಆಳಿದರು. ಅವರು ಈ ಕಾಲದಲ್ಲಿ ವೆಂಕಟೇಶ್ವರ ಮಾದರಿ ನಾಣ್ಯವನ್ನು ಚಲಾವಣೆಗೆ ತಂದಿರಲಿಲ್ಲ. ಆದ್ದರಿಂದ, ಈ ನಾಣ್ಯಗಳನ್ನು ಹೊರಗಿನಿಂದ ತಂದು ಹಂಪಿ ರಾಜಪ್ರಾಂಗಣದಲ್ಲಿರಿಸಲು ಸಾಧ್ಯವೇ ಇಲ್ಲ. ಇದಲ್ಲದೆ ಈ ನಾಣ್ಯಗಳು ಕ್ರಿ.ಶ. 1514 ಮತ್ತು 1565ರ ಒಳಗಿನ ಕಾಲದಲ್ಲಿ ಚಲಾವಣೆಗೆ ತಂದದ್ದಾಗಿತ್ತು. ಈ ಕಾಲದಲ್ಲಿ ಕೃಷ್ಣದೇವರಾಯನ ಹೊರತು ಬೇರೆ ಯಾರೂ ಇಂತಹ ನಾಣ್ಯಗಳನ್ನು ಚಲಾವಣೆಗೆ ತರಲಿಲ್ಲ. ಇದಕ್ಕೆ ಸಾಕ್ಷಿ ಎಂಬಂತೆ ನಾಣ್ಯದ ಹಿಂಬದಿಯಲ್ಲಿ ಮುದ್ರಿತವಾಗಿರುವ ಕೃಷ್ಣದೇವರಾಯನ ಹೆಸರು. ಈ ಎಲ್ಲಾ ಮೇಲಿನ ಹೇಳಿಕೆಗಳ ಪ್ರಕಾರ ಕೃಷ್ಣದೇವರಾಯನು ಶ್ರೀ ವೆಂಕಟೇಶ್ವನಿಗೆ ಕನಕಾಭಿಷೇಕದ ಸಲುವಾಗಿಯೇ ಈ ನಾಣ್ಯಗಳನ್ನು ಹೊರಡಿಸಿದನೆಂದು ಸ್ಪಷ್ಟವಾಗಿ ಹೇಳಬಹುದು.

ಈ ನಾಣ್ಯಗಳ ಇನ್ನೊಂದು ವಿಶೇಷ ಲಕ್ಷಣವೇನೆಂದರೆ, ಈ ನಾಣ್ಯಗಳನ್ನು ದೇವರ ಕನಕಾಭಿಷೇಕಕ್ಕೆ ಮುದ್ರಿಸಿರುವುದರಿಂದ ಅಚ್ಚು ಹಾಕುವಾಗ ಅಧಿಕವಾದ ಚಿನ್ನವು ಅಚ್ಚಿನಿಂದ ಹೊರ ಬಂದಿದೆ. ಅದನ್ನು ತೆಗೆಯದೆ ಹಾಗೆಯೇ ಉಳಿಸಿದ್ದಾರೆ. ಏಕೆಂದರೆ ಅವು ದೇವರಿಗೆ ಅರ್ಪಿಸುವಂತಹವು. ಈ ನಾಣ್ಯಗಳನ್ನು ಕೂಲಂಕಷವಾಗಿ ಪರಿಶೀಲಿಸಿದರೆ ನಾಣ್ಯದ ಹಿಮ್ಮುಖ ಮತ್ತು ಮುಮ್ಮುಖದಲ್ಲಿ ಮುದ್ರಿತವಾಗಿರುವ ಚಿತ್ರ ಮತ್ತು ಲಿಪಿಗಳು ಒಂದಕ್ಕೊಂದು ಬದಲಾವಣೆಗಳನ್ನು ಕಾಣುತ್ತೇವೆ. ಇದರಿಂದ ಈ ನಾಣ್ಯಗಳನ್ನು ಮುದ್ರಿಸಲು ಎಂಟು ನಾಣ್ಯದ ಅಚ್ಚುಗಳನ್ನು ಉಪಯೋಗಿಸಿ ಒಂದೇ ಸಮಯದಲ್ಲಿ ಅಚ್ಚು ಹಾಕಲಾಗಿದೆ ಎಂದು ತಿಳಿಯಬಹುದಾಗಿದೆ.

ಇನ್ನುಳಿದ ನಾಣ್ಯದ ಬಗ್ಗೆ ಚರ್ಚಿಸುವುದಾದರೆ, ಎರಡನೆಯ ಹರಿಹರನು (1377-1404) ಹಲವಾರು ಮಾದರಿ ನಾಣ್ಯಗಳನ್ನು ಚಲಾವಣೆಗೆ ತಂದಿದ್ದು ತಿಳಿದ ವಿಷಯವೇ. ಅವುಗಳಲ್ಲಿ ಉಮಾ ಮಹೇಶ್ವರ (ಶಿವ-ಪಾರ್ವತಿ), ಲಕ್ಷ್ಮೀನರಸಿಂಹ, ಲಕ್ಷ್ಮೀ ನಾರಾಯಣ, ಬ್ರಹ್ಮ, ಸರಸ್ವತಿ ನಾಣ್ಯಗಳು ಪ್ರಮುಖವಾದವು. ಈ ಎಲ್ಲಾ ನಾಣ್ಯಗಳು 1/2 ವರಹಗಳಾಗಿದ್ದು, 26 ಗ್ರೈನ್ ತೂಗುವುದಲ್ಲದೆ ಹಿಮ್ಮುಖದಲ್ಲಿ ಶ್ರೀ ಪ್ರ/ತಾಪ ಹರಿ/ಹರ ಎಂದು ಮುದ್ರಿಸಲಾಗಿದೆ. ಇದೇ ರೀತಿ ಎರಡನೇ ವಿಧದ ನಾಣ್ಯದ ಬಗ್ಗೆ

ಈಗಾಗಲೇ ಹೇಳಿರುವಂತೆ ಲಕ್ಷ್ಮೀನರಸಿಂಹ ಮುಮ್ಮುಖದಲ್ಲಿದ್ದು ಅದರ ಹಿಮ್ಮುಖದಲ್ಲಿ ಶ್ರೀ ಪ್ರ/ (ತಾ)ಪ ಹರಿ/ಹರ ಎಂದು ಲಿಪಿಯಿದೆ. ಈ ನಾಣ್ಯವು ಎರಡನೇ ಹರಿಹರನಿಂದ ಚಲಾವಣೆಗೆ ತಂದಿದ್ದ ಲಕ್ಷ್ಮೀನರಸಿಂಹ ಮಾದರಿಯ ನಾಣ್ಯದಂತೆಯೇ ಇರುವುದರಿಂದ ಇದನ್ನು ಅವನ ಕಾಲದಲ್ಲಿಯೇ ಮುದ್ರಿಸಲಾಗಿದೆಯೆಂದು ತಿಳಿಯುತ್ತದೆ. ಅಲ್ಲದೆ ಮುದ್ರಿತ ಚಿತ್ರವು ಸರಿಯಾದ ರೀತಿಯಲ್ಲಿ ಅಚ್ಚಾಗದೆ ಇರುವುದರಿಂದ, ಈ ನಾಣ್ಯದಲ್ಲಿ ಮುದ್ರಣ ತೊಂದರೆಯಿದೆ ಎಂದು ಸಹ ತಿಳಿದುಬರುತ್ತದೆ.

ಮೇಲಿನ ಎಲ್ಲಾ ಹೇಳಿಕೆಗಳಿಂದ ನಮಗೆ ತಿಳಿಯುವುದೇನೆಂದರೆ ಮೂವತ್ತೊಂಬತ್ತು ನಾಣ್ಯಗಳು ಶ್ರೀವೆಂಕಟೇಶ್ವರ ಮಾದರಿ ನಾಣ್ಯಗಳಾಗಿದ್ದು, ಇವುಗಳನ್ನು ಕೃಷ್ಣದೇವರಾಯನು ಚಲಾವಣೆಗೆ ತಂದಿದ್ದನೆಂದು ಖಂಡಿತವಾಗಿ ಹೇಳಬಹುದು. ಅಲ್ಲದೆ ಇವು, ತಿರುಪತಿ ಶ್ರೀ ವೆಂಕಟೇಶ್ವರನಿಗೆ ಕನಕಾಭಿಷೇಕಕ್ಕಾಗಿಯೇ ವಿಶೇಷವಾಗಿ ಮುದ್ರಿಸಿದ್ದ ಮೂವತ್ತು ಸಾವಿರ ನಾಣ್ಯಗಳ ಗುಂಪಿಗೆ ಸೇರುತ್ತವೆ. ಬೇರೆ ವಿಧವಾದ ಇನ್ನೊಂದು ನಾಣ್ಯವನ್ನು ಎರಡನೆಯ ಹರಿಹರನು ಚಲಾವಣೆಗೆ ತಂದಿದ್ದನೆಂದು ಹೇಳಬಹುದು. ಆದರೆ ಈ ನಾಣ್ಯಗಳನ್ನು ಆವರಣ ಗೋಡೆಯ ಮಧ್ಯದಲ್ಲಿ ಯಾವಾಗ? ಮತ್ತು ಯಾರು? ಇರಿಸಿದರೆಂದು ಹೇಳುವುದು ಸ್ವಲ್ಪ ಕಷ್ಟವಾಗಿದೆ. ಒಟ್ಟಿನಲ್ಲಿ ಈ ನಿಧಿ ವಿಜಯನಗರ ಸಾಮ್ರಾಜ್ಯದ ನಾಣ್ಯಗಳ ಅಧ್ಯಯನಕ್ಕೆ ಮತ್ತಷ್ಟು ಪುಷ್ಟಿಯನ್ನು ನೀಡಿದಂತಾಗಿದೆ.

ಕೃತಜ್ಞತೆ : ಈ ಪ್ರಬಂಧದ ಛಾಯಾ ಚಿತ್ರಗಳು ಭಾರತೀಯ ಪುರಾತತ್ವ ಸರ್ವೇಕ್ಷಣದ ಸೌಜನ್ಯದಿಂದ ಪ್ರಾಪ್ತವಾಗಿದೆ.

ಆಧಾರ ಗ್ರಂಥಗಳು

1. ಆನ್ಯುವಲ್ ರಿಪೋರ್ಟ್ ಆಫ್ ದಿ ಮೈಸೂರು ಆರ್ಕಿಯಾಲಜಿಕಲ್ ಡಿಪಾರ್ಟ್‌ಮೆಂಟ್ ಫಾರ್ ದಿ ಇಯರ್ 1930, ಬೆಂಗಳೂರು, ಗೌರ್ನಮೆಂಟ್ ಪ್ರೆಸ್, 1934 : 68-76 ; 1932: 80-84
2. ದೇಸಾಯಿ ಪಿ.ಬಿ., ಎ ಹಿಸ್ಟರಿ ಆಫ್ ಕರ್ನಾಟಕ, ಧಾರವಾಡ, ಕರ್ನಾಟಕ ಯೂನಿವರ್ಸಿಟಿ, 1981 : 382-83.
3. ನರಸಿಂಹಮೂರ್ತಿ, ಎ.ವಿ., ಕಾಯಿನ್ಸ್ ಅಂಡ್ ಕರೆನ್ಸಿ ಸಿಸ್ಟಂ ಇನ್ ವಿಜಯನಗರ ಎಂಪೈರ್. ವಾರಣಾಸಿ, ನ್ಯೂಮಿಸ್‌ಮ್ಯಾಟಿಕ್ ಸೊಸೈಟಿ ಆಫ್ ಇಂಡಿಯಾ, 1991.
4. ರಾವ್, ಜಿ.ಎಸ್.ಪಿ., ಕೃಷ್ಣದೇವರಾಯ : ದಿ ಗ್ರೇಟ್ ಪೊಯಟ್ ಎಂಪರರ್ ಆಫ್ ವಿಜಯನಗರ. ಹೈದರಾಬಾದ್, ಪೊಟ್ಟಿ ಶ್ರೀ ರಾಮುಲು ತೆಲುಗು ಯೂನಿವರ್ಸಿಟಿ, 2004 : 84-86

೧೭. ವಿಜಯನಗರ - ದ್ರಾವಿಡ ವಿಶಿಷ್ಟ ವಾಸ್ತು ಶೈಲಿಯ ಶಿಲಾಮಂಟಪ - ಒಂದು ಹೊಸ ಶೋಧ

ಜಯದೇವಪ್ಪ ಜೈನಕೇರಿ

ದಾವಣಗೆರೆ ಜಿಲ್ಲೆ ಹೊನ್ನಾಳಿಗೆ ಸೇರಿದಂತೆ ಉತ್ತರಕ್ಕೆ ಹಳ್ಳೂರಿಗೆ ಹೋಗುವ ಮಾರ್ಗದಲ್ಲಿ ಹೊನ್ನಾಳಿ - ಕೊನಾಯಕನಹಳ್ಳಿ ಮಧ್ಯೆ ಅಂಜನಾಪುರ ಎಂಬ ಗ್ರಾಮವಿದೆ. ತುಂಗಭದ್ರಾನದಿ ದಂಡೆಯ ಶ್ರೀ ಭರಮಗೌಡರಿಗೆ ಸೇರಿದ ಎತ್ತರ ಪ್ರದೇಶದಲ್ಲಿ ಒಂದು ಪ್ರಾಚೀನವಾದ ವಿಜಯನಗರ -ದ್ರಾವಿಡ ವಿಶಿಷ್ಟ ವಾಸ್ತು ಶೈಲಿಯ ಶಿಲಾ ಮಂಟಪ ಇದೆ. ಹತ್ತಿರದಲ್ಲೇ ಒಂದು ಪ್ರಾಚೀನ ಬಾಪಿಯೂ ಇದೆ. ಹಳ್ಳೂರು ರಸ್ತೆಯ ಬಲಭಾಗಕ್ಕಿರುವ ಶಿಲಾಮಂಟಪಕ್ಕೆ ಹೋಗುವ ಕಾಲುದಾರಿಯಲ್ಲಿ ಒಂದು ಚಿಕ್ಕ ದುರ್ಗಮ್ಮನ ಪಾಳುಗುಡಿ ಇದೆ. ಇಲ್ಲಿ ಮಹಿಷಾಸುರ ಮರ್ದಿನಿ ವಿಗ್ರಹ ಇದೆ. ರಸ್ತೆಯ ಎಡಭಾಗದಲ್ಲಿ ಒಂದು ಬನ್ನಿ ಮರದ ಕೆಳಗೆ ಮಹಾಸತಿ ಶಿಲ್ಪವಿದೆ. ವೀರ ಮತ್ತು ಆತನ ಪತ್ನಿಯ ಉಬ್ಬು ಶಿಲ್ಪಗಳಿವೆ. ಈ ಬನ್ನಿ ಮರದ ಕೆಳಗೆ ಹೊನ್ನಾಳಿ ಹಿರೇಕಲ್ಮಠದ ಸ್ವಾಮಿಗಳು ಉತ್ಸವದಲ್ಲಿ ಒಂದು ಬನ್ನಿ ಮುಡಿಯುವ ಪದ್ಧತಿ ಈಗಲೂ ಮುಂದುವರಿದು ಬಂದಿರುವುದು ಈ ಪ್ರದೇಶದ ಪ್ರಾಚೀನತೆಯನ್ನು, ಐತಿಹಾಸಿಕ ಮಹತ್ವವನ್ನು ತಿಳಿಸುತ್ತವೆ.

ಪ್ರಾಚೀನವಾಗಿ ವಿಜಯನಗರ ಅರಸನ ಪ್ರತಿನಿಧಿಯಾಗಿ ಕೊನಾಯಕ ಎಂಬ ದಂಡನಾಯಕ ಈ ಪ್ರದೇಶವನ್ನು ಆಳುತ್ತಿದ್ದನೆಂದು "ಹೊನ್ನೆಲೆಗಳ" ಗ್ರಂಥದ ಪುಟ 94ರಲ್ಲಿ ಉಲ್ಲೇಖವಾಗಿದೆ. ವಿಜಯನಗರ ಅರಸರ ಆಡಳಿತ ಪದ್ಧತಿಯಂತೆ ಇಲ್ಲಿಯೂ, ಸಾರ್ವಜನಿಕ ಸಂಪರ್ಕ, ಉತ್ಸವ, ವಿಜಯದಶಮಿ ಆಚರಣೆಗಳಿಗಾಗಿ ಈ ಶಿಲಾ ಮಂಟಪದ ನಿರ್ಮಾಣವಾಗಿದೆ. ಈ ಪ್ರದೇಶದ ಸುತ್ತ ಅನೇಕ ಪ್ರಾಚೀನ ಪಳೆಯುಳಿಕೆಗಳು, ವೀರಗಲ್ಲು, ಮಾಸ್ತಿಕಲ್ಲುಗಳು ಕಂಡುಬರುತ್ತವೆ. ಗಟ್ಟಿ, ಕಣ ಶಿಲೆಯಿಂದ ನಿರ್ಮಾಣವಾಗಿರುವ ಮಂಟಪಗಳು ಶಿವಮೊಗ್ಗ ಜಿಲ್ಲೆ ಆನಂದಪುರದ ಮಾರ್ನವಮಿದಿಬ್ಬದ ಮೇಲೆ ಮತ್ತು ಶಿವಮೊಗ್ಗ ನಗರದ ಮಂಡ್ಲಿ ಪ್ರದೇಶದಲ್ಲಿ ಕಂಡು ಬರುತ್ತವೆ. ಪ್ರಾಚೀನವಾಗಿ ಕಲ್ಯಾಣದ ಚಾಳುಕ್ಯರು, ಹೊಯ್ಸಳರು ನಿರ್ಮಿಸಿರುವ ವಾಸ್ತು ಪರಂಪರೆಯನ್ನು ಬಿಟ್ಟು, ವಿಜಯನಗರ ಅರಸರು ದ್ರಾವಿಡ ವಾಸ್ತು ಪರಂಪರೆಯನ್ನು ಅಳವಡಿಸಿ ವಿಜಯನಗರ ವಿಶಿಷ್ಟ ವಾಸ್ತು ಪರಂಪರೆಯ ದೇವಾಲಯ, ಮಂಟಪಗಳನ್ನು ನಿರ್ಮಿಸಿದರು. ವಿಜಯನಗರದಲ್ಲಿರುವಂತೆ, ತಮ್ಮ ರಾಜ್ಯದ ಎಲ್ಲ ಕಡೆಗಳಲ್ಲಿ

ಮಾರ್ನವಮಿ ದಿಬ್ಬ, ಮಾರ್ನವಮಿಬಯಲು, ಮರಳುದಿಬ್ಬ, ಶಿಲಾಮಂಟಪಗಳನ್ನು ನಿರ್ಮಿಸಿದ್ದಾರೆ. ವಿಜಯನಗರ ಅರಸರ (1336-1565) ನಂತರ ಮೈಸೂರು ಮತ್ತು ಕೆಳದಿ ಅರಸರು ಹರಪನಹಳ್ಳಿ, ಚಿತ್ರದುರ್ಗ ಪಾಳ್ಳೇಗಾರರು ಈ ಪರಂಪರೆಯನ್ನು ಮುಂದುವರಿಸಿದ್ದಾರೆ.



ಪ್ರಸ್ತುತ ಶಿಲಾಮಂಟಪವು ತುಂಗಭದ್ರಾನದಿಯ ಎಡದಂಡೆಗೆ, ಹೊನ್ನಾಳಿಯಿಂದ ಹಳ್ಳೂರು ರಸ್ತೆಯಲ್ಲಿ ಸುಮಾರು ಎರಡು ಕಿ.ಮೀ. ದೂರದಲ್ಲಿ ರಸ್ತೆಯ ಬಲಭಾಗದಲ್ಲಿದೆ. ವಿಶಾಲವಾದ ಎತ್ತರವಾದ ಮರಳುದಿಬ್ಬವೆಂದು ಸ್ಥಳೀಯರು ಕರೆಯುವ ಪ್ರದೇಶದಲ್ಲಿರುವ, ಮಂಟಪ ನೆಲಮಟ್ಟದಿಂದ ಸುಮಾರು 5 ಮೀ. ಎತ್ತರವಾಗಿದೆ. ಸುಂದರವಾದ ತೆರೆದ ಮಂಟಪ ವಿಜಯನಗರ - ದ್ರಾವಿಡ ಆರಂಭಿಕ ಕಾಲದ ವಾಸ್ತು ಶೈಲಿಯಿಂದ ಆಕರ್ಷಕವಾಗಿದೆ. ಬಿಳಿಯ ಕಣಶಿಲೆ, ಚಪ್ಪಡಿಗಳಿಂದ ನಿರ್ಮಾಣವಾಗಿರುವ ಮಂಟಪ ನಾಲ್ಕು ಸ್ಥಂಭಗಳಿಂದ ಕೂಡಿದೆ. ಸುಮಾರು ಒಂದು ಮೀ. ಎತ್ತರದ ಅಧಿಷ್ಠಾನದ ಮೇಲೆ ಸ್ಥಂಭಗಳಿವೆ. ಅಧಿಷ್ಠಾನವು ಮಂಚಬಂಧ ಮಾದರಿಯಲ್ಲಿದೆ. ಮಂಟಪದ ಅದಿಷ್ಠಾನ ಅಲ್ಲಲ್ಲಿ ಭಗ್ನವಾಗಿದೆ.

ಮಂಟಪದ ನಾಲ್ಕು ಸ್ಥಂಭಗಳೂ ಒಂದೇ ಮಾದರಿ ಕೆತ್ತನೆಗಳಿಂದ ಕೂಡಿವೆ. ಬಿಳಿಯ ಕಣಶಿಲೆಯಿಂದ ನಿರ್ಮಾಣವಾಗಿರುವ ಸ್ಥಂಭಗಳ ಕೆಳಭಾಗ ಚೌಕವಾಗಿಯೂ, ಕಾಂಡಭಾಗ ಅರೆಕೋಳವೆ ಪಟ್ಟಿಕೆಗಳಿಂದಲೂ, ಮೇಲ್ಭಾಗದಲ್ಲಿ ಪುಷ್ಪಬೋದಿಗೆ, ಚಕ್ರ ಬೋದಿಗೆ, ಘಂಟಾ ಬೋದಿಗೆ, ಚತುರ್ಮುಖ ಬೋದಿಗೆಗಳಿಂದ ಕೂಡಿದೆ. ಮಂಟಪದ ಛಾವಣಿ ಚೌಕಾಕಾರವಾಗಿ, ಹೊರ ಚಾಚು ಸ್ವಲ್ಪ ಇಳಿಜಾರಾಗಿದೆ. ಮಂಚಬಂಧ ಮಾದರಿ



ಚಪ್ಪಡಿಗಳು. ಮಧ್ಯದಲ್ಲಿ ಸಾಧಾರಣ ಕೆತ್ತನೆಯ ಪುಷ್ಪ ಬೋದಿಗೆ ಇದೆ. ಮಂಟಪದ ಮೇಲೆ ಅರ್ಧ ಚಂದ್ರಾಕಾರದ ಗಾರೆ ಮುಚ್ಚಿಗೆ ಇದೆ.

ಸುಮಾರು ಒಂದು ಮೀ. ಎತ್ತರದ ಅಧಿಷ್ಠಾನದ ಮೇಲೆ ಮೂರು ಮೀ. ಎತ್ತರದ ನಾಲ್ಕು ಚೌಕಾಕಾರದ ಸ್ಥಂಭಗಳಿವೆ. ಕೆಳಭಾಗದಲ್ಲಿ, ಸುಮಾರು 40ಸೆಂ.ಮೀ. ಅಗಲವಾಗಿಯೂ, ಸುಮಾರು 60ಸೆಂ.ಮೀ. ಎತ್ತರವಾಗಿದೆ. ಮಧ್ಯಭಾಗದಲ್ಲಿ ಸುಮಾರು ಒಂದು ಮೀ. ವರೆಗೆ ಅರೆಕೊಳವೆ ಆಕಾರದ 16 ಪಟ್ಟಿಕೆಗಳ ದುಂಡಾದ ಭಾಗವಿದೆ. ಇದರ ಮೇಲೆ ಎಂಟು ಪಟ್ಟಿಕೆಗಳ ಪುಷ್ಪಬೋದಿಗೆ 30 ಸೆಂ.ಮೀ. ಎತ್ತರವಿದೆ. ಇದರ ಮೇಲೆ ದುಂಡಾದ ಬಳೆ ಮಾದರಿಯ ಕೆತ್ತನೆ ಇದೆ. ಅದರ ಮೇಲೆ 8 ಪಟ್ಟಿಕೆಗಳ ಘಂಟಾ ಬೋದಿಗೆಯೂ ಇದೆ. ಇದಿಷ್ಟೂ ಭಾಗ ಒಂದೇ ಶಿಲೆಯಲ್ಲಿ ನಿರ್ಮಿಸಲಾಗಿದೆ. ಘಂಟಾ ಬೋದಿಗೆಯ ಮೇಲೆ ಚೌಕಾಕಾರದ ಚತುರ್ಮುಖ ಬೋದಿಗೆ ಇದೆ. ಇದರ ಮೇಲೆ ಕಣ ಶಿಲೆಯ ತೊಲೆಗಳು ಮಂಚಬಂಧ ಮಾದರಿಯಲ್ಲಿವೆ. ತೊಲೆಗಳ ಮೇಲೆ ಛಾವಣಿಯಲ್ಲಿ ಬೃಹತ್ ಗಾತ್ರದ ಚಪ್ಪಡಿಗಳಿವೆ. ನಾಲ್ಕೂ ದಿಕ್ಕಿಗೆ ಇರುವ ಕಮಲ ಬೋದಿಗೆ ಮತ್ತು ಲೇತ್‌ನಲ್ಲಿ ನಿರ್ಮಿಸಿರುವ ಬಳೆಮಾದರಿ ಕೆತ್ತನೆಗಳು ಅತ್ಯಂತ ಆಕರ್ಷಕವಾಗಿದೆ. ಸರಳ ಕೆತ್ತನೆಯ ಮಂಟಪದಲ್ಲಿ ಯಾವುದೇ ವೀರನ ಅಥವಾ ಪ್ರಾಣಿಗಳ ಉಬ್ಬುಶಿಲ್ಪಗಳಿಲ್ಲದಿರುವುದು ವಿಶೇಷ. ಈ ವಿಶಿಷ್ಟ ಲಕ್ಷಣಗಳಿಂದ ಈ ಮಂಟಪ ಸುಮಾರು 14ನೇ ಶತಮಾನದ ಮಧ್ಯ ಭಾಗ ಅಂದರೆ ವಿಜಯನಗರ ಆರಂಭ ಕಾಲದಲ್ಲಿ ನಿರ್ಮಾಣವಾಗಿದೆ ಎಂಬ ತೀರ್ಮಾನಕ್ಕೆ ಬರಬಹುದಾಗಿದೆ.

ತೀವ್ರ ಅಲಕ್ಷ್ಯೆಯ ನಡುವೆ, ಅಧಿಷ್ಠಾನ ಭಗ್ನಗೊಂಡಿದ್ದರೂ, ಮಂಟಪ ಮಾತ್ರ ದೃಢವಾಗಿ ನಿಂತಿದೆ. ವಿಜಯನಗರ-ದ್ರಾವಿಡ ವಾಸ್ತು ಶೈಲಿಯ ವಿಶಿಷ್ಟತೆಯಿಂದಾಗಿ ಈ

ಮಂಟಪ ನೋಡುಗರ, ಇತಿಹಾಸ ಆಸಕ್ತರ ಗಮನ ಸೆಳೆಯುತ್ತದೆ. ವಿಜಯನಗರ ವಾಸ್ತು ಅಧ್ಯಯನಕ್ಕೆ ಇದೊಂದು ಹೊಸ ಸೇರ್ಪಡೆಯಾಗಿದೆ.

ಆಕರಗಳು

1) ಷಡಾಕ್ಷರಯ್ಯ ರು.ಮ. ಡಾ||: ವಿಜಯನಗರ ಅಧ್ಯಯನ ಸಂಪುಟ 7 ಸಂ.ರಾಮಕೃಷ್ಣ ಕೆ.ಆರ್. ಗೋಪಾಲ್ ಆರ್.ಡಾ. ವರ್ಷ 2002) ಕರ್ನಾಟಕ ರಾಜ್ಯ ಪುರಾತತ್ವ ಮತ್ತುಸಂಗ್ರಹಾಲಯಗಳ ನಿರ್ದೇಶನಾಲಯ ಹೊಸಪೇಟೆ.

2) ಶ್ರೀನಿವಾಸ ಪಾಡಿಗಾರ ಡಾ ||: ವಿಜಯನಗರ ಅಧ್ಯಯನ ಸಂ. 8. (2003) ಸಂ. ರಾಮಕೃಷ್ಣ ಕೆ.ಆರ್. ಗೋಪಾಲ್ ಆರ್. ಡಾ. ವರ್ಷ 2002) ಕರ್ನಾಟಕ ರಾಜ್ಯ ಪುರಾತತ್ವ ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ.


3) ಕೊಟ್ರೇಶ್, ಉತ್ತಂಗಿ ಡಾ ||: ಹೊನ್ನೆಲೆಗಳು 2004 ಪ್ರ. ಸಹ್ಯಾದ್ರಿ ಪ್ರಕಾಶನ ಹೊನ್ನಾಳಿ.

೧೮.ಹಂಪಿ ಮೆಟ್ಟಿಲು ಪುಷ್ಕರಣಿಯ ನಿರ್ಮಾಣ ಪ್ರಕ್ರಿಯೆ

ಡಾ. ಜಗದೀಶ

ಹಂಪಿ ಮೆಟ್ಟಿಲು ಪುಷ್ಕರಣಿಯು ಮಹಾನವಮಿ ದಿಬ್ಬದ ಸನಿಹವಿದೆ. ೧೯೮೪-೮೫ ಸಾಲಿನಲ್ಲಿ ಕೇಂದ್ರ ಪುರಾತತ್ವ ಇಲಾಖೆಯ ಅನ್ವೇಷಣೆ ಕಾರ್ಯದಲ್ಲಿ ಪತ್ತೆಯಾಗಿದೆ.

ಇದರ ಬಗ್ಗೆ ವರದಿ ಮತ್ತು ಲೇಖನವನ್ನು ಡಾ. ಬಿ. ನರಸಿಂಹಯ್ಯ ಪ್ರಕಟಿಸಿದ್ದಾರೆ. ಈ ಪುಷ್ಕರಣಿಯ ನಿರ್ಮಾಣ ತಾಂತ್ರಿಕತೆ ಬಗ್ಗೆ ನಾನು ಹಂಪಿ ಉತ್ಸವ ೨೦೦೧ರಲ್ಲಿ ಪ್ರಬಂಧ ಮಂಡಿಸಿದ್ದೆ. ಆಗ ಆರು ಹಂತಗಳಲ್ಲಿರುವ ಪುಷ್ಕರಣಿಯ ಮೊದಲ ಹಂತವನ್ನು ನೀರು ತುಂಬಿದ್ದ ಕಾರಣ ಪರಿಶೀಲಿಸಲು ಆಗಿರಲಿಲ್ಲ.



೨೦೦೩ ಸಾಲಿನಲ್ಲಿ ನೀರು ಕಡಿಮೆ ಆಗಿದ್ದಾಗ ಮೊದಲ ಹಂತ ಪರಿಶೀಲಿಸಲು ಸಾಧ್ಯವಾಯಿತು. ಮೊದಲ ಹಂತದಲ್ಲಿನ ಸಂಕೇತಾಕ್ಷರ ಇತರ ಪೂರ್ವ ಹಂತಗಳಲ್ಲಿರುವಂತೆ ಇರದೆ ವಿಭಿನ್ನವಾಗಿವೆ. ಈ ವಿಭಿನ್ನತೆ ಮತ್ತು ಅದು ಸೂಚಿಸುವ ನಿರ್ಮಾಣ ಪ್ರಕ್ರಿಯೆ ಬಗ್ಗೆ ಚರ್ಚಿಸುವುದು ಈ ಪ್ರಬಂಧದ ಉದ್ದೇಶವಾಗಿದೆ.

ತಳ ಭಾಗದಿಂದ ಮೇಲೆ ಬಂದಂತೆ ಆರು ಹಂತಗಳಿರುವುದನ್ನು ಹಿಂದೆ ಗುರ್ತಿಸಲಾಗಿತ್ತು. ಪ್ರತಿ ಕಲ್ಲಿನ ಮೇಲೆ ವಿವಿಧ ಚಿನ್ಹೆಗಳಿದ್ದು ಇವು ಪ್ರತಿಯೊಂದು ದಿಕ್ಕಿಗೆ

ಮತ್ತು ಹಂತಕ್ಕೆ ಬೇರೆಯಾಗಿದ್ದವು. ಮೇಲಿನಿಂದ ಕೆಳಗೆ ಇಳಿಯುವಾಗ ೧ ರಿಂದ ೨೫ ವರೆಗಿನ ಮೆಟ್ಟಿಲುಗಳ ಸಂಕೇತಾಕ್ಷರಗಳು ಠ,ಡ, ಢ, ಣ, ತ, ಥ, ದ, ಧ, ನ, ಪ, ಫ, ಬ, ಭ, ಮ, ಯ, ರ, ಲ, ವ, ಸ, ಷ, ಹ, ಳ, ಕ್ಷ, ಜ್ಞ, ತಿ ಇದೆ. ೨೬ ರಿಂದ ೩೫ ವರೆಗಿನ ೯ ಮೆಟ್ಟಿಲುಗಳ ಸಂಕೇತಾಕ್ಷರಗಳು ಹೀಗಿವೆ ಞ್ಯ, ಝ್ಯ, ಜ್ಯ, ಛ್ಯ, ಚ್ಯ, ಙ್ಯ, ಘ್ಯ, ಗ್ಯ, ಖ್ಯ, ಕ್ಯ.

೧ ರಿಂದ ೨೫ ಮತ್ತು ೨೬ ರಿಂದ ೩೫ ಮೆಟ್ಟಿಲುಗಳಿಗೆ ಬಳಸಲಾಗಿರುವ ಸಂಕೇತಾಕ್ಷರಗಳು ಬೇರೆ ಬೇರೆ ಇವೆ. ಕನ್ನಡದಲ್ಲಿ ೫೨ ವರ್ಣಮಾಲೆಗಳಿದ್ದು ೩೫ ಮೆಟ್ಟಿಲುಗಳಿಗೆ ಮೊದಲ ಸಂಕೇತಾಕ್ಷರವನ್ನು ಅ ದಿಂದ ಅಃ ದಲ್ಲಿನ ಯಾವುದೇ ಅಕ್ಷರದಿಂದ ಪ್ರಾರಂಭಿಸಬಹುದಿತ್ತು. ಕೆಲವು ಲೇಖಕರು ಈ ಮೆಟ್ಟಿಲು ಪುಷ್ಕರಣಿ ಬೇರೆಲ್ಲೋ ಇತ್ತು, ಅದನ್ನು ಇಲ್ಲಿ ತಂದು ಜೋಡಿಸಿದ್ದಾರೆ ಎಂದು ಊಹಿಸಿದ್ದರು. ಪ್ರಾಯಶಃ ಹೀಗಾಗಿದ್ದರೆ ಸಂಕೇತಾಕ್ಷರ ಒಂದೇ ಮಾದರಿಯಲ್ಲಿರಬೇಕಾಗಿತ್ತು.


ಈ ಅಕ್ಷರಾನುಕ್ರಮಣಿಕೆಯನ್ನು ಗಮನಿಸಿ ನಿರ್ಮಾಣ ಪ್ರಕ್ರಿಯೆ ಹೇಗಿದ್ದಿರಬಹುದೆಂದು ತಿಳಿಯಬಹುದು. ಕೇಂದ್ರ ಪುರಾತತ್ವ ಇಲಾಖೆಯವರು ಪುಷ್ಕರಣಿ ಸ್ಥಳವು ಈಗಾಗಲೇ ಇತರೆ ನೀರಿನ ಸಂಗ್ರಹಾಗಾರಗಳು ಇರುವ ದಿಕ್ಕಿನಲ್ಲೇ ಇದೆ ಮತ್ತು ಇದು ಪ್ರಾಯಶಃ ಅಂತರಜಲ ಹರಿವು ಇರುವ ಮಾರ್ಗದಲ್ಲೇ ಇದೆ ಎಂಬ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಪುಷ್ಕರಣಿಯ ನಿರ್ಮಾಣ ಸಮಯದಲ್ಲಿ ಹಿಂದಿನ ಮಣ್ಣು ಅಗೆತಗಳ ಅನುಭವದಿಂದ ಆಳವು ಸುಮಾರು ೪.೦೦ವರೆಗೆ ಮಾತ್ರ ಸಾಧ್ಯವಾಗುತ್ತದೆ, ನಂತರ ಕಲ್ಲು ಬಂಡೆಗಳು ದೊರೆಯಬಹುದೆಂದು ನಿರೀಕ್ಷಿಸಿ ಅದರಂತೆ ನಕ್ಷೆ ಸಿದ್ದಪಡಿಸಿ, ಒಪ್ಪಿಗೆ ಪಡೆದಿರಬಹುದು. ಮಣ್ಣು ಅಗೆತದ ಕೆಲಸದೊಂದಿಗೆ ಕಲ್ಲು ಕೆಲಸ ಕೂಡಾ ಸಮಾನಾಂತರವಾಗಿ ಪ್ರಾರಂಭವಾಗಿರಬಹುದು. ಅಗತ್ಯ ಕಲ್ಲುಗಳಿಗೆ ಉದ್ದೇಶಿತ ಕ್ರಮದಲ್ಲಿ ಸೂಚ್ಯಂಕ, ಚಿನ್ಹೆ ಇತ್ಯಾದಿ ನಮೂದಿಸುವ ಕ್ರಮ ಜೊತೆ ಜೊತೆಯಲ್ಲೇ ನಡೆಯುತ್ತಿರ ಬೇಕು. ಆದರೆ ಮಣ್ಣು ಅಗೆತ ಪೂರ್ವನಿಯೋಜಿತ ಮಟ್ಟ / ಹಂತ ತಲುಪಿದಾಗ ಅಂದಾಜು ಒಪ್ಪಿಗೆಯಲ್ಲಿ ಊಹಿಸಿದಂತೆ ಕಲ್ಲು ಬಂಡೆಗಳು ಕಾಣಸಿಕೊಳ್ಳುವುದಿಲ್ಲ. ಇನ್ನೂ ಆಳಕ್ಕೆ ಮಣ್ಣು ಅಗೆತ ಸಾಧ್ಯವಿರುವುದನ್ನು ಕಂಡುಕೊಂಡಿರಬೇಕು. ಪ್ರಾಯಶಃ ಆಗ ಮತ್ತೂ ಆಳಕ್ಕೆ ಮಣ್ಣು ತೋಡಬೇಕೆಂದು ತೀರ್ಮಾನ ತೆಗೆದುಕೊಂಡು ಅಗೆತ ಮುಂದು ವರಿಸಿದಾಗ ಇದು ೧.೫೦ ಮೀ ಆಳದವರೆಗೆ ಮುಂದುವರೆದಿದೆ. ಈಗಾಗಲೇ ಕಲ್ಲುಗಳಿಗೆ ಸಂಕೇತಾಕ್ಷರ ನೀಡುವ ವಿಷಯದಲ್ಲಿ ತಾವು ಠ, ಡ, ಣ. . ಜ್ಞ ಮತ್ತು ತಿ ವರೆಗೆ ೨೫ ಅಕ್ಷರಗಳನ್ನು ಬಳಸಿದ್ದು, ನಂತರ ೨೬-೩೫ ವರೆಗಿನ ಮೆಟ್ಟಿಲುಗಳಿಗೆ ಯಾವ ಅಕ್ಷರಗಳನ್ನು ಬಳಸಬೇಕೆಂದು ತಿರ್ಮಾನಿಸಬೇಕಾಗುತ್ತದೆ. ವರ್ಣಮಾಲೆಯಲ್ಲಿ ಉಳಿದ ಅಕ್ಷರಗಳನ್ನು ಕ, ಖ, . . ಚ ಇತ್ಯಾದಿ ಹಾಗೇ ಬಳಸಿದರೆ, ಇವುಗಳನ್ನು

ಜೋಡಿಸುವ ಸಮಯಕ್ಕೆ ಕೆಲಸಗಾರರು ಈ ಕಲ್ಲುಗಳು ಠ ಹಂತದ ನಂತರ ಬರುತ್ತವೆ ಎಂದು ಕಲ್ಲುಗಳನ್ನು ತೆಗೆದಿಡುವ ಸಾಧ್ಯತೆ ಕಂಡು ಕೊಂಡಿರಬಹುದು. ಆಗುವ ತೊಂದರೆಯನ್ನು ಮೊದಲೇ ಊಹಿಸಿ ಉಳಿದ ಕಲ್ಲುಗಳಿಗೆ ಹಿಂದೆ ಬಳಸಿದ್ದಕ್ಕಿಂತ ವಿಭಿನ್ನವಾದ ಸಂಯುಕ್ತಾ ಕ್ಷರ ಬಳಸಲು ತೀರ್ಮಾನಿಸಿರಬಹುದು. ೨೫ರ ನಂತರದ ಎಲ್ಲ ಮೆಟ್ಟಿಲುಗಳಿಗೆ ಅಕ್ಷರದೊಂದಿಗೆ ಯ ಒತ್ತಕ್ಷರ ಬಳಸಲು ತೀರ್ಮಾನಿಸಿ ಅದರಂತೆ ಸಂಕೇತಾಕ್ಷರ ನೀಡಿರುವುದನ್ನು ಕಾಣಬಹುದು. ಸಂಕೇತಾಕ್ಷರಗಳು ಮತ್ತು ಮೆಟ್ಟಿಲು ಸಂಖ್ಯೆ ಬಳಕೆ ರೇಖಾ ಚಿತ್ರದಲ್ಲಿ ಕಾಣಬಹುದು.

ಪುಷ್ಕರಣಿ ನಿರ್ಮಾಣ ಪ್ರಕ್ರಿಯೆಯು ಈಗಿನ ಸಂರಕ್ಷಣೆ ಕಾರ್ಯಕ್ಕೂ ಮಾರ್ಗ ಸೂಚಿಯಾಗಿದೆ. ಸಂರಕ್ಷಣಾ ಕಾರ್ಯದಲ್ಲಿ ಈಗ ಆಂಗ್ಲ ಅಕ್ಷರಗಳನ್ನು ಬಳಸಲಾಗು ತ್ತಿದೆ. ಇವು ಸಂಖ್ಯೆಯಲ್ಲಿ ೨೬ ಮಾತ್ರ ಇದೆ. ಆದರೆ ಕನ್ನಡದಲ್ಲಿ ೫೨ ಅಕ್ಷರಗಳಿವೆ, ಹೀಗಾಗಿ ೨೬ ಕ್ಕಿಂತ ಹೆಚ್ಚಿನ ಹಂತಗಳಲ್ಲಿ ಕಲ್ಲುಗಳಿದ್ದರೆ ಕನ್ನಡ ಅಕ್ಷರಗಳನ್ನು ಬಳಸ ಬಹುದು. ಇವುಗಳ ಜೊತೆಗೆ ಇನ್ನು ಸಂಯುಕ್ತಾಕ್ಷರ ಬಳಸಿದರೆ ಅಸಂಖ್ಯ ಅಕ್ಷರಗಳ ಸಾಧ್ಯತೆ ಇದೆ.

ಪುಷ್ಕರಣಿಯ ಪಾರ್ಶ್ವ ಸೀಳು ನೋಟ ಮತ್ತು ಸಂಕೇತಾಕ್ಷರಗಳು




ಕ್ಯ ಖ್ಯ ಗ್ಯ ಘ್ಯ ಙ್ಯ
ಚ್ಯ ಛ್ಯ ಜ್ಯ ಝ್ಯ
ಠ ಡ ಢ ಣ
ತ ಥ ದ ಧ ನ
ಪ ಫ ಬ ಬ ಮ
ಯ ರ ಲ ವ ಸ ಷ ಹ ಳ ಕ್ಷ ಜ್ಞ

೧೯. ಹಂಪಿಯ ಪರಿಸರದಲ್ಲಿ ಹರಿಹರ ಶಿಲ್ಪಗಳು ಹಾಗೂ ದೇವಾಲಯ

ಡಾ.ಕೆ.ಎಂ. ಸುರೇಶ

ಭಾರತೀಯ ಇತಿಹಾಸದಲ್ಲಿ ಶೈವ ಹಾಗೂ ವೈಷ್ಣವ ಪರಂಪರೆಗಳು ಸಂಘರ್ಷಾತ್ಮಕವಾಗಿ ಬೆಳೆದು ಬಂದಿವೆ. ಈ ಎರಡು ಪರಂಪರೆಗಳನ್ನು ಸಮ್ಮಿಳಿತಗೊಳಿಸಲು ಅನೇಕ ಪ್ರಯತ್ನಗಳು ನಡೆದಿವೆ. ಈ ಪ್ರಯತ್ನದ ಫಲವೆ ಹರಿಹರನ ಕಲ್ಪನೆ. ಹರಿಹರನ ಬಗ್ಗೆ ಮೊದಲ ಉಲ್ಲೇಖ ಬರುವುದೆ 'ಹರಿವಂಶ'ದಲ್ಲಿ. ನಂತರದ ಉಲ್ಲೇಖಗಳನ್ನು ಮತ್ಸ್ಯ, ಕೂರ್ಮ ಮತ್ತು ಸ್ಕಂದ ಪುರಾಣದಲ್ಲಿ ಕಾಣಬಹುದು. ಈ ಪೌರಾಣಿಕ ಕಥನಗಳು ನಮ್ಮ ದೇವಾಲಯದ ಭಿತ್ತಿಯಲ್ಲಿ, ಕಂಬಗಳಲ್ಲಿ ಇತ್ಯಾದಿಯಲ್ಲಿ ಚಿತ್ರಿಸಿದ್ದಾರೆ. ಈ ತೆರನಾದ ಪ್ರಾಚೀನ ಹರಿಹರನ ಶಿಲ್ಪವನ್ನು ಬಾದಾಮಿಯ ಮೊದಲ ಗುಹಾಂತರ ದೇವಾಲಯದಲ್ಲಿ ಕಾಣಬಹುದು. ಬಾದಾಮಿ ಚಾಲುಕ್ಯರ ನಂತರ ಹೊಯ್ಸಳರ ಕಾಲದಲ್ಲಿ ಈ ತೆರನಾದ ಹರಿಹರನ ಶಿಲ್ಪಗಳು ಮೂಡಿಬಂದಿವೆ. ಇದಕ್ಕೆ ಉತ್ತಮ ಉದಾಹರಣೆ ಹರಿಹರದ ಹರಿಹರೇಶ್ವರ ದೇವಾಲಯದಲ್ಲಿರುವ ಶಿಲ್ಪಗಳು. ವಿಜಯನಗರ ಕಾಲದಲ್ಲಿನ ಹಂಪಿ ಪರಿಸರದಲ್ಲಿ ಕಂಡು ಬರುವ ಹರಿಹರ ಶಿಲ್ಪಗಳು ಹಾಗೂ ದೇವಾಲಯಕ್ಕೆ ಈ ಪ್ರಬಂಧ ಮಿತಿಗೊಂಡಿದೆ.

ಹಂಪಿ ಪರಿಸರದ ತಿರುವೆಂಗಳನಾಥದೇವಾಲಯ, ಪ್ರಸನ್ನ ವಿರೂಪಾಕ್ಷದೇವಾಲಯ ಹಾಗೂ ತಿಮ್ಮಲಾಪುರದ ತ್ರಿಕೂಟ ದೇವಾಲಯಗಳಲ್ಲಿ ಹರಿಹರನ ಉಬ್ಬು ಶಿಲ್ಪಗಳನ್ನು ಇಲ್ಲಿ ದಾಖಲಿಸಲಾಗಿದೆ. ತಿರುವೆಂಗಳನಾಥ ಅಥವಾ ಅಚ್ಯುತ ದೇವಾಲಯದ ಮಂಟಪದಲ್ಲಿರುವ ಕಂಬದಲ್ಲಿ ಹರಿಹರನ ಉಬ್ಬು ಶಿಲ್ಪವಿದೆ. ನಾಲ್ಕು ಕೈಗಳನ್ನು ಹೊಂದಿ ರುವ ಈ ಶಿಲ್ಪವು ಕ್ರಮವಾಗಿ ಎಡಭಾಗದ ಕೈಗಳಲ್ಲಿ ಶಂಖ ಹಾಗೂ ವರದಾಮುದ್ರ, ಬಲಭಾಗದ ಕೈಗಳಲ್ಲಿ ಮೃಗ ಮತ್ತು ಅಭಯ ಮುದ್ರೆಯಲ್ಲಿವೆ. ಜಟಾಮುಕುಟ, ಇದರಲ್ಲಿ ಚಂದ್ರ, ಕಿವಿಯಲ್ಲಿ ನಾಗ ಕುಂಡಲ ಇರುವವು. ಒಟ್ಟಾರೆಯಾಗಿ ಇದು ಹರಿಹರನ ಶಿಲ್ಪ.


ಹಂಪಿಯ ಪ್ರಸನ್ನ ವಿರೂಪಾಕ್ಷ ದೇವಾಲಯದ ಹಿಂಭಾಗದ ಬಂಡೆಯಲ್ಲಿ ಹರಿಹರನ ಶಿಲ್ಪವನ್ನು ಕಂಡರಿಸಲಾಗಿದೆ. ಈ ಶಿಲ್ಪವು ನಾಲ್ಕು ಕೈಗಳನ್ನು ಹೊಂದಿದೆ. ಶಿವನ ಭಾಗದ ಕೈಗಳಲ್ಲಿ ತ್ರಿಶೂಲ ಅಭಯ ಮುದ್ರಸ್ಥಿತಿಯಲ್ಲಿವೆ. (ಹರಿ)ವಿಷ್ಣುಭಾಗದ ಕೈಗಳಲ್ಲಿ ಶಂಖ ಹಾಗೂ ಚಕ್ರಗಳಿವೆ. ಒಟ್ಟಿನಲ್ಲಿ ಹರಿಹರನ ಲಕ್ಷಣಗಳನ್ನು ಹೊಂದಿದೆ.

ಹಂಪಿಯಿಂದ ನೈರುತ್ಯಕ್ಕೆ 30ಕಿ.ಮೀ. ದೂರದಲ್ಲಿರುವ ತಿಮ್ಮಲಾಪುರದ ತ್ರಿಕೂಟ ದೇವಾಲಯದ ಸಭಾಮಂಟಪದ ಕಂಬದಲ್ಲಿ ಹರಿಹರನ ಶಿಲ್ಪವನ್ನು ಗುರುತಿಸಲಾಗಿದೆ. ಇದು ಕೂಡಾ ನಾಲ್ಕು ಕೈಗಳನ್ನು ಹೊಂದಿದ್ದು, ಎಡಭಾಗದ ಕೈಗಳಲ್ಲಿ ತ್ರಿಶೂಲ, ಅಭಯ ಮುದ್ರ, ಬಲಭಾಗದ ಕೈಗಳಲ್ಲಿ ಶಂಖ ಮತ್ತು ಚಕ್ರಗಳಿವೆ. ಈ ಶಿಲ್ಪದ ಲಕ್ಷಣಗಳಿಂದ ಇದು ಹರಿಹರನ ಶಿಲ್ಪವೆಂದು ತಿಳಿದು ಬರುತ್ತದೆ.

ಇನ್ನು ಹರಿಹರನ ದೇವಾಲಯಗಳಿರುವುದು ತುಂಬಾ ವಿರಳ. ಹಂಪಿ ಪರಿಸರದಲ್ಲಿ ಸಾಸ್ವಿಕಾಳ ಗಣೇಶನ ಗುಡಿಯ ಹಿಂಭಾಗಕ್ಕೆ ಹರಿಹರೇಶ್ವರ ದೇವಾಲಯವಿದೆ. ಇದನ್ನು ಅನಿಲ್ ವರ್ಗೀಸ್ ಅವರು ಗುರುತಿಸಿದ್ದಾರೆ. ಈ ದೇವಾಲಯದ ಗರ್ಭಗೃಹದಲ್ಲಿ ಹರಿಹರನ ಶಿಲ್ಪ ಇರುವುದಿಲ್ಲ ಪೀಠ ಮಾತ್ರ ಇದೆ. ಗರ್ಭಗೃಹ ಬಾಗಿಲುವಾಡದ ಇಕ್ಕೆಲಗಳಲ್ಲಿ ಶೈವ ಹಾಗೂ ವೈಷ್ಣವ ದ್ವಾರಪಾಲಕರ ಉಬ್ಬುಗೆತ್ತನೆಗಳಿವೆ. ಈ ಆಧಾರದಿಂದ ಅದನ್ನು ಹರಿಹರನ ದೇಗುಲವೆಂದು ಗುರುತಿಸಲಾಗಿದೆ.







೨೦. ವಿಜಯನಗರ ಕಾಲೀನ ದೇವಾಲಯದ ದ್ವಾರಗೋಪುರಗಳು: ಒಂದು ವಾಸ್ತು ಸಮೀಕ್ಷೆ

ಡಾ. ಎಸ್.ಕೆ. ಜೋಶಿ

ಭಾರತದ ಮಂದಿರಗಳ (ಪ್ರವೇಶ ದ್ವಾರಗಳು Entrance Gates) ಬೆಳೆದು ಬಂದ ದಾರಿಯನ್ನು ಇಲ್ಲಿ ಅವಲೋಕಿಸಲಾಗಿದೆ. ಅದರಲ್ಲೂ ಕರ್ನಾಟಕದ ಇತಿಹಾಸದ ಉದ್ದಕ್ಕೂ ಮತ್ತು ವಿಶೇಷವಾಗಿ ವಿಜಯನಗರದ ಕಾಲದಲ್ಲಿ ಅವು ಹೇಗೆ ಔನ್ನತ್ಯವನ್ನು ಹೊಂದಿದವು ಎಂಬ 'ವಾಸ್ತುಶಿಲ್ಪದ' ಪಾರ್ಶ್ವದಲ್ಲಿ ಚಿಂತಿಸಲಾಗಿದೆ.

ಪ್ರಾಚೀನ ಭಾರತದ ಸಾಮಾಜಿಕ ಹಾಗೂ ಧಾರ್ಮಿಕ ಬದುಕು ವಿಶಿಷ್ಟವಾದುದು ಹಾಗೂ ಶ್ರೇಷ್ಠವಾದುದು. ಈ ನೆಲದ ಸಾಮಾಜಿಕ ಬಂಧನ, ಈ ನೆಲದ ನಂಬುಗೆಗಳು, ನ್ಯಾಯ, ಆರ್ಥಿಕ ವ್ಯವಸ್ಥೆಗಳು, ವಾಸ್ತು ಶಿಲ್ಪಗಳು ಹಾಗೂ ಇವುಗಳಿಗೆ ವಿಸ್ತಾರದ ನೆಲೆ ನೀಡಿದ ಸಹ-ಬಾಳ್ವೆಯ ಮನಸ್ಸುಗಳು ಒಂದಕ್ಕೊಂದು ಸಾಂಸ್ಕೃತಿಕ ಸೂತ್ರದಲ್ಲಿ ಹೆಣೆದು ಕೊಂಡಿದ್ದವು. ಯಾವುದೂ ಅವುಗಳಲ್ಲಿ ಪರಕೀಯವೆನ್ನಿಸುತ್ತಿರಲಿಲ್ಲ. ಎಲ್ಲವುಗಳ ಹುಟ್ಟು, ಎಲ್ಲವುಗಳ ಪ್ರಕ್ರಿಯೆ ಇಲ್ಲಿಯವೇ. ಕೆಲವೊಂದು ಪರಿವೇಷ್ಠಿತಗಳು, ಬಣ್ಣಗಳು, ಆಚರಣೆಯ ವಿಧಿ ವಿಧಾನಗಳು, ತಂತ್ರಗಳು ಸ್ವಲ್ಪ ಸ್ವಲ್ಪ ಅಲ್ಲಲ್ಲಿ ಭಿನ್ನವೆನ್ನಿಸಿದ್ದರೂ, ಅವುಗಳ ಮೂಲ ತತ್ವಗಳಿಗೆ, ಸಾರುವ ಸಂದೇಶಗಳಿಗೆ, ಧ್ಯೇಯೋದ್ದೇಶಗಳಿಗೆ ಒಂದ ಕ್ಕೊಂದು ಸಾಮಿಪ್ಯ ಹೊಂದಿದ್ದವು, ಅಪರಿಚಿತ ಅಥವಾ ಪರಕೀಯ ಎನ್ನಿಸುತ್ತಿರಲಿಲ್ಲ.

ಹೀಗಾಗಿ, ಗೃಹ್ಯ ವಾಸ್ತುವಿನಲ್ಲಿ, ಧಾರ್ಮಿಕ ವಾಸ್ತುವಿನ್ಯಾಸಗಳಲ್ಲಿ, ಗ್ರಾಮ ನಗರ ನಿರ್ಮಿತಿಗಳ ವಾಸ್ತುಶೈಲಿಯಲ್ಲಿ ಹಾಗೂ ವಿನ್ಯಾಸ ಪ್ರದದಲ್ಲಿ, ಸಹ ಬಾಳ್ವೆಗೆ ಬೇಕಾದ ಅವಶ್ಯಕತೆಗಳಲ್ಲಿ ಏಕತಾನವಿದ್ದುದು ಈ ನೆಲದ ಹರವಿನಲ್ಲಿ ಕಂಡು ಬರುತ್ತದೆ. ವಿಶೇಷವಾಗಿ ದೇವಾಗಾರಗಳು, ಮನೆ ಮಠಗಳೂ ಒಂದರಿಂದೊಂದು ಕಳಚಲಾರದ ಬಂಧನದಲ್ಲಿ ಸಾಗಬೇಕಾದುದು ಅವಶ್ಯವಾಗಿದ್ದು, ಸಮಾಂತರವಾಗಿ ಬೆಳೆಯಬೇಕಾದುದು ಕಂಡು ಬರುತ್ತದೆ. ದೇವರ ಗುಡಿಗಳು ಹಾಗೂ ದೇವರ ಗುಡಿ ಎಡೆಗೆ ನಡೆವ ದಾರಿಗಳು, ಭಿನ್ನ ಭಿನ್ನವಾದರೂ, ಅವೆಲ್ಲ ಏಕತ್ವ ಸಾರುವ ಏಕೀಶ್ವರ ಭಾವದ ಪಥಗಳೇ ಆಗಿದ್ದವು.

ಹಾಗೆ ನೋಡಿದಲ್ಲಿ, ದೇವಾಲಯಗಳು ವಿಜಯನಗರ ಕಾಲದ ಪೂರ್ವದಲ್ಲಿ ಏಕಾಕಿಯಾಗಿ ಬೆಳೆದವು, (The temples grew individual in isolation). ವಿಜಯನಗರ ಪೂರ್ವೇತಿಹಾಸದ ದೇವಾಲಯಗಳಿಗೆ ಅವುಗಳನ್ನು ರಕ್ಷಿಸುವ ಪ್ರಾಕಾರ ಗೋಡೆಗಳ

ಅವಶ್ಯಕತೆ ಇರಲಿಲ್ಲ. ಅವೆಲ್ಲವೂ ಒಂದೇ ಸಂಪ್ರದಾಯಕ್ಕೆ, ಒಂದೇ ಸ್ಥೂಲ ನಂಬುಗೆಗೆ ಸಂಬಂಧಿಸಿದ್ದು, ಎಲ್ಲವೂ ತಮ್ಮದಾಗಿ ಇರುವುದರಿಂದ, ತಮ್ಮಂತಿರುವುದರಿಂದ, ತಮಗಾಗಿ ಇರುವುದರಿಂದ, ಅವುಗಳನ್ನು ವಕ್ರ ದೃಷ್ಟಿಯಿಂದ ನೋಡುವ ಕಣ್ಣುಗಳಾಗಲಿ, ಕೆಡಿಸುವ ಕೈಗಳಾಗಲಿ ಇರಲಿಲ್ಲ. ನೈತಿಕ ಭಯ, ದೇವ ಭಯ ಭಕ್ತಿಗಳು ಮುಂಬಂದು ಮಹಾಶಕ್ತಿಗಳಾಗಿ ವಿಶ್ವಾಸ ಶ್ರದ್ಧೆಗಳ ಗೋಡೆಯನ್ನು ಕಟ್ಟಿದವು. ಕಲ್ಲು ಮಣ್ಣುಗಳ ಗೋಡೆಗಳಿಗೆ ಅಲ್ಲಿ ಎಡೆ ಎಲ್ಲಿ? ಆಕ್ರಮಣಶೀಲ, ವಿಧ್ವಂಸಕ ಶೀಲ ಪ್ರವೃತ್ತಿಗಳಿಗೆ ಅಲ್ಲಿ ಎಡೆ ಎಲ್ಲಿ? ಹಾಗಾಗಿ ಆಗಿನ ವಿಜಯನಗರ ಪೂರ್ವ ದೇವಾಲಯಗಳು ಸುರಕ್ಷಿತ ಹಾಗೂ ಸುಭದ್ರ.

ಭಾರತೀಯ ಹಿಂದು ವಾಸ್ತುಶಿಲ್ಪದ (Indian Hindu Architecture) ಅಭ್ಯಾಸ ಮಾಡಿದಾಗ, ಧಾರ್ಮಿಕ ಮಂದಿರಗಳ, ನಿಲಯಗಳ ಹಾಗೂ ನಿವೇಶನಗಳ ಸ್ಪಷ್ಟತೆ ಹೀಗೆ ಕಂಡು ಬರುತ್ತದೆ. ಈ ಕಕ್ಷೆಯಲ್ಲಿ ಬರುವ - ಅಂದರೆ ದೇವಸ್ಥಾನಗಳ ಕಡೆಗೆ - ಕರೆದೊಯ್ಯುವ ದ್ವಾರಗಳನ್ನು (The entrance gates to temples) ನೋಡಿದಾಗ, ಅವುಗಳ ಪ್ರಾರಂಭಿಕ ಬೆಳವಣಿಗೆಯನ್ನು ಸಾಂಚೀ ಸ್ತೂಪಗಳ ಬಾರ್ಹುತ ಸ್ತೂಪಗಳಲ್ಲಿ ಅಳವಡಿಸಲಾದ ತೋರಣಗಳಲ್ಲಿ (the toranes) ಕಾಣಬಹುದು. ಇದು ಕ್ರಿ.ಪೂ. 200 ವರ್ಷಗಳಷ್ಟು ಹಿಂದೆ ಅಶೋಕನ ಕಾಲದ್ದು.

ತದನಂತರ ಪ್ರವೇಶದ್ವಾರಗಳ ಮತ್ತೊಂದು ಘಟ್ಟವನ್ನು ಬಾದಾಮಿ ಚಾಲುಕ್ಯರ ಕಾಲದಲ್ಲಿ ನೋಡಬಹುದು. ಐಹೊಳೆಯ ದುರ್ಗಾ ದೇವಸ್ಥಾನದ ದಕ್ಷಿಣ ದಿಶೆಯಲ್ಲೆಯ ಪ್ರವೇಶದ್ವಾರ. ಇದನ್ನು ಇತ್ತೀಚೆಗೆ, ಭಾರತೀಯ ಪುರಾತತ್ವ ಸರ್ವೇಕ್ಷಣದಿಂದ, ಡಾ. ಎಸ್. ವ್ಹಿ. ವೆಂಕಟೇಶಯ್ಯನವರ ಮಾರ್ಗದರ್ಶನದಲ್ಲಿ ಪುನರುಜ್ಜೀವನಗೊಳಿಸಲಾಗಿದೆ. (2004ರಲ್ಲಿ)

ಮಲಪ್ರಭೆಯ ಅಂಚಿನಲ್ಲಿ, ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಪೂರ್ವ ದಿಕ್ಕಿನಲ್ಲಿ ನದಿಗೆ ಮುಖಮಾಡಿ ನಿಂತಿರುವ (ಪ್ರವೇಶ ದ್ವಾರ ಕ್ರಿ.ಶ. 700) ಎಣಿಕೆಯಲ್ಲಿ ಬರುತ್ತದೆ.

ಅದರಂತೆ, ರಾಷ್ಟ್ರಕೂಟರ (8ನೆಯ ಶತಮಾನ) ಬೃಹತ್ ನಿರ್ಮಾಣ ತಾಣವಾದ ಎಲ್ಲೋರಾದ ಕೈಲಾಸನಾಥ ದೇವಾಲಯ (Rock cut biggest Architecture) ಹದಿನಾರನೆಯ ಲಯಣದ ಪಶ್ಚಿಮದಿಕ್ಕಿನಲ್ಲಿರುವ ಪ್ರವೇಶದ್ವಾರ. ಇತ್ಯಾದಿಗಳನ್ನೆಲ್ಲ ಮಾದರಿಯಾದ ಪ್ರವೇಶದ್ವಾರಗಳಲ್ಲಿ (Model entrance gates), ಆಕರಿಸಬಹುದು.

ಕಲ್ಯಾಣ ಚಾಲುಕ್ಯರ ಕಾಲದವರೆಗೆ ಕಟ್ಟಲ್ಪಟ್ಟ ಚಿಕ್ಕಪುಟ್ಟ, ಬಹು ಎತ್ತರವಾಗದ, ಪ್ರವೇಶದ್ವಾರಗಳು ವಾಸ್ತು ಶಿಲ್ಪದಲ್ಲಿ ಸಾಮಾನ್ಯತೆಯನ್ನು (Simplicity) ಹೊಂದಿವೆ. ಬಹುಳಷ್ಟು ಎತ್ತರಕ್ಕೆ ಏರದ, ಶಾಖಾಮಯ, (ಆಗಮ ನಿಯಮಗಳಂತೆ ಕಟ್ಟಲಾದ


ದ್ವಾರಗಳು), ಪ್ರವೇಶ ದ್ವಾರಗಳು ಬೇಕಾದ ಕಲ್ಲಿನ ಚೌಕಟ್ಟುಗಳಲ್ಲಿ (Stone door frame) ಪ್ರವೇಶ ಗೋಡೆಯ ಮಧ್ಯ ಭಾಗದಲ್ಲಿ ಅಳವಡಿಸಲಾಯಿತು. ತ್ರಿಶಾಖಾ, ಪಂಚ ಶಾಖಾ, ಸಪ್ತಶಾಖಾಗಳಿಂದ ಕೂಡಿದ ಪ್ರವೇಶ ದ್ವಾರಗಳು, ಅಲಂಕೃತವಾದವು. ಎಡಬಲ ಗಳಲ್ಲಿ ಜಯ-ವಿಜಯ ರಕ್ಷಕರು. ಶಾಖಾ ಸೌಂದರ್ಯ ವರ್ಧಿಸಲು, ಹೂಬಳ್ಳಿ ನಾಗಗಳ ಸಾಲು, ತಲೆಕಟ್ಟಿನ ಕಂಬದಲ್ಲಿ 'ಲಲಾಟಬಿಂಬ; ಆದರಲ್ಲಿ ಗಜಲಕ್ಷ್ಮಿ, ಗಣೇಶ, ಇಲ್ಲವೇ ತಾಂಡವಶಿವ, ಜೋಡಿಸಿ ಇಂಥ ಪ್ರವೇಶ ದ್ವಾರಕ್ಕೆ ಶಿಲ್ಪ ಸೌಂದರ್ಯದ ಕಲೆಯ ಬಲೆ ಯನ್ನು ಅಳವಡಿಸಲಾಯಿತು. ಈ ಸಮಯದಲ್ಲಿ ಇವು ಪ್ರವೇಶ ದ್ವಾರಗಳೆಂದೇ ಕರೆಯ ಲ್ಪಟ್ಟವು. ಇವು ಈ ಕಾಲದವರೆಗೆ (ಕ್ರಿ.ಶ. 1200-1300) ರವರೆಗೆ ಇನ್ನೂ ಗೋಪುರ ಗಳೆಂದು ಕರೆಯಿಸಿಕೊಂಡಿಲ್ಲ.

ಇವುಗಳಿಗೆ ವಿಶಿಷ್ಟವಾದ ಎತ್ತರ, (higher than the compund wall), ವಿಶಿಷ್ಟ ಚೌಕಟ್ಟು (Door frame), ರಾತ್ರಿ ಬಾಗಿಲುಗಳನ್ನು ಮುಚ್ಚಲು ಸಾಧ್ಯವಾಗುವಷ್ಟು ಮಾತ್ರ ಬಾಗಿಲಬಾಡುಗಳು, ಅಗಳಿ, ಚಿಲಕ ಇತ್ಯಾದಿ ಈ ಪ್ರವೇಶ ಬಾಗಿಲುಗಳ ಅಂಗಗಳು. ಈ ಬಾಗಿಲನ್ನು (entrance gate) ದಾಟಿ ಒಳಗೆ ಪ್ರವೇಶಿಸಿದರೆ, ನೇರವಾಗಿ ಗುಡಿಯ ಪ್ರಾಕಾರದಲ್ಲಿ ಅಥವಾ ಪ್ರಾಂಗಣದಲ್ಲಿ ಪ್ರವೇಶ.


ಈ ತರಹದ ವಾಸ್ತುಶಿಲೆಯ, ಸರಳ ಸಾದಾ ಪ್ರವೇಶ ದ್ವಾರಗಳನ್ನು ಆಗಲೇ ಮೇಲೆ ವಿವರಿಸಿದಂತೆ. ಉತ್ತರ ಕರ್ನಾಟಕದ ಕಲ್ಯಾಣ ಚಾಲುಕ್ಯರ ಗುಡಿ ನಿರ್ಮಾಣ ದವರೆಗೆ ಕಾಣಬಹುದು. ಇವುಗಳ ಬೆಳವಣಿಗೆ, ಸಾದಾತನದಿಂದ ಸಂಕೀರ್ಣದವರೆಗೆ (From simplicity & comlexity) ಬೆಳೆದುದನ್ನು ಹೊಯ್ಸಳರ ದೇವಾಲಯಗಳ ಸಮೂಹಗಳಲ್ಲಿ ಹಳೆಬೀಡು, ಬೇಲೂರು, ಸೋಮನಾಥಪುರಗಳಲ್ಲಿ ಕಾಣಬಹುದು. ಇಲ್ಲಿ ಪ್ರವೇಶ ದ್ವಾರಗಳು, ಅಲ್ಲಿನ ಶಿಲ್ಪಕಲೆಯ ಬಲೆಯಂತೆ, ಬಹಳ ಸುಂದರವಾಗಿವೆ. ಭದ್ರವೂ ಆಗಿವೆ. ಆದರೂ ಅವು 'ಗೋಪುರಗಳೆಂದು' ವಾಸ್ತುಶಾಸ್ತ್ರದಲ್ಲಿ ಹೆಸರು ಪಡೆದಿಲ್ಲ. ಅಂದರೆ, ಗೋಪುರಗಳ ರಚನೆ, (presentation of Architecture) ವಿನ್ಯಾಸ ಇವುಗಳಿಗೆ ಭಿನ್ನ. ಅದು ಹೇಗೆ ಭಿನ್ನ ಎಂಬುದು ವಿಜಯನಗರ ವಾಸ್ತುವಿನಲ್ಲಿ ಕಂಡು ಬರುತ್ತದೆ. (Architecture under the Vijayanagar empire). ಅದನ್ನು ಇನ್ನು ಮುಂದೆ ನೋಡಬಹುದು.


ಕಲ್ಯಾಣ ಚಾಲುಕ್ಯರ ಕರ್ನಾಟಕಕ್ಕೆ ಸೀಮಿತವಾದ ಕಾಲೀನ ಗುಡಿಗಳು (ಕ್ರಿ.ಶ. 950-1150), (ಉತ್ತರ ಕರ್ನಾಟಕದಲ್ಲಿಹಬ್ಬದ ಪ್ರದೇಶ) (ಬಸವ ಕರ್ನಾಟಕದಲ್ಲಿ ಹಬ್ಬಿದ ಪ್ರದೇಶ) ಬಸವ ಕಲ್ಯಾಣ, ಸಂಗಮ, ಲಕ್ಕುಂಡಿ, ಡಂಬಳ, ಗದಗ, ಬಾಗೇವಾಡಿ, ಇಟಗಿ, ಬೆಳಗಾವಿ, ವಕ್ಕುಂದ, ಹಾವೇರಿ, ಬಂಕಾಪುರ, ಬೆಳಗಾವಿ, ಚಟರ್ಕಿ, ಚೌಡದಾನಪುರ, ಗಳಗನಾಥ ಇತ್ಯಾದಿ ಇನ್ನೂ ಹತ್ತು ಹಲವಾರು ತಾಣಗಳಲ್ಲಿಯ ಗುಡಿಗಳು ಚಿಕ್ಕ ಪುಟ್ಟ

ಪ್ರವೇಶ ದ್ವಾರಗಳನ್ನು ಹೊಂದಿವೆ. ಇವುಗಳಿಗೆಲ್ಲ 'ಮಹಾದ್ವಾರಗಳು' ಅಥವಾ 'ಗೋಪುರ ದ್ವಾರಗಳು' ಎಂದು ಕರೆಯಲು ಸಲ್ಲ.










by DR. S. K. JOSHI **CONSTRUCTION OF TEMPLE, FROM FOUNDATION-TRENCH TO SHIKHARA**




ವಿರೂಪಾಕ್ಷ ದೇವಾಲಯ, ಹಂಪಿ



ಶ್ರೀಕಂಠೇಶ್ವರ ದೇವಾಲಯ,
ನಂಜನಗೂಡು



ಚಾಮರಾಜೇಶ್ವರ ದೇವಾಲಯ, ಚಾಮರಾಜನಗರ



ವೆಲ್ಲೂರು
ಗೋಪುರಂ



ಶ್ರೀರಂಗನಾಥ ಸ್ವಾಮಿ ದೇವಾಲಯ, ಶ್ರೀರಂಗಪಟ್ಟಣ



ನರಸಿಂಹ ಸ್ವಾಮಿ ದೇವಾಲಯ, ಮೇಲುಕೋಟೆ



ವಾದಿರಾಜ ಮಠ, ಸೋಂದೆ

ಭದ್ರ ಪ್ರವೇಶ ದ್ವಾರಗಳು ಏಕೆ ಬೇಕಾದವು?

ಈ ವಿಷಯವಾಗಿ ವಿಶ್ಲೇಷಣೆ : ಹನ್ನೆರಡು ಹದಿಮೂರನೆಯ ಶತಮಾನಗಳಿಂದ ಈ ನೆಲದ ಸಾಮಾಜಿಕ ಹಾಗೂ ಧಾರ್ಮಿಕ ಬದುಕಿಗೆ ವೈರುದ್ಧ್ಯವಾದ ಗಾಳಿಯೊಂದು ಬೀಸತೊಡಗಿತು. ಈ ನೆಲದ ಪರಂಪರೆಯನ್ನು ನಲುಗಿಸಲು ಪ್ರಾರಂಭಿಸಿತು. ಎಲ್ಲವೂ ಈ ನೆಲದ ಸಂಪ್ರದಾಯ, ಈ ನೆಲದ ಧರ್ಮ, ಈ ನೆಲದ ಆಚರಣೆಗಳಿಗೆ ತೀರ ಭಿನ್ನವಾದ 'ಇಸ್ಲಾಂ' ಧರ್ಮದ ಆಕ್ರಮಣ. ದಂಡಯಾತ್ರೆಗಳು ಕ್ರೌರ್ಯಗಳು ಇಲ್ಲಿಯ ಸಾಮಾಜಿಕ ಹಾಗೂ ಧಾರ್ಮಿಕ ಬದುಕನ್ನು ಸಿಥಿಲಗೊಳಿಸಿದವು.

ದಕ್ಷಿಣದ ಶಾಹಿ - ಸುಲ್ತಾನೇಟ್‌ಗಳು ತಮ್ಮ ತಮ್ಮ ರಾಜಕೀಯ ಬಲವನ್ನು ಹೆಚ್ಚಿಸುತ್ತಿರುವಂತೆಯೇ, ಇಸ್ಲಾಂಗೆ ಅತ್ಯಂತ ವೈರುದ್ಧ್ಯವಾದ ಮೂರ್ತಿಪೂಜೆ, ಸ್ಥಾವರ ಪೂಜೆ, ಗುಡಿಗೋಪುರಗಳಲ್ಲಿ ಅರ್ಚನೆಗಳಿಗೆ ಕುಠಾರ ಪ್ರಹಾರ ಪ್ರಾರಂಭವಾಯಿತು. ಹಿಂದು ಸಂಪ್ರದಾಯದಲ್ಲಿ ಬೆಳೆದು ಬಂದ ದೈವಗಳು, ಮೂರ್ತಿಗಳು, ದೇವಸ್ಥಾನಗಳು, ತೀರ್ಥ ಪುಷ್ಕರಣಿಗಳು ಭಿನ್ನಗೊಳ್ಳಲು ಪ್ರಾರಂಭಿಸಿದವು. ಈ ತರಹದ ಅನಿರೀಕ್ಷಿತ ವಿಘ್ನಕಾರ ಬೆಳವಣಿಗೆಗೆ, ಎದಿರೇಟು ರಕ್ಷಣೆ ನೀಡಲು, ತಡೆಯೊಡ್ಡಲು ದೇವಾಲಯ ಗಳ ಸುತ್ತ ಭದ್ರಗೋಡೆಗಳ ಅವಶ್ಯಕತೆ ಉಂಟಾಯಿತು.

ಹೀಗಾಗಿ, ವಿಜಯನಗರದ ಕಾಲದಲ್ಲಿ ದೇವಾಲಯಗಳ ಸಮುಚ್ಚಯಗಳಿಗೆ, ರಕ್ಷಣಾ ವ್ಯವಸ್ಥೆ ಬೇಕಾಗಿರುವುದರಿಂದ, ದೇವಾಲಯಗಳ ವಿನ್ಯಾಸಗಳಲ್ಲಿಯೇ ಹೊಸ

ಅಳವಡಿಕೆ ಉಂಟಾಯಿತು. ಅದೇ ಪ್ರಾಕಾರದ ಎತ್ತರವಾದ ಗೋಡೆಗಳು (High compund walls) ಅಸ್ತಿತ್ವದಲ್ಲಿ ಬಂದವು. ಸಾಮಾನ್ಯ ಧಾರ್ಮಿಕ ಬದುಕು, ಭಯಾನಕವಾದುದರಿಂದ ದೇವ ಮಂದಿರಗಳ ಸುತ್ತ 'ರಕ್ಷಣಾ ಗೋಡೆಗಳು' (Defence walls) ಬೇಕಾದವು. ಹಾಗೂ ಈ ಎತ್ತರವಾದ ಗೋಡೆಗಳ ಮಧ್ಯಂತರದಲ್ಲಿ 'ಗಗನ ಚುಂಬೀ' ಬಹಳ ಎತ್ತರವಾದ ಪ್ರವೇಶದ್ವಾರಗಳು ನಿರ್ಮಾಣವಾದವು. ಅವೇ ನಮ್ಮ ವಿಷಯಕ್ಕೆ ಸಂಬಂಧಿಸಿದ 'ಗೋಪುರ - ದ್ವಾರಗಳು'.

ಈ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ (ಕ್ರಿ.ಶ. 1336-1565) ದೇವಾಲಯಗಳ ಪ್ರವೇಶ ದ್ವಾರಗಳು 'ಗೋಪುರ ದ್ವಾರಗಳೆಂದು ಗೋಪುರಗಳೆಂದು' ವಾಸ್ತುವಿನ್ಯಾಸದಲ್ಲಿ ಹೆಸರು ಪಡೆದಿವೆ. ಇಂಥ ಪ್ರವೇಶ ದ್ವಾರಗಳಿಗೆ, ಮಹಾದ್ವಾರಗಳಿಗೆ ಒಂದು ಎತ್ತರ, ಒಂದು ಗಟ್ಟಿತನ, ಒಂದು ಗಾಂಭೀರ್ಯ ಹಾಗೂ ದೂರದಿಂದ ತನ್ನ ಅಸ್ತಿತ್ವವನ್ನು ಕರೆವ, (Beconing) ಒಂದು ತರಹದ ವಾಸ್ತುಕಲೆಯನ್ನು ಅಳವಡಿಸಬೇಕಾಯಿತು. ಈ ಪ್ರವೇಶ ವಾಸ್ತು ಚೌಕಟ್ಟುಗಳು ಸೌಂದರ್ಯೀಕರಣಗೊಳ್ಳಲು ಎತ್ತರವಾಗಿ ಬೆಳೆದವು. ಅವೇ ಮುಂದೆ ಗೋಪುರಗಳೆಂದು (Gopuras of temple) ಅಭಿಧಾನಹೊತ್ತವು. ಗೋಪುರಗಳೆಂದು ಕರೆದುಕೊಂಡು, ಮಧ್ಯಯುಗೀನ ಭಾರತ ದೇವಾಲಯಗಳ ವಾಸ್ತು (Indian Temples Architecture) ಇತಿಹಾಸದಲ್ಲಿ (After the influx of Islam) ಇಸ್ಲಾಮಿನ ಇಣುಕುವಿನಲ್ಲಿ ದೇವಾಲಯದ ರಕ್ಷಣೆಯಲ್ಲಿ ಮಹತ್ವದ ಪಾತ್ರ ವಹಿಸಿದವು. ಅವು ಅಷ್ಟು ಸರಳ ಪ್ರವೇಶಕ್ಕೆ ಸುಲಭವಾಗಿರಲಿಲ್ಲ.

ವಿಜಯನಗರದ ಕಾಲ ಹಾಗೂ ತದನಂತರ ಕಾಲದಲ್ಲಿ ಈ ಎತ್ತರದ ಗೋಪುರಗಳ ಸಂಖ್ಯೆ ಸಾಕಷ್ಟು ಬೆಳೆಯಿತು. ಈ ಪ್ರವೇಶ ದ್ವಾರಗಳು ಆಗಸವ ಚುಂಬಿಸುವಂತೆ ಎತ್ತರ ಪಡೆದವು ಹಾಗೂ ವಾಸ್ತು ನಿಯಮಗಳಲ್ಲಿ ಕಟ್ಟೆ ಕಟ್ಟೆಯಾದ (Receeding pyramidal steps) ಪಿರ್ಯಾಮಿಡ್ ಆಕೃತಿಯಂತೆ, ಇವು ಎತ್ತರವನ್ನು ತಲುಪಿದವು.

ಐದು, ಏಳು, ಒಂಬತ್ತು, ಹನ್ನೊಂದು ಹೀಗೆ ಮಜಲುಗಳನ್ನು ಪಡೆದವು. ಈ ಎತ್ತರತೆಯಿಂದ ಹತ್ತಾರು ಮೈಲು ದೂರದ ಪ್ರವಾಸಿಗರಿಗೆ ಭಕ್ತರಿಗೆ ಅಲ್ಲಿಗೆ ಬರಲು ದಿಕ್‌ಸೂಚಿ ಆದವು. ಈ ಎತ್ತರದ ದ್ವಾರಗಳ ಹೊರ ಗೋಡೆಗಳಲ್ಲಿ, ಅರ್ಥ ಕಾಮ ಮೋಕ್ಷಗಳನ್ನು ಸೂಚ್ಯವಾಗಿ ಹೇಳುವ, ಮಾನವನ ಬದುಕನ್ನು ಎತ್ತರಿಸುವ, ದೈವದ ಅವತಾರಗಳನ್ನು ಮೂರ್ತಿರೂಪಗಳಲ್ಲಿ ಅಳವಡಿಸಲಾಯಿತು. ಭೋಗ ತ್ಯಾಗಗಳ ಮೂರ್ತಿಗಳ ಜಗತ್ತನ್ನೇ ಇಲ್ಲಿ ಸೃಷ್ಟಿಸಲಾಯಿತು. ಭಾಗವತ, ಶೈವ, ಶಾಕ್ತ ಪಂಥಗಳ ಮೂರ್ತಿಗಳನ್ನು ಪ್ರತಿ ಸ್ತರಗಳಲ್ಲಿ ಕೊರೆಯಲಾಯಿತು. ಪ್ರಕೃತಿ -ಪುರುಷರ ಆಟವನ್ನೂ ಇಲ್ಲಿ ಕಾಣಬಹುದು. (The world of Indian Icons) ಇಲ್ಲಿ ಜಾತ್ರೆಯಾಗಿ ನೆರೆದವು, ಗೋಪರಗಳ ತುಟ್ಟ ತುದಿಗೆ, ಭೂಸಮಾಂತರವಾಗಿ, ಒಂದೇ ಸಾಲಿನಲ್ಲಿ ತೆನೆಗಳ

ಕಲಶಗಳನ್ನು ಪಡೆದವು. ಇವು ಪೂರ್ಣ ಕುಂಭಗಳೇ. ಶುಭವ ಕೋರುವ, ಮಂಗಲ ಸಾರುವ, ಕುಂಭಗಳು.

ಈ ತರಹದ ಗೋಪುರಗಳು, ಹಂಪಿಯ ಪರಿಸರದಲ್ಲಿ ಶ್ರೀ ವಿರೂಪಾಕ್ಷ ದೇವಸ್ಥಾನ, ಹಜಾರರಾಮ ದೇವಸ್ಥಾನ, ಅಚ್ಯುತರಾಯ ದೇವಸ್ಥಾನ ಸಮೂಹ, ಪಟ್ಟಭಿರಾಮ ದೇವ ಸಮುಚ್ಚಯ, ಶ್ರೀಕೃಷ್ಣಮಂದಿರ, ಶ್ರೀ ವಿಜಯವಿಠ್ಠಲ ದೇವಸ್ಥಾನ - ಈ ಮುಖ್ಯ ದೇವಸ್ಥಾನಗಳಲ್ಲದೆ, ಇನ್ನುಳಿದ ಚಿಕ್ಕ ಪುಟ್ಟ ದೇವ ಮಂದಿರಗಳಲ್ಲಿ ನೂರಾರು ಹತ್ತಾರು ಕಡೆಗೆ ಇಂಥ ಗೋಪುರಗಳನ್ನು ಕಾಣಬಹುದು. ಈ 'ಗೋಪುರ ಬಂಧಗಳ' ವಾಸ್ತು ಶಿಲ್ಪವು ವಿಶಿಷ್ಟವಾಗಿ, ವಿಜಯನಗರ ಸಾಮ್ರಾಜ್ಯದಲ್ಲಿಯೇ - ದೇವಾಲಯಗಳ ಪ್ರವೇಶ ದ್ವಾರಗಳಲ್ಲಿ ಬೆಳೆದು ಬಂದವು.

ಹಾಗೆ ನೋಡಿದಲ್ಲಿ, ದಕ್ಷಿಣ ಭಾರತದಲ್ಲಿ ಬಲಾಢ್ಯ ವಿಜಯನಗರವು ತನ್ನ ದೇವಾಲಯಗಳನ್ನು ಕಟ್ಟುವಿಕೆಯ ದಿಟ್ಟ ಹೆಜ್ಜೆಯಲ್ಲಿ, ಹೊಸ ದೇವಾಲಯಗಳನ್ನು ಕಟ್ಟಿದುದು ಅಷ್ಟೇ ಅಲ್ಲ, ಅದಕ್ಕಿಂತಲೂ ಪೂರ್ವದಲ್ಲಿ ನಿರ್ಮಾಣವಾದ ದೇವಾಲಯಗಳ ಜೀರ್ಣೋದ್ಧಾರ, ಪ್ರಾಕಾರಗೋಡೆ, ಪ್ರವೇಶದ್ವಾರ, ತೀರ್ಥ ಪುಷ್ಕರಣಿಗಳನ್ನೂ ಅಳವಡಿಸಲಾಯಿತು.

ಉದಾಹರಣೆಗಾಗಿ, ತಿರುಪತಿ, ಕಂಚೀ, ತಂಜಾವೂರ್, ಮೇಲುಕೋಟೆ, ಮಧುರೈ, ತಿರುಚಿನಾಪಳ್ಳಿ, ತಿರುವಾಯೂರು, ಶ್ರೀಗುರುವಾಯೂರು ಇತ್ಯಾದಿ ಇತ್ಯಾದಿ ಬೃಹತ್ ದೇವಸ್ಥಾನಗಳಲ್ಲಿ ವಿಜಯನಗರ ಸಾಮ್ರಾಟರ ಗೋಪುರಗಳು ಪ್ರಸಿದ್ಧ. ಒಂದೊಂದು ಸ್ಥಾನದಲ್ಲಿ ಒಂದರೊಳು ಒಂದರಂತೆ ಇರುವ ಪ್ರಾಕಾರ - ಪ್ರಾಂಗಣಗಳಲ್ಲಿ ಪ್ರವೇಶ ದ್ವಾರದ ಗೋಪುರಗಳು ಕಟ್ಟಲ್ಪಟ್ಟವು. ಇವು (City Temples) ನಗರ ದೇವಸ್ಥಾನಗಳು ಎಂದು ಕರೆಯಲ್ಪಟ್ಟು ಇಡೀ ನಗರವೇ ಅಲ್ಲಿ ವಾಸಿಸುವ ವ್ಯವಸ್ಥೆ ಮಾಡಲಾಗಿತ್ತು. ಇದಕ್ಕೆ ತಮಿಳುನಾಡಿನ ಬೃಹದೀಶ್ವರ ದೇವಾಲಯ ಒಂದು ಉತ್ತಮ ನಿದರ್ಶನ. ಅಲ್ಲಿಸುತ್ತುವರಿದ ಡಿಫೆನ್ಸ್‌ವಾಲ್ ಇದೆ; ಹಾಗೂ ಪ್ರವೇಶದ್ವಾರಗಳಲ್ಲಿ ಬೃಹತ್ ಗೋಪುರಗಳೂ ಗನನ ಚುಂಬಿ ಆಗಿವೆ.

ಹೀಗೆ, ಕೊನೆಗೆ ಹೇಳ ಬಯಸುವುದೇನೆಂದರೆ, ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ, ದೇವಾಲಯಗಳ ರಕ್ಷಣೆಗಾಗಿ ಪ್ರಾಕಾರಗೋಡೆಗಳು ಬೆಳದುವಲ್ಲದೆ, ಅವುಗಳ ಪ್ರವೇಶಕ್ಕಾಗಿ ಗಗನ ಚುಂಬೀ ಗೋಪುರಗಳೂ ಅಳವಡಿಸಲ್ಪಟ್ಟವು. ಈ ಪ್ರಕ್ರಿಯೆಯು ಭಾರತೀಯ ದೇವಾಲಯ ವಾಸ್ತು ಇತಿಹಾಸದಲ್ಲಿ ಅತ್ಯಂತ ಮಹತ್ವದ ಕೊಡುಗೆ ಎಂದು ತಿಳಿಯ ಬಹುದು.

ಆಧಾರ ಗ್ರಂಥಗಳು

1. Director General A.S.I. N.Delhi : Archaeological Remains Monuments and Museums part II
2. Dr. Suryanath Kamath : A Hand Book of Karnataka. Dept. of Gazetteer, Govt. of Karnataka
3. Dr. G.S. Dixit (ed) : Early Vijayanagar studies in History and Culture.
4. ಡಾ. ಬಿ. ಶೇಖ ಅಲಿ (ಪ್ರ.ಸಂ.) ಡಾ. ಕೆ.ಎಸ್. ಶಿವಣ್ಣ (ಸಂ) : ಕರ್ನಾಟಕ ಚರಿತ್ರೆ 1997
5. ಡಾ.ಎಸ್. ಕೆ. ಜೋಶಿ : Defence Architecuture in Early Karnataka
6. ಸದಾನಂದ ಕನವಳ್ಳಿ (ಅನು) : ಮರೆತು ಹೋದ ಮಹಾಸಾಮ್ರಾಜ್ಯ ವಿಜಯನಗರ, ರಾಬರ್ಟ್ ಸಿವೆಲ್.

ಚಿತ್ರಗಳು : ಭಾರತೀಯ ಪುರಾತತ್ವ ಇಲಾಖೆ ಮತ್ತು ಲೇಖಕ

೨೧. ಹಂಪಿಯಲ್ಲಿ ಮಹಾಭಾರತದ ನಿರೂಪಣಾತ್ಮಕ ಉಬ್ಬುಶಿಲ್ಪಗಳು

ಡಾ. ಸಿ.ಎಸ್.ವಾಸುದೇವನ್

ವಿಜಯನಗರ ಸಾಮ್ರಾಜ್ಯದ ರಾಜಧಾನಿಯು ಇಂದಿನ ಹಂಪಿಯಾಗಿದ್ದು, ಅದನ್ನು ವಿಜಯನಗರ ಪಟ್ಟಣ, ವಿದ್ಯಾನಗರ, ಪಂಪಾಕ್ಷೇತ್ರ, ವಿಜಯನಗರ ಮತ್ತು ಇನ್ನೂ ಅನೇಕ ಹೆಸರುಗಳಿಂದ ಕರೆಯಲಾಗುತ್ತಿತ್ತು. ವಿಜಯನಗರ ಸ್ಥಾಪನೆಗಿಂತ ಪೂರ್ವದಲ್ಲಿ ಈ ಪ್ರದೇಶವು ಒಂದು ಕಿರಿಯ ಗ್ರಾಮವಾಗಿದ್ದು, ರಾಜಧಾನಿಯನ್ನು ಇಲ್ಲಿಗೆ ವರ್ಗಾಯಿಸಿದ ನಂತರ ಬೆಳೆದು ಪ್ರಬುದ್ಧತೆಯನ್ನು ಪಡೆಯುವುದರೊಂದಿಗೆ ವಿಜಯನಗರ ಸಾಮ್ರಾಜ್ಯದ ಮುಖ್ಯ ಕೇಂದ್ರಬಿಂದುವಾಗಿ ಕಾರ್ಯನಿರ್ವಹಿಸುತ್ತಾ, ರಾಜಕೀಯ, ಧಾರ್ಮಿಕ, ಸಾಮಾಜಿಕ ಹಾಗೂ ಆರ್ಥಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಂದ ಎಲ್ಲರ ಗಮನವನ್ನು ಸೆಳೆಯುತ್ತ ಬಂದಿರುವುದು ಇತಿಹಾಸದಿಂದ ತಿಳಿಯುವ ವಿಷಯ. ರಾಜಕೀಯ ಪಥನಾನಂತರ ಹಂಪೆಯು ಮುಖ್ಯವಾಗಿ ವಿಜಯನಗರಪಟ್ಟಣವು ಒಂದು ಪುಣ್ಯಕ್ಷೇತ್ರವಾಗಿ ಮುಂದುವರೆಯುತ್ತಲಿದೆ. ಹಂಪಿಯ ಪ್ರಾಚೀನತೆಯನ್ನು ಕ್ರಿ.ಶ. ಸುಮಾರು ಏಳನೆಯ ಶತಮಾನದಷ್ಟು ಪೂರ್ವಕ್ಕೆ ಒಯ್ಯಬಹುದು.

ಬಾದಾಮಿ ಚಾಲುಕ್ಯರ ಅರಸ ವಿನಯಾದಿತ್ಯನು ಕ್ರಿ.ಶ. ೬೯೧ರಲ್ಲಿ ತುಂಗಭದ್ರಾ ನದಿಯ ದಡದಲ್ಲಿ, ಅಂದರೆ ಪಂಪಾಕ್ಷೇತ್ರದಲ್ಲಿ, ಬೀಡು ಬಿಟ್ಟಿದ್ದನು. ಅವನ ತರುವಾಯ ಅನೇಕ ಅರಸರು ಈ ಪ್ರದೇಶಕ್ಕೆ ಬಂದು, ಇಲ್ಲಿನ ಅಧಿದೇವತೆಯಾದ ವಿರೂಪಾಕ್ಷನಿಗೆ ಹಾಗೂ ದೇವಾಲಯಕ್ಕೆ ಅನೇಕ ದಾನದತ್ತಿಗಳನ್ನು ನೀಡಿರುತ್ತಾರೆ. ಕ್ರಿ.ಶ. ೧೨ನೇ ಶತಮಾನದ ಅಂತ್ಯದಲ್ಲಿ ಸಿಂಧರ ವಂಶದ ಕಲಿದೇವರಸನು ಕುರುಗೋಡಿನಿಂದ ಆಳ್ವಿಕೆಯನ್ನು ನಡೆಸುವ ಸಮಯದಲ್ಲಿ ಅವನ ಸಾಮಂತ ಮಾದೆಯನಾಯಕನು ವಿರೂಪಾಕ್ಷನ (ವಿರೂಪಾಕ್ಷ ತೀರ್ಥದ) ರಕ್ಷಣೆಯನ್ನು ಮಾಡುತ್ತಿದ್ದನು ಎಂದು ತಿಳಿದುಬರುತ್ತದೆ. ಮತಂಗಪರ್ವತ ಪ್ರದೇಶವನ್ನು ಅವನು ನಿರ್ವಹಿಸುತ್ತಿದ್ದನು. ಅವನ ತರುವಾಯ ಹೊಯ್ಸಳ ಅರಸ ಸೋಮೇಶ್ವರನು ಕ್ರಿ.ಶ. ೧೨೩೬ರಲ್ಲಿ ಪಂಪಾಕ್ಷೇತ್ರದ ವಿರೂಪಾಕ್ಷನಿಗೆ ಒಂದು ಹಳ್ಳಿಯನ್ನು ದಾನ ನೀಡಿದ ವಿಷಯವು ಶಾಸನಗಳಿಂದ ತಿಳಿದುಬರುತ್ತದೆ.


ಹೊಯ್ಸಳರ ರಾಜಧಾನಿಯು ಮುಸ್ಲಿಮರ ದಾಳಿಯಿಂದ ನಾಶವಾದ ಮೇಲೆ ಮೂರನೆಯ ಬಲ್ಲಾಳನು ಕ್ರಿ.ಶ. ೧೩೩೧ರಲ್ಲಿ ವಿರೂಪಾಕ್ಷ ಹೊಸದುರ್ಗದಿಂದ ಆಳುತ್ತಿದ್ದನು. ಅವನ ಮಗ ವಿರೂಪಾಕ್ಷ ಬಲ್ಲಾಳನ ಯುವರಾಜ ಪಟ್ಟಾಭಿಷೇಕವು ಹಂಪೆಯಲ್ಲಿ ನಡೆಯಿತು. ಪ್ರಾಯಶಃ ಅವನು ಇಲ್ಲಿ ಒಂದು ಕೋಟೆಯನ್ನು ಕಟ್ಟಿಸಿರುವ ಸಾಧ್ಯತೆಗಳಿವೆ. ಕ್ರಿ.ಶ. ೧೩೩೬ರಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯನ್ನು ಸಂಗಮ ಸಹೋದರರಿಂದ ಆದ ತರುವಾಯ ಈ ವಂಶದ ಇಬ್ಬರು ಅರಸರು, ಮೊದಲನೆಯ ಹರಿಹರ (ಕ್ರಿ.ಶ. ೧೩೩೬-೧೩೫೬) ಮತ್ತು ಮೊದಲನೆಯ ಬುಕ್ಕ (ಕ್ರಿ.ಶ. ೧೩೫೬-೭೭) ಆನೆಗೊಂದಿಯಿಂದ ಆಳುತ್ತಿದ್ದರು. ಹಂಪೆಯ ಹತ್ತಿರ ತುಂಗಭದ್ರಾ ನದಿಯ ಆಚೆಯ ದಡದ ಮೇಲಿನ ಪಟ್ಟಣವನ್ನು ಹಸ್ತಿನಾವತಿ ಎಂದು ಕರೆಯಲಾಗುತ್ತಿತ್ತು. ಮೊದಲನೆಯ ಬುಕ್ಕನು ವಿಜಯನಗರ ಪಟ್ಟಣದಲ್ಲಿ ಕೋಟೆಯನ್ನು ಕಟ್ಟಿಸಿ, ರಾಜಧಾನಿಯನ್ನು ಆನೆಗೊಂದಿಯಿಂದ ವಿಜಯನಗರಕ್ಕೆ ಅಂದರೆ ಬಲದಂಡೆಯ ಇಂದಿನ ಹಂಪೆ ಪ್ರದೇಶಕ್ಕೆ, ಸ್ಥಳಾಂತರಿಸಿದನು. ಪ್ರಾರಂಭದಲ್ಲಿ ಚಿಕ್ಕದಾಗಿದ್ದ ಪಟ್ಟಣದ ಸುತ್ತಲೂ ಕಟ್ಟಿಸಿದ ಕೋಟೆಯು ಪ್ರಸ್ತುತ ಒಳಕೋಟೆಯಾಗಿದೆ.[೧] ಇಂದಿನ ಮಹಾನವಮಿ ದಿಬ್ಬವಿರುವ ಅರಮನೆ ಪ್ರದೇಶ, ರಾಣಿಯರ ಸ್ನಾನಗೃಹ, ಆನೆಸಾಲಿನ ಹಿಂದಿನ ಜೈನ ದೇವಾಲಯ, ಭೂಮಿಯ ಕೆಳಮಟ್ಟದ ದೇವಾಲಯ, ಮುಂತಾದ ಪ್ರದೇಶಗಳನ್ನು ಈ ಕೋಟೆಯು ಆವರಿಸಿದೆ. ಸಿಂಘಾರದ ಹೆಬ್ಬಾಗಿಲು, ಸೋಮ ವಾರದ ಬಾಗಿಲು, ಗಾಣಗಿತ್ತಿ ಜೈನ ದೇವಾಲಯದ ಉತ್ತರಕ್ಕಿರುವ ಬಾಗಿಲು, ಭೂಮಟ್ಟಕ್ಕಿಂತ ಕೆಳಗಿರುವ ದೇವಾಲಯ, ಉತ್ತರಕ್ಕಿರುವ ಬಾಗಿಲು, ಅಲ್ಲಿನ ದೇವಾಲಯದ ಆಗ್ನೇಯಕ್ಕಿರುವ ಹೂವಿನ ಬಾಗಿಲು ಮತ್ತು ಪ್ರತಿಷ್ಠಿತ ವ್ಯಕ್ತಿಗಳ ಅರಮನೆ ಪ್ರದೇಶದ ಉತ್ತರಕ್ಕಿರುವ ಬಾಗಿಲುಗಳು ಈ ಕೋಟೆಯಲ್ಲಿವೆ. ಬುಕ್ಕನ ನಂತರ ಸಾಮ್ರಾಜ್ಯವು ವಿಸ್ತಾರ ಗೊಳ್ಳುತ್ತಾ ಹೋದಂತೆ, ವಿಜಯನಗರ ಪಟ್ಟಣವು ಸಹ ವಿಸ್ತಾರಗೊಳ್ಳತೊಡಗಿತು. ಪಟ್ಟಣದ ಬೆಳವಣಿಗೆ ಕಂಡು ಅದರ ಬೇಡಿಕೆಗಳಿಗೆ ಅನುಗುಣವಾಗಿ, ಎರಡನೆಯ ಸುತ್ತಿನ ಕೋಟೆಯನ್ನು ಕಟ್ಟಲಾಯಿತು. ಇಂದು ಎರಡನೆಯ ಸುತ್ತಿನ ಕೋಟೆಯ ಕೆಲವು ಭಾಗಗಳನ್ನು ಮಾತ್ರ ಕಾಣಬಹುದು. ಮಹಾನವಮಿ ದಿಬ್ಬದ ಆಗ್ನೇಯಕ್ಕೆ ಕೋಟೆ ಗೋಡೆಯನ್ನು ಕಾಣಬಹುದು. ಇಲ್ಲಿ ಭೀಮನ ಬಾಗಿಲು ಇದೆ. ಭೀಮನ ಮಹಾದ್ವಾರ ಅಥವಾ ಭೀಮನ ಬಾಗಿಲು ಎಂದು ಕರೆಯಲ್ಪಡುವ ಈ ಬಾಗಿಲು ಗಾಣಗಿತ್ತಿ ಜೈನ ದೇವಾಲಯದ ಪೂರ್ವಕ್ಕೆ, ಹಿಂಬದಿಯಲ್ಲಿ ಇದೆ. ಸದರಿ ಬಾಗಿಲಿನಿಂದ ಸರಳ ರೇಖೆಯಲ್ಲಿ ಮುಂದೆ ಸಾಗಿದರೆ, ಗುಮ್ಮಟಾಕಾರದ ಮಹಾದ್ವಾರವನ್ನು ಸೇರಬಹುದು. ಪ್ರಸ್ತುತ, ಎಲ್.ಎಲ್.ಸಿ ಕಾಲುವೆ ಇದ್ದು ಇಲ್ಲಿ ವ್ಯವಸಾಯ ನಡೆಯುತ್ತಿರುವುದರಿಂದ

ಪ್ರಾಚೀನ ಅವಶೇಷಗಳು ನಶಿಸಿವೆ. ಎಲ್ಲಾ ಕೋಟೆಗಳನ್ನು, ಅಂದರೆ ಸುಮಾರು ಏಳು ಸುತ್ತುಗಳಿರುವ ಕೋಟೆ ಗೋಡೆಗಳನ್ನು ಸಾಕಷ್ಟು ವ್ಯವಸ್ಥಿತ ಹಾಗೂ ರಕ್ಷಣಾತ್ಮಕವಾಗಿ ನಿರ್ಮಿಸಲಾಗಿದೆ. ಗೋಡೆಗಳು ಬಹಳ ದಪ್ಪವಾಗಿದ್ದು, ಹೊರಮೈಗೆ ದೊಡ್ಡ ಕಲ್ಲುಗಳನ್ನು ಬಳಸಿದ್ದು, ಒಳ ಮೈಗೆ ಮಣ್ಣಿನ ಇಳಿಪ್ಪೋರೆ (Ramp) ಇದೆ. ಹೊರಭಾಗದ ಕಲ್ಲುಗಳ ಜೋಡಣೆಯಲ್ಲಿ ಯಾವುದೇ ಗಾರೆಯನ್ನು ಬಳಸದೆ, ಒಂದು ಕಲ್ಲು ಮತ್ತೊಂದರ ಜೊತೆಗೆ ಸರಿಯಾಗಿ ಹೊಂದಿಕೊಳ್ಳುವಂತೆ ಹಾಗೂ ಸಂದುಗಳಿಲ್ಲದೆ ಕಟ್ಟಲಾಗಿದೆ. ಬೆಣೆಯಾಕಾರದ (Wedge-Shaped) ಕಲ್ಲುಗಳನ್ನು ಆಯತಾಕಾರದ ಕಲ್ಲಿಗೆ ಪರ್ಯಾಯವಾಗಿ ಬಳಸಿ ಶ್ರಮವನ್ನು ಕಡಿಮೆ ಮಾಡಿಕೊಂಡಿರುವುದು ವಿಶೇಷ.

ಮುಖ್ಯದ್ವಾರದೊಂದಿಗೆ (ಹೆಬ್ಬಾಗಿಲು) ಮಧ್ಯಮ ಗಾತ್ರದ ಬಾಗಿಲು ಹಾಗೂ ದಿಡ್ಡಿಬಾಗಿಲುಗಳು ಜನರ ದಿನಿತ್ಯದ ಕೆಲಸಗಳಿಗೆ ಪಟ್ಟಣದ ಒಳಗೆ ಮತ್ತು ಹೊರಗೆ ಹೋಗಲು ಅನುವು ಮಾಡಿಕೊಡುತ್ತಿದ್ದವು. ಹೆಬ್ಬಾಗಿಲು, ಬಾಗಿಲು ಮತ್ತು ದಿಡ್ಡಿಗಳ ವಿನ್ಯಾಸವನ್ನು ಯುದ್ಧತಂತ್ರದ ದೃಷ್ಟಿಯಿಂದಲೂ ಬಹಳ ಜಾಗೂರೂಕತೆಯಿಂದ ನಿರ್ಮಿಸಲಾಗಿದೆ. ಕೋಟೆಯೊಳಗೆ ನೇರವಾದ ಪ್ರವೇಶವನ್ನು ಇರಿಸುವುದಿಲ್ಲ. ಸಾಮಾನ್ಯವಾಗಿ ದೂರದಿಂದ ನೋಡಿದಾಗ ಪ್ರವೇಶ ದ್ವಾರವೇ ಕಾಣುವುದಿಲ್ಲ. ಪ್ರವೇಶ ದ್ವಾರದ ಎರಡೂ ಬದಿಗಳಲ್ಲಿ ಮತ್ತು ಮುಂಭಾಗದಲ್ಲಿ ಅದೇ ರೀತಿಯ ಗೋಡೆಗಳನ್ನು ಕಟ್ಟಿ ಅದನ್ನು ಮರೆಮಾಡಿ ಗೋಡೆಯಲ್ಲಿ ಎರಡನೆಯ ಪ್ರವೇಶ ದ್ವಾರವನ್ನು ನಿರ್ಮಿಸಲಾಗಿದೆ. ಎರಡನೆಯ ದ್ವಾರವು ಪಕ್ಕದಲ್ಲಿರುವುದರಿಂದ ಈ ಬಾಗಿಲು ಸಹ ದೂರದಿಂದ ಕಾಣಸಿಗುವುದಿಲ್ಲ. ಒಳಗೆ ಬರುವ ದಾರಿಯು ಅಂಕುಡೊಂಕಾಗಿ, ಅದರ ಮೂಲಕವೇ ಪ್ರವೇಶವನ್ನು ಪಡೆಯ ಬೇಕು.[೨] ಬಾಗಿಲಲ್ಲಿ ಕೊತ್ತಳಗಳು ಇದ್ದು, ದ್ವಾರವನ್ನು ಸೈನಿಕರು ಸಂರಕ್ಷಿಸುತ್ತಿದ್ದರು. ಬಾಗಿಲಲ್ಲಿ ಕಾವಲುಗಾರರು ಆಯುಧಗಳನ್ನು ಹಿಡಿದು ರಕ್ಷಿಸುತ್ತಲಿದ್ದರು.[೩] ಮುಖ್ಯ ಪ್ರವೇಶದ ಕದ (ಬಾಗಿಲು) ಮುಚ್ಚಿದಾಗ, ಬಾಗಿಲ ಪಕ್ಕದಲ್ಲಿ L ಅಥವಾ U ಆಕಾರದ ಉಪಪ್ರವೇಶಗಳ ಮೂಲಕ ಪ್ರವೇಶ ಪಡೆಯಲು ಅನುವು ಮಾಡಿಕೊಡಲಾಗಿದೆ. ಪ್ರತಿಯೊಂದು ಬಾಗಿಲಿಗೆ ವಿಶಿಷ್ಟ ಮತ್ತು ಅರ್ಥಪೂರ್ಣವಾದ ಹೆಸರುಗಳನ್ನು ಇಟ್ಟಿದ್ದರೆಂಬುದು ಬಾಗಿಲುಗಳ ಸಮೀಪವೇ ದೊರಕಿರುವ ಶಾಸನಗಳು ತಿಳಿಸುತ್ತವೆ.[೪] ಕೊತ್ತಳ ಹಾಗೂ ದಿಡ್ಡಿಗಳ ಹೆಸರುಗಳನ್ನು ಸಹ ಶಾಸನ ಗಳಿಂದ ಅರಿಯಬಹುದು.[೫] ಪ್ರಸ್ತುತ ಲೇಖನದಲ್ಲಿ ಅಂತಹ ಒಂದು ಮುಖ್ಯ ಬಾಗಿಲಾದ ಭೀಮನ ಬಾಗಿಲಿಗೆ (ಚಿತ್ರ ೧ ಮತ್ತು ೨) ಆ ಹೆಸರನ್ನು ಇಟ್ಟಿರುವುದನ್ನು ವಿವೇಚಿಸುವ ಪ್ರಯತ್ನವನ್ನು ಸಹ ಇಲ್ಲಿ ಮಾಡಲಾಗಿದೆ. ಭೀಮನ ಬಾಗಿಲಿನಲ್ಲಿರುವ




ಭೀಮನ ಬಾಗಿಲು ಹೊರಭಾಗದಿಂದ.



ಭೀಮನ ಬಾಗಿಲು ಒಳಭಾಗದಿಂದ

ಭೀಮನ ಒಂದು ಶಿಲ್ಪ ಮತ್ತು ಗೋಡೆಯಲ್ಲಿರುವ ಭೀಮನು ದುಶ್ಯಾಸನನ್ನು ಕೊಲ್ಲುವ ದೃಶ್ಯವಿರುವ ವಿವರಣಾತ್ಮಕ ಉಬ್ಬುಶಿಲ್ಪಗಳನ್ನು ಕುರಿತು ಚರ್ಚಿಸುವುದು ಲೇಖನದ ಮುಖ್ಯ ಉದ್ದೇಶ.[೬]

ಭೀಮನ ಮಹಾದ್ವಾರದ ಎದುರು ಇರುವ ಉತ್ತರಾಭಿಮುಖ ಗೋಡೆಯಲ್ಲಿ ಎರಡು ವಿವರಣಾತ್ಮಕ ಉಬ್ಬು ಶಿಲ್ಪಗಳಿವೆ (ಚಿತ್ರ ೩) ದ್ವಾರದಿಂದ ವೀಕ್ಷಿಸಿದರೆ



ಭೀಮನು ದುಶ್ಯಾಸನನನ್ನು ಕೊಲ್ಲುತ್ತಿರುವ ಎರಡು ಉಬ್ಬುಶಿಲ್ಪಗಳು

ಕಾಣಸಿಗುತ್ತವೆ. ಇವೆರಡೂ ಉಬ್ಬುಶಿಲ್ಪಗಳು ದ್ವಾರದ ಮಧ್ಯಭಾಗದಲ್ಲಿರುವಂತೆ ಕಾಣುವ ಮೊದಲ ಉಬ್ಬುಶಿಲ್ಪವು ಉತ್ತರ ಗೋಡೆಯ ಎರಡನೆಯ ಸಾಲಿನ (Course) ಮೂಲೆಯ ಆಯತಾಕಾರದ ಕಲ್ಲಿನಲ್ಲಿ ಈ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ (ಚಿತ್ರ ೪). ಸದರಿ ಕಲ್ಲಿನ ಉದ್ದವು ೬ ಅಡಿ ಮತ್ತು ೩ ಅಡಿ ಅಗಲವಾಗಿದೆ. ಪ್ರಸ್ತುತ ಉಬ್ಬುಶಿಲ್ಪದಲ್ಲಿ ಭೀಮನು ದುಶ್ಯಾಸನನನ್ನು ತನ್ನ ತೊಡೆಯ ಮೇಲೆ ಮಲಗಿಸಿಕೊಂಡು, ಅವನನ್ನು ಕೊಲ್ಲುತ್ತಿರುವ ದೃಶ್ಯವನ್ನು ಶಿಲ್ಪಿಯು ಮೂಡಿಸಿದ್ದಾನೆ. ಭೀಮನ ತೊಡೆಯ ಮೇಲೆ ಇರುವ ದುಶ್ಯಾಸನನ ಬಲಗೈಯಲ್ಲಿ ಖಡ್ಗವಿದೆ, ಎಡಗೈಯು ಭೀಮನ ಎಡಕಾಲಿನ ಒಳಭಾಗದಿಂದ ಬಂದ್ದಿದ್ದು, ಭೀಮನ ಕಾಲಿನ ಕೆಳಭಾಗವನ್ನು ಭದ್ರವಾಗಿ ಹಿಡಿದಿದ್ದಾನೆ. ಭೀಮನು, ಏಕಾಗ್ರತೆಯಿಂದ ದುಶ್ಯಾಸನನ ಹೊಟ್ಟೆಯನ್ನು ತನ್ನ ಎರಡೂ ಕೈಗಳಿಂದ, ಯಾವುದೇ ಆಯುಧಗಳ ಸಹಾಯವಿಲ್ಲದೆ ಬಗೆದು ಕೊಲ್ಲುತ್ತಿದ್ದಾನೆ. ವಿಷ್ಣುವು ನರಸಿಂಹನ ಅವತಾರದಲ್ಲಿ ಹಿರಣ್ಯಕಶಿಪುವಿನ



ದುಶ್ಯಾಸನನವಧೆ; ದ್ರೌಪದಿಯು ತುರುಬು ಬಿಚ್ಚುತ್ತಿರುವ ದೃಶ್ಯ

ಹೊಟ್ಟೆಯನ್ನು ತನ್ನ ಉಗುರುಗಳಿಂದ ಬಗೆದು ಕೊಲ್ಲುವಂತೆ ಭೀಮನು ದುಶ್ಯಾಸನನ್ನು ಕೊಲ್ಲುತ್ತಿದ್ದಾನೆ. ಈ ನಿರೂಪದಲ್ಲಿ ಭೀಮನು ತಲೆಯನ್ನು ಒಂದು ಪಕ್ಕಕ್ಕೆ ವಾಲಿಸಿರುವಂತೆ ನಿರೂಪಿಸಲಾಗಿದ್ದು, ಅವನ ಏಕಾಗ್ರತೆಯು ಇದರಲ್ಲಿ ಕಂಡು ಬರುತ್ತದೆ. ದುಶ್ಯಾಸನನು ಆಚೀಚೆ ಅಲುಗಾಡದಂತೆ ತನ್ನ ಎಡಗಾಲಿನ ಒಳಗೆ ಭೀಮನು ಸೇರಿಸಿಕೊಂಡಿದ್ದಾನೆ. ದುಶ್ಯಾಸನನು ಕಿರೀಟ ಮತ್ತು ಕಂಠಾಭರಣ, ಕಡಗ ಹಾಗೂ ಧೋತಿ (ಅರೆ ಧೋತಿ ಯುದ್ಧದಲ್ಲಿ ಅನುಕೂಲವಾಗುವಂತಹದು) ಧರಿಸಿದ್ದರೆ, ಭೀಮನು ಕಾಲಿಗೆ ಕಡಗ, ಕಂಠಾಭರಣ ಮತ್ತು ತಲೆಗೆ ವಿಶಿಷ್ಟ ರೀತಿಯ ಕಿರೀಟವನ್ನು ಧರಿಸಿರುವನು. ಇದನ್ನು ಕಿರೀಟವೆಂದು ಕರೆಯುವುದಕ್ಕಿಂತ ಶಿರೋಧಾರಣೆಯೆಂದು ಕರೆಯುವುದು ಸೂಕ್ತ. ಇಂದು ಧರಿಸುವ ಟೋಪಿಯಂತೆ ಕಂಡುಬರುತ್ತದೆ. ಭೀಮ ಮತ್ತು ದುಶ್ಯಾಸನರ ಪಕ್ಕದಲ್ಲಿ ಸ್ತ್ರೀಯ ಉಬ್ಬುಶಿಲ್ಪವಿದ್ದು, ಅದನ್ನು ದ್ರೌಪದಿಯೆಂದು ಸುಲಭವಾಗಿ ಗುರುತಿಸಬಹುದು. ದ್ರೌಪದಿಯ ತಲೆಯ ತುರುಬನ್ನು ತನ್ನ ಎರಡೂ ಕೈಗಳಿಂದ ಬಿಚ್ಚುತ್ತಿರುವಂತೆ ಆ ದೃಶ್ಯವನ್ನು ನಿರೂಪಿಸಲಾಗಿದೆ. ದುಶ್ಯಾಸನನು ಕೊಲ್ಲಲ್ಪಡುತ್ತಿರುವ ಸಮಯದಲ್ಲಿ, ಅದನ್ನು ವೀಕ್ಷಿಸುತ್ತಾ, ತನ್ನ ತಲೆ ಕೂದಲ ತುರುಬನ್ನು ಬಿಚ್ಚಿಕೊಳ್ಳುತ್ತಿದ್ದಾಳೆ. ಅವಳು ಸರಳವಾದ ಸೀರೆ, ಆಭರಣಗಳನ್ನು ಧರಿಸಿದ್ದು, ಮುಖವನ್ನು ನೋಡುಗರ ಎದುರಿಗೆ ಇರುವಂತೆಯೂ, ತನ್ನ ಕೈಗಳನ್ನು ಎದೆಯ ಮಟ್ಟದಲ್ಲಿ ಇರಿಸಿ ತುರುಬನ್ನು ಬಿಚ್ಚುತ್ತಿರುವಂತೆ ಶಿಲ್ಪಿಯು ಕೆತ್ತಿದ್ದಾನೆ. ಈ ಮೂವರು ಈ ಉಬ್ಬುಶಿಲ್ಪದಲ್ಲಿ ಇರುವಂತೆ ಶಿಲ್ಪಿಯು ಕೆತ್ತಿದ್ದಾನೆ.



ದುಶ್ಯಾಸನನವಧೆ; ದ್ರೌಪದಿಯು ತುರುಬು ಕಟ್ಟಿಕೊಳ್ಳುತ್ತಿರುವ ದೃಶ್ಯ

ಎರಡನೆಯ ಉಬ್ಬುಶಿಲ್ಪವು ಅದೇ, ಗೋಡೆಯ, ಅದೇ ಕಲಂನ, ಸರಳರೇಖೆಗೆ ಅನುಗುಣವಾಗಿ ಆರನೆಯ ಸಾಲಿನ (Course) ಕೆಳಗಿನ (ಮೇಲಿಂದ ಕೆಳಗೆ ಬರುವಂತೆ) ಮೂಲೆಯ ಆಯತಾಕಾರದ ಕಲ್ಲಿನಲ್ಲಿ ಕೆತ್ತಲಾಗಿದೆ (ಚಿತ್ರ ೫). ಈ ಕಲ್ಲಿನ ಉದ್ದ ಮತ್ತು ಅಗಲವು ಕ್ರಮವಾಗಿ ೬x೩ ಅಡಿಗಳಾಗಿವೆ. ಇದು ಸಹ ಮೇಲಿನ ಉಬ್ಬುಶಿಲ್ಪದ ಶೈಲಿಯಲ್ಲಿಯೇ ಇರುವುದು ಗಮನಾರ್ಹ. ದ್ವಾರದ ಮಧ್ಯದಿಂದ ವೀಕ್ಷಿಸಿದಾಗ ಎರಡನೆಯ ಶಿಲ್ಪವು ಕಣ್ಣಳತೆಗೆ ಕಾಣಸಿಗುತ್ತದೆ. ಪ್ರಸ್ತುತ ಉಬ್ಬುಶಿಲ್ಪವು ಮೇಲಿನ ಉಬ್ಬುಶಿಲ್ಪದಲ್ಲಿ ನಿರೂಪಿತವಾಗಿರುವ ವಿವರಣೆಯ ಅಥವಾ ಉದ್ದೇಶದ ಮುಂದುವರಿಕೆಯಾಗಿರುವುದು, ಶಿಲ್ಪವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ತಿಳಿಯಬರುತ್ತದೆ.

ಎರಡನೆಯ ಉಬ್ಬುಶಿಲ್ಪದಲ್ಲಿ ಭೀಮನು ತನ್ನ ಎರಡೂ ಕೈಗಳನ್ನು ದುಶ್ಯಾಸನನ ಹೊಟ್ಟೆಯ ಮೇಲೆಯೇ ಇರಿಸಿದ್ದಾನೆ. ಇದು ಮೇಲಿನ ಉಬ್ಬುಶಿಲ್ಪದಲ್ಲಿ ಇರುವಂತೆಯೇ ಇದೆ. ಆದರೆ ಮೇಲಿನ ಶಿಲ್ಪದಲ್ಲಿ ದುಶ್ಯಾಸನನು ಭೀಮನ ಕಾಲನ್ನು ಎಡಗೈಯಲ್ಲಿ ಹಿಡಿದಿರುವಂತೆ ತೋರಿದ್ದರೆ, ಇಲ್ಲಿ ಅವನ ಕೈ ಕೆಳಗೆ ಬಿದ್ದಿರುವಂತೆ ತೋರಲಾಗಿದೆ. ಅವನ ಬಲಗೈನಲ್ಲಿರುವ ಖಡ್ಗವು ಸಹ ಸ್ವಲ್ಪ ಕೆಳಗೆ ವಾಲಿರುವಂತೆ ತೋರಿಸಲಾಗಿದೆ. ಈ ದೃಶ್ಯದಲ್ಲಿ ದುಶ್ಯಾಸನನು ಕೊಲ್ಲಲ್ಪಟ್ಟು, ಅಥವಾ ಮಡಿದ ನಂತರ ಅವನ ಕೈಗಳು ಜೋತಾಡುವಂತೆ ನಿರೂಪಿಸಲಾಗಿದೆ. ಭೀಮನು ತನ್ನ ಕೆಲಸವನ್ನು ಪೂರೈಸಿದನೆಂಬುದಕ್ಕೆ ಸಾಕ್ಷಿ ಎನ್ನುವಂತೆ ತಲೆಯನ್ನು ಎತ್ತಿ, ನಿರಾಳವಾಗಿರುವಂತೆ ಅವನ ಮುಖಭಾವವನ್ನು ಕೆತ್ತಲಾಗಿದೆ. ಉಳಿದಂತೆ ಇವರಿಬ್ಬರ ಆಭರಣಗಳು, ವಸ್ತ್ರಗಳು ಮತ್ತು ಅಲಂಕರಣೆಗಳಲ್ಲಿ ವ್ಯತ್ಯಾಸಗಳಿಲ್ಲ. ಆದರೆ

ಪಕ್ಕದಲ್ಲಿ ನಿಂತಿರುವ ದ್ರೌಪದಿಯು ತನ್ನ ಎರಡೂ ಕೈಗಳನ್ನು ಮೇಲೆತ್ತಿ, ಒಂದು ಕೈ (ಎಡಕೈ) ತನ್ನ ಎಡ ಕಿವಿಯ ಮೇಲೆ ಬರುವಂತೆ, ಮತ್ತೊಂದು ಕೈ ಬಲಭಾಗದಿಂದ ಬರುವಂತೆ ಮಾಡಿಕೊಂಡು ತನ್ನ ತಲೆಯ ತುರುಬನ್ನು ಕಟ್ಟಿಕೊಳ್ಳುತ್ತಿದ್ದಾಳೆ. ಅವಳ ಮುಖವನ್ನು ಎಡಪಾರ್ಶ್ವಕ್ಕೆ ತೋರಲಾಗಿದೆ. ಈ ದೃಶ್ಯದಲ್ಲಿ ಭೀಮನು ದುಶ್ಯಾಸನನನ್ನು ಕೊಂದು ಅವನ ರಕ್ತವನ್ನು ದ್ರೌಪದಿಗೆ ನೀಡಿದ ತರುವಾಯ, ದ್ರೌಪದಿಯು ಆ ರಕ್ತದಿಂದ ತನ್ನ ತಲೆಗೆ ಹಚ್ಚಿ ಬಾಚಿಕೊಂಡು ತುರುಬು ಕಟ್ಟಿಕೊಳ್ಳುತ್ತಾಳೆ ಎನ್ನುವುದನ್ನು ಈ ಉಬ್ಬುಶಿಲ್ಪದಲ್ಲಿ ನಿರೂಪಿಸಲಾಗಿದೆ. ಈ ಎರಡೂ ಉಬ್ಬುಶಿಲ್ಪಗಳು, ಅನೇಕ ವಿವರಗಳನ್ನು ನೋಡುಗರಿಗೆ ತಿಳಿಸುವಲ್ಲಿ ಸಫಲವಾಗಿವೆ.

ಮಹಾಕಾವ್ಯವಾದ ಮಹಾಭಾರತದಲ್ಲಿ ದ್ರೌಪದಿಯ ಮುಡಿಬಿಚ್ಚಿ ಕಟ್ಟಿದ ಪ್ರಸಂಗವು ಅತ್ಯಂತ ಮಹತ್ವದ ಘಟನೆಯಾಗಿದೆ. ಮಹಾಭಾರತದ ಮುಂದಿನ ಎಲ್ಲಾ ಸಂದರ್ಭಗಳು ಇದನ್ನೇ ಆಧರಿಸಿರುತ್ತದೆ. ಪಾಂಡವರು ಕೈಗೊಂಡ ಶಪಥಗಳು, ದುರ್ಯೋಧನನ ಕಡುಮಾತುಗಳ ನಿಂದನೆ, ದ್ರೌಪದಿಯ ವಸ್ತ್ರಾಪಹರಣ, ಎಲ್ಲವೂ ಒಂದರ ನಂತರ ಒಂದು ಸಾಲಾಗಿ ಜರುಗುತ್ತವೆ. ಪಾಂಡವರು ದ್ಯೂತ ಅಥವಾ ಜೂಜಿನಲ್ಲಿ ಕೌರವರಿಗೆ ಎಲ್ಲವನ್ನೂ ಕಳೆದುಕೊಳ್ಳುತ್ತಾರೆ. ಆ ಸಂದರ್ಭದಲ್ಲಿ ದ್ರೌಪದಿಯನ್ನು ಎಳೆದು ಕರೆತರಲು ಹೋದ ದುಶ್ಯಾಸನನು, ದ್ರೌಪದಿಯು ಒಮ್ಮೆಗೆ ಸಭೆಗೆ ಬಾರದಿದ್ದ ಕಾರಣ, ಅವಳನ್ನು ಹಿಡಿದು ಎಳೆದು ಕರೆತರುತ್ತಾನೆ. ಆಗ ಅವಳ ತಲೆ ತುರುಬು ಬಿಚ್ಚಿಕೊಳ್ಳುತ್ತದೆ. ಬಿಚ್ಚಿದ ತಲೆಗೂದಲನ್ನು ಹಿಡಿದು ಸಭೆಗೆ ಎಳೆದು ತರುವ ದುಶ್ಯಾಸನನ್ನು ಕೊಲ್ಲುವುದಾಗಿ ಭೀಮನು ಶಪಥ ಮಾಡಿದರೆ, ದ್ರೌಪದಿಯು ದುಶ್ಯಾಸನನ ರಕ್ತದಿಂದಲೇ ತನ್ನ ತಲೆಗೆ ಸವರಿಕೊಂಡು ತಲೆಯ ತುರುಬನ್ನು ಕಟ್ಟಿಕೊಳ್ಳುವುದಾಗಿ ಪ್ರತಿಜ್ಞೆಯನ್ನು ಮಾಡುತ್ತಾಳೆ. ಅದರಂತೆ ಭೀಮನು ಪಾಂಚಾಲಿಯ ಶಪಥವನ್ನು ನೆರವೇರಿಸುತ್ತಾನೆ. ಸ್ತ್ರೀಯ ಕೇಶವು ಪ್ರತಿಷ್ಠೆಯ ಸಂಕೇತವಾಗಿ ಮಹಾಭಾರತದಲ್ಲಿ ಅನಾವರಣಗೊಳ್ಳುತ್ತದೆ. ಈ ಶಪಥವನ್ನು ಭೀಮ ಮತ್ತು ದ್ರೌಪದಿಯರು ನೆರವೇರಿಸಿಕೊಳ್ಳುವ ದೃಶ್ಯವನ್ನು ಈ ಎರಡೂ ಉಬ್ಬು ಶಿಲ್ಪಗಳು ಪ್ರತಿಬಿಂಬಿಸುತ್ತವೆ.

ವಿಜಯನಗರ ಕಾಲದ ಸಮಕಾಲೀನ ಮಹಾಕವಿ ಕುಮಾರವ್ಯಾಸ *ಕರ್ನಾಟ ಭಾರತ ಕಥಾಮಂಜರಿ* ಅಥವಾ *ಗದುಗಿನ ಭಾರತದಲ್ಲಿ*ಯೂ ಈ ವರ್ಣನೆಯನ್ನು ಕಾಣಬಹುದು.[೭] ಕರ್ಣಪರ್ವದ ಸಂಧಿ ೧೯ರಲ್ಲಿ ದುಶ್ಯಾಸನನ ರಕ್ತದಲ್ಲಿ ಭೀಮಸೇನನ ಕೋಪಾಗ್ನಿಗೆ ಸ್ನಾನ ಎಂಬ ಉಲ್ಲೇಖವಿದೆ. ದ್ರೌಪದಿಗೆ ಕೊಟ್ಟ ಭಾಷೆಯನ್ನು ಕವಿಯು ಅತ್ಯಂತ ಸೊಗಸಾಗಿ ೧೯ನೇ ಸಂಧಿ, ೮೧ರ ಪದ್ಯದಲ್ಲಿ ವರ್ಣಿಸಿದ್ದಾನೆ.[೮]

"ಶೋಣಿ ತಾಂಬುವಿನಿಂದ ತರುಣಿಯ
ವೇಣಿಯನು ನಾದಿದನು ದಂತ
ಶ್ರೇಣಿಯಲಿ ಬಾಚಿದನು ಬೈತಲೆ ತೆಗೆದು ಚೆಲುವಿನಲಿ
ರಾಣಿ ಹುಸಿಯದೆ ಹೇಳು ಹೇಳೆ
ನ್ನಾಣೆ ಸೊಗಸೆ ಖಳನದಂತ
ಶ್ರೇಣಿ ತವೆ ಪಾವನವೆಯೆಂದನು ಪವನಸುತ ನಗುತ॥


ಭೀಮನು ದ್ರೌಪದಿಯನ್ನು ಯುದ್ಧಭೂಮಿಗೆ, ಕರೆಯಿಸಿಕೊಳ್ಳುತ್ತಾನೆ. ದುಶ್ಶಾಸನನು ಹತನಾಗುತ್ತಿದ್ದಂತೆ, ಅವನ ರಕ್ತವನ್ನು ತನ್ನ ತಲೆಗೆ ಅವಳು ಹಚ್ಚಿಕೊಂಡು ತಲೆಬಾಚಿಕೊಳ್ಳುತ್ತಾಳೆ. ಹೀಗೆ ಅವಳ ಶಪಥ ನೆರವೇರಿದರೂ, ಅವಳ ಕೋಪ ಶಮನವಾಗಿರುವುದಿಲ್ಲ. ಅವಳಿಗಾದ ನೋವು, ಅವಮಾನ ಹಾಗೂ ಹತಾಶೆಗಳು ಅವಳಲ್ಲಿ ಮಡುಗಟ್ಟಿರುತ್ತದೆ. ದುಶ್ಶಾಸನನು ಸತ್ತ ನಂತರವೂ ದ್ರೌಪದಿಯು ಅವನ (ಶವದ) ಮಸ್ತಕಕ್ಕೆ ಒದೆಯುತ್ತಾಳೆ ಎಂದು ಕವಿಯು ಸೊಗಸಾಗಿ ವರ್ಣಿಸಿದ್ದಾನೆ. ದುಶ್ಶಾಸನನ ವಧೆಯನ್ನು ಕವಿಯು ಅತ್ಯಂತ ಮನೋಜ್ಞವಾಗಿ ವಿವರಿಸಿದ್ದಾನೆ.[೯] ಗದ್ಯಾನುವಾದದಲ್ಲಿ ಆರು ಪುಟಗಳ ವಿವರಣೆಯಿದೆ[೧೦].

ವಿಜಯನಗರ ಕಾಲದ ಸಮಕಾಲೀನ ಕವಿಯಾದ ಕುಮಾರವ್ಯಾಸನು ನಿರೂಪಿಸಿರುವ *ಭಾರತವು* ಹಲವು ವಿದ್ವಾಂಸರ ಗಮನ ಸೆಳೆದಿದೆ. ಅವನು ತನ್ನ ಕಾವ್ಯದಲ್ಲಿ ಪದೇ ಪದೇ ಉಲ್ಲೇಖಿಸುವ 'ಗಜನಗರ' ವಿಜಯನಗರವಾಗಿದ್ದಿರಬಹುದೆಂಬ ಅಂಶವನ್ನೂ ವಿದ್ವಾಂಸರು ತೋರಿದ್ದಾರೆ.[೧೧] ಪ್ರಸ್ತುತ ಉಬ್ಬುಶಿಲ್ಪಗಳ ನಿರೂಪಣೆಯು ಸಹ ಇದಕ್ಕೆ ಪೂರಕವಾಗಿದೆಯೆಂದರೆ ತಪ್ಪಾಗಲಾರದು. ಉಬ್ಬುಶಿಲ್ಪವನ್ನು ಕೆತ್ತಿದ ಶಿಲ್ಪಿಯು ಕುಮಾರವ್ಯಾಸನ ಕಾವ್ಯದಿಂದ ಸ್ಫೂರ್ತಿ ಪಡೆದಿರಬಹುದು ಅಥವಾ ಈ ಉಬ್ಬುಶಿಲ್ಪಗಳಿಂದ ಕುಮಾರವ್ಯಾಸನು ಸ್ಫೂರ್ತಿ ಪಡೆದಿರಬಹುದು. ಹಂಪಿ ಪರಿಸರದಲ್ಲಿ ದೊರೆತಿರುವ ಈ ಉಬ್ಬುಶಿಲ್ಪವು ವಿವರಣಾತ್ಮಕವಾಗಿದ್ದು, ಗಮನ ಸೆಳೆಯುತ್ತದೆ. ಹಂಪಿಯ ಉಳಿದೆಡೆ ಇಂತಹ ವಿವರಣಾತ್ಮಕ ಉಬ್ಬುಶಿಲ್ಪ ಕಂಡುಬಂದಿಲ್ಲ.

ಇವುಗಳಿಗಿಂತ ಮಿಗಿಲಾಗಿ, ರಾಮಾಯಣದಿಂದ ಆಯ್ದ ಅನೇಕ ಕಥಾವಸ್ತುಗಳನ್ನು ಶಿಲ್ಪಿಗಳು ಹಂಪಿಯ ಶಿಲ್ಪಗಳಲ್ಲಿ ಹೇರಳವಾಗಿ ಬಿಂಬಿಸಿದ್ದಾರೆ. ಹಜಾರ ರಾಮಸ್ವಾಮಿ ದೇವಾಲಯದಲ್ಲಿ ರಾಮಾಯಣದ ಕಥಾವಸ್ತುವನ್ನು ಉಬ್ಬುಶಿಲ್ಪದಲ್ಲಿ ಬಿಂಬಿಸಲಾಗಿದೆ. ಹಂಪಿಯ ದೇವಾಲಯಗಳು, ಮಂಟಪ, ಅಧಿಷ್ಠಾನ, ಮುಂತಾದ ಹಲವಾರು ಸ್ಥಳಗಳಲ್ಲಿ ರಾಮಾಯಣದ ಪ್ರತೀಕಗಳಿದ್ದರೆ, ಮಹಾಭಾರತದ ಕಥಾವಸ್ತುವನ್ನು ಅಷ್ಟಾಗಿ ಬಿಂಬಿಸಿಲ್ಲ. ನನ್ನ ಗಮನಕ್ಕೆ ಬಂದಂತಹ ಈ

ಉಬ್ಬುಶಿಲ್ಪಗಳು, ಮಹಾಭಾರತದ ಕಥಾವಸ್ತುವನ್ನೂ, ಅತ್ಯಂತ ನಿರೂಪಣಾತ್ಮಕವಾಗಿ ಬಿಂಬಿಸಿರುವ ಉಬ್ಬಶಿಲ್ಪ ಗಳೆನ್ನಬಹುದು.

ವಿಜಯನಗರಪಟ್ಟಣವು ಹಂಪೆಗೆ ಸ್ಥಳಾಂತರಗೊಳ್ಳುವ ಪೂರ್ವದಲ್ಲಿ ಆನೆಗೊಂದಿಯಲ್ಲಿ ಇದ್ದಿತು. ಅದಕ್ಕೆ ಹಸ್ತಿನಾವತಿ ಎಂಬ ಹೆಸರು ಇಟ್ಟಿದ್ದರು ಎಂಬುದು ತಿಳಿದ ವಿಷಯ. ವಿಜಯನಗರಪಟ್ಟಣವು 'ಹಸ್ತಿನಾವತಿ ವಳಿತ' ಎಂಬ ಆಡಳಿತ ಘಟಕದಲ್ಲಿ ಇದ್ದ ವಿಷಯವನ್ನು ಇಲ್ಲಿಯ ಹಲವಾರು ಶಾಸನಗಳು ತಿಳಿಸುತ್ತವೆ.[೨] ಮಹಾಭಾರತದ ಹಸ್ತಿನಾವತಿ ಅಥವಾ ಹಸ್ತಿನಾಪುರವು ಪಾಂಡವರ ರಾಜಧಾನಿಯಾಗಿತ್ತು ಎಂಬುದನ್ನು ಇಲ್ಲಿ ಸ್ಮರಿಸಬಹುದು. ಈ ಹೆಸರನ್ನೇ ವಿಜಯನಗರ ಅರಸರ ಪ್ರಾರಂಭಿಕ ರಾಜಧಾನಿಯ ಹೆಸರಾಗಿದ್ದು, ನಂತರ ಅದು ಆಡಳಿತ ವಿಭಾಗದ ಹೆಸರಾಗಿ ಎಲ್ಲಾ ಅರಸರುಗಳು ಮುಂದುವರೆಸಿರುವುದು ಕುತೂಹಲಕಾರಿಯಾದ ಸಂಗತಿ. ಆದರೆ ಮಹಾಭಾರತದ ಕಥಾವಸ್ತುಗಳನ್ನು ಶಿಲ್ಪದಲ್ಲಿ



ಸೌಗಂಧಿಕಾಪುಷ್ಪ ಹಿಡಿದಿರುವ ಭೀಮನ ಶಿಲ್ಪ

ಅಧಿಕವಾಗಿ ತೋರಿಲ್ಲದಿರುವುದು ಸಹ ಅಷ್ಟೇ ನಿಜವೂ ಹೌದು. ಈ ಪ್ರದೇಶವು ಕಿಷ್ಕಿಂದ ಎನ್ನುವ ಕಾರಣಕ್ಕೆ ರಾಮಾಯಣದ ಕಥಾವಸ್ತುವನ್ನು ಅಧಿಕವಾಗಿ ನಿರೂಪಿಸಿರಬಹುದೆಂದು ಅಭಿಪ್ರಾಯಪಡಬಹುದು.

ಈ ಉಬ್ಬುಶಿಲ್ಪಗಳಿರುವ ಸ್ಥಳದಲ್ಲಿಯೇ, ಪಶ್ಚಿಮಾಭಿಮುಖ ಗೋಡೆಗೆ ಆನಿಸಿದಂತೆ ಭೀಮನ ಬಿಡಿ ಶಿಲ್ಪವನ್ನು ಇಲ್ಲಿ ಇರಿಸಲಾಗಿದೆ. ಸುಮಾರು ೮ ಅಡಿ ಎತ್ತರ ಮತ್ತು ೫ ೧/೨ ಅಡಿ ಅಗಲವಿರುವ ಈ ಶಿಲಾಫಲಕದಲ್ಲಿ ಭೀಮನು ಬಲಗೈಯಲ್ಲಿ ಗದೆಯನ್ನು ಎತ್ತಿ ಹಿಡಿದು ಎಡಗೈಯಲ್ಲಿ ಸೌಗಂಧಿಕಾ ಪುಷ್ಪವನ್ನು ಹಿಡಿದು ಒಂದು ಕಾಲನ್ನು ಮುಂದಿರಿಸಿದಂತೆ ತೋರಲಾಗಿದೆ (ಚಿತ್ರ.೬) ಭೀಮನು ವನಮಾಲಿ, ಕಂಠಾಭರಣ, ಬಾಹುವಳಯ, ಕಾಲಿಗೆ ಕಡಗ, ಕಟಿಬಂಧ ಮತ್ತು ವಸ್ತ್ರವನ್ನೂ ಧರಿಸಿದ್ದಾನೆ. ಅವನ ತಲೆಯಲ್ಲಿ ಶಿರೋಧಾರಣೆ (ಟೋಪಿ) ಇದೆ. ಇಲ್ಲಿರುವ ಹಾಗೂ ಉಬ್ಬುಶಿಲ್ಪಗಳಲ್ಲಿರುವ ಭೀಮನ ಶಿರೋಧಾರಣೆ ಒಂದೇ ರೀತಿಯಲ್ಲಿ ಇವೆ. ದ್ರೌಪದಿಯ ಕೋರಿಕೆಯಂತೆ, ಅಪರೂಪದ ಸೌಗಂಧಿಕಾ ಪುಷ್ಪವನ್ನು ತಂದುಕೊಟ್ಟು ಅವಳ ಆಸೆಯನ್ನು ಭೀಮನು ನೆರವೇರಿಸುತ್ತಾನೆ.[೧೩] ಭೀಮನು ಈ ಪುಷ್ಪವನ್ನು ಹಿಡಿದಿರುವಂತೆ ತೋರಿರುವುದು ಗಮನಾರ್ಹ. ಇವನು ಸಹ ಪವನಸುತನಾಗಿರುವುದುದರಿಂದ, ಹನುಮಂತನಂತೆಯೇ ಅವನನ್ನು ಚಿತ್ರಿಸಲಾಗಿದೆ. ಹನುಮಂತನ ಶಿಲ್ಪಗಳಲ್ಲಿ, ಅವನು ಕೈಗಳನ್ನು ಮೇಲೆತ್ತಿರುವಂತೆ ತೋರುವುದು ವಾಡಿಕೆ. ಅದರಂತೆಯೇ ಇಲ್ಲಿ ಭೀಮನನ್ನು ತೋರಲಾಗಿದೆ. ಇಂತಹದೇ ಇನ್ನೊಂದು ಉಬ್ಬುಶಿಲ್ಪವು ಕೋಟಿಶಂಕರ ಬಾಗಿಲ ಬಳಿ ಇರುವ ಹುಟ್ಟುಬಂಡೆಯಲ್ಲಿದೆ (ಚಿತ್ರ-೭ ಮತ್ತು ೮).



ಕೋಟಿಶಂಕರ ಬಾಗಿಲು



ಕೋಟಿಶಂಕರ ಬಾಗಿಲ ಬಳಿಯ ಹುಟ್ಟುಬಂಡೆಯಲ್ಲಿರುವ ಭೀಮನ ಉಬ್ಬುಶಿಲ್ಪ

ದ್ವೈತ ಪರಂಪರೆಯಲ್ಲಿ ಹನುಮ, ಭೀಮ ಮತ್ತು ಮಧ್ವರು ಬರುತ್ತಾರೆ. ಇವರೆಲ್ಲರೂ ವಾಯುವಿನ ಪುತ್ರ ಅಥವಾ ಅಂಶವೆಂದು ಪರಿಗಣಿಸಲಾಗಿದೆ. ಭೀಮನ ದ್ವಾರದ, ಪೂರ್ವಕ್ಕೆ ಸರಳ ರೇಖೆಯಲ್ಲಿ, ಗುಮ್ಮಟಾಕಾರದ ದ್ವಾರವಿದೆ. ಇದು ಅಂದಿನ ವರದರಾಜಮ್ಮನಪಟ್ಟಣಕ್ಕೆ[೧೯] ಸನಿಹವಾಗಿದ್ದು, (ಇಂದಿನ ಹೆಚ್.ಪಿ.ಸಿ. ಯಾಗಿದೆ) ಅಲ್ಲಿರುವ ದ್ವಾರದ ಪಕ್ಕದಲ್ಲಿ ಸುಮಾರು ೧೦ ಅಡಿ ಎತ್ತರದ ಆಂಜನೇಯನ ಉಬ್ಬುಶಿಲ್ಪವಿದೆ. ಪೆನುಗೊಂಡೆ ಹಾಗೂ ವರದರಾಜಮ್ಮನ ಪಟ್ಟಣದಿಂದ ವಿಜಯನಗರಪಟ್ಟಣ ಪ್ರದೇಶವನ್ನು ಪ್ರವೇಶ ಮಾಡುವಾಗ ಮೊದಲು ಗುಮ್ಮಟಾಕಾರದ ಬಾಗಿಲಿನ ಮೂಲಕ ಬಂದು (ಹನುಮ ಬಾಗಿಲು?) ಭೀಮನ ಬಾಗಿಲ ಮೂಲಕ ಪ್ರವೇಶಿಸಿ, ನಂತರ ಸಿಂಘಾರದ ಹೆಬ್ಬಾಗಿಲು ಹಾಗೂ ಪಾನ್‌ಸುಪಾರಿ ಬಜಾರಿನ ಮುಖಾಂತರ ಮುಖ್ಯ ಪ್ರದೇಶವನ್ನು ತಲುಪಬಹುದು.

ಹಂಪೆಯ ಈ ಭೀಮನ ಶಿಲ್ಪವು ಕುವೆಂಪುರವರಿಗೂ ಸ್ಫೂರ್ತಿಯನ್ನು ನೀಡಿದೆ. ಕುವೆಂಪುರವರು ಎಂ.ಎ.ತರಗತಿಯಲ್ಲಿ ಓದುತ್ತಿದ್ದಾಗ ೧೯೨೯ರಲ್ಲಿ ಸಂಸ್ಕೃತಿಯ ಪ್ರವಾಸಕ್ಕೆ ಹಂಪೆಗೆ ಭೇಟಿಯನ್ನು ನೀಡಿದರು. ಹಂಪೆಯ ಭಗ್ನಾವಶೇಷಗಳನ್ನು ವೀಕ್ಷಿಸಿ ಅವುಗಳನ್ನು ಕುರಿತು ತಮ್ಮ ದಿನಚರಿಯಲ್ಲಿ ನಿರೂಪಿಸಿದ್ದಾರೆ. ಇಲ್ಲಿಗೆ ಭೇಟಿ ನೀಡಿದಾಗ ಅವರು ಅವಶೇಷಗಳಿರುವ ಭಾಗವನ್ನು 'ಪ್ರವೇಶಿಸುವ ಪ್ರಾರಂಭದಲ್ಲಿಯೇ ಅವಶೇಷರೂಪವಾಗಿ ಉಳಿದಿರುವ ಕೋಟೆಯ ಹೆಬ್ಬಾಗಿಲಲ್ಲಿ ಕಾವಲು ನಿಂತಿರುವುದು ಭೀಮನ ಪ್ರತಿಮೆಯಂತೆ'! ಅವನ ಮುಖವೆಲ್ಲ ಮುಸಲ್ಮಾನರ ದಸ್ಯುತನಕ್ಕೆ ಸಿಕ್ಕಿ ಸಿಡುಬಿನ ಕಲೆಗಳಿಂದ ಕನಿಕರ ಹುಟ್ಟಿಸುವಷ್ಟು ವಿಕಾರವಾಗಿತ್ತು,

ಸುತ್ತ ಹಳು ಹಬ್ಬಿ. ಆ ದಿನವೆ (೯.೪.೧೯೨೯) ನಾವು ಉಳಿದುಕೊಂಡಲ್ಲಿ ಇದ್ದ ಒಂದು ಕೃತಕಕೊಳದ ಸೋಪಾನ ಪಂಕ್ತಿಯ ಮೇಲೆ ಕುಳಿತು ನಾನು ರಚಿಸಿದ ಒಂದು ಕವನ 'ಹಂಪೆಯ ಭೀಮ' ಎಂದು ಅವರು ಕಂಡ ಚಿತ್ರವನ್ನು ತಮ್ಮ 'ನೆನಪಿನ ದೋಣಿಯಲ್ಲಿ' ನಿರೂಪಿಸಿದ್ದಾರೆ.[೧೫] ಕುವೆಂಪುರವರ ಸುಂದರ ಕವನದ ಭೀಮನು, ಭೀಮನ ಬಾಗಿಲಲ್ಲಿರುವ ಶಿಲ್ಪದಲ್ಲಿಯ ಭೀಮನೇ ಇರಬೇಕು.

ವಿಜಯನಗರಪಟ್ಟಣದಲ್ಲಿ (ಹಂಪೆ) ಮಹಾಭಾರತಕ್ಕೆ ಸಂಬಂಧಿಸಿದಂತೆ ಇರಬಹುದಾದ ಶಿಲ್ಪಗಳನ್ನು ಕುರಿತ ಸೂಕ್ಷ್ಮ ಅಧ್ಯಯನ ಆಗಬೇಕಿದೆ. ಇದು ಹಲವಾರು ಹೊಸ ಸಂಶೋಧನೆಗಳಿಗೆ ದಾರಿಯನ್ನು ಮಾಡಿಕೊಡಬಲ್ಲದು.

ಅಡಿ ಟಿಪ್ಪಣಿಗಳು

೧. ಚನ್ನಬಸಪ್ಪ ಎಸ್. ಪಾಟೀಲ್, ಕರ್ನಾಟಕದ ಕೋಟೆಗಳು, ಸಂ.೧, ಪು. ೯೧-೯೯

೨. ಚನ್ನಬಸಪ್ಪ ಎಸ್. ಪಾಟೀಲ್, ಅದೇ; ಜೋಶಿ. ಎಸ್.ಕೆ, 'ವಿಜಯನಗರ ರಕ್ಷಣಾ ವಾಸ್ತು ಒಂದು ಪುನರಾವಲೋಕನ', ವಿಜಯನಗರ ಅಧ್ಯಯನ, ಸಂ. ೧೦, ಪು. ೧೨೭-೧೩೫; ಕೊಟ್ರೇಶ್ ಎಂ, ಕೋಟಿ ಕೊತ್ತಲಗಳು ಒಂದು ಅಧ್ಯಯನ, (ಬಳ್ಳಾರಿ ಜಿಲ್ಲೆ), (ಅಪ್ರಕಟಿತ ಪಿಎಚ್.ಡಿ. ಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨; ಕೊಟ್ರೇಶ್, ಎಂ, ' ಹಂಪಿ ಕೋಟೆಯ ಪ್ರವೇಶ ದ್ವಾರಗಳು', ವಿಜಯನಗರ ಅಧ್ಯಯನ ಸಂ. ೧೦, ಪು. ೧೩೬-೧೫೨.

೩. ಪಾಟಿಲ್, ಸಿ.ಎಸ್, ' ಡೋರ್ ಗಾರ್ಡಿಯನ್ಸ್ ಆಫ್ ವಿಜಯನಗರ' ವಿಜಯನಗರ ಪ್ರೊಗ್ರೆಸ್ ಆಫ್ ರಿಸರ್ಚ್ ೧೯೭೭-೧೯೮೩(ಇನ್ನು ಮುಂದೆ ಪಿವಿಆರ್) ಪು. ೬೬-೬೭.

೪. ನಾಗರಾಜರಾವ್ ಎಂ.ಎಸ್. ಮತ್ತು ಪಾಟೀಲ್ ಸಿ.ಎಸ್, ' ಎಪಿಗ್ರಾಫಿಕಲ್ ರೆಫರೆನ್ಸ್ ಟು ಸಿಟಿ ಗೇಟ್ಸ್ ಅಂಡ್ ವಾಚ್ ಟವರ್ಸ್ ಆಫ್ ವಿಜಯ ನಗರ',ಪಿವಿಆರ್ ೧೯೮೩-೮೪, ಪು. ೯೬-೧೦೦

೫. ಚನ್ನಬಸಪ್ಪ ಎಸ್. ಪಾಟೀಲ್, ' ಫರದರ್ ಎಫಿಗ್ರಾಪಿಕಲ್ ರೆಫರೆನ್ಸ್ ಟು ಸಿಟಿ ಗೇಟ್ಸ್ ಅಂಡ್ ವಾಚ್ ಟವರ್ಸ್ ಆಫ್ ವಿಜಯನಗರ', ಪಿವಿಆರ್ ೧೯೮೪-೮೭, ಪು. ೧೯೧-೧೯೪.

೬. ಈ ಶಿಲ್ಪಗಳನ್ನ ಕುರಿತು ವಿದ್ವಾಂಸರುಗಳು ವಿವಿಧ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಇಲ್ಲಿಯ ಭೀಮನ ಶಿಲ್ಪವನ್ನು ಒಬ್ಬ ಜಟ್ಟಿಯ ತಪ್ಪಾಗಿ ಭಾವಿಸಲಾಗಿದೆ. " ಕ್ಯಾಪ್ಟನ್ ಎಂಬ ಚರಿತ್ರೆಕಾರ ೧೬ ನೇ ಶತಮಾನದಲ್ಲಿ ವಿಜಯನಗರದಲ್ಲಿ ನಡೆಯುತ್ತಿದದ ಮಲ್ಲಯುದ್ಧವನ್ನು ಪ್ರಸ್ತಾಪಿಸುತ್ತಾ ಜಟ್ಟಿಕಾಳಗದಲ್ಲಿ ಮಡಿದ ವೀರರ ಸ್ಮಾರಕಗಳು ಅನೇಕವಿದೆಯೆಂದು ಹೇಳುತ್ತಾನೆ. ಇದಕ್ಕೆ ಸಂಬಂಧಪಟ್ಟಂತೆ ಹಂಪಿಯ ಭೀಮನ ಬಾಗಿಲು ಸ್ಥಳದಲ್ಲಿ ಸುಮಾರು ನಾಲ್ಕು ಅಡಿ ಎತ್ತರದ ಜಟ್ಟಿಯ ಶಿಲ್ಪವನ್ನು

ಕಾಣಬಹುದಾಗಿದೆ" ಎಂದು ದಾಖಲಿಸಲಾಗಿದೆ. ನೋಡಿ ಚಲುವರಾಜು, ' ಹಂಪಿ ಸ್ಮಾರಕಗಳಲ್ಲಿ ಕಾಣಬರುವ ಜಾನಪದೀಯ ಅಂಶಗಳು', ಹಂಪಿ ಪರಂಪರೆ, ಟಿ. ಪರಮೇಶ್ವರಪ್ಪ, (ಸಂ), ಶ್ರೀವಿದ್ಯಾವಿಜಯನಗರ ಹಂಪಿ ಹೇರಿಟೇಜ್ ಟ್ರಸ್ಟ್, ಆನೆಗೊಂದಿ, ಹೊಸಪೇಟೆ, ೧೯೯೬, ಪು.೫೧. ಇನ್ನೊಂದು ಪ್ರಬಂಧದಲ್ಲಿ ಭೀಮನ ಬಿಡಿ ಶಿಲ್ಪವನ್ನು ಸರಿಯಾಗಿ ಗುರುತಿಸಲಾಗಿದೆ. ಆದರೆ ಉಬ್ಬುಶಿಲ್ಪವನ್ನು ಕುರಿತು ' ಹತ್ತಿರದ ಗೋಡೆಗಳಲ್ಲಿ ಭೀಮನು ಕೀಚಕನನ್ನು ಸಂಹಾರ ಮಾಡುವ ದೃಶ್ಯವನ್ನು ಕೆತ್ತಲಾಗಿದೆ' ಎಂದು ದಾಖಲಿಸಲಾಗಿದೆ. ನೋಡಿ ಅನುಕ್ರಮವಾಗಿ ಕೊಟ್ರೇಶ್, ಎಂ. ಕೋಟೆಕೊತ್ತಲಗಳು ಒಂದು ಅಧ್ಯಯನ (ಬಳ್ಳಾರಿ ಜಿಲ್ಲೆ), (ಅಪ್ರಕಟಿತ ಪಿ.ಎಚ್.ಡಿ. ಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೨. ಪು. ೨೪೧-೨೪೨ ಮತ್ತು ಕೊಟ್ರೇಶ್, ಎಂ. 'ಹಂಪಿ ಕೋಟೆ ಪ್ರವೇಶ್ವದ್ವಾರಗಳು', ವಿಜಯನಗರ ಅಧ್ಯಯನ, ಸಂ. ೧೦, ಪು. ೧೪೧-೧೪೨. ಅನೀಲಾ ವರ್ಗೀಸ್‌ರವರು ಇಲ್ಲಿಯ ಶಿಲ್ಪಗಳನ್ನು ಸರಿಯಾಗಿ ಗುರುತಿಸಿರುತ್ತಾರೆ." To the south east of the Jaina temple is an impressive gateway that is popularly referred to as Bhima's gate because of an image of the hero Bhima, from the Mahabharata, carved on a slab and also because of the relief carving of the episode of Bhima's killing of Dushasana", Anila Verghese, Monumental Legacy Hampi. Oxford University, Press, New Delhi 2002, p. 57.

೭. ಕುವೆಂಪು ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ್ (ಸಂ.), ಕುಮಾರವ್ಯಾಸ ಕವಿಯ ಕರ್ಣಾಟಕ ಭಾರತ ಕಥಾಮಂಜರಿ, ಕರ್ಣಪರ್ವ ಸಂಧಿ ೧೯, ಪು. ೫೩೦-೫೩೭,* ಈ ಕೃತಿಯಲ್ಲಿ ಕುರಿತು ಸೂಕ್ತ ಉಲ್ಲೇಖಗಳನ್ನು ನನ್ನ ಗಮನ ಸೆಳೆದು ಲೇಖನಕ್ಕೆ ಹಲವಾರು ಉಪಯುಕ್ತ ಮಾಹಿತಿಗಳನ್ನು ನೀಡಿದ ಶ್ರೀ ಜೈನಲ್ಲಾ ಬಳ್ಳಾರಿಯವರೆಗೆ ಕೃತಜ್ಞನಾಗಿದ್ದೇನೆ. *[ಮೈಸೂರು ಸಂಸ್ಥಾನದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ, ೧೯೫೮,]

೮. ಅದೇ, ಪು. ೫೩೬,

೯. ಅದೇ, ಪು. ೫೩೦- ೫೩೭. ದುಶ್ಯಾಸನನ ರಕ್ತದಲ್ಲಿ ಭೀಮಸೇನನ ಕೋಪಾಗ್ನಿಗೆ ಸ್ನಾನ, ಪದ್ಯಗಳು ದುಶ್ಯಾಸನನ ವಧೆಯನ್ನು ವರ್ಣಿಸುತ್ತವೆ. ದ್ರೌಪದಿಯನ್ನು ಯುದ್ಧಭೂಮಿಗೆ ಕರೆಯಿಸಿಕೊಂಡ ವಿವರಣೆಗಳಿವೆ. ಪದ್ಯ ೪೯ರಲ್ಲಿ ನರಹರಿಯು ಹಿರಣ್ಯಕಶಿಪುವನ್ನು ತನ್ನ ತೊಡೆಯ ಮೇಲೆ ಕೆಡವಿದಂತೆ ಭೀಮನು ದುಶ್ಯಾಸನನ್ನು ತನ್ನ ತೊಡೆಯ ಮೇಲೆ ಕೆಡವಿಕೊಂಡು ದುಶ್ಯಾಸಸನಿಗೆ ಭೀಮ ಪ್ರತಿಜ್ಞೆಯನ್ನು ನೆನಪಿಸುತ್ತಾನೆ. ಪದ್ಯ ೫೦, ೭೧, ೭೩, ೭೪ ಮತ್ತು ೭೮ ರಲ್ಲಿ ಸತ್ತ ದುಶ್ಯಾಸನನ ಮಸ್ತಕ್ಕೆ ದ್ರೌಪದಿ ಒದೆಯುತ್ತಾಳೆ. (ನಸುನಗುತ ಚರಣದ ಚಾರು ನೇವುರವುಲಿಯ ಲೊದೆದಳು ಖಳನ ಮಸ್ತಕವ . . . .) ಪದ್ಯ ೭೯ ರಲ್ಲಿ ಭೀಮನ ಹೊಗಳಿಕೆ ಹಾಗೂ ಕೊಟ್ಟ ಭಾಷೆಯನ್ನು ನೆರವೇರಿಸಿದ್ದಾನೆ.

ಅದರ ಮುಂದಿನ ಪದ್ಯದಲ್ಲಿ ದುಶ್ಯಾಸನನ ರಕ್ತವನ್ನು ದ್ರೌಪದಿಗೆ ಕೊಡುತ್ತಾನೆ.

ತರುಣಿ ಕುಳ್ಳಿರು ಸ್ವಾಮಿ ದ್ರೋಹಿಯ,
ಕರುಳ ಮುಡಿ ಬಾ ನಿನ್ನ ಖಾತಿಯು
ಪರಿಹರಿಸುವೆನು ಖಳನ ರುಧಿರಸ್ನಾನಕೆಳಸುವರೆ
ಸಶಸಿಜಾನನೆ ಕೊಳ್ಳೆನುತ ಖಲ
ನುರವನಿಬ್ಬಗಿ ಮಾಡಿ ಕುಡಿತೆಯ
ಲರುಣಜಲವನು ಮೊಗೆದು ಮಾನಿನಿಗಿತ್ತನಾ ಭೀಮ.

ಕುವೆಂಪುರವರ 'ದ್ರೌಪದಿಯ ಶ್ರೀಮುಡಿ' ಎಂಬ ಲೇಖನದಲ್ಲಿ ದ್ರೌಪದಿಯ ಮುಡಿ ಬಿಚ್ಚಿದ ಮತ್ತು ಮುಡಿಕಟ್ಟಿದ ಪ್ರಸಂಗವನ್ನು ಇಬ್ಬರು ಮಹಾಕವಿಗಳ ಕಾವ್ಯಗಳನ್ನು ಆಧರಿಸಿ ತೌಲನಿಕವಾಗಿ ಬರೆದಿರುತ್ತಾರೆ. ನೋಡಿ, ಕೆ.ಸಿ. ಶಿವಾರೆಡ್ಡಿ,(ಸಂ.) ಕುವೆಂಪು ಸಮಗ್ರ ಗದ್ಯ, ಸಂ.೧, ಪು. ೩೯೮-೪೦೭.

೧೦. ಗುಂಡಪ್ಪ, ಎಲ್. ಕುಮಾರ ವ್ಯಾಸ ಮಹಾಕವಿಯ ಕರ್ಣಾಟ ಭಾರತ ಕಥಾಮಂಜರಿ (ಗದುಗಿನ ಭಾರತ) ಗದ್ಯರೂಪ. ಪು. ೯೪೮-೯೫೪, ಹೇಮಂತಸಾಹಿತ್ಯ ಭಾಷ್ಯಂ ರಸ್ತೆ. ಬೆಂಗಳೂರು ಇದರಲ್ಲಿ ದುಶ್ಯಾಸನನ ವಧೆಯ ವರ್ಣನೆಯಿದೆ.

೧೧. ಇಟಗಿ ಈರಣ್ಣ, ' ಕುಮಾರವ್ಯಾಸನ ಗಜನಗರ ವಿಜ(ಯ)ನಗರವೇ?', ವಿಜಯನಗರ ಅಧ್ಯಯನ, ಸಂ. ೧, ಪು. ೧೦೦-೧೦೫. ಕುಮಾರವ್ಯಾಸನು ಕ್ರಿ.ಶ. ೧೫ ನೇ ಶತಮಾನದ ಕವಿ ಎಂದು ಎಲ್ಲರೂ ಒಪ್ಪಿಕೊಂಡಿದ್ದಾರೆ. ಕಾವ್ಯದಲ್ಲಿ ಹಲವಾರು ಉಲ್ಲೇಖಗಳು ವಿಜಯನಗರ ಪಟ್ಟಣದ ವರ್ಣನೆಯನ್ನು ಹೋಲುತ್ತದೆ. ಹಸ್ತಿನಾವತಿಯನ್ನು ಕವಿಯು ' ಗಜಪುರಿ', ' ಗಜನಗರ'' ಕೃಷ್ಣರಾಯಪುರ'ಎಂದು ಪದೇ ಪದೇ ಉಲ್ಲೇಖಿಸಿದ್ದಾನೆ. ನೋಡಿ ಕರ್ಣಾಟ ಭಾರತ ಕಥಾಮಂಜರಿ, ಪು. ೩೭೯ ಹಾಗೂ ಕನ್ನಡ ವಿಶ್ವಕೋಶ, ಮೈಸೂರು ವಿಶ್ವವಿದ್ಯಾಲಯ, ಪು. ೩೩೨-೩೩೪.

೧೨. ಭಟ್‌ಸೂರಿ, ಕೆ.ಜಿ. 'ಹಂಪಿಯ ಶಾಸನಗಳಲ್ಲಿ ವಿಜಯನಗರ ಕಾಲದ ಆಡಳಿತ ವಿಭಾಗ ಗಳು', ವಿಜಯನಗರ ಅಧ್ಯಯನ, ಸಂ.೯, ಪು. ೩೧೪-೩೧೮.

೧೩. ಕುವೆಂಪು ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ್, (ಸಂ.) ಪೂರ್ವೋಕ್ತ, ಅರಣ್ಯ ಪರ್ವ, ಸಂಧಿ ೧೦, ಪದ್ಯ ೨೩೪-೩೭-೪೭ ಪು. ೧೯೫-೧೯೮ ಸಂಧಿ ೧೧, ಪದ್ಯ- ೨,೩,೪ ಮತ್ತು ೫

೧೪. ವಾಸುದೇವನ್‌ಸಿ.ಎಸ್. 'ವಿಜಯನಗರ ಪಟ್ಟಣ ಮತ್ತು ಅದರ ಉಪನಗರಗಳು', ವಿಜಯನಗರ ಅಧ್ಯಯನ, ಸಂ. ೨, ಪು. ೯೯-೧೦೪.

೧೫. ವಿವೇಕ ರೈ ಬಿ.ಎ. (ಸಂ.), ಪ್ರವಾಸಿ ಕಂಡ ವಿಜಯನಗರ, ಪು. ೨೯೮-೩೦೦ ಲೇಖನ ಸಿದ್ಧಪಡಿಸುವಲ್ಲಿ ಸಹಕರಿಸಿದ ಶ್ರೀ ಜೈನುಲ್ಲಾ ಬಳ್ಳಾರಿ ಮತ್ತು ಶ್ರೀ ಡಿ.ಜಿ. ಕುಲಕರ್ಣಿಯವರಿಗೆ ಧನ್ಯವಾದಗಳು.

೨೨. ಕಮಲಾಪುರದಲ್ಲಿನ ವಿಜಯನಗರ ಕಾಲದ ಶಿಲಾಮೂರ್ತಿಗಳು

ಡಾ. ಎಚ್. ತಿಪ್ಪೇಸ್ವಾಮಿ

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕು ಕೇಂದ್ರದಿಂದ ಸು. 12ಕಿ.ಮೀ. ದೂರದಲ್ಲಿ ಕಮಲಾಪುರವಿದೆ. ಸಮುದ್ರ ಮಟ್ಟಕ್ಕಿಂತ 457ಮೀ. ಎತ್ತರವಿರುವ ಇದು ರೇಖಾಂಶ 15.40. ಹಾಗೂ ಉತ್ತರ ಅಕ್ಷಾಂಶ 75.150 ಡಿಗ್ರಿಗಳ ನಡುವೆ ಕೇಂದ್ರಿಕೃತವಾಗಿದೆ. 29.60 ಚ.ಕಿ.ಮೀ. ವಿಸ್ತಾರ ಹೊಂದಿರುವ ಕಮಲಾಪುರ ಪ್ರಸ್ತುತಾ ಪಟ್ಟಣ ಪಂಚಾಯಿತಿ ಕೇಂದ್ರವಾಗಿದ್ದು. ಇಲ್ಲಿ 29 ಸಾವಿರಕ್ಕಿಂತಲೂ ಹೆಚ್ಚಿನ ಜನ ವಾಸಿಸುತ್ತಿದ್ದಾರೆ.[1]

ವಿಶ್ವವಿಖ್ಯಾತ 'ಹಂಪಿ'ಯ ಸಮೀಪದಲ್ಲಿರುವ ಕಮಲಾಪುರವು ಪ್ರಾಗೈತಿಹಾಸಕ ಹಾಗೂ ಚಾರಿತ್ರಿಕ ಕಾಲಗಳಲ್ಲಿ ನಿರ್ಣಾಯಕ ಪಾತ್ರ ವಹಿಸಿದೆ. ವಿಶೇಷವಾಗಿ ವಿಜಯನಗರ ಸಾಮ್ರಾಜ್ಯದ ಕಾಲಾವಧಿಯಲ್ಲಿ ಆಡಳಿತ ಕೇಂದ್ರವಾಗಿ ಉಪನಗರವಾಗಿ[2] ಅಲ್ಲದೇ ಸಾಂಸ್ಕೃತಿಕವಾಗಿ ಕೇಂದ್ರವಾಗಿ ಪ್ರಸಿದ್ಧಿ ಪಡೆದಿತ್ತು ಎಂಬುದನ್ನು ಇಲ್ಲಿನ ಪ್ರಾಚ್ಯ ಅವಶೇಷಗಳು ದೃಢಪಡಿಸಿವೆ.

ಹೆಸರಿನ ಹಿನ್ನೆಲೆ: 'ಕಮಲಾಪುರ'ವನ್ನು ಉಲ್ಲೇಖಿಸುವ ಕೆಲಶಾಸನಗಳು ಪ್ರಾಪ್ತ ವಾಗಿವೆ. ಅವುಗಳಲ್ಲಿ ಕ್ರಿ.ಶ. 1540ರ ಶಾಸನವೊಂದು 'ಕಮಲಾಪುರ' ಕೆರೆಯ ಕೆಳಗಿನ ಹೂವಿನ ಸಿದ್ದಯ್ಯನ ಗದ್ದೆ ಮತ್ತು ಆ ಗದ್ದೆಗಳ ಉತ್ಪತ್ತಿಯ ಕೆಲಭಾಗಗಳನ್ನು ಹಾಗೂ ತೆಂಗಿನ ಮರಗಳ್ನು ವರದರಾಜಮ್ಮನ ಪಟ್ಟಣದ 'ನಾಥ ದೇವರಿಗೆ' ನೀಡಿದ ವಿವರವನ್ನು ದಾಖಲಿಸಿದೆ[3] ಅದೇ ರೀತಿ ಕ್ರಿ.ಶ. 1581ರ ಶಾಸನವೊಂದು ಅಚ್ಯುತದೇವರಾಯನ ಆಳ್ವಿಕೆಯಲ್ಲಿ ಸಾಳುವ ದಣ್ಣಾಯಕ ತನ್ನ ಆಡಳಿತದಲ್ಲಿದ್ದ 'ಕಾಮಲಾಪುರ' ಸ್ಥಳದ ಕೊಂಡ ಮಾರಸಯ್ಯ ಪಾಳೆಯದ ಭೂಮಿಯನ್ನು ಲಕ್ಷ್ಮೀ ನರಸಿಂಹ ದೇವರ ದೀಪರಾಧನೆಗೆ ದಾನ ನೀಡಿದ ವಿಷಯವನ್ನು ಉಲ್ಲೇಖಿಸಿದೆ.[4]

ಈ ಮೇಲಿನ ವಿವರಣೆಯಿಂದ ವಿಜಯನಗರ ಕಾಲಕ್ಕಾಗಲೇ 'ಕಮಲಾಪುರವು' ಆಸ್ತಿತ್ವದಲ್ಲಿತ್ತು ಎಂಬುದು ಸ್ಪಷ್ಟವಾಗುತ್ತದೆ.

ಕಮಲಾಪುರ ಎಂಬ ಹೆಸರು ಪ್ರಾಪ್ತವಾದ ಬಗೆಗೆ ವಿದ್ವಾಂಸರಲ್ಲಿ, ವಿಭಿನ್ನ ಅಭಿಪ್ರಾಯಗಳಿವೆ. ವಸುಂಧರಾ ಫಿಲಿಯೋಜಾರವರು 'ಅಳಿದುಳಿದ ಹಂಪೆ' ಎನ್ನುವ ತಮ್ಮ ಕೃತಿಯಲ್ಲಿ "ಕೃಷ್ಣದೇವರಾಯನು ತನ್ನ ಹೆಂಡತಿ 'ಕಮಲಾದೇವಿ'ಯ ಹೆಸರಿನಲ್ಲಿ ನಗರವೊಂದನ್ನು ನಿರ್ಮಿಸಿ ಅದಕ್ಕೆ ಕಮಲಾಪುರವೆಂದು ಕರೆದನು" ಎಂದು ಅಭಿಪ್ರಾಯ

ಪಟ್ಟಿದ್ದಾರೆ.[5] ಪ್ರೌಢದೇವರಾಯನ ಪತ್ನಿ ಕಮಲಾದೇವಿಯಿಂದಾಗಿಯೂ ಈ ಹೆಸರು ಪ್ರಾಪ್ತವಾಗಿರಬಹುದೆಂಬುದು ವೀಣಾ ಎಂ.ಪಿ. ಅವರ ಅಭಿಪ್ರಾಯ.[6] ಕಾಮಲ ಎಂದರೆ 'ಉತ್ತಮ ಸ್ತ್ರೀ', ಲಕ್ಷ್ಮಿ ಎಂಬ ಅರ್ಥವಿದೆ. 'ಲಕ್ಷ್ಮಿ' ಶ್ರೇಷ್ಠ ಸ್ತ್ರೀಯಾಗಿದ್ದರಿಂದ ಎಲ್ಲರೂ ದೈವ ಭಾವನೆಯಿಂದ ಇವಳ ಜ್ಞಾಪಕಾರ್ಥವಾಗಿ ಈ ಪುರಕ್ಕೆ 'ಕಮಲಾಪುರ' ಎಂದು ಕರೆದಿರಬಹುದೆಂಬುದು ಮತ್ತೊಬ್ಬ ಹಿರಿಯ ವಿದ್ವಾಂಸರ ಅಭಿಪ್ರಾಯ [7] ಕಮಲಾಪುರ ಎಂಬುದನ್ನು ಬಿಡಿಸಿದಾಗ

ಕಮಲ = ನೀರಿನಲ್ಲಿ ಅರಳುವ ಪುಷ್ಪ, ತಾವರೆ.

ಪುರ = ನಗರ, ಪಟ್ಟಣ ಎಂಬ ಅರ್ಥಗಳು ಬರುತ್ತವೆ. ಅಂದರೆ 'ತಾವರೆ ಹೂವಿನ' ನಗರ ಎಂದು ಅರ್ಥವಾಗುತ್ತದೆ. ಪ್ರಾಯಶಃ ಇಲ್ಲಿರುವ ಕೆರೆಯಲ್ಲಿ ಅಂದು ಹೆಚ್ಚಾಗಿ ಶ್ವೇತ ತಾವರೆಗಳ್ಳು ಬೆಳೆಯುತ್ತಿದ್ದಿರಬೇಕು? ಅಲ್ಲದೆ ಇಲ್ಲಿನ ಪುಷ್ಪಗಳನ್ನು ಅಂದಿನ ಅರಮನೆ, ಗುರುಮನೆಗಳಿಗೆ ರವಾನಿಸುತ್ತಿದ್ದ ಸೂಚಕವಾಗಿ ಈ ಹೆಸರು ಪ್ರಾಪ್ತವಾಗಿರ ಬಹುದೆಂದು ಹೇಳಬಹುದಾಗಿದೆ.

ಇಂದಿನ ಕಮಲಾಪುರದ ವಿವಿದೆಡೆ ವಿಭಿನ್ನಕಾಲದ ಕೋಟೆ - ಕೊತ್ತಲುಗಳು, ದೇವಾಲಯಗಳು ಮೂರ್ತಿಗಳು, ಭಗ್ನಾವಶೇಷಗಳು ಇದ್ದು, ಇದೊಂದು ಪ್ರಾಚೀನ ನೆಲೆ ಎಂಬುದನ್ನು ಸೂಚಿಸುತ್ತವೆ. [8] ಇಲ್ಲಿ ಹೇಮಗಿರಿ ಆಂಜನೇಯ, ಕಾಳಮ್ಮ, ನಗರೇಶ್ವರ, ಚಪ್ಪರದೇವರು, ಕೃಷ್ಣಸ್ವಾಮಿ, ವೀರಭದ್ರ, ಗಾರೆ ಬಾಗಿಲು ಆಂಜನೇಯ, ಶೂರನ ಹಳ್ಳಿ ಆಂಜನೇಯ, ಬ್ರಹ್ಮ, ಹನುಮಂತರಾಯ, ಕಲ್ಮಠ, ಕಾಶೀಮಠ, ಕಿರೀಟ ಯಲ್ಲಮ್ಮ, ಈಶ್ವರ, ಪಟ್ಟಾಭಿರಾಮ, ವೇಣುಗೋಪಾಲ, ಪಾಂಡುರಂಗಸ್ವಾಮಿ, ವೀರಭದ್ರ, ಕೋಟೆ ಆಂಜನೇಯ ಮೊದಲಾದ ದೇವಾಲಯಗಳಿವೆ. [9]

ಈ ನಗರದ ವಿವಿಧ ಭಾಗಗಳಲ್ಲಿ ವಿಭಿನ್ನ ಕಾಲಕ್ಕೆ ಸೇರಿದ ಶೈವ, ವೈಷ್ಣವ, ಶಾಕ್ತ ಹಾಗೂ ಇತರ ಧಾರ್ಮಿಕ ಪಂಥಗಳಿಗೆ ಸೇರಿದ ಕೆಲವು ಶಿಲಾಮೂರ್ತಿಗಳಿದ್ದು, ಅವು ಅಧ್ಯಯನ ಯೋಗ್ಯವಾಗಿವೆ. ವಸ್ತುಸಂಗ್ರಹಾಲಯ ಮತ್ತು ದೇವಾಲಯಗಳನ್ನು ಹೊರತು ಪಡಿಸಿ, ಈ ನಗರದದ ಜನವಸತಿ ಪ್ರದೇಶಗಳಲ್ಲಿರುವ ಹಾಗೂ ಜನರ ನಿರ್ಲಕ್ಷ್ಯಕ್ಕೆ ಒಳಗಾಗಿರುವ ವಿಜಯನಗರ ಕಾಲದ ಶಿಲಾಮೂರ್ತಿಗಳನ್ನು ಮಾತ್ರ ಇಲ್ಲಿ ಪ್ರಾಥಮಿಕ ವಾಗಿ ಪರಿಚಯಿಸಲಾಗಿದೆ.

1. ಲಕ್ಷ್ಮಿ - ನರಸಿಂಹ

ಮಸ್ತಾನ್‌ವಲಿದರ್ಗಾ (ಎರಡನೆ ವಾರ್ಡ್)ದ ಬಳಿಯಿರುವ ಶ್ರೀ ಪ್ರಸನ್ನ ಬಸವೇಶ್ವರ ಕಟ್ಟೆಯ ಮೇಲೆ ಈ ಮೂರ್ತಿ ಇದೆ. ವೈಷ್ಣವ ಪಂಥಕ್ಕೆ ಸೇರಿದೆ. ಇದು ಚತುರ್ಭುಜ ಗಳನ್ನು ಹೊಂದಿದ್ದು, ಪೀಠದ ಮೇಲೆ ಲಕ್ಷ್ಮೀಸಮೇತ ಇದ್ದಾನೆ. ಕಿರೀಟವನ್ನು ಧರಿಸಿರುವ



ನರಸಿಂಹಮೂರ್ತಿ ತನ್ನ ಮೇಲಿನ ಬಲಗೈನಲ್ಲಿ ಚಕ್ರ, ಮೇಲಿನ ಎಡಕೈನಲ್ಲಿ ಶಂಖ ಹಿಡಿದಿದ್ದು, ಕೆಳಗಿನ ಬಲಗೈ ಅಭಯ ಮುದ್ರೆಯಲ್ಲಿದ್ದು ಕೆಳೆ ಎಡಗೈ ತನ್ನ ಎಡ ತೊಡೆಯ ಮೇಲೆ ಕುಳಿತ ಲಕ್ಷ್ಮಿಯ ಸೊಂಟವನ್ನು ಬಳಸಿ ಹಿಡಿದಿದೆ. ಕಿವಿಯಲ್ಲಿ ಕುಂಡಲಗಳಿದ್ದು, ಕೈ ಮತ್ತು ಕಾಲಿನಲ್ಲಿ ಕಡಗಗಳಿವೆ. ಭುಜದಲ್ಲಿ ಭುಜಬಂಧ, ಕೊರಳಲ್ಲಿ ಕಂಠಿಹಾರ ಯಜ್ಞೋಪವೀತ, ವೈಜಯಂತಿ ಮಾಲೆಗಳಿವೆ. ನಡುವಿನಲ್ಲಿ ಕಟ್ಟಿದ ಪಂಚೆ ಆಕರ್ಷಕ ವಾಗಿದ್ದು, ಅದು ಎರಡು ಕಾಲಿನ ಮಧ್ಯೆ ಇಳಿಬಿದ್ದಿದೆ.

ನರಸಿಂಹನ ಎಡತೊಡೆಯ ಮೇಲೆ ಕುಳಿತ ಲಕ್ಷ್ಮಿಯು ಕರಂಡ ಮಕುಟ ಧರಿಸಿದ್ದು, ದ್ವಿಭುಜಗಳನ್ನು ಹೊಂದಿದ್ದಾಳೆ. ತನ್ನೆರಡೂ ಕಾಲುಗಳನ್ನು ಇಳಿಬಿಟ್ಟು ಕುಳಿತ ಲಕ್ಷ್ಮಿಯ ಕಿವಿಯಲ್ಲಿ ಚಕ್ರಕುಂಡಲಗಳಿದ್ದು, ಕೊರಳಲ್ಲಿ ಕಂಠಿಹಾರ ಮತ್ತು ಇತರ ಬಗೆಯ ಹಾರಗಳಿವೆ. ಅಲ್ಲದೆ ಭುಜದಲ್ಲಿ ಕೇಯೂರಗಳಿದ್ದು, ಕಾಲು ಮತ್ತು ಕೈಗಳಲ್ಲಿ ಕಡಗ ಗಳಿವೆ. ಉಬ್ಬಿದಸ್ತನ ಹೊಂದಿರುವ ಈ ಮೂರ್ತಿ ಆಕರ್ಷಕಸೀರೆಯುಟ್ಟಿದೆ, ಅಲ್ಲದೆ ತನ್ನ ಎಡಗೈನ್ನು ಇಳಿಬಿಟ್ಟಿದ್ದು, ಬಲಗೈಯಿಂದ ನರಸಿಂಹನ ಸೊಂಟವನ್ನು ಬಳಸಿ ಹಿಡಿದಿರುವಂತೆ ಕೆತ್ತಲಾಗಿದೆ. ಲಕ್ಷ್ಮಿ -ನರಸಿಂಹ ಮೂರ್ತಿಯ ಹಿಂಬದಿಯಲ್ಲಿ ಸರಳವಾದ ಪ್ರಭಾವಳಿ ಇದೆ. ಕ್ರಿ.ಶ. 15 ನೇ ಶತಮಾನಕ್ಕೆ ಸೇರಿರಬಹುದಾದ ಲಕ್ಷ್ಮಿನರಸಿಂಹ

ಮೂರ್ತಿಯ ಮುಖಭಾವ, ವಸ್ತ್ರವಿನ್ಯಾಸ, ಆಸೀನಭಂಗಿ ಮೊದಲಾದ ಅಂಶಗಳು ಹಂಪಿ ಮತ್ತು ಇತರೆಡೆ ದೊರೆಯುವ ಮೂರ್ತಿಗಳಿಗೆ ಹೋಲಿಕೆಯಾಗುತ್ತವೆ. ಇದರಿಂದಾಗಿ ಇದು ವಿಜಯನಗರ ಕಾಲದ್ದೆಂದು ನಿರ್ಣಯಿಸಬಹುದು.

2. ಕೇಶವಮೂರ್ತಿ

ಗೋನಾಳಕೇರಿಯ ನರಗೆಲಪ್ಪನವರ ಮನೆಯ ಸಮೀಪದಲ್ಲಿರುವ ಮರವೊಂದರ ಬಳಿ ಈ ಮೂರ್ತಿ ಇದೆ. ವೈಷ್ಣವ ಪಂಥದ ಈ ಮೂರ್ತಿ ನಾಲ್ಕು ಕೈಗಳನ್ನು ಹೊಂದಿದ್ದು ಸಮಭಂಗದಲ್ಲಿ ಸ್ಥಾನೀಕವಾಗಿದೆ. ಮೇಲಿನ ಬಲಗೈನಲ್ಲಿ ಶಂಖ ಮತ್ತು ಮೇಲಿನ ಎಡಗೈನಲ್ಲಿ ಚಕ್ರ ಹಾಗೂ ಕೆಳಗಿನ ಎಡಗೈನಲ್ಲಿ 'ಗದಾ' ಮತ್ತು ಕೆಳಬಲಗೈನಲ್ಲಿ ಪದ್ಮ ಗಳಿವೆ. ಕಿರೀಟಧಾರಿಯಾಗಿರುವ ಈ ಮೂರ್ತಿಯ ಕಿವಿಯಲ್ಲಿ ಕುಂಡಲಗಳಿದ್ದು, ಕೊರಳಲ್ಲಿ ವಿವಿಧ ಬಗೆಯ ಹಾರಗಳಿವೆ. ಹಾಗೂ ವೈಜಯಂತಿ ಮಾಲೆ, ಉತ್ತರೀಯ, ಉದರ ಬಂಧಗಳಿಂದ ಅಲಂಕೃತಗೊಂಡಿರುವ ಈ ಮೂರ್ತಿ ಕಾಲು ಮತ್ತು ಕೈಗಳಲ್ಲಿ ಕಡಗಗಳಿವೆ. ಉಟ್ಟಿರುವ ಪಂಚೆ ಆಕರ್ಷಣೀಯವಾಗಿದ್ದು, ಅದು ಎರಡು ಕಾಲಿನ ಮಧ್ಯೆ ಇಳಿ ಬಿದ್ದ ರೀತಿಯಲ್ಲಿದೆ. ಗ್ರಾನೈಟ್ ಶಿಲೆಯ ಈ ಮೂರ್ತಿಯ ಮುಖಭಾವ, ಆಯುಧ, ಭಂಗಿ ಮತ್ತು ಶೈಲಿಯ ಆಧಾರದ ಮೇಲೆ ಇದು ವಿಜಯನಗರ ಕಾಲಕ್ಕೆ ಕ್ರಿ.ಶ. 16 ನೇ ಶತಮಾನಕ್ಕೆ ಸೇರಿದ್ದೆಂದು ಹೇಳಬಹುದಾಗಿದೆ.

3. ಮಾಧವಮೂರ್ತಿ

16ನೇ ವಾರ್ಡ್ (ಅಂಬೇಡ್ಕರ್ ನಗರ) ನಲ್ಲಿರುವ ಈಶ್ವರ ಗುಡಿಯ ಆವರಣದಲ್ಲಿ ಈ ಮೂರ್ತಿ ಇದೆ. ಕ್ಲೋರೆಟಿಕ್ ಶಿಸ್ಟ್‌ನಲ್ಲಿ ಕೆತ್ತಲ್ಪಟ್ಟಿರುವ ಇದು ಚತುರ್ಭುಜಗಳನ್ನು ಹೊಂದಿದ್ದು, ಕಿರೀಟಮುಖಿಯಾಗಿದೆ. ಪೀಠದ ಮೇಲೆ ಸ್ಥಾನೀಕವಾಗಿರುವ ಮಾಧವನ ಬಲಗೈನಲ್ಲಿ ಚಕ್ರ, ಮೇಲಿನ ಎಡಗೈನಲ್ಲಿ ಶಂಖ, ಕೆಳಗಿನ ಎಡಗೈನಲ್ಲಿ ಪದ್ಮ ಹಾಗೂ ಕೆಳಬಲಗೈನಲ್ಲಿ ಗದೆಗಳಿವೆ. ಕೊರಳಲ್ಲಿ ಕಂಠಿಹಾರಗಳಿದ್ದು, ಯಜ್ಞೋಪವೀತ, ಕಾಲಿನವರೆಗೆ ಇಳಿಬಿದ್ದ ವೈಜಯಂತಿ ಮಾಲೆ, ಉದರ ಬಂಧ, ಕಟಿಬಂಧ, ಉತ್ತರೀಯ ಬಂಧಗಳನ್ನು ಇದು ಧರಿಸಿದೆ. ಅಲ್ಲದೆ ಭುಜದಲ್ಲಿ ಭುಜಬಂಧ, ಕೇಯೂರ ಗಳಿದ್ದು, ಆಕರ್ಷಣೀಯವಾಗಿವೆ. ಈ ಮೂರ್ತಿಯ ಶೈಲಿ, ಮುಖಭಾವ ಮತ್ತು ವಸ್ತ್ರ ವಿನ್ಯಾಸದ ಆಧಾರದ ಮೇಲೆ ಇದು ವಿಜಯ ನಗರ ಕಾಲದ್ದೆಂದು ಹೇಳಬಹುದಾಗಿದೆ.[10]

4. ವೈಷ್ಣವ ದ್ವಾರಪಾಲಮೂರ್ತಿ

ಇಲ್ಲಿನ ಒಳಕೋಟೆಯ ಹತ್ತಿರ ಇರುವ ವಾಲ್ಮೀಕಿ ಸಮುದಾಯ ಭವನದ ಬಳಿ (ಸ.ಹಿ.ಪ್ರಾ.ಶಾಲೆ)ಯ ಕಟ್ಟೆಯ ಮೇಲೆ ಈ ಮೂರ್ತಿ ಇದೆ. ವಿಜಯನಗರ ಕಾಲಕ್ಕೆ

(ಕ್ರಿ.ಶ. 14ನೇ ಶತಮಾನ) ಸೇರಿರುವ ಈ ಮೂರ್ತಿ ನಾಲ್ಕು ಕೈಗಳನ್ನು ಹೊಂದಿದ್ದು, ದ್ವಿಭಂಗ ದಲ್ಲಿ ಪೀಠದ ಮೇಲೆ ಸ್ಥಾನೀಕವಾಗಿದೆ. ಈ ದ್ವಾರಪಾಲಕನು ತನ್ನ ಮೇಲಿನ ಬಲಗೈನಲ್ಲಿ ಚಕ್ರ, ಮೇಲಿನ ಎಡಕೈನಲ್ಲಿ ಶಂಖ ಹಾಗೂ ಕೆಳ ಎಡಗೈನಲ್ಲಿ ಗದೆ ಹಿಡಿದಿದ್ದಾನೆ. ಕೆಳಗಿನ ಬಲಗೈ ಅಭಯ ಮುದ್ರೆಯಲ್ಲಿರುವ ಈ ಮೂರ್ತಿಯು ಕಿರೀಟ ಮುಖಿಯಾಗಿದ್ದು, ಕಿವಿಯಲ್ಲಿ ಕುಂಡಲ ಹಾಗೂ ಕೊರಳು ಮತ್ತು ದೇಹದ ಮೇಲೆ ವಿವಿಧ ಬಗೆಯ ಆಭರಣಗಳನ್ನು ಧರಿಸಿ ಕಣ್ಮನ ಸೆಳೆಯುತ್ತದೆ.

5. ವೀರಭದ್ರ ಮೂರ್ತಿ

ಊರಮ್ಮ ದೇವಾಲಯದ ಎಡಭಾಗಕ್ಕಿರುವ ಕಟ್ಟೆಯ ಮೇಲಿರುವ ಈ ಮೂರ್ತಿ ವಿಜಯನಗರ (ಕ್ರಿ.ಶ. ಸು. 15ನೇ ಶತಮಾನ) ಕಾಲಕ್ಕೆ ಸೇರಿದ್ದು ಅಧ್ಯಯನ ಯೋಗ್ಯವಾಗಿದೆ. ಗ್ರಾನೈಟ್ ಶಿಲೆಯಲ್ಲಿ ಕೆತ್ತಲಾಗಿರುವ ಮೂರ್ತಿಯು ಚತುರ್ಭುಜ ಗಳನ್ನು ಹೊಂದಿದ್ದು, ಸರಳ ಪೀಠದ ಮೇಲೆ ಆಸೀನವಾಗಿದೆ. ಕಿರೀಟಮುಖಿಯಾಗಿರುವ ಇದು ಮೇಲಿನ ಬಲಗೈನಲ್ಲಿ ತ್ರಿಶೂಲ, ಮೇಲಿನ ಎಡಗೈನಲ್ಲಿ ಡಮರುಗ, ಕೆಳಗಿನ ಬಲಗೈನಲ್ಲಿ ಖಡ್ಗ, ಕೆಳಗಿನ ಎಡಗೈನಲ್ಲಿ (?) ಹಿಡಿದಿದೆ. [11]. ಕಿವಿಯಲ್ಲಿ ಕುಂಡಲಗಳಿದ್ದು, ಕೊರಳು ಮತ್ತು ದೇಹದಲ್ಲಿ ವಿವಿಧ ಬಗೆಯ ಆಭರಣಗಳಿವೆ. ಉಟ್ಟಿರುವ ಪಂಚೆ



ಅಲಂಕೃತವಾಗಿದ್ದು, ಅದು ಎರಡು ಕಾಲಿನ ಮಧ್ಯದಿಂದ ಇಳಿಬಿದ್ದಿದೆ. ಈ ಮೂರ್ತಿಯ ಹಿಂಬದಿಯಲ್ಲಿ ಅಲಂಕೃತ ಪ್ರಭಾವಳಿ ಇದೆ. ಮಂದಹಾಸ ಬೀರುತ್ತಿರುವಂತೆ ಮುಖಭಾವ ಹೊಂದಿರುವ ಈ ಮೂರ್ತಿಯ ಆಭರಣ ವಿನ್ಯಾಸ, ಭಂಗಿ ಇವುಗಳು ಆಕರ್ಷಣೀಯ ವಾಗಿವೆ.

6. ಶಿವ ಅಥವಾ ರುದ್ರ (?)

ಪೀಠದ ಆಸೀನವಾಗಿರುವ ಈ ಮೂರ್ತಿಯು[12] ನಗರೇಶ್ವರ ದೇವಾಲಯದ ಪಕ್ಕದಲ್ಲಿರುವ ಆಂಜನೇಯ ದೇವಾಲಯದ ಪ್ರಾಕಾರದೊಳಗಡೆ ಇದೆ. ಕರಂಡ ಮುಕುಟ ಧಾರಿಯಾಗಿರುವ ಶಿವ ಅಥವಾ ರುದ್ರ ಚತುರ್ಭುಜಗಳನ್ನು ಹೊಂದಿದ್ದು ಮೇಲಿನ ಬಲಗೈನಲ್ಲಿ ಡಮರು, ಮೇಲಿನ ಎಡಗೈನಲ್ಲಿ ತ್ರಿಶೂಲ, ಕೆಳಬಲಗೈನಲ್ಲಿ ಖಡ್ಗ ಮತ್ತು ಕೆಳ ಎಡಗೈನಲ್ಲಿ ಕಪಾಲಗಳನ್ನು ಹಿಡಿದಿದೆ. ಕೊರಳಲ್ಲಿ ಕಂಠಿಹಾರ, ಕಿವಿಯಲ್ಲಿ ಕುಂಡಲ, ಭುಜದಲ್ಲಿ ಭುಜಬಂಧ ಹಾಗೂ ವೈಜಯಂತಿ ಮಾಲೆಗಳಿಂದ ಈ ಮೂರ್ತಿ ಅಲಂಕೃತವಾಗಿದೆ. ಈ ಮೂರ್ತಿಯ ಆಯುಧ, ವಿನ್ಯಾಸ, ಮತ್ತಿತರ ಅಂಶಗಳು ಹಂಪಿ ಹಾಗೂ ಇತರಡೆ ದೊರೆಯುವ ವಿಜಯನಗರ ಅಂತ್ಯಕಾಲದ ಮೂರ್ತಿಗಳಿಗೆ ಹೋಲಿಕೆ ಆಗುತ್ತದೆ[13] ಎಂದು ಹೇಳಬಹುದು.

7. ಗಣಪತಿ ಮೂರ್ತಿಗಳು

ವಿಜಯನಗರ ಕಾಲಕ್ಕೆ ಸೇರಿದ (ಕ್ರಿ.ಶ. ಸು. 15-16 ನೇ ಶತಮಾನ) ಗಣಪತಿ ಮೂರ್ತಿ ಗಳು ಕಮಲಾಪುರದ ವಿವಿಧೆಡೆ ದೊರೆತಿವೆ. ಅವುಗಳಲ್ಲಿ ಕಲ್ಲುಮಠದ ಬಳಿ ಯಲ್ಲಿ ಒಂದು ಹೆಚ್.ಪಿ.ಸಿ ರಸ್ತೆಯ ಸುಬ್ಬಯ್ಯನವರ ಕಟ್ಟೆಯ ಮೇಲೆ ಇನ್ನೊಂದು, ಹಾಗೂ ಗಾರೆ ಬಾಗಿಲು ಆಂಜನೇಯ ದೇವಾಲಯದ ಬಳಿ ಎರಡು ಗಣಪತಿ ಮೂರ್ತಿಗಳಿದ್ದು, ಅಧ್ಯಯನ ಯೋಗ್ಯವಾಗಿವೆ.

ಇವುಗಳಲ್ಲಿ ಸುಬ್ಬಯ್ಯನವರ ಮನೆಯ ಬಳಿ ಇರುವ ಕಟ್ಟೆಯ ಮೇಲಿನ ಗಣಪತಿಯು ಚತುರ್ಭುಜಗಳನ್ನು ಹೊಂದಿದ್ದು, ಪೀಠದ ಮೇಲೆ ಆಸೀನವಾಗಿದೆ. ಗ್ರಾನೈಟ್ ಶಿಲೆಯಲ್ಲಿ ಕೆತ್ತಲಾಗಿರುವ ಈ ಮೂರ್ತಿಯು ಕಿರೀಟಮುಖಿಯಾಗಿದ್ದು, ಅಂಕುಶ, ಪಾಶಗಳನ್ನು ಮೇಲಿನ ಕೈಗಳಲ್ಲಿ ಹಾಗೂ ಕೆಳಗಿನ ಕೈಗಳಲ್ಲಿ ಭಗ್ನದಂತ ಮತ್ತು ಮೋದಕ ಪಾತ್ರೆಗಳನ್ನು ಹಿಡಿದಿದೆ. ಕೈ ಮತ್ತು ಕಾಲುಗಳಲ್ಲಿ ಕಡಗಗಳನ್ನು ಇದು ಧರಿಸಿದೆ. ಅಗಲವಾದ ಕಿವಿ ಯನ್ನು ಹೊಂದಿರುವ ಈ ಮೂರ್ತಿಯ ಕೊರಳಲ್ಲಿ ವಿವಿಧ ಬಗೆಯ ಹಾರಗಳು ಮತ್ತು ಯಜ್ಞೋಪವೀತಗಳಿವೆ. ಅಲ್ಲದೆ ಹೊಟ್ಟೆಯ ಭಾಗದಲ್ಲಿ ಹಾವು ಸುತ್ತುವರಿದಿದ್ದು, ಆಕರ್ಷಕ ಪಂಚೆ ಉಟ್ಟಿರುವಂತೆ ಕೆತ್ತಲಾಗಿದ್ದು, ಪೀಠ ಬಿಂಬದಲ್ಲಿ ಇಲಿಯು





ಓಡುತ್ತಿರುವಂತೆ ಚಿತ್ರಿಸಲಾಗಿದೆ. ಅಲ್ಲದೆ ಇದರ ಮುಂಭಾಗದಲ್ಲಿ ಪ್ರತ್ಯೇಕವಾಗಿ ಇಲಿಯ (ಮೂಷಕ) ಚಿಕ್ಕ ಶಿಲ್ಪ ಇಡಲಾಗಿದೆ.

ಈ ಮೇಲಿನ ಎಲ್ಲಾ ಲಕ್ಷಣಗಳನ್ನು ಕಮಲಾಪುರದ ಇತರೆ ಗಣಪತಿ ಮೂರ್ತಿಗಳು ಹೊಂದಿವೆ. ಆದರೆ ಕಲ್ಲುಮಠ ಮತ್ತು ಗಾರೆಬಾಗಿಲು ಆಂಜನೇಯ ಗುಡಿಯ ಗಣಪತಿಗಳು ಕರಂಡ ಮಕುಟಗಳನ್ನು ಧರಿಸಿದ್ದು, ಹೊಟ್ಟೆಯ ಗಾತ್ರವು ಸ್ವಲ್ಪ ಕಡಿಮೆ ಇರುವಂತೆ ತೋರಿಸಲಾಗಿದೆ. [14] ಹಂಪಿಯಲ್ಲಿನ ಗಣಪತಿ ಮೂರ್ತಿಗಳಿಗೆ ಈ ಮೂರ್ತಿಗಳು ತಾಳೆ ಆಗುತ್ತವೆ. ಆದ್ದರಿಂದ ಇವು ವಿಜಯನಗರ ಕಾಲದವುಗಳೆಂದು ಹೇಳಬಹುದು.

8. ಭೈರವ ಮೂರ್ತಿಗಳು

ಇಲ್ಲಿನ 'ಬಂಡಿಕೇರಿ'ಯ ಪಾಲಯ್ಯನ ಗುಡಿಯ ಹೊರಭಾಗದಲ್ಲಿ ಮೂರು ಭೈರವ ಮೂರ್ತಿಗಳಿದ್ದು, ಅಧ್ಯಯನ ಯೋಗ್ಯವಾಗಿವೆ. ಗ್ರಾನೈಟ್ ಶಿಲೆಯಲ್ಲಿ ಕೆತ್ತಲಾಗಿರುವ ಇವುಗಳು ಸಾಮಾನ್ಯ ಪೀಠದ ಮೇಲೆ ಸ್ಥಾನಿಕವಾಗಿದ್ದು, ಸಮಾನಲಕ್ಷಣಗಳನ್ನೊಂದಿವೆ. ಚತುರ್ಭುಜಗಳನ್ನು ಹೊಂದಿರುವ ಇವುಗಳು ತ್ರಿಶೂಲ, ಡಮರುಗಳನ್ನು ಮೇಲಿನ ಕೈಗಳಲ್ಲಿ ಹಿಡಿದಿದ್ದು, ಕೆಳಬಲಗೈ ಖಡ್ಗ (?) ಕೆಳ ಎಡಗೈನಲ್ಲಿ 'ಕಪಾಲ'ಗಳನ್ನು ಹಿಡಿದಿವೆ. ಕೊರಳಲ್ಲಿ ರುಂಡಮಾಲೆಯಸರ, ಕೈಗಳಲ್ಲಿ ಭುಜಬಂಧ, ಕೇಯೂರ ಹಾಗೂ ಕಿವಿಯಲ್ಲಿ ಸರ್ಪಕುಂಡಲಗಳಿವೆ. ಸರ್ಪವನ್ನು ಉದರ ಬಂಧದಂತೆ ಧರಿಸಿರುವ ಈ ಮೂರ್ತಿಗಳು ದ್ವಿಭಂಗದಲ್ಲಿ ಸ್ಥಾನೀಕವಾಗಿವೆ. ಅಲ್ಲದೆ ಕೈ ಮತ್ತು ಕಾಲಿನಲ್ಲಿ ಕಡಗಗಳಿವೆ. ಇದೇ


ಲಕ್ಷಣವುಳ್ಳ ಮತ್ತೆರಡು ಚಿಕ್ಕ ಮೂರ್ತಿಗಳು ವೀರಭದ್ರ ದೇವಾಲಯದ ಹಿಂಭಾಗಕ್ಕಿರುವ ಆಂಜನೇಯ ಗುಡಿಯ ಮುಂಭಾಗದಲ್ಲಿವೆ. ಇವುಗಳ ಲಕ್ಷಣ, ಭಂಗಿ, ವಿನ್ಯಾಸಗಳ ಆಧಾರದ ಮೇಲೆ ಇವು ವಿಜಯನಗರ ಕಾಲದ ಮೂರ್ತಿಗಳೆಂದು (ಕ್ರಿ.ಶ. ಸು. 14-15 ನೇ ಶತಮಾನ) ಹೇಳಬಹುದಾಗಿದೆ.

9. ನಂದಿ ಮೂರ್ತಿ

ವಿಜಯನಗರ ಕಾಲಕ್ಕೆ ಸೇರಿದ ನಂದಿ ಮೂರ್ತಿಯೊಂದು ಮಸ್ತಾನ್‌ವಲಿದರ್ಗಾದ ಬಳಿ ಇರುವ ಪ್ರಸನ್ನ ಬಸವೇಶ್ವರ ಕಟ್ಟೆಯ ಬಳಿ ಇದ್ದು, ಅಧ್ಯಯನ ಯೋಗ್ಯವಾಗಿದೆ. ಗ್ರಾನೈಟ್ ಶಿಲೆಯಲ್ಲಿ ಕೆತ್ತಲಾಗಿರುವ ಈ ನಂದಿಯು ಎಡಗಾಲನ್ನು ಮಡಚಿ, ಬಲ ಗಾಲನ್ನು ಸ್ವಲ್ಪ ಮುಂದೆ ಚಾಚಿ ಎಡಭಾಗಕ್ಕೆ ಸ್ವಲ್ಪ ಹೊರಳಿ ತಲೆಯನ್ನು ವಿನೀತ ಭಾವದಿಂದ ತಗ್ಗಿಸಿ ಮಲಗಿದ ರೀತಿಯಲ್ಲಿದೆ. ಮೈಮೇಲೆ ಅಲಂಕೃತವಾದ ಬಟ್ಟೆ ಯನ್ನು ಹೊದಿಸಲಾಗಿದ್ದು, ಹಣೆ ಪಟ್ಟಿ ಕೊರಳಲ್ಲಿ ವಿವಿಧ ಬಗೆಯ ಗೆಜ್ಜೆ ಸರಗಳಿಂದ (ಗಂಟೆಸರ) ಈ ನಂದಿ ಅಂಲಕೃತವಾಗಿದೆ. ಇದೇ ರೀತಿಯ ಲಕ್ಷಣ ಹೊಂದಿರುವ ಮತ್ತೊಂದು ನಂದಿಯು ಹೆಚ್.ಪಿ.ಸಿ. ರಸ್ತೆಯ ಸುಬ್ಬಣ್ಣನವರ ಕಟ್ಟೆಯ ಮೇಲಿದೆ. ಈ ನಂದಿಯ ಹಿಂಬದಿಯ ಎಡತೊಡೆಯ ಮೆಲೆ ಶಿವಲಿಂಗವನ್ನು ಕೊರೆಯಲಾಗಿದೆ.

ಈ ಮೇಲಿನ ನಂದಿಗಳು ವಿನೀತಭಾವದಿಂದ ತಲೆ ತಗ್ಗಿಸಿದಂತಿವೆ. ಇದಕ್ಕಿಂತಲೂ ಸ್ವಲ್ಪ ಭಿನ್ನವಾಗಿ ತಲೆಯನ್ನು ಸ್ವಲ್ಪ ಮುಂದಕ್ಕೆ ಚಾಚಿರುವಂತಿರುವ ಹಾಗೂ ಉಳಿದಂತೆ





ಮೇಲಿನ ನಂದಿಗಳ ರೀತಿಯ ಅಲಂಕಾರ ಹೊಂದಿರುವ ನಂದಿಗಳು ಇಲ್ಲಿವೆ. ಇವುಗಳಲ್ಲಿ ಕೆ.ಪಿ.ಟಿ.ಸಿ.ಎಲ್. ಕಛೇರಿ ಮುಂದೆ ಒಂದು, ಹಾಗೂ ವಿರೇಶ ತಾತನವರ ಮಠದ ಬಳಿ ಮತ್ತೊಂದು ಹಾಗೂ ನಗರೇಶ್ವರ ದೇವಾಲಯದ ಬಳಿಯ ಆವರಣದಲ್ಲಿ ಮತ್ತು ಮನ್ಮಥಕೇರಿಯಲ್ಲಿ ನಂದಿಗಳಿವೆ. ಈ ನಂದಿಗಳು ತಲೆತಗ್ಗಿಸಿರುವ ರೀತಿ, ಅಲಂಕಾರ, ಮಲಗಿಕೊಂಡಿರುವ ಶೈಲಿಯನ್ನು ಆಧಾರವಾಗಿಟ್ಟುಕೊಂಡು ಇವುಗಳು ವಿಜಯನಗರ ಕಾಲದ ನಂದಿಗಳೆಂದು ಹೇಳಬಹುದು.[16]



10. ದುರ್ಗಿ ಮೂರ್ತಿ

ಈ ಮೂರ್ತಿಯು 16ನೇ ವಾರ್ಡ್‌ನ ಫಕೀರಪ್ಪ ಎನ್ನುವವರ ಮನೆಯ ಬಳಿ ಇರುವ ಕಟ್ಟೆಯ ಮೇಲಿದೆ. ಗ್ರಾನೈಟ್ ಶಿಲೆಯಲ್ಲಿ ತಯಾರಿಸಿದ ಈ ಮೂರ್ತಿ ಕಿರೀಟಧಾರಿಯಾಗಿದ್ದು, ನಾಲ್ಕುಕೈಗಳನ್ನು ಹೊಂದಿದೆ. ತ್ರಿಶೂಲ, ಡಮರುಗಗಳನ್ನು ಮೇಲಿನ ಕೈಗಳಲ್ಲಿ, ಖಡ್ಗ ಮತ್ತು ಕಪಾಲವನ್ನು ಕೆಳಗಿನ ಕೈಗಳಲ್ಲಿ ಹಿಡಿದಿದೆ. ಪೀಠದ ಮೇಲೆ ಆಸೀನವಾಗಿರುವ ದುರ್ಗಿಯ ಕೊರಳಲ್ಲಿ ನಾನಾ ಬಗೆಯ ಆಭರಣಗಳು, ಭುಜದಲ್ಲಿ ಭುಜಬಂಧ, ಕೇಯೂರಗಳಿವೆ. ಅಲ್ಲದೆ ಕೈ ಮತ್ತು ಕಾಲಿನಲ್ಲಿ ಕಡಗಗಳಿವೆ. ಉಬ್ಬಿದ ಸ್ತನಗಳು, ನೆರಿಗೆಯುಳ್ಳ ಇಳಿಬಿದ್ದ ಸೀರೆ ಕ್ರೌರ್ಯದ ರೀತಿಯ ಮುಖಭಾವ ಈ ಮೂರ್ತಿಯ ವಿಶೇಷತೆಗಳಾಗಿವೆ. ದುರ್ಗಿಯ ಭಂಗಿ ಮತ್ತು ಅಲಂಕಾರಗಳನ್ನು ಆಧಾರವಾಗಿಟ್ಟು ಕೊಂಡು ಇದು ವಿಜಯನಗರ ಕಾಲಕ್ಕೆ (ಕ್ರಿ.ಶ. ಸು. 15ನೇ ಶತಮಾನ) ಸೇರಿದ್ದೆಂದು ನಿರ್ಣಯಿಸಬಹುದಾಗಿದೆ.

11. ಕಾಳಿ ಮೂರ್ತಿ

ಬಲಗಾಲನ್ನು ರುಂಡದ ಮೇಲೆ ಊರಿ ಎಡಗಾಲನ್ನು ಮಡಚಿ ರುದ್ರಪೀಠದ ಮೇಲೆ ಆಸೀನವಾಗಿರುವ ಈ ಮೂರ್ತಿ ಇಲ್ಲಿನ ಕಾಳಿಕ ದೇವಾಲಯದ ಬಳಿ ಇದೆ. ಮೇಲಿನ ಕೈಗಳಲ್ಲಿ ಖಡ್ಗ, ಡಮರು, ಕೆಳಗಿನ ಕೈಗಳಲ್ಲಿ ತ್ರಿಶೂಲ, ಕಪಾಲವನ್ನು ಹಿಡಿದಿರುವ ಈ ಕಾಳಿ 'ರೌದ್ರ' ಮುಖಭಾವವನ್ನು ಹೊಂದಿದ್ದಾಳೆ. ಗ್ರಾನೈಟ್ ಶಿಲೆಯಲ್ಲಿ ಕೆತ್ತಲಾಗಿರುವ ಈ ಮೂರ್ತಿ ಕಿರೀಟ ಮುಖಿಯಾಗಿದ್ದು, ಕಂಠಿಹಾರ, ಅಗಲವಾದ ಕಿವಿಯೋಲೆ, ತೋಳು ಬಂಧಿ, ವಾಜೀಬಂಧ, ಬಳೆ ಹಾಗೂ ಕಟಿಬಂಧಗಳನ್ನು ಧರಿಸಿದ್ದಾಳೆ. ಕೈ ಮತ್ತು ಕಾಲುಗಳಲ್ಲಿ ಕಡಗಗಳಿದ್ದು, ಪಾದಗಳಲ್ಲಿ ಪಾದಸರಗಳಿವೆ. ನೆರಿಗೆಯುಳ್ಳ ಸೀರೆಯಿದ್ದು, ಆಕರ್ಷಕವಾಗಿದೆ. ಇದೇ ಲಕ್ಷಣವುಳ್ಳ ಕಾಳಿಕಾ ವಿಗ್ರಹಗಳು ವೀರಭದ್ರ ದೇವಾಲಯದ ಬಳಿ ಹಾಗೂ ಕೋಟೆ ಆಂಜನೇಯ ದೇವಾಲಯದ ಬಳಿ ಇವೆ. ಇವುಗಳ ಲಕ್ಷಣಗಳ ಆಧಾರದ ಮೇಲೆ ಇವು ವಿಜಯನಗರ ಕಾಲದವು (ಕ್ರಿ.ಶ. 15-16ನೇ ಶತಮಾನ)ಗಳೆಂದು ಹೇಳಬಹುದು.

ಈ ಮೇಲೆ ವಿವರಿಸಿದ ಮೂರ್ತಿಗಳಲ್ಲದೆ ನಾಗ, ಯಕ್ಷ ಯಕ್ಷಿಣಿ, ರಾಮ, ಲಕ್ಷ್ಮಣ, ಸೀತೆ (ಸುಬ್ಬಯ್ಯನವರ ಮನೆ, ಕೋಟೆ ಆಂಜನೆಯ ಗುಡಿ ಹತ್ತಿರ) ಭಗ್ನ 'ಜಿನ ತೀರ್ಥಂಕರ' (ಪಟ್ಟಾಭಿರಾಮದೇವಾಲಯದ ಆವರಣ ಮತ್ತು ಪಾಲಯ್ಯನ ಗುಡಿ ಆವರಣ) ಆಂಜನೇಯ ಮೂರ್ತಿಗಳು (ಪಟಗಿ ಶ್ರೀನಿವಾಸರಾವ್ ಮನೆ ಹತ್ತಿರ, ವೀರಭದ್ರ ದೇವಾಲಯದ ಹಿಂಭಾಗಕ್ಕೆ ಚಿಕ್ಕ ಮೂರ್ತಿಗಳು) ಹಾಗೂ ಪಾಂಡುರಂಗ (ವೀರಭದ್ರ ದೇವಾಲಯದ ಸಮೀಪದ ಅರಳಿಕಟ್ಟೆ ಮೇಲೆ) ಪಾಂಡುರಂಗ ಮತ್ತು ರುಕುಮಬಾಯಿ

(ಪಾಂಡುರಂಗ ದೇವಸ್ಥಾನ), ವೇಣುಗೋಪಾಲ, ಪ್ರಸನ್ನ ನರಸಿಂಹ (ವೇಣುಗೋಪಾಲ ದೇವಾಲಯ) ಮೂರ್ತಿಗಳು ಇವೆ.

ಚಾರಿತ್ರಿಕ ಆಕರಗಳಾಗಿರುವ ಈ ಮೂರ್ತಿಗಳು ಅಧ್ಯಯನ ಯೋಗ್ಯವಾಗಿವೆ. ಜನರ ನಿರ್ಲಕ್ಷ್ಯದಿಂದಾಗಿ ಇಲ್ಲಿನ ಮೂರ್ತಿಗಳು ತಮ್ಮ ಮೂಲ ರೂಪವನ್ನು ಕಳೆದು ಕೊಂಡಿವೆ. ಕೆಲವು ಕಡೆ ಬಣ್ಣ ಬಳಿಯಲಾಗಿದ್ದು, ಇನ್ನೂ ಕೆಲವು ಕಡೆ ಪೂಜೆಯ ಹೆಸರಿನಲ್ಲಿ ಎಣ್ಣೆ ಸುರಿಯುವ ಇಲ್ಲವೇ ಅವುಗಳ ಅಂದಗಡೆಸುವ ಪ್ರಯತ್ನ ನಡೆಯುತ್ತಿದೆ. ಇದಲ್ಲದೆ ನಿಧಿಯ ಆಸೆಗಾಗಿ ಕೆಲವು ಮೂರ್ತಿಗಳನ್ನು ಭಗ್ನಗೊಳಿಸಿರುವುದು ವಿಪರ್ಯಾಸ. ಸಾಂಸ್ಕೃತಿಕ ಇತಿಹಾಸ ರಚನೆಗೆ ಮೂಲ ಆಕರಗಳಾಗಿರುವ ಇಲ್ಲಿನ ಮೂರ್ತಿಗಳ ಸಂರಕ್ಷಣೆ ಮತ್ತು ದಾಖಲೀಕರಣ ಅಗತ್ಯವಾಗಿ ನಡೆಯಬೇಕಿದೆ.

ವಿಜಯನಗರ ಸಾಮ್ರಾಜ್ಯದ ರಾಜಧಾನಿಯ ಹೃದಯ ಭಾಗಕ್ಕೆ ಅಂಟಿಕೊಂಡಂತಿರುವ ಕಮಲಾಪುರವು ಚಾರಿತ್ರಿಕ ಕಾಲಗಳಲ್ಲಿ ತನ್ನದೇ ಆದ ಪಾತ್ರ ನಿರ್ವಹಿಸಿರುವುದನ್ನು ಇಲ್ಲಿನ ಪುರಾತತ್ತ್ವೀಯ ವಸ್ತುಗಳು ಸ್ಪಷ್ಟೀಕರಿಸುತ್ತವೆ. ಇಲ್ಲಿರುವ ಶಿಲಾ ಮೂರ್ತಿಗಳನ್ನು ಆಧಾರ ವಾಗಿಟ್ಟುಕೊಂಡು ವಿಜಯನಗರ ಕಾಲದ 'ಸಾಂಸ್ಕೃತಿಕ ಇತಿಹಾಸ'ವನ್ನು ರಚಿಸಬಹುದು.

ಅಂದು ಕಮಲಾಪುರದಲ್ಲಿ ಶೈವ, ವೈಷ್ಣವ ಧರ್ಮಗಳ ಪ್ರಾಬಲ್ಯ ಇತರ ಪಂಥಗಳಾದ ಶಾಕ್ತ, 'ಜಿನ' ಧಾರ್ಮಿಕ ಪಂಥಗಳಿಗಿಂತಲೂ ಅಧಿಕವಾಗಿತ್ತು ಎಂಬುದನ್ನು ಇಲ್ಲಿನ ದೊರೆತ ಮೂರ್ತಿಗಳ ಲಭ್ಯತೆಯ ಆಧಾರದಲ್ಲಿ ಹೇಳಬಹುದು.

ಅಲ್ಲದೆ ಇಲ್ಲಿ ದೊರೆಯುವ ಮೂರ್ತಿಗಳ ಆಧಾರದ ಮೇಲೆ ಅಂದಿನ ಸಮುದಾಯಿಕ ಜೀವನವನ್ನು ಚಿತ್ರಿಸಬಹುದು. ಲಕ್ಷ್ಮಿನರಸಿಂಹ, ವೀರಭದ್ರ, ಗಣಪತಿ, ನಂದಿ ಮೂರ್ತಿ ಗಳು ಇರುವ ಕಡೆ 'ಶಿಷ್ಟ' ಸಮುದಾಯದವರು ಇಂದು ಜೀವಿಸುತ್ತಿದ್ದಾರೆ. (ಮೇಲ್ವರ್ಗ ದವರು) ಅದೇ ರೀತಿ ಭೈರವ, ದುರ್ಗಿ, ಕಾಳಿ ಮೂರ್ತಿಗಳು ಇವರು ಕಡೆ 'ಅಶಿಷ್ಟ' ಸಮುದಾಯದವರು (ಕೆಳವರ್ಗದ/ಶ್ರಮಿಕ ವರ್ಗ) ವಾಸಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಹಿಂಸೆ ಹಾಗೂ ಕ್ರೌರ್ಯವನ್ನು ಪ್ರತಿನಿಧಿಸುವ ಕೆಲ ಸಮುದಾಯಗಳು ಅಹಿಂಸೆ ಮತ್ತು ಸೌಮ್ಯತೆಯನ್ನು ಪ್ರತಿನಿಧಿಸುವ ಇತರೆ ಸಮುದಾಯಗಳು ಆದಿಯಿಂದ ಇಂದಿನವರೆಗೆ ಪರಸ್ಪರ ವಿಭಿನ್ನ ಜೀವನ ಕ್ರಮಗಳನ್ನು ಅಳವಡಿಸಿಕೊಂಡಿರುವುದನ್ನು ಗ್ರಹಿಸಬಹು ದಾಗಿದೆ. ಅಲ್ಲದೆ ಈ ಕುರಿತು ಹೆಚ್ಚಿನ ಅಧ್ಯಯನ ನಡೆಸಬೇಕಾದ ಅವಶ್ಯಕತೆ ಇದೆ.

ಟಿಪ್ಪಣಿಗಳು

1. 1991ರ ಜನಗಣತಿ ಮತ್ತು ಪಟ್ಟಣ ಪಂಚಾಯ್ತಿ ದಾಖಲೆ
2. ಡಾ. ವಾಸುದೇವನ್, ಸಿ.ಎಸ್., 'ವಿಜಯನಗರ ಪಟ್ಟಣ ಮತ್ತು ಅದರ ಉಪ ನಗರಗಳು' 2002 ವಿಜಯನಗರ ಅಧ್ಯಯನ ಸಂ. 2, ಪು. 101
3. ಇಂಡಿಯನ್ ಆಂಟಿಕ್ವರಿ, 1889, ನಂ. 16

4. - ಅದೇ - 1904, ನಂ. 22
5. ವಸುಂಧರಾ ಫಿಲಿಯೋಜಾ 'ಅಳಿದುಳಿದ ಹಂಪೆ', 1982 ಪು. 99
6. ವೀಣಾ ಎಂ.ಪಿ. 2002, ಮನೆ ಮತ್ತು ಸಮಾಜ ಪು 22
7. ಡಾ.ಕಲ್ಬುರ್ಗಿ ಎಂ.ಎಂ. 1994, ಪು. 430
8. ಕಮಲಾಪುರದ ಅಳ್ಳಿಕೆರೆ ಸಮೀಪದ ಕನ್ನಡ ವಿಶ್ವವಿದ್ಯಾಲಯ ಆವರಣದಲ್ಲಿ ಪ್ರಾಗೈತಿಹಾಸಿಕ ಕಾಲದ ಕೆಲ ಆಯುಧೋಪಕರಣಗಳು ದೊರೆತಿವೆ. ಅಲ್ಲದೆ ಅಲ್ಲಿಯೇ ಅದೇ ಕಾಲಕ್ಕೆ ಸೇರಿದ ರೇಖಾಚಿತ್ರಗಳು, ಕುಟ್ಟು ಚಿತ್ರಗಳನ್ನು ಗುರುತಿಸಲಾಗಿದೆ.
9. ಇವುಗಳೊಂದಿಗೆ ಆಧುನಿಕವಾಗಿ ನಿರ್ಮಾಣವಾದ ಹಲವು ದೇವಾಲಯಗಳಿವೆ.
10. ಕ್ರಿ.ಶ. 15 ನೇ ಶತಮಾನದ
11. ಕೆಳಗಿನ ಎಡಗೈನಲ್ಲಿರುವ ಆಯುಧ (ವಸ್ತು) ಅಸ್ಪಷ್ಟವಾಗಿದೆ. ಬಹುಶಃ ಕಪಾಲ ಇರಬಹುದೆಂಬ ಸಂದೇಹ.
12. ಈ ಮೂರ್ತಿ ಬಲಗಾಲನ್ನು ರುಂಡದ ಮೇಲಿಟ್ಟು. ಎಡಗಾಲನ್ನು ಮಡಚಿ ಕುಳಿತಿದೆ.
13. ಕ್ರಿ.ಶ. ಸು. 16 ನೇ ಶತಮಾನ
14. ಇದು ಬಾಲಗಣಪನನ್ನು ತೋರಿಸುವ ಪ್ರಯತ್ನವೇ (?) ಎಂಬ ಸಂದೇಹವಿದೆ.
15. ಈ ಭಾಗದಲ್ಲಿ ಇಂದಿಗೂ 'ನಂದಿ'ಗಳನ್ನು (ಹೋರಿಗಳನ್ನು) ದೇವರಿಗೆ ಬಿಟ್ಟು ಅವುಗಳ ಮೈಮೇಲೆ ಈ ರೀತಿ ಶಿವಲಿಂಗದ ಗುರುತನ್ನು ಹಾಕುತ್ತಾರೆ. ಅಂದಿನಿಂದ ಅದನ್ನು 'ಪಟ್ಟದ ಬಸವ', 'ದೇವರೆತ್ತು' ಬಸವ, ನಂದಿ ಎಂದು ಕರೆಯುತ್ತಾರೆ.
16. ಕೆ.ಪಿ.ಟಿ.ಸಿ.ಎಲ್. ಹಾಗೂ ವಿರೇಶತಾತನವರ ಮಠದ ಬಳಿ ಇರುವ ನಂದಿಗಳು ಆರಂಭಿಕ ವಿಜಯನಗರ ಕಾಲಕ್ಕೆ ಸೇರಿದವುಗಳೆಂದು ಹೇಳಬಹುದು.

ಪೂರಕ ಆಕರ ಗ್ರಂಥಗಳು

1. Nailaverghese - 1995 - Religious Traditionas at Vijayanagara as Revealed Through its Movements, Monahar Pulbication New Delhi
2. - "- - 2000 - Archaeology Art and Religious New Perspectives on Vijayanagara, Oxford Universtiy Press New Delhi

3. Channabasappa S. Patil & Vinaodapatil - 1995- Inscriptions at Vijayanagara (Hampi) Vol. I Directorate of Archae ology Museums Mysore

4. George Michell - 1990 -Vijayanagara Architectural In ventory of the Urban Care Vo. I & II Directorate of Archaeology & Museams Mysore

5. ದೇವರ ಕೊಂಡ ರೆಡ್ಡಿ ಮತ್ತು ಇತರರು - 2000 - ಕನ್ನಡ ವಿ.ವಿ. ಶಾಸನ ಸಂಪುಟ - 3 ಹಂಪಿ ಶಾಸನಗಳು

6. ದೇವರಾಜ್ ಮತ್ತು ಪಾಟೀಲ್ ಸಿ.ಎಸ್. - 1997 - ವಿಜಯನಗರ ಅಧ್ಯನ ಸಂ. II ರಾಜ್ಯ ಪುರಾತತ್ವ ವಸ್ತುಸಂಗ್ರಹಾಲಯಗಳ ನಿರ್ದೇಶನಾಲಯ ಮೈಸೂರು.

7. ಡಾ. ಮಹದೇವ ಸಿ. ಮತ್ತು ಇತರರು - 2002 -ಹೊಸಪೇಟೆ ತಾಲ್ಲೂಕು ದರ್ಶನ ಪ್ರಸಾರಾಂಗ. ಕನ್ನಡ ವಿ.ವಿ.

8. ಡಾ. ರಾಜಶೇಖರ್ ಎಸ್ - 1988 -ಕರ್ನಾಟಕ ವಾಸ್ತು ಶಿಲ್ಪ ಮತ್ತು ಚಿತ್ರಕಲೆ ಸುಜಾತ ಪಬ್ಲಿಕೇಷನ್, ಧಾರವಾಡ

9. ಡಾ. ವಸುಂಧರಾ ಫಿಲಿಯೋಂಜಾ - 1982 -'ಅಳಿದುಳಿದ ಹಂಪಿ' ಮನಸೋಲ್ಲಾಸ ಪ್ರಕಾಶನ ಬೆಂಗಳೂರು

೨೩. ವಿಜಯನಗರ ಮತ್ತು ಕುರುಗೋಡಿನ ವಾಸ್ತುಶಿಲ್ಪದ ತೌಲನಿಕ ವಿಶ್ಲೇಷಣೆ

ವೈ.ಹನುಮಂತ ರೆಡ್ಡಿ

ಬಳ್ಳಾರಿ ಜಿಲ್ಲೆಯಲ್ಲಿ ಈಗ ಒಂದು ತಾಲ್ಲೂಕಿನ ಕೇಂದ್ರವಾಗಿರುವ ಕುರುಗೋಡು ಕರ್ನಾಟಕ ಇತಿಹಾಸದ ಮಧ್ಯಕಾಲದಿಂದಲೂ, ಐತಿಹಾಸಿಕ ಹಾಗೂ ಸಾಂಸ್ಕೃತಿಕ ಮಹತ್ವ ಪಡೆದ ಕ್ಷೇತ್ರವಾಗಿದೆ. ಕ್ರಿ.ಶ. 950-1200 ರವರೆಗೆ, ಇದು ಬಲ್ಲಕುಂದೆ ಮನ್ನೂರು ನಾಡಿನ ರಾಜಧಾನಿಯಾಗಿ ಮೆರೆದಿದೆ. ಈ ನಾಡು ಈಗಿನ ಬಳ್ಳಾರಿ ಜಿಲ್ಲೆಯ ಸಿರುಗುಪ್ಪ, ಬಳ್ಳಾರಿ, ಹೊಸಪೇಟೆ ಮತ್ತು ಸಂಡೂರು ತಾಲ್ಲೂಕುಗಳ ಮುನ್ನೂರು ಗ್ರಾಮಗಳನ್ನೊಳಗೊಂಡಿತ್ತು. ಈ ನಾಡನ್ನು ಸಿಂದವಂಶದ ಅರಿಬಲ್ಲದಾಗ್ರನಿಂದ 'ವೀರಕಲಿದೇವರಸ' ನವರೆಗೆ 10 ಜನ ಅರಸರು ಆಳಿ ಪ್ರಖ್ಯಾತರಾಗಿದ್ದಾರೆ.

ಬಲ್ಲಕುಂದೆ ಮುನ್ನೂರು ನಾಡನ್ನು, ಆಡಳಿತದ ದೃಷ್ಟಿಯಿಂದ ಐದು ವಿಭಾಗಗಳಾಗಿ ವಿಂಗಡಿಸಲಾಗಿತ್ತು. ದೂರವಡಿಯು, ಬಲ್ಲಕುಂದೆ ಮುನ್ನೂರು ನಾಡಿನಲ್ಲಿ ಎಪ್ಪತ್ತು ಗ್ರಾಮಗಳನ್ನೊಳಗೊಂಡ ಒಂದು ವಿಭಾಗಕ್ಕೆ ಕೇಂದ್ರಸ್ಥಾನವಾಗಿತ್ತು. ಈ ಲೇಖಕರ ಇತ್ತೀಚಿನ ಸಂಶೋಧನೆಯಿಂದ, ಸಂಡೂರು ತಾಲ್ಲೂಕಿನ 'ಹಳೇದರೋಜಿ'ಯೇ ಆಗಿನ 'ದೂರವಡಿ' ಎಂದ ಗುರ್ತಿಸಲಾಗಿದೆ. ಇದರ ಮೂಲ ಹೆಸರು 'ದ್ವಾರಾವತಿ' ಎಂದೂ, ಕಾಲಕ್ರಮದಲ್ಲಿ 'ದೂರವಡಿ', 'ದರೋಜಿ' ಎಂದು ಬದಲಾವಣೆಯಾಗಿದೆ. ಹಂಪೆಯಲ್ಲಿ 'ಮನ್ಮಥಕುಂಡ'ದ ಎದುರುಗಡೆ 'ದುರ್ಗಾಗುಡಿ'ಯಿದ್ದು, ಅದರ ಸಭಾಮಂಟಪದಲ್ಲಿ 5' ಎತ್ತರದ ಕ್ರಿ.ಶ. 1199ರ ಮಹತ್ವದ ಶಿಲಾ ಶಾಸನವಿದೆ. ಅದರಲ್ಲಿ ಕುಂತಳ ಧರೆಯಲ್ಲಿ 'ಬಲ್ಲಕುಂದೆನಾಡು' ಅದರ ರಾಜಧಾನಿ 'ಕುರುಗೋಡು', ಮತ್ತು ಇದರ ಒಂದು ವಿಭಾಗ ವಾಗಿದ್ದ 'ದೂರವಾಡಿ' ಪ್ರದೇಶದಲ್ಲಿ 'ಪಂಪಾತೀರ್ಥ'ವಿದ್ದ ಬಗ್ಗೆ ತಿಳಿಸುತ್ತದೆ. ಆ ಕಾಲ ದಲ್ಲಿ ಅಂದರೆ 12ನೇ ಶತಮಾನಕ್ಕಿಂತ ಮೊದಲೇ 'ಹಂಪೆ'ಯು ಒಂದು 'ಬ್ರಹ್ಮಪುರಿ'ಯಾಗಿ ಸುಪ್ರಸಿದ್ಧ ಪುಣ್ಯ ಕ್ಷೇತ್ರವಾಗಿತ್ತು. ಶ್ರೀ ವಿರೂಪಾಕ್ಷ ಆ ಕ್ಷೇತ್ರದ ಅಧಿದೇವತೆಯಾಗಿದ್ದು ಪ್ರಖ್ಯಾತಿ ಹೊಂದಿದ್ದ. ಆದ್ದರಿಂದ ಆ ಪುಣ್ಯ ಕ್ಷೇತ್ರವನ್ನು ರಕ್ಷಣೆ ಮಾಡುವ ಉದ್ದೇಶ ದಿಂದ, ಕುರುಗೋಡಿನ ಸಿಂದ ವಂಶದ ಕೊನೆಯ ದೊರೆ 'ವೀರಕಲಿದೇವರಸ' ತನ್ನ ಸಾಮಂತ ಮಾದೆಯನಾಯಕನನ್ನು ನೇಮಿಸಿದ್ದ. ಈ ದೊರೆಯ ತಂದೆ ಕುರುಗೋಡಿನ ಸುಪ್ರಸಿದ್ಧ ಅರಸ 'ಇಮ್ಮಡಿರಾಚಮಲ್ಲ'ನ ಸ್ಮರಣಾರ್ಥವಾಗಿ ಆತನ ಒಬ್ಬ ಅಧಿಕಾರಿ

ಹೆಗ್ಗಡೆ ರೇಚಯ್ಯನು ಒಂದು ದೇವಸ್ಥಾನವನ್ನು ನಿರ್ಮಿಸಿದ ಬಗ್ಗೆ ಅದೇ ಶಾಸನದಲ್ಲಿ ತಿಳಿಸಲಾಗಿದೆ. ದುರ್ಗಾದೇವಸ್ಥಾನದ ಎಡಕ್ಕಿರುವುದೆ ರಾಚಮಲ್ಲನ ಸ್ಮಾರಕವಾಗಿದ್ದು, ಈಗ ಈ ದೇವಸ್ಥಾನವು ಸುಸ್ಥಿತಿಯಲ್ಲಿದ್ದು, ಕುರುಗೋಡು ನಾಡು ಮತ್ತು ವಿಜಯನಗರ ಸಾಮ್ರಾಜ್ಯದ 'ಇತಿಹಾಸ ಪೂರ್ವದ ಕೊಂಡಿಯಾಗಿ' ಉಳಿದಿದೆ. ಇಂತಹ ಐತಿಹಾಸಿಕ ಮಹತ್ವದ ಸ್ಮಾರಕವನ್ನು ಪೂರಾ ನಶಿಸಿ ಹೋಗುವುದಕ್ಕೆ ಮುಂಚೆ ರಕ್ಷಿಸುವುದು ಅವಶ್ಯಕವಾಗಿದೆ.

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಮೂಲ

ಸನಾನತ ಹಿಂದೂ ಧರ್ಮ ಮತ್ತು ಸಂಸ್ಕೃತಿಗಳನ್ನು ವಿಧರ್ಮೀಯರಿಂದ ಹಾಳಾಗ ದಂತೆ ರಕ್ಷಿಸುವ ಮಹದುದ್ದೇಶದಿಂದ, ಸಂಗಮ ವಂಶದ ಹರಿಹರ, ಬುಕ್ಕರಾಯ ಸಹೋದರರು, ಆಗಲೇ ಸುಪ್ರಸಿದ್ಧವಾಗಿದ್ದ ಪಂಪಾಕ್ಷೇತ್ರದಲ್ಲಿ (ಹಂಪೆ) ಕ್ರಿ.ಶ. 1336ರಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಇವರು 'ಸಂಗಮ'ನ ಪುತ್ರ ರಾದ್ದರಿಂದ, ಈ ವಂಶಕ್ಕೆ 'ಸಂಗಮ ವಂಶ'ವೆಂಬ ಹೆಸರು ಬಂದಿದೆ. ಆದರೆ ಈ ಸಂಗಮನು ಯಾರು? ಎಲ್ಲಿಯವನು? ಈ ಬಗ್ಗೆ ಈ ವರೆಗೆ ಹೆಚ್ಚಿನ ಸಂಶೋಧನೆ ಯಾಗಿಲ್ಲ.

ವಿಜಯನಗರ ಸಾಮಾಜ್ಯ ಸ್ಥಾಪನೆಗಿಂತ ಪೂರ್ವದಲ್ಲಿ, ಕಂಪ್ಲಿ, ಆನೆಗುಂದಿ ಮತ್ತು ಕುಮ್ಮಟದುರ್ಗದಲ್ಲಿ ಮುಮ್ಮಡಿವಂಶದ ಸಿಂಗೆಯನಾಯಕ, ಆತನ ಮಗ ಕಂಪಿಲರಾಯ ಮತ್ತು ಆತನ ವೀರಪುತ್ರ ಕುಮಾರ ರಾಮ, ಇವರು ರಾಜ್ಯಭಾರ ಮಾಡಿ ಸುಪ್ರಸಿದ್ಧ ರಾಗಿದ್ದಾರೆ. 'ಸಂಗಮ' ಅಥವಾ 'ಭಾವಸಂಗಮ'ನು ಕಂಪಿಲರಾಯನ ಸಂಬಂಧಿಕನಾಗಿದ್ದು, ಆತನ ಗಣ್ಯ ಸೇನಾನಿಯಾಗಿದ್ದ. ಈತನು ಪಂಪಾಕ್ಷೇತ್ರದ ನೆರೆಹೊರೆಯವನಾಗಿದ್ದನೆಂದು ಇತಿಹಾಸ ತಜ್ಞರಾದ ಶ್ರೀ ದೀಕ್ಷಿತರು ಅಭಿಪ್ರಾಯ ಪಟ್ಟಿದ್ದಾರೆ. ಕುರುಗೋಡು ಪಕ್ಕದ ಭಟ್ಟರ ಹಳ್ಳಿಯ ಕೈಫಿಯತ್ತಿನಲ್ಲಿ, ಕುಮಾರರಾಮನಿಗೆ ಕಪ್ಪ ಕೊಡುತ್ತಿದ್ದ ಹನ್ನೊಂದು ಬೀಡಿನ ಮಾಂಡಳಿಕರಲ್ಲಿ ಒಬ್ಬರಾದ ಕುರುಗೋಡು ಸಂಗಮನ ಉಲ್ಲೇಖ ಇದೆ. ಆದ್ದರಿಂದ ಈ ಕುರುಗೋಡು ಸಂಗಮನೇ, ಸಂಗಮವಂಶದ 'ಮೂಲ ಪುರುಷ' ನಾಗಿದ್ದಾನೆಂದು, ಕನ್ನಡ ವಿಶ್ವವಿದ್ಯಾಲಯ ಪ್ರವಾಚಕ ಸಿ. ಮಹದೇವರವರು ತಮ್ಮ ಪ್ರಬಂಧದಲ್ಲಿ 'ಸಂಗಮ ಮನೆತನದ ಮೂಲನೆಲೆ 'ಕುರುಗೋಡು' ಎಂದು ಹೇಳಿದ್ದಾರೆ.

ಮೇಲಿನ ವಿಷಯಕ್ಕೆ ಪೂರಕವಾಗಿ, ಕುರುಗೋಡಿನ ಪರಿಸರವನ್ನು ವೀಕ್ಷಿಸಿದಾಗ, ನಮಗೆ ಕೆಲವು ನಿದರ್ಶನಗಳು ಕಂಡು ಬರುತ್ತದೆ.

1. ಕುರುಗೋಡಿನಲ್ಲಿ ಸುಂದರವಾದ ಸಂಗಮೇಶ್ವರ ದೇವಾಲಯವಿದ್ದು. ಅದನ್ನು ಈ ಸಂಗಮನೇ ನಿರ್ಮಿಸಿರಬೇಕೆಂದು ತೋರುತ್ತದೆ. ಆದ್ದರಿಂದ ಅದಕ್ಕೆ ನಿರ್ಮಾತೃವಿನ ಅಂದರೆ ಸಂಗಮ, ಸಂಗಮೇಶ್ವರ ಹೆಸರಿನ

ಸೂಚಕವಾಗಿ 'ಸಂಗಮೇಶ್ವರ' ದೇವಾಲಯವೆಂದು ಹೆಸರು ಬಂದಿದೆ. ಸಂಗಮವಂಶದವರು ಮೂಲತಃ ಕುರುಗೋಡಿನವರಾಗಿದ್ದು, ಹಂಪೆಯ ಪರಿಸರದವರೂ, ಅಚ್ಚ ಕನ್ನಡಿಗರೂ ಆಗಿದ್ದರಿಂದ, ಆ ಪ್ರದೇಶದ ಜನರ ಪ್ರೀತಿ, ವಿಶ್ವಾಸಗಳನ್ನು ಗಳಿಸಿ, ವಿಜನಯಗರ ಸಾಮ್ರಾಜ್ಯ ಸ್ಥಾಪನೆ ಮಾಡಲು ಸಾಧ್ಯವಾಗಿದೆ ಎಂದು ವಿದ್ವಾಂಸರ ಅಭಿಪ್ರಾಯ.

2. ಕುರುಗೋಡು ಪಟ್ಟಣದ ಸುತ್ತಲೂ ಹಲವಾರು ಬೆಟ್ಟಗಳು ಇದ್ದು, ಅವುಗಳನ್ನು ಬಳಸಿಕೊಂಡು ಸಿಂದ ವಂಶದ ಅರಸರು ರಾಜಧಾನಿಗೆ ಬಂಧುರವಾದ ಕೋಟೆಯನ್ನು ನಿರ್ಮಿಸಿದ್ದರಿಂದ ಅದೊಂದು ಅಜೇಯವಾದ 'ಗಿರಿದುರ್ಗ'ವಾಗಿತ್ತು. ಇದು ಮುಂದಿನ ಶತಮಾನಗಳಲ್ಲಿ ವಿಜಯನಗರ ಸಾಮ್ರಾಜ್ಯದ ರಾಜಧಾನಿಯನ್ನು, ಸುತ್ತಲೂ ಹಬ್ಬಿರುವ ಹಲವು ಬೆಟ್ಟಗಳೂ ಮತ್ತು ಸದಾ ಹರಿಯುತ್ತಿರುವ ನದಿ, ಮೊದಲಾದ ರಕ್ಷಣಾತ್ಮಕ ಅನುಕೂಲಗಳಿಂದ ಕೂಡಿದ ಹಂಪೆಯಲ್ಲಿ ನಿರ್ಮಿಸಲು ಕಾರಣವಾಗಿದೆ.

ಈವರೆಗೆ ಕುರುಗೋಡು ನಾಡಿನ ಮತ್ತು ವಿಜಯನಗರ ಸಾಮ್ರಾಜ್ಯ ಸ್ಥಾಪನಾ ಪೂರ್ವದ ಹಂಪೆ ಪ್ರದೇಶದ ಐತಿಹಾಸಿಕ ಮತ್ತು ಸಾಂಸ್ಕೃತಿಕ ವಿಷಯಕ್ಕೆ ಸಂಬಂಧಪಟ್ಟ ಕೆಲವು ಅಂಶಗಳ ಬಗ್ಗೆ ಅವಲೋಕನ ಮಾಡಲಾಗಿದ್ದು, ಇನ್ನು ಮುಂದೆ ಈ ಎರಡೂ ವಾಸ್ತುಶಿಲ್ಪದ ತೌಲನಾತ್ಮಕ ವಿಶ್ಲೇಷಣೆ ಮಾಡಲಾಗಿದೆ.

ಹಂಪಿ ಮತ್ತು ಕುರುಗೋಡಿನ ವಾಸ್ತು ಶಿಲ್ಪದ ಸಾಮ್ಯತೆ

ವಿಜಯನಗರ ಸಾಮ್ರಾಜ್ಯ ಸ್ಥಾಪನಾಪೂರ್ವದಲ್ಲಿ, ಸ್ಥಳೀಯವಾಗಿ, ಪ್ರಾಕೃತಿಕವಾಗಿ ಲಭ್ಯವಿರುವ ಅಖಂಡ ಬಂಡೆ, ಗುಂಡುಗಳನ್ನು (ಕಣಶಿಲೆ) ಉಪಯೋಗಿಸಿಕೊಂಡು, ಬೃಹದಾಕಾರದ, ಸುಂದರವಾದ ಹಲವಾರು ದೇವಸ್ಥಾನಗಳನ್ನು ಕುರುಗೋಡು ಮತ್ತು ಹಂಪೆಯಲ್ಲಿ ನಿರ್ಮಿಸಲಾಗಿದೆ. ಕುರುಗೋಡಿನಲ್ಲಿ ಕಲ್ಲೇಶ್ವರ, ಉಜ್ಜ್ವಾಳೇಶ್ವರ, ರಾಚಮಲ್ಲೇಶ್ವರ, ಸಂಗಮೇಶ್ವರ, ತ್ರಿಕೂಟ ಮೊದಲಾದ ದೇವಾಲಯಗಳು ಅಲ್ಲಿಯೇ ದೊರೆಯುವ ಕಣ ಶಿಲೆಯಲ್ಲಿ, ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿ ನಿರ್ಮಾಣಗೊಂಡಿವೆ. ಇಲ್ಲಿರುವ ದೇವಾಲಯಗಳಲ್ಲಿ ಕೆಲವು ಪ್ರಮುಖ ದೇವಾಲಯಗಳ ಬಗ್ಗೆ ಈ ಪ್ರಬಂಧಕ್ಕೆ ಸೀಮಿತವಾಗಿ ಚರ್ಚಿಸಲಾಗಿದೆ.

ಕುರುಗೋಡಿನಲ್ಲಿ ವಿಜಯನಗರ ಪೂರ್ವದ ವಾಸ್ತು

1. ಕಲ್ಲೇಶ್ವರ ದೇವಾಲಯ: ಈ ದೇವಾಲಯದಲ್ಲಿರುವ ಕ್ರಿ.ಶ. 1176ರ ಶಿಲಾಶಾಸದ ಪ್ರಕಾರ, ಕುರುಗೋಡು ಸಿಂದ ಅರಸ ಇಮ್ಮಡಿ ರಾಚಮಲ್ಲನ ಕಾಲದಲ್ಲಿ

ಅಲ್ಲಿಯ ವಣಿಕರಲ್ಲಿ ಒಬ್ಬನಾದ ಹಾವಿನಾಳ ಕಲ್ಲಿಶೆಟ್ಟಿಯು ನಿರ್ಮಿಸಿದ್ದು, ಅವನ ಹೆಸರಿನಿಂದಲೇ ಅದನ್ನು 'ಕಲ್ಲೇಶ್ವರ' ಎಂದು ಕರೆಯಲಾಗಿದೆ. ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖ ಮಂಟಪವನ್ನು ಒಳಗೊಂಡಿದ್ದು, ಗರ್ಭಗೃಹದ ಮೇಲೆ 'ಕದಂಬ ನಾಗರ' ಶೈಲಿಯ ಶಿಖರವನ್ನು ಹೊಂದಿದೆ. ಗರ್ಭಗೃಹದಲ್ಲಿ ಎತ್ತರದ ಶಿವಲಿಂಗ (ಕಲ್ಲೇಶ್ವರ) ಇದೆ.

2. ರಾಚಮಲ್ಲೇಶ್ವರ ದೇವಾಲಯ, 3. ಉಜ್ಜಾಳೇಶ್ವರ ದೇವಾಲಯ, 4. ತಳವಾರೆ ಈಶ್ವರ ಮತ್ತು 5. ಕಣವಿ ಈಶ್ವರ ದೇವಾಲಯಗಳು ಮೇಲೆ ತಿಳಿಸಿರುವ ಕಲ್ಲೇಶ್ವರ ದೇವಾಲಯದ ಮಾದರಿಯಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖ ಮಂಟಪಗಳನ್ನು ಹೊಂದಿದ್ದು, ಎಲ್ಲವೂ 'ಕದಂಬನಾಗರ' ಶೈಲಿಯ ಶಿಖರಗಳನ್ನು ಹೊಂದಿವೆ. ಮೇಲಿನ ಎಲ್ಲಾ ದೇವಾಲಯಗಳೂ ಪೂರ್ವಾಭಿಮುಖವಾಗಿದ್ದು ಸ್ವಲ್ಪ ಹೆಚ್ಚು ಕಡಿಮೆ ಒಂದೇ ಪ್ರಮಾಣ, ಒಂದೇ ಶೈಲಿ ಮತ್ತು ರಚನೆಯಲ್ಲಿ ಸಾಮ್ಯತೆ ಇದ್ದು, ಸುಮಾರು 12ನೇ ಶತಮಾನದ ಕೊನೆಯ ಭಾಗದಲ್ಲಿ ನಿರ್ಮಾಣಗೊಂಡಿವೆ.

ವಿಜಯನಗರದ ಪೂರ್ವದಲ್ಲಿ ಹಂಪಿಯಲ್ಲಿ ನಿರ್ಮಿಸಿದ ದೇವಾಲಯಗಳ ವಾಸ್ತು: ಮೇಲೆ ತಿಳಿಸಿದಂತೆ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗಿಂತ ಪೂರ್ವದಲ್ಲಿಯೇ, ಹಂಪಿ ಒಂದು ಪುಣ್ಯ ಕ್ಷೇತ್ರವಾಗಿತ್ತು ಮತ್ತು ಕುರುಗೋಡು ನಾಡಿಗೆ ಒಳಪಟ್ಟಿತ್ತು. ಹಂಪಿಯ ಹೇಮಕೂಟದ ಮೇಲೆ ಇರುವ ಹಲವಾರು ದೇವಾಲಯಗಳು ಈ ಕಾಲದಲ್ಲಿ ನಿರ್ಮಾಣ ಗೊಂಡಿವೆ.

ಉದಾ :
1. ಮೂಲ ವಿರೂಪಾಕ್ಷ ದೇವಾಲಯ
2. ಕಂಪಿಲರಾಯ ದೇವಾಲಯಗಳು ಮತ್ತು ಅದೇ ಸ್ಥಳದಲ್ಲಿರುವ ಇತರ ದೇವಾಲಯಗಳು
3. ಮನ್ಮಥಕುಂಡದ ಪರಿಸರದಲ್ಲಿರುವ ದೇವಾಲಯಗಳು.

ಇವುಗಳಲ್ಲಿ ಕೆಲವು ಏಕ ಕೂಟ, ದ್ವಿಕೂಟ ಮತ್ತು ತ್ರಿಕೂಟ ದೇವಸ್ಥಾನಗಳು ಆಗಿವೆ. ಇವೆಲ್ಲವೂ ಸ್ಥಳೀಯವಾಗಿ ಲಭ್ಯವಿರುವ ಕಣ ಶಿಲೆಯಲ್ಲಿ ಪೂರ್ಣವಾಗಿ ನಿರ್ಮಾಣಗೊಂಡಿದ್ದು, ಹೆಚ್ಚಿನವು ಗರ್ಭಗೃಹದ ಮೇಲೆ 'ಕದಂಬನಾಗರ' ಶೈಲಿಯ ಶಿಖರಗಳನ್ನು ಹೊಂದಿವೆ. ಇವು ಹೆಚ್ಚಿನ ರೀತಿಯಲ್ಲಿ ಮೇಲೆ ತಿಳಿಸಿರುವ ಕುರುಗೋಡಿನ ದೇವಾಲಯದ ಶೈಲಿಯಲ್ಲಿ ಅಂದರೆ ಕಲ್ಯಾಣ ಚಾಲುಕ್ಯರ ಶೈಲಿ ಮತ್ತು ಅದೇ ಕಾಲದಲ್ಲಿ ನಿರ್ಮಾಣಗೊಂಡಿದ್ದು ಸಾಮ್ಯತೆ ಹೊಂದಿವೆ. ದೇವಾಲಯಗಳ ಈ ತರದ ರಚನಾ ಕಲೆ ಕುರುಗೋಡಿನಿಂದ ಹಂಪೆಗೆ ಸಾಗಿ ಬಂದು, ವಿಜಯನಗರ ಪೂರ್ವದ ವಾಸ್ತು ಶಿಲ್ಪದ ಮೇಲೆ ಪ್ರಭಾವ ಬೀರಿರುವಂತೆ ತೋರುತ್ತದೆ.

ಕಲ್ಯಾಣ ಚಾಲುಕ್ಯ ಮತ್ತು ವಿಜಯನಗರದ ವಾಸ್ತುಗಳ ಜೋಡಣೆ

ಹಿಂಡುಲಿ ಸಂಗಮೇಶ್ವರ ದೇವಾಲಯ: ಇದು ಕುರುಗೋಡಿನಲ್ಲಿರುವ ದೇವಾಲಯಗಳಲ್ಲೇ ಪ್ರಮುಖವಾದದು, ಉತ್ತರಾಭಿಮುಖವಾಗಿದ್ದು, ಗರ್ಭಗೃಹ, ಅಂತರಾಳ ಮತ್ತು ವಿಶಾಲವಾದ ನವರಂಗ ಮತ್ತು ಮುಖ ಮಂಟಪವನ್ನು ಹೊಂದಿವೆ. ಗರ್ಭಗೃಹದ ಮೇಲೆ 'ಕದಂಬನಾಗರ' ಶೈಲಿಯ ಶಿಖರವಿದ್ದು, ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿ ನಿರ್ಮಿತವಾಗಿದೆ. ಗರ್ಭಗೃಹದಲ್ಲಿದ್ದ ಪ್ರಾಚೀನ ಶಿವಲಿಂಗವನ್ನು ಸುಮಾರು ಐವತ್ತು ಅರವತ್ತು ವರ್ಷಗಳ ಹಿಂದೆ ಕಿತ್ತುಹಾಕಲಾಗಿತ್ತು. ಕ್ರಿ.ಶ. 1976ರಲ್ಲಿ ಪುನಃಲಿಂಗ ಪ್ರತಿಷ್ಠಾಪನೆಯನ್ನು ಸ್ಥಳೀಯರ ನೆರವಿನಿಂದ ಮಾಡಲಾಯಿತು. ಕನ್ನಡ ವಿಶ್ವವಿದ್ಯಾಲಯದ ರಮೇಶ ನಾಯ್ಕರು ಈ ದೇವಾಲಯದ ರಚನಾ ಶೈಲಿಯನ್ನು ಗಮನಿಸಿ, ಕ್ರಿ.ಶ. 14ನೇ ಶತಮಾನದ ಪೂರ್ವಾರ್ಧದಲ್ಲಿ ರಚಿಸಲಾಗಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಅವರ ಊಹೆ ಸರಿಯೆಂದು ಕಾಣುತ್ತದೆ. ಈ ಪ್ರಬಂಧದ ಪ್ರಾರಂಭದಲ್ಲಿ ವಿಜಯನಗರ ಸ್ಥಾಪನೆಗೆ ಮೂಲ ಕುರಿತು ತಿಳಿಸುವ ಸಂದರ್ಭದಲ್ಲಿ ಕುರುಗೋಡು ಸಂಗಮನ ಬಗ್ಗೆ ಮಾಡಿದ ಪ್ರಸ್ತಾಪದಲ್ಲಿ, ಆತನು ಈ ಸಂಗಮೇಶ್ವರ ದೇವಾಲಯವನ್ನು ನಿರ್ಮಿಸಿರುವ ಬಗ್ಗೆ ತಿಳಿಸಲಾಗಿದೆ. ಆತನು ಕ್ರಿ.ಶ. 14ನೇ ಶತಮಾನದ ಪ್ರಾರಂಭದಲ್ಲಿ ಜೀವಿಸಿದ್ದು, ಈ ದೇವಸ್ಥಾನದ ನಿರ್ಮಾಣದ ಕಾಲಕ್ಕೆ ಸರಿಹೊಂದುತ್ತದೆ. ಈ ದೇವಸ್ಥಾನ ವಾಸ್ತುವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಇದು ಮೊದಲು ಗರ್ಭಗೃಹ, ಅಂತರಾಳ ಮತ್ತು ಐದು ಅಂಕಣಗಳ ನವರಂಗವನ್ನು ಹೊಂದಿದ್ದು, ವಿಜಯನಗರದ ಸಂಗಮರ ಆಳ್ವಿಕೆಯ ಪ್ರಾರಂಭದ ಕಾಲದಲ್ಲಿ ನವರಂಗಕ್ಕೆ ಎರಡು ಬದಿಯಲ್ಲಿ ಒಂದೊಂದು ಅಂಕಣವನ್ನು ಮತ್ತು ಪ್ರದಕ್ಷಣಾ ಪಥವನ್ನು ನಿರ್ಮಿಸಿರುವುದು ಕಂಡುಬರುತ್ತದೆ. ಕುರುಗೋಡಿನಲ್ಲಿ ಸಂಗಮೇಶ್ವರ ದೇವಾಲಯವನ್ನು ಹೊರ್ತು ಪಡಿಸಿ, ಬೇರಾವ ದೇವಾಲಯಕ್ಕೂ ಪ್ರದಕ್ಷಣಾ ಪಥವನ್ನು ನಿರ್ಮಿಸಿರುವುದಿಲ್ಲ. ಇದೇ ರೀತಿಯ ಪ್ರದಕ್ಷಣಾ ಪಥಗಳ ನಿರ್ಮಾಣ, ಸಂಗಮರ ಕಾಲದಲ್ಲಿ ಹಂಪಿಯ ವಿಜಯವಿಠಲ, ಹಜಾರರಾಮ, ಬಾಲಕೃಷ್ಣ ದೇವಾಲಯಗಳಲ್ಲಿ ಹಾಗೂ ಹೊಸಪೇಟೆಯ ದಕ್ಷಿಣಕ್ಕೆ ಗುಡ್ಡದ ಮೇಲಿರುವ ಜಂಬುನಾಥ ದೇವಾಲಯಗಳಲ್ಲಿ ಮುಂದುವರಿದಿದೆ. ಈ ದೃಷ್ಟಿಯಿಂದಲೂ ಕುರುಗೋಡು ಮತ್ತು ವಿಜಯನಗರದ ದೇವಾಲಯಗಳ ಶೈಲಿಯಲ್ಲಿ ಸಾಮ್ಯತೆಯ ಅಂಶಗಳು ಸ್ಪಷ್ಟವಾಗಿ ಗೋಚರಿಸುತ್ತವೆ ಮತ್ತು ಒಂದಕ್ಕೊಂದು ಜೋಡಣೆಯಾಗಿದೆ.

ಕುರುಗೋಡಿನಲ್ಲಿ ವಿಜಯನಗರದ ಕಾಲದ ವಾಸ್ತು

1. ದೊಡ್ಡ ಬಸವೇಶ್ವರ ದೇವಸ್ಥಾನ : ಇದು ವಿಶಾಲವಾದ ಗರ್ಭಗೃಹ, ಚಿಕ್ಕದಾದ ಅಂತರಾಳ ಹಾಗೂ ವಿಸ್ತಾರವಾದ ಸಭಾಮಂಟಪವನ್ನು ಹೊಂದಿದ್ದು, ಪಶ್ಚಿಮಾಭಿಮುಖ

ವಾಗಿದೆ. ಗರ್ಭಗೃಹದಲ್ಲಿ ಸುಮಾರು 14 ಅಡಿ ಎತ್ತರವಾದ ಬೃಹದಾಕಾರದ ಅಖಂಡ ನಂದಿ ವಿಗ್ರಹ ವಿದೆ. ಇದರ ಗಾತ್ರಕ್ಕೆ ಅನುಗುಣವಾಗಿ ಇದನ್ನು 'ದೊಡ್ಡಬಸವೇಶ್ವರ' ನೆಂದು ಕರೆಯುತ್ತಿದ್ದಾರೆ. ಗರ್ಭಗೃಹದ ಬಾಗಿಲವಾಡದ ಕೆಳಗಡೆ ಶೈವ ದ್ವಾರಪಾಲಕರ ಉಬ್ಬು ಶಿಲ್ಪಗಳೂ, ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವೂ ಇವೆ. ಅಂತರಾಳವು ಚಿಕ್ಕದಾಗಿದ್ದು ಎರಡು ಸರಳವಾದ ರಚನೆಯ ಕಂಬಗಳಿಂದ ಕೂಡಿವೆ. ಸಭಾ ಮಂಟಪದ ಮಧ್ಯದ ಹನ್ನೆರಡು ಸ್ತಂಭಗಳು ಕೆಳಗಡೆ ಆನೆ, ಅವುಗಳ ಮೇಲೆ ಕಾಲೆತ್ತಿ ನಿಂತ ಸಿಂಹ (ಯಾಳಿ) ಗಳು ಹಾಗೂ ಮೇಲಿನ ಭಾಗದಲ್ಲಿ ಇಳಿಬಿಟ್ಟ ಪುಷ್ಪಬೋಧಿಗೆಗಳಿಂದ ಅಲಂಕೃತ ವಾಗಿದ್ದು, ಉಳಿದ ಸ್ತಂಭಗಳು ಸರಳವಾದ ರಚನೆಯಿಂದ ನಿರ್ಮಿತವಾಗಿದೆ. ಸುತ್ತಲೂ ವಿಶಾಲವಾದ ಎತ್ತರವಾದ ಪ್ರಕಾರದ ಗೋಡೆಗೆ ಉತ್ತರ, ದಕ್ಷಿಣ ಹಾಗೂ ಪಶ್ಚಿಮ ದಿಕ್ಕಿನಲ್ಲಿ ದ್ವಾರಗಳಿವೆ. ಪಶ್ಚಿಮದ ಮಹಾದ್ವಾರದ ಮೇಲೆ ಐದು ತಲಗಳ ಗಾರೆ, ಇಟ್ಟಿಗೆಗಳಿಂದ ನಿರ್ಮಾಣವಾದ ಗೋಪುರ ವಿಜಯನಗರ ಶೈಲಿಯಲ್ಲಿದೆ. ಹಂಪೆ ವಿರೂ ಪಾಕ್ಷನಿಗೆ ಅಭಿಮುಖವಾಗಿರುವ ಈ ದೊಡ್ಡಬಸವಣ್ಣನನ್ನು ಆತನಿಗೆ ಎದುರು ಬಸವಣ್ಣ ನೆಂದು ಕರೆಯುತ್ತಿರುವ ಬಗ್ಗೆ ಹಲವು ಆಧಾರಗಳ ಸಹಿತ ಪ್ರಬಂಧದಲ್ಲಿ, ನಾನು ಹಿಂದಿನ ವರ್ಷ ಇಲ್ಲೆ ಜರುಗಿದ ವಿಚಾರ ಸಂಕೀರ್ಣದಲ್ಲಿ ಪ್ರಸ್ತಾಪಿಸಿದ್ದೇನೆ. ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದಾಗ ಇದು ವಿಜಯನಗರದ ಶೈಲಿಯಲ್ಲಿ ರಚನೆಯಾಗಿದೆ ಎಂದು ಸ್ಪಷ್ಟವಾಗಿ ಹೇಳಬಹುದು.

2. ವಜ್ರಬಂಡಿ ಬಸಪ್ಪ ದೇವಸ್ಥಾನ: ಇದು ಕುರುಗೋಡು - ಮುಷ್ಟಗಟ್ಟ ರಸ್ತೆಯ ಪಕ್ಕದಲ್ಲಿ ಬೆಟ್ಟದ ಬುಡದಲ್ಲಿ ಇದೆ. 'ವಜ್ರಬಂಡಿ' ಶಿಲಾಸಮೂಹದಲ್ಲಿ ಇದನ್ನು ನಿರ್ಮಿಸಿರುವುದು ಸಹಜವಾಗಿ 'ವಜ್ರದುಂಡಿ', 'ವಜ್ರಬಂಡಿ' ಎಂದು ಕರೆದಿರುವ ಸಾಧ್ಯತೆ ಇದೆ ಎಂದು ದಿವಂಗತ ಬಾಲಸುಬ್ರಮಣ್ಯರವರು ಅಭಿಪ್ರಾಯ ಪಟ್ಟಿದ್ದಾರೆ. ಇದು ಗರ್ಭಗೃಹ ಮತ್ತು ಹಜಾರವನ್ನು ಹೊಂದಿದ್ದು ಬಹಳ ಸರಳ ರಚನೆಯದ್ದಾಗಿದೆ. ಗರ್ಭಗೃಹದಲ್ಲಿ ಅಲ್ಲಿಯೇ ಇದ್ದ ಉದ್ಭವ ಶಿಲೆಯಲ್ಲಿ 6' ಉದ್ದ 5'ಎತ್ತರದ ದೊಡ್ಡದಾದ ನಂದಿ ವಿಗ್ರಹ ಇದ್ದು ಇದು ಕೂಡ ಪಶ್ಚಿಮಾಭಿಮುಖವಾಗಿದೆ. ಇಂಥಾ ಉದ್ಭವ ನಂದಿ ವಿಗ್ರಹವನ್ನು 2005ರ ಜುಲೈ ತಿಂಗಳಲ್ಲಿ ನಿಧಿಚೋರರು 3 ತುಂಡುಗಳಾಗಿ ಹೊಡೆದು ಉರುಳಿಸಿದ್ದರು. ಈ ಬಗ್ಗೆ ನಾನು ಮತ್ತು ಸ್ಥಳೀಯರು ಪತ್ರಿಕೆಯಲ್ಲಿ ಪೋಟೋ ಸಹಿತ ಪ್ರಕಟಿಸಿದ್ದಲ್ಲದೆ, ರಸ್ತೆ ತಡೆ ಚಳವಳಿಯನ್ನು ನಡೆಸಿ, ಇಂತಹ ದುಷ್ಕೃತ್ಯಗಳನ್ನು ತಡೆಯಬೇಕೆಂದು ಆಗ್ರಹಿಸಿದ್ದೆವು. ಶ್ರಾವಣ 3ನೇ ಸೋಮವಾರ, ಪ್ರತಿ ವರ್ಷ ಅಲ್ಲಿ ಜರಗುವ ಉತ್ಸವದಲ್ಲಿ ಹಲವಾರು ಗ್ರಾಮಗಳ ಭಕ್ತರು ಸೇರಿ ಆಚರಿಸುವುದು ಈಗಲೂ ಜರಗುತ್ತಿದೆ. ಆದ್ದರಿಂದ ಆ ಸಮಯಕ್ಕೆ ಮುಂಚೆ ಹೊಡೆದು ತುಂಡಾಗಿದ್ದ ಮೂರ್ತಿ ಶಿಲ್ಪವನ್ನು ಶಿಲಾರಸಾಯನದಿಂದ ಮೊದಲಿನಂತೆ ಜೋಡಿಸುವ ಕಾರ್ಯವನ್ನು ಅನುಭವಿಕ ಕೆಲಸಗಾರರು ಮಾಡಿ, ಮೂರ್ತಿಗೆ ಮರು ಜನ್ಮ ನೀಡಿದ್ದಾರೆ.

ಕಲಾತ್ಮಕ ಪ್ರಯೋಗಗಳಿಗೆ ನಿದರ್ಶನವಾಗಿರುವ ಕುರುಗೋಡಿನ ದೇವಾಲಯಗಳು ಕನ್ನಡನಾಡಿನ ಪ್ರಾಚೀನ ಕಲಾ ಇತಿಹಾಸದಲ್ಲಿ ಅಲ್ಲಲ್ಲಿ ಕಳಚಿ ಹೋಗಿರುವ ಕೊಂಡಿಗಳನ್ನು ಮರುಜೋಡಿಸಲು ಸಹಕಾರಿಯಾಗಿದೆ. ಉದಾಹರಣೆಗೆ ಕಲ್ಯಾಣ ಚಾಲುಕ್ಯರ ಹಾಗೂ ವಿಜಯನಗರದ ಕಲಾ ಶೈಲಿಗಳ ಮಧ್ಯವರ್ತಿಗಳಾಗಿ ಇಲ್ಲಿನ ಕಲಾರಚನೆಗಳು ನಿಶ್ಚಿತವಾದ ಪಾತ್ರವಹಿಸುತ್ತವೆ ಎಂದು ಹೇಳಲಾಗುತ್ತದೆ.

ಇಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದದು 2 ಅಂಶಗಳು

1. ಸಿಂದ ಅರಸರ ಕಾಲದಲ್ಲಿ ಕುರುಗೋಡಿನಲ್ಲಿ ನಿರ್ಮಿಸಲಾದ ದೇವಾಲಯಗಳ, ಕಲ್ಯಾಣ ಚಾಲುಕ್ಯರ ರಚನಾ ಶೈಲಿಯ ಪ್ರಭಾವವು ವಿಜಯನಗರದ ಪೂರ್ವದಲ್ಲಿ ಹಂಪೆಯಲ್ಲಿ ನಿರ್ಮಿತವಾದ ದೇವಾಲಯಗಳ ಮೇಲೆ ಬೀರಿದೆ.
2. ಅದೇ ರೀತಿ ವಿಜಯನಗರದ ಸ್ಥಾಪನೆಯ ನಂತರ ಅದರ ರಚನಾ ಶೈಲಿಯು ಅಂದರೆ ವಿಜಯನಗರ ಶೈಲಿಯು ಕುರುಗೋಡಿನಲ್ಲಿ ಈ ಕಾಲದಲ್ಲಿ ನಿರ್ಮಿತವಾದ ವಾಸ್ತು ಶಿಲ್ಪದ ಮೇಲೆ ಪ್ರಭಾವಿತವಾಗಿದೆ. ಹೀಗೆ ಉದಾತ್ತವಾದ ಸಾಂಸ್ಕೃತಿಕ ಸಂಬಂಧಗಳು ಪರಸ್ಪರ ಸಮ್ಮಿಳಿತಗೊಂಡು ಬೆಳೆದು ಬಂದಿರುವುದು ಒಂದು ಮಹತ್ವಪೂರ್ಣ ಅಂಶವಾಗಿದ್ದು ಇತಿಹಾಸದ ಪುಟಗಳಲ್ಲಿ ಅವಶ್ಯಕವಾಗಿ ದಾಖಲಾಗಬೇಕಾಗಿದೆ.


೨೪. ವಿಜಯನಗರದ ಶಿಲ್ಪದಲ್ಲಿ ಮಲ್ಲವಿದ್ಯೆಯ ಪಟ್ಟುಗಳು

ಶ್ರೀ ಚಂದ್ರಶೇಖರ. ವಿ. ಡಾವಣಗೇರಿ


ವಿಜಯನಗರದ ಸಂಸ್ಕೃತಿ, ಧಾರ್ಮಿಕ, ಆರ್ಥಿಕ, ಸಾಮಾಜಿಕ ಜೀವನದ ಚಿತ್ರಣ ವನ್ನು ವಿಜಯನಗರ ಶಿಲ್ಪಿಗಳು ಸುಂದರವಾಗಿ ತಮ್ಮ ಶಿಲ್ಪ ಕಲೆಯಲ್ಲಿ ಬಿಂಬಿಸಿರುತ್ತಾರೆ. ಅಂಥಹ ಅವರ ಶಿಲ್ಪದಲ್ಲಿ " ಮಲ್ಲ ವಿದ್ಯೆಯ ಪಟ್ಟುಗಳು" ಅತ್ಯಂತ ಮಹತ್ವದ್ದಾಗಿವೆ, ಮಲ್ಲರ ಶಾರೀರಿಕ ಲಕ್ಷಣ, ಶಕ್ತಿವೃದ್ಧಿಗಾಗಿ ಕೈಗೊಂಡ ಚಟುವಟಿಕೆಗಳು ದಮ್ಮು ಮುರಿಯುವ ಹಾಗೂ ವಿವಿಧ ಪಟ್ಟಿಗಳ ಅಭಿವ್ಯಕ್ತ ಶಿಲ್ಪಗಳು ಮಲ್ಲರ ಜೀವನ ಕ್ರಮಗಳನ್ನು ಜೀವಂತವಾಗಿರಿಸಿರುತ್ತವೆ. ಮಲ್ಲರ ವಿದ್ಯೆಯ ಬಗ್ಗೆ ಶಿಲ್ಪಗಳಲ್ಲಿ ಇರುವ ಅನುಭವ, ಜ್ಞಾನ, ಅವರ ಹಾವ-ಭಾವ ಭಂಗಿಗಳ ಕಲ್ಪನೆ ಅತ್ಯಂತ ಪ್ರೌಢವಾಗಿವೆ.

ಮಲ್ಲ ವಿದ್ಯೆಯು ಭಾರತದ ಅತೀ ಪ್ರಾಚೀನ ವಿದ್ಯೆಯಲ್ಲೊಂದಾಗಿದೆ. ಅಂದು ಮಲ್ಲರ ಬಗೆಗಿರುವ ಪ್ರಾಮುಖ್ಯತೆ ಈ ವಿದ್ಯೆಯನ್ನು ಪ್ರೋತ್ಸಾಹಿಸಿ ಸನ್ಮಾನವನ್ನು ನೀಡಿ ಗೌರವಿಸಲಾಗುತ್ತಿತ್ತು. ಈ ಮಲ್ಲ ವಿದ್ಯೆಯ ಪ್ರದರ್ಶನ ನಾಗರೀಕ ಮನೋರಂಜನೆಯ ಸಾಧನೆಗಳಲ್ಲಿ ಒಂದಾಗಿತ್ತು. ಈ ಮಲ್ಲ ವಿದ್ಯೆಯ ಬಗ್ಗೆ ರಾಮಾಯಣ, ಮಹಾಭಾರತ ಕಾಲದಲ್ಲಿ ಹಾಗೂ ಭಾಗವತ (1-0-42-44) ರಲ್ಲಿ ಉಲ್ಲೇಖವಿರುವುದನ್ನು ಕಾಣುತ್ತೇವೆ, ರಾಮಾಯಣದಲ್ಲಿ ಹನುಮಂತ, ವಾಲಿ, ಸುಗ್ರೀವ ಮಹಾಭಾರತದಲ್ಲಿಯ ವಿರಾಟಪರ್ವ (12ನೇಯ ಅಧ್ಯಾಯ) ದಲ್ಲಿ ಭೀಮ- ಜಿಮುತನೆಂಬ ಮಲ್ಲನ ಕುಸ್ತಿ, ಶ್ರೀ ಕೃಷ್ಣ- ಜಾಂಬುವಂತರ ಕಾಳಗ, ಪ್ರಾಚೀನ ಭಾರತದಲ್ಲಿ ಲಭ್ಯವಾಗುವ ಮಲ್ಲವಿದ್ಯೆಯ ದೃಷ್ಟಾಂತಗಳು. ರಾಮಾಯಣ ಕಾಲದಲ್ಲಿ ಈ ವಿಜಯನಗರ ವ್ಯಾಪ್ತಿಯ ಪ್ರದೇಶಕ್ಕೆ "ಕಿಷ್ಕಿಂಧ" ವೆಂದು ಕರೆಯಲಾಗುತ್ತಿತ್ತು. ವಾನರ ರಾಜರಾದ ವಾಲಿ- ಸುಗ್ರೀವರ ಮಧ್ಯೆ ನಡೆದ ಮಲ್ಲ ಯುದ್ಧದ ಶಿಲ್ಪದ ಚಿತ್ರಣವನ್ನು ಹಜಾರ ರಾಮಚಂದ್ರ ಹಾಗೂ ಶ್ರೀ ಕೃಷ್ಣ ದೇವಾಲಯಗಳಲ್ಲಿ ಕಾಣಬಹುದು.

ಮಲ್ಲರನ್ನು ಜಟ್ಟಿಗಳು, ಫೈಲವಾನರು, ಕುಸ್ತಿ ಪಟುಗಳು ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತಿದ್ದು ನೋಡಲು ಸಧೃಡಕಾಯ, ಬಿಗಿಯಾದ ಚಡ್ಡಿ ಧರಿಸಿದ ವ್ಯಕ್ತಿತ್ವದ ಮಲ್ಲರು ನೋಡಲು ತುಂಬಾ ಆಕರ್ಷಕವಾಗಿ ಕಾಣುತ್ತಾರೆ. ಈ ಮಲ್ಲರಿಗೆ ಸಧೃಡವಾದ ಕಾಯವೊಂದೆ ಮುಖ್ಯ ಗುಣವಲ್ಲ. ಇದರೊಂದಿಗೆ ಶಕ್ತಿ, ದಮ್ಮು ರಸ್ತುಂ ಪಟ್ಟು ಅಥವಾ ಡಾವ್‌ಪೇಚ್, ಚತುರತೆ ಹೊಂದಿರಬೇಕಾಗುತ್ತದೆ. ಈ ಎಲ್ಲ ಲಕ್ಷಣಗಳನ್ನು ಹೊಂದಿ



ರುವ ವಿಜಯನಗರ ಶಿಲ್ಪಗಳ ಶಿಲ್ಪವು ಮಲ್ಲ ವಿದ್ಯೆಯ ಸ್ಪಷ್ಟವಾದ ಜೀವಂತಿಕೆ ಹೊಂದಿದ ಶಿಲ್ಪದ ಅಭಿವ್ಯಕ್ತಿಯನ್ನು ಒಳಗೊಂಡಿದೆ, ವಿಜಯನಗರದ ಅರಸರು ಮಲ್ಲವಿದ್ಯೆಗೆ ಅತ್ಯಂತ ಪ್ರೋತ್ಸಾಹ ನೀಡಿದ್ದರು. ಸ್ವತಹಃ ಅರಸರೇ ಮಲ್ಲವಿದ್ಯೆಯಲ್ಲಿ ಪರಿಣತಿ ಹೊಂದಿದ್ದರು. ಈ ವಿದ್ಯೆಯಿಂದ ವ್ಯಕ್ತಿಗಳಲ್ಲಿ ಸುಂದರ ಸದೃಢಕಾಯ, ಧೈರ್ಯ, ಸ್ಥೈರ್ಯ, ಸಾಹಸ, ಶಕ್ತಿ ಹಾಗೂ ಆತ್ಮ ವಿಶ್ವಾಸ ಹೆಚ್ಚಿಸಿ ಸದೃಢ ಚಿತ್ತದ ಮನಸ್ಸು ಬೆಳೆಯಲು ಕಾರಣವಾಗುತ್ತದೆ. ಈ ಕಾರಣಕ್ಕಾಗಿಯೇ ವಿಜಯನಗರದ ಅರಸರು ಮಲ್ಲ ವಿದ್ಯೆಯ ಬಲ್ಲವರಾಗಿರುತ್ತಿದ್ದರು, ಮಲ್ಲ ವಿದ್ಯೆಯ ಪ್ರದರ್ಶನಕ್ಕೆ ಬೇಕಾದ ಅಖಾಡ ಗಳನ್ನು ಮಹಾನವಮಿ ದಿಬ್ಬ, ಕಮಲ್‌ಮಹಲ್ ಹತ್ತಿರ, ಕೋಟೆ ಶಂಕರ ಲಿಂಗ ಬಾಗಿಲ ಅಖಾಡಗಳು ಇತ್ಯಾದಿಗಳು ಸಾಕ್ಷಿಯಾಗಿ ನಿಂತಿವೆ.



ಪ್ರತಿವರ್ಷ ದಸರ ಮಹೋತ್ಸವದಂದು ಮಹಾನವಮಿ ದಿಬ್ಬದಲ್ಲಿ ನಡೆಯುವ ಕಾರ್ಯಕ್ರಮ, ಮಲ್ಲವಿದ್ಯೆಯ ಪ್ರದರ್ಶನಕ್ಕೆ ಅಖಾಡವಾಗಿರುತ್ತಿದ್ದು ಈ ಸಂದರ್ಭದಲ್ಲಿ ಹೆಸರಾಂತ ಮಲ್ಲರ ಮಧ್ಯೆ "ಕುಸ್ತಿ ಪಂದ್ಯ" ಏರ್ಪಡುತ್ತಿತ್ತು. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನಲ್ಲಿರುವ ನಾಯಕನಹಟ್ಟಿ ಪಾಳೆ ಪಟ್ಟನ್ನು ಆಳಿದ ಪಾಳೆಗಾರರಲ್ಲಿ ಶ್ರೀ ಮಲ್ಲಪ್ಪನಾಯಕ ಅತ್ಯಂತ ಬಲಿಷ್ಠನಾಗಿದ್ದನು, ಮಲ್ಲಪ್ಪನಾಯಕನು, ಶ್ರೀ ಗುರು ತಿಪ್ಪೇರುದ್ರಸ್ವಾಮಿಗಳ ಆಶೀರ್ವಾದ ಪಡೆದು ರಾಮರಾಯನ ಕಾಲಕ್ಕೆ ವಿಜಯನಗರಕ್ಕೆ ಬಂದು ಮಲ್ಲವಿದ್ಯೆಯ ಪ್ರದರ್ಶನದಲ್ಲಿ ಭಾಗವಹಿಸಿ ವಿಜಯನಗರದ ಜಟ್ಟಿಗಳಾದ ರಾಮಜಟ್ಟಿ, ಭೀಮಜಟ್ಟಿ ಎಂಬ ಇಬ್ಬರು ಜಟ್ಟಿ ಗಳನ್ನು ಸೋಲಿಸಿ ಏಳು ಕೊಪ್ಪರಿಗೆ ಹೊನ್ನವನ್ನು ಬಹುಮಾನವಾಗಿ ಪಡೆದು ನಾಯಕನ ಹಟ್ಟಿ ತನ್ನ ಪಾಳೆ ಪಟ್ಟನಲ್ಲಿ ೭ ಕೆರೆಗಳನ್ನು ಕಟ್ಟಿಸಿ, ರಾಮಜಟ್ಟಿ, ಭೀಮಜಟ್ಟಿಯ ಹೆಸರನ್ನು ಆ ಕೆರೆಗೆ ಇಟ್ಟನೆಂಬ ಪ್ರತೀತಿಯು ಹಾಗೂ ಆ ಹೆಸರುಗಳಿಂದ ಕರೆಯುವಕೆರೆಗಳನ್ನು ಈಗಲೂ ನೋಡುತ್ತೇವೆ.

ಇನ್ನೊಂದು ಉಲ್ಲೇಖದಲ್ಲಿ ವಿಜಯನಗರದ ಅರಸರ ಆಶ್ರಯದಲ್ಲಿದ್ದ ವೆಂಕಟಗಿರಿ ಜಟ್ಟಿ ಎಂಬುವ ಶಾಸ್ತ್ರವಿದ್ಯಾ ನಿಪುಣ, ದುರ್ಗದ ದೊರೆಗಳ ಆಶ್ರಯ ಕೋರಿಬರುತ್ತಾನೆ. ಇವನು ಅಸ್ತ್ರ, ಶಸ್ತ್ರಾಭ್ಯಾಸ, ಕುಸ್ತಿ ರಾಜದರ್ಬಾರುಗಳನ್ನೆಲ್ಲಾ ಸುವ್ಯವಸ್ಥೆಗೊಳಿಸಿದ ಈತನ ವಂಶಜ ಜಟ್ಟಿಗಳು ದುರ್ಗದ ಪತನದವರೆಗೂ, ದುರ್ಗದ ಗರಡಿಗಳ ಮುಖ್ಯಸ್ಥರಾಗಿದ್ದಾರೆಂದು ಹೇಳಿಕೆ ಇದೆ.

ಶಕ್ತಿ ವೃದ್ಧಿಯ ಮಲ್ಲರ ಕಸರತ್ತುಗಳು

ಮಲ್ಲರು ವಿವಿಧ ಆಕಾರದ ತೂಕದ ಕಲ್ಲು ಗುಂಡುಗಳನ್ನು ಇಲ್ಲವೆ ತುಂಬಿದ ಚೀಲಗಳನ್ನು ಇಲ್ಲವೆ ಬಾವಿಗೆ ಹಾಕಿದ ತುಂಬಿದ ಏತವನ್ನು, ಇಲ್ಲವೆ ಕಬ್ಬಿಣದ ನೇಗಿಲು ಎಳೆಯುವ ಎತ್ತುವ ಮೂಲಕ ಇಲ್ಲವೆ ವಿವಿಧ ಡಂಬಲ್ಸ್‌ಗಳಿಂದ ಧೀರ್ಘ ಲೋಢನ್ನು ಮೂಗಿನ ನೇರಕ್ಕೆ ತಂದು ನಿಲ್ಲಿಸಿಕೊಳ್ಳುವ ಇದರಿಂದ ಮುಂಗೈಗೆ ಅಸಾಧಾರಣವಾದ ಶಕ್ತಿ ಸಂಚಯವಾಗುತ್ತದೆ. ಹಜಾರರಾಮ ದೇವಸ್ಥಾನದ ಶಿಲ್ಪವೊಂದರಲ್ಲಿ ಮಲ್ಲ ನೊಬ್ಬ ಗುಂಡನ್ನು ಎತ್ತುತ್ತಿರುವುದನ್ನು ತೋರಿಸುವ ಶಿಲ್ಪವಿದೆ. ಶ್ರೀ ವಿರೂಪಾಕ್ಷ ದೇವಾಲಯದ ಕನಕಗಿರಿ ಗೋಪುರದ ಮುಂದಿರುವ ಶಂಕರಲಿಂಗ ಸ್ವಾಮಿ ದೇವಸ್ಥಾನದ ಕಂಬದಲ್ಲಿರುವ ಹಾಗೂ ದೇವಾಲಯದ ಆವರಣದಲ್ಲಿರುವ ಕಂಬದ ಶಿಲ್ಪದಲ್ಲಿ ನೋಡಬಹುದು.



ಕುಕ್ಕರಗಾಲಲ್ಲಿ ಕುಳಿತು ಒಂದೂವರೆ ಅಡಿಯಷ್ಟಿರುವ ಗಾಲಿಯಲ್ಲಿ ತಲೆ ತೂರಿಸಿ ಮೇಲೇಳುವುದು ಮಲ್ಲರ ಕುತ್ತಿಗೆ ವ್ಯಾಯಾಮ ಎನಿಸಿಕೊಳ್ಳುತ್ತದೆ. ಈ ವ್ಯಾಯಾಮದ ಶಿಲ್ಪವನ್ನು ಅಚ್ಚುತ ದೇವಾಲಯ ಶಿಲ್ಪದಲ್ಲಿ ಕಾಣಬಹುದು. ಮಲ್ಲನೊಬ್ಬ ಎರಡು ಕಾಲನ್ನು ತನ್ನ ಕುತ್ತಿಗೆಯ ಮೇಲೆ ತಂದು ಕಸರತ್ತು ಮಾಡುತ್ತಿರುವುದನ್ನು ನೋಡ ಬಹುದು, ಈ ರೀತಿ ಮಲ್ಲರು ವಿವಿಧ ಕಸರತ್ತುಗಳ್ನು ಮಾಡುವ ಮೂಲಕ ರಟ್ಟೆ, ಕಾಲು, ನಡ, ಸೊಂಟ, ಕುತ್ತಿಗೆ ಮುಂತಾದ ಭಾಗದಲ್ಲಿ ಶಕ್ತಿ ವೃದ್ಧಿಗೆ ಹಾಗೂ ಶ್ವಾಸ ಕೋಶಗಳ ಸಾಮರ್ಥ್ಯ ವೃದ್ಧಿಗೆ ಕಾರಣವಾಗಿರುತ್ತದೆ. ಈ ರೀತಿ ಪಡೆದ ಶಕ್ತಿ ಪ್ರದರ್ಶನದ ಶಿಲ್ಪಗಳನ್ನು ಅಚ್ಚುತರಾಯ ದೇವಸ್ಥಾನ, ಶ್ರೀ ವಿರೂಪಾಕ್ಷೇಶ್ವರ ಸ್ವಾಮಿ ದೇವಸ್ಥಾನ, ಜೈನ ದೇವಾಲಯ, ಹಜಾರರಾಮ ದೇವಸ್ಥಾನ, ಮಹಾನವಮಿ ದಿಬ್ಬದಲ್ಲಿಯ ಶಿಲ್ಪಗಳಲ್ಲಿ ಕಾಣಬಹುದು. ಮಲ್ಲರ ಸರ್ವಾಂಗಗಳಲ್ಲಿ ಶಕ್ತಿ ವೃದ್ಧಿಯಾಗುವಂತ ಕಸರತ್ತುಗಳನ್ನು ತೋರಿಸುವ ಶಿಲ್ಪಗಳನ್ನು ಕಾಣಬಹುದಾಗಿದೆ.

ಮಲ್ಲರು ಶಕ್ತಿ ವೃದ್ಧಿಗಾಗಿ ಆಹಾರದಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತಿದ್ದುದು ಸೇವನೆ. ಕಸರತ್ತುಗಳನ್ನು ಕೈಗೊಂಡ ನಂತರ, "ತಂಡಾಯ". ಇದೊಂದು ಮಲ್ಲರು ಬಳಸುವ ಪೇಯ. ಈ ಪೇಯದಲ್ಲಿ ಬಾದಾಮಿ, ಗಸಗಸೆ, ಕಲ್ಲುಸಕ್ಕರೆ, ಏಲಕ್ಕಿ, ಬಡೆಸೋಪು, ಮಿಶ್ರಣವನ್ನು ಚೆನ್ನಾಗಿ ಮಾಡಿ ಹಿಂಡಿದ ಹಾಲಿನಲ್ಲಿ ಹಾಕಿ, ತೆಳ್ಳನೆಯ ಬಿಳಿ ಬಟ್ಟೆಯಲ್ಲಿ ಸೋಸಿ ಕುಡಿಯುತ್ತಿದ್ದರು. ಊಟದಲ್ಲಿ ಗೋಧಿ, ತುಪ್ಪ, ಬೆಣ್ಣೆ ಯತೇಚ್ಛವಾಗಿ ಬಳಸಬೇಕು, ಮಾಂಸಾಹಾರಿ ಮಲ್ಲರು ಮಾಂಸ, ಮೊಟ್ಟೆ, ಮೀನು ಹಣ್ಣು, ಗೋಧಿ, ತುಪ್ಪ, ಬೆಣ್ಣೆ, ಹಾಲು ಸೇವಿಸಬೇಕಾಗುತ್ತಿತ್ತು. ಮಲ್ಲರು ಸಾಧನೆ ಮಾಡಲು ಎಷ್ಟು ಮಹತ್ವ ನೀಡುತ್ತಿದ್ದರೂ ಅಷ್ಟೇ ಮಹತ್ವವನ್ನು ಆಹಾರ ಸೇವನೆಗೆ ನೀಡಬೇಕಾಗಿತ್ತು.

ದಮ್ಮು ಮುರಿಯುವ ಕ್ರಮ

ಮಲ್ಲರು ದಮ್ಮು ಮುರಿಯಲು ಮಲ್ಲರ ಗುರು "ಉಸ್ತಾದರು" ಹೇಳಿದಂತೆ ನಡೆದುಕೊಳ್ಳಬೇಕಾಗಿತ್ತು. ಬೆಳಿಗ್ಗೆ ವ್ಯಾಯಾಮ, ಸಂಜೆ ಲಡಾತ್ ಆದ ಮೇಲೆ ಭಾರವಾದ ಗುದ್ದಲಿಯಿಂದ ಮಟ್ಟಿ ಕುರಾಯಿಸಬೇಕಾಗಿತ್ತು. ಈ ಕೆಲಸದಿಂದ ಮಲ್ಲರ ಎದೆ ವಿಶಾಲಗೊಳ್ಳಲು ಅವಶ್ಯವಾಗಿತ್ತು. ಗರಡಿಯಲ್ಲಿ ಈ "ಮಟ್ಟಿ" ಎಂದರೆ "ಮಣ್ಣು" .ಇದು ನಾವು ನೋಡುವಂತೆ ಸಾಧಾರಣ ಮಣ್ಣಲ್ಲ, ಗರಡಿಯಲ್ಲಿ ಹುಡಿ ಹುಡಿ ಕೆಮ್ಮಣ್ಣಿಗೆ ಜೇಕನೆ ಗೆಡ್ಡೆ ಪುಡಿ, ಕರ್ಪೂರ, ಕುಂಕುಮ, ಟಿಂಕ್ಚರ್, ದೇವದಾರು ಎಣ್ಣೆ, ಗಂಧದ ಪುಡಿ, ಅತ್ತರು ಹಾಗೂ ಎಳ್ಳೆಣ್ಣೆ ಬೆರೆಸಿದ ನುಣ್ಣಗಾಗಿರುವ ಮಣ್ಣು ಇದಾಗಿರುತ್ತಿತ್ತು. ಮಲ್ಲರು ತಮ್ಮ ಉಸ್ತಾದರು ಸೂಚಿಸಿದ ಕಸರತ್ತುಗಳನ್ನು ಮಾಡಿ, ದಮ್ಮು ಮುರಿದ

ಮೇಲೆ ಮೈ ಬೆವರಿದಾಗ ಈ ಮಟ್ಟಿ ಮಣ್ಣಿನಿಂದಲೇ ಮೈಯೆಲ್ಲಾ ಹಚ್ಚಿಕೊಳ್ಳಬೇಕು, ಇಲ್ಲದೆ ಆ ಮಟ್ಟಿಯಲ್ಲಿ ಉರುಳಾಡಬೇಕು, ದೇಹದ ಬೆವರು ಗಾಳಿಯಲ್ಲಿ ಆರಿದರೆ ಆರೋಗ್ಯಕ್ಕೆ ಒಳ್ಳೆಯದಲ್ಲ ಅದು ಮಣ್ಣಿಗೆ ಸೇರಬೇಕೆಂಬುದೇ ಮಲ್ಲರ ನಂಬಿಕೆ ಯಾಗಿತ್ತು. ಈ ಕಾರ್ಯಕ್ಕೆ " ಪಸೀನಾ" ತೆಗೆಯುವುದು ಎಂಬ ವಾಡಿಕೆ ಇದೆ. ಈ ರೀತಿ ಮಲ್ಲರು ದಮ್ಮು ಮುರಿಯುವ ಕೆಲಸವನ್ನು ಮಾಡುತ್ತಿದ್ದರು. ಮೈಸೂರು ಮಹಾರಾಜ ರಾದ ಶ್ರೀ ಕಂಠೀರವ ನರಸಿಂಹ ರಾಜ ಒಡೆಯರು, ಎಮ್ಮೆ ಕರುವನ್ನು ತಮ್ಮ ಹೆಗಲ ಮೇಲೆ ಹೊತ್ತುಕೊಂಡು ಚಾಮುಂಡಿ ಬೆಟ್ಟ ಹತ್ತಿ ಇಳಿಯುತ್ತಿದ್ದರಂತೆ.

ಭಡ್ ಸವಾಲ ಸ್ವೀಕರಿಸುವ ಕ್ರಮ

ಮಲ್ಲರು ಶಕ್ತಿ ವೃದ್ಧಿಸಿ ದಮ್ಮು ಮುರಿದು ಬೆವರು ಸುರಿಸಿದರೆ ಸಾಲದು, ಪ್ರತಿಸ್ಪರ್ಧಿ ಮಲ್ಲರು ಹಾಕುವ ಪಟ್ಟಿಗೆ ಪಟ್ಟು, ಡಾಬಿಗೆ ಪ್ರತಿ ಡಾಬ್ ಪಟ್ಟಿಗೂ ತಿರುಮಂತ್ರ: ಡಾಕ್, ಡೋಬಿ ಶಾಟ್, ಕವಾಮನೆ, ನಿಕಾಲಿ:ಇನ್ನೂ ಅನೇಕ ಮಲ್ಲವಿದ್ಯೆಯ ವರಸೆಗಳನ್ನು ಬಲ್ಲ ಚಾಕಚಕ್ಯತೆ, ಚತುರತೆ ಮಲ್ಲರಲ್ಲಿ ಕರಗತವಾಗಿರಬೇಕು. "ಭಡ್‌ಸವಾಲು" ಹಾಕುವ ಮಲ್ಲನಿಗೆ " ಭಡ್ ಸವಾಲು", ಎಂದರೆ ಮಲ್ಲ ವಿದ್ಯೆಯಲ್ಲಿ ಪರಿಪೂರ್ಣತೆಯನ್ನು ಸಾಧಿಸಿದ ಮಲ್ಲನು "ನಾನು ಇಂತಿಂಥ ಮಹಾನ್ ಮಲ್ಲರನ್ನು ಗೆದ್ದಿರುವ ವರಸೆಗಾರ, ತಾಕತ್ತಿದ್ದವರು ಭಡ್ ಸವಾಲ್ ಹಾಕಬಹುದು" ಎಂಬ ಒಕ್ಕಣಿಕೆ ಇರುವ ಕರಪತ್ರಗಳನ್ನು ಹಂಚಿ, ಮಲ್ಲಯದ್ಧಕ್ಕೆ ಆಹ್ವಾನಿಸಬೇಕು, ಈ ಆಹ್ವಾನವನ್ನು ಸ್ವೀಕರಿಸಿದ ಮಲ್ಲನು ಭಡ್‌ಸವಾಲು ಹಾಕಿದ ಮಲ್ಲನ ಮಲ್ಲಯುದ್ಧದ ವಿದ್ಯೆಯ ಪಟ್ಟುಗಳಿಗೆ ಪ್ರತಿ ಪಟ್ಟು ರೂಪಿಸಿ, ಪ್ರತಿ ತಂತ್ರ ಹೆಣೆದು ಹಲವಾರು ಪಟ್ಟುಗಳನ್ನು ಬಳಸಿ ಎದುರಾಳಿ ಮಲ್ಲನ ಎರಡೂ ಭುಜಗಳನ್ನು ನೆಲ ಮುಟ್ಟುವಂತೆ, ಅಂಗಾತಾಗಿ (ಆಕಾಶ ತೋರಿಸುವ) ಬೀಳಿಸುವುದರೊಂದಿಗೆ, ಈ ಭಡ್ ಸವಾಲು ಮುಗಿಯುತ್ತದೆ. ಗೆದ್ದ ಮಲ್ಲರಿಗೆ ಸೋತ ಮಲ್ಲರು ಕೈ ಕಡಗ, ಇಲ್ಲವೆ (ಕಾಲುಕಡಗ) ಕಾಲುಗಡಗ ಆ ಪಂದ್ಯಕ್ಕೆ ತೀರ್ಮಾನಿಸಿದಂತೆ ನಡೆದುಕೊಳ್ಳ ಬೇಕಾಗುತ್ತದೆ, ರಾಜನಿಂದ ಸನ್ಮಾನಿತರಾಗುತ್ತಾರೆ.

ಮಲ್ಲ ವಿದ್ಯೆಯ ಪಟ್ಟುಗಳು

ಭಾರತದ ಪ್ರಾಚೀನ ವಿದ್ಯೆಯಾದ ಈ ಮಲ್ಲ ವಿದ್ಯೆಯ ಪಟ್ಟುಗಳ ಬಗ್ಗೆ ಹೆಚ್ಚಿನ ವಿವರವಿರುವ ಗ್ರಂಥ ಲಭ್ಯವಾಗಿರುವುದಿಲ್ಲ. ಆದರೆ ಪುರಾಣಗಳಲ್ಲಿ ಮತ್ತು ಟೀಕೆಗಳಲ್ಲಿ ಅಲ್ಪಸ್ವಲ್ಪ ಸಾಹಿತ್ಯ ಕಾಣಬಹುದು. ಅರ್ಜುನ ಮಿಶ್ರನು ತನ್ನ " ಭಾರತ ದೀಪಕದಲ್ಲಿ" ಅನ್ಯ ಶಾಸ್ತ್ರಗಳಿಂದ ವಚನಗಳನ್ನು ಉದ್ಧರಿಸಿ ಕೆಲವೊಂದು ಮಲ್ಲ ವಿದ್ಯೆಯ ಪಟ್ಟುಗಳನ್ನು ಉಲ್ಲೇಖಿಸಿದ್ದಾರೆ. ಅವು ಇಂತಿವೆ, "ಕೃತದಾವ" ಪ್ರತಿಕೃತ, ಸನ್ನಿಪಾತ, ಅವಧೂತ,

ಪ್ರಮಾಥ, ಉನ್ಮಥನ, ಪ್ರಚ್ಯಾವನ, ತಲಾಖ್ಯ, ವಜ್ರ, ಪ್ರಹೃತಿ, ಪಾದೋದ್ಧತಿ, ಶಿವಘಟ್ಟನ, ಅಬ್ಯಾಕರ್ಷ, ವಿಕರ್ಷಣ,

ಈ ಪಟ್ಟುಗಳ ಬಗ್ಗೆ ಅರ್ಜುನ ಮಿಶ್ರನ ವಿವರಣೆ ಇಂತಿದೆ-

ಕೃತದಾವ	:	ಶೆಡ್ಡು ಹೊಡೆಯುವುದಕ್ಕೆ
ಪ್ರತಿಕೃತ	:	ಪಟ್ಟು ಕತ್ತರಿಸುವುದಕ್ಕೆ
ಸನ್ನಿಪಾತ	:	ಪರಸ್ಪರ ಸಂಘಾತನ
ಅವಧೂತ	:	ಮುಕ್ಕಾ ಹೊಡೆಯುವುದಕ್ಕೆ
ಪ್ರಮಾಥ	:	ಬಿದ್ದು ಉಜ್ಜುವುದಕ್ಕೆ
ಉನ್ಮಥನ	:	ಅಂತರಿಕ್ಷದಲ್ಲಿ ಏದುರಾಳಿಯನ್ನು ತೀಡುವುದಕ್ಕೆ
ಪ್ರಾಚ್ಯವನ	:	ಸ್ಥಾನಚ್ಯುತ ಮಾಡುವುದಕ್ಕೆ
ತಲಾಖ್ಯ	:	ಹರಡಿರುವ ಭುಜಗಳಿಂದ ತರ್ಜನಿ ಮತ್ತು ಅಂಗುಷ್ಟದ ಮಧ್ಯಭಾಗದಿಂದ ಪ್ರಹಾರ ಮಾಡುವುದಕ್ಕೆ
ವಜ್ರ	:	ಅರ್ಧಚಂದ್ರನಂಥ ಮುಷ್ಟಿಯನ್ನು ಬಳಸುವುದು
ಪ್ರಹೃತಿ	:	ಮುಷ್ಟಿಯನ್ನು ಬಿಟ್ಟು ಪ್ರಹಾರ ಮಾಡುವುದಕ್ಕೆ
ಪಾದೋದ್ಧತಿ	:	ಕಾಲಿನಿಂದ ಹೊಡೆಯುವುದಕ್ಕೆ
ಶಿವಘಟ್ಟನ	:	ತೊಡೆಗಳಿಂದ ಒಸಗುವುದಕ್ಕೆ
ಅಭ್ಯಾಕರ್ಷ	:	ಎದುರಾಳಿಯನ್ನು ತನ್ನ ಕಡೆ ಎಳೆದುಕೊಳ್ಳುವುದಕ್ಕೆ
ವಿಕರ್ಷಣ	:	ಎದುರಾಳಿಯನ್ನು ಎಳೆದು ಹಿಂದೆ ತೆಗೆದುಕೊಳ್ಳುವುದು.

ಈ ಪಟ್ಟುಗಳಲ್ಲದೆ ಭಾಗವತ ಪುರಾಣದ 10-44-8-52 ಶ್ಲೋಕಗಳಲ್ಲಿ ಇನ್ನೂ ಕೆಲವೊಂದು ಮಲ್ಲಯುದ್ಧದ ವಿದ್ಯೆಯ ಪಟ್ಟುಗಳನ್ನು ಉಲ್ಲೇಖಿಸಿರುವುದನ್ನು ಕಾಣಬಹುದು, ಪರಿಭ್ರಮಣ, ವಿಕ್ಷೇಪ, ಪರಿರಂಭ, ಅವಯಾತನ, ಉತ್ಕರ್ಷಣ, ಅನ್ಯೋನ್ಯ ಪ್ರತಿರೋಧ ಉತ್ಪಾತನ, ಉನ್ನಯನ, ಬಾಲನ ಆದಿ ಇತ್ಯಾದಿ.

ಆಧುನಿಕ ಮಲ್ಲ ವಿದ್ಯೆಯ ಪಟ್ಟುಗಳು

ಅತ್ಯಂತ ಪುರಾತನವಾಗಿರುವ ಮಲ್ಲ ವಿದ್ಯೆಯ ಅಥವಾ ಕುಸ್ತಿ ಕಲೆಯ ಬಗ್ಗೆ ಮಹಾಭಾರತ, ರಾಮಾಯಣದಲ್ಲಿ ಉಲ್ಲೇಖವಿದೆ. ಭೀಮಸೇನ ಕುಸ್ತಿ, ಜರಾಸಂಧ ಕುಸ್ತಿ, ಹನುಮಂತ ಕುಸ್ತಿ, ಜಾಂಬುವಂತ ಕುಸ್ತಿ ಎಂದು ಕರೆಯಲ್ಪಡುವ ನಾಲ್ಕು ಪ್ರಕಾರದ

ಕುಸ್ತಿ ಕಲೆಯ ಬಗ್ಗೆ ಗುರುತಿಸುವುದು ವಾಡಿಕೆ. ಭೀಮಸೇನ ಕುಸ್ತಿ; ಎಂದರೆ ಎದುರಾಳಿಯನ್ನು ಸಾಯಿಸುವ ತನಕ ಸೆಣೆಸುವುದು, ಜರಾಸಂದ ಕುಸ್ತಿ ಎಂದರೆ ಎದುರಾಳಿಯನ್ನು ಅಸಂಗಗೊಳಿಸುವ ತನಕ ಹೋರಾಡುವುದು, ಹನುಮಂತನ ಕುಸ್ತಿ ಎಂದರೆ ಎದುರಾಳಿ ಓಡುವ ತನಕ ಸೆಣೆಸುವುದು, ಜಾಂಬುವಂತ ಕುಸ್ತಿ ಎಂದರೆ ಎದುರಾಳಿಯನ್ನು ನೆಲಕ್ಕೆ ಹಚ್ಚುವ ತನಕ ಹೋರಾಡುವುದು.

ಸದ್ಯ ಅಸ್ತಿತ್ವದಲ್ಲಿರುವ ಕುಸ್ತಿ ಕಲೆಯು ಜಾಂಬುವಂತನ ಕುಸ್ತಿ ಕಲೆಯಾಗಿದೆ. ಈ ಕಲೆಯನ್ನು ಪರಿಷ್ಕರಿಸಿ, ನಿರ್ದಿಷ್ಟ ಸಮಯ ಮತ್ತೆ ಅಂಕಗಳ ಮೇಲೆ ನಿರ್ಣಯ ಕೊಡುವ ಅಂತರಾಷ್ಟ್ರೀಯ ಕ್ರೀಡಾ ತೀರ್ಮಾನಗಳು ಹೊಂದಿವೆ ಹಾಗೂ ಮೇಲಿನ ಈ ಎಲ್ಲ ಪ್ರಾಚೀನ ಮಲ್ಲ ವಿದ್ಯೆಯ ಪಟ್ಟುಗಳ ಸಮ್ಮಿಶ್ರಣದಿಂದ ಸಧ್ಯ ಈ ಕೆಳಗಿನ ಪ್ರಮುಖ ಮಲ್ಲ ವಿದ್ಯೆಯ ಪಟ್ಟಗಳನ್ನು ಬೆಳೆಸಲಾಗುತ್ತಿದೆ, ಅವು ಇಂತಿವೆ: ಕಳಾವರ್ ಜಂಗ್, ಬಾರ್ಲಿಟಾಂಗ, ಏಕ್ಕೇರಿ, ಟಾಂಗ್ ರಿಸ್ಸಿ ಪಟ್ಟಾ, ಸವಾರಿ ಡಾವ್‌ಪೇಟ್, ಗೋಟ್ಖಿ ಪಟ್ಟಾ, ದೋಬಿಪಾಟ್ ...ಇತ್ಯಾದಿಯಾಗಿ.

ಆದರೆ ವಿಜಯನಗರದ ಶಿಲ್ಪದಲ್ಲಿ ಬಳಸಿರುವ ಮಲ್ಲ ವಿದ್ಯೆಯ ಶಿಲ್ಪಗಳು, ಪ್ರಾಚೀನ ಭಾರತದಲ್ಲಿ ಪುರಾಣ ಟೀಕೆ ಹಾಗೂ ಭಾಗವತದಲ್ಲಿ ಉಲ್ಲೇಖಿಸಿದ ಪಟ್ಟುಗಳನ್ನು ಬಳಸಿ ಶಿಲ್ಪದಲ್ಲಿ ಬಿಡಿಸಿರುವುದನ್ನು ನಾವು ಹೆಚ್ಚಾಗಿ ಕಾಣುತ್ತೇವೆ.

ಮಲ್ಲರಿಬ್ಬರು ಪರಸ್ಪರ ಅಖಾಡದಲ್ಲಿ ಮಲ್ಲಯುದ್ಧ ಪ್ರಾರಂಭದಲ್ಲಿ ತೊಡೆ ತಟ್ಟುವ "ಕೃತದಾವ್" ಪಟ್ಟುನಲ್ಲಿರುವ ಶಿಲ್ಪವನ್ನು ಮಹಾನವಮಿ ದಿಬ್ಬದಲ್ಲಿ ಬಿಡಿಸಿರುವುದನ್ನು ಕಾಣಬಹುದು, ಪರಸ್ಪರ ಮಲ್ಲರಿಬ್ಬರ ಮಲ್ಲವಿದ್ಯೆಯ ಪ್ರದರ್ಶನದಲ್ಲಿ ಕಾದಾಡುವ ಪಟ್ಟಗಳಲ್ಲಿ ಒಂದಾದ "ಸನ್ನಿಪಾತ" ಪಟ್ಟಿನಲ್ಲಿರುವ ಶಿಲ್ಪವನ್ನು ಶ್ರೀ





ವಿರೂಪಾಕ್ಷ ದೇವಾಲಯದ ಉತ್ತರ ದಿಕ್ಕಿನಲ್ಲಿರುವ ಶ್ರೀ ಶಂಕರೇಶ್ವರ ದೇವಾಲಯದ ಕಂಬದಲ್ಲಿ, ಕಡ್ಲೆಕಾಳು ಗಣಪತಿ ದೇವಸ್ಥಾನದ ಕಂಬದಲ್ಲಿ ಹಜಾರರಾಮ ದೇವಸ್ಥಾನ, ಮಹಾನವಮಿ ದಿಬ್ಬ, ಅಚ್ಚುತ ದೇವಸ್ಥಾನದಲ್ಲಿ ಬಿಡಿಸಿದ ಶಿಲ್ಪಗಳಲ್ಲಿ ಕಾಣಬಹುದು. ಎದುರಾಳಿಯನ್ನು ತನ್ನತ್ತ ಸೆಳೆದುಕೊಳ್ಳುವ " ಅಭ್ಯಾಕರ್ಷಕ" ಪಟ್ಟಿನ ಶಿಲ್ಪವನ್ನು ಹಜಾರ ರಾಮ ದೇವಸ್ಥಾನದಲ್ಲಿ ಬಿಡಿಸಿರುವುದನ್ನು ಕಾಣಬಹುದು, ಮಲ್ಲರಿಬ್ಬರ ಮದ್ಯೆ ಅರ್ಧ ಚಂದ್ರಾಕಾರದ ಮುಷ್ಠಿಯಲ್ಲಿ ಪರಸ್ಪರ ಪಟ್ಟಿನಲ್ಲಿ ತೊಡಗಿದ್ದು "ವಜ್ರ ಪಟ್ಟು" ಪಟ್ಟಿನಿಂದ ಬಿಡಿಸಿಕೊಳ್ಳಲು ಮಲ್ಲನೊಬ್ಬ ತನ್ನ ಎಡಗಾಲಿನಿಂದ ಪ್ರತಿ ಸ್ಪರ್ಧಿಯ ಮಲ್ಲನ ಬಲಗಾಲಿನ ಮೇಲೆ ಕಾಲನ್ನಿಟ್ಟು "ಪಾದೋದ್ಧತಿ" ಪಟ್ಟು ಹಾಕಿ ಈ ಪಟ್ಟಿನಿಂದ ಬಿಡಿಸಿ ಕೊಳ್ಳುವ ಮಲ್ಲನ ಚಿತ್ರಣವನ್ನು ಹಜಾರರಾಮ ದೇವಸ್ಥಾನದ ಶಿಲ್ಪದಲ್ಲಿ ಕಾಣಬಹುದು.

ಇನ್ನೊಂದು ಶಿಲ್ಪದಲ್ಲಿ: ಮಲ್ಲರಿಬ್ಬರು ಮಲ್ಲಯುದ್ಧದಲ್ಲಿ ತೊಡಗಿ ಮಲ್ಲನೊಬ್ಬ ಪ್ರತಿಸ್ಪರ್ಧಿ ಮಲ್ಲನನ್ನು ಎರಡು ಕೈಗಳಿಂದ ಮೇಲೆತ್ತಿ ಅಂತರಿಕ್ಷದಲ್ಲಿ ತೀಡುವ "ಉನ್ಮಥನ" ಪಟ್ಟಿನ ಶಿಲ್ಪವನ್ನು ಅಚ್ಚುತ ದೇವಸ್ಥಾನ, ಉದ್ದಾನ ವೀರಭದ್ರಸ್ವಾಮಿ ದೇವಸ್ಥಾನದ ಎದುರಿಗೆ ಇರುವ ಶ್ರೀ ಚಂಡಿಕೇಶ್ವರ ದೇವಸ್ಥಾನದಲ್ಲಿ ಹಾಗೂ ಮಹಾ ನವಮಿ ದಿಬ್ಬದ ಶಿಲ್ಪಗಳಲ್ಲಿ ಕಾಣಬಹುದು.

17



ಕೋಟಿ ಶಂಕರ ಬಾಗಿಲಿನ ಆವರಣದಲ್ಲಿ (ಅಕ್ಕ-ತಂಗಿಯರ ಗುಂಡಿನ ಹಿಂಭಾಗದಲ್ಲಿ) ಮಲ್ಲ ವಿದ್ಯೆಯ ಅಂತಿಮ ಘಟ್ಟದ ಶಿಲ್ಪವನ್ನು ಬಾಗಿಲಿನ ಎತ್ತರದ ಸ್ಥಳದಲ್ಲಿ ಬಿಡಿಸಿರುವ ಶಿಲ್ಪ ಚಿತ್ರಗಳು ಮನಮೋಹಕವಾಗಿದೆ. ಅಷ್ಟೇ ಆಕರ್ಷಣೀಯವಾಗಿವೆ. ಈ ಆವರಣವು, ಮಲ್ಲವಿದ್ಯೆಯ ಪ್ರದರ್ಶನದ ಆಖಾಡವಾಗಿತ್ತೆಂದು ವಿದ್ವಾಂಸರ ಅಭಿಪ್ರಾಯವಾಗಿದೆ. ಇಂಥಹ ಅಖಾಡದಲ್ಲಿಯ ಮಲ್ಲರಿಬ್ಬರ ಅಂತಿಮ ಘಟ್ಟದ ಶಿಲ್ಪವು ಪೌರಾಣಿಕವಾದ ಹಲವಾರು ಪಟ್ಟುಗಳ ಪ್ರದರ್ಶನವಾಗಿದೆ, ಮಲ್ಲರಿಬ್ಬರ ಆಧುನಿಕ ಪಟ್ಟುಗಳ ಪ್ರದರ್ಶನವೂ ಅಡಗಿದೆ, ಈ ಮಲ್ಲಯುದ್ಧ ವೀಕ್ಷಣೆಯಲ್ಲಿರುವ ಮಲ್ಲರನ್ನು ಕಾಣಬಹುದಾಗಿದೆ. ಇಂಥದೇ ಇನ್ನೊಂದು ಅಂತಿಮ ಘಟ್ಟದ ಪಟ್ಟಿನಲ್ಲಿರುವ ಶಿಲ್ಪದ ಚಿತ್ರಣವನ್ನು ಮಹಾನವಮಿ ದಿಬ್ಬದಲ್ಲಿ ಕಾಣಬಹುದು.

ಏಕ ಶಿಲಾ ಶಿಲ್ಪದಲ್ಲಿ ಬಹುಮುಖ ಮಲ್ಲವಿದ್ಯೆಯ ಪಟ್ಟುಗಳು

ವಿಜಯನಗರದ ಶಿಲ್ಪಿಗಳು ಏಕಶಿಲಾ ಶಿಲ್ಪದಲ್ಲಿ ಬಹುಮುಖ ಮಲ್ಲ ವಿದ್ಯೆಯ ಪಟ್ಟುಗಳನ್ನು ಬಿಡಿಸಿದಂತಹ ಶಿಲ್ಪಗಳು ಅತ್ಯಂತ ಆಕರ್ಷಕವಾಗಿವೆ, ಮಹಾನವಮಿ



ದಿಬ್ಬ, ಅಚ್ಚುತ ದೇವಸ್ಥಾನ, ಶ್ರೀ ಉದ್ದಾನ ವೀರಭದ್ರ ಸ್ವಾಮಿ ದೇವಸ್ಥಾನದ ಹತ್ತಿರ ಇರುವ ಶ್ರೀ ಚಂಡಿಕೇಶ್ವರ ದೇವಸ್ಥಾನ, ಶ್ರೀ ಕೋಟಿ ಶಂಕರಲಿಂಗ ಬಾಗಿಲುಗಳಲ್ಲಿರುವ ಶಿಲ್ಪಗಳಲ್ಲಿ ಬಹುಮುಖ ಮಲ್ಲವಿದ್ಯೆಯ ಪಟ್ಟುಗಳನ್ನು ಕಾಣಬಹುದು. ಶ್ರೀ ಅರ್ಜುನ ಮಿಶ್ರನು ಸೂಚಿಸಿದ ಮಲ್ಲ ವಿದ್ಯೆಯ ಪಟ್ಟುಗಳಾದ ಸನ್ನಿಪಾತ, ಪ್ರಮಾದ, ಉನ್ಮಥನ, ಪ್ರಾಚ್ಯಾವನ, ಪಾದೋದ್ಧತಿ, ಅಬ್ಯಾಕರ್ಷ, ವಿಕರ್ಷಣ ಇತ್ಯಾದಿ ಪಟ್ಟುಗಳನ್ನು ಕಾಣಬಹುದು. ಆಧುನಿಕವಾಗಿ ಹೆಸರಿಸುವಂತೆ ಕಳವರ ಜಂಗ್, ಬಾರ್ಲಿಟ್ಟಾಗು, ಏಕ್ಕೇರಿ ಪಟ್ಟಾ, ಟಾಂಗ್ ಹಿಸ್ಸ ಪಟ್ಟಾ, ಸವಾರಿ ಡಾವ್-ಪೇಟ್, ಗೋಟ್ಯಾಪಟ್ಟಾ ಇತ್ಯಾದಿ ಗಳನ್ನು ಸಹ ಕಾಣಬಹುದಾಗಿದೆ. ಈ ಪಟ್ಟುಗಳನ್ನು ಗುರುತಿಸುವಲ್ಲಿ ವೀಕ್ಷಕರಿಗೆ ತಾಳ್ಮೆಬೇಕು, ಮಹಿಳಾ ಮಲ್ಲ ವಿದ್ಯೆ ಬಗ್ಗೆ ಬಹು ಮುಖ ಪಟ್ಟಿಗಳನ್ನು ಬಿಂಬಿಸುವ ಮಹಾ ನವಮಿ ದಿಬ್ಬದಲ್ಲಿಯ ಶಿಲ್ಪ ಅಪರೂಪದ್ದಾಗಿದೆ.

ಮಲ್ಲಯುದ್ಧಕ್ಕೆ ಸನ್ನದ್ಧಗೊಳಿಸಿ ಮಲ್ಲರನ್ನು ಅಖಾಡಕ್ಕೆ ಕಳಿಸಿಕೊಡುವಂತೆ





ಬಿಡಿಸಿದ ಶಿಲ್ಪ ಚಿತ್ರಣವನ್ನು ಮಹಾನವಮಿ ದಿಬ್ಬದಲ್ಲಿ ಕಾಣಬಹುದು, ಮಲ್ಲಯುದ್ಧ ವಿದ್ಯೆಯ ಪಟ್ಟುಗಳನ್ನೆಲ್ಲಾ ಬಳಸಿ ಮಲ್ಲಯುದ್ಧ ದಲ್ಲಿ ಕಾದಾಡಿದ ಮಲ್ಲರಿಬ್ಬರಲ್ಲಿ "ಒಬ್ಬರು ಸೋಲಲೇಬೇಕು, ಇನ್ನೊಬ್ಬರು ಗೆಲ್ಲಲೇಬೇಕು" ಇದು ಯಾವುದೇ ಸ್ಪರ್ಧೆಯ ನಿಯಮ. ಇಂಥ ಸನ್ನಿವೇಶದ ಶಿಲ್ಪವನ್ನು ಬಿಡಿಸುವಲ್ಲಿ ಶಿಲ್ಪಿ ಹಿಂದೆ ಬಿದ್ದಿಲ್ಲ. ಸೋಲು - ಗೆಲುವುಗಳನ್ನು ಕ್ರೀಡಾ ಮನೋಭಾವದಲ್ಲಿ ಸ್ವೀಕರಿಸ ಬೇಕೆನ್ನುವ ಸಂದೇಶವನ್ನು ನಮ್ಮ ವಿಜಯನಗರದ ಶಿಲ್ಪಿಗಳು ತಿಳಿಸುವುದನ್ನು ಮರೆತಿಲ್ಲ. ಮಹಾನವಮಿ ದಿಬ್ಬದಲ್ಲೊಂದರ ಶಿಲ್ಪದಲ್ಲಿ ಗೆದ್ದ ಮಲ್ಲ ಪ್ರೇಕ್ಷಕರತ್ತ ಕೈ ಮುಗಿದು ತನ್ನ ವಿಜಯವನ್ನು





ನಮ್ರತೆಯಿಂದಲೇ ಆಚರಿಸುತ್ತಿದ್ದಾನೆ. ಸೋತಮಲ್ಲ ಸೋಲಿನ ದುಃಖವನ್ನು ತಡೆಯದೆ, ತುಂಬಿ ಬರುವ ದುಃಖವನ್ನು ಕಣ್ಣು ಒರೆಸಿಕೊಳ್ಳುವಲ್ಲಿ ಮಗ್ನನಾಗಿರುವಂತಿರುವ ಶಿಲ್ಪವು ಇಂದಿನ ಕ್ರೀಡಾಭಿಮಾನಿಗಳಿಗೆ ತಾಳ್ಮೆಯ ಪಾಠವನ್ನು ನೀಡುವಂತಿದೆ, ಮಲ್ಲವಿದ್ಯೆಯ ಅಂತಿಮ ಕ್ಷಣದ ಚಿತ್ರಣ ಬಿಡಿಸಿದ ಶಿಲ್ಪಿಯು ನಮ್ಮಿಂದ ಕಣ್ಮರೆಯಾಗಿದ್ದರು, ಆತನ ಭಾವನಾ ಲಹರಿಯಲ್ಲಿ ಮೂಡಿ ಬಂದ ಶಿಲ್ಪವು ನಮ್ಮ ಮನದಲ್ಲಿ ಅಚ್ಚಳಿಯದೆ ಉಳಿಯಬಹುದಾಗಿದೆ.

ಮಹಿಳಾ ಮಲ್ಲ ಪಟುಗಳು

ಮಹಿಳಾ ಮಲ್ಲರ ಬಗ್ಗೆ ವಿಜಯನಗರದ ಶಿಲ್ಪಿಗಳು ಮರೆತಿಲ್ಲ, ಅಲ್ಲಲ್ಲಿ ಬಿಡಿಸಿದ ಮಹಿಳಾ ಮಲ್ಲ ವಿದ್ಯೆಯ ಶಿಲ್ಪಗಳು ಅಪರೂಪವಾಗಿದ್ದರೂ, ಅಮೋಘವಾಗಿವೆ, ಮಲ್ಲ ವಿದ್ಯೆಯ ಪಟ್ಟುಗಳನ್ನೆಲ್ಲಾ ಮೇಳೈಸಿರುವ ಶಿಲ್ಪದ ಚಿತ್ರಣ ಮಹಾನವಮಿ ದಿಬ್ಬದಲ್ಲಿ ಬಿಡಿಸಿರುವುದನ್ನು ಕಾಣಬಹುದು.

ವಿಜಯನಗರಕ್ಕೆ ಭೇಟಿ ನೀಡಿದ ಪೋರ್ಚ್‌ಗೀಸ್ ಫರ್ನಾವೂನ್ಯೂನಿಜನು ಮಹಿಳೆಯರಿಗೆ ಮಲ್ಲವಿದ್ಯೆ ಗೊತ್ತಿತ್ತೆಂದು ತಿಳಿಸಿದ್ದಾನೆ, ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿರುವ ವೀರಗಲ್ಲಿನ ಮೇಲಿನ ಕ್ರಿ.ಶ.1446ರ ಶಾಸನವು ಈ ಅಂಶವನ್ನು ಧೃಡೀಕರಿಸುತ್ತದೆ. "ನಾಗನಗೌಡನ ಮಗ ಮಾದಿಗೌಡನು ಕುಸ್ತಿಯಾಡುತ್ತಿದ್ದಾಗ ಮರಣ ಹೊಂದಿ ಸ್ವರ್ಗ ಸೇರಿದನು, ಆತನ ಮಗಳು ಹರಿಯಕ್ಕ ತನ್ನ ತಂದೆಯನ್ನು ಕೊಂದ ಕುಸ್ತಿ ಪಟುಗಳೊಂದಿಗೆ ಕಾದು ತಾನು ಸ್ವರ್ಗ ಸೇರಿದಳೆಂದು ಶಾಸನವು ತಿಳಿಸುತ್ತದೆ, ಈ ವೀರಗಲ್ಲನ್ನು ಅವರ ಚಿಕ್ಕಪ್ಪ ಚೆನ್ನ ನಿಲ್ಲಿಸಿದನು, ವೀರಗಲ್ಲಿನ ಮೇಲಿನ ಶಿಲ್ಪದ ಭಾಗ



ದಲ್ಲಿ ಒಬ್ಬ ಕುಸ್ತಿ ಪಟು ನಿಂತಿದ್ದಾನೆ, (ಅವರ) ಎದುರಿಗೆ ನಿಂತಿರುವ ಹರಿಯಕ್ಕ ಎಡಗೈಯಲ್ಲಿ ಅವನ ಜುಟ್ಟು ಹಿಡಿದು ಬಲಗೈಯಲ್ಲಿಯ ಖಡ್ಗದಿಂದ ಅವನನ್ನು ಇರಿಯುತ್ತಿದ್ದಾಳೆ.

ವಿಜಯನಗರದ ಶಿಲ್ಪದಲ್ಲಿ ಮಲ್ಲ ವಿದ್ಯೆಯನ್ನು ಸ್ತ್ರೀ-ಪುರುಷರು ಯಾವುದೇ ಭೇದವಿಲ್ಲದೆ ಕರಗತ ಮಾಡಿಕೊಂಡಿರುವುದನ್ನು ನೋಡಬಹುದಾಗಿದೆ, ಈ ವಿದ್ಯೆಯಲ್ಲಿ ಪರಿಣತಿ ಹೊಂದಿದವರು ವಿಜಯನಗರದ ಅರಸರ ಆಪ್ತ ವಲಯದಲ್ಲಿರುತ್ತಿದ್ದರು, ವಿಜಯನಗರದ ಅರಸರು ಮಲ್ಲವಿದ್ಯೆಗೆ ನೀಡಿದ ಪ್ರೋತ್ಸಾಹ ಮಹತ್ವದ್ದಾಗಿದೆ, ಹೊಸಪೇಟೆಯ ಏಳು ಕೇರಿಗಳಲ್ಲಿ ಅಂದರೆ: ಬಾಣದ ಕೇರಿ, ಚಿತ್ರದ ಕೇರಿ, ಉಕ್ಕಡಕೇರಿ, ತಾವರ ಕೇರಿ, ಮ್ಯಾಸ್‌ಕೇರಿ, ಕಬ್ಬೆರಕೇರಿ, ಜಮ್ಮುನಹಳ್ಳಿ ಕೇರಿ, ಶಂಕರಗೌಡ ಕೇರಿಗಳಲ್ಲಿರುವ ಗರಡಿ ಮನೆಗಳು ಹಾಗೂ ಈಗಲೂ ನಡೆಯುತ್ತಿರುವ ಮಲ್ಲ ಕುಸ್ತಿ ಪಂದ್ಯಗಳು ಸಾಕ್ಷಿಯಾಗಿವೆ.

ಮಲ್ಲಯುದ್ಧ ಸ್ಪರ್ಧೆಯನ್ನು ಭಾರತ ಸರಕಾರ, ಭಾರತೀಯ ಪ್ರಾಚೀನ ಕಲೆಯೆಂದು ಪ್ರೋತ್ಸಾಹಿಸುತ್ತಿದೆ. ಈ ಸ್ಪರ್ಧೆಯಲ್ಲಿ ವಿಜೇತರಿಗೆ "ಹಿಂದ್ ಕೇಸರಿ" ಪ್ರಶಸ್ತಿ ನೀಡಲಾಗುತ್ತಿದೆ, ಅಂತರಾಷ್ಟ್ರೀಯ ಮಟ್ಟದಲ್ಲಿಯೂ ಈ ಕಲೆಗೆ ಗೌರವ ಇದೆ, ಇತ್ತೀಚಿನ ವರ್ಷಗಳಲ್ಲಿ ಈ ಸ್ಪರ್ಧೆಯನ್ನು ತೂಕದ ಆಧಾರದ ಮೇಲೆ ವರ್ಗೀಕರಿಸಿ ಕುಸ್ತಿ ಪಂದ್ಯಗಳನ್ನು ಏರ್ಪಡಿಸಲಾಗುತ್ತಿದೆ, ಕರ್ನಾಟಕದಲ್ಲಿ ಪ್ರತಿ ವರ್ಷ ಮೈಸೂರು ದಸರಾ ಮಹೋತ್ಸವದ ಕಾಲಕ್ಕೆ ಸ್ಪರ್ಧೆಯನ್ನು ಏರ್ಪಡಿಸಿ ತೂಕದ ವರ್ಗೀಕರಣಕ್ಕೆ ಅನ್ವಯ ವಾಗಿ, " ದಸರಾ ಕಂಠೀರವ" " ದಸರಾ ಕೇಸರಿ " " ದಸರಾ ಕುಮಾರ" " ದಸರಾ ಕಿಶೋರ"



" ಮೇಯರ್ ಕಾನ್" ಎಂಬ ಪ್ರಶಸ್ತಿಗಳನ್ನು ವಿಜೇತ ಜಟ್ಟಿಗಳಿಗೆ ನೀಡಲಾಗುತ್ತಿದೆ. ವಿಜಯನಗರ ಅರಸರ ಕಾಲಕ್ಕೆ ಪ್ರತಿವರ್ಷ ಮಹಾನವಮಿ ದಿಬ್ಬದಲ್ಲಿ ನಡೆಯುತ್ತಿದ್ದ ಈ ಮಲ್ಲವಿದ್ಯೆಯ ಜಂಗಿ ಕುಸ್ತಿಗಳನ್ನು ಪ್ರತಿವರ್ಷ ನವೆಂಬರ್ 3,4,5ರಂದು ಆಚರಿಸುವ " ಹಂಪಿ ಉತ್ಸವ" ಕಾಲಕ್ಕೆ ಏರ್ಪಡಿಸಿ ವಿಜೇತರಿಗೆ ಬಹುಮಾನ ನೀಡಿ, ಈ ಕಲೆಯನ್ನು ಪ್ರೋತ್ಸಾಹಿಸಲಾಗುತ್ತಿದೆ. ವಿಜಯನಗರ ಶಿಲ್ಪಗಳ ಮಲ್ಲವಿದ್ಯೆಯ ಪಟ್ಟುಗಳ ಶಿಲ್ಪಗಳು ಮಲ್ಲವಿದ್ಯೆಯ ಅಧ್ಯಾಯ ಅಮೂಲ್ಯವಾದ ಚಿನ್ನದ ಗಣಿಗಳಾಗಿವೆ.

ಗ್ರಂಥ ಋಣ

ದಾವಣಗೇರಿ ಚಂದ್ರಶೇಖರ : " ಕಾಯಕಯೋಗಿ ಶ್ರೀ ಗುರು ತಿಪ್ಪೇರುದ್ರಸ್ವಾಮಿ", ಶ್ರೀ ಗುರು ತಿಪ್ಪೇರುದ್ರ ಸ್ವಾಮಿ ದೇವಸ್ಥಾನ, ನಾಯಕನ ಹಟ್ಟಿ - 2001

ಚಲುವರಾಜು	:	“ಹಂಪಿಯಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು " ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
ಡಾ. ವಿವೇಕ ರೈ. ಬಿ.ಎ.(ಸಂ)	:	“ಪ್ರವಾಸಿ ಕಂಡ ವಿಜಯನಗರ” ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ -2005
ಸರಸ್ವತಿ ಎನ್.	:	“ವಿಜಯನಗರ ಕಾಲದ ಶಿಲ್ಪದಲ್ಲಿ ಸ್ತ್ರೀಯರು " ವಿಜಯನಗರ ಅಧ್ಯಯನ ಸಂ.-2 1996
ಶ್ರೀ ಶೈಲಆರಾಧ್ಯ. ಎಚ್	:	“ವಿಜಯನಗರದ ಅರಸರು ಮತ್ತು ಚಿತ್ರದುರ್ಗದ ನಾಯಕರು"ವಿಜಯನಗರದ ಅಧ್ಯಯನ ಸಂ.2-1996.


೨೫. ಬೆಂಗಳೂರಿನ ಅಲಸೂರಿನಲ್ಲಿರುವ ಸೋಮೇಶ್ವರ ದೇವಸ್ಥಾನದಲ್ಲಿರುವ ಶಿವಭಕ್ತರ ವಿಗ್ರಹಗಳು

ವಿನೋದಾ ಪಾಟೀಲ

ಬೆಂಗಳೂರಿನ ಪೂರ್ವದಿಕ್ಕಿನ ಕೊನೆಯಲ್ಲಿ ಅಲಸೂರು ಉಪನಗರವಿದೆ. ಇದು ಬೆಂಗಳೂರಿನ ಕಾರ್ಪೊರೇಶನ್ ಪ್ರದೇಶಕ್ಕೆ ಸೇರುತ್ತದೆ. ಈ ಅಲಸೂರು ಉಪನಗರದ ಮಧ್ಯದಲ್ಲಿ ಸುಂದರವಾದ ಸೋಮೇಶ್ವರ ದೇವಸ್ಥಾನವಿದೆ. ದೇವಸ್ಥಾನದ ಸುತ್ತಲೂ ಆಯತಾಕಾರದ ಆವರಣವಿದ್ದು, ಪೂರ್ವಕ್ಕೆ ಗೋಪುರವಿದೆ. ಆವರಣದ ಮಧ್ಯದಲ್ಲಿ ಸೋಮೇಶ್ವರ ಮತ್ತು ಕಾಮಾಕ್ಷಾಂಬಾ ದೇವಸ್ಥಾನಗಳಿವೆ. ಸ್ಥಳೀಯ ಸಂಪ್ರದಾಯದ ಪ್ರಕಾರ ಸೋಮೇಶ್ವರ ಲಿಂಗವನ್ನು ಮಾಂಡವ್ಯ ಋಷಿಗಳು ಪ್ರತಿಷ್ಠಾಪಿಸಿದ್ದಾರೆಂದು ಹೇಳುತ್ತಾರೆ. ಮೂಲ ಗರ್ಭಗೃಹ ಮತ್ತು ಇದರ ಮುಂದಿನ ಎರಡು ಅರ್ಧ ಮಂಟಪ ಗಳನ್ನು ವಿಜಯನಗರ ಅರಸರು ಅಥವಾ ಒಂದನೆಯ ಕೆಂಪೆಗೌಡ ಕಟ್ಟಿಸಿರಬಹುದೆಂದು ವಿದ್ವಾಂಸರ ಅಭಿಪ್ರಾಯ. ಗೌಡರ ಆಡಳಿತ ಕಾಲದಲ್ಲಿ ಬೇರೆ ಬೇರೆ ಸಮಯದಲ್ಲಿ ದೇವಸ್ಥಾನವನ್ನು ವಿಸ್ತರಿಸಲಾಗಿದೆ. ನವರಂಗದಲ್ಲಿ ವಿಜಯನಗರ ಶೈಲಿಯ ಸುಂದರವಾದ ಕಂಬಗಳಿವೆ. ಕಂಬಗಳ ಮೇಲೆ ಶಿವಲೀಲೆ, ಬೇಡರ ಕಣ್ಣಪ್ಪ, ವೀರಭದ್ರ ಮುಂತಾದ ಉಬ್ಬು ಶಿಲ್ಪಗಳಿವೆ. ಗರ್ಭಗೃಹದ ಸುತ್ತಲೂ ಪ್ರಾಕಾರವಿದೆ. ಗರ್ಭಗೃಹದ ಸುತ್ತಲೂ ದೇವಕೋಷ್ಠಗಳಿದ್ದು, ಅವುಗಳಲ್ಲಿ ಸೂರ್ಯ, ದಕ್ಷಿಣಾಮೂರ್ತಿ ಮುಂತಾದ ವಿಗ್ರಹ ಗಳಿವೆ. ನವರಂಗದ ಹೊರಗೋಡೆ ಮತ್ತು ಗರ್ಭಗೃಹದ ಸುತ್ತಲೂ ಇರುವ ಆವರಣ ಗಳಿಗೆ ಕುಂಭ ಪಂಜರಗಳ ಅಲಂಕಾರವಿರುವ ಗೋಡೆಗಂಬಗಳಿವೆ. ಗೋಡೆಗಳ ಮೇಲೆ ಅನೇಕ ಉಬ್ಬು ಶಿಲ್ಪಗಳಿವೆ. ನವರಂಗದ ಮುಂದಿರುವ ಹೊರಮಂಟಪವು ಕಲ್ಯಾಣ ಮಂಟಪದ ಮಾದರಿಯಲ್ಲಿದ್ದು, ಇಲ್ಲಿ ವಿಜಯನಗರ ಶೈಲಿಯ 48 ಕಂಬಗಳಿವೆ. ಈ ಕಂಬಗಳ ಮೇಲೆ ಆನೆ, ಹಂಸ, ಹುಲಿ, ಯಾಳಿ, ದಶಾವತಾರ, ನರಸಿಂಹ, ಕಾಳಿಂಗ ಮರ್ದನ ಮುಂತಾದ ಅನೇಕ ಶಿಲ್ಪಗಳಿವೆ. ನವರಂಗದ ಗೋಡೆಗಳ ಮೇಲೆ ರಾವಣನು ಕೈಲಾಸ ಪರ್ವತ ಎತ್ತಿ ಹಿಡಿದಿರುವ, ಮತ್ತು ಮಹಿಷಮರ್ದಿನಿಯರ ಉಬ್ಬು ಶಿಲ್ಪಗಳಿವೆ. ಮಹಿಷ ಮರ್ದಿನಿಯ ಎಡಭಾಗದಲ್ಲಿ ತಲೆಯ ಮೇಲೆ ಕಂಬಳಿಹೊದ್ದು. ಕೈಯಲ್ಲಿ ಕೋಲಿನ ಮೇಲೆ ಒರಗಿ ನಿಂತಿರುವ ಒಬ್ಬ ಮನುಷ್ಯನ ಶಿಲ್ಪವಿದೆ. ಈತ ಕೆಂಪೇಗೌಡನ ಮನೆತನದ ಒಬ್ಬ ಆಡಳಿತಗಾರನಿರಬಹುದೆಂದು ಹೇಳುತ್ತಾರೆ.

ಸೋಮೇಶ್ವರ ದೇವಸ್ಥಾನದ ಎಡಭಾಗದಲ್ಲಿ ಕಾಮಾಕ್ಷಾಂಬಾ ದೇವಸ್ಥಾನವಿದೆ.

ಸೋಮೇಶ್ವರ ದೇವಸ್ಥಾನದ ಪ್ರವೇಶದಲ್ಲಿ ವಿಜಯನಗರ ಶೈಲಿಯ ಎತ್ತರವಾದ ಗೋಪುರವಿದೆ.



ಸೋಮೇಶ್ವರ ದೇವಸ್ಥಾನದ ಗರ್ಭಗುಡಿಯ ಪ್ರದಕ್ಷಿಣ ಪಥದ ಎಡಭಾಗದಲ್ಲಿರುವ ಉದ್ದನೆಯ ಅರ್ಧ ಕಟ್ಟೆಯ ಮೇಲೆ 84 ಶಿವಭಕ್ತರ ವಿಗ್ರಹಗಳಿವೆ. ಅವುಗಳಲ್ಲಿ 57 ವಿಗ್ರಹಗಳು ಪುರಾತನರ ವಿಗ್ರಹಗಳು. 63 ಪುರಾತನರಲ್ಲಿ ಬರುವ ಸುಂದರ ಮೂರ್ತಿಯ 3 ವಿಗ್ರಹಗಳು ತಿರುಜ್ಞಾನ ಸಂಬಂಧ ಮತ್ತು ತಿರುನಾಮಕ್ಕಾರಸರ ಎರಡೆರಡು ವಿಗ್ರಹಗಳಿವೆ. ಉಳಿದವುಗಳಲ್ಲಿ ಸುಂದರನ ತಂದೆ ಶಡ್ಯೆ ನಾಯನಾರ್, ತಾಯಿ ಇಸೈ ಜ್ಞಾನಿಯಾರ್ ಮತ್ತು ಸುಂದರನ ಪತ್ನಿಯರಾದ ಪರವೈನಾಚಿ (ಕಮಲಿನಿ) ಸಂಕಿಲಿನಾಚಿ (ನಂದಿನಿ)ಯರ ವಿಗ್ರಹಗಳಿವೆ. ಇನ್ನುಳಿದ 19 ವಿಗ್ರಹಗಳು ತಮಿಳುನಾಡಿನ ಬೇರೆ ಶಿವಭಕ್ತರ ವಿಗ್ರಹಗಳು. ಈ ಎಲ್ಲ ವಿಗ್ರಹಗಳನ್ನು ಅರ್ಧ ಕಟ್ಟೆಯ ಮೇಲೆ ಸಾಲಾಗಿ ಇಟ್ಟಿದ್ದಾರೆ. ಮೇಲೆ ಗೋಡೆಯ ಮೇಲೆ ಅವುಗಳ ಹೆಸರಿನ ಫಲಕಗಳನ್ನು ಹಾಕಿದ್ದಾರೆ.

4-5ನೇ ಶತಮಾನದಲ್ಲಿ ಜೈನ, ಬೌದ್ಧಧರ್ಮಗಳ ಪ್ರಭಾವದಿಂದ ಶೈವ ಧರ್ಮದ ಅವಸಾನವಾಗುವಂಥ ಸಂಧಿಗ್ದ ಸಮಯದಲ್ಲಿ 63 ಪುರಾತನರು ಶೈವಧರ್ಮವನ್ನು ಮತ್ತೆ ಪುನರುಜ್ಜೀವನಗೊಳಿಸಿದರು. ಇವರು ತಮಿಳುನಾಡಿನಲ್ಲಿ ಹುಟ್ಟಿ, ಶಿವನ ಅಸ್ತಿತ್ವವನ್ನು, ಮಹಿಮೆಯನ್ನು ಜನರಿಗೆ ಮನವರಿಕೆ ಮಾಡಿಕೊಡಲು ತಮ್ಮ ಜೀವನವನ್ನೇ ತ್ಯಾಗ ಮಾಡಿದ್ದಾರೆ. ಕೆಲವರು ತಮ್ಮ ಪತ್ನಿ ಮತ್ತು ಮಕ್ಕಳನ್ನೆ ಭಿಕ್ಷುಕ ವೇಷದಲ್ಲಿ ಬಂದ ಶಿವನಿಗೆ ಅರ್ಪಿಸಿ ಶಿವನ ಬಗ್ಗೆ ತಮಗಿರುವ ಭಕ್ತಿಯ ಭಾವವನ್ನು ತೋರಿಸಿದ್ದಾರೆ.

ಇವರು ತಮಿಳುನಾಡಿನಲ್ಲಿ ಮಾತ್ರವಲ್ಲದೇ ಕರ್ನಾಟಕದಲ್ಲಿಯೂ ಪ್ರಸಿದ್ಧಿ ಪಡೆದು ಪೂಜನೀಯರಾಗಿದ್ದಾರೆ. ಇವರ ವಿಗ್ರಹಗಳು, ನಂಜನಗೂಡಿನ ಶ್ರೀಕಂಠೇಶ್ವರ ದೇವಸ್ಥಾನ, ಚಾಮರಾಜನಗರದ ಚಾಮರಾಜೇಶ್ವರ ದೇವಸ್ಥಾನ, ನಂಜನಗೂಡಿನ ಗಂಗಾಧರೇಶ್ವರ ದೇವಸ್ಥಾನಗಳಲ್ಲಿವೆ. ಬುಕ್ಕಸಾಗರದ ವೀರಭದ್ರೇಶ್ವರ ದೇವಸ್ಥಾನದ ಕಂಬಗಳ ಮೇಲೆ ಇವರ ಕೆಲವು ಶಿಲ್ಪಗಳಿವೆ. ಅಲ್ಲದೆ ಬಳ್ಳಾರಿಯ ಕೋಟೆ ಮಲ್ಲೇಶ್ವರ ದೇವಸ್ಥಾನದ ಪ್ರಕಾರ ಗೋಡೆಯ ಮೇಲೆ ಇವರ ಶಿಲ್ಪಗಳಿವೆ.

ತಮಿಳು, ತೆಲುಗು, ಕನ್ನಡ, ಸಂಸ್ಕೃತ ಈ ಎಲ್ಲ ಭಾಷೆಗಳಲ್ಲಿಯೂ ಇವರ ಚರಿತ್ರೆ ದೊರೆಯುವುದರಿಂದ ಇವರ ಹೆಸರುಗಳಲ್ಲಿ ವ್ಯತ್ಯಾಸ ಕಂಡು ಬರುತ್ತದೆ. ಈ ವ್ಯತ್ಯಾಸ ಉಚ್ಚಾರಣೆಯ ದೃಷ್ಟಿಯಿಂದ ಆಗಿದೆಯೋ ಹೇಗೆ ಎಂಬುದು ಸ್ಪಷ್ಟವಾಗುವುದಿಲ್ಲ. ಕೆಲವು ಪುರಾತನರಿಗೆ ಎಲ್ಲ ಸಾಹಿತ್ಯಗಳಲ್ಲಿಯೂ ಒಂದೇ ತೆರನಾದ ಹೆಸರುಗಳಿದ್ದರೆ, ಕೆಲವರಿಗೆ ಬೇರೆ ಬೇರೆ ಹೆಸರುಗಳಿವೆ.

ಸೋಮೇಶ್ವರ ದೇವಸ್ಥಾನದಲ್ಲಿರುವ ಪ್ರತಿಯೊಂದು ವಿಗ್ರಹಕ್ಕೂ ಕೆಂಪು ಬಟ್ಟೆಯನ್ನು ಸುತ್ತಿರುವುದರಿಂದ ವಿಗ್ರಹದ ವಿವರಗಳು ಸ್ಪಷ್ಟವಾಗಿ ತಿಳಿಯುವುದಿಲ್ಲ. ಇಲ್ಲಿರುವ 57 ಪುರಾತನರ ಜೀವನದ ವಿವರಗಳನ್ನು ಸಂಕ್ಷಿಪ್ತವಾಗಿ ಕೆಳಗೆ ವಿವರಿಸಲಾಗಿದೆ. ಆ ವಿಗ್ರಹಗಳ ಮೇಲಿರುವ ಫಲಕಗಳಲ್ಲಿರುವ ಹೆಸರುಗಳನ್ನೆ ಇಲ್ಲಿ ಕೊಡಲಾಗಿದೆ.

1. ತಿರು ನೀಲಕಂಠ : ಈತ ಚೋಳ ದೇಶದ ಚಿದಂಬರದವನು ಕ್ರಿ.ಶ. ಸು. 600-660ರ ಮಧ್ಯ ಕಾಲದಲ್ಲಿ ಜೀವಿಸಿದ್ದ. ವಂಶ ಪಾರಂಪರ್ಯವಾಗಿ ಬಂದ ಕುಂಬಾರ ವೃತ್ತಿಯನ್ನು ಕೈಗೊಂಡಿದ್ದ. ಪೂಜೆ ಮುಗಿಸಿ ದೇವಾಲಯದಿಂದ ತಿರುಗಿ ಬರುವಾಗ ವೇಶ್ಯೆಯೊಬ್ಬಳು ಎಂಜಲು ತಟ್ಟೆಯನ್ನು ತೊಳೆದು ನೀರನ್ನು ಬೀದಿಗೆ ಚೆಲ್ಲುತ್ತಾಳೆ. ಆ ನೀರು ನೀಲಕಂಠನ ಮೇಲೆ ಬೀಳುತ್ತದೆ. ವೇಶ್ಯೆಗೆ ತನ್ನ ತಪ್ಪಿನ ಅರಿವಾಗಿ ನೀಲಕಂಠನನ್ನು ಮನೆಗೆ ಕರೆದೊಯ್ದು ಪರಿಮಳ ದ್ರವ್ಯದಿಂದ ಕೂಡಿದ ನೀರಿನಿಂದ ಸ್ನಾನ ಮಾಡಿಸಿ ಕಳಿಸುತ್ತಾಳೆ. ನೀಲಕಂಠನ ಪತ್ನಿಯು ಮನೆಗೆ ಬಂದ ಪತಿಯ ಮೈಯಿಂದ ಸುವಾಸನೆ ಬರುತ್ತಿರುವುದನ್ನು ನೋಡಿ ಪತಿ ಹಾದಿ ತಪ್ಪಿರುವನೆಂದು ತಿಳಿದು 'ನೀವು ನನ್ನನ್ನು ಮುಟ್ಟಿದರೆ ನೀಲಕಂಠನಾಣೆ' ಎಂದು ಆಣೆ ಇಡುತ್ತಾಳೆ. ಹೀಗೆ ಒಬ್ಬರನ್ನೊಬ್ಬರು ಮುಟ್ಟದೆ ಅವರು 95 ವರ್ಷ ಕಳೆಯುತ್ತಾರೆ. ಇವರ ಆಣೆಯನ್ನು ಪರೀಕ್ಷಿಸಲು ಶಿವನು ಭಿಕ್ಷುಕ ವೇಷದಲ್ಲಿ ಇವರ ಮನೆಗೆ ಬಂದು, ಪಾತ್ರೆಯನ್ನು ಕೊಟ್ಟು 'ಇದು ನಿಮ್ಮ ಹತ್ತಿರವೇ ಇರಲಿ, ಮತ್ತೆ ಪುನಃ ಬಂದು ಇದನ್ನು ತೆಗೆದುಕೊಳ್ಳುತ್ತೇನೆಂದು' ಹೇಳಿ ಹೋಗುತ್ತಾನೆ. ಆದರೆ ಆ ಪಾತ್ರೆಯು ಕಾಣೆಯಾಗುತ್ತದೆ. ಶಿವನು ತಿರುಗಿ ಬಂದು ಕೇಳಿದಾಗ ಪತಿ-ಪತ್ನಿಯರು ನಿಜ ವಿಷಯ ಹೇಳಿದರೂ ಶಿವನು ನಂಬದೆ ನೀವು ಹೇಳುವುದು ನಿಜವೇ ಆಗಿದ್ದರೆ ಇಬ್ಬರೂ ಒಬ್ಬರ ಕೈಯನ್ನೊಬ್ಬರು ಹಿಡಿದು ಕೊಂಡು ನೀರಿನಲ್ಲಿ ಮುಳುಗಿರಿ

ಎಂದು ಹೇಳುತ್ತಾನೆ. ಇಬ್ಬರೂ ಕೋಲಿನ ಒಂದೊಂದು ತುದಿಯನ್ನು ಹಿಡಿದು ನೀರಿನಲ್ಲಿ ಮುಳುಗಿ ಮೇಲೆದ್ದಾಗ 16ರ ಹರಯದವರಾಗಿರುತ್ತಾರೆ. ಶಿವನು ನಿಜ ರೂಪ ತೋರಿಸುತ್ತಾನೆ.

ವಿಗ್ರಹ : ನೀಲಕಂಠನು ಕೈ ಮುಗಿದು ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ತಲೆಯ ಮೇಲೆ ಕಿರೀಟವಿದೆ.

2. ಇಯರ್ ಪಾಕೈ : ಈತ ಚೋಳನಾಡಿನ ಪುಗಾರ್ ಎಂಬ ಊರಿನ ಶ್ರೀಮಂತ ವ್ಯಾಪಾರಿ. ಬೇಡಿ ಬಂದವರಿಗೆ ಬೇಡಿದ್ದನ್ನು ಕೊಡುವ ದಾನ ಗುಣದ ಈತನ ದಾನ ಗುಣವನ್ನು ಪರೀಕ್ಷಿಸಲು ಒಮ್ಮೆ ಶಿವನು ಬ್ರಾಹ್ಮಣ ವೇಷದಲ್ಲಿ ಬಂದು 'ನನ್ನ ಪರಿಚರ್ಯೆಯನ್ನು ಮಾಡಲು ಒಬ್ಬ ವನಿತೆ ಬೇಕು' ಎಂದು ಕೇಳುತ್ತಾನೆ. ಇಯರ್ ಪಾಕೈನು ಎಲ್ಲ ಸೇವಕಿಯರನ್ನು ಕರೆದು ಇವರಲ್ಲಿ ಯಾರು ಬೇಕೋ ಆರಿಸಿಕೊಳ್ಳಿ ಎಂದು ಹೇಳುತ್ತಾನೆ. ಆದರೆ ಬ್ರಾಹ್ಮಣನು ಅವರಲ್ಲಿ ಯಾರನ್ನೂ ಇಷ್ಟಪಡದೆ ನಿನ್ನ ಪತ್ನಿಯನ್ನೆ ಕಳಿಸು ಎಂದು ಕೇಳುತ್ತಾನೆ. ಇಯರ್ ಪಾಕೈನು ಸ್ವಲ್ಪವೂ ಕೋಪಗೊಳ್ಳದೆ ತನ್ನ ಪತ್ನಿಯನ್ನು ಬ್ರಾಹ್ಮಣನ ಜೊತೆ ಕಳಿಸಲು ಒಪ್ಪುತ್ತಾನೆ. ಈತನ ದಾನ ಗುಣವನ್ನು ಮೆಚ್ಚಿ ಶಿವನು ನಿಜರೂಪ ತೋರಿಸುತ್ತಾನೆ.

ವಿಗ್ರಹ : ಇಯರ್ ಪಾಕೈ ಕೈ ಮುಗಿದು ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ತಲೆಯ ಮೇಲೆ ದೊಡ್ಡ ತುರುಬು ಇದೆ. ಕೈಯಲ್ಲಿ ಕಡಗಗಳಿವೆ.

3. ಮಾರನಾಯನಾರ್ : ಚೋಳ ದೇಶದ ಇಳೆಯಾನ್ ಕುಡಿ ಈತನ ಊರು. ವೃತ್ತಿಯಲ್ಲಿ ಒಕ್ಕಲಿಗನಾಗಿದ್ದ. ತನ್ನಲ್ಲಿದ್ದ ಸಂಪತ್ತನ್ನೆಲ್ಲ ಭಕ್ತರಿಗೆ ನೀಡಿ ಬಡವನಾದ. ಈತನನ್ನು ಪರೀಕ್ಷಿಸಲು ಶಿವನು ಮುದುಕನ ವೇಷದಲ್ಲಿ ಬಂದು ಹಸಿವೆಯೆಂದು ಹೇಳುತ್ತಾನೆ. ಆದರೆ ಮನೆಯಲ್ಲಿ ಏನು ಇಲ್ಲದ ಕಾರಣ ಹೊಲಕ್ಕೆ ಹೋಗಿ ಬಿತ್ತಿದ ಕಾಳನ್ನೇ ತಂದು ಅಡಿಗೆ ಮಾಡುತ್ತಾರೆ. ಊಟ ಬಡಿಸಲು ಬಾಳೆ ಎಲೆ ತರಲು ಮಗನನ್ನು ಹಿತ್ತಲಿಗೆ ಕಳಿಸಲು ಅಲ್ಲಿ ಮಗ ಹಾವು ಕಚ್ಚಿ ಸಾವನ್ನಪ್ಪುತ್ತಾನೆ. ಈ ವಿಷಯವನ್ನು ಮುದಕನಿಗೆ ತಿಳಿಸದೆ ಊಟ ಬಡಿಸಲು ಆತ ನಾನೊಬ್ಬನೇ ಊಟ ಮಾಡುವುದಿಲ್ಲ, ನಿಮ್ಮ ಮಗನನ್ನು ಕರೆಯಿರಿ ಎಂದು ಹೇಳುತ್ತಾನೆ. ಆಗ ಮಾರ ನಾಯನಾರನು ಮಗನನ್ನು ಎಬ್ಬಿಸಲು ಆತ ನಿದ್ದೆಯಿಂದ ಎದ್ದು ಬಂದಂತೆ ಬರುತ್ತಾನೆ. ಶಿವನು ನಿಜರೂಪ ತೋರುತ್ತಾನೆ.

ವಿಗ್ರಹ : ಕೈ ಮುಗಿದು ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ತಲೆಯ ಮೆಲೆ ತುರುಬು ಇದೆ. ಮೀಸೆಯಿದೆ.

4. ಮೈ ಮೊರುಳ್ ನಾಯನಾರ್ (ಮೆಯ್ ಪೊರಣಾಯನಾರ್): ದಕ್ಷಿಣ ಅರ್ಕಾಟ ಜಿಲ್ಲೆಯ ತಿರುವಕ್ಕೋವಲೂರಿನ ಅರಸನಾಗಿದ್ದ. ಕೆಲವು ಸಾಹಿತ್ಯಗಳಲ್ಲಿ ಈತ ಸೇನಾಧಿಪತಿಯಾಗಿದ್ದನೆಂದು ಇದೆ. ಶಿವಭಕ್ತರ ಬಗ್ಗೆ ಅಪಾರ ಪ್ರೀತಿಯುಳ್ಳವನಾಗಿದ್ದ ಈತನಿಂದ ಪರಾಭವ ಹೊಂದಿದ ಮುಕ್ತಿನಾಥನೆಂಬ ಅರಸನು ಭಕ್ತನ ವೇಷದಲ್ಲಿ ಬಂದು ಈತನನ್ನು ಕತ್ತಿಯಿಂದ ಇರಿಯುತ್ತಾನೆ. ಆದರೂ ಆತನ ಬಗ್ಗೆ ಕೋಪಗೊಳ್ಳದೆ ಅವನನ್ನು ಸತ್ಕರಿಸಿ ಕಳಿಸುತ್ತಾನೆ. ಈತನ ಭಕ್ತಿಗೆ ಮೆಚ್ಚಿದ ಶಿವನು ದರ್ಶನ ನೀಡುತ್ತಾನೆ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ತಲೆಯ ಮೇಲೆ ತುರುಬು ಇದೆ.

5. ವಿರಸೆ ನಾವಂದಾರ್ (ವರಮಿಂದರು): ಚೋಳನಾಡಿನ ತಿರುವಾರೂರಿನವನು, ಸದಾ ಶಿವನ ಧ್ಯಾನದಲ್ಲಿ ನಿರತನಾಗಿರುತ್ತಿದ್ದ. ಒಮ್ಮೆ ಜನರು ತಿರುನಾಳ ಹಬ್ಬವನ್ನಾ ಚರಿಸುತ್ತಿದ್ದಾಗ ಸುಂದರನು ಕುದುರೆಯನ್ನೇರಿ ಬಂದು ಜನರಿಗೆ ವಂದಿಸದೆ ದೇವಾಲಯ ದೊಳಗೆ ಹೋಗುತ್ತಾನೆ. ಈತನ ಗರ್ವವನ್ನು ನೋಡಿದ ವರಮಿಂದನು ಸುಂದರನನ್ನು ಕೊಲ್ಲಲು ಮುಂದಾದಾಗ ಜನರೂ ಆತನಿಗೆ ಬೆಂಬಲ ನೀಡುತ್ತಾರೆ. ಜನರ ಆಕ್ರೋಶವನ್ನು ಎದುರಿಸಲಾರದೆ ಸುಂದರನು ವನಕ್ಕೆ ಓಡಿಹೋಗಿ ಶಿವನನ್ನು ಪ್ರಾರ್ಥಿಸಲು ಶಿವನು ಈತನ ಪ್ರಾರ್ಥನೆಗೆ ಒಗೊಟ್ಟು ದೇವಾಲಯದ ಬಾಗಿಲು ಮುಚ್ಚಿ ಬಿಡುತ್ತಾನೆ. ಶಿವಲಿಂಗ ವನ್ನು ಕಾಣದೆ ಜನರು ಶಿವನಿಗೆ ಬಹಿಷ್ಕಾರ ಹಾಕಲು ಸುಂದರನು 63 ಪುರಾತನರನ್ನು ಹಾಡಿ ಹೊಗಳುತ್ತ ದೇವಾಲಯಕ್ಕೆ ಬರುತ್ತಾನೆ. ಸುಂದರನ ಒಳ್ಳೆಯತನಕ್ಕೆ ನೋಡಿ ವರಮಿಂದನು ತನ್ನನ್ನೇ ಇರಿದುಕೊಳ್ಳುತ್ತಿರುವಾಗ ಶಿವನು ನಿಜರೂಪ ತೋರಿ ಇಬ್ಬರನ್ನೂ ಆಶೀರ್ವದಿಸುತ್ತಾನೆ.

ವಿಗ್ರಹ: ಕೈ ಮುಗಿದು ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ತಲೆಯ ಮೇಲೆ ಕಿರೀಟವಿದೆ. ಎಡಗೈ ತೋಳಿನ ಮಧ್ಯೆ ಖಡ್ಗವಿದೆ.

6. ಅಮರನೀತಿ : ಚೋಳದೇಶದ ಪಳ್ಳೆಯಾರೈಯಲ್ಲಿ ವೈಶ್ಯ ಕುಲದಲ್ಲಿ ಹುಟ್ಟಿದ. ಬಟ್ಟೆ ನೇಯುವ ಕಾಯಕ ಕೈಗೊಂಡಿದ್ದು ತಾನು ನೇಯ್ದ ಬಟ್ಟೆಗಳನ್ನು ಮೊದಲು ಶಿವನಿಗರ್ಪಿಸಿ ಬಡವರಿಗೆ ಹಂಚುತ್ತಿದ್ದ. ಈತನನ್ನು ಪರೀಕ್ಷಿಸಲು ಶಿವನು ಬಡವನ ವೇಷದಲ್ಲಿ ಬಂದು ತನ್ನಲ್ಲಿರುವ ಒಂದು ಕೌಪೀನವನ್ನು ಕೊಟ್ಟು ತಾನು ಪುನಃ ಬಂದು ಕೇಳಿದಾಗ ಕೊಡಬೇಕೆಂದು ಹೇಳಿಹೋಗುತ್ತಾನೆ. ಆದರೆ ಆತ ಪುನಃ ಬಂದಾಗ ಕೌಪೀನ ಮಾಯವಾಗಿರುತ್ತದೆ. ಅದಕ್ಕೆ ಬದಲಾಗಿ ತನ್ನಲ್ಲಿರುವ ವಸ್ತ್ರ ಕೊಟ್ಟರೂ ಶಿವನು ಒಪ್ಪದೇ ತನ್ನಲ್ಲಿರುವ ಇನ್ನೊಂದು ಕೌಪೀನವನ್ನು ತಕ್ಕಡಿಯ ಒಂದು ತಟ್ಟೆಯಲ್ಲಿಟ್ಟು ಇದರ ತೂಕಕ್ಕೆ ಸಮನಾದ ವಸ್ತ್ರವನ್ನು ಕೊಡು ಎಂದು ಅಮರನೀತಿಗೆ ಹೇಳುತ್ತಾನೆ. ಅಮರ ನೀತಿಯು ತಾನು ನೇಯ್ದ ಎಲ್ಲ ವಸ್ತ್ರಗಳನ್ನಿಟ್ಟರೂ ತಟ್ಟೆ ಮೇಲೇಳುವುದಿಲ್ಲ. ನಂತರ ಅಮರನೀತಿ ಹೆಂಡತಿ ಮತ್ತು ಮಗನೊಂದಿಗೆ ಒಂದು ತಟ್ಟೆಯಲ್ಲಿ, ಶಿವನು ಇನ್ನೊಂದು

ತಟ್ಟೆಯಲ್ಲಿ ಕೂತಾಗ ತೂಕ ಸಮನಾಗುತ್ತದೆ. ಶಿವನು ಅವರನ್ನು ಕೈಲಾಸಕ್ಕೆ ಕರೆದೊಯ್ಯುತ್ತಾನೆ.

ವಿಗ್ರಹ: ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ತಲೆಯ ಮೇಲೆ ತುರುಬು ಇದೆ. ಎಡಗೈ ತೋಳಿನ ಮಧ್ಯದಲ್ಲಿ ಸುರುಳಿಯಾಕಾರದ ವಸ್ತುವಿದೆ. ಇದು ಬಹುಶಃ ಬಟ್ಟೆಯ ಸುರುಳಿಯಿರಬಹುದು.

7. ಎಪತ್ತಾರ್ (ಇರಿಭಕ್ತ): ಈತ ಚೋಳದೇಶದ ಕರವೂರಿನ ಒಬ್ಬ ಶಿವಭಕ್ತ. ಪ್ರತಿದಿನ ಶಿವನಿಗೆ ಹೂವು ಅರ್ಪಿಸುವುದು ಈತನ ಕಾಯಕ. ಒಂದು ದಿನ ದೇವಾಲಯಕ್ಕೆ ಹೋಗುವಾಗ ಪಟ್ಟದಾನೆಯು ಇನ್ನೊಬ್ಬ ಭಕ್ತನ ಕೈಯಲ್ಲಿದ್ದ ಹೂವನ್ನು ಕೆಡವುತ್ತದೆ. ಇದನ್ನು ಕಂಡ ಎರಿಪತ್ತಾರ್‌ನು ಆನೆಯನ್ನು ಕೊಲ್ಲುತ್ತಾನೆ. ಈ ವಿಷಯ ಅರಸನಿಗೆ ಗೊತ್ತಾಗಿ ದೇವಾಲಯಕ್ಕೆ ಬಂದು ನನ್ನ ಪಟ್ಟದಾನೆ ಮಾಡಿದತಪ್ಪಿಗೆ ಇಷ್ಟೇ ಶಿಕ್ಷೆ ಸಾಲದು ನನ್ನನ್ನೂ ಕೊಲ್ಲು ಎಂದು ತನ್ನಲ್ಲಿರುವ ಖಡ್ಗವನ್ನೆ ಕೊಡುತ್ತಾನೆ. ತನ್ನದೇ ತಪ್ಪಿದ್ದರೂ ಅರಸನು ತನ್ನನ್ನು ಕೊಲ್ಲಲು ಖಡ್ಗವನ್ನು ಕೊಡುತ್ತಿರುವುದನ್ನು ನೋಡಿ ಎರಿಪತ್ತಾರನು ತನ್ನನ್ನೇ ಇರಿದುಕೊಳ್ಳುತ್ತಿರುವಾಗ ಶಿವನು ನಿಜರೂಪ ತೋರುತ್ತಾನೆ. ಆನೆ ಮರಳಿ ಜೀವ ಪಡೆಯುತ್ತದೆ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ತಲೆಯ ಮೇಲೆ ತುರುಬು ಇದೆ. ಎಡಗೈ ತೋಳಿನ ಮಧ್ಯದಲ್ಲಿ ಖಡ್ಗವಿದೆ.

8. ಏನಾತಿನಾಥ (ಏಣಾದಿನಾಥ): ಬೇರೆ ಬೇರೆ ಸಾಹಿತ್ಯದಲ್ಲಿ ಈತನ ಕಥೆ ಬೇರೆ ಬೇರೆಯಾಗಿದೆ. ಶಂಕರ ಕೆದಿಲಾಯರ 'ಪೆರಿಯ ಪುರಾಣಂ ಭಾಗ -1'ರ ಪ್ರಕಾರ ಈತ ಚೋಳನಾಡಿನ ಎಯಿನನೂರಿನವನು. ಖಡ್ಗಯುದ್ಧಕಲಿಸುವ ಕಾಯಕ ಮಾಡುತ್ತಿದ್ದ. ಅತಿಶೂರನೆಂಬವನು ಈತನ ಉದ್ಯೋಗದಲ್ಲಿ ಪಾಲುದಾರಿಯಾಗಿದ್ದ. ಏನಾದಿನಾಥನ ವರಮಾನ ಹೆಚ್ಚಾದಾಗ ಅತಿಶೂಲ ಸಹಿಸಿಕೊಳ್ಳದೆ ಆತನನ್ನು ಕೊಲ್ಲಬೇಕೆಂದು ಯೋಚಿಸಿ ಶಿವಭಕ್ತನ ವೇಷದಲ್ಲಿ ಬಂದು ಕೊಲ್ಲಲು ಪ್ರಯತ್ನಿಸುತ್ತಾನೆ. ಶಿವಭಕ್ತರ ಬಗ್ಗೆ ಪ್ರೀತಿಯಿದ್ದ ಏನಾತಿನಾಥನು ಆತನನ್ನು ಕೊಲ್ಲದೆ ಸುಮ್ಮನೆ ನಿಂತಿರುವಾಗ ಅತಿಶೂರನು ಇವನನ್ನು ಕೊಲ್ಲಲು ಶಿವನು ಬಂದು ಏನಾತಿನಾಥನನ್ನು ಕೈಲಾಸಕ್ಕೆ ಕರೆದೊಯ್ಯುತ್ತಾನೆ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ತಲೆಯ ಮೇಲೆ ತುರುಬು ಇದೆ. ಎಡಗೈ ತೋಳಿನ ಮಧ್ಯ ಖಡ್ಗವಿದೆ.

9. ಕಣ್ಣಪ್ಪ : ತೊಂಡೈನಾಡಿನ ಉಡಪ್ಪೂರಿನವನು. ಈತ ತನ್ನ ಕಣ್ಣುಗಳನ್ನೆ ಕಿತ್ತು ಶಿವನಿಗೆ ಅರ್ಪಿಸಿದ ಕಥೆ ಚಿರಪರಿಚಿತವಾಗಿದ್ದುದರಿಂದ ಮತ್ತೆ ಆತನ ಕತೆ ವಿವರಿಸುವುದು ಅಪ್ರಸ್ತುತ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ತಲೆಯ ಮೇಲೆ ತುರುಬು ಇದೆ. ಎಡಗೈ ತೋಳಿನ ಮಧ್ಯದಲ್ಲಿ ಖಡ್ಗವಿದೆ.

10. ಕಾಲಯ : ಚೋಳನಾಡಿನ ತಿರಕ್ಕಡನೂರಿನ ಬ್ರಾಹ್ಮಣ ಕುಲದಲ್ಲಿ ಜನಿಸಿದ. ಪ್ರತಿದಿನ ಶಿವನಿಗೆ ಗುಗ್ಗಳ ಧೂಪವನ್ನು ಬೆಳಗುವ ನೇಮವನ್ನಿಟ್ಟು ಕೊಂಡಿದ್ದ. ತಿರುಪ್ಪ ನಂದಾಳಿನ ದೇವಾಲಯದ ಲಿಂಗ ಬಾಗಿದ್ದನ್ನು ಅಲ್ಲಿಯ ಅರಸನು ಆನೆಯ ಸಹಾಯದಿಂದ ಸರಿಪಡಿಸಲು ಪ್ರಯತ್ನಿಸಿದರೂ ಅದು ಸಾಧ್ಯವಾಗಿರಲಿಲ್ಲ. ಆದರೆ ಕಾಲಯನು ಒಂದು ಹಗ್ಗದ ತುದಿಯನ್ನು ತನ್ನ ಕೊರಳಿಗೆ ಮತ್ತು ಇನ್ನೊಂದು ತುದಿಯನ್ನು ಶಿವಲಿಂಗಕ್ಕೆ ಕಟ್ಟಿ ಎಳೆದು ಸರಿಪಡಿಸುತ್ತಾನೆ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ತಲೆಯ ಮೇಲೆ ತುರುಬು ಇದೆ. ಬಲಗೈ ತೋಳಿನ ಮಧ್ಯದಲ್ಲಿ ಖಡ್ಗವಿದೆ. ಆದರೆ ಈತನ ಕಥೆಯಲ್ಲಿ ಖಡ್ಗದ ಪ್ರಸ್ತಾಪವಿಲ್ಲ. ಎಡಗೈ ತೋಳಿನ ಮಧ್ಯದಲ್ಲಿ ಮೇಲೆ ಸುರುಳಿಯಾಕಾರದಲ್ಲಿರುವ ಒಂದು ವಸ್ತುವಿದೆ. ಬಹುಶಃ ಇದು ಹಗ್ಗದ ಸುರುಳಿಯಿರಬಹುದು.

11. ಮನಕಂಗರನ್ (ಮಾನಕಂಜರ): ಈತ ಕಂಜಾಪುರದ ಅರಸ. ತನ್ನ ಮಗಳನ್ನು ವಿಕ್ರಮಚೋಳನ ಮಗ ಪಗಲ್ಚೋಳನಿಗೆ ಕೊಟ್ಟು ಮದುವೆಯೇರ್ಪಡಿಸಿದ್ದ. ಶಿವನು ಈತನ ಭಕ್ತಿಯನ್ನು ಪರೀಕ್ಷಿಸಲು ಮದುವೆ ಮಂಟಪಕ್ಕೆ ಬಂದು ತನ್ನ ಜನಿವಾರಕ್ಕೆ ವಧುವಿನ ಕೂದಲನ್ನೇ ಕೇಳುತ್ತಾನೆ. ಮಾನಕಂಜರನು ತನ್ನಲ್ಲಿದ್ದ ಕತ್ತಿಯಿಂದ ಮಗಳ ಮುಡಿಯನ್ನು ಕತ್ತರಿಸಿ ಕೊಡುತ್ತಾನೆ. ಶಿವನು ಈತನ ಭಕ್ತಿಗೆ ಮೆಚ್ಚಿ ವಧುವಿನ ಮುಡಿಯನ್ನು ಮೊದಲಿನ ಹಾಗೆ ಬೆನ್ನ ತುಂಬ ಹರಡುವಂತೆ ದಯಪಾಲಿಸುತ್ತಾನೆ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ತಲೆಯ ಮೇಲೆ ತುರುಬು ಇದೆ. ಬಲಗೈ ತೋಳಿನ ಮಧ್ಯದಲ್ಲಿ ಖಡ್ಗವಿದೆ.

12. ವಾಲ್ ತಾಯನ್ (ಅರಿವಾಳ್ತಾಂಡ) : ಚೋಳನಾಡಿನ ಕಣಮಂಗಲಂ ಎಂಬ ಊರಿನವನು. ದಿನಗೂಲಿ ಮಾಡಿ ಬಂದ ಭತ್ತದಲ್ಲಿ ಕಪ್ಪು ಅಕ್ಕಿಯನ್ನು ತಾನುಂಡು ಕೆಂಪು ಅಕ್ಕಿಯನ್ನು ದೇವರ ನೈವೇದ್ಯಕ್ಕೆ ಉಪಯೋಗಿಸುತ್ತಿದ್ದ. ಒಂದು ದಿನ ನೈವೇದ್ಯ ವನ್ನು ಬುಟ್ಟಿಯಲ್ಲಿಟ್ಟುಕೊಂಡು ಹೋಗುವಾಗ ಬಿರುಗಾಳಿ ಬಂದು ಕಣ್ಣಲ್ಲಿ ಧೂಳು ತುಂಬಿ ಒಂದು ತೆಗ್ಗಿನಲ್ಲಿ ಬೀಳುತ್ತಾನೆ. ಬುಟ್ಟಿಯಲ್ಲಿರುವ ಪ್ರಸಾದವೂ ನೆಲಕ್ಕೆ ಬೀಳುತ್ತದೆ. ಆ ದಿನ ದೇವರಿಗೆ ಪ್ರಸಾದ ತಪ್ಪಿ ಹೋಯಿತಲ್ಲ ಎಂದು ಯೋಚಿಸಿ ತನ್ನ ಲ್ಲಿರುವ ಅರಿವಾಳಿನಿಂದ (ಕತ್ತಿಯಿಂದ) ತನ್ನ ಕತ್ತನ್ನು ಕತ್ತರಿಸಿಕೊಳ್ಳಲು ಹೋಗುತ್ತಾನೆ. ಆಗ ಶಿವನು ಪ್ರತ್ಯಕ್ಷನಾಗಿ ತಡೆಯುತ್ತಾನೆ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ಬಲಗೈ ತೋಳಿನ ಮಧ್ಯದಲ್ಲಿ ಖಡ್ಗವಿದೆ. ತಲೆಯ ಮೇಲೆ ತುರುಬು ಇದೆ.

13. ಅನಾಯ : ಈತ ಮಲೆನಾಡಿನ ತಿರುಮಂಗಲಂ ಎಂಬ ಊರಿನಲ್ಲಿ ಗೋವಳ ಕುಲದಲ್ಲಿ ಹುಟ್ಟಿದ. ಕಾಡಿನಲ್ಲಿ ದನ ಕಾಯುತ್ತ, ಕೊಳಲಿನಲ್ಲಿ ಪಂಚಾಕ್ಷರಿ ನುಡಿಸುತ್ತಿದ್ದರೆ ಕಾಡಿನಲ್ಲಿರುವ ಪ್ರಾಣಿ, ಪಕ್ಷಿಗಳು ಮೈಮರೆತು ಆಲಿಸುತ್ತ ನಿಲ್ಲುತ್ತಿದ್ದವು. ಈತ ನುಡಿಸುತ್ತಿದ್ದ ಇಂಪಾದ ಕೊಳಲಿನ ನಾದವನ್ನು ಕೇಳಲು ಈಶ್ವರನೇ ಸ್ವತಃ ಉಮೆಯೊಡನೆ ಬಂದು ಅನುಗ್ರಹಿಸಿದ. ಈತನ ಸಂಗೀತವನ್ನು ಯಾವಾಗಲೂ ಕೇಳುವ ಆಶೆಯಿಂದ ತನ್ನೊಡನೆ ಕೈಲಾಸಕ್ಕೆ ಕರೆದೊಯ್ದ.

ವಿಗ್ರಹ : ಇಲ್ಲಿ ಅನಾಯನು ಕೊಳಲು ಊದುತ್ತ ನಿಂತಿದ್ದಾನೆ. ತಲೆಯ ಮೇಲೆ ತುರುಬು ಇದೆ.

14. ಮೂರ್ತಿನಾಥ: ಪಾಂಡ್ಯನಾಡಿನ ಮಧುರಾಪುರಿಯಲ್ಲಿ ವಣಿಕ ಕುಲದಲ್ಲಿ ಜನಿಸಿದ. ನಿತ್ಯ ದೇವರಿಗೆ ಚಂದನ ತೇಯ್ದು ಅರ್ಪಿಸುವ ಕಾಯಕ ಮಾಡುತ್ತಿದ್ದ. ಕರ್ನಾಟಕದ ಒಬ್ಬ ಅರಸನು ಜೈನಧರ್ಮ ಸ್ವೀಕರಿಸಲು ಒತ್ತಾಯಿಸುತ್ತಾನೆ. ಈತನು ಒಪ್ಪದಿದ್ದಾಗ ಅನೇಕ ರೀತಿಯ ಹಿಂಸೆ ಕೊಡುತ್ತಾನೆ. ತನ್ನ ಮೊಳಕೈಯಿಂದಲೇ ಗಂಧ ತೇಯ್ದು ದೇವರಿಗೆ ಅರ್ಪಿಸುತ್ತಾನೆ. ಈತನಿಗೆ ತೊಂದರೆ ಕೊಟ್ಟ ಅರಸನಿಗೆ ಮಕ್ಕಳಿರುವುದಿಲ್ಲ. ಯಾರಾದರೂ ಒಬ್ಬ ಒಳ್ಳೆಯ ವ್ಯಕ್ತಿಯನ್ನು ಅರಸನನ್ನಾಗಿ ಮಾಡಬೇಕೆಂದು ಅಲ್ಲಿಯ ಜನರು ಒಂದು ಆನೆಗೆ ಕಣ್ಣು ಕಟ್ಟಿ ಅದು ಯಾರನ್ನುತನ್ನ ಸೊಂಡಿಲಿನಲ್ಲಿ ಎತ್ತಿಕೊಂಡು ಬರುತ್ತದೆಯೋ ಅವನನ್ನು ಅರಸನನ್ನಾಗಿ ಮಾಡಬೇಕೆಂದು ನಿಶ್ಚಯಿಸಿ ಆನೆಯನ್ನು ಬಿಡುತ್ತಾರೆ. ಅದು ಮೂರ್ತಿಯನ್ನು ಎತ್ತಿಕೊಂಡು ಹೋಗಲು ಆತನನ್ನೇ ಅರಸನನ್ನಾಗಿ ಮಾಡಲು ನಿರ್ಧರಿಸು ತ್ತಾರೆ. ಅದಕ್ಕೆ ಮೂರ್ತಿನಾಥನು ನೀವೆಲ್ಲ ಶೈವ ಧರ್ಮ ಸ್ವೀಕರಿಸುವುದಾದರೆ ಅರಸನಾಗಲು ಒಪ್ಪುತ್ತೇನೆಂದು ಹೇಳುತ್ತಾನೆ. ಜನರು ಇದಕ್ಕೆ ಒಪ್ಪಲು ಮೂರ್ತಿನಾಥನು ಅರಸನಾಗಿ ಅನೇಕ ವರ್ಷ ಆಳಿ, ಕೈಲಾಸ ಸೇರುತ್ತಾನೆ.

ವಿಗ್ರಹ : ಅಂಜಲಿಮುದ್ರೆಯಲ್ಲಿ ನಿಂತಿದ್ದಾನೆ. ತಲೆಯ ಮೇಲೆ ತುರುಬು ಇದೆ.

15. ಸುಬ್ರಮಣ್ಯ (ಸ್ಕಂದನಾಥ): ಚೋಳನಾಡಿನ ತುರುಪುಗಲೂರಿನಲ್ಲಿ ಬ್ರಾಹ್ಮಣ ಕುಲದಲ್ಲಿ ಜನಿಸಿದ. ಪ್ರತಿದಿನ ಸೂರ್ಯೋದಯಕ್ಕೆ ಮೊದಲೇ ಎದ್ದು ಸ್ನಾನ ಮಾಡಿ ಎಲ್ಲ ತರದ ಹೂಗಳನ್ನು ತಂದು ಮಾಲೆ ಮಾಡಿ ದೇವಾಲಯಕ್ಕೆ ಹೋಗಿ ಶಿವನಿಗೆ ಅರ್ಪಿಸುತ್ತಿದ್ದ. ಶಿವನು ಈತನ ಭಕ್ತಿಗೆ ಮೆಚ್ಚಿ ಗಣಪದವಿ ನೀಡಿದ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ಬಲಗಡೆ ಭುಜದ ಮೇಲೆ ಒಂದು ವಸ್ತು ನೇತುಹಾಕಿಕೊಂಡಿದ್ದಾನೆ. ಅದು ಹೂವಿನ ಮಾಲೆಯಿರಬಹುದೆಂದು ಊಹಿಸಬಹುದು.

16. ಪಶುಪತಿ : ಚೋಳದೇಶದ ತಿರುತ್ತಲೆ ಎಂಬಲ್ಲಿ ವೇದಿ ಕುಲದಲ್ಲಿ ಹುಟ್ಟಿದ. ಪ್ರತಿದಿನ ನಸುಕಿನಲ್ಲಿ ಶೀತಲವಾದ ತಟಾಕದಲ್ಲಿ ನಿಂತು ರುದ್ರ ಮಂತ್ರ ಜಪಿಸುತ್ತಿದ್ದ.

ಒಂದು ದಿನ ದೇವಾಲಯದಲ್ಲಿ 'ವಿಷಹರಣಲೀಲೆ'ಯ ಪ್ರಸಂಗವನ್ನು ಕೇಳಿ ಶಿವನನ್ನು ಈ ಕಂಟಕದಿಂದ ಪಾರು ಮಾಡುವುದು ಯಾವ ದೇವತೆಗಳಿಗೂ ಸಾಧ್ಯವಿಲ್ಲವೇ? ಎಂದು ಬಯ್ಯುತ್ತ, ತಾನೆ ರುದ್ರ ಮಂತ್ರವನ್ನು ಜಪಿಸಿ ಶಿವನನ್ನು ಪಾರು ಮಾಡುತ್ತೇನೆಂದು ತಟಾಕದಲ್ಲಿ ನಿಂತು ರುದ್ರ ಮಂತ್ರ ಜಪಿಸುತ್ತಾನೆ. ಶಿವನು ಮಾರುವೇಷದಲ್ಲಿ ಬಂದು ಶಿವನನ್ನು ಬಯ್ದಾಗ ಆತನ ಮೇಲೆ ಜಲವನ್ನು ಮಂತ್ರಿಸಿ ಎರಚುತ್ತಾನೆ. ಶಿವನ ಮಾರುವೇಷ ಹೋಗಿ ನಿಜರೂಪ ಕಾಣುತ್ತದೆ. ಕೈಲಾಸಕ್ಕೆ ಕರೆದೊಯ್ದು ಗಣಪದವಿ ನೀಡುತ್ತಾನೆ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ತಲೆಯ ಮೇಲೆ ತುರುಬು ಇದೆ.

17. ತಿರುನಾಳ್ವೆ ಪೋವರ್ : ಚೋಳನಾಡಿನ ಆದನೂರಿನಲ್ಲಿ ಹೊಲೆಯರ ಕುಲದಲ್ಲಿ ಹುಟ್ಟಿದ. ದೇವಾಲಯಗಳಿಗೆ ಬೇಕಾಗುವ ಭೇರಿ, ಮೃದಂಗ, ವೀಣೆಗೆ ಹೊಂದುವ ತಂತಿ ಮುಂತಾದವುಗಳನ್ನು ಮಾಡಿಕೊಡುತ್ತಿದ್ದ. ದೇವಾಲಯದಲ್ಲಿ ವಿಶೇಷ ಉತ್ಸವ ನಡೆಯುತ್ತಿದ್ದಾಗ ನೆಲ್ಲು ಮೂಟೆಗಳನ್ನು ಹೊತ್ತು ದೇವಾಲಯದ ಹೊರಗೆ ನಿಂತು ಕುಣಿಯುತ್ತಿರುತ್ತಾನೆ. ಈಶ್ವರನು ಆತನನ್ನು ಅಗ್ನಿಕುಂಡದಲ್ಲಿ ಮುಳುಗಿಸಿಕೊಂಡು ಬಾ ಎಂದು ನಂದಿಯನ್ನು ಕಳಿಸುತ್ತಾನೆ. ಅಗ್ನಿಕುಂಡದಲ್ಲಿ ಮುಳುಗಿಸಿದಾಗ ತಿರುನಾಳ್ವೆ ಪೋವರ್‌ನು ಹೊಸರೂಪ ತಾಳುತ್ತಾನೆ. ದೇವಾಲಯದೊಳಗೆ ಹೋದ ಆತನು ಶಿವಲಿಂಗದಲ್ಲಿ ಒಂದಾಗುತ್ತಾನೆ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ಬಲಗೈ ತೋಳಿನ ಮಧ್ಯದಲ್ಲಿ ದಂಡದ ಆಕಾರದ ಒಂದು ವಸ್ತುವಿದೆ. ಈತನು ಚರ್ಮದ ವಸ್ತುಗಳನ್ನು ಮಾಡುತ್ತಿದ್ದುದರಿಂದ ಚರ್ಮದ ವಸ್ತುವನ್ನು ಹಿಡಿದಿದ್ದಾನೆಂದು ಊಹಿಸಬಹುದು.

18. ತಿರುಕುರುಪ್ಪುತೊಂಡ : ತೊಂಡೈನಾಡಿನ ಕಾಂಚೀಪುರದವನು. ಬಟ್ಟೆಗಳನ್ನು ಮಡಿ ಮಾಡಿಕೊಡುವ ಕಾಯಕ ಮಾಡುತ್ತಿದ್ದ. ಶಿವನು ಈತನನ್ನು ಪರೀಕ್ಷಿಸಲು ಭಕ್ತನ ವೇಷದಲ್ಲಿ ಬಂದು ತನ್ನ ಬಟ್ಟೆ ಒಗೆದು.ಒಣಗಿಸಿ ಕೊಡಬೇಕೆಂದು ಹೇಳುತ್ತಾನೆ. ಭಕ್ತ ಬಟ್ಟೆ ಒಗೆದು ಒಣಗಿಸಿದಾಗ ಶಿವನು ಬೇಕೆಂತಲೆ ಮಳೆ ಬರುವಂತೆ ಮಾಡುತ್ತಾನೆ. ಮಾತಿಗೆ ತಪ್ಪಿದೆನಲ್ಲಾ ಎಂದು ತಿರುಕುರುಪ್ಪತೊಂಡನು ತನ್ನ ತಲೆಯನ್ನು ಒಗೆಯುವ ಕಲ್ಲಿಗೆ ಹೊಡೆದುಕೊಳ್ಳುತ್ತಿರುವಾಗ ಶಿವನು ತಡೆಯುತ್ತಾನೆ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ.

19. ಚಂಡೇಶ: ಚೋಳದೇಶದ ನಲ್ಲೂರಿನವನು. ದನಕಾಯುವ ಕೆಲಸ ಮಾಡುತ್ತಿದ್ದ. ಕಾಡಿನಲ್ಲಿಯೇ ಮರಳಲಿಂಗವನ್ನು ಮಾಡಿ ಪೂಜಿಸುತ್ತಿದ್ದ. ದನಗಳು ಆ ಲಿಂಗದ ಮೇಲೆ ಹಾಲು ಕರೆಯುತ್ತಿದ್ದವು. ದನಗಳು ಮನೆಗೆ ಹೊದ ನಂತರ ಹಾಲನ್ನು

ಕೊಡುತ್ತಿರಲಿಲ್ಲ. ಇದರಿಂದ ಸಿಟ್ಟಿಗೆದ್ದ ಜನರು ಆತನ ತಂದೆಗೆ ವಿಷಯ ತಿಳಿಸುತ್ತಾರೆ. ಆತನ ತಂದೆಯು ಕಾಡಿಗೆ ಬಂದು ನಿಜ ವಿಷಯ ತಿಳಿದು ಲಿಂಗವನ್ನು ಮುಟ್ಟಲು ಹೋದಾಗ ಚಂಡೇಶನು ತಂದೆಗೆ ಹೊಡೆಯಲು ಹೋಗುವಾಗ ಶಿವನು ಪ್ರತ್ಯಕ್ಷನಾಗಿ ಗಣಪದವಿ ನೀಡುತ್ತಾನೆ.

ವಿಗ್ರಹ :ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ತಲೆಯ ಮೇಲೆ ತುರುಬು ಇದೆ.

20. ತಿರುನಾಮಕ್ಕಾರಯ (ಸು) (ಅಪ್ಪರ್) : ತಿರುಮುನ್ನೈಪ್ಪಾಡಿ ನಾಡಿನ ತಿರುವಾರೂರು ಎಂಬ ಊರಲ್ಲಿ ವೇಳಾಳ ಕುಲದಲ್ಲಿ ಜನಿಸಿದ. ಶಿವನನ್ನು ಪೂಜಿಸುತ್ತ, ತಮಿಳಿನಲ್ಲಿ ತಿರುಪ್ಪದಿಗಳನ್ನು ಹಾಡುತ್ತಿರುತ್ತಾನೆ. ಶಿವನು ಈತನ ಹಾಡಿಗೆ ಮೆಚ್ಚಿ ತಿರುನಾಮಕ್ಕರಸು ಎಂಬ ಹೆಸರಿನಿಂದ ಪ್ರಸಿದ್ಧಿ ಹೊಂದು ಎಂದು ಆಶೀರ್ವದಿಸುತ್ತಾನೆ. ಅಂದಿನಿಂದ ತಿರುನಾಮಕ್ಕರಸನು ವಿಭೂತಿ, ರುದ್ರಾಕ್ಷಿ ಧರಿಸಿ ಕೈಯಲ್ಲಿ ಕತ್ತಿಯನ್ನು ಹಿಡಿದು, ಶಿವಧ್ಯಾನ ಮಾಡುತ್ತ, ತಿರುಪ್ಪದಿರಗಳನ್ನು ಹಾಡುತ್ತ, ಊರಿಂದೂರಿಗೆ ಸಂಚರಿಸುತ್ತ ಜೀವನ ಸಾಗಿಸುತ್ತಾನೆ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ಮುಂಗೈಗಳಲ್ಲಿ ಕಡಗಗಳಿವೆ. ಬಲಗೈ ತೋಳಿನ ಮಧ್ಯದಲ್ಲಿ ಕತ್ತಿಯಿದೆ. ಇದರ ಮೇಲಿನ ಭಾಗ ಅಗಲವಾಗಿದೆ.

21. ಕುಲಚ್ಚಿರೈ : ಪಾಂಡ್ಯನಾಡಿನ ಮಣಮೇರ್ಕುಡಿ ಈತನ ಊರು. ಅರಸನ ಅಸ್ಥಾನದಲ್ಲಿ ಮಂತ್ರಿ ಮಂಡಲದ ಮುಖ್ಯಸ್ಥನಾಗಿದ್ದ ಶಿವಭಕ್ತರನ್ನು ಆದರಿಸುತ್ತಿದ್ದ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ತಲೆಯ ಮೆಲೆ ತುರುಬು ಇದೆ.

22. ಕುರಮ್ಮಹಾರ್ : ಬಹುಶಃ ಈ ಹೆಸರನ್ನು ಮೇಲಿನ ಫಲಕದಲ್ಲಿ ತಪ್ಪಾಗಿ ಬರೆದಿರಬಹುದು. ಇದು ಕಾರಿಕಾಲಮ್ಮ ಬದಲಾಗಿ ಈ ಹೆಸರು ಇರಬಹುದೆಂದು ಊಹಿಸಲಾಗಿದೆ. ಈಕೆ ಚೋಳನಾಡಿನ ತಿರುಕ್ಕಾರೈಕ್ಕಾಲ ಎಂಬ ಊರಿನವಳು. ಪತಿಯು ಎರಡು ಮಾವಿನ ಹಣ್ಣುಗಳನ್ನು ತೆಗೆದಿಡಲು ಹೇಳಿರುತ್ತಾನೆ. ಆದರೆ ಮನೆಗೆ ಬಂದ ಭಕ್ತರಿಗೆ ಒಂದು ಹಣ್ಣನನ್ನು ತಿನ್ನಲು ಕೊಟ್ಟಿರುತ್ತಾಳೆ. ಪತಿಯು ಮನೆಗೆ ಬಂದು ಹಣ್ಣು ಕೇಳಲು, ಶಿವನನ್ನು ಪ್ರಾರ್ಥಿಸಲು ಇನ್ನೊಂದು ಹಣ್ಣನ್ನು ದಯಪಾಲಿಸುತ್ತಾನೆ. ವಿಷಯ ತಿಳಿದ ಪತಿಯು ಈಕೆ ಸಾಮಾನ್ಯವಾದವಳಲ್ಲವೆಂದು ಅವಳನ್ನು ತೊರೆದು ಹೋಗುತ್ತಾನೆ. ತನ್ನ ಪತಿಗೆ ತಾನು ಬೇಡವಾದ ಮೆಲೆ ಬದುಕಿರುವುದು ಉಚಿತವಲ್ಲವೆಂದು ಕೈಲಾಸಕ್ಕೆ ಹೊರಡುತ್ತಾಳೆ. ತನಗಿಂತ ಮೊದಲೇ ಕೈಲಾಸಕ್ಕೆ ಹೋಗಿರುವ ಹಿರಿಯ ಭಕ್ತರ ಹೆಜ್ಜೆಯಲ್ಲಿ ತಾನು ನಡೆಯುವುದು ಉಚಿತವಲ್ಲವೆಂದು ತಲೆಯಿಂದಲೇ ನಡೆದು ಕೈಲಾಸ ಸೇರುತ್ತಾಳೆ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾಳೆ.

23. ಅಪ್ಪದಿ : ಚೋಳನಾಡಿನ ತಿಂಗಳೂರಿನಲ್ಲಿ ಜನಿಸಿದ. ಸಂಗೀತ ಹಾಡಿ ಬಂದ ಹಣದಿಂದ ಜಂಗಮಾರ್ಚನೆ ಮಾಡುತ್ತಿದ್ದ. ಬ್ರಾಹ್ಮಣ ಕುಲುದವನಾದರೂ ಕೆಳಜಾತಿಯವನಾದ ತಿರುನಾಮಕ್ಕರಸನನ್ನು ಗುರುವೆಂದು ಸ್ವೀಕರಿಸಿದ್ದ. ಒಮ್ಮೆ ತಿರುನಾಮಕ್ಕರಸು ಇವರ ಮನೆಗೆ ಬಂದಾಗ ಅವರನ್ನು ಭೋಜನಕ್ಕೆ ಕರೆಯುತ್ತಾನೆ. ಬಾಳೆ ಎಲೆ ತರಲು ತೋಟಕ್ಕೆ ಹೋದ ಮಗನು ಹಾವು ಕಚ್ಚಿ ಸತ್ತಿರುತ್ತಾನೆ. ವಿಷಯತಿಳಿಸಿದರೆ ಗುರುವಿನ ಭೋಜನಕ್ಕೆ ವಿಘ್ನವಾಗುವುದೆಂದು ತಿಳಿದು ಮಗನ ಶವವನ್ನು ಚಾಪೆಯಲ್ಲಿ ಸುತ್ತಿಟ್ಟು ಭೋಜನ ಬಡಿಸುತ್ತಾನೆ. ಆದರೆ ತಿರುನಾಮಕ್ಕರಸನು ವಿಷಯ ತಿಳಿದು ತಿರುಪ್ಪರಿಕವನ್ನು ಹಾಡಿ ಮಗನ ಜೀವವನ್ನು ಮರಳಿ ತರಿಸುತ್ತಾನೆ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ಬೋಳು ತಲೆ ಇದ್ದು ಸುತ್ತಲೂ ಮಣಿಗಳ ಮಾಲೆಯಿದೆ. ಮುಂಗೈಗಳಲ್ಲಿ ಕಡಗಗಳಿವೆ.

24. ನೀಲನಕ್ಕ : ಚೋಳನಾಡಿನ ತಿರುಚ್ಚಾಮಂಗೈ ಎಂಬ ಊರಿನವನು. ಪ್ರತಿನಿತ್ಯ ಶಿವಪೂಜೆ ಮಾಡಿ ಭಕ್ತರಿಗೆ ಭೋಜನ ಮಾಡಿಸುವುದೇ ಜೀವನದ ಪರಮಗುರಿಯಾಗಿತ್ತು. ಒಂದು ದಿನ ಪತ್ನಿಯೊಡನೆ ದೇವಾಲಯಕ್ಕೆ ಹೋದಾಗ ಶಿವಲಿಂಗದ ಮೇಲೆ ಒಂದು ಜೇಡ ಬೀಳುತ್ತದೆ. ಆತನ ಪತ್ನಿಯು ಬಾಯಿಯಿಂದ ಊದಿ ಜೇಡವನ್ನು ಓಡಿಸುವಾಗ ಉಗುಳು ಶಿವಲಿಂಗದ ಮೇಲೆ ಬೀಳುತ್ತದೆ. ಇದನ್ನು ನೋಡಿ ಕೋಪಗೊಂಡ ನೀಲನಕ್ಕನು ಲಿಂಗವನ್ನು ಎಂಜಲು ಮಾಡಿದ್ದು ಮಹಾಪರಾಧ ನಿನ್ನನ್ನು ನಾನು ತ್ಯಜಿಸಿದ್ದೇನೆ ಎಂದು ಹೇಳುತ್ತಾನೆ. ಆದರೆ ಶಿವನು ನೀಲನಕ್ಕನ ಕನಸಿನಲ್ಲಿ ಬಂದು ನಿನ್ನ ಪತ್ನಿಯು ನನ್ನ ಮೇಲಿನ ಪ್ರೀತಿಯಿಂದ ಹಾಗೆ ಮಾಡಿದ್ದಾಳೆ. ಅವಳು ಉಗುಳಿದ ಜಾಗದಲ್ಲಿ ಬಿಟ್ಟು ಬೇರೆ ಕಡೆಗೆಲ್ಲ ಬೊಕ್ಕೆಗಳು ಎದ್ದಿವೆ ಎಂದು ಹೇಳುತ್ತಾನೆ. ನೀಲನಕ್ಕನಿಗೆ ತನ್ನ ತಪ್ಪಿನ ಅರಿವಾಗಿ ಪತ್ನಿಯೊಂದಿಗೆ ಮನೆಗೆ ಮರಳುತ್ತಾನೆ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ತಲೆಯ ಮೇಲೆ ಎತ್ತರವಾದ ತುರುಬು ಇದೆ.

25. ನಮಿನಂದಿ: ಚೋಳನಾಡಿನ ಏಮಪ್ಪೆರೂರ್‌ನವನು. ಈ ಊರಿನ ಹತ್ತಿರವಿರುವ ತಿರುವಾರೂರಿಗೆ ಆಗಾಗ ಹೋಗಿ ಅಲ್ಲಿಯ ದೇವಾಲಯದಲ್ಲಿ ದೀಪಗಳನ್ನು ಉರಿಸುತ್ತಿದ್ದ. ಒಮ್ಮೆ ದೀಪ ಉರಿಸಲು ತುಪ್ಪ ಮುಗಿದುಹೋದಾಗ ಅಲ್ಲಿಯೇ ಒಬ್ಬರ ಮನೆಗೆ ಹೋಗಿ ತುಪ್ಪ ಕೇಳುತ್ತಾನೆ. ಆ ಮನೆಯಾತ ನಮ್ಮ ಮನೆಯಲ್ಲಿ ತುಪ್ಪವಿಲ್ಲ, ಬೇಕಾದರೆ ನೀರು ಇದೆ. ಅದನ್ನೇ ಒಯ್ದು ದೀಪ ಉಸಿರು ಎಂದು ಹೇಳುತ್ತಾನೆ. ನಂತರ ನಮಿನಾದಿಯು ದೇವಾಲಯದ ಪಕ್ಕದಲ್ಲಿಯೇ ಇರುವ ಕೊಳದಿಂದ ನೀರು ತಂದು ದೀಪ ಉರಿಸಲು ದೀಪಗಳು ಉರಿಯುತ್ತವೆ. ಈ ವಿಷಯ ಕೇಳಿ ಅಲ್ಲಿಯ ಅರಸನು ಅವನನ್ನು ದೇವಸ್ಥಾನದ ಮುಖ್ಯಸ್ಥನನ್ನಾಗಿ ಮಾಡುತ್ತಾನೆ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ಬೋಳು ತಲೆ ಇದೆ. ತಲೆಯ ಸುತ್ತ ಮಣಿಗಳ ಮಾಲೆಯಿದೆ.

26. ಸಂಬಂಧನ್: ಚೋಳನಾಡಿನ ಸೀಕಾಜೆಯನು. ಈತನು ಕೈಗಳನ್ನು ತಾಳ ಮಾಡಿಕೊಂಡು ತಿರುಪ್ಪದಿಕಗಳನ್ನು ಹಾಡುತ್ತ ಊರಿಂದೂರಿಗೆ ಸಂಚರಿಸುತ್ತಿರುತ್ತಾನೆ. ಶಿವನು ಈತನಿಗೆ ತಾಳಗಳನ್ನು ದಯಪಾಲಿಸುತ್ತಾನೆ. ಜೈನ ಧರ್ಮದ ಪ್ರಾಬಲ್ಯವನ್ನು ಅಳಿಸಿ ಶೈವ ಧರ್ಮದ ಉನ್ನತಿಗೋಸ್ಕರ ಅನೇಕ ಕಷ್ಟನಷ್ಟಗಳನ್ನು ಅನುಭವಿಸುತ್ತಾನೆ. ಒಂದು ಶಿವ ದೇವಾಲಯದಲ್ಲಿ ಜೈನರು ಗೋಡೆಯನ್ನು ಒಡೆಯುತ್ತಿರುತ್ತಾರೆ. ಸಂಬಂಧನು ಕೋಪಗೊಂಡು ಅವರೊಡನೆ ಹೋರಾಡಿ ಓಡಿಸುತ್ತಾನೆ. ಅಲ್ಲಿಯ ಜೈನ ದೊರೆ ಕೂನಪಾಂಡ್ಯನು ಈತನಿಗೆ ತೊಂದರೆಗಳನ್ನು ಕೊಡುತ್ತಾನೆ. ಕೊನೆಗೆ ಸಂಬಂಧನು ಒಬ್ಬ ದೈವೀ ಪುರುಷನೆಂದು ತಿಳಿದು ಅರಸನು ಮತ್ತಿನ ಪೀಠವನ್ನು ಕೊಟ್ಟು ಮನ್ನಿಸಿ ಕಳಿಸುತ್ತಾನೆ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ತಲೆಯ ಮೇಲೆ ತುರುಬು ಇದೆ. ಬಲಗೈ ತೋಳಿನ ಮಧ್ಯದಲ್ಲಿ ಖಡ್ಗವಿದೆ.

27. ಕಲಿಕ್ಕಾಮನ್ : ಚೋಳದೇಶದ ಶ್ರಿಕುಡಿ ಎಂಬಲ್ಲಿ ಜನಿಸಿದ. ನಂಬಿಯಣ್ಣನಿಗೆ ಶಿವನು ದೂತನಾಗಿ ಹೋದ ವಿಷಯ ಕೇಳಿ ನಂಬಿಯಣ್ಣನ ಬಗ್ಗೆ ಮತ್ಸರ ಹೊಂದುತ್ತಾನೆ. ನಂಬಿಯಣ್ಣ ಎಂಬ ಹೆಸರನ್ನು ಕಿವಿಯ ಮೇಲೆ ಬೀಳುವಂತೆ ಯಾರಾದರೂ ಹೇಳಿದರೆ ಅವರನ್ನು ಕೊಲ್ಲಲ್ಲು ಹೋಗುತ್ತಾನೆ. ಶಿವನೇ ಸ್ವತಃ ಬಂದು ಇವರ ಮಧ್ಯ ಇರುವ ಜಗಳವನ್ನು ಬಿಡಿಸುತ್ತಾನೆ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ತಲೆ ಮೇಲೆ ಕಿರೀಟವಿದೆ.

28. ತಿರುಮೂಲನ್ : ಕೈಲಾಸದಲ್ಲಿ ವಾಸಿಸುತ್ತಿದ್ದ ಒಬ್ಬ ಮುನಿ ಅಗಸ್ತ್ಯರನ್ನು ನೋಡಬೇಕೆಂದು ಭೂಮಿಗೆ ಬಂದು ಕಾವೇರಿ ನದಿಯ ದಂಡೆಯ ಮೇಲೆ ಹೋಗುತ್ತಿರುತ್ತಾನೆ. ಅಲ್ಲಿ ಒಬ್ಬ ಗೋಪಾಲಕರ ಅಂದರೆ ತಿರುಮೂಲನ ದೇಹ ಸತ್ತುಬಿದ್ದಿರುತ್ತದೆ. ಆತನ ಸುತ್ತ ಹಸುಗಳು ಗೋಳಿಡುತ್ತಿರುತ್ತವೆ. ಈ ದೃಶ್ಯವನ್ನು ನೋಡಿ ಮುನಿಯ ಮನಕರಗಿ ತನ್ನ ದೇಹ ಬಚ್ಚಿಟ್ಟು ತಿರುಮೂಲನ ದೇಹ ಪ್ರವೇಶಿಸುತ್ತಾನೆ. ತಿರುಮೂಲನು ಊರಿಗೆ ಮರಳಿದಾಗ ಆತನಿಗೆ ತನ್ನ ಮನೆಯಾವುದೆಂದು ತಿಳಿಯುವುದಿಲ್ಲ. ಸಂಬಂಧಿಕರು ಈತನ ಬಗ್ಗೆ ಸಂಶಯಪಟ್ಟು ಮನೆಗೆ ಸೇರಿಸುವುದಿಲ್ಲ. ಮುನಿಯು ರಾತ್ರಿ ಮಠದಲ್ಲಿಯೇ ಕಳೆದು ಕಾಡಿಗೆ ಹೋಗಿ ಬಚ್ಚಿಟ್ಟ ತನ್ನ ದೇಹ ನೋಡುತ್ತಾನೆ. ಆದರೆ ಅದು ಅಲ್ಲಿಂದ ಮಾಯವಾಗಿರುತ್ತದೆ. ನಂತರ ತಾನು ಬಂದ ವಿಷಯ ನೆನಪಾಗಿ ಅನೇಕ ವರ್ಷಗಳವರೆಗೆ ಶಿವಯೋಗಾರೂಢನಾಗಿ ಶಿವಜ್ಞಾನ ಪಡೆಯುತ್ತಾನೆ 3000 ಪದ್ಯಗಳುಳ್ಳ 'ತಿರುಮಂದಿರಾಮ್' ಎಂಬ ತಮಿಳು ಕೃತಿಯನ್ನು ರಚಿಸಿ ಪ್ರಸಿದ್ಧಿ ಪಡೆಯುತ್ತಾನೆ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ಬೋಳು ತಲೆಯಿದೆ. ಎಡಗೈ ತೋಳಿನ ಮಧ್ಯದಲ್ಲಿ ಕೊಳವೆಯಾಕಾರದ ಒಂದ ವಸ್ತುವಿದೆ. ಬಹುಶಃ ಇದು ಆತ ಬರೆದ ಕೃತಿ ಇರಬಹುದೆಂದು ಊಹಿಸಬಹುದು.

29. ದಂಡಿ : ಚೋಳನಾಡಿನ ತಿರುವಾಯೂರಿನವನು. ಹುಟ್ಟು ಕುರುಡನಾಗಿದ್ದ. ಈಶ್ವರನ ಮಜ್ಜನಕ್ಕೆ ನೀರಿಲ್ಲವೆಂದು ಜೈನ ದೇವಾಲಯಗಳಿರುವ ಸ್ಥಳದಲ್ಲಿ ಬಾವಿ ತೋಡುತ್ತಿರುತ್ತಾನೆ. ಜೈನರು ಬಂದು ಕೆಲಸವನ್ನು ನಿಲ್ಲಿಸಲು ಹೇಳಿದರೂ ಈತ ನಿಲ್ಲಿಸುವುದಿಲ್ಲ. ಆಗ ಜೈನರು ನಿನಗೆ ಕಣ್ಣು ಕಾಣುವುದಿಲ್ಲ. ಆದರೆ ಕಿವಿಯೂ ಕೇಳಿಸುವುದಿಲ್ಲವೆ ಎಂದು ಬಯ್ದಾಗ ದಂಡಿಯು ಶಿವನ ಕೃಪೆಯಿಂದ ಕಣ್ಣನ್ನು ಪಡೆದು ತೋರಿಸುತ್ತೇನೆಂದು ಹೇಳಿ ತಾನು ತೋಡಿದ ಬಾವಿಯಲ್ಲಿ ಜಿಗಿದು, ಪಂಚಾಕ್ಷರಿ ಮಂತ್ರ ಜಪಿಸಿ ಕಣ್ಣಿನ ದೃಷ್ಟಿ ಪಡೆಯುತ್ತಾನೆ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ.

30. ಸೋಮಾದಿಮಾರ : ಚೋಳನಾಡಿನ ತಿರುವಂಬರದಲ್ಲಿ ಜನಿಸಿದ. ಶಿವಯಾಗವನ್ನು ಮಾಡಿ ಅದಕ್ಕೆ ಶಿವನನ್ನೇ ಬರಮಾಡಿಕೊಳ್ಳಬೇಕೆಂದು ಆತನಿಗೆ ಆಶೆಯುಂಟಾಗುತ್ತದೆ. ಈ ಕೆಲಸ ನಂಬಿಯಿಂದ ಸಾಧ್ಯವೆಂದು ತಿಳಿದು ಆತನಿಗೆ ಪೂಜೆಗೆ ಹೂವು ತಂದು ಕೊಡುತ್ತಿರುತ್ತಾನೆ. ಈತನ ಕಾಯಕಕ್ಕೆ ನಂಬಿಯು ಧನವನ್ನು ಕೊಡಲು ಹೋದಾಗ ಅದನ್ನು ನಿರಾಕರಿಸಿ, ಬದಲಾಗಿ ಶಿವನನ್ನು ಯಾಗ ಮಂಟಪಕ್ಕೆ ಕರೆತರಬೇಕೆಂದು ಕೇಳುತ್ತಾನೆ. ನಂಬಿಯು ಶಿವನನ್ನೇ ಯಾಗಕ್ಕೆ ಕರೆತರುತ್ತಾನೆ. ಸೋಮಾರಿ ಮಾರನು ಯಾಗ ಮಾಡಿ ಗಣಪದವಿ ಪಡೆಯುತ್ತಾನೆ.

ವಿಗ್ರಹ : ಬಲಗೈಯಲ್ಲಿ ಯಾಗಕ್ಕೆ ತುಪ್ಪ ಸುರಿಯಲು ಬೇಕಾಗುವ ಸೌಟನ್ನು ಹಿಡಿದು ನಿಂತಿದ್ದಾನೆ.

31. ಸಕ್ಕಿಯಾರ್ (ಶಾಕ್ಯನಾಥ): ಚೋಳನಾಡಿನ ತಿರುಚ್ಚಮಂಗೈನಲ್ಲಿ ಜನಿಸಿದ. ಪ್ರತಿದಿನ ಶಿವಲಿಂಗವನ್ನು ಪೂಜಿಸುತ್ತಿರುತ್ತಾನೆ. ಒಂದು ದಿನ ಶಿವಲಿಂಗದ ಪೂಜೆಗೆ ಹೋಗುತ್ತಿರುವಾಗ ಬಯಲಲ್ಲಿ ಶಿವಲಿಂಗ ಕಾಣುತ್ತದೆ. ಸಕ್ಕಿಯಾರ್‌ನು ತನಗಾದ ಸಂತೋಷದಲ್ಲಿ ತನಗರಿವಿಲ್ಲದಂತೆಯೇ ರಸ್ತೆಯಲ್ಲಿ ಬಿದ್ದಿದ್ದ ಒಂದು ಕಲ್ಲಿನಿಂದ ಹೊಡೆಯುತ್ತಾನೆ. ಮರುದಿನದಿಂದ ಇದೇ ಕುಚೇಷ್ಟೆ ಮುಂದುವರಿಸುತ್ತಾನೆ. ಒಂದು ದಿನ ಊಟ ಮಾಡುತ್ತಿದ್ದಾಗ ಪೂಜೆಯ ನೆನಪಾಗಿ ಓಡುತ್ತ ಹೋಗಿ ಒಂದು ದೊಡ್ಡ ಕಲ್ಲನ್ನೇ ಎತ್ತಿ ಹೊಡೆಯಲು ಹೋದಾಗ ಶಿವನು ದರ್ಶನ ನೀಡುತ್ತಾನೆ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ.

32. ಸಿರಾಪುಲಿ (ಚಿರಪ್ಪುಲಿ) : ಚೋಳನಾಡಿನ ತಿರುವಾಕ್ಕರ್‌ನಲ್ಲಿ ಜನಿಸಿದ. ಜಂಗಮನ ಪಾದ ತೊಳೆದ ತೀರ್ಥವೇ ಪಾವನವೆಂದು ತಿಳಿದು ಪ್ರತಿದಿನ ಜಂಗಮರ ಸೇವೆ ಮಾಡುತ್ತಿದ್ದ. ಶಿವನು ಈತನ ಭಕ್ತಿಯನ್ನು ಪರೀಕ್ಷಿಸಲೋಸುಗ ಒಮ್ಮೆ ಒಬ್ಬ ಜಂಗಮನೂ ದೊರೆಯದಂತೆ ಮಾಡುತ್ತಾನೆ. ಜಂಗಮನ ನಿರೀಕ್ಷೆಯಲ್ಲಿ 40 ದಿನಗಳವರೆಗೆ ಉಪವಾಸ ಮಾಡುತ್ತಾನೆ. ಕೊನೆಗೆ ತನ್ನ ಪ್ರಾಣವನ್ನೇ ಕಳೆದುಕೊಳ್ಳುತ್ತಿರುವಾಗ ಶಿವನು ಜಂಗಮನ ವೇಷದಲ್ಲಿ ಒಂದು ಪೂಜೆ ಸ್ವೀಕರಿಸಿ ನಿಜರೂಪ ತೋರುತ್ತಾನೆ.

33. ಸಿರಿತೊಂಡರ್ (ಶಿರಿಯಾಳ) : ತಿರಿಚ್ಚೆಂಗಟ್ಟಕುಡಿ ಈತನ ಊರು. ಅರಸನ ಆಸ್ಥಾನದಲ್ಲಿ ಸೇನಾಪತಿಯಾಗಿದ್ದ. ಪ್ರತಿದಿನ ಶಿವನನ್ನು ನಿಷ್ಠೆಯಿಂದ ಪೂಜಿಸುತ್ತಿದ್ದ ಈತನ ಭಕ್ತಿಯನ್ನು ಪರೀಕ್ಷಿಸಲು ಶಿವನು ಈತನ ಮನೆಗೆ ಭೈರವನ ವೇಷದಲ್ಲಿ ಬಂದು 'ನಾನು ಮಗುವಿನ ಮಾಂಸದ ಅಡಿಗೆಯನ್ನು ಮಾತ್ರ ಉಣ್ಣುವುದು' ಎಂದು ಹೇಳುತ್ತಾನೆ. ದಂಪತಿಗಳು ತಮ್ಮ ಮಗನನ್ನೇ ಕೊಂದು ಅಡಿಗೆ ಮಾಡಿ ಬಡಿಸುತ್ತಾರೆ. ಭೈರವನು ನನ್ನ ಜೊತೆ ಊಟಕ್ಕೆ ನಿಮ್ಮ ಮಗನನ್ನೂ ಕರೆಯಿರಿ ಎಂದು ಹೇಳುತ್ತಾನೆ. ಸಿರಿ ತೊಂಡರ್‌ನು ವಿಷಯ ಮುಚ್ಚಿಟ್ಟು ತನ್ನ ಮಗನನ್ನು ಸುಮ್ಮನೆ ಕೂಗುತ್ತಾನೆ. ಮಗನು ಹೊರಗಿನಿಂದ ಓಡಿ ಬರಲು, ಭೈರವನ ಹತ್ತಿರ ಹೋಗುತ್ತಾರೆ. ಆದರೆ ಅಲ್ಲಿ ಭೈರವನು ಇರುವುದಿಲ್ಲ. ಬಡಿಸಿದ ಭೋಜನವೂ ಇರುವುದಿಲ್ಲ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ಬೋಳು ತಲೆಯಿದೆ.

34. ಗಣನಾಥನ್: ಚೋಳನಾಡಿನ ಸೀರ್ಕಾಳಿಯಲ್ಲಿ ಬ್ರಾಹ್ಮಣ ಕುಲದಲ್ಲಿ ಜನಿಸಿದ. ದೇವಸ್ಥಾನದಲ್ಲಿ ಕಸಗುಡಿಸುವುದು, ಹೂಗಳನ್ನು ಕಿತ್ತು ಮಾಲೆ ಮಾಡಿ ದೇವರಿಗೆ ಅರ್ಪಿಸುವುದು ಈತನ ಕಾಯಕವಾಗಿತ್ತು. ಲಿಂಗಹೀನರನ್ನು ಕಂಡರೆ ಅವರು ಬೇಡಿದುದನ್ನು ಕೊಟ್ಟು, ಲಿಂಗವನ್ನು ಕಟ್ಟುತ್ತಿದ್ದ. ಈತನನ್ನು ಪರೀಕ್ಷಿಸಲು ಶಿವನು ಲಿಂಗವನ್ನು ಬಿಟ್ಟು ತುಳಸಿ ಮಣಿಗಳ ಮಾಲೆಯನ್ನು ಧರಿಸಿ ಬಂದಾಗ ಆತನನ್ನೂ ಬಿಡದೆ ಲಿಂಗವನ್ನು ಕಟ್ಟಿ, ವಿಭೂತಿ ಧರಿಸುತ್ತಿರುವಾಗ ಶಿವನು ಈತನ ಭಕ್ತಿಗೆ ಮೆಚ್ಚಿ ಕೈಲಾಸಕ್ಕೆ ಕರೆದೊಯ್ದು ಗಣಸಮೂಹದ ಮುಖ್ಯಸ್ಥನನ್ನಾಗಿ ಮಾಡಿದ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ಬೋಳು ತಲೆಯಿದ್ದು ತಲೆಯ ಸುತ್ತ ಮಣಿಗಳ ಮಾಲೆಯಿದೆ.

35. ಕುಚುರುವನ್ (ಕೂರ್ರುವನ್) : ಪಾಂಡ್ಯನಾಡಿನ ಕಳಂದೈನಲ್ಲಿ ಸೇನಾಧಿಪತಿಯಾಗಿದ್ದ. ಅನೇಕ ಯುದ್ಧಗಳನ್ನು ಮಾಡಿ ವಿಷಯಗಳಿಸಿದ್ದ. ಈತ ಚೋಳ ವಂಶಸ್ಥನಾಗಿದ್ದರಿಂದ ಈತನಿಗೆ ಪಟ್ಟಕಟ್ಟಲು ಅಲ್ಲಿಯ ಜನರು ಒಪ್ಪಲಿಲ್ಲ. ನಂತರ ಈತ ನಟರಾಜನ ಪಾದಗಳೇ ತನಗೆ ರಾಜಮಕುಟವೆಂದು ನಿಶ್ಚಿಯಿಸಿ ಅವನು ಹೆಸರಿನಲ್ಲಿಯೇ ರಾಜ್ಯವಾಳುತ್ತಾನೆ. ಜನರ ಪ್ರೀತಿಗೂ ಪಾತ್ರನಾಗುತ್ತಾನೆ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ತಲೆಯ ಮೇಲೆ ಕಿರೀಟವಿದೆ. ಎಡಗೈ ತೋಳಿನ ಮಧ್ಯದಲ್ಲಿ ಖಡ್ಗವಿದೆ.

36. ಪುಗಳ್‌ಚೋಳ : ಚೋಳನಾಡಿನ ಎರೈಯಾರ್ ಈತನ ಊರು. ಅಲ್ಲಿಯ ಅರಸನಾಗಿದ್ದ. ಮಲೈ ನಾಡಿನ ಅಡಿಗನ್ ಎಂಬವನು ಕಾಣಿಕೆ ಒಪ್ಪಿಸಿರುವುದಿಲ್ಲ. ಕೋಪಗೊಂಡ ಪುಗಳ್‌ಚೋಳನು ಆತನ ಮೇಲೆ ಯುದ್ಧ ಮಾಡಲು ಸೈನ್ಯವನ್ನು ಕಳಿಸುತ್ತಾನೆ. ವೈರಿಯನ್ನು ಸೋಲಿಸಿದ. ಸೈನಿಕರು ವೈರಿಗಳ ಸಂಪತ್ತು, ಯುದ್ಧದಲ್ಲಿ ಸತ್ತ ಅನೇಕ ಸೈನಿಕರ ರುಂಡಗಳನ್ನು ತಂದಿರುತ್ತಾರೆ. ಆ ರುಂಡಗಳ ಮಧ್ಯದಲ್ಲಿ ಒಂದು ರುಂಡಕ್ಕೆ ಹೆಣೆದ ಜಡೆ ಇದ್ದು ಅದು ಶಿವಭಕ್ತನದಾಗಿರುತ್ತದೆ. ಒಬ್ಬ ಶಿವಭಕ್ತನ ಹತ್ಯೆಗೆ ಕಾರಣನಾಗಿ ಪಾಪಕ್ಕೆ ಗುರಿಯಾದೆನಲ್ಲ ಎಂದು ಅಗ್ನಿ ಕುಂಡದಲ್ಲಿ ಹಾರಿ ಮುಕ್ತಿಯನ್ನು ಹೊಂದುತ್ತಾನೆ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ತಲೆಯ ಮೇಲೆ ಕಿರೀಟವಿದೆ. ಎಡಗೈ ತೋಳಿನ ಮಧ್ಯದಲ್ಲಿ ಖಡ್ಗವಿದೆ.

37. ನರಸಿಂಗಮಾನಯಾ : ಚೋಳನಾಡಿನ ತಿರುನಾವಲ್ಲೂರದ ಅರಸನಾಗಿದ್ದ. ಅನೇಕ ದೇವಾಲಯ ಉಪವನ, ಸರೋವರಗಳನ್ನು ಕಟ್ಟಿಸಿದ. ಜಂಗಮರು ಬಂದು ಏನೇ ಬೇಡಿದರೂ ನೀಡುವುದು ನಿತ್ಯ ನಿಯಮವಾಗಿತ್ತು. ಈತನನ್ನು ಪರೀಕ್ಷಿಸಲು ಶಿವನು ಜಂಗಮ ವೇಷದಲ್ಲಿ ಬಂದು ಧನವನ್ನು ಕೇಳುತ್ತಾನೆ. ನರಸಿಂಗಮಾನಯನು ಶಿವನಿಗೆ ಸಾಕಷ್ಟು ಧನ-ಕನಕಗಳನ್ನು ಕೊಟ್ಟು ಶಿವನ ಕೃಪೆಗೆ ಪಾತ್ರನಾಗುತ್ತಾನೆ.

38. ಅತಿವತ್ತ (ಅತಿಭಕ್ತ) : ಚೋಳನಾಡಿನ ನಾಗಪಟ್ಟಣದಲ್ಲಿ ಬೆಸ್ತರ ಕುಲದಲ್ಲಿ ಜನಿಸಿದ. ಪ್ರತಿ ದಿನ ಮೀನು ಹಿಡಿಯಲು ಹೋದಾಗ ಮೊದಲ ಮೀನನ್ನು ಶಿವನಿಗರ್ಪಿಸಿ ಅದನ್ನು ಮತ್ತೆ ಸಮುದ್ರದಲ್ಲಿಯೇ ಬಿಡುತ್ತಿದ್ದ. ಒಂದು ದಿನ ವಜ್ರ, ಮುತ್ತು ರತ್ನಗಳಿಂದ ಅಲಂಕರಿಸಲ್ಪಟ್ಟ ಚಿನ್ನದ ಮೀನು ಸಿಗುತ್ತದೆ. ಅತಿವತ್ರನು ಚಿನ್ನಕ್ಕೆ ಆಸೆ ಪಡದೆ ಮೀನು ಸಿಕ್ಕರೂ ಅದನ್ನು ನೀರಿಗೆ ಬಿಡುತ್ತಾನೆ. ಈತನ ಭಕ್ತಿಗೆ ಮೆಚ್ಚಿದ ಶಿವನು ಕೈಲಾಸ ಪದವಿ ನೀಡಿದ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ಬೋಳು ತಲೆಯಿದೆ

39. ಕಲಿಕಂಬನ : ಭಕ್ತರಿಗೆ ಭೋಜನ ಮಾಡಿಸುವುದರಲ್ಲಿ ತೃಪ್ತಿ ಪಡುತ್ತಿದ್ದ. ಮನೆಗೆ ಬಂದ ಭಕ್ತರ ಪಾದ ತೊಳೆದು ಭೋಜನ ಮಾಡಿಸಿ ಕಳುಹಿಸುತ್ತಿದ್ದ. ಇವರ ಮನೆಯಲ್ಲಿ ಸೇವಕನಾಗಿದ್ದನೊಬ್ಬ ಜಂಗಮ ವೇಷದಲ್ಲಿ ಈತನ ಮನೆಗೆ ಬರುತ್ತಾನೆ. ಕಲಿಕಂಬನು ತನ್ನ ಪತ್ನಿಗೆ ಜಂಗಮನ ಪಾದ ತೊಳೆಯಲು ನೀರು ಹಾಕಲು ಹೇಳುತ್ತಾನೆ. ಆದರೆ ಪತ್ನಿಯು ಆ ಸೇವಕನನ್ನು ಗುರುತಿಸಿ ನೀರು ಹಾಕಲು ನಿರಾಕರಿಸುತ್ತಾಳೆ. ಕಲಿಕಂಬನು ಪತ್ನಿಯು ಭಕ್ತನ ಸೇವೆಗೆ ಅಡ್ಡಿ ಮಾಡಿದಳೆಂದು ಅವಳ ಕೈ ಕತ್ತರಿಸುತ್ತಾನೆ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ಬೋಳು ತಲೆಯಿದೆ.

40. ಕಲಿಯಾನ್ (ಕಲಿನೀತಿ) : ತೊಂಡೈನಾಡಿನ ತಿರುವೈಯೂರಿನಲ್ಲಿ ಗಾಣಿಗರ ಮನೆಯಲ್ಲಿ ಜನಿಸಿದ. ಪ್ರತಿದಿನ ದೇವಾಲಯದಲ್ಲಿ ದೀಪ ಹಚ್ಚುವ ಕಾಯಕ ಕೈಗೊಂಡಿದ್ದ. ಶಿವನಿಗೆ ಈತನನ್ನು ಪರೀಕ್ಷಿಸಬೇಕೆಂಬ ಇಚ್ಛೆಯುಂಟಾಗಿ ಅವನಲ್ಲಿರುವ ಸಂಪತ್ತನ್ನೆಲ್ಲ ಕಳೆದುಕೊಳ್ಳುವಂತೆ ಮಾಡುತ್ತಾನೆ. ಕೊನೆಗೆ ತನ್ನ ರಕ್ತದಿಂದಲೇ ದೀಪ ಉರಿಸಿರಬೇಕೆಂದು ಯೋಚಿಸಿ ಕತ್ತಿಯಿಂದ ತನ್ನ ಶಿರಸ್ಸನ್ನೇ ಕೊಯ್ದುಕೊಳ್ಳುತ್ತಿರುವಾಗ ಶಿವನು ನಿಜರೂಪ ತೋರುತ್ತಾನೆ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ತಲೆಯ ಮೇಲೆ ತುರುಬು ಇದೆ.

41. ಸತ್ತಿ (ಶಕ್ತಿನಾಥ) : ಚೋಳನಾಡಿನ ಕಣಂಜಿಯಲ್ಲಿ ಹುಟ್ಟಿದ ಈತ ಪರಮ ಶಿವಭಕ್ತನಾಗಿದ್ದ. ಯಾರಾದರೂ ಶಿವನನ್ನು ನಿಂದಿಸಿದರೆ ಅವರ ನಾಲಿಗೆಯನ್ನೇ ಕತ್ತರಿಸುತ್ತಿದ್ದ. ಒಮ್ಮೆ ಶಿವನು ಈತನನ್ನು ಪರೀಕ್ಷಿಸಲು ಮಾನವ ರೂಪದಲ್ಲಿ ಬಂದು ಶಿವನನ್ನು ಬೂದಿಬಡಕ, ಕಪಾಲಿಯನ್ನು ನೀನು ಈಶನೆಂದು ಪೂಜಿಸುತ್ತೀಯಲ್ಲ ಎಂದು ಹಳಿಯುತ್ತಿರಲು ಸತ್ತಿಯು ಕೋಪಗೊಂಡು ಆತನನ್ನು ಇರಿಯಲು ಹೋಗುತ್ತಾನೆ. ಆಗ ಶಿವನು ನಿಜರೂಪ ತೋರಲು ತನ್ನ ತಪ್ಪಿಗೆ ಪ್ರಾಯಶ್ಚಿತ ಮಾಡಿಕೊಳ್ಳಲು ತನ್ನನ್ನೇ ಇರಿದುಕೊಳ್ಳುತ್ತಿರುವಾಗ ಶಿವನು ತಡೆದು ಗಣಪದವಿ ನೀಡುತ್ತಾನೆ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ತಲೆಯ ಮೇಲೆ ದೊಡ್ಡದಾದ ತುರುಬು ಇದೆ.

42. ಐಯಡಿಗಳ್ ಕಡವರ್ತೋನೆ (ಪಂಚಪಾದ) : ಕಾಂಚೀಪುರದ ಅರಸನಾಗಿದ್ದ. ಸಂಸ್ಕೃತ ಮತ್ತು ತಮಿಳು ಭಾಷೆಗಳಲ್ಲಿ ಕವಿತೆ ಬರೆದು ದೇವಸ್ಥಾನಗಳಲ್ಲಿ ಹಾಡುತ್ತಿದ್ದ. ಅನೇಕ ದೇವಾಲಯಗಳನ್ನು ಕಟ್ಟಿಸಿ, ಶಿವಭಕ್ತರಿಗೆ ಭೂಮಿದಾನ ನೀಡುತ್ತಿದ್ದ. ತನ್ನ ಜೀವಿತ ಕಾಲವನ್ನೆಲ್ಲ ದೇವರ ಸೇವೆ ಮಾಡುತ್ತ ಕಳೆದು ಮುಕ್ತಿ ಪಡೆದ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ತಲೆಯ ಮೇಲೆ ಕಿರೀಟವಿದೆ. ಎಡಗೈ ತೋಳಿನ ಮಧ್ಯೆ ಖಡ್ಗ ಹಿಡಿದಿದ್ದಾನೆ.

43. ಕಣಂ ಪುಲ್ಲ ನಂಬಿ: ಚೋಳನಾಡಿನ ಇರುಕ್ಕು ವೇಳೂರಿನಲ್ಲಿ ಒಂದು ಶ್ರೀಮಂತ ಕುಟುಂಬದಲ್ಲಿ ಜನಿಸಿದ. ದೇವಾಲಯದಲ್ಲಿ ದೀಪ ಬೆಳಗುತ್ತ ತನ್ನಲ್ಲಿರುವ ಸಂಪತ್ತನ್ನೆಲ್ಲ ಕಳೆದುಕೊಂಡ. ಹುಲ್ಲು ಕೊಯ್ದು ಮಾರಿ ಬಂದ ದುಡ್ಡಿನಿಂದ, ಕೆಲವು ಸಲ ಅದೇ ಹುಲ್ಲನ್ನು ಬತ್ತಿಯಂತೆ ಹೊಸೆದು ದೀಪ ಬೆಳಗಿದ. ಒಂದು ದಿನ ಹುಲ್ಲೂ ದೊರೆಯದಿದ್ದಾಗ ತನ್ನ ಕೂದಲನ್ನೇ ಉರಿಸುತ್ತಾನೆ. ಈತನ ಭಕ್ತಿಗೆ ಮೆಚ್ಚಿದ ಶಿವನು ಗಣಪದವಿ ನೀಡಿದ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ಬೋಳು ತಲೆಯಿದೆ.

44. ರೌರಿ (ಅವಿರೌರಿ) : ಚೋಳನಾಡಿನ ತಿರುಕ್ಕಾಡ ಮಾರಿನ ಬ್ರಾಹ್ಮಣ. ಕೋವೈ ಶೈಲಿಯಲ್ಲಿ ಪದ್ಯ ಬರೆದು ಆ ಪದ್ಯಗಳನ್ನು ಮೂಗು, ಕವಿ, ಚಂಡಿಕೆಗಳನ್ನು ರುಣಿಸಿ ಹಾಡುತ್ತ ಭಕ್ತರನ್ನು ನಗಿಸುತ್ತಿದ್ದ. ಪದ್ಯ ಹಾಡಿ ಬಂದ ದುಡ್ಡಿನಿಂದ ದೇವಾಲಯ, ಗೋಪುರ, ಪ್ರಾಕಾರಗಳನ್ನು ಕಟ್ಟಿಸುತ್ತಿದ್ದ. ಒಮ್ಮೆ ಶಿವನು ಈತನ ಹಾಸ್ಯವನ್ನು ನೋಡಬೇಕೆಂದು, ಏನೇ ಆದರೂ ನಾನು ನಗುವುದಿಲ್ಲವೆಂದು, ನಂದಿಗೆ ಹೇಳಿ ಪಾರ್ವತಿಯೊಂದಿಗೆ ಭೂಮಿಗೆ ಬಂದು ಈತನ ಹಾಡು ಕೇಳುತ್ತ ಕುಳಿತುಕೊಳ್ಳುತ್ತಾನೆ. ನೆರೆದ ಎಲ್ಲ ಜನರು ನಕ್ಕರೂ ಈತ ಮಾತ್ರ ನಗುವುದಿಲ್ಲ. ಅವಿರೌರಿಯು ಶಿವನ ಹತ್ತಿರ ಬಂದ ಪಾರ್ವತಿಯು ನಿಮಗೆ ತಂಗಿಯಾಗಬೇಕೆ ಎಂದು ಕೇಳುತ್ತಾನೆ. ಆಗ ಶಿವನು ನಾಚಿಕೆಯುಳ್ಳವನಾಗಿ ನಕ್ಕು, ನಿಜರೂಪ ತೋರುತ್ತಾನೆ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ತಲೆಯ ಮೇಲೆ ಎತ್ತರವಾದ ತುರುಬು ಇದೆ.

45. ನಿಂತ್ರ ಸಿರನೆಡು ಮಾರನ್ : ಮಧುರೆಯ ಅರಸನಾಗಿದ್ದ. ಮೊದಲು ಜೈನನಾಗಿದ್ದು,ನಂತರ ಶೈವ ಧರ್ಮ ಸ್ವೀಕರಿಸಿದ. ಧಾರ್ಮಿಕ ಕ್ರಿಯೆಗಳಿಗೆ ಪ್ರೋತ್ಸಾಹ ಕೊಡುತ್ತಿದ್ದ. ಈತನ ಪತ್ನಿ ಮಂಗಾಯಕ್ಕರಸಿ. ಇವರಿಗೆ ಪಾರ್ವತಿಯೇ ಶರ್ವಾಣಿ ಎಂಬ ಹೆಸರಿನಲ್ಲಿ ಮಗಳಾಗಿ ಜನಿಸಿದಳು. ಶಿವನು ಜಂಗಮರೂಪಧಾರಿಯಾಗಿ ಬಂದು ಅವಳನ್ನು ಮದುವೆಯಾದ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ತಲೆಯ ಮೇಲೆ ಕಿರೀಟವಿದೆ. ಬಲಗೈ ತೋಳಿನ ಮಧ್ಯದಲ್ಲಿ ಖಡ್ಗವಿದೆ.

46. ವೋಯಿಲಾರ್ : ತೊಂಡೈ ನಾಡಿನ ಮೈಲಾಪುರದಲ್ಲಿ ಶೂದ್ರ ಕುಲದಲ್ಲಿ ಜನಿಸಿದ. ಶೂದ್ರ ಕುಲದಲ್ಲಿ ಹುಟ್ಟಿದರೂ ವೇದ, ಪುರಾಣಗಳನ್ನು ಕಲಿತು ಜ್ಞಾನ ಸಂಪಾದಿಸಿದ್ದ. ಈತ ಮಾನಸ ಪೂಜೆಗೆ ಹೆಚ್ಚು ಮಹತ್ವ ನೀಡಿದ್ದ ಹೃದಯದಲ್ಲಿಯೇ ದೇವಾಲಯ ನಿರ್ಮಿಸಿ, ಪೂಜಿಸಿ ಮುಕ್ತಿಯನ್ನು ಹೊಂದಿದ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ಬೋಳು ತಲೆಯಿದೆ.

47. ಕಳರಜಿಂಗ : ಚೋಳನಾಡಿನ ಮುಳುಗುಂಡೆ ಎಂಬಲ್ಲಿ ಹುಟ್ಟಿ, ಪಲ್ಲವರ ಅರಸನಾಗಿದ್ದ. ಆಧ್ಯಾತ್ಮದತ್ತ ಒಲವುಳ್ಳವನಾಗಿದ್ದ. ಅನೇಕ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿ ತಿರುವಾರೂರಿನ ದೇವಸ್ಥಾನಕ್ಕೆ ಪರಿವಾರ ಸಮೇತನಾಗಿ ಬರುತ್ತಾನೆ. ಅಲ್ಲಿ ಆತನ ಪತ್ನಿಯು ದೇವರ ಪೂಜೆಗಿರಿಸಿದ್ದ ಹೂವನ್ನು ಮೂಸಿ ನೋಡುತ್ತಾಳೆ. ಅಲ್ಲಿಯೇ ಇದ್ದ ಶೆರತ್ತುಣ್ಣೈ ಎಂಬ ಭಕ್ತನು ಇದನ್ನು ನೋಡಿ ಪೂಜೆಗಿರಿಸಿದ ಹೂವು ಮಲಿನ

ವಾಯಿತೆಂದು ಅವಳ ಮೂಗನ್ನು ಕತ್ತರಿಸುತ್ತಾನೆ. ಆದರೆ ಕಳರಂಚಿಂಗನು ತನ್ನ ಪತ್ನಿ ಮಾಡಿದ ತಪ್ಪಿಗೆ ಇಷ್ಟೇ ಶಿಕ್ಷೆ ಸಾಲದು ಎಂದು ಅವಳ ಕೈಯನ್ನು ಕತ್ತರಿಸುತ್ತಾನೆ. ಶಿವನು ಪ್ರತ್ಯಕ್ಷನಾಗಿ ಅವಳಿಗೆ ಮೂಗು, ಕೈಗಳನ್ನು ದಯ ಪಾಲಿಸಿ ಕಳರಜಿಂಗನಿಗೆ ಗಣಪದವಿ ನೀಡಿದ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ತಲೆಯ ಮೇಲೆ ಕಿರೀಟವಿದೆ. ಎಡಗೈ ತೋಳಿನ ಮಧ್ಯದಲ್ಲಿ ಖಡ್ಗವಿದೆ.

48. ಇದನ್‌ಕಳಿ : ಈತ ಕೊಡಂಬಾಳೂರಿನ ಅರಸನಾಗಿದ್ದ. ಆ ಊರಿನಲ್ಲಿದ್ದ ಒಬ್ಬ ಭಕ್ತನು ನಿತ್ಯವೂ ದಾಸೋಹ ನಡೆಸುತ್ತಿದ್ದು, ತನ್ನಲ್ಲಿರುವ ಸಂಪತ್ತನ್ನೆಲ್ಲ ಕಳೆದುಕೊಂಡು ಅರಮನೆಗೆ ಹೋಗಿ ಭತ್ತ ಕದಿಯುತ್ತಾನೆ. ಅರಸನು ಕಣಜದಲ್ಲಿರುವ ಭತ್ತ, ಸಂಪತ್ತನ್ನು ಕೊಟ್ಟು ಕಳಿಸುತ್ತಾನೆ. ಆತ ದಾಸೋಹದಿಂದ ಪುಣ್ಯ ಗಳಿಸಿಕೊಳ್ಳು ತ್ತಾನೆ. ಅರಸನು ಆತನ ಮನೆಗೆ ಹೋಗಿ ನೀನುಗಳಿಸಿರುವ ಪುಣ್ಯವನ್ನು ಕೊಟ್ಟರೆ, ನನ್ನ ರಾಜ್ಯವನ್ನೆ ನಿನಗೆ ಕೊಡುತ್ತೇನೆಂದು ಹೇಳುತ್ತಾನೆ. ಆ ಭಕ್ತನು ಅರಸನಿಗೆ ಪುಣ್ಯ ಕೊಡಲು ಶಿವನು ಪ್ರತ್ಯಕ್ಷನಾಗಿ ಕೈಲಾಸಕ್ಕೆ ಕರೆದೊಯ್ಯುತ್ತಾನೆ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ತಲೆಯ ಮೇಲೆ ಕಿರೀಟವಿದೆ.

49.ಸೇರುತ್ತುಣೈ: ಈತ ತಂಜಾವೂರಿನವನು, ಕಳರೆ ಚಿಂಗನ ಪತ್ನಿ ದೇವರ ಪೂಜೆ ಗೆಂದು ಇಟ್ಟಿದ್ದು ಹೂವನ್ನು ಮೂಸಿ ನೋಡಿದಾಗ ಆಕೆಯ ಮೂಗನ್ನು ಕತ್ತರಿಸುತ್ತಾನೆ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ತಲೆಯ ಮೇಲೆ ಎತ್ತರವಾದ ತುರುಬು ಇದೆ.

50. ಪುಗಳ್‌ತ್ತುಣೈ : ಚೋಳನಾಡಿನ ಶರುವಿಲಿ ಪುತ್ತೂರಿನಲ್ಲಿ ಜನಿಸಿದ. ನಿತ್ಯವೂ ಶಿವನಿಗೆ ಹೊಸ ಬಾವಿಯ ನೀರಿನಿಂದ ಅಭಿಷೇಕ ಮಾಡುವ ನೇಮವಿಟ್ಟುಕೊಂಡಿದ್ದ. ಒಂದು ದಿನ ಬಾವಿ ತೋಡಿ ನೀರು ತರುತ್ತಿರುವಾಗ ಮೂರ್ಛೆ ಬಂದು ಬೀಳುತ್ತಾನೆ. ಶಿವಮಜ್ಜನದ ನೀರು ನಷ್ಟವಾಯಿತೆಂದು ಪ್ರಾಣ ಕಳೆದುಕೊಳ್ಳುತ್ತಿರುವಾಗ ಶಿವನು ಬಂದು ಕೈಲಾಸಕ್ಕೆ ಕರೆದೊಯ್ಯುತ್ತಾನೆ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ಬೋಳು ತಲೆಯಿದೆ.

51. ಕೋಟ್ಪುಳಿ : ಚೋಳ ಅರಸನ ಆಸ್ಥಾನದಲ್ಲಿ ಸೇನಾನಾಯಕನಾಗಿದ್ದ. ಜಂಗಮರಿಗೆ ದಾಸೋಹ ಮಾಡಿಸುವ ಕಾಯಕ ಮಾಡುತ್ತಿದ್ದ. ಒಮ್ಮೆ ಯುದ್ಧಕ್ಕೆ ಹೋಗುವ ಸಮಯದಲ್ಲಿ ಬರಗಾಲ ಬಂದಿರುತ್ತದೆ. ತಾನು ಯುದ್ಧಕ್ಕೆ ಹೋದಾಗ ಮನೆಯಲ್ಲಿರುವ ಧಾನ್ಯವನ್ನೆಲ್ಲ ಜಂಗಮರಿಗೆ ಹಂಚಿರಿ ಎಂದು ಮನೆಯವರಿಗೆ ಹೇಳಿ ಯುದ್ಧಕ್ಕೆ ಹೋಗುತ್ತಾನೆ. ಆದರೆ ಮನೆಯವರು ಧಾನ್ಯವನ್ನೆಲ್ಲ ತಾವೇ

ಉಪಯೋಗಿಸಿಕೊಳ್ಳುತ್ತಾರೆ. ಯುದ್ಧದಿಂದ ಮರಳಿ ಬಂದ ಕೋಟ್ಟುಳಿಯು ಜಂಗಮರ ಸೇವೆ ಮಾಡಿಲ್ಲವೆಂದು ಮನೆಯವರನ್ನೆಲ್ಲ ಕೊಲ್ಲುತ್ತಾನೆ. ಈತನ ಭಕ್ತಿಗೆ ಮೆಚ್ಚಿದ ಶಿವನು ಈತನನ್ನು ಕೈಲಾಸಕ್ಕೆ ಕರೆದೊಯ್ಯುತ್ತಾನೆ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ತಲೆಯ ಮೇಲೆ ಕಿರೀಟವಿದೆ. ಬಲಗೈ ತೋಳಿನ ಮಧ್ಯದಲ್ಲಿ ಖಡ್ಗವಿದೆ.

52. ಪೂಸಲಾರ್ : ತಿರುವಾರೂರಿನ ಒಂದು ಬ್ರಾಹ್ಮಣ ಕುಲದಲ್ಲಿ ಜನಿಸಿದ. ಬಡವನಾಗಿದ್ದರಿಂದ ಹೃದಯದಲ್ಲಿಯೇ ದೇವಾಲಯ ಕಟ್ಟಿ ದೇವರನ್ನು ಪ್ರತಿಷ್ಠಾಪಿಸಲು ನಿರ್ಧರಿಸುತ್ತಾನೆ. ಅದೇ ಸಮಯದಲ್ಲಿ ಪಲ್ಲವ ಅರಸನು ತನ್ನಲ್ಲಿರುವ ಸಂಪತ್ತನ್ನೆಲ್ಲ ವಿನಿಯೋಗಿಸಿ ದೇವಾಲಯ ಕಟ್ಟಿ ದೇವರನ್ನು ಪ್ರತಿಷ್ಠಾಪಿಸಲು ಯೋಚಿಸುತ್ತಾನೆ. ದೇವರು ಅರಸನ ಕನಸಿನಲ್ಲಿ ಬಂದು ನನ್ನ ಭಕ್ತನು ದೇವಾಲಯ ಕಟ್ಟಿದ್ದಾನೆ. ನಾನು ಅಲ್ಲಿಗೆ ಹೋಗುತ್ತೇನೆಂದು ಹೇಳುತ್ತಾನೆ. ಅರಸನು, ಆ ಭಕ್ತನು ಯಾರಿರಬೇಕೆಂದು ನೋಡಲು ಆತನ ಊರಿಗೆ ಹೋಗಿ ಆತನನ್ನು ಕಂಡು ವಿಷಯ ತಿಳಿದು, ಆತನ ಭಕ್ತಿಗೆ ದೊರೆತ ಪ್ರತಿಫಲವನ್ನು ಕಂಡು ನಮಸ್ಕರಿಸಿ ಮರಳುತ್ತಾನೆ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ಬೋಳುತಲೆಯಿದೆ.

53. ನೈಸ ನಾಯನಾರ್: ಪಾಂಡ್ಯನಾಡಿನ ಕಂಪಿಲಿ ಎಂಬಲ್ಲಿ ನೇಕಾರರ ಕುಲದಲ್ಲಿ ಹುಟ್ಟಿದ. ಮೊದಲು ಯಾರೂ ನೇಯದಂತ ಬಟ್ಟೆ ನೇಯ್ದು ಶಿವನಿಗೆ ಅರ್ಪಿಸಬೇಕೆಂದು ಒಂದು ವರ್ಷದವರೆಗೆ ಕಷ್ಟಪಟ್ಟು ದಿವ್ಯವಾದ ಅಂಬರವನ್ನು ನೇಯ್ದ. ಶಿವನು ಈತನನ್ನು ಪರೀಕ್ಷಿಸಲು ಜಂಗಮ ವೇಷದಲ್ಲಿ ಬಂದು ಬಟ್ಟೆ ಕೇಳಲು ಈತ ತಾನು ಕಷ್ಟಪಟ್ಟು ನೇಯ್ದ ವಸ್ತ್ರವನ್ನು ಕೊಡುತ್ತಾನೆ. ಆದರೆ ಶಿವನು ಆ ವಸ್ತ್ರವನ್ನು ಹರಿದು ಎರಡು ತುಂಡು ಮಾಡಿ ಒಂದನ್ನು ಸೊಂಟಕ್ಕೆ, ಇನ್ನೊಂದನ್ನು ಜಟೆಗೆ ಸುತ್ತಿಕೊಂಡ. ತಾನು ನೇಯ್ದ ವಸ್ತ್ರವನ್ನು ಶಿವನು ಹರಿದರೂ ಸಿಟ್ಟುಗೊಳ್ಳದಿರುವ ನೈಸನಾಯನಾರನನ್ನು ನೋಡಿ ಶಿವನು ನಿಜರೂಪ ತೋರಿ ಗಣಪದವಿ ನೀಡಿದ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ತಲೆಯ ಮೇಲೆ ಬಲಗಡೆ ಭಾಗದಲ್ಲಿ ತುರುಬು ಇದೆ. ತಲೆಯ ಸುತ್ತಲೂ ಮಣಿಗಳ ಮಾಲೆ ಇದೆ.

54. ಕೋಸಂಗನ್ ಚೋಳನ್ : ಈತನು ಹಿಂದಿನ ಜನ್ಮದಲ್ಲಿ ಜೇಡನಾಗಿದ್ದು ಈಶ್ವರನ ಪೂಜೆ ಮಾಡುತ್ತಿದ್ದ. ಮರು ಜನ್ಮದಲ್ಲಿ ಕೋಸಂಗನ್ ಚೋಳನ್‌ನಾಗಿ ಅರಸು ಮನೆತನದಲ್ಲಿ ಹುಟ್ಟಿದ. ಅರಸನು ಮದವೇರಿದವನಾಗಿ ಶಿವನನ್ನು ಮರೆತು ಸುಖಭೋಗದಲ್ಲಿ ಕಾಲಕಳೆಯುತ್ತಿದ್ದ. ಒಂದು ದಿವಸ ಕಾಡಿಗೆ ಬೇಟೆಯಾಡಲು ಹೋಗಿ ಒಂದು ಬಿಲದಲ್ಲಿ ಬಗ್ಗಿ ನೋಡುತ್ತಾನೆ. ಆ ಬಿಲದಲ್ಲಿದ್ದ ಒಬ್ಬ ಜಟ್ಟಿಗನು ತನ್ನ

ಅಪ್ಪಣೆಯಿಲ್ಲದೆ ಬಗ್ಗಿ ನೋಡಿದ ಅರಸನನ್ನು ಕೊಲ್ಲಲು ಹೋಗುತ್ತಾನೆ. ಇಬ್ಬರು ಮಧ್ಯೆ ಕಾಳಗವಾಗಿ ಅರಸನೆ ಗೆಲುತ್ತಾನೆ. ಆ ಜಟ್ಟಿಗನು ತನ್ನ ನಿಜ ರೂಪ ತೋರಿ ರಾಜನಿಗೆ ಆತನ ಹಿಂದಿನ ಜನ್ಮದ ನೆನಪು ಮಾಡಿಕೊಡುತ್ತಾನೆ. ರಾಜನಿಗೆ ತನ್ನ ತಪ್ಪಿನ ಅರಿವಾಗಿ, ಮತ್ತೆ ಶಿವಪೂಜೆಯನ್ನು ಮುಂದುವರೆಸುತ್ತಾನೆ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ತಲೆಯ ಬಲಭಾಗದಲ್ಲಿ ಚಿಕ್ಕತುರುಬು ಇದೆ. ತಲೆಯ ಸುತ್ತ ಮಣಿಗಳ ಮಾಲೆಯಿದೆ.

55. ತಿರುನೀಲಕಂಠಯಲ್‌ಪಮ್ (ತಿರುನೀಲಕಂಠಯಾಳ್ಪಾಣರು) : ನಡುನಾಡಿನ ವಿರುಕ್ಕತ್ಥಂ ಪುರಿಯೂರಿನಲ್ಲಿ ನೀಚ ಕುಲದಲ್ಲಿ ಜನಿಸಿದ. ದೇವಸ್ಥಾನದ ಮುಂದೆ ನಿಂತು ವೀಣೆ ನುಡಿಸುತ್ತ ದೇವರ ಸ್ಮರಣೆ ಮಾಡುತ್ತಿದ್ದ. ಚೋಳನಾಡಿನಲ್ಲೆಲ್ಲ ಸಂಚರಿಸಿ ವೀಣೆ ನುಡಿಸುತ್ತ ಹಾಡಿ ದೇವರ ಸೇವೆ ಮಾಡಿದ. ಈತನ ಭಕ್ತಿಗೆ ಮೆಚ್ಚಿದ ಶಿವನು ಬ್ರಾಹ್ಮಣರ ಕನಸಿನಲ್ಲಿ ಬಂದು ಈತನನ್ನು ದೇವಸ್ಥಾನದ ಒಳಗೆ ಬಂದು ಹಾಡಲು ಅನುಮತಿ ಕೊಡಿರಿ ಎಂದು ಹೇಳಿದ. ಅದರಂತೆ ಬ್ರಾಹ್ಮಣರು ಈತನಿಗೆ ದೇವಸ್ಥಾನದ ಒಳಗೆ ಬರಲು ಅನುಮತಿ ಕೊಡುತ್ತಾರೆ. ಹೀಗೆ ಅನೇಕ ದೇವಾಲಯಗಳನ್ನು ಸಂದರ್ಶಿಸಿ, ಹಾಡಿ, ಕೈಲಾಸ ಸೇರಿದ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ಬೋಳುತಲೆಯಿದೆ.

56. ಸುಂದರಮೂರ್ತಿ ನಾಯನಾರ್ : ಈತ ಭೂಲೋಕದಲ್ಲಿ ಹುಟ್ಟುವುದಕ್ಕಿಂತ ಮೊದಲು ಕೈಲಾಸದಲ್ಲಿ ಶಿವನ ಪೂಜೆಗೆ ಹೂವು ತಂದುಕೊಡುವ ಕಾಯಕ ಮಾಡುತ್ತಿರುತ್ತಾನೆ. ಕೈಲಾಸದಲ್ಲಿದ್ದ ಇಬ್ಬರು ಸ್ತ್ರೀಯರೊಂದಿಗೆ ಮೋಹಗೊಂಡು ಶಿವನಿಗೆ ವಿಷಯವನ್ನು ತಿಳಿಸಲು, ಶಿವನು ಮೂವರಿಗೂ ಭೂಲೋಕದಲ್ಲಿ ಹುಟ್ಟಿ ಸಕಲ ಸುಖಗಳನ್ನು ಅನುಭವಿಸಿ ಬನ್ನಿರೆಂದು ಹೇಳುತ್ತಾನೆ. ಈತನು ಭೂಲೋಕದಲ್ಲಿ ತಿರುವಾವಲೂರಿನ ಜಡೆಯ ನಾಯ್ನಾರ್ ಮತ್ತು ಯಸ್ಯಜ್ಞಾನಿಯರಿಗೆ ಮಗನಾಗಿ ಹುಟ್ಟಿ 'ನಂಬಿ' ಎಂಬ ಹೆಸರು ಪಡೆಯುತ್ತಾನೆ. ನಂತರ ಅಲ್ಲಿಯ ರಾಜನು ಈತನನ್ನು ಸಾಕಿ ಬೆಳೆಸುತ್ತಾನೆ. ನಂಬಿಯು ಅತಿ ಸುಂದರನಾಗಿದ್ದುದರಿಂದ 'ಸೌಂದರ ಪೆರಮಾಳ್' ಎಂಬ ನಾಮಕರಣ ಮಾಡುತ್ತಾನೆ. ಆತನ ಮದುವೆ ಮಂಟಪಕ್ಕೆ ಶಿವನು ವೃದ್ಧನ ವೇಷದಲ್ಲಿ ಬಂದು ಹಿಂದಿನ ಜನ್ಮದ ನೆನಪುಮಾಡಿಕೊಡುತ್ತಾನೆ. ಶಿವನು ಕೊಟ್ಟ ಎರಡು ತಾಳಗಳನ್ನು ಸ್ವೀಕರಿಸಿ ಊರಿಂದೂರಿಗೆ ಸಂಚರಿಸಿ ಶಿವನನ್ನು ಹಾಡಿಹೊಗಳುತ್ತ ಕಾಲಕಳೆಯುತ್ತಾನೆ. ನಂತರ ಪರವೆ ಮತ್ತು ಸಂಕಿವಿ ಎಂಬ ಇಬ್ಬರು ಸ್ತ್ರೀಯರನ್ನು ವಿವಾಹವಾಗುತ್ತಾನೆ. ನಂತರ ಶಿವನ ಕಡೆಗೆ ಓಗೊಟ್ಟು ಕೈಲಾಸಕ್ಕೆ ಹೋಗಿ ಶಿವನ ಸಾನಿಧ್ಯದಲ್ಲಿ ವಿರಾಜಿಸುತ್ತಾನೆ.

ವಿಗ್ರಹ : ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ. ತಲೆಯ ಮೇಲೆ ಎತ್ತರವಾದ ತುರುಬು ಇದೆ. ತಲೆಯ ಸುತ್ತ ಮಣಿಗಳ ಮಾಲೆ ಇದೆ.

57. ಮಾಣಿಕ್ಯ ವಾಸಕರ್ (ಮಾಣಿಕ್ಯ ವಾಚಕರು) : ಮಧುರೈ ಬಳಿಯ ವದಮಾರ್ ಗ್ರಾಮದಲ್ಲಿ ಬ್ರಾಹ್ಮಣ ದಂಪತಿಗಳು ಮಗನಾಗಿ ಜನಿಸಿದ. ಪವಿತ್ರ ಶೈವ ಗ್ರಂಥವಾದ ತಿರುವಾಚಕವನ್ನು ರಚಿಸಿದ್ದಾನೆ. ಇದು ತಮಿಳುನಾಡಿನಲ್ಲಿ ಎಲ್ಲ ಭಕ್ತ ಸಾಹಿತ್ಯಕ್ಕೂ ತಲಕಾವೇರಿಯಾಗಿದೆ.

ವಿಗ್ರಹ : ವಿಗ್ರಹವು ನಿಂತಿರುವ ಭಂಗಿಯಲ್ಲಿದೆ. ಬಲಗೈ ಅಭಯ ಮುದ್ರೆಯಲ್ಲಿದೆ. ಎಡಗೈಯಲ್ಲಿ ತಾನು ರಚಿಸಿದ ಗ್ರಂಥ ಹಿಡಿದಿದ್ದಾನೆ. ಬೋಳು ತಲೆ ಇದೆ.

೨೬. ಮಹಾನಗರ ರಾಜಧಾನಿ ವಿಜಯನಗರದ ಬೆಳವಣಿಗೆ ಮತ್ತು ರಕ್ಷಣಾ ವ್ಯವಸ್ಥೆ

ಡಾ. ಲ.ನ.ಸ್ವಾಮಿ

ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿ ಮೆರೆದ ಮಹಾನಗರ ವಿದ್ಯಾನಗರ / ವಿಜಯನಗರವು ಇಂದು ಹಂಪೆ ಅಥವಾ ಹಾಳುಹಂಪೆ ಎಂದು ಪ್ರಸಿದ್ಧವಾಗಿದೆ. ವಿಜಯನಗರ, ಆನೆಗೊಂದಿ ರಾಜಧಾನಿಗಳಾಗಿದ್ದರೆ, ಹಂಪೆ ಅಥವಾ ಪಂಪಾಕ್ಷೇತ್ರ ಶ್ರೀ ವಿರೂಪಾಕ್ಷನ ಸನ್ನಿಧಿಯಾಗಿ, ಪಂಪಾಂಬೆಯ ಆವಾಸ ಸ್ಥಾನವಾಗಿ ಆಸ್ತಿಕರನ್ನು ತನ್ನೆಡೆ ಸೆಳೆಯುತ್ತಿರುವ ಪುಣ್ಯಕ್ಷೇತ್ರ. ಹರಿಹರನ ಕಾರ್ಯ ಭೂಮಿಯಾಗಿ, ಪುರಂದರ ದಾಸರ ಕರ್ಮಭೂಮಿಯಾಗಿ ಸಹ ಹಂಪೆಯನ್ನು ಗುರುತಿಸಲಾಗಿದೆ. ಪಂಪಾವತಿ ಅಥವಾ ಶ್ರೀ ವಿರೂಪಾಕ್ಷ ವಿಜಯನಗರದ ಅರಸರ ಆರಾಧ್ಯ ದೈವ ಹಾಗೂ ಆದಿದೈವವಾದ ಮೇಲೆ ಈ ಕ್ಷೇತ್ರದ ಕೀರ್ತಿ ಅಜರಾಮರವಾಯಿತು. ಜನಜನಿತವಾಯಿತು. ಹಂಪೆ ಇಂದಿಗೂ ಭಾರತೀಯ ಸಾಂಸ್ಕೃತಿಕ ವಲಯದಲ್ಲಿ ತನ್ನದೇ ಆದ ಸ್ಥಾನವನ್ನು ಹೊಂದಿದೆ.

ಪುರಾಣ ಕಾಲದಲ್ಲಿ, ಪ್ರಾಗೈತಿಹಾಸಕ ಕಾಲದಲ್ಲಿ ಹಾಗೂ ಅನಂತರದ ಇತಿಹಾಸ ಕಾಲದಲ್ಲಿ ಪರಿಸರದ ರಕ್ಷಣೆಯನ್ನು ಪಡೆದು ಜನಮಾನ್ಯರನ್ನು ಪೋಷಿಸಿ ಬೆಳೆಸಿರುವುದನ್ನು ಐತಿಹ್ಯಗಳು, ಆಕರಗಳು ದೃಢ ಪಡಿಸುತ್ತವೆ.[1] ವಿಜಯನಗರ ಸಾಮಾಜ್ಯದ ಮಹಾನಗರ, ರಾಜಧಾನಿಯ ಹೆಸರನ್ನು ಹಲವಾರು ರೀತಿಯಲ್ಲಿ ಬಳಸಿರುವುದು ಕಂಡು ಬರುತ್ತದೆ.

ಬಿಜೆನೆಗಾಲಿಯಾ - ಬಿಜನೆಗೇಲಿಯಾ,[2] ಬಿಜನಗರ, [3] ಬಿಜನೇಘರ್, [4] ಬಿಜನಗರ್ - ವಿಜನೇಗರ್, [5] ಬೀಸ್ನಗ - ಬೀಸ್‌ನಗರ,[6] ಬಿಸ್ನಗ, [7] ಬಿಜೇನೇಗರ್, [8] ಬೆಸೆನಗರ್, [9] ಬಿಸ್ನಾಗ, [10] ಬೀಸನಗರ, [11] ಬಿಜನುಗ್ಲೂರು -ಬಿಜನಗರ [12] ಮತ್ತು ವಿದಿಯನಗರ (ವಿದ್ಯಾನಗರ > ವಿಜಯನಗರ) [13] ಎಂಬ ಉಲ್ಲೇಖಗಳು ಪ್ರವಾಸಿಗರ ಬರವಣಿಗೆಯಲ್ಲಿ ಕಂಡುಬರುತ್ತವೆ. ಶಾಸನಗಳಲ್ಲಿ ವಿದ್ಯಾನಗರ [14] ಹಸ್ತಿನಾವತಿ [15] ಮತ್ತು ವಿಜಯನಗರ ವೆಂಬ [16] ಉಲ್ಲೇಖ ಕಂಡು ಬರುತ್ತದೆ. ಪರಮಶಿವಮೂರ್ತಿಯವರು ತಮ್ಮ ಇತ್ತೀಚಿನ ಲೇಖನದಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದ ದಿನಾಂಕ ಅಂದರೆ ಕ್ರಿ.ಶ. 1336 ರ ಏಪ್ರಿಲ್ 18 ರಂದು ಎಂದೂ 1ನೆಯ ಹರಿಹರನು ನೀಡಿರುವ ದಾನ ಶಾಸನದಲ್ಲಿ ಸಾಮ್ರಾಜ್ಯವನ್ನು ವಿದ್ಯಾನಗರವೆಂದು ಹೆಸರಿರುವುದನ್ನು ಪ್ರಕಟಿಸಿದ್ದಾರೆ. ಸಾಮ್ರಾಜ್ಯಕ್ಕೆ

ಬಹುಶಃ ವಿಯನಗರವೆಂದೂ ಅದನ್ನು ಪ್ರಾರಂಭಿಸಿದ ನಗರವನ್ನು ವಿದ್ಯಾನಗರವೆಂದು ಕರೆದಿರಬಹುದಾದ ಸಾಧ್ಯತೆಗಳಿವೆ. ಕಾರಣ ವಿಜಯನಗರ ಸಾಮ್ರಾಜ್ಯ ಪ್ರಾರಂಭವಾದುದು, ಸ್ವಧರ್ಮ ರಕ್ಷಣೆಗಾಗಿ. ಸ್ವಧರ್ಮ ರಕ್ಷಣೆ ಅಂದಿನ ಕಾಲದಲ್ಲಿ ಆಕ್ರಮಿತ ಧರ್ಮದ ವಿರುದ್ಧ ವಿಜಯ ಸಾಧಿಸುವುದರಿಂದ ಮಾತ್ರ ಸಾಧ್ಯವಾಗಿದ್ದರಿಂದ ಮೇಲೆ ಹೇಳಿದಂತೆ ಸಾಮ್ರಾಜ್ಯವನ್ನು ವಿಜಯನಗರವೆಂದೂ, ನಗರವನ್ನು ವಿದ್ಯಾನಗರವೆಂದೂ ಕರೆದಿರುವ ಸಾಧ್ಯತೆ ಬಹಳವಾಗಿದೆ. ಎರಡೂ ಪದಗಳ ಉಚ್ಚಾರಣೆಯಲ್ಲಿ ಸಹ ಪ್ರಾರಂಭದಲ್ಲಿ ಸ್ವರ ವ್ಯತ್ಯಾಸವಿಲ್ಲದ್ದರಿಂದ ವಿದ್ಯಾನಗರವೂ ವಿಜಯಗರವಾಗಿರಬೇಕು. ಈ ಸಾಧ್ಯತೆಯನ್ನು ಖಚಿತಪಡಿಸಲು ಶಾಸನಗಳ ಸೂಕ್ಷ್ಮ ಅಧ್ಯಯನದಿಂದ ಮಾತ್ರ ಸಾಧ್ಯ. ವಿದ್ಯಾರಣ್ಯರು ಸಾಮ್ರಾಜ್ಯ ಸ್ಥಾಪನೆಗೆ ಮಾರ್ಗದರ್ಶಿಗಳಾಗಿದ್ದರಿಂದ ಅವರ ಸೇವೆಯ ಗೌರವಾರ್ಥವಾಗಿ ಸಹ ನಗರವನ್ನು ವಿದ್ಯಾನಗರವೆಂದೂ ಹೆಸರಿಸಿರುವ ಸಾಧ್ಯತೆ ಕಂಡು ಬರುತ್ತದೆ.

ಹಂಪೆಯ ಸ್ಮಾರಕಗಳಲ್ಲಿನ ರಾಜ ಪ್ರಾಂಗಣದ ಪ್ರದೇಶದಲ್ಲಿ ನಡೆಸಿದ ಉತ್ಖನನದಲ್ಲಿ ಶಾತವಾಹನರ ಕಾಲದಲ್ಲಿ ಕೆತ್ತಲಾದ ಸುಣ್ಣ ಕಲ್ಲಿನ ಉಬ್ಬುಶಿಲ್ಪದ ಪಟ್ಟಿಕೆಗಳು ದೊರೆತಿವೆ. ಅಲ್ಲದೆ ೧-೨ ನೆಯ ಶತಮಾನಕ್ಕೆ ಸೇರಿದ ಶಾತವಾಹನರ ಬ್ರಾಹ್ಮಿ ಶಾಸನಗಳು ಇಲ್ಲಿ ದೊರಕಿವೆ. ಅನಂತರದ ಕಾಲದಲ್ಲಿ ಈ ಪ್ರದೇಶ ಚಟುವಟಿಕೆಯಿಂದ ಕೂಡಿತ್ತೆಂದು ಇಲ್ಲಿನ ಸ್ಮಾರಕಗಳ ಅಧ್ಯಯನ ತಿಳಿಸುತ್ತದೆ. ಆದರೆ ಕ್ರಿ.ಶ. 13ನೆಯ ಶತಮಾನದ ಪ್ರಾರಂಭದ ವರ್ಷಗಳಲ್ಲಿ ಈ ಪ್ರದೇಶದ ಮೇಲಾದ ಧಾಳಿಯ ಅನಂತರ ಈ ಪ್ರದೇಶದ ರಾಜಕೀಯ ಚಟುವಟಿಕೆಯಲ್ಲಿ ತೀವ್ರತರವಾದ ಬದಲಾವಣೆಗಳಾಗಿರುವುದು ಇತಿಹಾಸ ಪುಟಗಳಿಂದ ತಿಳಿದು ಬರುತ್ತದೆ.

ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಹೊಯ್ಸಳ ಸಾಮ್ರಾಜ್ಯಗಳು ಈ ಪ್ರದೇಶದ ಮೇಲೆ ಪ್ರಭುತ್ವ ಸಾಧಿದ್ದನ್ನು ಈ ಪ್ರದೇಶದ ಶಾಸನಗಳು ಮತ್ತು ಸ್ಮಾರಕಗಳ ಅಧ್ಯಯನ ಖಚಿತ ಪಡಿಸುತ್ತದೆ.[17] ಆದರೆ ಹೊಯ್ಸಳರ ಕೊನೆಯ ದಿನಗಳಲ್ಲಿ ಉತ್ತರದ ಮುಸಲ್ಮಾನ ಧಾಳಿಯನ್ನು ತಡೆಯುವ ಸಲುವಾಗಿ ನಡೆದ ಕಾರ್ಯ ಈ ಪ್ರದೇಶವನ್ನು ಮತ್ತು ಸ್ಥಳವನ್ನು ಅನಂತರದ ದಿನಗಳಲ್ಲಿ ದಕ್ಷಿಣ - ಉತ್ತರದ ಸಂಘರ್ಷದ ಭೂಮಿಕೆಯನ್ನಾಗಿಸಿತು. ಏನನ್ನು ತಡೆಯುವ ಸಂಕಲ್ಪದಿಂದ ಸಾಮ್ರಾಜ್ಯ ಪ್ರಾರಂಭವಾಯಿತೋ ಅದರಿಂದಲೇ ನಾಶವಾಗಿ, ಇಂದಿನ ರೂಪ ಪಡೆದುಕೊಂಡಿದುದು ಇತಿಹಾಸದ ವಿಪರ್ಯಾಸಗಳಲ್ಲಿ ಒಂದಾಗಿದೆ.

ಕ್ರಿ.ಶ. 1300 ರ ಅನಂತರ ಈ ಪ್ರದೇಶದ ಇತಿಹಾಸ ಬಹುಬೇಗನೆ ಬದಲಾಯಿತಾದರೂ ಅದು ಏಳು ಬೀಳುಗಳನ್ನು ಗುರುತಿಸುವ ದಾರಿಯಾಯಿತು. ಹಲವಾರು ಮಹತ್ವಾಕಾಂಕ್ಷಿ ಆಡಳಿತಗಾರರ, ಯಾತ್ರಿಕರ, ವ್ಯಾಪಾರಸ್ಥರ, ಕೇಂದ್ರಸ್ಥಾನವಾಗಿ, ಮತ್ತೆ

ಕೆಲವು ಆಡಳಿತಗಾರರ ಅವಕೃಪೆಗೆ ಒಳಗಾಗಿ ಕ್ರಿ.ಶ. 1565ರಲ್ಲಿ ತನ್ನದೆಲ್ಲವನ್ನೂ ಕಳೆದುಕೊಂಡು, ಕೇವಲ ಔನ್ನತ್ಯದ ಕುರುಹುಗಳನ್ನು ಹೊಂದಿರುವ ಪ್ರವಾಸಿಗರ ಕೇಂದ್ರವಾಗಿ, ಅಧ್ಯಯನಕಾರರ ಕಾಶಿಯಾಗಿ ಮಾತ್ರ ಉಳಿದುಬಂದಿದೆ ಈ ಕ್ಷೇತ್ರ. ಈ ಕ್ಷೇತ್ರದ ರಕ್ಷಣೆಯ ವಿಷಯವಾಗಿ ಹಲವಾರು ಲೇಖಕರು ವಿಜಯನಗರ ಪ್ರೋಗ್ರೆಸ್ ಆಫ್ ರೀಸರ್ಚ್ ಮತ್ತು ವಿಜಯನಗರ ಅಧ್ಯಯನ ಸಂಪುಟ ಮಾಲಿಕೆಯಲ್ಲಿ ಹಲವಾರು ಲೇಖನಗಳನ್ನು ಪ್ರಕಟಿಸಿದ್ದಾರೆ.

ದೇವಾಲಯಗಳ ಶೈಲಿಯ ಬೆಳವಣಿಗೆ, ರಚನೆಯಷ್ಟೇ ನಗರಗಳ ಬೆಳವಣಿಗೆ ಮತ್ತು ರಚನೆಯ ಇತಿಹಾಸ ಸಹ ರೋಚಕವಾಗಿದೆ. ಅಲ್ಲದೆ ನಗರ ರಚನೆ ಮತ್ತು ಬೆಳವಣಿಗೆಯು ರಕ್ಷಣಾ ವ್ಯವಸ್ಥೆಯನ್ನು ಆಧರಿಸಿವೆ. ಹೀಗಾಗಿ ರಕ್ಷಣಾ ವ್ಯವಸ್ಥೆಯ ಅಧ್ಯಯನ ವಿಶಾಲವಾದ ವ್ಯಾಪ್ತಿಯನ್ನು ಹೊಂದಿದೆಯಾದರೂ, ಪ್ರಸ್ತುತದಲ್ಲಿ, ರಕ್ಷಣಾ ವ್ಯವಸ್ಥೆ ಮತ್ತು ಅದರ ಪೂರಕ ವಿಷಯಗಳನ್ನು ಮಾತ್ರ ಇಲ್ಲಿ ಅಧ್ಯಯನ ಮಾಡಲು ಯತ್ನಿಸಲಾಗಿದೆ. ವಿಜಯನಗರವನ್ನು ಸಂದರ್ಶಿಸಿದ ಹಲವಾರು ಸಂದರ್ಶಕರು ನಗರದ ರಕ್ಷಣಾ ವ್ಯವಸ್ಥೆಯ ಬಗೆಗೆ ಹಾಗೂ ಅದರ ಅಂದ ಚಂದದ ಬಗೆಗೆ ಹಾಡಿಹೊಗಳಿದ್ದಾರೆ. ಅದರ ಕ್ರಮಬದ್ಧ ಅಧ್ಯಯನ ನಮಗೆ ಒಂದು ಸಮಗ್ರ ಚಿತ್ರಣವನ್ನು ನೀಡುತ್ತದೆ.

ಕೋಟೆಯ ಪ್ರಾಚೀನತೆ: ಮಹಾನಗರ, ವಿಜಯನಗರವನ್ನು ಸಂದರ್ಶಿಸಿದ್ದ ಎಲ್ಲ ಪ್ರವಾಸಿಗರೂ ತಮ್ಮ ಅನುಭವಗಳ ಮಾಲೆಯಲ್ಲಿ ವಿಜಯನಗರ ಅತ್ಯುತ್ತಮ ರಕ್ಷಣಾ ಗೋಡೆ ಅಥವಾ ಕೋಟೆಯಿಂದ ಆವೃತ್ತವಾಗಿತ್ತೆಂದು ತಿಳಿಸುತ್ತಾರೆ. ಕಾಮಂದಕೀಯ ನೀತಿಸಾರದ ಕರ್ತೃ ಭದ್ರವಾದ ಕೋಟೆಯಿಲ್ಲದ ರಾಜನು ಬಿರುಗಾಳಿಯ ಮುಂದಿನ ಮೋಡದ ತುಂಡುಗಳಿಗೆ ಸಮನೆಂದು ಹೇಳುತ್ತಾನೆ.[18] ರಾಜ್ಯವು ಹೊಂದಿರ ಬೇಕಾದ ಸಪ್ತಾಂಗಗಳಲ್ಲಿ ಕೋಟೆ ಸಹ ಒಂದು. ಅವುಗಳೆಂದರೆ ರಾಜ, ಅಮಾತ್ಯ, ದುರ್ಗ, ಕೋಶ, ಸೈನ್ಯ ಮತ್ತು ಮಿತ್ರ. ಈ ಉಲ್ಲೇಖಗಳು ದುರ್ಗ ರಾಜ್ಯದ ರಕ್ಷಣೆಯಲ್ಲಿ ಹೊಂದಿದ್ದ ಮಹತ್ವವನ್ನು ಸಾರುತ್ತವೆ. ದುರ್ಗಗಳು ಪ್ರಾಚೀನ ಕಾಲದಿಂದಲೂ ರಕ್ಷಣೆಯ ಒಂದು ಮುಖ್ಯ ಅಂಗವಾಗಿದ್ದು, ಅದೇ ಮಹತ್ವವನ್ನು ಇತ್ತೀಚಿನವರೆಗೆ ಉಳಿಸಿಕೊಂಡಿದ್ದವು. ವಿಜಯನಗರ ಸಾಮ್ರಾಜ್ಯದ ಅರಸರೂ ರಾಜ್ಯದ ರಕ್ಷಣೆಯಲ್ಲಿ ದುರ್ಗ ಅಥವಾ ಕೋಟೆಗಳಿಗೆ ಮಹತ್ವದ ಸ್ಥಾನ ನೀಡಿದ್ದರು. ಹಾಗಾಗಿ, ಸಾಮ್ರಾಜ್ಯದಾದ್ಯಂತ ಕೋಟೆ ಗಳನ್ನು ನಿರ್ಮಾಣ ಮಾಡಿದರು. ಇಲ್ಲವೆ ಇದ್ದ ದುರ್ಗಗಳನ್ನು ಬಲಪಡಿಸಿ ಮುಂದುವರಿಸಿ ಕೊಂಡು ಬಂದರು. ಹಾಗೆ ನಿರ್ಮಿತವಾದ ಅತಿ ಮುಖ್ಯ ದುರ್ಗಗಳಲ್ಲಿ ಮಹಾನಗರ ವಿಜಯನಗರದ ಕೋಟೆಯೂ ಮಹತ್ವವಾದುದು. ವಿಜಯನಗರದ ಪ್ರಾಚೀನತೆಯ ಬಗೆಗೆ ಎರಡು ಅಭಿಪ್ರಾಯಗಳಿವೆ. ಒಂದು ಗುಂಪಿನ ವಿದ್ವಾಂಸರ ಪ್ರಕಾರ, ಹೊಯ್ಸಳ ವೀರ ಬಲ್ಲಾಳನು ನಿರ್ಮಿಸಿದ

ಹೊಸದುರ್ಗ, ವಿರೂಪಾಕ್ಷ ಹೊಸಬೆಟ್ಟು, ಹೊಸಪಟ್ಟಣವೇ ವಿಜಯನಗರವೆಂದು ಅಥವಾ ಮಹಾನಗರ ವಿಜಯನಗರದ ಭಾಗವೆಂದು ಗುರುತಿಸಿದ್ದಾರೆ. ಆದರೆ ಮತ್ತೊಂದು ಗುಂಪಿನ ವಿದ್ವಾಂಸರು ಅದನ್ನು ಅಲ್ಲಗೆಳೆಯುತ್ತಾ, ಅದು ಯಾವ ನಗರವೆಂದು ಗುರುತಿಸಲಾದ ಸಂದೇಹಕ್ಕೆ ದಾರಿಮಾಡಿಕೊಟ್ಟಿದ್ದಾರೆ. ವಿದ್ವಾಂಸರ ಈ ಅಭಿಪ್ರಾಯ ಗಳನ್ನು ಅಲ್ಲಗಳೆಯುವ ಅಥವಾ ಒಪ್ಪಿ ಕೊಳ್ಳುವ ಮೊದಲು ವಿಜಯನಗರ ಸ್ಥಾಪನೆ ಯಾದ ಹಿನ್ನೆಲೆಯನ್ನು ತಿಳಿಯುವುದು ಆವಶ್ಯಕವೆನಿಸುತ್ತದೆ.

ಕ್ರಿ.ಶ. 1336ರ ಏಪ್ರಿಲ್ 14ರಂದು[19] ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಯಾಯಿತೆನ್ನುವುದು ಶಾಸನಗಳಿಂದ ದೃಢಪಡುತ್ತದಾದರೂ ಅದರ ಪ್ರಾಚೀನತೆಯ ಬಗೆಗೆ ಹಲವು ಆಕರಗಳು ದೊರೆಯುತ್ತವೆ. ಕ್ರಿ.ಶ. 13ನೆಯ ಶತಮಾನದ ಪ್ರಾರಂಭದ ದಿನಗಳಲ್ಲಿ ದಕ್ಷಿಣ ಭಾರತದ ಮೇಲೆ ದೆಹಲಿಯ ಸುಲ್ತಾನನಾದ ಅಲ್ಲಾಉದ್ದೀನ್ ಖಿಲ್ಜಿಯ ಸೇನಾಧಿಪತಿ ಮಲ್ಲಿಕ್ ಖಾಫರ್ ಕ್ರಿ.ಶ. 1310ರಲ್ಲಿ ಮತ್ತು ಅನಂತರದಲ್ಲಿ ದಕ್ಷಿಣ ಭಾರತದ ಮೇಲೆ ಧಾಳಿ ಮಾಡಿದನು. ಈ ಧಾಳಿಯಿಂದಾಗಿ ದಕ್ಷಣ ಭಾರತದ ಮೂರು ರಾಜಮನೆತನಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡವು. ಅವುಗಳೆಂದರೆ ದೇವಗಿರಿಯ ಯಾದವರು, ವಾರಂಗಲ್ಲಿನ ಕಾಕತೀಯರು, ಮತ್ತು ಮಧುರೆಯ ಪಾಂಡ್ಯರು. ಆದರೆ ಹೊಯ್ಸಳ ಸಾಮ್ರಾಜ್ಯ ಮಾರಣಾಂತಿಕ ಪೆಟ್ಟನ್ನು ಹೊಂದಿತಾದರೂ ಸಂಪೂರ್ಣವಾಗಿ ಮುಸಲ್ಮಾನರಿಗೆ ಶರಣಾಗಗೆ, ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿತು. ಇದೆಲ್ಲ ಸಾಧ್ಯವಾದುದು ಹೊಯ್ಸಳ 3ನೇ ವೀರ ಬಲ್ಲಾಳನ ಮುಂಜಾಗರೂಕತೆಯ ಪ್ರಯತ್ನಗಳಿಂದ ಮತ್ತು ಆತ ಪ್ರಾರಂಭಿಸಿದ ವಿಕೇಂದ್ರಿಕರಣ ನೀತಿಯಿಂದಾಗಿ. 3ನೇ ವೀರಬಲ್ಲಾಳನು ತನ್ನ ಮಗ ವಿರೂಪಾಕ್ಷ ಬಲ್ಲಾಳ ವಿಸ್ತಾರವಾದ ಸಾಮ್ರಾಜ್ಯವನ್ನು ವ್ಯವಸ್ಥಿತವಾಗಿ ಮುನ್ನಡೆಸಲು ಶಕ್ತನಲ್ಲವೆನ್ನುವುದನ್ನು ಅರಿತುಕೊಂಡು, ತನ್ನ ಸಾಮ್ರಾಜ್ಯದ ಸಶಕ್ತ ಹಾಗೂ ವಿಶ್ವಾಸ ಪಾತ್ರ ಮಹಾಮಾಂಡಲೀಕರಿಗೆ ಸಾಕಷ್ಟು ಸ್ವಾತಂತ್ರ್ಯವನ್ನು ಕೊಟ್ಟನಲ್ಲದೆ, ಅವರು ತನ್ನ ಸಾಮ್ರಾಜ್ಯದ ಆಡಳಿತದಲ್ಲಿ ಸಮಭಾಗಿ ಗಳಾಗಿ ಕರ್ತವ್ಯ ನಿರ್ವಹಿಸುವಂತೆ ಮಾಡಿಕೊಂಡನು. ಇಂತಹ ವ್ಯವಸ್ಥೆಯಲ್ಲಿ ಸ್ವಧರ್ಮ ರಕ್ಷಣೆಯೇ ಎಲ್ಲಾ ಮಾಂಡಲೀಕರಿಗೆ ಆದರ್ಶಪ್ರಾಯವಾಯಿತು. ಹೀಗೆ ಪ್ರಾರಂಭವಾದ ಸ್ವಧರ್ಮ ರಕ್ಷಣೆಯ ಸಾಹಸದಲ್ಲಿ ಹೊಯ್ಸಳ ಸಾಮ್ರಾಜ್ಯದ ಉತ್ತರದ ಗಡಿಯಲ್ಲಿ ಹೆಚ್ಚು ಪ್ರಬಲವಾಗಿದ್ದ ಸಂಗಮ ಸಹೋದರರು, ಬಲ್ಲಾಳನ ಮಾರ್ಗದರ್ಶನದಲ್ಲಿ ಮುಂದುವರಿದು, ಕ್ರಿ.ಶ. 1336ರಲ್ಲಿ ತಮ್ಮದೇ ಆದ ಸಾಮ್ರಾಜ್ಯವನ್ನು ಪ್ರಾರಂಭಿಸಿದರು. ಹೀಗೆ ಪ್ರಾರಂಭವಾದ ಸಾಮ್ರಾಜ್ಯವನ್ನು ವಿದ್ಯಾನಗರವೆಂದು ಶಾಸನಗಳಲ್ಲಿ ಉಲ್ಲೇಖಿಸ ಲಾಗಿದೆ. [20] ಇದೇ ಹಿನ್ನೆಲೆಯಲ್ಲಿ ನೋಡಿದಾಗ ಇತ್ತೀಚಿನ ಕೆಲವು ಶಾಸನಗಳ ಅಧ್ಯಯನ ಗಳ ಅಧ್ಯಯನದಿಂದ ಹರಿಹರ ಬುಕ್ಕರು ಪ್ರಾರಂಭಿಕ ಶಾಸನಗಳಲ್ಲಿ ಸ್ವತಂತ್ರ ರಾಜರ

ನೀತಿ ಬಿರುದುಗಳನ್ನು ಧರಿಸದೇ ಮಹಾಮಂಡಲೇಶ್ವರರೆಂದೇ ಕರೆದು ಕೊಂಡಿರುವ ಹಿನ್ನೆಲೆಯಲ್ಲಿ, [21] ಶಾಸನಗಳು 'ವಿದ್ಯಾನಗರ' ಎಂದು ಸಾಮ್ರಾಜ್ಯವನ್ನು ಹೆಸರಿಸುವುದನ್ನು ಆಧಾರವಾಗಿಟ್ಟುಕೊಂಡು, ಹಲವು ಹೊಸ ವಿವರಗಳನ್ನಿಲ್ಲಿ ತಿಳಿಯಬೇಕಾಗುತ್ತದೆ. ಬಲ್ಲಾಳನು ತನ್ನ ಕೊನೆಯ ದಿನಗಳಲ್ಲಿ ಸಾಮ್ರಾಜ್ಯದಾದ್ಯಂತ ಪ್ರಾಂತೀಯ ರಾಜಧಾನಿಗಳನ್ನು ಹೊಂದಿದ್ದನು. ಅವುಗಳಲ್ಲಿ ಮುಖ್ಯವಾದವುಗಳು ಕಡಲತೀರದ ಬಾರಕೂರು ಹಾಗೂ ತುಂಗಭದ್ರೆಯ ಆಸುಪಾಸಿನಲ್ಲಿದೆಯೆಂದು ಗುರುತಿಸಿರುವ ವಿರೂಪಾಕ್ಷ ಹೊಸದುರ್ಗ ತಿರುವಣ್ಣಾಮಲೆ ಮತ್ತು ತೊಂಡನೂರು. ವಿರೂಪಾಕ್ಷ ಹೊಸ ದುರ್ಗದ ನಿಖರವಾದ ಗುರುತಿಸುವಿಕೆ ಅಂತಿಮವಾಗುವವರೆಗೆ ಬಲ್ಲಾಳನ ರಾಜಧಾನಿಯನ್ನು ವಿರೂಪಾಕ್ಷ ಹೊಸ ದುರ್ಗವೆಂದು ಕರೆಯುವುದು ಸೂಕ್ತ.

ಬಲ್ಲಾಳನು ಸ್ವದೇಶ ರಕ್ಷಣೆಗಾಗಿ ಅನೇಕ ಮುಂಜಾಗರೂಕತೆಯ ಕ್ರಮಗಳನ್ನು ಕೈಗೊಂಡನು. ತುಂಗಭದ್ರೆಯ ಉತ್ತರಕ್ಕೆ ಹೊಸದುರ್ಗ (ವಿರೂಪಾಕ್ಷ ಹೊಸದುರ್ಗ, ಹೆಸಬೆಟ್ಟು, ಹೊಸ ಪಟ್ಟಣ) ವೆಂಬ ಬಲವಾದ ಕೋಟೆಯನ್ನು ಕಟ್ಟಿಸಿದನು. ಇದು ಕೆಲ ಕಾಲಾನಂತರ ಹರಿಹರನು ತುಂಗಭದ್ರೆಯ ದಕ್ಷಿಣಕ್ಕೆ ಕಟ್ಟಿದ ಹೊಸ ರಾಜಧಾನಿ, ಪಟ್ಟಣಕ್ಕಿಂತ ಭಿನ್ನವಾದುದು ಎಂಬುದನ್ನು ಗಮನಿಸಬೇಕು. ಸುಮಾರು 1330 ರಿಂದ 1380ರ ವರೆಗೆ ಬಲ್ಲಾಳನು ತಾನು ಕಟ್ಟಿದ ಈ ರಾಜಧಾನಿಯಲ್ಲೇ ನೆಲೆಸಿದ್ದನು. [22] ರಾಜ್ಯದ ಉತ್ತರದ ಮೇರೆಯಲ್ಲಿ ಹಂಪಿ ಸಹ ಇವನ ರಾಜಧಾನಿಗಳಲ್ಲಿ ಒಂದಾಗಿ ಪರಿವರ್ತಿತವಾಯಿತು. [23] ಬಾ.ರಾ. ಗೋಪಾಲ್ 3ನೇ ಬಲ್ಲಾಳನ ಬಗೆಗೆ ಬರೆಯುತ್ತಾ ಹಂಪಿ ಅವನ ರಾಜಧಾನಿಯಾಗಿತ್ತೆಂದು ಹೇಳಿ, ವಿಜಯನಗರದ ಪ್ರಾರಂಭದ ಬಗೆಗೆ ಬರೆಯುತ್ತಾ ಹರಿಹರನಿಂದ ನಿರ್ಮಿತವಾದ ರಾಜಧಾನಿಗಿಂತ ಭಿನ್ನವಾಗಿ ಉತ್ತರದ ದಂಡೆಯ ಮೇಲೆ ಗುರುತಿಸುವ ಯತ್ನ ಮಾಡುತ್ತಾರೆ. ಈ ಕಾಲಕ್ಕಾಗಲೇ "ಆನೆಗೊಂದಿ" ನಗರವಿದ್ದುದರಿಂದ ಬಲ್ಲಾಳ ನಿರ್ಮಿಸಿದ ವಿರೂಪಾಕ್ಷ ಹೊಸದುರ್ಗ ಆನೆಗೊಂದಿ ಯಲ್ಲವೆಂದು ಹೇಳಬಹುದು. ಹಾಗಾದರೆ, ಹಂಪೆಯೇ ಬಲ್ಲಾಳನು ನಿರ್ಮಿಸಿದ ವಿರೂಪಾಕ್ಷ ಹೊಸದುರ್ಗವೇ ಎಂಬ ಪ್ರಶ್ನೆ ಏಳುತ್ತದೆ. ಈ ಹಂತದಲ್ಲಿ 'ಹೊಸದುರ್ಗ' ಅಥವಾ ಬಲ್ಲಾಳನ ಉತ್ತರದ ಪ್ರಾಂತ್ಯಗಳ ರಾಜಧಾನಿ ವಿರೂಪಾಕ್ಷ ಹೊಸ ದುರ್ಗವನ್ನು ಆತನ ಇತರ ಶಾಸನಗಳು ಉಲ್ಲೇಖಿಸುತ್ತವೆ. ಕ್ರಿ.ಶ. 1330ರ ಅರಸೀಕೆರೆಯ ಶಾಸನ 24 ಹೊಯ್ಸಳ 3ನೇ ಬಲ್ಲಾಳನು ವಿರೂಪಾಕ್ಷ ಪಟ್ಟಣದಲ್ಲಿ ಬೀಡುಬಿಟ್ಟಿದ್ದನ್ನು ಸಮರ್ಥಿಸುತ್ತದೆ. ಗುಬ್ಬಿಯ 1331 ಶಾಸನ [25] ಸಹ ಹೊಯ್ಸಳ 3ನೇ ಬಲ್ಲಾಳನು, ವಿರೂಪಾಕ್ಷ ಹೊಸದುರ್ಗದಲ್ಲಿದ್ದನೆಂದು ಖಚಿತಪಡಿಸುತ್ತದೆ. ಕ್ರಿ.ಶ. 1323ರ ಹೊಸಮಲೆ ದುರ್ಗದ ಶಾಸನ, [26] ಬಲ್ಲಾಳನು ಕಂಪಿಲರಾಯನ ವಿರುದ್ಧ ಕಾರ್ಯಾಚರಣೆ ಮಾಡಿದ್ದನ್ನು ಉಲ್ಲೇಖಿಸುತ್ತದೆ. ಹೊಸಮಲೆ ದುರ್ಗವನ್ನು ಸೊಂಡೂರಿನ ಸಮೀಪ

ದಲ್ಲಿರುವ ಇಂದಿನ ರಾಮುಗಡ್ ಎಂದು ಗುರುತಿಸಲಾಗಿದೆ.[27] ವಸುಂಧರಾರವರು ವಿಜಯನಗರದ ಕೋಟೆಗಳು, ದೇವಾಲಯಗಳು ಮತ್ತು ಇತರ ಹಲವು ಆಕರಗಳ ತೌಲನಿಕ ಅಧ್ಯಯನದ ಆಧಾರದ ಮೇಲೆ, ಹೊಯ್ಸಳ 3ನೇ ಬಲ್ಲಾಳನು ನಿರ್ಮಿಸಿದ ವಿರೂಪಾಕ್ಷ ಹೊಸದುರ್ಗವನ್ನು ಇಂದಿನ ಹಂಪಿ ಪರಿಸರದಲ್ಲಿ ಗುರುತಿಸಿದ್ದಾರೆ.[28] ಆದರೆ ಡಾ.ಬಿ. ನರಸಿಂಹಯ್ಯನವರು, ವಸುಂಧರಾರವರ ಅಧ್ಯಯನವನ್ನು ಚಿಕ್ಕ ಮಗಳೂರಿನ ಜಿಲ್ಲೆಯ ಮತ್ತು ತಾಲ್ಲೂಕಿನ ಹಂಪಾಪುರ [29] ಗ್ರಾಮದ ಕ್ರಿ.ಶ. 1411ರ ಶಾಸನ ಮತ್ತು ಚಿಕ್ಕಮಗಳೂರು ಜಿಲ್ಲೆ ಹಾಗೂ ಅದೇ ತಾಲ್ಲೂಕಿನ ಮುಕ್ತಿನಪುರದ [30] ಕ್ರಿ.ಶ. 1915ರ ಶಾಸನದ ಆಧಾರದ ಮೇಲೆ ವಿರೂಪಾಕ್ಷರಪುರವನ್ನು ದೋರಸಮುದ್ರದ ಅಸುಪಾಸಿನಲ್ಲಿ ಗುರುತಿಸುವ ಪ್ರಯತ್ನ ಮಾಡಿದ್ದಾರಾದರೂ ಅವರು ವಿರೂಪಾಕ್ಷಪುರವನ್ನು ನಿಖರವಾಗಿ ಗುರುತಿಸುವಲ್ಲಿ ಸಹ ವಿಫಲರಾಗಿದ್ದಾರೆ. ಹೀಗೆ ಗುರುತಿಸಲು ಅವರು ಕೊಡುವ ಕಾರಣ ಹಂಪೆಯ ಶ್ರೀ ವಿರೂಪಾಕ್ಷ ಹೊಯ್ಸಳ ವೀರಬಲ್ಲಾಳನ ಕಾಲದಲ್ಲಿ ಜನಜನಿತವಾಗಿರ ಲಿಲ್ಲ. ಅಲ್ಲದೆ ವಿಜಯನಗರದ ಕೋಟೆ ಗೋಡೆಯ ನಿರ್ಮಾಣದಲ್ಲಿ ಕಂಡು ಬರುವ ಕೆಲವು ವಿಶೇಷ ತಂತ್ರಜ್ಞಾನ, ಹೊಯ್ಸಳರ ಕಾಲದ ಕೋಟೆಗೋಡೆಗಳಲ್ಲಿ ಕಂಡು ಬಂದಿಲ್ಲವೆಂಬ ಆಧಾರದ ಮೇಲೆ [31]. ಆದರೆ ನರಸಿಂಹಯ್ಯನವರು ವಿಜಯನಗರ ಹರಿಹರ - ಬುಕ್ಕನ ಕಾಲಕ್ಕಾಗಲೇ ಸಂಪೂರ್ಣವಾಗಿ ಬೆಳೆದಿತ್ತೆಂದು ಭಾವಿಸಿರುವುದು ಅವರ ಈ ನಿರ್ಧಾರದಿಂದ ತಿಳಿದು ಬರುತ್ತದೆ. ಹೊಯ್ಸಳರ ಕಾಲದಲ್ಲಿ ಮಹಾನವಮಿಯ ದಿಬ್ಬದ ಆಸುಪಾಸಿನಲ್ಲಿ ಸಶಕ್ತವಾದ ನಗರವಿದ್ದುದರ ಕುರುಹುಗಳಿವೆ. ಅವುಗಳ ಚರ್ಚೆ ಇಲ್ಲಿ ಅಪ್ರಸ್ತುತ. ಆದರೆ ವಿಜಯನಗರದ ಕಾಲಾನುಕ್ರಮದ ಬೆಳವಣಿಗೆ, ಅನಂತರದ ಕಾಲದಲ್ಲಾದ ಉಪನಗರಗಳ ಬೆಳವಣಿಗೆ, ನರಸಿಂಹಯ್ಯನವರ ವಾದವನ್ನು ತಳ್ಳಿಹಾಕಲು ಪುಷ್ಟಿ ಕೊಡುತ್ತವೆ. ಕೋಟೆ ಗೋಡೆಗಳ ನಿರ್ಮಾಣದಲ್ಲಿ ಹೊಯ್ಸಳರ ಕಾಲದ್ದೆಂದು ಗುರುತಿಸುವ ತಂತ್ರಜ್ಞಾನವನ್ನು ವಿಜಯನಗರವನ್ನು ಸಂದರ್ಶಿಸಿದ್ದ ಪ್ರವಾಸಿಗರ ಕಥನಗಳಲ್ಲಿ ಕಾಣಬಹುದಾಗಿದೆ.[32] ಹಾಗೆ ವಿಜಯನಗರ ಪ್ರದೇಶದಲ್ಲಿ ಕೋಟೆಯನ್ನು ನಿರ್ಮಾಣ ಮಾಡಿದವರಲ್ಲಿ ಬುಕ್ಕರಾಯನೇ ಮೊದಲಿಗನೆಂದು ಸಂದೇಹಕ್ಕಾಸ್ಪದವಿಲ್ಲದೆ ಹೇಳಲು ಸಾಧ್ಯವಿಲ್ಲ. ಕ್ರಿ.ಶ. 1236ರ ಶಾಸನ [33] ದಾಖಲಿಸುವಂತೆ ಹಂಪೆಯ ವಿರೂಪಾಕ್ಷ ದೇವರಿಗೆ ಹೊಯ್ಸಳ ಸಾಮ್ರಾಜ್ಯದ ಅರಸ ಸೋಮೇಶ್ವರನು ದಾನ ನೀಡಿದ್ದನು. ಫರ್ನಾಒ ನೂನಿಜ್ ಬುಕ್ಕರಾಯ ಅಥವಾ ಹರಿಹರನ ಅನಂತರದ ಅರಸರು ಬಿಸ್ನಗ ನಗರದಲ್ಲಿ ಅನೇಕ ಕೋಟೆ ಗೋಡೆಗಳನ್ನು, ಕೋಟೆ ಗೋಪುರಗಳನ್ನು ಕಟ್ಟಿಸಿದ ಮತ್ತು ಅದರ ಸುತ್ತ ಹೊಸದಾಗಿ ಕೋಟೆ ಗೋಡೆಕಟ್ಟಿದ ಎಂದು ಉಲ್ಲೇಖಿಸಿದ್ದಾನೆ. ವಿಜಯನಗರದ ಕೋಟೆ ಗೋಡೆಗಳು ಕಾಲ ಕಾಲದಲ್ಲಿ ಆವಶ್ಯಕತೆಗೆ ತಕ್ಕಂತೆ ಪುನಃ ನಿರ್ಮಾಣವಾಗಿರು ವುದನ್ನು ಈ ಉಲ್ಲೇಖ ಎತ್ತಿಹಿಡಿಯುತ್ತದೆ. ಸುಮಾರು ೩೦೦ ಚದರ ಕಿಲೋ

ಮೀಟರ್‌ಗೂ ಹೆಚ್ಚಿನ ಭೂಪ್ರದೇಶವನ್ನು ಆಕ್ರಮಸಿಕೊಂಡಿರುವ ಮಹಾನಗರ ರಾಜಧಾನಿ, ನರಸಿಂಹಯ್ಯ ಹೇಳುವಂತೆ ಕ್ರಿ.ಶ. 1358-1369ರ ನಡುವೆ ಸಿದ್ಧವಾಯಿತೆಂದು ನಂಬಲಾಗುವುದಿಲ್ಲ.

ಆದರೆ ಈ ಕಾಲದಲ್ಲಿ ನಿರ್ಮಾಣ ಕಾರ್ಯ ನಡೆಯಲೇ ಇಲ್ಲವೆಂದಲ್ಲ ವಿಜಯನಗರದ ಸಾಮ್ರಾಜ್ಯ ಸ್ಥಾಪನೆಗೆ ಪೂರ್ವದಲ್ಲಿ ಈ ಪ್ರದೇಶ ಜನವಸತಿ ಹೊಂದಿತ್ತೆಂದು ಸಾಧಿಸಲು ಸಾಕಷ್ಟು ಆಕರಗಳು ಹೊರಬಂದಿರುವ ಹಿನ್ನೆಲೆಯಲ್ಲಿ ನರಸಿಂಹಯ್ಯನವರ ಈ ವಾದವನ್ನು ತಳ್ಳಿ ಹಾಕ ಬೇಕಾಗುತ್ತದೆ. ಅಲ್ಲದೆ ಕ್ರಿ.ಶ. 1336ರ ಏಪ್ರಿಲ್ 18ರ ಶಾಸನದಲ್ಲಿ ವಿದ್ಯಾನಗರದ ಉಲ್ಲೇಖವಿದೆ. ಹಾಗೆಂದ ಮೇಲೆ ವಿಜಯನಗರ ಸಾಮ್ರಾಜ್ಯದ ರಾಜಧಾನಿ, ಅದರ ಅಸ್ತಿತ್ವದ ದಿನಕ್ಕಿಂತ ಹಿಂದಿನಿಂದಲೇ ಬೆಳೆಯಲಾರಂಭಿಸಿ, ತನ್ನ ಬೆಳವಣಿಗೆಯ ಓಘವನ್ನು ಕ್ರಿ.ಶ. 1565ರ ವರೆಗೆ ಮುಂದುವರಿಸಿಕೊಂಡಿದ್ದಿತೆನ್ನಬಹುದು. ಡಾ. ವಾಸುದೇವನ್[34]ರವರು ಸವಿಸ್ತಾರವಾಗಿ ತಮ್ಮ ಇತ್ತೀಚಿನ ಲೇಖನದಲ್ಲಿ ಇದನ್ನು ನಿರೂ ಪಿಸಿದ್ದಾರೆ. ಈ ಎಲ್ಲ ಆಧಾರಗಳ ಹಿನ್ನೆಲೆಯಲ್ಲಿ ಸಧ್ಯಕ್ಕೆ ವಸುಂಧರ ಫಿಲಿಯೋಜರವರು ಗುರುತಿಸುವಂತೆ, ಹೊಯ್ಸಳ 3ನೇ ಬಲ್ಲಾಳನು ನಿರ್ಮಿಸಿದ ವಿರೂಪಾಕ್ಷಪುರ, ವಿರೂಪಾಕ್ಷ ಹೊಸದುರ್ಗ, ಇಂದಿನ ಹಂಪೆಯ ಪರಿಸರದಲ್ಲೇ ಇತ್ತೆಂದು ಖಚಿತವಾಗುತ್ತದೆ. ವಿಜಯನಗರದ ಪ್ರಾರಂಭದ ದಿನಗಳ 'ವಿದ್ಯಾನಗರ' ಪುರಾತನ ನಗರದ ಆಸುಪಾಸಿನಲ್ಲಿ ಪ್ರಾರಂಭವಾಗಿರಬೇಕು. ಇದೇ ಅಭಿಪ್ರಾಯವನ್ನು ವಿಜಯನಗರದ ಶಾಸನಗಳು ಕೃತಿಯ ಸಂಪಾದಕರಾದ ಚೆನ್ನಬಸಪ್ಪ ಎಸ್. ಪಾಟೀಲ್ ಪೀಠಿಕೆಯಲ್ಲಿ ನಗರದ ಪ್ರಾಚೀನತೆಯನ್ನು ಮತ್ತು ಬೆಳವಣಿಗೆಯನ್ನು ಗುರುತಿಸಿದ್ದಾರೆ. 'ವಿಜಯನಗರದ ಸ್ಥಾಪನೆಗಿಂತ ಮೊದಲೇ ಹಂಪೆ ಪ್ರದೇಶವು ಮಹತ್ವದ್ದಾಗಿತ್ತು. ಅರಮನೆ ಪ್ರದೇಶದಲ್ಲಿ ದೊರೆತ ಕ್ರಿ.ಶ. 1 ಮತ್ತು 2ನೇ ಶತಮಾನದ ಮೂರು ಬ್ರಾಹ್ಮಿ ಶಾಸನಗಳು ಈ ಪ್ರದೇಶದಲ್ಲಿ ದೊರೆತ ಅತಿ ಪ್ರಾಚೀನ ಶಾಸನಗಳು. ಈ ಪ್ರದೇಶ 12ನೇ ಶತಮಾನದಲ್ಲಿ ಕಲಚುರಿಗಳ ಆಡಳಿತಕ್ಕೆ ಒಳಪಟ್ಟಿತ್ತು. 13ನೇ ಶತಮಾನದಲ್ಲಿ ಹೊಯ್ಸಳರು ಈ ಪ್ರದೇಶದ ಮೇಲೆ ಪ್ರಭುತ್ವ ಹೊಂದಿದ್ದರು. ಕ್ರಿ.ಶ. 1236ರ ಶಾಸನ ಹೊಯ್ಸಳ ಅರಸ ಸೋಮೇಶ್ವರನು ವಿರೂಪಾಕ್ಷ ದೇವಸ್ಥಾನಕ್ಕೆ ದಾನ ಕೊಟ್ಟಿದ್ದನ್ನು ತಿಳಿಸುತ್ತದೆ.[35] ಈ ಆಕರಗಳು ವಿಜಯನಗರದ ನಿರ್ಮಾಣದ ಬಗ್ಗೆ ಹಾಗೂ ಅದು ಹೊಯ್ಸಳರ ಕಾಲದಲ್ಲಿ ಹೊಂದಿದ್ದ ಪ್ರಖ್ಯಾತಿಯನ್ನು ಎತ್ತಿ ಹಿಡಿದಿರುವ ಹಿನ್ನೆಲೆಯಲ್ಲಿ ವಸುಂಧರಾರವರ ವಾದವನ್ನು ಸದ್ಯಕ್ಕೆ ಒಪ್ಪ ಬಹುದಾಗಿದೆ.

ಕೋಟೆಯ ಪ್ರಕಾರ : ಪ್ರಾಚೀನ ಕಾಲದಿಂದಲೂ ರಾಜರು ತಮ್ಮನ್ನು, ತಮ್ಮ ಸಂಪತ್ತನ್ನು ಹಾಗೂ ಆಪ್ತ ಜನರನ್ನು ರಕ್ಷಿಸಿಕೊಳ್ಳಲು ಕೋಟೆಗಳನ್ನು ಕಟ್ಟಿಕೊಳ್ಳುತ್ತಿದ್ದರು. ಕರ್ನಾಟಕದ ಶಾಸನಗಳು ದುರ್ಗತ್ರಯಗಳಾದ ಗಿರಿದುರ್ಗ, ವನದುರ್ಗ ಮತ್ತು

ಜಲಮಾರ್ಗವನ್ನು ಉಲ್ಲೇಖಿಸುತ್ತವೆ.[36] ದುರ್ಗಸಿಂಹನು ಈ ಪಟ್ಟಿಗೆ ಸ್ಥಳದುರ್ಗವನ್ನು ಸೇರಿಸಿ ದುರ್ಗದ ಪ್ರಕಾರಗಳ ಸಂಖ್ಯೆಯನ್ನು ನಾಲ್ಕಕ್ಕೆ ಏರಿಸಿದ್ದಾನೆ. ಒಂದೊಂದು ದುರ್ಗವನ್ನು ಮತ್ತೆ ಎರಡು ಪ್ರಕಾರದ ದುರ್ಗಗಳಾಗಿ ವಿಭಾಗಿಸಿ ಒಟ್ಟು ಎಂಟು ಬಗೆಯ ದುರ್ಗಗಳನ್ನು ಪಟ್ಟಿಮಾಡಿದ್ದಾನೆ. [37] ಅವುಗಳೆಂದರೆ -

1. ಜಲದುರ್ಗ

ಅ. ಅತರ್ದ್ವೀಪ - ಎರಡು ನದಿಗಳ ಸಂಗಮದ ಮಧ್ಯದ ದುರ್ಗ.

ಆ. ಮಹಾಸ್ಥಳ - ದೊಡ್ಡ ಕೆರೆಗಳಿಂದಲೂ ಒರಟು ಮುಳ್ಳುಗಳಿಂದ ತುಂಬಿದ ಸರೋವರಗಳಿಂದಲೂ ಸುತ್ತುವರಿಯಲ್ಪಟ್ಟ ದುರ್ಗ.

2. ಗಿರಿದುರ್ಗ

ಇ. ಗುಹ್ಯ - ಬಹು ಎತ್ತರವಾದ ಬೆಟ್ಟದ ತುದಿಗಳು ನಾಲ್ಕು ಕಡೆಯಿದ್ದು ಒಂದೇ ಬಾಗಿಲುಳ್ಳದ್ದು.

ಈ. ಪ್ರಸ್ತರ - ಎಲ್ಲಿಯೂ ಒಳ್ಳೆಯ ದಾರಿಯಿಲ್ಲದೆ ಬೆಟ್ಟಗಳ ನಡುವೆ ನೀರು ಬೀಳುವ ಸ್ಥಳದಲ್ಲಿ ಸಣ್ಣ ದಾರಿ ಇರುವುದು.

3. ಸ್ಥಲ ದುರ್ಗ

ಉ. ಉದಕಸ್ತಂಭ ಹೊರಗಡೆ ನೀರು, ಗಿಡ, ಮರ ಹುಲ್ಲು ಬಳ್ಳಿಗಳಲ್ಲದೆ, ಒಳಗೆ ಮಾತ್ರ ಹುಲ್ಲು ಕಡ್ಡಿ ನೀರಿನಿಂದ ಸಮೃದ್ಧವಾಗಿರುವುದು.

ಊ. ವೈರಿಣಿ - ಹೊರಗೆ ಉಪ್ಪು ನೀರು, ಕುಡಿಯಲು ಬಾರದ ನೀರು ಅಥವಾ ಸ್ವಲ್ಪವೇ ನೀರು ಇರುವುದಿಲ್ಲ.

4. ವನದುರ್ಗ

ಋ. ಕರ್ದಮೋದಕ - ಸುತ್ತಾ ನೀರು ತುಂಬಿದ ಜಲಾಶಯವಿದ್ದು ಹೆದರಿಸುವಷ್ಟು ದುರ್ಧರ ಅತಿಶೀತಲ ಕೆಸರುಳ್ಳದ್ದು.

ೠ. ಸ್ತಂಭ ಗಹನ - ಅನೇಕ ಮರಗಳಿಂದ ಪರಿವೃತವಾಗಿ ಸುತ್ತಮುತ್ತ ಹುಲ್ಲು ಯಥೇಚ್ಛವಾಗಿ ಬೆಳೆದಿರುವುದು.

ಈ ವಿಭಾಗ ಕ್ರಮವನ್ನು ಗಮನಿಸಿದಾಗ, ದುರ್ಗಸಿಂಹನ ಕಾಲದಲ್ಲಿ ಕಟ್ಟಿರಬಹುದಾದ ದುರ್ಗಗಳ ಮತ್ತು ಅವುಗಳಿದ್ದ ಪರಿಸರದ ಆಧಾರದ ಮೇಲೆ ಈ ವಿಭಾಗ ಕ್ರಮ ಆಧಾರವಾಗಿರುವುದು ಅರಿವಾಗುತ್ತದೆ. ಅವನ ಪ್ರಕಾರ ಮಹಾಸ್ಥಳವೆಂಬ ದುರ್ಗಗಳು, ಜಲದುರ್ಗದ ಒಂದು ಪ್ರಕಾರ. ಅವುಗಳು ಹೊಂದಿರಬಹುದಾದ ಲಕ್ಷಣಗಳನ್ನು ತಿಳಿಸುವಾಗ, ಹಂಪೆಯ ಪರಿಸರವನ್ನು ಹೋಲುವ ವಿವರಣೆಯನ್ನು

ಕೊಡುತ್ತಾನೆ. ಅಲ್ಲದೆ ಮಹಾನಗರ ರಾಜಧಾನಿ ವಿಜಯನಗರ ಪಂಚತಂತ್ರದ ಕರ್ತೃವು ಹೇಳುವ ಲಕ್ಷಣಗಳನ್ನು ಹೊಂದಿರುವ ಆಧಾರದ ಮೇಲೆ, ಅದನ್ನು ಮಹಾಸ್ಥಾನದ ದುರ್ಗವೆನ್ನಬಹುದು. ಹಂಪೆ ಅಥವಾ ವಿಜಯನಗರ ಉತ್ತರದಲ್ಲಿ ಅಭೇದ್ಯವೆನಿಸುವಷ್ಟು ಅಗಲವಾದ ನದಿಯನ್ನು, ದಕ್ಷಿಣ ಮತ್ತು ಪೂರ್ವಪಶ್ಚಿಮಗಳಲ್ಲಿ ದುರ್ಗಮವೆನಿಸುವ ಬೆಟ್ಟ ಸಾಲುಗಳನ್ನು, ಕುರುಚಲು ಗಿಡಗಳನ್ನು, ಅಲ್ಲಲ್ಲಿ ದೊಡ್ಡ ಸರೋವರಗಳನ್ನು ಹೊಂದಿರುವುದರಿಂದ, ಈ ದುರ್ಗವು ಜಲದುರ್ಗ ಮಾದರಿಯದ್ದಾಗಿತ್ತೆನ್ನಬಹುದು.

ಮಹಾನಗರ ರಾಜಧಾನಿಯ ವಿಸ್ತಾರ

ವಿಜಯನಗರ ಸಾಮ್ರಾಜ್ಯದ ರಾಜಧಾನಿ ಮಹಾನಗರ ವಿಜಯನಗರವನ್ನು ಸಂದರ್ಶಿಸಿದ ಬಹುತೇಕ ಎಲ್ಲ ವಿದೇಶೀ ಪ್ರವಾಸಿಗರು ತಮ್ಮ ಪ್ರವಾಸಿ ಕಥನದಲ್ಲಿ ನಗರವು ಕೋಟೆಯಿಂದ ಆವೃತವಾಗಿದ್ದುದನ್ನು ಖಚಿತಪಡಿಸಿದ್ದಾರೆ. ಪ್ರವಾಸಿಗರು, ನಗರದ ವಿಸ್ತಾರ ಮತ್ತು ಅದು ಹೊಂದಿದ್ದ ಭದ್ರತಾ ವ್ಯವಸ್ಥೆಯನ್ನು ಕಂಡು ಬೆರಗಾಗಿರುವುದೂ ಬರಹಗಳಲ್ಲಿ ಕಂಡುಬರುತ್ತದೆ.

ನಿಕೋಲೋ-ದೆ-ಕೊಂತಿ[38] "ಇದು ಬಹಳ ಕಡಿದಾದ ಪರ್ವತಗಳಿಗೆ ತೀರ ಸಮೀಪದಲ್ಲಿದೆ, ನಗರದ ಸುತ್ತಳತೆ ಅರವತ್ತು ಮೈಲಿ ಸುತ್ತ ಕಟ್ಟಿರುವ ಕೋಟೆ ಪರ್ವತ ಗಳಷ್ಟು ಎತ್ತರವಾಗಿದ್ದು ಅವುಗಳ ಬುಡದಲ್ಲಿರುವ ಕಣಿವೆಗಳನ್ನು ಆಕ್ರಮಿಸಿಕೊಂಡಿದೆ" ಎಂದು ಉಲ್ಲೇಖಿಸಿದ್ದಾನೆ. ಅನಂತರ ಬಂದ ಅಬ್ದುಲ್ ರಜಾಕ್, "ಈ ನಗರವನ್ನು ಹೇಗೆ ನಿರ್ಮಿಸಿದ್ದರೆಂದರೆ ಏಳು ದುರ್ಗಗಳೂ ಏಳು ಕೋಟೆಗಳು ಒಂದನ್ನೊಂದು ಆವರಿಸಿಕೊಂಡಿವೆ" ಎಂದಿದ್ದಾನೆ. ಇವನ ಇತರ ವಿವರಣೆ ನೋಡಿದರೆ, ವಿಜಯನಗರ ರಕ್ಷಣಾ ಗೋಡೆಗಳು ಪ್ರಾಯಶಃ ಆ ಕಾಲಕ್ಕೆ ಹೊಸ ಪೇಟೆಯವರೆಗೆ ವಿಸ್ತರಿಸಿತ್ತೆನ್ನಬಹುದು. ಅಥನೇಷಿಯಸ್ ನಿಕಿಟಿನ್ ವಿಜಯನಗರ ಮೂರು ಕೋಟೆಗಳಿಂದ ಆವೃತ ವಾಗಿತ್ತೆಂದು ಬರೆದಿದ್ದಾನೆ. ದುಆರ್ತೆಬಾರ್ಬೊಸಾ ಒಂದು ಕಡೆ ಕೋಟೆಯಿಂದ, ಮತ್ತೊಂದೆಡೆ ನದಿಯಿಂದ, ಹಾಗೂ ಮತ್ತೊಂದು ಕಡೆ ಪರ್ವತಗಳಿಂದ ಆವೃತವಾಗಿತ್ತೆಂದು ತಿಳಿಸುತ್ತಾನೆ. ಡೋಮಿಂಗೋ ಪ್ಯಾಸ್ ನಗರ 24 ಹರದಾರಿಗಳ ಸುತ್ತಳತೆಯನ್ನು ಹೊಂದಿತ್ತೆಂದು ಉಲ್ಲೇಖಿಸಿದ್ದಾನೆ. ಹರದಾರಿ (ಹರಿದಾರಿ) ಎಂದರೆ ಸುಮಾರು ಮೂರು ಮೈಲಿಗಳ ಒಂದು ಅಳತೆ (ಕನ್ನಡ ರತ್ನಕೋಶ: 1977, ಅಂದರೆ 24 x 3 = 72 ಮೈಲಿ ಸುತ್ತಳತೆ). ಅಂದರೆ ಸುಮಾರು 115ಕಿ.ಮೀ. ಸುತ್ತಳತೆಯನ್ನು ನಗರ ಹೊಂದಿತ್ತು ಎಂದಾಗುತ್ತದೆ. ಮತ್ತೊಂದೆಡೆ ನಗರದ ವಿಸ್ತಾರವನ್ನು ಬರೆಯುತ್ತಾ 'ಈ ನಗರದ ಗಾತ್ರದ ಬಗೆಗೆ ನಾನಿಲ್ಲಿ ಬರೆಯುವುದಿಲ್ಲ, ಏಕೆಂದರೆ, ಯಾವ ಸ್ಥಳದಿಂದಲೂ ಅದು ಎಲ್ಲಾ ಕಾಣಿಸದು. ಆದರೆ ನಾನೊಂದು ಗುಡ್ಡ ಏರಿದೆ. ಅಲ್ಲಿಂದ ಅದರ ಬಹುಭಾಗವನ್ನು

ನೋಡಲು ಶಕ್ಯವಾಯಿತು. ಅದನ್ನು ಪೂರ್ತಿ ನೋಡಲಾಗಲಿಲ್ಲ. ಏಕೆಂದರೆ ಅದು ಹಲವಾರು ಬೆಟ್ಟ ಸಾಲುಗಳ ಮಧ್ಯೆ ಇದೆ' ಎಂದು ನಮೂದಿಸಿದ್ದಾನೆ. ಈ ವಿವರಣೆಗಳ ಹಿನ್ನೆಲೆಯಲ್ಲಿ ಇತ್ತೀಚಿನ ಸಂಶೋಧನೆಯ ಸಾರಾಂಶವನ್ನು ಸಹ ಉಲ್ಲೇಖಿಸಬೇಕಾಗುತ್ತದೆ. ಕ್ಯಾಥಲೀನ್ ಡಿ ಮ್ಯಾರಿಸನ್[39]ರವರು ವಿಜಯನಗರ ಸಾಮ್ರಾಜ್ಯದ ರಾಜಧಾನಿ, ಮಹಾನಗರ, ವಿಜಯನಗರದ ವಿಸ್ತಾರವನ್ನು ಒಂದೆಡೆ ಹೀಗೆ ಉಲ್ಲೇಖಿಸಿದ್ದಾರೆ. ವಿಜಯನಗರ ಸುಮಾರು 300 ಚದರ ಕಿ.ಮೀ. ವಿಸ್ತಾರವಾದ ಪ್ರದೇಶದಲ್ಲಿ ಅಂದರೆ, ಪೂರ್ವ ಪಶ್ಚಿಮವಾಗಿ 21 ಕಿ.ಮೀ. ಹಾಗೂ ಉತ್ತರ ದಕ್ಷಿಣವಾಗಿ, 16 ಕಿ.ಮೀ. ಪ್ರದೇಶವನ್ನು ಆವರಿಸಿಕೊಂಡಿದ್ದಿತು.

ಆದರೆ ಇತ್ತೀಚೆಗೆ ವಾಸುದೇವನ್[40] ತಮ್ಮ ಲೇಖನದಲ್ಲಿ ನಗರದ ವ್ಯಾಪ್ತಿಯನ್ನು 25 ಚದರ ಕಿ.ಮೀ. ವ್ಯಾಪ್ತಿಗೆ ಸೀಮಿತಗೊಳಿಸಿದ್ದಾರೆ. ಆದರೆ ಮಹಾನಗರ, ವಿಜಯನಗರದ ಉಪನಗರಗಳನ್ನು ಉಲ್ಲೇಖಿಸುತ್ತಾ ಅದೇ ಲೇಖನದಲ್ಲಿ ಹೊಸಪೇಟೆಯವರೆಗೆ ಹಂಪೆಯ ಸುತ್ತಮುತ್ತಲಿನ ಅಂದಿನ ನಗರಗಳನ್ನು ಹೀಗೆ ಪಟ್ಟಿ ಮಾಡಿದ್ದಾರೆ. ಅವುಗಳೆಂದರೆ : ಕಮಲಾಪುರ, ಕೃಷ್ಣಾಪುರ, ಅಚ್ಯುತಾಪುರ, ವಿಠಲಾಪುರ, ಮಲಪ್ಪನಗುಡಿ (ಅನಂತಶಯನ ಗುಡಿ), ಶಾಲೆ ತಿರುಮಲರಾಯ ಪಟ್ಟಣ, ತಿರುಮಲಾದೇವಿ ಪಟ್ಟಣ, ವರದರಾಜಮ್ಮನ ಪಟ್ಟಣ (ಅನಂತಾಪುರ), ವೆಂಕಟಾಪುರ, ಆನೆಗೊಂದಿ, ನಿಂಬಾಪುರ, ನಾಗಲಾಪುರ (ಹೊಸಪೇಟೆ) ಇತ್ಯಾದಿ. ಈ ಉಪನಗರಗಳ ಭೌಗೋಳಿಕ ವ್ಯಾಪ್ತಿಯನ್ನು ಮಾನದಂಡ ವಾಗಿಟ್ಟುಕೊಂಡು ನೋಡಿದಾಗ ಕ್ಯಾಥಲೀನ್ ಡಿ. ಮ್ಯಾರಿಸನ್‌ರವರ ಅಭಿಪ್ರಾಯ ಸೂಕ್ತವೆನಿಸುತ್ತದೆ. ಕೋಟೆಯ ವಿಸ್ತಾರವನ್ನು ಹೇಳುತ್ತಾ ಎಸ್.ಕೆ. ಜೋಷಿಯವರು,[41] ಹೆಚ್ಚು ಕಡಿಮೆ ಮ್ಯಾರಿಸನ್‌ರವರ ನಗರದ ವಿಶಾಲತೆಯ ಬಗೆಗೆ ಅಭಿಪ್ರಾಯವನ್ನು ಬೇರೆ ರೀತಿ ಮಂಡಿಸಿರುವಂತೆ ಕಂಡು ಬರುತ್ತದೆ. ಜೋಷಿಯವರು ಸ್ಥಳನಾಮಗಳ ಮಹತ್ವದ ಆಧಾರದ ಮೇಲೆ ತೋರಣಗಲ್, ಕಂಪ್ಲಿ, ಸಂಡೂರು (ಹೊಸ ಮಲೆದುರ್ಗ) ಹೊಸಪೇಟೆ, ಮಲ್ಲಾಪುರಗಳು ರಾಜಧಾನಿ ವಿಜಯನಗರದ ಮಹದ್ವಾರಗಳಾಗಿದ್ದವೆಂದು ಅಭಿಪ್ರಾಯಿಸಿದ್ದಾರೆ. ಹೊಸಪೇಟೆ ಅಥವಾ ಅಂದಿನ ನಾಗಲಾಪುರ ಮಹಾನಗರ ರಾಜಧಾನಿ ವಿಜಯನಗರದ ಪ್ರವೇಶದ್ವಾರವಾಗಿತ್ತೆನ್ನುವುದನ್ನು ಡೋಮಿಂಗೋ ಪ್ಯಾಸ್ ಕೂಡ ಸಮರ್ಥಿಸುತ್ತಾನೆ. ಆತನ ವಿವರಣೆ ಇಂತಿವೆ : "ಬೀಸ್ನಗನಗರ ತಲುಪುವ ಎರಡು ರಹದಾರಿ ಮುಂಚೆ ನಗರವನ್ನು ಪ್ರವೇಶಿಸಲು ಕಣಿವೆ ಮಾರ್ಗಗಳುಳ್ಳ ಉನ್ನತ ಬೆಟ್ಟ ಸಾಲುಗಳಿವೆ. ಇವುಗಳನ್ನು ಹೆಬ್ಬಾಗಿಲುಗಳೆಂದು ಕರೆಯಲಾಗುತ್ತದೆ. ಇವುಗಳ ಮೂಲಕವೇ ಪ್ರವೇಶಿಸಬೇಕು' ಅಂದಮೇಲೆ ವಿಜಯನಗರ ಹೊಸಪೇಟೆಯವರೆಗೆ ವಿಸ್ತರಿಸಿತ್ತೆಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಡಾ. ಎಸ್.ಕೆ. ಜೋಷಿಯವರು [42] ವಿಜಯನಗರದ ವಿಸ್ತಾರವನ್ನು 'ಈ ಏಳು ರಕ್ಷಣಾ ಗೋಡೆಗಳು, 164 ಚದರ ಮೈಲಿ (264 ಚದರ ಕಿ.ಮೀ.) ವಿಸ್ತಾರವಾದ ಪ್ರದೇಶವನ್ನು ತನ್ನಲ್ಲಿ ಅಳವಡಿಸಿಕೊಂಡಿದೆ. ಎಲ್ಲವನ್ನು ಒಟ್ಟುಗೂಡಿ ಈ ಗೋಡೆಗಳು ಸುಮಾರು 500 ಮೈಲಿ ಉದ್ದವಾಗಿದ್ದು ರಾಜಧಾನಿಯನ್ನು ಸುತ್ತುವರಿದಿವೆ. ಚೀನಾದ ಮಹಾಗೋಡೆಯನ್ನು ಹೊರತು ಪಡಿಸಿದರೆ ಇಡೀ ಏಷಿಯಾ ಖಂಡದಲ್ಲಿ ಇಷ್ಟು ವಿಸ್ತಾರ ವಾದ ಉದ್ದನೆಯ ರಕ್ಷಣಾ ಗೋಡೆಗಳು ಮತ್ತೆಲ್ಲೂ ಸಿಗಲಾರವು". ಏಳನೆಯ ಕೋಟೆಯ ಹೊರಗಿನ ಉಪನಗರವನ್ನು ಸೇರಿಸಿಕೊಂಡಲ್ಲಿ ರಾಜಧಾನಿ ವಿಜಯನಗರದ ವಿಸ್ತಾರ 300 ಚದರ ಕಿಲೋಮೀಟರ್‌ಗೆ ಹೆಚ್ಚಿನದಾಗುತ್ತದೆ ಎಂಬ ಕ್ಯಾಥಿಲೀನ್ - ಡಿ- ಮ್ಯಾರಿಸನ್ ರವರ ಅಭಿಪ್ರಾಯವನ್ನು ಒಪ್ಪಲೇಬೇಕಾಗುತ್ತದೆ.

ವಿಜಯನಗರದ ಕಾಲದಲ್ಲಿ ರಕ್ಷಣಾ ಗೋಡೆಗಳ ನಿರ್ಮಾಣ ರಾಜನ ಮತ್ತು ಆತನ ಸೀಮಿತ ಪರಿವಾರ, ಕೋಶ, ಸೈನಿಕರು ಮತ್ತು ಇತರರನ್ನು ರಕ್ಷಿಸುವುದಕ್ಕೆ ಸೀಮಿತವಾಗಿರದೆ ಸಮಸ್ತ ಸಮಾಜವನ್ನು ರಕ್ಷಿಸುವ ಉದ್ದೇಶ ಹೊಂದಿತ್ತು. ಹಾಗಾಗಿ ವಿಜಯನಗರದ ಕಾಲದ ಕೋಟೆಗಳು ವಿಸ್ತಾರವಾದ ಪ್ರದೇಶವನ್ನು ಒಳಗೊಂಡಿದ್ದವು. ಆ ಕಾಲದಲ್ಲಿ ನಿರ್ಮಾಣವಾದ ದೇವಾಲಯಗಳೇ ನಗರ ದೇವಾಲಯಗಳಾಗಿ ನಿರ್ಮಾಣ ಗೊಳ್ಳುತ್ತಿದ್ದವು. ಅಂದರೆ ಇಡೀ ನಗರ ದೇವಾಲಯದ ಪ್ರಾಕಾರದ ಒಳಗಿದ್ದು, ಕಷ್ಟ ಕಾಲದಲ್ಲಿ ಎಲ್ಲರೂ ಒಳಗೆ ರಕ್ಷಣೆ ಪಡೆಯಲು ಸಹಾಯವಾಗುವಂತೆ ನಿರ್ಮಿತವಾಗಿತ್ತು. ದೇವರಾಯನ ಕಾಲದಲ್ಲಿ ನಿರ್ಮಿತವಾದ ಶ್ರೀರಂಗಪಟ್ಟಣವೇ 18 ಚದರ ಕಿಲೋ ಮೀಟರ್ ವಿಸ್ತಾರದ ಭೂ ಪ್ರದೇಶವನ್ನು ಹೊಂದಿದೆ. ರಕ್ಷಣಾ ಗೋಡೆಯು ಸುಮಾರು ನಾಲ್ಕು ಚದುರ ಮೈಲಿ ವಿಸ್ತಾರವಾದ ಭೂ ಪ್ರದೇಶವನ್ನು ಒಳಗೊಂಡಿದೆ. ಅಲ್ಲದೆ ಇತರ ಉಪನಗರಗಳನ್ನು ಹೊಂದಿದೆ. ಒಂದು ಸಣ್ಣ ಪಾಳೆಯ ಪಟ್ಟಿನ ಕೇಂದ್ರದ ರಕ್ಷಣಾ ಕೋಟೆಯೇ ಇಷ್ಟು ವಿಸ್ತಾರವಾಗಿರಬೇಕಾದರೆ, ಇನ್ನು ಮಹಾನಗರಿಯಾದ ಸಾಮ್ರಾಜ್ಯದ ರಾಜಧಾನಿಯಾದ ವಿಜಯನಗರದ ವಿಸ್ತಾರ ನಿಜಕ್ಕೂ ಮಹತ್ವವಾದದ್ದಾಗಿತ್ತೆಂದು ಭಾವಿಸ ಬೇಕಾಗುತ್ತದೆ. ಶ್ರೀರಂಗಪಟ್ಟಣದ ಈ ಕೋಟೆಗಳು ಕೇವಲ ರಾಜತಂತ್ರಜ್ಞರ, ರಾಜನ ರಕ್ಷಣೆಗೆ ಮೀಸಲಾಗಿದ್ದವೆಂಬುದನ್ನು ಗಮನಿಸಬೇಕಾದುದು ಅಗತ್ಯ. ಆದರೆ ಕಾವೇರಿಯೇ ಇಲ್ಲಿ ಸಾಮಾನ್ಯರ ರಕ್ಷಕಿಯಾಗಿರುವುದು ಮಹತ್ವದ ಸಂಗತಿ. ಹಾಗೆಂದ ಮೇಲೆ ಹಲವಾರು ಉಪನಗರಗಳು, ಸಹಸ್ರಾರು ಜನ, ಅವರ ಜೀವನಾವಶ್ಯಕ ಪ್ರದೇಶವನ್ನು ಹೊಂದಿದ್ದ ರಾಜಧಾನಿ ವಿಜಯನಗರದ ವಿಸ್ತಾರ 300 ಚದರ ಮೈಲಿಯನ್ನು ಒಳಗೊಂಡಿದ್ದರಲ್ಲಿ ಆಶ್ಚರ್ಯಪಡಬೇಕಾಗಿಲ್ಲ. ಪ್ರವಾಸಿಗರೆ ಹೇಳುವಂತೆ, ಈ ಕೋಟೆಗಳ ನಡುವೆ ವ್ಯವ ಸಾಯದ ಭೂಮಿ ಇದ್ದು, ಅದು ವಿಜಯನಗರದ ಅವಶ್ಯಕತೆಯನ್ನು ಪೂರೈಸು ತ್ತಿದ್ದುದಾಗಿ ತಿಳಿಸುತ್ತಾರೆ. ಇದು, ವಿಜಯನಗರ ಕಾಲದಲ್ಲಿ ಬದಲಾದ ರಕ್ಷಣಾ

ವ್ಯವಸ್ಥೆಯ ಬಹುಮುಖ್ಯ ಅಂಶವನ್ನು ಎತ್ತಿ ಹಿಡಿಯುತ್ತದೆ. ಹೀಗಾಗಿ ವಿಜಯನಗರ ಸಾಮ್ರಾಜ್ಯದ ಉಚ್ಛ್ರಾಯ ಕಾಲದಲ್ಲಿ ಮಹಾನಗರ ರಾಜಧಾನಿ, ಪ್ರಾಚೀನ ಕಾಲದ ಕೋಟೆಗಳಿಗಿಂತ ಭಿನ್ನವಾಗಿ ರಾಜ ಮತ್ತು ಅವರ ಪರಿವಾರದವರನ್ನು ರಕ್ಷಿಸುವುದರ ಜೊತೆಯಲ್ಲಿ, ಜನ ಸಾಮಾನ್ಯರ ರಕ್ಷಣೆಯನ್ನು ಮಾಡಬೇಕಾಗಿದ್ದರಿಂದ ವಿಸ್ತಾರವಾದ ಪ್ರದೇಶವನ್ನು ಆವರಿಸಿತ್ತು. ಇದರಿಂದ ಮಹಾನಗರ ರಾಜಧಾನಿ ಧಾಳಿಯ ಸಮಯದಲ್ಲಿ ಯಾವುದೇ ತೊಂದರೆಯಿಲ್ಲದೆ ಹಲವಾರು ತಿಂಗಳುಗಳ ಕಾಲ ಸಂರಕ್ಷಣೆ ಮಾಡಿಕೊಳ್ಳಬಲ್ಲ ನಗರವಾಗಿತ್ತೆಂದು ಪ್ರವಾಸಿಗರ ಉಲ್ಲೇಖದಿಂದ ಖಚಿತವಾಗುತ್ತದೆ.

ಕೋಟೆಯ ಬಗೆಗಿನ ವಿದೇಶೀಯರ ಉಲ್ಲೇಖಗಳು

ಮಹಾನಗರ ರಾಜಧಾನಿ ವಿಜಯನಗರ ಹೊಂದಿದ್ದ ರಕ್ಷಣಾ ವ್ಯವಸ್ಥೆ, ಕೋಟೆ ಕೊತ್ತಳಗಳು, ಹೆಬ್ಬಾಗಿಲುಗಳು, ಬಾಗಿಲುಗಳಲ್ಲಿ ನಡೆಯುವ ತಪಾಸಣೆ, ಕೋಟೆಯ ರಕ್ಷಣೆಗೆ ನಿಯೋಜಿತರಾದ ಸೈನಿಕರು, ಅವರ ವೇಷಭೂಷಣ, ಅವರ ಸಂಬಳ ಸಾರಿಗೆ, ಅವರನ್ನು ಆಯ್ದುಕೊಳ್ಳುವ ಕ್ರಮ, ನಾಗರೀಕರ ಶಿಸ್ತುಪಾಲನೆ ಮತ್ತು ನಾಗರೀಕರ ಹಾಗೂ ಪ್ರವಾಸಿಗರು ಹೊಂದಿದ್ದ ರಕ್ಷಣೆಯ ಬಗೆಗಿನ ಓತಪ್ರೋತವಾದ ಬರವಣಿಗೆ ವಿದೇಶಿಯರ ಪ್ರವಾಸಿ ಕಥನಗಳಲ್ಲಿ ಸಾಕಷ್ಟು ಕಂಡು ಬರುತ್ತದೆ. ಇದಲ್ಲದೆ ಇಂದು ನಮಗೆ ಕಾಣಸಿಗುವ ಸ್ಮಾರಕಗಳ ಸಹಾಯದಿಂದ ಸಹ, ಕೋಟೆಗಳ ಒಂದು ಸಮಗ್ರ ಚಿತ್ರಣ ನೀಡುವ ಪ್ರಯತ್ನವಿದಾಗಿದೆ. ಮೊದಲಿಗೆ, ಪ್ರವಾಸಿಗರು ನೀಡಿರುವ ಕೋಟೆಯ ಚಿತ್ರಣವನ್ನು ನೀಡಿ ಅನಂತರ ಪ್ರಸ್ತುತ ವಿವರವನ್ನು ಹೇಳಲಾಗಿದೆ.

ಅಬ್ದುಲ್ ರಜಾಕ್ (ಕ್ರಿ.ಶ. 1442-1443) "ಬೀಜ ನಗರದಂಥ ನಗರವನ್ನು ಕಣ್ಣು ಕಂಡಿಲ್ಲ ಕಿವಿ ಕೇಳಿಲ್ಲ. ಈ ನಗರವನ್ನು ಹೇಗೆ ನಿರ್ಮಿಸಿದ್ದಾರೆಂದರೆ ಏಳು ದುರ್ಗಗಳು, ಏಳು ಕೋಟೆಗಳು ಒಂದನ್ನೊಂದು ಆವರಿಸಿಕೊಂಡಿವೆ. ಒಂದನೆಯ ದುರ್ಗದ ಸುತ್ತ ಮನುಷ್ಯನ ಎತ್ತರದ ಕಲ್ಲು ಕಂಭಗಳನ್ನು ಭೂಮಿಯಲ್ಲಿ ಅರ್ಧ ಹೂತು ಇನ್ನರ್ಧ ಮೇಲೆ ಕಾಣುವಂತೆ ನೆಟ್ಟಿದ್ದಾರೆ. ಇವುಗಳನ್ನು ಒಂದರ ಪಕ್ಕದಲ್ಲಿ ಒಂದರಂತೆ ಹೇಗೆ ಹೂತಿದ್ದಾರೆಂದರೆ ರಾವುತರಾಗಲೀ ಪದಾತಿಯಾಗಲೀ ಧೈರ್ಯವಾಗಿ ಅಥವಾ ಸುಲಭವಾಗಿ ದುರ್ಗದ ಕಡೆ ಹೋಗುವಂತಿಲ್ಲ. ಈ ಕೋಟೆ ಚಕ್ರಾಕಾರವಾಗಿದೆ. ಇದನ್ನು ಬೆಟ್ಟದ ತುದಿಯ ಮೇಲೆ ಕಲ್ಲು ಮತ್ತು ಗಾರೆಯಿಂದ ಕಟ್ಟಿದ್ದಾರೆ. ಇದರ ಹೆಬ್ಬಾಗಿಲುಗಳು ಬಹುಬಲವಾಗಿವೆ. ಈ ಹೆಬ್ಬಾಗಿಲುಗಳನ್ನು ಒಂದೇ ಸಮನೆ ಕಾಯುತ್ತಾರೆ. ಯಾರನ್ನೂ ಸಂಪೂರ್ಣ ಪರೀಕ್ಷೆ ಮಾಡದೆ ಒಳಗೆ ಬಿಡುವುದಿಲ್ಲ" "ಎರಡನೆಯ ಕೋಟೆ ವಿಶಾಲವಾದ ಜಾಗವನ್ನು ಆಕ್ರಮಿಸಿದೆ. ಇದರಂತೆ ನಾಲ್ಕು, ಐದು ಮತ್ತು ಆರನೆಯ ಕೋಟೆಗಳಿವೆ" "ಎಲ್ಲಾ ಕೋಟೆಗಳ ಮಧ್ಯದಲ್ಲಿರುವ ಏಳನೆಯ ಕೋಟೆ ಆಕ್ರಮಿಸಿಕೊಂಡಿರುವ ಜಾಗ

ಹೆರಾತ್ ನಗರದ ಮಾರ್ಕೆಟ್ ಜಾಗದ ಹತ್ತರಷ್ಟು ವಿಶಾಲವಾಗಿದೆ. ಇಲ್ಲಿ ರಾಜನು ವಾಸಮಾಡುವ ಅರಮನೆ ಇದೆ. ಉತ್ತರ ದಿಕ್ಕಿನಲ್ಲಿ ಮೊದಲನೆಯ ಕೋಟೆಯ ಹೆಬ್ಬಾಗಿಲಿನಿಂದ ಹಿಡಿದು ದಕ್ಷಿಣದಲ್ಲಿರುವ ಹೆಬ್ಬಾಗಿಲಿಗೆ ಎರಡು ಪರ್ಲಾಂಗುಗಳಷ್ಟು ದೂರವಿದೆ. ಪೂರ್ವದಿಂದ ಪಶ್ಚಿಮಕ್ಕೂ ಅಷ್ಟೇ ದೂರ"

"ಮೊದಲನೆಯ ಕೋಟೆಗೂ, ಎರಡನೆಯ ಕೋಟೆಗೂ ಮಧ್ಯೆ ಇರುವ ಜಾಗದಲ್ಲಿ ಅಂದರೆ ಮೂರನೆಯ ಕೋಟೆಯವರೆಗೆ ಇರುವ ಜಾಗದಲ್ಲಿ ಬೇಸಾಯದ ಹೊಲಗಳೂ ಮನೆಗಳೂ ಮತ್ತು ತೋಟಗಳೂ ಇವೆ" "ಮೂರನೆಯ ಕೋಟೆಯಿಂದ ಏಳನೆಯ ಕೋಟೆಯವರೆಗೆ ಅಸಂಖ್ಯಾತ ಜನಗಳನ್ನೂ ಅನೇಕ ಅಂಗಡಿಗಳನ್ನೂ, ಅಂಗಡಿ ಬೀದಿಗಳನ್ನೂ ನೋಡಬಹುದು. (ಪ್ರವಾಸಿಗರ ಉಲ್ಲೇಖನಗಳನ್ನು ನಾಗೇ ಗೌಡರ ಪ್ರವಾಸಿ ಕಂಡ ಇಂಡಿಯಾ ಸಂಪುಟಗಳು ಮತ್ತು ವಿವೇಕ ರೈಯವರ ಪ್ರವಾಸಿಕಂಡ ವಿಜಯನಗರ ಗ್ರಂಥದಿಂದ ಆಯ್ದುಕೊಳ್ಳಲಾಗಿದೆ)

ಅಥನೇಷಿಯಸ್ ನಿಕಟಿನ್ : (1468 - 1474) "ಇವನು (ರಾಜ) ಭಿಜನೇಘರ್ (ವಿಜಯನಗರ) ಎಂಬ ಸ್ಥಳದಲ್ಲಿ ಪರ್ವತದಮೇಲೆ ವಾಸ ಮಾಡುತ್ತಾನೆ. ಈ ಭಾರೀ ನಗರದ ಸುತ್ತಲೂ ಮೂರು ಕೋಟೆಗಳಿವೆ. ಈ ಊರಿನ ಮಧ್ಯೆ ನದಿ ಹರಿಯುತ್ತದೆ. ಒಂದು ಕಡೆ ಜಂಗಲ್ ಇದೆ".

ದುಆರ್ತೆ ಬಾರ್ಬೋಸ : "ಪರ್ವತಗಳಿಂದಾಚೆಗೆ ನಲವತ್ತು ಹರಿದಾರಿಗಳು ಒಳನಾಡಿಗೆ ಹೋದರೆ ಬಿಜನಗರ್ ಎಂಬ ಬಹುದೊಡ್ಡ ನಗರ ಸಿಕ್ಕುತ್ತದೆ. ಈ ನಗರದಲ್ಲಿ ಅಸಂಖ್ಯಾತ ಜನ ವಾಸಮಾಡುತ್ತಾರೆ. ಒಂದು ಕಡೆ ಬಹಳ ಒಳ್ಳೆಯ ಕೋಟೆಯು, ಇನ್ನೊಂದು ಕಡೆ ನದಿಯೂ, ಮತ್ತೊಂದು ಕಡೆ ಪರ್ವತವೂ ಇವೆ"

ಡೊಮಿಂಗೊ ಪ್ಯಾಸ್ : "ಬೀಸ್ನಗ ನಗರದ ಕಡೆಗೆ ಹೋಗುವಾಗ ಅನೇಕ ನಗರಗಳು ಮತ್ತು ಗೋಡೆಯುಳ್ಳ ಹಳ್ಳಿಗಳಿವೆ ಮತ್ತು ಬೀಸ್ನಗ ನಗರ ತಲುಪುವ ಎರಡು ರಹದಾರಿ ಮುಂಚೆ ನಗರವನ್ನು ಪ್ರವೇಶಿಸಲು ಕಣಿವೆ ಮಾರ್ಗಗಳುಳ್ಳ ಉನ್ನತವಾದ ಬೆಟ್ಟಸಾಲುಗಳಿವೆ. ಇವುಗಳನ್ನು ಹೆಬ್ಬಾಗಿಲುಗಳೆಂದು ಕರೆಯಲಾಗುತ್ತದೆ. ಇವುಗಳ ಮೂಲಕವೇ ಪ್ರವೇಶಿಸಬೇಕು. ಏಕೆಂದರೆ ಇವುಗಳ ಮೂಲಕವಲ್ಲದೆ ಬೇರೆ ದಾರಿ ಇಲ್ಲ. ಈ ಬೆಟ್ಟಗಳ ಸಾಲು ಇಪ್ಪತ್ತು ನಾಲ್ಕು ಹರದಾರಿಗಳ ಆವರ್ತನದಿಂದ ನಗರವನ್ನು ಸುತ್ತುವರಿಯುತ್ತವೆ ಮತ್ತು ಈ ಸಾಲಿನೊಳಗೆ ಅದನ್ನು ಸಮೀಪದಿಂದ ಸುತ್ತುವರಿಯುವ ಮಿಕ್ಕವೂ ಇವೆ. ಈ ಬೆಟ್ಟ ಸಾಲುಗಳಿಗೆ ಯಾವುದೇ ಸಮತಲ ಭೂಮಿ ಹತ್ತುವಲ್ಲೆಲ್ಲ ಅವು ಅದನ್ನು ಬಹು ಭದ್ರ ಗೋಡೆಯೊಂದಿಗೆ ಅಡ್ಡಹಾಯುತ್ತವೆ. ಇದರಿಂದಾಗಿ ಮೊದಲ ಸಾಲಿನಲ್ಲಿರುವ ಮತ್ತು ನಗರಕ್ಕೆ ಪ್ರವೇಶ ಮಾರ್ಗಗಳಾಗಿರುವ ದ್ವಾರಗಳ ಮೂಲಕ ದಾರಿಗಳು ಹಾಯುವ ಸ್ಥಳಗಳನ್ನು ಹೊರತುಪಡಿಸಿ, ಗುಡ್ಡಗಳು ಪೂರ್ತಿಮುಚ್ಚಿವೆ. ಇಂಥ ಸ್ಥಳಗಳಲ್ಲಿ

ಕೆಲವು ಮಂದಿ ಸುರಕ್ಷಿತವಿರಬಹುದಾದ ಸಣ್ಣ ತಗ್ಗುಗಳು (ಅಥವಾ ಗುಹೆಗಳು) ಇವೆ. ಬಹುಶಃ ಇವು ನೆಲಮಾಳಿಗೆಯಲ್ಲಿನ ಕಾವಲುಗಾರರ ವಿಶ್ರಾಂತಿ ಸ್ಥಳಗಳು ಈ ಬೆಟ್ಟ ಸಾಲುಗಳು ನಗರದ ಒಳಭಾಗದವರೆಗೆ ಸಾಗುತ್ತವೆ. ಇವೆಲ್ಲ ಸುತ್ತುಗಟ್ಟುಳ್ಳ ಪ್ರದೇಶಗಳ ನಡುವೆ ಭತ್ತ ಬೆಳೆಯುವ ಬಯಲುಗಳು ಮತ್ತು ಕಣಿವೆಗಳಿವೆ. ಮತ್ತಿತರ ತೋಟೋತ್ಪನ್ನಗಳುಳ್ಳ ತೋಟಗಳಿವೆ. ಈ ಬೆಟ್ಟ ಸಾಲುಗಳ ಮಧ್ಯೆ ಅನೇಕ ಸರೋವರ ಗಳಿದ್ದು ಅವುಗಳಿಂದ ಮೇಲೆ ಹೇಳಿರುವ ಬೆಳೆಗಳಿಗೆ ನೀರುಣಿಸುತ್ತಾರೆ'.

'ಈಗ ಮೊದಲ ಸಾಲಿನ ದ್ವಾರಗಳ ಬಗೆಗೆ ನಾನು ಹೇಳುವುದೇನೆಂದರೆ ಪಶ್ಚಿಮಕ್ಕೆ ಮುಖ್ಯ ಹಾಗೂ ಗೋವಾದಿಂದ ಬರುವವರು ಹಾಯುವ ಹೊರ ಬಾಗಿಲಿರುವುದರ ಪ್ರದೇಶದಲ್ಲಿ ಈ ರಾಜ ಅದರೊಳಗೆ ಗೋಡೆ ಹಾಗೂ ಗೋಪುರಗಳಿಂದ ಬಲಪಡಿಸಲಾದ ನಗರವನ್ನು ಕಟ್ಟಿದ್ದಾನೆ ಮತ್ತು ದ್ವಾರಗಳ ಹೊರಬಾಗಿಲುಗಳು ಗೋಪುರಗಳನ್ನು ಹೊಂದಿದ್ದು ಬಲು ಗಟ್ಟಿಯಾಗಿವೆ. ಈ ಗೋಡೆಗಳು ಇತರ ನಗರಗಳ ಗೋಡೆಗಳಂತಿರದೆ ಯಾವ ಪ್ರದೇಶದಲ್ಲೂ ಕಾಣಸಿಗದಂತಹ ಗಟ್ಟಿಕಲ್ಲು ಕಟ್ಟಡವಾಗಿದೆ".

"ನಗರದ ಎಲ್ಲ ಆವರಣಗಳನ್ನು ಸುತ್ತುಗಟ್ಟುವ ಗೋಡೆಯುಳ್ಳ ಹೆಬ್ಬಾಗಿಲಿದೆ ಮತ್ತು ಈ ಗೋಡೆ ಬಹಳ ಗಟ್ಟಿಯಾದರೂ, ಬೃಹತ್ ಕಲ್ಲು ಕಟ್ಟಡವೂ ಆಗಿದೆ. ಆದರೆ ಈಗ ಅದು ಅಲ್ಲಲ್ಲಿ ಒಡೆದಿದೆ. ಅವರು ಅವರಲ್ಲಿ ದುರ್ಗಗಳನ್ನು ಇಡದೆ ಬಿಡರು. ಈ ಗೋಡೆಗೆ ಕೆಲವೆಡೆ ಮತ್ತು ಕೆಳಮಟ್ಟದಲ್ಲಿ ಕಟ್ಟಲಾಗಿರುವ ಭಾಗಗಳಲ್ಲಿ ನೀರಿನ ಕಂದಕವಿದೆ. ಅದರಿಂದ ಪ್ರತ್ಯೇಕವಾಗಿ ಇನ್ನೂ ಒಂದು (ರಕ್ಷಣೆ) ಕೆಳಗೆ ಹೇಳಿದಂತೆ ಮಾಡಿದ್ದು ಇದೆ. ಚೂಪು ತುದಿಯುಳ್ಳ ಕೆಲವು ಎತ್ತರವಾದ ಕಲ್ಲುಗಳನ್ನು ನೆಲದ ಮೇಲೆ ಎತ್ತರದಲ್ಲಿ ನಿಲ್ಲಿಸಿದ್ದಾರೆ. ಅವು ಒಂದೂವರೆ ಈಟಿ ಕೋಲಿನಷ್ಟು ಅಗಲವಿದ್ದು ಅವುಗಳು ಮತ್ತು ದೊಡ್ಡ ಗೋಡೆಗಳ ಮಧ್ಯೆ ಅಷ್ಟೇ ಅಂತರವಿದೆ. ಈ ಗೋಡೆ ಯಾವುದೊಂದು ಗುಡ್ಡ ಅಥವಾ ಕಲ್ಲುಗಾಡು ತಲುಪುವವರೆಗಿನ ಎಲ್ಲ ಕೆಳಮಟ್ಟದ ನೆಲದಲ್ಲಿ ನಿಂತಿದೆ. ನೀರು ಈ ಗೋಡೆಯ ಮೊದಲ ಸಾಲಿನ ಮೂಲಕ ಹರಿಯುತ್ತದೆ." "ರಾಜನ ಈ ಅರಮನೆ ಇತರ ಕೆಲವು ಗೋಡೆಗಳಂತೆ ಬಲು ಭದ್ರವಾಗಿರುವ ಗೋಡೆಯಿಂದ ಸುತ್ತುವರಿಯ ಲ್ಪಟ್ಟಿದ್ದು ಲಿಸ್ಬನ್ ದುರ್ಗಕ್ಕಿಂತ ಹೆಚ್ಚು ಸ್ಥಳವನ್ನು ಆವರಿಸಿದೆ.

ಈ ವಿವರಗಳು ಮಹಾನಗರ ರಾಜಧಾನಿ ವಿಜಯನಗರ ಅಥವಾ ವಿದ್ಯಾನಗರ ವಿಶಾಲವಾದ ಕೋಟೆಯನ್ನು ಹೊಂದಿದ್ದ ಅಂಶ ಖಚಿತವಾಗುತ್ತದೆ. ಆದರೆ ಈ ಕೋಟೆಯ ಗೋಡೆಗಳು ಇತರ ಕೋಟೆಗಳಿಗಿಂತ ಭಿನ್ನವಾದ ರಚನಾ ಶೈಲಿಯನ್ನು ಹೊಂದಿವೆ. ವಿಜಯನಗರದ ಪರಿಸರ ಸಹ ಈ ರಚನೆಗೆ ಹಾಗೂ ರಕ್ಷಣಾ ವ್ಯವಸ್ಥೆಗೆ ಸಹಕಾರಿ ಯಾಗಿದೆ. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದುದು ಮುಸಲ್ಮಾನರ ಧಾಳಿಯನ್ನು ತಡೆದು ಸ್ವಧರ್ಮ, ಸ್ವರಾಷ್ಟ್ರ, ಸ್ವಹಿತ ಸಂರಕ್ಷಿಸುವ ಉದ್ದೇಶದಿಂದ. ಮುಸ್ಲಿಂ

ಧಾಳಿಕಾರರು ತಮ್ಮ ದಂಡಯಾತ್ರೆಯ ಕಾಲದಲ್ಲಿ ವೇಗವಾಗಿ ಚಲಿಸುವ, ಅಶ್ವಸೇನೆ ಅಥವಾ ರಾವುತರನ್ನು ಹಾಗೂ ಪದಾತಿ ದಳವನ್ನು ವಿಶೇಷವಾಗಿ ಬಳಸುತ್ತಿದ್ದರು. ಹಾಗಾಗಿ ಕುದುರೆಗಳು ಹತ್ತಲಾರದ ಎತ್ತರ ಪ್ರದೇಶಗಳಲ್ಲಿ ಕಲ್ಲುಗಳಿಂದ ಆವೃತವಾದ ಪ್ರದೇಶ ಗಳನ್ನು ಬಳಸಿಕೊಂಡು ಸಮತಟ್ಟಾದ ಜಾಗದಲ್ಲಿ ಎತ್ತರವಾದ ಗೋಡೆಗಳನ್ನು ಎರಡು ಗುಡ್ಡ ಅಥವಾ ಪರ್ವತಗಳನ್ನು ಸಂಧಿಸುವಂತೆ ನಿರ್ಮಿಸಿರುವುದು, ಪ್ರಾಕೃತಿಕ ಲಕ್ಷಣವನ್ನು ರಕ್ಷಣಾ ತಂತ್ರವಾಗಿಸಿರುವುದು ವಿಜಯನಗರದ ರಕ್ಷಣಾ ತಂತ್ರದ ವಿಶೇಷತೆ. ಅಶ್ವಸೇನೆ ಹಾಗೂ ಗಜಸೇನೆಯನ್ನು ಕೋಟೆಗಳಿಂದ ದೂರವಿರಿಸಲು ಕುದುರೆ ಕಲ್ಲು ಎಂದು ಕರೆಯುವ ಮತ್ತೊಂದು ಬಗೆಯ ರಕ್ಷಣಾ ವ್ಯವಸ್ಥೆಯನ್ನು ಅಳವಡಿಸಿಕೊಂಡಿರುವುದು ಈ ಕಾಲದ ಮಹತ್ವದ ತಂತ್ರಗಾರಿಕೆ. ಈ ವ್ಯವಸ್ಥೆಯಿಂದ ಸೈನಿಕರು ಗೋಡೆಯಿಂದ ದೂರದಲ್ಲಿ ನಿಂತು ಹೋರಾಡಬೇಕಾಗಿತ್ತು. ಅಂತಹ ಸಂದರ್ಭದಲ್ಲಿ ಸಿಡಿಗುಂಡು, ತುಪಾಕಿ, ಅಂಬು, ಕಲ್ಲೆಸೆಯುವ ಯಂತ್ರಗಳನ್ನು ಕೋಟೆಯ ಒಳಗಿಂದ ಬಳಸಿ ಶತ್ರುಸೇನೆ ಯನ್ನು ನಾಶಮಾಡಲು ಸಹಾಯಕವಾಗುತ್ತಿತ್ತು. ಹಾಗಾಗಿ ಮಹಾನಗರ ರಾಜಧಾನಿ ವಿಜಯಗರದ ರಕ್ಷಣೆ ಗಮನ ಸೆಳೆಯುತ್ತದೆ. ಕುದುರೆ ಕಲ್ಲುಗಳ ಬಳಕೆಯನ್ನು ಅಬ್ದುಲ್ ರಜಾಕ್ ಮತ್ತು ಡೊಂಮಿಗೊ ಪ್ಯಾಸ್ ಉಲ್ಲೇಖಿಸಿದ್ದಾರೆ.

ಕೋಟೆಯ ಗೋಡೆಗಳು ನೇರವಾಗಿರದೆ ಚಕ್ರಾಕಾರವಾಗಿದ್ದವೆಂದು ಅಬ್ದುಲ್ ರಜಾಕ್ ಬರೆಯುತ್ತಾನೆ. ಬಹುವಿಸ್ತಾರವಾದ ಪ್ರದೇಶವನ್ನು ಸುತ್ತುವರಿಯುವ ಕೋಟೆ ಗಳು ನೇರವಾಗಿರದೆ ಅಂಕುಡೊಂಕಾದ ಆಕಾರದಲ್ಲಿ ಇದ್ದುದನ್ನು ವಿದೇಶೀಯ ಬರಹಗಳು ಹಾಗೂ ಇಂದಿನ ವಸ್ತುಸ್ಥಿತಿ ಖಚಿತಪಡಿಸುತ್ತದೆ. ಭಾರತದಲ್ಲಿ ಫಿರಂಗಿ ಪಡೆಯ ಬಳಕೆ ಇನ್ನೂ ಶೈಶವಾವಸ್ಥೆಯಲ್ಲಿದ್ದುದರಿಂದ, ಕೋಟೆಗಳಲ್ಲಿ ಮತ್ತು ಯುದ್ಧಭೂಮಿಯಲ್ಲಿ ಹೆಚ್ಚಾಗಿ ಫಿರಂಗಿ ಬಳಕೆಯಾಗಲಾರಂಭಿಸಿದುದು ಹದಿನೈದನೆಯ ಶತಮಾನದ ಅನಂತರ ವೆಂದೇ ಹೇಳಬೇಕು. ಭಾರತದಲ್ಲಿ ಸಿಡಿಮದ್ದಿನ ಬಳಕೆಯ ಬಗೆಗೆ ಮತ್ತು ಪ್ರಾಚೀನತೆಯ ಬಗೆಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಕೆಲವರು, ಸಿಡಿಮದ್ದು ಭಾರತೀಯರ ಸಂಶೋಧನೆಯೆಂದರೆ, ಇತರರು ಇಲ್ಲವೆಂದಿದ್ದಾರೆ. ಭಾರತದಲ್ಲಿ ಸಿಡಿಮದ್ದಿನ ಬಳಕೆ ಮುಸಲ್ಮಾನರ ದಾಳಿಯಿಂದ ಪ್ರಾರಂಭವಾಯಿತೆನ್ನಲಾಗಿದೆ. ಡಾ.ಟಿ.ವಿ. ಮಹಾಲಿಂಗಂ ರವರ ಪ್ರಕಾರ ದಕ್ಷಿಣ ಭಾರತದಲ್ಲಿ ಮಹಮ್ಮದೀಯ ಧಾಳಿಯ ಬಳಿಕ ಸು. 1368ರ ಹೊತ್ತಿಗೆ ಸಿಡಿಮದ್ದು ಬಳಕೆಗೆ ಬಂದಿತೆನ್ನುತ್ತಾರೆ. ಫಿರಂಗಿ ಪಡೆಯ ಬಳಕೆ ಪ್ರಚಾರಕ್ಕೆ 13-14ನೆಯ ಶತಮಾನದಲ್ಲಿ ಬಂದಿತ್ತಾದರೂ ಅದು ಹೆಚ್ಚು ಜನಪ್ರಿಯವಾದದ್ದು ಪೋರ್ಚುಗೀಸರ ಆಗಮನದ ನಂತರವೆಂದರೆ ತಪ್ಪಾಗಲಾರದು. ಹೀಗಾಗಿ, ಮಹಾನಗರ ರಾಜಧಾನಿ ವಿಜಯನಗರದ ಕೋಟೆಗೋಡೆಗಳ ಬಹುಪಾಲು ಆಕಾಲಕ್ಕಾಗಲೆ ನಿರ್ಮಿತ ವಾಗಿದ್ದರಿಂದ ಪರಂಪರಾನುಗತ ಶೈಲಿಯ ರಕ್ಷಣಾ ಗೋಡೆಯ ನಿರ್ಮಾಣ ಮುಂದು

ವರಿಯಿತು. ಆದರೆ ಕೋಟೆಯನ್ನು ಹಾಳುಮಾಡುವ ಭಾರೀ ಯಂತ್ರಗಳೂ ಮತ್ತು ಪ್ರಾಣಿಗಳು ಕೋಟೆಯ ಸಮೀಪ ಬಾರದಂತೆ, ಸಾಮಾನ್ಯ ತಂತ್ರ ಬಳಸಿ ಮಹತ್ತರ ಸಾಧನೆ ಮೆರೆದುದು ವಿಜಯನಗರದ ಸಾಧನೆ.

ಕೋಟೆ ಗೋಡೆಗಳ ರಚನಾ ಶೈಲಿ

ಮಹಾನಗರ ರಾಜಧಾನಿ ವಿಜಯನಗರದ ರಕ್ಷಣಾ ಗೋಡೆಗಳನ್ನು ಒಂದು ವ್ಯೂಹದ ಮಾದರಿಯಲ್ಲಿ ನಿರ್ಮಿಸಲಾಗಿದೆ. ಪ್ರವೇಶ ದ್ವಾರಗಳು ಬಲು ಎಚ್ಚರಿಕೆಯಿಂದ ಕಾಯುವ ಕಾವಲುಗಾರರಿಂದ ಸುತ್ತುವರಿಯಲ್ಪಟ್ಟುದ್ದುದು ಸಹ ವಿದೇಶೀಯರಿಂದ ತಿಳಿದು ಬರುತ್ತದೆ. ಕಾವಲು ಗೋಪುರಗಳನ್ನು, ದ್ವಾರಗಳನ್ನು ಕಲ್ಲು, ಗಾರೆ ಇಟ್ಟಿಗೆಯನ್ನು ಬಳಸಿ ಅಗತ್ಯವೆನಿಸುವಷ್ಟು ಭದ್ರವಾಗಿ ನಿರ್ಮಿಸಿದ್ದರೆಂದು ಸಹ ಪ್ರವಾಸಿಕಥಾನಕಗಳು ತಿಳಿಸುತ್ತವೆ. ಒಂದು ಆವರಣದಿಂದ ಇನ್ನೊಂದು ಆವರಣವನ್ನು ಪ್ರವೇಶಿಸುವ ದ್ವಾರಗಳನ್ನು ಕಂಡುಕೊಳ್ಳುವುದು ಕಷ್ಟಕರವಾಗಿತ್ತು. ದೂರದಿಂದ ನೋಡಿದಾಗ ಹೆಬ್ಬಾಗಿಲುಗಳು ಅಥವಾ ದ್ವಾರಗಳು ಕಾಣಿಸುವಂತಿರಲಿಲ್ಲ. ಪ್ರವೇಶ್ವದಾರದ ಎರಡೂ ಬದಿಗಳಲ್ಲಿ ಬಲಿಷ್ಠವಾದ ಎತ್ತರವಾದ ಗೋಡೆಗಳಿವೆ. ದ್ವಾರವನ್ನು ಮರೆಮಾಚುವಂತೆ ದ್ವಾರದ ಮುಂದೆ ತೆರೆಗೋಡೆ ಅಥವಾ ಸುಳ್ಳುಗೋಡೆ ಸಹ ನಿರ್ಮಿತವಾಗಿರುತ್ತಿತ್ತು. ಅಲ್ಲದೆ ಒಳಬರುವ ದಾರಿ ಅಂಕುಡೊಂಕಾಗಿರುತ್ತಿತ್ತು. ಹಾಗಾಗಿ ಎರಡು ಆವರಣ ಗೋಡೆಗಳ ನಡುವೆ ಧಾಳಿಕಾರರು ಸಿಕ್ಕಿಹಾಕಿಕೊಂಡರೆ ಅವರನ್ನು ರಕ್ಷಿಸುವುದು ಪರಶಿವನಿಗೂ ಸಾಧ್ಯವಿರಲಿಲ್ಲ. ಗೋಡೆಯನ್ನು ನಿರ್ಮಿಸಲು ಸ್ಥಳೀಯವಾಗಿ ದೊರೆಯುವ ಕಣಶಿಲೆಯನ್ನು ಬಳಸಿದ್ದಾರೆ. (ಗ್ರಾನೈಟ್) ಸಾಮಾನ್ಯವಾಗಿ ಎಲ್ಲ ಗೋಡೆಗಳು ಕೆಳಭಾಗ ದಲ್ಲಿ ಅಗಲವಾಗಿದ್ದು ಮೇಲೇರಿದಂತೆ ಕಂಡೂ ಕಾಣದಂತೆ ಕಿರಿದಾಗುತ್ತವೆ. ಕೆಲವೆಡೆಗಳಲ್ಲಿ ಕಿರಿದಾಗುವಿಕೆಯ ಪ್ರಮಾಣ ಎಷ್ಟಿದೆಯೆಂದರೆ ಸಾಮಾನ್ಯವಾಗಿ ಆ ಎತ್ತರದಲ್ಲಿ ಗುರುತಿಸಲಾಗುವುದಿಲ್ಲ. ಮಹಾದ್ವಾರಗಳ ಪಾರ್ಶ್ವದ ಗೋಡೆಗಳು ಮಟ್ಟಸವಾದ ಹೊರಮೈ ಹೊಂದಿವೆ. ಪ್ರಸ್ತುತ ಹಂಪೆಯ ಪರಿಸರದಲ್ಲಿ ಮೂರು ಬಗೆಯ ಕೋಟೆಗೋಡೆಗಳು ಕಂಡು ಬರುತ್ತವೆ. ಇದನ್ನು ಎಸ್. ಕೆ. ಜೋಷಿ ಸಹ ಉಲ್ಲೇಖಿಸಿ ದ್ದಾರೆ [43]. ಮಹಾನಗರ ರಾಜಧಾನಿ ವಿಜಯನಗರದ ಕೇಂದ್ರ ಭಾಗದಲ್ಲಿ ಕಂಡು ಬರುವ ಗೋಡೆಗಳು ಇತರ ಗೋಡೆಗಳಿಗಿಂತ ಭಿನ್ನವಾಗಿವೆ.

ಪ್ರಭೇದ 1

ಒಂದನೆಯ ಪ್ರಭೇದದ ಗೋಡೆಗಳನ್ನು ಆವರಣ ಗೋಡೆಯೆಂದು ಕರೆಯ ಬಹುದು. ಈ ಬಗೆಯ ಗೋಡೆಗಳು ಇಂದಿಗೂ ಕಮಲಮಹಲ್ ಆವರಣವನ್ನು

ಬಳಸಿರುವುದನ್ನು ಕಾಣಬಹುದಾಗಿದೆ. ಈ ಬಗೆಯ ಗೋಡೆಗಳು ಕೆಳಭಾಗದಲ್ಲಿ ಅಗಲವಾಗಿದ್ದು, ಅನಂತರ ಮೇಲೇರಿದಂತೆ ತೂಕ, ಗೋಡೆಯ ಕೇಂದ್ರದಲ್ಲಿರುವಂತೆ, ಗೋಡೆ ಎರಡೂ ಪಾರ್ಶ್ವಗಳಲ್ಲಿ ಕಿರಿದಾಗುತ್ತಾ ಸಾಗುತ್ತದೆ. ಮೇಲೆ ಗಾರೆ ಮತ್ತು ಇಟ್ಟಿಗೆಗಳಿಂದ ಗೋಡೆಯನ್ನು ನಿರ್ಮಿಸಿದ್ದು ಅದು ಗೋಡೆಯ ಮೇಲ್ಭಾಗವನ್ನು ನಯಗೊಳಿಸುವಂತೆ ನಿರ್ಮಿಸಲಾಗಿದೆ. ಇದು ಸುಮಾರು 0.60 ಮೀಟರ್ ದಪ್ಪವಾಗಿದ್ದು ಕೈಪಿಡಿಗೋಡೆ ಮಾದರಿಯಲ್ಲಿ ನಿರ್ಮಿಸಿದ್ದಾರೆ. ಈ ಬಗೆಯ ಗೋಡೆಗಳು ಕೆಳಭಾಗದಲ್ಲಿ 2ಮೀಟರ್ ದಪ್ಪವಾಗಿದ್ದು 10 ಮೀಟರ್ ಎತ್ತರವಾಗಿದೆ, ಮೇಲುಭಾಗದಲ್ಲಿ 0.60 ಮೀಟರ್ ದಪ್ಪನಾಗಿದೆ. ಈ ಬಗೆಯ ಗೋಡೆಯನ್ನು ಎರಡೂ ಕಡೆಗಳಲ್ಲಿ ಬೇಕಾದ ಆಕಾರಕ್ಕೆ ಕತ್ತರಿಸಿದ ದಪ್ಪಕಲ್ಲುಗಳಿಂದ ನಿರ್ಮಿಸಲಾಗಿದೆ. ಗೋಡೆಯ ಎತ್ತರ ಬೆಳೆದಂತೆ ಕಲ್ಲಿನ ಆಕಾರ ಹಾಗೂ ಗಾತ್ರ ಸಹ ಕಿರಿದಾಗುತ್ತದೆ. ಅವರು ಗೊಡೆಯ ನಿರ್ಮಾಣದಲ್ಲಿ ಹೊಂದಿದ್ದ ಪ್ರತಿಭೆ ಹಾಗ ಗುರುತ್ವಾಕರ್ಷಣ ಶಕ್ತಿಯ ಬಳಕೆಗೆ ಈ ಗೋಡೆ ನಿದರ್ಶನವಾಗಿದೆ. ಇದರ ಬಾಗಿಲುಗಳು ಆಯತಾಕಾರದಲ್ಲಿದ್ದು ಸಾಕಷ್ಟು ತಗ್ಗಾಗಿದೆ. ಅಂದರೆ ದಿಡ್ಡಿಯ ಬಾಗಿಲುಗಳನ್ನು ಹೋಲುತ್ತವೆ. ಇವು ಸೈನ್ಯವನ್ನು ಅಥವಾ ಹೊರಿಗನ ಧಾಳಿಯನ್ನು ತಡೆಯಲು ನಿರ್ಮಾಣ ಮಾಡಿದ ಗೋಡೆಗಳಂತೆ ಕಂಡುಬರುವುದಿಲ್ಲ. ಬದಲಾಗಿ ಅಂತರಿಕ ರಕ್ಷಣೆ ಮತ್ತು ಗೌಪ್ಯತೆಯನ್ನು ಕಾಪಾಡುವ ಸಲುವಾಗಿ, ನಾವು ಇಂದು ನಿರ್ಮಿಸುವ ಆವರಣ ಗೊಡೆಯ ರೂಪದಲ್ಲಿ ಅವುಗಳನ್ನು ನಿರ್ಮಿಸಿದ್ದಾರೆ. ಇದು ಈ ಪ್ರದೇಶದ ಪ್ರಾಮುಖ್ಯವನ್ನು, ಕಟ್ಟಡಗಳ ಮಹತ್ವವನ್ನು ಮತ್ತು ಅಲ್ಲಿ ವಾಸಿಸುತ್ತಿದ್ದ ವ್ಯಕ್ತಿಗಳ ಸಾಮಾಜಿಕ ಮತ್ತು ರಾಜಕೀಯ ಸ್ಥಿತಿಗತಿಗಳನ್ನು ಪರೋಕ್ಷವಾಗಿ ನಿರ್ಧರಿಸುತ್ತವೆ.

ಪ್ರಕಾರ 2

ಮಹಾನಗರ ರಾಜಧಾನಿಯ ಕೇಂದ್ರದಿಂದ ಹೊರ ಬಂದಂತೆ ಕೋಟೆಗೋಡೆಯ ರಚನೆಯಲ್ಲಿ ವ್ಯತ್ಯಾಸವನ್ನು ಕಾಣುತ್ತೇವೆ. ಅತ್ಯಂತ ಒಳಗೋಡೆ, ಅತ್ಯಂತ ಹೊರ ಗೋಡೆಯ ರಚನಾ ಶೈಲಿಗೆ ಭಿನ್ನವಾಗಿ ಒಳಭಾಗದ ಗೋಡೆಗಳು ರಚಿತವಾಗಿವೆ. ಈ ಗೋಡೆಗಳು ಹೊರಭಾಗದಲ್ಲಿ ಆಕಾರಕ್ಕೆ ಕತ್ತರಿಸಿದ ಬೃಹದಾದ ಕಲ್ಲುಗಳಿಂದ ನಿರ್ಮಿತವಾದದ್ದಾಗಿದೆ. ಒಳಭಾಗವು ಸಣ್ಣಕಲ್ಲುಗಳು, ಒಡೆದ ಕಲ್ಲುಗಳು ಹಾಗೂ ಮಣ್ಣನ್ನು ಪದರ ಪದರವಾಗಿ ಹಾಕಿ, ನಿರ್ಮಿಸಿದ ಇಳಿಜಾರಾದ ಮಣ್ಣಿನ ಏರಿಯನ್ನು ಹೋಲುವಂತೆ ನಿರ್ಮಿಸಲಾಗಿದೆ. ಈ ಗೋಡೆಯ ಹೊರ ಆವರಣದಲ್ಲಿ ಕಂದಕಗಳಿದ್ದು ಅವುಗಳು ನೀರಿನಿಂದ ಆವೃತವಾಗಿರುತ್ತಿದ್ದವು. ಇದೂ ವಿಜಯನಗರದ ಪ್ರವಾಸಿಗರ ಪ್ರವಾಸಿ ಕಥನಕದಲ್ಲಿ ಉಲ್ಲೇಖಿಸಲ್ಪಟ್ಟಿದೆ.

ನೂನಿಜ್ ರಾಯಚೂರಿನ ಕಾಳಗವನ್ನು ವಿವರಿಸುತ್ತಾ ಹೀಗೆ ಬರೆಯುತ್ತಾನೆ : "ನಗರದ ಫಿರಂಗಿಗಳು ಎಷ್ಟು ಎತ್ತರದಲ್ಲಿದ್ದವೆಂದರೆ ಅವು ಗೋಡೆಯಡಿ ಇರುವ ಜನರಿಗೆ ಯಾವ ಹಾನಿಯನ್ನೂ ಉಂಟು ಮಾಡಲು ಶಕ್ಯವಿರಲಿಲ್ಲ. ಗೋಡೆ ಕೂಡ ಒಳಗೆ ಮಣ್ಣಿನಿಂದ ತುಂಬಲ್ಪಟ್ಟಿತ್ತು ಮತ್ತು ಬಿರುಕುಗಳಲ್ಲಿ ಫಿರಂಗಿಗಳಿರಲಿಲ್ಲ. ಅಲ್ಲಿಯವರೆಗೆ ಅವರು ಕೆಲ ನಗರವಾಸಿಗಳನ್ನು ಕೊಂದಿದ್ದರು".

ಇಂದಿಗೂ ಉಳಿದುಕೊಂಡು ಬಂದಿರುವ ಈ ಬಗೆಯ ಗೋಡೆಗಳು ಏಳು ಮೀಟರ್‌ಗೂ ಹೆಚ್ಚು ಎತ್ತರವಾಗಿವೆ. ಪ್ರಾಯಶಃ ಅಂದಿನ ಕಾಲದಲ್ಲಿ ಇನ್ನೂ ಹೆಚ್ಚಿನ ಎತ್ತರವನ್ನು ಹೊಂದಿದ್ದರಬೇಕು. ಕಾರಣ ಕೋಟೆಯ ಮೇಲಿನ ಭಾಗ ಎಲ್ಲೂ ಸಂಪೂರ್ಣವಾಗಿ ದೊರೆತಿಲ್ಲ. ಭೂಮಟ್ಟದಲ್ಲಿ ಈ ಬಗೆಯ ಗೋಡೆಗಳು 6.80 ಮೀಟರ್ ಅಗಲವಾಗಿದ್ದು ಮೇಲೇರಿದಂತೆ ಕಿರಿದಾಗುತ್ತವೆ. ಒಳಭಾಗದಲ್ಲಿ ಇಳಿಜಾರಾಗಿದ್ದು ಹೊರಭಾಗದಲ್ಲಿ ಸ್ವಲ್ಪಮಟ್ಟಿಗೆ ಒಳಸರಿದಂತೆ ನಿರ್ಮಿಸಲಾಗಿದೆಯಾದರೂ ಎದುರು ನಿಂತು ನೋಡಿದರೆ ಮಟ್ಟವಾಗಿರುವಂತೆ ಭಾಸವಾಗುತ್ತದೆ. ಹಾಗಾಗಿ ಇಂದಿನವರೆಗೂ ಉಳಿದುಕೊಂಡು ಬಂದಿವೆ. ಕಾರಣ ಅವುಗಳ 'ಜಿ' ಪೂರ್ಯ ಗೋಡೆಯ ಕೇಂದ್ರದಲ್ಲಿ ಭೂ ಕೇಂದ್ರಕ್ಕೆ ಸೇರುವಂತೆ ಅಡಕವಾಗಿರುತ್ತದೆ.

ಪ್ರಕಾರ 3

ಮಹಾನಗರ ರಾಜಧಾನಿ ವಿಜಯನಗರದಿಂದ ಹೊರಭಾಗಕ್ಕೆ ಬಂದಂತೆಲ್ಲ ಕಂಡು ಬರುವ ಗೋಡೆಯೇ ಮೂರನೆಯ ಪ್ರಕಾರದ ಗೋಡೆ. ಆವರಣ ಗೋಡೆ ಅಥವಾ ಕೇಂದ್ರದ ರಾಜಪರಿವಾರ ಪ್ರದೇಶವನ್ನು ಸುತ್ತುವರಿದಿರುವ ಗೋಡೆಯಲ್ಲಿ ಬಳಸಿರುವಂತೆ ಗೋಡೆಯ ಒಳ ಮತ್ತು ಹೊರ ಪಾರ್ಶ್ವಗಳಲ್ಲಿ ಆಕಾರಕ್ಕೆ ತಕ್ಕಂತೆ ಕತ್ತರಿಸಿದ ಬೃಹದಾದ ಕಲ್ಲುಗಳಿಂದ ನಿರ್ಮಿಸಲ್ಪಟ್ಟಿದೆ. ಮೇಲೇರಿದಂತೆ ಕಂಡೂ ಕಾಣದಂತೆ ಕಿರಿದಾಗುತ್ತದೆ. ಈ ಬಗೆಯ ಗೋಡೆಗಳು ಭೂಮಟ್ಟದಲ್ಲಿ 6.60 ಮೀಟರ್ ಅಗಲವಾಗಿದ್ದು, 7 ಮೀಟರ್‌ಗೂ ಅಧಿಕವಾದ ಎತ್ತರವನ್ನು ಹೊಂದಿವೆ. ಎರಡೂ ಬದಿಯ ಕಲ್ಲು ಕಟ್ಟಡದ ಮಧ್ಯಭಾಗವನ್ನು ಸಣ್ಣ ಕಲ್ಲುಗಳು, ಕಲ್ಲು ಒಡೆಯುವಾಗ ಬಂದಂತಹ ಚಕ್ಕೆ ಕಲ್ಲುಗಳು ಮತ್ತು ಮಣ್ಣಿನಿಂದ ಭರ್ತಿ ಮಾಡಲಾಗಿದೆ. ಕೋಟೆಯ ಹೊರಭಾಗದ ಸಾಲನ್ನು ಒಳಭಾಗದ ಸಾಲಿಗಿಂತ ಮೇಲೇರಿದಂತೆ ರಚಿಸಿದ್ದಾರೆ. ಇದು ಕೈಪಿಡಿ ಗೋಡೆಯಂತೆ ಕಾರ್ಯನಿರ್ವಹಿಸಿದರೆ, ಒಳಭಾಗದ ಗೋಡೆಯ ಪ್ರಕಾರ ಕಾವಲುಗಾರರು ಗೋಡೆಯ ಮೇಲೆ ಗಸ್ತು ತಿರುಗಲು ಅಥವಾ ಧಾಳಿಯ ಕಾಲದಲ್ಲಿ ಮರೆ ಮಾಚಿಕೊಳ್ಳಲು ಬಳಸಬಹುದಾದ ರೀತಿಯಲ್ಲಿ ಸುಣ್ಣಗಾರೆಯಿಂದ ಸಮಗೊಳಿಸಲಾಗಿದೆ. ಆದರೆ ರಕ್ಷಣಾ ವ್ಯೂಹದಲ್ಲಿ ಕಂಡು ಬರುವ ಅಂಬುಗಿಂಡಿ, ತೆನೆ, ಅಥವಾ ಫಿರಂಗಿ ಕೂಡಿಸುವ ಸ್ಥಳಗಳು ಕಂಡು

ಬರುವುದಿಲ್ಲ. ಎಸ್.ಕೆ. ಜೋಷಿಯವರು ಈ ಗೋಡೆಗಳು ಸಹ ವೈರಿಯನ್ನು ಎದುರಿಸುವುದಕ್ಕೆ ಬದಲಾಗಿ ಆವರಣ ಗೋಡೆಯ ಮಾದರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಿರಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.[44]

ವಸುಂಧರ[45] ರವರ ಪ್ರಕಾರ ರಾಜಪ್ರಾಂಗಣವನ್ನು ಸುತ್ತುವರಿದಿರುವ ಬೃಹದಾದ ಕೋಟೆ ಗೋಡೆಯ ಮೂರನೆಯ ಹೊಯ್ಸಳ ಬಲ್ಲಾಳನಿಂದ ನಿರ್ಮಿತವಾಗಿರಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದರೆ ನರಸಿಂಹಯ್ಯ[46] ರವರು ಹೊಯ್ಸಳರು ನಿರ್ಮಿಸಿದ ಕೋಟೆಗೋಡೆಗಳು ಹಾಗೂ ವಿಜಯನಗರದ ಅರಸರು ನಿರ್ಮಿಸಿದ ಗೋಡೆಗಳ ರಚನಾ ಶೈಲಿಯನ್ನು ಹೀಗೆ ಅವಲೋಕಿಸಿದ್ದಾರೆ. “ವಿಜಯನಗರದ ಕೋಟೆಯ ಗೋಡೆಯ ಕಲ್ಲುಗಳನ್ನು ತುಂಬಾ ನಯವಾಗಿಸಿ ಒಂದರ ಪಕ್ಕದಲ್ಲಿ ಒಂದು ಬರುವಂತೆ ಸೇರಿಸಿದ್ದಾರೆ. ಎರಡು ಕಲ್ಲುಗಳ ನಡುವೆ, ಒಂದು ತೆಳುವಾದ ಚಾಕುವನ್ನು ಸಹ ಸೇರಿಸಲಾಗದಷ್ಟು ಒತ್ತೊತ್ತಾಗಿ ಕಲ್ಲುಗಲನ್ನಿರಿಸಿದ್ದಾರೆ. (juxtaposed ಜಕ್ಸ್ಟಪೋಸ್ಡ್ ವಸ್ತುಗಳನ್ನು ಪಕ್ಕದಲ್ಲೊಂದಿರುವಂತೆ ಇಡು ಪಕ್ಕ ಪಕ್ಕದಲ್ಲಿಡು ಎಂಬ ಅರ್ಥ ಕೊಡುತ್ತದೆ. (The Mysore university English - Kannada Dictionary - 1985 ಪುಟ 495)

ಗೋಡೆ ಅತಿ ಶಕ್ತಿಯುತವಾಗಿರಬೇಕೆನ್ನುವೆಡೆಯಲ್ಲಿ ಎರಡು ಕಲ್ಲುಗಳ ನಡುವೆ ಎರಡು ಕಡೆ ಅಗಲವಾಗಿದ್ದು ಮಧ್ಯೆ ಕಿರಿದಾಗಿರುವ ಬೆಣೆಯಾಕಾರದ ಕಲ್ಲುಗಳನ್ನು ಬಳಸಿದ್ದಾರೆಂದು ತಿಳಿಸುತ್ತಾರೆ. ಅಲ್ಲದೆ ಹೊಯ್ಸಳರ ಕೋಟೆಯಾದ ದೋರ ಸಮುದ್ರ ಅಥವಾ ಹಳೇಬೀಡಿನ ಕೋಟೆಯ ರಚನೆಯಲ್ಲಿ ಒಂದರ ಪಕ್ಕ ಒಂದು ಕಲ್ಲು ಬರುವಂತೆ ನಿರ್ಮಿಸುವ ಕಲಾಗಾರಿಕೆ ಹೊಯ್ಸಳರಿಗೆ ತಿಳಿದಿರಲಿಲ್ಲವೆಂದು ತಿಳಿಸಿ, ಕೋಟೆ ಹೊಯ್ಸಳ ಕಾಲದ್ದಲ್ಲವೆಂದಿದ್ದಾರೆ. ಆದರೆ ನರಸಿಂಹಯ್ಯನವರು ದೋರಸಮುದ್ರ ನಿರ್ಮಾಣವಾದ ಕಾಲ ಮತ್ತು ವಿರೂಪಾಕ್ಷಪುರ ಹೊಸದುರ್ಗ ನಿರ್ಮಾಣವಾದ ಕಾಲವನ್ನು ಮರೆತಿದ್ದಾರೆ. ಎರಡರ ನಡುವೆ ಮೂರು ಶತಮಾನಗಳ ಅಂತರವಿದೆ. ಅಲ್ಲದೆ ನರಸಿಂಹಯ್ಯನವರು ಹೇಳುವ ಬಗೆಯ ಜಕ್ಸಟಪೋಸ್ಡ್ ಮಾದರಿಯ ನಿರ್ಮಾಣ ಶೈಲಿಯನ್ನು ದೇವಾಲಯಗಳ ರಚನೆಯಲ್ಲಿ ಹೊಯ್ಸಳ ಶಿಲ್ಪಿಗಳು ಬಳಸಿರುವುದು ಎಲ್ಲ ದೇವಾಲಯದ ಅಧಿಷ್ಠಾನದಲ್ಲಿ ಮತ್ತು ಗೋಡೆಗಳಲ್ಲಿ ಕಂಡು ಬರುತ್ತದೆ. ಹಂಪೆಯಲ್ಲಿ ಬೇರೆ ಬೇರೆ ಕಲ್ಲುಗಳೆಂದು ಗುರುತಿಸುವಷ್ಟು ಮಟ್ಟಿಗೆ ಈ ಬಗೆಯ ಕುಶಲತೆ ಕಂಡರೆ ಹೊಯ್ಸಳ ದೇವಾಲಯಗಳಲ್ಲಿ ಕಲ್ಲು ಒಂದೇ ಎಂಬಂತೆ ಕೌಶಲ ಮೆರೆದಿರುವುದನ್ನು ಸಹ ಇಲ್ಲಿ ಗಮನಿಸಬೇಕು. ಪ್ರಾಯಶಃ ಈ ತಂತ್ರಜ್ಞಾನ ಹೊಯ್ಸಳರು ವಿಜಯನಗರಕ್ಕಿತ್ತ ವರದಾನ.

ಮಹಾನಗರ ರಾಜಧಾನಿ ವಿಜಯನಗರ ರಕ್ಷಣಾ ವ್ಯವಸ್ಥೆಯ ನೀಲನಕ್ಷೆಯನ್ನು ತಯಾರಿಸಿದ ಮತ್ತು ಅದನ್ನು ಯಥಾವತ್ತಾಗಿ ನಿರ್ಮಿಸಿದ ತಂತ್ರಜ್ಞರನ್ನು ಅಭಿನಂದಿಸದಿದ್ದರೆ, ಅದು ಅವರು ಪಡೆದ ಕೌಶಲಕ್ಕೆ ಮಾಡಿದ ಅಪಚಾರವಾಗುತ್ತದೆ. ಯುದ್ಧ

ತಂತ್ರದ ದೃಷ್ಟಿಯಿಂದ ಅತ್ಯಂತ ಎಚ್ಚರಿಕೆಯಾಗಿ ಯೋಜಿಸಲಾಗಿದೆ. ಅಷ್ಟೇ ಎಚ್ಚರಿಕೆಯಿಂದ ನಿರ್ಮಿಸಲಾಗಿದೆ. ಕೋಟೆಯನ್ನು ಪ್ರವೇಶಿಸುವ ಯಾವ ದ್ವಾರವೂ ಸ್ವಲ್ಪ ದೂರದಿಂದ ದ್ವಾರ ಮಾದರಿಯಲ್ಲಿ ತೋರುವುದಿಲ್ಲ. ಕೋಟೆಗೆ ಯಾವ ಪ್ರವೇಶವೂ ನೇರ ಪ್ರವೇಶವಾಗಿಲ್ಲ. ಅಂಕುಡೊಂಕಿನ ಪ್ರವೇಶವಾಗಿದೆ. ದ್ವಾರಗಳ ಮುಂದೆ ಮತ್ತು ಎರಡು ಪಕ್ಕಗಳಲ್ಲಿ ತಡೆಗೋಡೆಗಳನ್ನು ನಿರ್ಮಾಣ ಮಾಡಿ, ಅದು ಕೋಟೆಯ ಒಂದು ಅಂಗವಾಗಿ ಕಂಡು ಬರುತ್ತದೆ. ಅದರಲ್ಲಿನ ಕಾಣದ ಒಂದು ಭಾಗದಿಂದ ಪ್ರವೇಶ ದ್ವಾರವನ್ನು ನೀಡಿರುವುದು ಕಂಡು ಬರುತ್ತದೆ. ಹೀಗಾಗಿ ಕೋಟೆಯ ಪ್ರವೇಶ ಯಾವುದೆಂದು ತಕ್ಷಣವೆ ತಿಳಿಯುವುದಿಲ್ಲ. ಒಳನುಸುಳಿದ ವೈರಿ ಪಡೆ ದ್ವಾರವನ್ನು ಹುಡುಕುವುದರೊಳಗಾಗಿ, ಕೋಟೆಯ ಮೇಲಿನ ಮತ್ತು ಒಳಗಿನ ಸೈನಿಕರು ಅವರ ಮೇಲೆ ಮಾಡುವ ಪ್ರಹಾರದಿಂದ ಅವರು ಸಾವನ್ನಪ್ಪುತ್ತಾರೆ. ದ್ವಾರಗಳನ್ನು ಹಿಂದೂ ಶೈಲಿಯಲ್ಲಿ ಕೇವಲ ಕಲ್ಲುಗಳನ್ನು ಬಳಸಿ ನಿರ್ಮಿಸಿರುವುದು ಕಂಡು ಬರುತ್ತದೆ. ಆದರೆ ಗುಮ್ಮಟದ, ಗೋಪುರ ಮಾತ್ರ ಮುಸ್ಲಿಂ ಶೈಲಿಯಲ್ಲಿ ನಿರ್ಮಿತವಾಗಿದೆ. ದ್ವಾರದ ಮೇಲಿನ ಭಾಗವನ್ನು ಕಲ್ಲು ಮತ್ತು ಗಾರೆಯನ್ನು ಬಳಸಿ ಕಟ್ಟಿದ್ದಾರೆಂದು ಪ್ರವಾಸಿಗರು ಸಹ ಉಲ್ಲೇಖಿಸಿದ್ದಾರೆ. ಅದರ ಕುರುಹುಗಳು ಹರೇಶಂಕರ ಹೆಬ್ಬಾಗಿಲಿನಲ್ಲಿ ಕಂಡು ಬರುತ್ತದೆ.

ವಿಶಾಲವಾದ ಈ ಕೋಟೆಯ ಪ್ರವೇಶ ದ್ವಾರಗಳನ್ನು ಹೆಬ್ಬಾಗಿಲುಗಳು, ದ್ವಾರಗಳು ಮತ್ತು ದಿಡ್ಡಿಗಳೆಂದು ಮೂರು ವಿಭಾಗವಾಗಿ ವರ್ಗೀಕರಿಸಬಹುದು. ಹೆಬ್ಬಾಗಿಲುಗಳು ದೊಡ್ಡವು ಮತ್ತು ಮುಖ್ಯವಾದವುಗಳಾಗಿದ್ದವು. ಇನ್ನು ದ್ವಾರಗಳು ಮಧ್ಯಮ ಗಾತ್ರದಾಗಿದ್ದು, ಸಾರ್ವಜನಿಕರ ದಿನನಿತ್ಯದ ಬಳಕೆಗೆ ಸೀಮಿತವಾಗಿದ್ದಿರಬಹುದು. ದಿಡ್ಡಿ ಅಥವಾ ಚಿಕ್ಕ ಬಾಗಿಲುಗಳು ಸಾಮಾನ್ಯರು ತಮ್ಮ ದಿನನಿತ್ಯದ ಕಾರ್ಯಗಳಿಗೆ ಬಳಸುವ ಮಾರ್ಗಗಳು. ರಕ್ಷಣಾ ದೃಷ್ಟಿಯಿಂದ ಹಾಗೂ ಬೃಹದಾದ ನಗರದ ಸುವ್ಯವಸ್ಥೆಯನ್ನು ಕಾಪಾಡುವ ಸಲುವಾಗಿ, ಅವಶ್ಯಕವೆನಿಸಿದಾಗ ಸೈನ್ಯ ಮತ್ತು ಇತರ ಕಾರ್ಯಾಚರಣೆಗಾಗಿ ಪ್ರದೇಶಗಳನ್ನು ಗುರುತಿಸಲು ಸಹಾಯವಾಗುವಂತೆ ಹಲವಾರು ಹೆಸರುಗಳನ್ನು ಪ್ರವೇಶ ದ್ವಾರಗಳಿಗೆ ನೀಡಿದ್ದಾರೆ. ಅವುಗಳೆಂದರೆ

ಹೆಬ್ಬಾಗಿಲು : ಸಿಂಘಾರದ ಹೆಬ್ಬಾಗಿಲು, ಬೇಟೆಗಾರರ ಹೆಬ್ಬಾಗಿಲು, ಭೀಮನ ಹೆಬ್ಬಾಗಿಲು

ಬಾಗಿಲು : ಗುಮ್ಮಟದ ಬಾಗಿಲು, ಸೋಮವಾರದ ಬಾಗಿಲು, ಉದಯಗಿರಿ ಬಾಗಿಲು, ಹರಶಂಕರ ಬಾಗಿಲು, ಒಂದನೆಯ ಪೆನಗೊಂಡ ಬಾಗಿಲು, ಎರಡನೆ ಪೆನುಗೊಂಡೆ ಬಾಗಿಲು, ಕೋಟೆ ಶಂಕರ ದೇವರ ಬಾಗಿಲು, ಹೊದೆಯ ಬಾಗಿಲು, ಹೂವಿನ ಬಾಗಿಲು, ಕೊತಾರದ ಬಾಗಿಲು, ಉಪ್ಪರಿಗೆ ಬಾಗಿಲು, ಸವಾಮಿ ದೇವರ ಬಾಗಿಲು, ಆಂಜನೇಯ ದೇವಾಲಯದ ಸಮೀಪದ ಬಾಗಿಲು.

ದಿಡ್ಡಿ : ಹಂಪಾದೇವಿಯ ದಿಡ್ಡಿ, ರೆಮ್ಮುದಿಡ್ಡಿ, ಜಯದೇಶಂಕರ ದೇವರ ದಿಡ್ಡಿ, ಮಾತಂಗೇಶ್ವರ ದೇವರ ದಿಡ್ಡಿ

ಹೆಬ್ಬಾಗಿಲು, ದ್ವಾರಗಳು ಮತ್ತು ದಿಡ್ಡಿಗಳ ಬಗೆಗೆ ಈಗಾಗಲೆ ವಿಜಯನಗರ ಪ್ರೋಗ್ರೆಸ್ ಆಫ್ ರೀಸರ್ಚ್ ಮತ್ತು ವಿಜಯನಗರ ಅಧ್ಯಯನ ಮಾಲಿಕೆಯಲ್ಲಿ ಸಾಕಷ್ಟು ವಿಚಾರಗಳು ಪ್ರಕಟವಾಗಿರುವುದರಿಂದ ಅವುಗಳ ವಿವರಣೆಯನ್ನು ಇಲ್ಲಿ ಕೈ ಬಿಡಲಾಗಿದೆ.[47]

ಮಹಾನಗರ ರಾಜಧಾನಿ ವಿಜಯನಗರದ ಕೋಟೆಗೋಡೆಗಳಲ್ಲಿ ನಿಜವಾಗಿಯೂ ಫಿರಂಗಿಗಳು ಬಳಕೆಯಾಗಿತ್ತೆ, ಕೋಟೆ ಫಿರಂಗಿ ಧಾಳಿಯನ್ನು ಎದುರಿಸಿ ನಿಲ್ಲಬಲ್ಲಷ್ಟು ಶಕ್ತವಾಗಿತ್ತೆ, ಹಾಗೂ ಫಿರಂಗಿಗಳ ಬಳಕೆಗೆ ಸರಿಯಾದ ರಕ್ಷಣಾ ಕಟ್ಟಡಗಳಿತ್ತೆ ಎಂಬುದು ನಿರ್ಧರಿಸಬೇಕಾದ ವಿಷಯವಾಗಿದೆ. ಮಹಾನಗರಿ ರಾಜಧಾನಿ ವಿಜಯನಗರದ ಕೋಟೆ ಕಾವಲು ಗೋಪುರಗಳು ಹಾಗೂ ಕೊತ್ತಳಗಳ ರಚನೆಯನ್ನು ಗಮನಿಸಿದಾಗ, ಈ ಮೇಲೆ ಎತ್ತಿದ ಎಲ್ಲ ಪ್ರಶ್ನೆಗಳಿಗೆ ದೊರೆಯುವುದು ನಕಾರಾತ್ಮಕ ಉತ್ತರ. ಕೇವಲ ಬೆರಳೆಣಿಕೆಯ ಸಂದರ್ಭದಲ್ಲಿ ಫಿರಂಗಿ ಪಡೆಯನ್ನು ಅಥವಾ ಫಿರಂಗಿಯ ಉಲ್ಲೇಖವನ್ನು ಕೆಲವು ಪ್ರವಾಸಿ ಕಥನಗಳಲ್ಲಿ ಕಾಣುತ್ತೇವೆ ನಿಕಟಿನ್, ಡೊಮಿಂಗೋ ಪ್ಯಾಸ್, ನೂನಿಚ್‌ರ ಬರವಣಿಗೆಯಲ್ಲಿ ಮಾತ್ರ ಫಿರಂಗಿಗಳ ಉಲ್ಲೇಖ ಕಂಡುಬರುತ್ತದೆ. ಆದರೂ, ಬಿಜಾಪುರದ ಸುಲ್ತಾನರು ವಿಜಯನಗರವನ್ನು ಮುತ್ತಿದ ಸಂದರ್ಭದಲ್ಲಿ ಅವರು ಫಿರಂಗಿ ತಂದದ್ದನ್ನು ಮಾತ್ರ ಉಲ್ಲೇಖಿಸಿದ್ದಾನೆ. ಡೊಮಿಂಗೋ ಪ್ಯಾಸ್ ಹೊಸಪೇಟೆಯ ಬಳಿ ಕಂಡುಬರುವ ಸರೋವರವನ್ನು ಉಲ್ಲೇಖಿಸುವಾಗ 'ಫ್ಯಾಲ್ಕಾನ್ ಗುಂಡು' ಹಾಕುವ ದೂರದಷ್ಟು ಅಗಲವಾಗಿದೆ ಎಂದು ವಿವರಿಸಿದ್ದಾನೆ. ಫ್ಯಾಲ್ಕಸ್ ಗುಂಡು ಪದವನ್ನು ಫ್ಯಾಲ್ಕನ್ ಎಂಬ ಫಿರಂಗಿಯೆಂದು ಸಂಪಾದಕರು ಅರ್ಥೈಸಿದ್ದಾರೆ. ನೂನಿಜ್ ತನ್ನ ಬರವಣಿಗೆಯಲ್ಲಿ ರಾಯಚೂರು ಕದನದಲ್ಲಿ ಎರಡೂ ದಳಗಳು ಫಿರಂಗಿಯನ್ನು ಹೊಂದಿದ್ದುದಾಗಿ ಉಲ್ಲೇಖಿಸುತ್ತಾನೆ. ಆದರೆ ಅದನ್ನು ಬಳಸುತ್ತಿದ್ದ ಬಗೆಗೆ ಸರಿಯಾದ ವಿವರಣೆಯಿಲ್ಲ. ಡೊಮಿಂಗೊ ಪ್ಯಾಸ್ ನವರಾತ್ರಿ ಹಬ್ಬದ ಕವಾಯಿತಿನಲ್ಲಿ ಕಂಡುಬರುವ ಸೈನಿಕರನ್ನು ಉಲ್ಲೇಖಿಸಿದಾಗ ಸಿಡಿಗುಂಡುಗಳನ್ನು, ತುಪಾಕಿ ಹಾಗೂ ದೊಡ್ಡ ಬಾಗಿಲು ಸಣ್ಣ ಬಂದೂಕುಗಳನ್ನು ಹೊಂದಿದ್ದವರನ್ನು ಉಲ್ಲೇಖಿಸುತ್ತಾನೆ. ಆದರೆ ಫಿರಂಗಿ ಪಡೆಯನ್ನು ಉಲ್ಲೇಖಿಸಿಲ್ಲ. ನ್ಯೂನಿಜ್‌ನ ಬರವಣಿಗೆಯಲ್ಲಿ ಮಾತ್ರ ಪ್ರಥಮ ಬಾರಿಗೆ ವಿಜಯನಗರ ಹೊಂದಿದ್ದ ಫಿರಂಗಿಯ ನಿಖರ ಉಲ್ಲೇಖ ದೊರಕುತ್ತದೆ. ಆದರೆ ಪೋರ್ಚುಗೀಸರು ಇನದ್ನು ಚಲಾಯಿಸುತ್ತಿದ್ದರೆಂಬ ಅನುಮಾನ ಆತನ ವಿವರಣೆಯಿಂದ ಉಂಟಾಗುತ್ತದೆ. ಹಾಗಾಗಿ ವಿಜಯನಗರ ಸಾಮ್ರಾಜ್ಯದಲ್ಲಿ ಫಿರಂಗಿ ಪಡೆ ಕಡಿಮೆ ಪ್ರಮಾಣದಲ್ಲಿ ಕೊನೆ ಕೊನೆಯ ದಿನಗಳಲ್ಲಿ ಬಳಕೆಯಾಯಿತೆಂದು ತಿಳಿಯಬಹುದು. ಚಿದಾನಂದ ಮೂರ್ತಿಯವರು ಗುರುತಿಸಿರುವಂತೆ ತುಪಾಕಿ, ಬಂದೂಕು ಹಾಗೂ

ಫಿರಂಗಿಗಳು ದಕ್ಷಿಣ ಭಾರತದಲ್ಲಿ ಹಾಗೂ ವಿಶೇಷವಾಗಿ ಕರ್ನಾಟಕದಲ್ಲಿ 15ನೆಯ ಶತಮಾನದಲ್ಲಿ ಬಳಕೆಗೆ ಬಂದಿತಾದರೂ, ಹದಿನಾರನೆಯ ಶತಮಾನದ ಅನಂತರವೇ ಅವುಗಳ ವಿವರಗಳು ಕನ್ನಡ ಸಾಹಿತ್ಯಾಧಾರಗಳಲ್ಲಿ ಕಂಡು ಬರಲಾರಂಭಿಸುತ್ತವೆ. ಅಂದರೆ ಐರೋಪ್ಯರ ಯುದ್ಧಕಲೆ ಭಾರತೀಯರಿಗೆ ಪರಿಚಯವಾದ ಅನಂತರವೇ ಈ ಪಡೆ ಯುದ್ಧಗಳಲ್ಲಿ ನಿರ್ಣಾಯಕ ಪಾತ್ರ ವಹಿಸಲಾರಂಭಿಸಿತ್ತು. ಅಲ್ಲಿಯವರೆಗೆ ಇವು ಶಕ್ತಿ ಪ್ರದರ್ಶನದ ಮತ್ತು ಧಾಳಿಯ ಒಂದು ಅಂಗವಾಗಿತ್ತೆನ್ನಬಹುದು. ಆದರೂ ವಿಜಯನಗರ ಸಮಕಾಲೀನ ಕೋಟೆಗಳಾದ ರಾಯಚೂರು, ಮುದ್ಗಲ್ ಮುಂತಾದ ಕಡೆ ಫಿರಂಗಿಗಳ ಬಳಕೆ ಇತ್ತಾದಾರೂ ಅವು ಯುದ್ಧ ತಂತ್ರಗಾರಿಕೆ ಯಲ್ಲಿ ನಿರ್ಣಾಯಕ ಪಾತ್ರ ವಹಿಸುವಲ್ಲಿ ವಿಫಲವಾದದ್ದನ್ನು ಸಹ ನೂನಿಜ್ ಹೇಳಿದ್ದಾನೆ.

"ನಗರದ ಫಿರಂಗಿಗಳು ಎಷ್ಟು ಎತ್ತರದಲ್ಲಿದ್ದವೆಂದರೆ ಅವು ಗೋಡೆಯಡಿ ಇರುವ ಜನರಿಗೆ ಯಾವ ಹಾನಿಯನ್ನೂ ಉಂಟು ಮಾಡಲು ಶಕ್ಯವಿರಲಿಲ್ಲ" ಅಂದ ಮೇಲೆ ಹದಿನಾರನೆಯ ಶತಮಾನದ ದಕ್ಷಿಣ ಭಾರತೀಯ ರಾಜರ ಫಿರಂಗಿ ಪಡೆಯ ಧಾಳಿಯ ವೈಖರಿ ಹಾಗೂ ಸಾಮರ್ಥ್ಯದ ಅರಿವಾಗುತ್ತದೆ. ಅಲ್ಲದೆ ಮಹಾನಗರ ರಾಜಧಾನಿ ವಿಜಯನಗರದ ಕೋಟೆಯ ಗೋಡೆಗಳ ರಚನಾ ಶೈಲಿಯನ್ನು ಅಧ್ಯಯನ ಮಾಡಿದ ಅನಂತರ ಅವು ಫಿರಂಗಿಯನ್ನು ಬಳಸದ ಅಂದರೆ ಫಿರಂಗಿ ತಂತ್ರಜ್ಞಾನಕ್ಕಿಂತ ಪೂರ್ವದ ತಂತ್ರಜ್ಞಾನವನ್ನು ಅನುಸರಿಸಿ ರಚಿಸಿದವೆಂದು ಹೇಳಬಹುದು. ಅಲ್ಲದೆ ಈ ಕೋಟೆಯಲ್ಲಿ ಫಿರಂಗಿಗಳು ಬಳಸಿಲ್ಲವೆಂದೂ ಹೇಳಬಹುದಾಗಿದೆ.

ಸೈನ್ಯ ಮತ್ತು ಸೈನ್ಯಾಡಳಿತಕ್ಕೆ ಸಂಬಂಧಿಸಿದ ವಿಷಯಗಳು

ಚಿದಾನಂದ ಮೂರ್ತಿಯವರು ಪ್ರಾಚೀನ ಮತ್ತು ಮಧ್ಯಯುಗದಲ್ಲಿ ಕರ್ನಾಟಕದ ಸೈನ್ಯದಲ್ಲಿ ಚದುರಂಗ ಬಲದ ಬಳಕೆಯನ್ನು ವಿವರಿಸುತ್ತಾ ರಥಗಳು ಯುದ್ಧರಂಗದಿಂದ ಹಿಂದೆ ಸರಿದಿದ್ದವು ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ರಥಗಳನ್ನು ಕೇವಲ ಸಾಗಾಣಿಕೆಗೆ ಹಾಗೂ ವಿಶೇಷ ಸಂದರ್ಭಗಳಲ್ಲಿ ಪ್ರತಿಷ್ಠಿತ ವ್ಯಕ್ತಿಗಳು ಪ್ರಯಾಣ ಕೈಗೊಳ್ಳಲು ಬಳಸುತ್ತಿದ್ದಂತೆ ಕಂಡುಬರುತ್ತದೆ. ಮಹಾನಗರ ರಾಜಧಾನಿ ವಿಜಯನಗರ ವನ್ನು ಸಂದರ್ಶಿಸಿದ್ದ ಎಲ್ಲ ಪ್ರವಾಸಿಗರ ಕಥನಗಳ ಅಧ್ಯಯನದಿಂದ ಹಾಗೂ ಶಿಲ್ಪಗಳ ಅಧ್ಯಯನದಿಂದ ಚಿದಾನಂದಮೂರ್ತಿಯವರ ಅಭಿಪ್ರಾಯ ಮತ್ತೆ ಖಚಿತವಾಗುತ್ತದೆ. ವಿಜನಯಗರದ ಅರಸರು ಗಜಸೇನೆ, ರಾವುತರು, ಪದಾತಿ ದಳವನ್ನು ಹಾಗೂ ಅಲ್ಪ ಪ್ರಮಾಣದ ಫಿರಂಗಿ ಪಡೆಯನ್ನು ಹೊಂದಿದ್ದರೆಂದು ತಿಳಿದು ಬರುತ್ತದೆ. ಅಬ್ದುಲ್ ರಜಾಕ್, ದುಆರ್ತೆ ಬಾರ್ಬೊಸಾ, ಡೊಮಿಂಗೊ ಪ್ಯಾಸ್, ಫರ್ನಾಓ ನೂನಿಜ್ ಮತ್ತು ಲೋದೊವಿಕೊ ಡಿ ವರ್ತೆಮಾ ವಿಜನಯಗರದ ರಾಜನ ಸೇನೆಯಲ್ಲಿ ಆನೆ, ಕುದುರೆ,

ಪದಾತಿದಳ ಮತ್ತು ಒಂಟೆಗಳು ಇದ್ದವೆಂದು ಉಲ್ಲೇಖಿಸಿದ್ದಾರೆ. ನಿಕಿಟಿನ್ ಮತ್ತು ನೂನಿಜ್‌ರು ಮಾತ್ರ ಫಿರಂಗಿ ಪಡೆಯನ್ನು ಉಲ್ಲೇಖಿಸುತ್ತಾರೆ. ಮಹನವಮಿ ದಿಬ್ಬದಲ್ಲಿ ರಥವನ್ನು ಮತ್ತು ಫಿರಂಗಿ ಪಡೆಯನ್ನು ಹೊರತುಪಡಿಸಿದ ಸೈನಿಕರ ದೃಶ್ಯಾವಳಿ ಕಂಡು ಬರುತ್ತದೆ.

ಸೈನಿಕರ ಆಯ್ಕೆ ಮತ್ತು ಸಂಬಳ

ಸೇನೆಗೆ ಸೈನಿಕರನ್ನು ನೇಮಕ ಮಾಡುವ ಕ್ರಮ ಜಾರಿಯಲ್ಲಿದ್ದುದು, ಅದಕ್ಕಾಗಿ ಅವರು ಅನುಸರಿಸುತ್ತಿದ್ದ ಕ್ರಮ ಸಹ ಉಲ್ಲೇಖವಾಗಿದೆ. ಸೈನ್ಯಕ್ಕೆ ಯೋಧರನ್ನು ಆರಿಸುವ ಮುನ್ನ ಅವರನ್ನು ಬೆತ್ತಲೆಯಾಗಿ ನಿಲ್ಲಿಸಿ, ಅವರ ಮೈಕಟ್ಟು, ಉದ್ದ, ದಪ್ಪ ಇವುಗಳನ್ನು ನೋಡಿ, ಅವನ ಹೆಸರು, ತಂದೆ ತಾಯಿಗಳ ಹೆಸರು ಇತ್ಯಾದಿ ವಿಚಾರಗಳನ್ನು ತಿಳಿದು ಕೊಂಡು ಬರೆದುಕೊಳ್ಳುತ್ತಾರೆ. ಸಂಬಳದ ಬಟವಾಡೆ ಪುಸ್ತಕದಲ್ಲಿ ಅವನ ಈ ವಿವರಗಳೆಲ್ಲ ಇರುತ್ತವೆ. ಒಂದು ಸಲ ಸೈನ್ಯಕ್ಕೆ ಸೇರಿದ ಅನಂತರ ಬಿಟ್ಟು ಹೋಗುವುದು ಕಷ್ಟ. ತಪ್ಪಿಸಿಕೊಂಡು ಹೋಗಿ ಸಿಕ್ಕಿಬಿದ್ದರೆ ಬಹಳ ಕಠಿಣ ಶಿಕ್ಷೆಯಾಗುತ್ತದೆ. ನಾನಾ ಕಡೆಗಳಿಂದ ಬಂದು ಇಲ್ಲಿ ಸೈನ್ಯಕ್ಕೆ ಸೇರಿದ ಸರದಾರರು ತಮ್ಮ ತಮ್ಮ ಮತಾನುಸಾರ ನಡೆದುಕೊಳ್ಳುವು ದಕ್ಕೆ ಯಾವ ಅಡ್ಡಿಯಿಲ್ಲ' ಎಂದು ದುಆರ್ತೆ ಬಾರ್ಬೊಸಾ ತನ್ನ ಪ್ರವಾಸ ಕಥನದಲ್ಲಿ ದಾಖಲಿಸಿದ್ದಾನೆ. ಅನಂತರ ಬಂದ ಡೊಮಿಂಗೊ ಪ್ಯಾಸ್ ತನ್ನ ಪ್ರವಾಸಿಕಥನದಲ್ಲಿ ಸಂಬಳ ಬಟವಾಡೆಯನ್ನು ಇದೇ ಕ್ರಮದಲ್ಲಿ ಮಾಡುತ್ತಿದ್ದುದನ್ನು ಉಲ್ಲೇಖಿಸುತ್ತಾನೆ. "ವರ್ಷಕ್ಕೊಮ್ಮೆ ಸಂಬಳಕೊಡುವುದು ಅವರ ರೂಢಿ. ಅವನ ಮನೆಯ ಅಧಿಕಾರಿಗಳಿಂದ ವೀಕ್ಷಣೆ ನಡೆದು ಅವರು ಪ್ರತಿಯೊಬ್ಬನ ಹೆಸರು ಮತ್ತು ಅವನ ಮುಖ ಇಲ್ಲವೆ ದೇಹದ ಮೇಲೆ ಇರುವ ಕಲೆಗಳನ್ನು ಬರೆದುಕೊಳ್ಳುತ್ತಿದ್ದರು. ಒಂದು ಸಾವಿರ ಪರ್ದಾಒ ಸಂಬಳವಿರುವ ರಕ್ಷಣಾ ಪಡೆಯವರು ಇದ್ದಾರೆ. ಕೆಲವರಿಗೆ ಎಂಟುನೂರು, ಆರು ನೂರು ಸ್ವಲ್ಪ ಹೆಚ್ಚು ಇಲ್ಲವೆ ಕಮ್ಮಿ, ವ್ಯತ್ಯಾಸವಿದೆ. ಹಾಗೂ ವ್ಯಕ್ತಿಗಳಲ್ಲೂ ವ್ಯತ್ಯಾಸವಿದೆ. ಸೈನಿಕರು ಮತ್ತು ಕಾವಲುಗಾರರಿಗೆ ಸಂಬಳವನ್ನು ನೀಡಲಾಗುತ್ತಿತ್ತು". ಅಲ್ಲದೆ ಕೆಲವರಿಗೆ ಅದನ್ನು ಗಳಿಸುವಷ್ಟು ಭೂಮಿಯನ್ನು ಕೊಡಲಾಗುತ್ತಿತ್ತೆಂದು ತಿಳಿದು ಬರುತ್ತದೆ. ರಾಜ ಧಾನಿ ವಿಜಯನಗರದ ವೇಶ್ಯಾಗೃಹಗಳಿಂದ ಬಂದ ತೆರಿಗೆಯನ್ನು ರಾಜಧಾನಿಯನ್ನು ಕಾಯುವ ಪಹರೆಯವರಿಗೆ ಕೊಡಲು ಬಳಸುತ್ತಿದ್ದರೆಂದು ಅಬ್ದುಲ್ ರಜಾಕ್ ತಿಳಿಸು ತ್ತಾನೆ. ಸಿಪಾಯಿಗಳಿಗೆ ಸಂಬಳವನ್ನು ನಾಲ್ಕು ತಿಂಗಳಿಗೊಂದು ಸಾರಿ ಪಾವತಿ ಮಾಡುತ್ತಾರೆ. ರಾಜ್ಯಪಾಲನ ಮನೆಯನ್ನು ಕಾಯುವ ಸೈನಿಕರು ಸುಮಾರು 12 ಸಾವಿರವೆಂದು ಅಂದಾಜು ಮಾಡುವ ರಜಾಕ್ ಅವರಿಗೆ ದಿನವೊಂದಕ್ಕೆ ಒಂದು ಫಣಂ ಸಂಬಳ ಕೊಡುತ್ತಾರೆ ಎಂದು ದಾಖಲಿಸಿದಾನೆ.

ರಾಜನು ತನ್ನ ಅಂಗರಕ್ಷಣಾ ಪಡೆಯ ಸೈನ್ಯದ, ಅಂದರೆ ಮಹಾನಗರಿ, ರಾಜಧಾನಿಯಲ್ಲಿ ಕಂಡುಬರುವ ನಿಯತ ಸೈನಿಕರ, ಆನೆ, ಕುದುರೆ ಮುಂತಾದವುಗಳ ಖರ್ಚನ್ನು ತೂಗಿಸಲು ರಾಜಧಾನಿಯಿಂದ ಬರುವ ಆದಾಯವನ್ನು ಮೀಸಲಿಟ್ಟಿದ್ದಾನೆಂದು ಪ್ಯಾಸ್ ತಿಳಿಸುತ್ತಾನೆ. ವಿಜಯನಗರದ ಸೈನ್ಯದಲ್ಲಿ ಕಾರ್ಯ ನಿರ್ವಹಿಸುವ ಸೈನಿಕನು ರಾಜನಿಗೆ ಸದಾ ವಿಧೇಯನಾಗಿರಬೇಕಾಗಿದ್ದಿತು. ಅಲ್ಲದೆ ಅವರುಗಳು ತಮ್ಮ ಯೋಗ್ಯತಾನುಸಾರ, ಸಂಬಳ ಪಡೆಯುತ್ತಿದ್ದರು. ಅವಿಧೇಯವಾಗಿ ವರ್ತಿಸುವ ಅಥವಾ ಸೇನೆಯನ್ನು ಬಿಟ್ಟುಹೋಗುವ ಸಂದರ್ಭಗಳಲ್ಲಿ ಶಿಕ್ಷೆಗೆ ಗುರಿಯಾಗುತ್ತಿದ್ದರು.

ಆಯುಧಗಳು

ವಿಜಯನಗರ ಸಾಮ್ರಾಜ್ಯದ ಸೈನಿಕರು ಹೊಂದಿರುತ್ತಿದ್ದ ಆಯುಧಗಳ ಬಗೆಗೂ ಹಲವಾರು ಪ್ರವಾಸಿಗರು ವಿವರವಾದ ಟಿಪ್ಪಣಿಯನ್ನು ತಮ್ಮ ಲೇಖನಗಳಲ್ಲಿ ಸೇರಿಸಿದ್ದಾರೆ. ಅವರೆಂದರೆ, ನಿಕೊಲೆ - ದೆ- ಕೊಂತಿ, ಡೊಮಿಂಗೊ ಪ್ಯಾಸ್ ಮತ್ತು ನೂನಿಜ್. ಸೈನಿಕರು ಚಪ್ಪಲಿಗಳನ್ನು ಧರಿಸುತ್ತಿದ್ದರು. ಅವರು ಭಲ್ಲೆ, ಕತ್ತಿ, ಗುರಾಣಿ (ದುಂಡಾದದ್ದು) ಬಿಲ್ಲು ಬಾಣಗಳನ್ನು, ಗುಂಡು ಸಿಡಿಸುವ ಯಂತ್ರಗಳನ್ನು (ಫಿರಂಗಿ) ಹಾಗೂ ಸಿಡಿಗುಂಡುಗಳನ್ನು ಬಳಸುತ್ತಿದ್ದರೆಂದು ನಿಕೊಲೆದ -ಕೊಂತಿ ತಿಳಿಸುತ್ತಾನೆ. ರಾಜನ ರಕ್ಷಣೆಗೆ ಪುರುಷರಲ್ಲದೆ ಬೀಜ ಒಡೆದ ಗಂಡಸರು, ಕತ್ತಿ ಗುರಾಣಿ ಹಿಡಿದು ಸಾಹಸ ಪ್ರದರ್ಶಿಸುವ ಸ್ತ್ರೀಯರೂ ಮತ್ತು ಕುಸ್ತಿ ಮಾಡುವ ಶಕ್ತಿ ಹೊಂದಿದ್ದ ಸ್ತ್ರೀಯರೂ ಇದ್ದರೆಂದು ಪ್ಯಾಸ್ ಉಲ್ಲೇಖಿಸುತ್ತಾನೆ. ಡೊಮಿಂಗೋ ಪ್ಯಾಸ್ ಸೈನಿಕರು, ಬಂಗಾರ ಮತ್ತು ಬೆಳ್ಳಿಯ ಕಾಪುಗಳು ಮತ್ತು ಹಿಡಿಕೆಯುಳ್ಳ ಕಠಾರಿ, ಗಂಡುಗೊಡಲಿ, ತುಪಾಕಿ, ದೊಡ್ಡ ಬಾಯಿಯ ಸಣ್ಣ ಬಂದೂಕು, ಢಾಲ, ಈಟಿ, ತುರ್ಕಿಬಿಲ್ಲು, ಭಲ್ಲೆ, ಅಗ್ನಿ ಬಾಣಗಳು ಮತ್ತು ಸಿಡಿಗುಂಡುಗಳನ್ನು ಹೊಂದಿರುತ್ತಿದ್ದರೆಂದಿದ್ದಾನೆ. ರಾಜನ ಸೈನ್ಯದಲ್ಲಿ ಈ ಆಯುಧಗಳನ್ನು ಬಲು ಚೆನ್ನಾಗಿ ಬಳಸಲು ಸಾಮರ್ಥ್ಯವಿದ್ದ ಹಲವಾರು ಜನರಿದ್ದುದು ನನಗೆ ಆಶ್ಚರ್ಯ ತಂದಿತೆಂದಿದ್ದಾನೆ. ನೂನಿಜ್ ಪ್ಯಾಸನಂತೆ ಸೈನಿಕರ ಆಯುಧಗಳನ್ನು ಉಲ್ಲೇಖಿಸುತ್ತಾನಾದರೂ ಕತ್ತಿ, ಗುರಾಣಿ, ಹಿಡಿದು ಹೋರಾಡುವ ಸೈನಿಕರ ಈತನ ವಿವರಣೆ ನಮ್ಮ ಗಮನ ಸೆಳೆಯುತ್ತದೆ. “ಗುರಾಣಿಗಳು ಎಷ್ಟು ದೊಡ್ಡವಿದೆಯೆಂದರೆ ಸಂಪೂರ್ಣ ಮರೆಮಾಡಿದ ದೇಹವನ್ನು ಸಂರಕ್ಷಿಸಲು ಚಿಲಕತ್ತಿನ ಅವಶ್ಯಕತೆಯಿಲ್ಲವೆಂದು” ಹೇಳುತ್ತಾ ಸೈನಿಕರು, ಶಸ್ತ್ರಾಘಾತವನ್ನು ತಾಳಿಕೊಳ್ಳಲು, ಅಥವಾ ತಡೆಯಲು ರಕ್ಷಾ ಕವಚಗಳನ್ನು ಬಳಸುತ್ತಿದ್ದರೆಂದು ಹೇಳುತ್ತಾನೆ. ಪರ್ಷಿಯನ್ ಸೈನಿಕರು ಸಹ ಇದೇ ಬಗೆಯ ಗುರಾಣಿಗಳನ್ನು ಬಳಸುತ್ತಿದ್ದುದು ಇತಿಹಾಸಾಧ್ಯಾಯಿಗಳಿಗೆ ಚಿರಪರಿಚಿತ. ನೂನಿಜ್ ವಿವರಿಸುವ ಆನೆಯ ಮೇಲೆ ಕುಳಿತು ಹೋರಾಡುವ ಬಗೆ ಸಹ ನಮ್ಮ ವಿಶೇಷ

ಗಮನವನ್ನು ಸೆಳೆದುಕೊಳ್ಳುತ್ತದೆ. ಆನೆಯ ಮೇಲೆ ಕುಳಿತ ಅಂಬಿನವರು ನಾಲ್ಕು ಕಡೆ ಯುದ್ಧ ಮಾಡುತ್ತಾರೆ. ಆನೆಯ ಕೋರೆಗಳಿಗೆ ಬಹಳ ಸಾಣೆ ಹಿಡಿದ ಹರಿತ ಗೊಳಿಸಿದ ಚೂರಿಗಳನ್ನು ಕಟ್ಟಲಾಗಿರುತ್ತದೆ. ಅವುಗಳಿಂದ ಅವು ಬಹಳ ಹಾನಿ ಮಾಡುತ್ತವೆ. ಈತನು, ಕೋಟೆಯ ಒಳಗಿನಿಂದ ಹೊರಕ್ಕೆ ಭಾರಿ ಕಲ್ಲುಗಳನ್ನು ಎಸೆಯುವ ಕವಣೆ ಯಂತ್ರಗಳನ್ನು ಉಲ್ಲೇಖಿಸುತ್ತಾನೆ. ಈ ಬಗೆಯ ಸಾಂಪ್ರದಾಯಿಕ ಆಯುಧಗಳಲ್ಲದೆ ಅಂದಿನ ಕಾಲದ ಹಿರಿಮೆ ಎನಿಸಿದ ಫಿರಂಗಿಗಳನ್ನು ಯುದ್ಧದಲ್ಲಿ ಬಳಸುತ್ತಿದ್ದುದನ್ನು, ಅದನ್ನು ಭಾರತೀಯೇತರ ಸೈನಿಕರು ಬಳಸುತ್ತಿದ್ದಂತೆ ತಿಳಿಸುತ್ತಾನೆ.

ಕವಚಗಳು

ಸೈನಿಕರು ಬಳಸುತ್ತಿದ್ದ ಆಯುಧಗಳ ಜೊತೆಯಲ್ಲಿ ಸೈನಿಕರು ಮತ್ತು ಸೈನ್ಯದ ಪ್ರಾಣಿಗಳು ಲಘು ಆಘಾತಗಳಿಂದ ತಪ್ಪಿಸಿಕೊಂಡು, ಯುದ್ಧ ಮುಂದುವರಿಸಲು ಸಹಾಯಕವಾಗುವಂತೆ ಕವಚಗಳನ್ನು ಧರಿಸುತ್ತಿದ್ದುದ್ದನ್ನು ಸಹ ಪ್ರವಾಸಿ ಕಥನಗಳಲ್ಲಿ ದಾಖಲಿಸಿರುವುದನ್ನು ನೋಡಬಹುದಾಗಿದೆ. ಕುದುರೆಗಳು, ಆನೆಗಳು, ರಾವುತರು ರಕ್ಷಾ ಕವಚಗಳನ್ನು ಶಿರಸ್ತ್ರಾಣಗಳನ್ನು ಹೊಂದಿರುತ್ತಿದ್ದರು. ಆನೆಗಳಿಗೆ ರಜಾಯಿ ರೀತಿಯ ದಪ್ಪನಾದ ರಕ್ಷಾಕವಚವನ್ನು ಧರಿಸುತ್ತಿದ್ದಂತೆ ತಿಳಿದುಬರುತ್ತದೆ. ಕಾಲಾಳುಗಳು ಸಂರಕ್ಷಕ ಚಿಲಕತ್ತುಗಳನ್ನು ಧರಿಸದೆ ಕೇವಲ ಲೋಡುಗಳನ್ನು ಧರಿಸುತ್ತಿದ್ದರು. ಅಶ್ವ ರೋಹಿಗಳು ಚರ್ಮ ಅಥವಾ ಲೋಹದ ತಗಡಿನಿಂದ ಮಾಡಲ್ಪಟ್ಟ ತುಣುಕುಗಳಿಂದ ದಪ್ಪ ರಜಾಯಿ ಅಂಗಿಗಳನ್ನು ಧರಿಸುತ್ತಿದ್ದರು. 'ಅಶ್ವಾಳುಗಳು ರಜಾಯಿ, ಜರತಾರಿ, ಮಖಮಲ್ಲು, ಮತ್ತು ಎಲ್ಲ ವಿಧದ ರೇಷ್ಮೆಯ ಅಂಗಿಗಳನ್ನು ತೊಟ್ಟಿದ್ದರು. ಈ ಅಂಗಿಗಳನ್ನು ಬಹಳ ಗಟ್ಟಿಯಾದ ಚರ್ಮದ ಪದರುಗಳಿಂದ ಮಾಡಿದ್ದು ಅವುಗಳನ್ನು ಮಜಬೂತಾಗಿಸುವ ಬೇರೆ ಕಬ್ಬಿಣ (ತಗಡು)ದಿಂದ ಸಜ್ಜುಗೊಳಿಸಲಾಗಿದೆ. ಕೆಲವರು ಈ ತಗಡುಗಳನ್ನು ಒಳಗೂ ಹೊರಗೂ ಗಿಲೀಟು ಮಾಡಿದ್ದಾರೆ.

ಅವರ ತಲೆಯುಡುಪುಗಳು ಶಿರಸ್ತ್ರಾಣಗಳ ಮಾದರಿಯಲ್ಲಿ ಮಾಡಲಾಗಿದೆ. ಅವುಗಳ ಅಂಚುಗಳು ಕುತ್ತಿಗೆಗಳನ್ನು ಮುಚ್ಚುತ್ತವೆ. ಪ್ರತಿಯೊಂದಕ್ಕೂ ಮುಖ ಸಂರಕ್ಷಿಸುವ ಭಾಗವಿದೆ. ಅವುಗಳು ಅಂಗಿಗಳ ಮಾದರಿಯದಾಗಿವೆ'. ಡೊಮಿಂಗೊ ಪ್ಯಾಸ್ ಈ ಮೇಲಿನಂತೆ, ರಕ್ಷಾ ಕವಚಗಳನ್ನು ಉಲ್ಲೇಖಿಸಿರುವುದು ನಮ್ಮ ಗಮನ ಸೆಳೆಯುತ್ತದೆ.

ಸೈನ್ಯದ ಸಂಖ್ಯೆ

ವಿಜಯನಗರ ಅರಸರು ಹೊಂದಿದ್ದ ಸೈನ್ಯದ ಸಂಖ್ಯೆ ಮತ್ತು ಅದನ್ನು ಜಮಾವಣೆ ಮಾಡುತ್ತಿದ್ದ ಕ್ರಮದ ಬಗೆಗೆ ಸಹ ಪ್ರವಾಸಿಕಥಾನಕಗಳು ಬೆಳಕು ಚೆಲ್ಲುತ್ತವೆ. ಸಿಕೊಲೆ -ದೆ -ಕೊಂತಿ ಮಹಾನಗರ ರಾಜಧಾನಿ ವಿಜಯನಗರದಲ್ಲಿ 'ಶಸ್ತ್ರಾಸ್ತ್ರಗಳಲ್ಲಿ ಪ್ರವೀಣರಾದ

ತೊಂಬತ್ತು ಸಾವಿರ ಜನರಿದ್ದಾರೆಂದು ಅಂದಾಜು ಹಾಕಲಾಗಿದೆ' ಎಂದಿದ್ದಾನೆ. ಅಬ್ದುಲ್ ರಜಾಕ್ ಸಾಮ್ರಾಜ್ಯದ ಸೈನ್ಯದಲ್ಲಿ ಪರ್ವತೋಪಾದಿಯಲ್ಲಿರುವ ಮತ್ತು ಪೆಡಂಭೂತಗಳಂತಿರುವ ಸಾವಿರಕ್ಕೂ ಮೀರಿದ ಆನೆಗಳು ಹಾಗೂ ಹನ್ನೊಂದು ಲಕ್ಷದಷ್ಟು ಯೋಧರಿದ್ದಾರೆ ಎಂದು ಬರೆದಿದ್ದಾನೆ. ದುಆರ್ತೆ ಬಾರ್ಬೋಸನ ಪ್ರಕಾರ "ರಾಜನ ಬಳಿ 900 ಆನೆಗಳು 20,000 ಕುದುರೆಗಳು ಇವೆ. ಇವೆಲ್ಲವನ್ನು ದುಡ್ಡು ಕೊಟ್ಟು ಕೊಂಡಿದ್ದಾನೆ. ರಾಜನ ಅಶ್ವದಳ ಮತ್ತು ಕಾಲ್ದಳಗಳಲ್ಲಿ ಒಟ್ಟು ಸೇರಿ ಹತ್ತು ಲಕ್ಷ ಜನರಿದ್ದಾರೆ. ಐದು ಸಾವಿರ ಸ್ತ್ರೀಯರು ಇದ್ದಾರೆ. ಇವರಿಗೂ ಸಂಬಳ ಉಂಟು. ಯುದ್ಧಕ್ಕೆ ಹೋದಾಗ ಸೈನಿಕರ ಸಂಖ್ಯೆಗೆ ಅನುಗುಣವಾಗಿ ಸ್ತ್ರೀಯರನ್ನು ಕಳುಹಿಸುತ್ತಾರೆ" ಎಂದು ದಾಖಲಿಸಿದ್ದಾನೆ. ಡೊಮಿಂಗೊ ಪ್ಯಾಸ್ ವಿಜಯನಗರದಲ್ಲಿ ಯಾವಾಗಲೂ 25,000 ಅಶ್ವಾಳುಗಳೂ ಸೇರಿದಂತೆ ಒಂದು ಲಕ್ಷ ಸೈನ್ಯವಿದ್ದುದನ್ನು ಉಲ್ಲೇಖಿಸುತ್ತಾನೆ. ಈ ಎಲ್ಲ ಉಲ್ಲೇಖಗಳು ಒಂದಕ್ಕೊಂದು ಪೂರಕವಾಗಿವೆ. ಹಾಗಾಗಿ ಅನುಮಾನಿಸದೆ ಸಂಖ್ಯೆಯನ್ನು ಅನುಮೋದಿಸಬಹುದಾಗಿದೆ. ಇನ್ನು ಯುದ್ಧದಲ್ಲಿ ಭಾಗವಹಿಸುತ್ತಿದ್ದ ಸೈನಿಕರ ಬಗ್ಗೆ ಸಹ ಉಲ್ಲೇಖಗಳಿವೆ. ಈ ಬಗೆಯ ಮಾಹಿತಿ ನೀಡುವಲ್ಲಿ ಪ್ಯಾಸ್ ಮತ್ತು ನೂನಿಜ್ ಪ್ರಮುಖರು. ಪ್ಯಾಸ್‌ನ ಪ್ರಕಾರ ಕರಾವಳಿ ತೀರದ ಪ್ರದೇಶದ ಮೇಲೆ ಧಾಳಿಗೆ ಕಳುಹಿಸಿದ ಸೈನ್ಯದ ಸಂಖ್ಯೆಯ ವಿವರ ಹೀಗಿದೆ. "ನಾನೊಮ್ಮೆ ರಾಜ ಸಮುದ್ರದ ಕರಾವಳಿಯಲ್ಲಿರುವ ತನ್ನ ಸ್ಥಳಗಳಲ್ಲೊಂದರ ವಿರುದ್ಧ ಸೇನಾ ಬಲ ಕಳುಹಿಸಿದುದನ್ನು ನೋಡಿದೆ. ಅವನು ಅನೇಕ ಅಶ್ವಾಳುಗಳಿದ್ದ 1,50,000 ಸೈನಿಕರೊಂದಿಗೆ ಐವರು ದಳಪತಿಗಳನ್ನು ಕಳುಹಿಸಿದನು. ಆತನ ಬಳಿ ಅನೇಕ ಆನೆಗಳಿವೆ. ತನ್ನ ರಾಜ್ಯದ ನೆರೆಯಲ್ಲಿರುವ ಮೂವರು ರಾಜರಲ್ಲಿ ಯಾವನೊಬ್ಬನಿಗೆ ರಾಜನು ತನ್ನ ಬಲ ಪ್ರದರ್ಶಿಸ ಬಯಸಿದಾಗ ರಣರಂಗದಲ್ಲಿ ಎರಡು ಲಕ್ಷ ಸೈನಿಕರನ್ನು ನಿಲ್ಲಿಸುತ್ತಾನೆ" ಎಂದು ದಾಖಲಿಸಿದ್ದಾನೆ.

ಕೃಷ್ಣದೇವರಾಯನು ರಾಯಚೂರಿನ ಧಾಳಿಯಲ್ಲಿ "ತನ್ನ ರಕ್ಷಣಾ ಪಡೆಯಿಂದ ತನ್ನ ರಾಜ್ಯದಲ್ಲಿಯೇ ಅತ್ಯುತ್ತಮವಾಗಿದ್ದ ಆರು ಸಾವಿರ ಅಶ್ವಾಳು ಮತ್ತು ನಲವತ್ತು ಸಾವಿರ ಕಾಲಾಳುಗಳನ್ನು ತೆಗೆದುಕೊಂಡು ಹೊರಟ. ಗುರಾಣಿ ಉಳ್ಳವರು, ಬಿಲ್ಲುಗಾರರು ಮತ್ತು ಮುನ್ನೂರು ಆನೆಗಳು" ಯುದ್ಧಕ್ಕೆ ಬಳಸಲ್ಪಟ್ಟಿದ್ದನ್ನು ನೂನಿಜ್ ಉಲ್ಲೇಖಿಸುತ್ತಾನೆ. ಆನೆಯ ಮೇಲೆ ಕುಳಿತ ನಾಲ್ಕು ಮಂದಿ ನಾಲ್ಕೂ ದಿಕ್ಕಿನಲ್ಲಿ ಕಾದಾಡುತ್ತಾರೆಂದು, ಅಲ್ಲದೆ ಹಲವಾರು ತೋಪುಗಳನ್ನು ಒಯ್ಯಲಾದ ಬಗ್ಗೆ ಹಾಗೂ ಸೈನ್ಯದ ಜಮಾವಣೆಯ ಸಂಖ್ಯೆಯನ್ನು ತಮ್ಮ ಮುಂದಿಡುತ್ತಾರೆ. ಆನೆಯ ಮೇಲೆ ನಾಲ್ವರು ಕುಳಿತು ಯುದ್ಧ ಮಾಡುತ್ತಾರೆಂದು ತಿಳಿಸುವ ನೂನಿಜ್, ಅವರ ಸಂಖ್ಯೆಯನ್ನಾಗಲಿ, ತೋಪನ್ನು ಬಳಸಲು ಬೇಕಾದವರ ಸಂಖ್ಯೆಯನ್ನಾಗಲಿ ಒಟ್ಟು ಫಿರಂಗಿಗಳ ಸಂಖ್ಯೆಯನ್ನಾಗಲೀ ನೀಡದೆ ನಮ್ಮ ಊಹೆಗೆ ಬಿಡುತ್ತಾನೆ. ಈ ಬೃಹತ್ ಸೈನ್ಯಕ್ಕೆ ಬೇಕಾದ ಸರಂಜಾಮು ಒದಗಿಸುವವರು,

ಬೇಹುಗಾರರು, ವೈದ್ಯರಂತಹ ಇತರ ಸಹಾಯಕರ ಸಂಖ್ಯೆಯ ಉಲ್ಲೇಖವಿಲ್ಲ. ಹೀಗಾಗಿ, ನಮಗೆ ಇಲ್ಲಿ ದೊರೆಯುವುದು ಒಂದು ಬಗೆಯ ಅಂದಾಜು ಸಂಖ್ಯೆಯೇ ಹೊರತು, ನಿಖರವಾದ ಅಂಕಿ ಸಂಖ್ಯೆಗಳಿಲ್ಲ.

ಉಪಸಂಹಾರ

ವಿಜಯನಗರ ಸಾಮ್ರಾಜ್ಯವು ಸ್ವಧರ್ಮ ರಕ್ಷಣೆಗೆ ತನ್ನ ಎಲ್ಲ ಸಂಪತ್ತನ್ನು ವಿನಿಯೋಗಿಸುತ್ತಿದ್ದುದು ಈ ಮೇಲಿನ ಅಧ್ಯಯನದಿಂದ ಖಚಿತವಾಗುತ್ತದೆ. ರಾಮೇಶ್ವರದಿಂದ ತುಂಗಭದ್ರಾ ನದಿಯವರೆಗೆ, ಪೂರ್ವ ಕರಾವಳಿಯಿಂದ ಪಶ್ಚಿಮದ ಕರಾವಳಿಯವರೆಗೆ, ಉತ್ತರದಲ್ಲಿ ಗೋವಾದಿಂದ ಗುಲಬರ್ಗಾದವರೆಗೆ ತನ್ನ ವಿಸ್ತಾರವಾದ ಸಾಮ್ರಾಜ್ಯವನ್ನು ಹೊಂದಿತ್ತಾದರೂ, ವಿಜಯನಗರ ಸಾಮ್ರಾಜ್ಯ ಪ್ರಾರಂಭದ ದಿನಗಳ ಅನಂತರ ಎದುರಿಸಿದ ಶಕ್ತಿಯೆಂದರೆ ಶಾಹಿ ಮನೆತನಗಳು. ಅವುಗಳೊಂದಿಗೆ ನಿರಂತರ ಹೋರಾಟದಲ್ಲಿ ತೊಡಗಿದ್ದ ವಿಜಯನಗರ ತನ್ನ ರಾಜಧಾನಿ ಮಹಾನಗರ ವಿಜಯನಗರದ ರಕ್ಷಣೆಗಾಗಿ, ಬೃಹದಾದ ಕೋಟೆ ಗೋಡೆಗಳಿಂದಾವೃತವಾದ ನಗರ ನಿರ್ಮಾಣವನ್ನು, ಅದನ್ನು ಕಾಯುವ ಕಾವಲು ಪಡೆಯನ್ನು ಹೊಂದುವುದಕ್ಕೆ ಅಲ್ಲದೆ ಶಾಹಿ ಮನೆತನದ ಆಕ್ರಮಣದಿಂದ ದೇಶವನ್ನು ರಕ್ಷಿಸುವುದಕ್ಕೆ ಅಪಾರ ಹಣ, ಸಮಯ ಹಾಗೂ ಜ್ಞಾನವನ್ನು ವಿನಿಯೋಗಿಸಿರುವುದು ಮೇಲುನೋಟಕ್ಕೆ ಕಂಡು ಬರುತ್ತದೆ.

ಸಾಮ್ರಾಜ್ಯದ ರಾಜಧಾನಿ, ಮಹಾನಗರ ವಿಜಯನಗರ, ವೈರಿಗಳಿಗೆ ಸಮೀಪದಲ್ಲಿದ್ದುದರಿಂದ ಅದಕ್ಕೆ ಅಭೇದ್ಯವೆನಿಸುವ ರಕ್ಷಣಾ ವ್ಯೂಹವನ್ನು ರಚಿಸಿರುವುದು ಸಹ ಕಂಡುಬರುತ್ತದೆ. ಬರಹದ ಆಕರಗಳಲ್ಲದೆ ಹಂಪೆಯಲ್ಲಿ ಇಂದು ಕಂಡು ಬರುವ ಕುರುಹುಗಳ ಬರಹವನ್ನು ಪುಷ್ಟೀಕರಿಸುತ್ತದೆ.

ವಿಜಯನಗರ ಸಾಮ್ರಾಜ್ಯ ತನ್ನ ಸೈನ್ಯದಲ್ಲಿ ಕಾಲ್ಬಳ, ಅಶ್ವದಳ, ಗಜದಳ, ಒಂಟೆಗಳು ಮತ್ತು ಫಿರಂಗಿ ಪಡೆಯನ್ನು ಹೊಂದಿತ್ತು. ಕುದುರೆ ಆನೆ ಹಾಗೂ ಅದರ ಸವಾರರು ಯುದ್ಧ ಕಾಲದಲ್ಲಾಗುವ ಆಘಾತಗಳನ್ನು ತಡೆಯಬಲ್ಲ ಸಂರಕ್ಷಣಾ ಬಟ್ಟೆ ಮತ್ತು ಕವಚಗಳನ್ನು ಧರಿಸುತ್ತಿದ್ದರು. ಅವರ ಶಿರಸ್ತ್ರಾಣಗಳೂ ರಕ್ಷಣೆಯನ್ನು ಕೊಡುತ್ತಿದ್ದವು. ಯುದ್ಧದಲ್ಲಿ ರಾಜನೇ ಕೆಲ ಸಂದರ್ಭಗಳಲ್ಲಿ ಮುಂದಾಳುವಾಗಿ ಕಾರ್ಯನಿರ್ವಹಿಸುತ್ತಿದ್ದನು. ಯುದ್ಧದಲ್ಲಿ ಸಾಂಪ್ರದಾಯಿಕ ಆಯುಧಗಳ ಜೊತೆಯಲ್ಲಿ ಸಿಡಿಗುಂಡುಗಳು ಮತ್ತು ಫಿರಂಗಿಗಳು, ತುಪಾಕಿ, ದೊಡ್ಡ ಬಾಯಿಯ ಚಿಕ್ಕ ಬಂದೂಕು ಮುಂತಾದ ಶಸ್ತ್ರಾಸ್ತ್ರಗಳನ್ನು ಬಳಸುತ್ತಿದ್ದರು.

ರಾಜನ ರಕ್ಷಣೆಯಲ್ಲಿ ಪುರುಷನಲ್ಲದೆ ಬೀಜವೊಡೆದ ಗಂಡಸರು, ಸ್ತ್ರೀಯರು ಇದ್ದ ವಿಷಯ ವ್ಯಕ್ತವಾಗುತ್ತದೆ. ರಥಗಳು ಯುದ್ಧರಂಗದಿಂದ ಒಂದೆ ಸರಿದು ಕೇವಲ

ಯಾತ್ರೆ ಮತ್ತು ಶೋಭಾಯಾತ್ರೆಗೆ ಮೀಸಲಾಗಿದ್ದು ಕಂಡು ಬರುತ್ತದೆ. ಈ ಎಲ್ಲ ಮಹತ್ವದ ಅಂಶಗಳ ಜೊತೆಯಲ್ಲಿ ಫಿರಂಗಿಪಡೆ ಇನ್ನು ಶೈಶವಾವಸ್ಥೆಯಲ್ಲಿದ್ದು ಆ ಕಲೆ ಭಾರತೀಯರಿಗೆ ಕರಗತವಾಗದಿರುವುದನ್ನು ಸಹ ಈ ಅಧ್ಯಯನ ಎತ್ತಿ ಹಿಡಿಯುತ್ತದೆ. ಏನೇ ಆದರೂ ವಿಜಯನಗರದ ಅರಸರು ಅಂದಿನ ಭಾರತದ ಹಿಂದೂ ರಾಜರು ಹೊಂದಿದ್ದ ಸೇನೆಗಳಲ್ಲಿ ಅತ್ಯುತ್ತಮವಾದುದನ್ನು ಹಾಗೂ ಅದರ ಆಡಳಿತಾಂಗವನ್ನು ಹೊಂದಿದ್ದರೆಂದು ಹೇಳಬಹುದು.

ಒಟ್ಟಿನಲ್ಲಿ ಸೇನೆಯ ವಿರುದ್ಧ, ಸೇನಾಬಲದಿಂದಲೇ ಪ್ರಾರಂಭವಾಗಿ, ಅದರಲ್ಲಿಯೇ ಬೆಳೆದು, ಅದರಲ್ಲಿಯೇ ತನ್ನ ಅಂತ್ಯ ಕಂಡುಕೊಂಡ ಪ್ರಾಚೀನ ರೋಮ್ ಸಾಮ್ರಾಜ್ಯದಂತೆ ವಿಜಯನಗರ ಸಾಮ್ರಾಜ್ಯವೂ ಒಂದು ಸೇನಾ ಸಾಮ್ರಾಜ್ಯವೆಂದರೆ ತಪ್ಪಾಗಲಾರದು.

ಅಡಿ ಟಿಪ್ಪಣಿಗಳು

1. ಸೂರ್ಯನಾಥ ಯು ಕಾಮತ್ : 1983 : ಕರ್ನಾಟಕ ರಾಜ್ಯ ಗೆಜೆಟಿಯರ್, ಭಾಗ 1 ಪುಟ 1217 - 1219.
2. ನಿಕೊಲೊ - ದೆ- ಕೊಂತಿಯು ವಿಜಯನಗರವನ್ನು ಉಚ್ಚರಿಸಿರುವ ಬಗೆ, ಎಚ್.ಎಲ್. ನಾಗೇಗೌಡ : 1966 : ಪ್ರವಾಸಿ ಕಂಡ ಇಂಡಿಯಾ : ಸಂಪುಟ : 2, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ; ಪುಟ : 124-144
3. ಅಬ್ದುಲ್ ರಜಾಕ್‌ನು ವಿಜಯನಗರವನ್ನು ಉಲ್ಲೇಖಿಸಿರುವ ಬಗೆ, ಅದೇ ಪುಟ : 145-171
4. ಅಥನೇಷಿಯಸ್ ನಿಕೆಟಿನ್ - ಅದೇ ಪುಟ 172 - 185
5. ದುಆರ್ತೆ ಬಾರ್ಬೋಸಾ - ಅದೇ - ಪುಟ 252 - 354
6. ಡೊಮಿಂಗೊ ಪ್ಯಾಸ್ - ಅದೇ - ಪುಟ 355- 384
7. ಫೆರ್ನಾಓ ನೂನಿಜ್ - ಅದೇ ಪುಟ 385-423 ಮತ್ತು ರಾಬರ್ಟ್ ಸಿವೆಲ್ : 1992 : ಮರೆತು ಹೋದ ಮಹಾಸಾಮ್ರಾಜ್ಯ ; ಅನುವಾದ : ಸದಾನಂದ ಕನವಳ್ಳಿ : ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ : 312 - 430.
8. ಸೀಜರ್ ಫ್ರೆಡೆರಿಕ್ : ಅದೇ - ಪುಟ - 452-474
9. ಲೊಡೊವಿಕೊ ದಿ ವರ್ತೆಮಾ -ಅದೇ : 1972 : ಸಂಪುಟ: 4 ಪುಟ : 1-38
10. ಟೋಮ್ ಪೀರೆಸ್ - ಅದೇ -ಪುಟ: 39 - 51
11. ಮಾನುಯೆಲ್ ಬರ್ರ್‍ಾಡಾಸ್ : ಅದೇ : ಪುಟ: 156 - 165

12. ಲೆಫ್ಟಿನೆಂಟ್ ಎಮಿಟ್ : ವಿವೇಕ ರೈ : 2005 : ಪ್ರವಾಸಿ ಕಂಡ ವಿಜಯನಗರ : ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ : 225 - 227

13. ಪಿಯೆತ್ರೊ ದೆಲ್ಲಾ ವಲ್ಲೆ : ನಾಗೇಗೌಡ, ಎಚ್.ಎಲ್. : 1972 : ಪೂರ್ವೋಕ್ತ ಪುಟ : 210

14. ಪರಮಶಿವಮೂರ್ತಿ, ಡಿ.ವಿ. 2005 - 1ನೆಯ ಹರಿಹರನ ಮತ್ತು ವಿದ್ಯಾರಣ್ಯರ ತಾಮ್ರಶಾಸನ : ವಿಜಯನಗರ ಅಧ್ಯಯನ, ಸಂಪುಟ : 10, ಸಂಪಾದಕರು ಆರ್. ಗೋಪಾಲ್, ಇತರರು ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ಪುಟ : 19-29

15. ವಸಂತ ಶೆಟ್ಟಿ ಬಿ : 1997 : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತೀಚೆಗೆ ದೊರೆತ ಮೂರು ವಿಜಯನಗರದ ಶಾಸನಗಳು : ವಿಜಯನಗರ ಅಧ್ಯಯನ, ಸಂಪುಟ : 2 ಪುಟ : 71-73

16. ಚನ್ನಬಸಪ್ಪ ಎಸ್. ಪಾಟೀಲ್ : 1999 ಕರ್ನಾಟಕದ ಕೋಟೆಗಳು, ಸಂಪುಟ 1 ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಪುಟ 91

17. ಚನ್ನಬಸಪ್ಪ ಎಸ್. ಪಾಟೀಲ್ ಮತ್ತು ವಿನೋದಾ ಎಸ್ ಪಾಟೀಲ್ (ಸಂ) : 1996 ವಿಜಯನಗರದ (ಹಂಪೆಯ) ಶಾಸನಗಳು : ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸುರು, ಪುಟ xv - xxiv

18. ಎಂ. ಚಿದಾನಂದ ಮೂರ್ತಿ : 1976 : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು : ಪುಟ 245 - 297

19. ಡಿ.ವಿ. ಪರಮಶಿವಮೂರ್ತಿ : 2005 : ಪೂರ್ವೋಕ್ತ

20. ಅದೇ

21. ನಾಗೇಗೌಡ : 1972 : ಪೂರ್ವೋಕ್ತ : ಪುಟ : 210 ಪಿ ಯೆ ತ್ರೊ ದೆಲ್ಲಾವಲ್ಲೆ ವಿಜಯನಗರವೆಂದು ಹೆಸರಿಸಿರುವುದನ್ನು ನಾಗೇಗೌಡರು ವಿದ್ಯಾನಗರ, ವಿಜಯನಗರವೆಂದು ಅರ್ಥೈಸಿದ್ದಾರೆ.

22. ಬಾ ರಾ ಗೋಪಾಲ್ : 1986 : ಕರ್ನಾಟಕ ಇತಿಹಾಸ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಪುಟ : 271

23. ಅದೇ - ಪುಟ 152

24. ಎ.ಕ. v ಅರಸೀಕೆರೆ 66 ಹಳೆಯ ಆವೃತ್ತಿ

25. ಎ.ಕ. xii ಗುಬ್ಬಿ : 30 ಹಳೆಯ ಆವೃತ್ತಿ

26. ಎ.ಆರ್.ಐ.ಇ - 1943 - 44. ನಂ. 75: ಮತ್ತು ನಾಗರಾಜರಾವ್ ಎಂ.ಎಸ್. ಮತ್ತು ಚನ್ನಬಸಪ್ಪ ಎಸ್. ಪಾಟೀಲ್ 1985 : ಎಪಿಗ್ರಾಫಿಕಲ್ ರೆಫರೆನ್ಸ್ ಟು ಸಿಟಿ ಗೇಟ್ಸ್ ಅಂಡ್ ಟವರ್ಸ್ ಆಪ್ ವಿಜಯನಗರ ಇನ್ ವಿಜಯನಗರ ಪ್ರೊಗ್ರೆಸ್ ಆಫ್ ರೀಸರ್ಚ್ : 1983 - 84 : ಪುಟ 96-100

27. ಚನ್ನಬಸಪ್ಪ ಎಸ್. ಪಾಟೀಲ್ : 1996 : ಹೊಸಮಲೆ ದುರ್ಗ ಇನ್ ವಿಜಯನಗರ ಪ್ರೋಗ್ರೆಸ್ ಆಫ್ ರೀಸರ್ಚ್ ಪುಟ : 236 - 242.

28. ವಸುಂಧರಾ ಫಿಲಿಯೋಜ : 1988 : ಹಂಪಿ - ವಿಜಯನಗರ ಇನ್ ಅರ್ಲಿ ವಿಜಯನಗರ : ಸ್ಟಡೀಸ್ ಇನ್ ಇಟ್ಸ್ ಹಿಸ್ಟರೀ ಅಂಡ್ ಕಲ್ಚರ್, ದೀಕ್ಷಿತ್ ಜಿ. ಎಸ್. (ಸಂ) ಬೆಂಗಳೂರು ಪು. 182

29. ನರಸಿಂಹಯ್ಯ, ಬಿ. : 1992 : ಮೆಟ್ರೋಪಲೀಸ್ ವಿಜಯನಗರ, ದೆಹಲಿ, ಪು. 1-16

30. ಅದೇ

31. ಅದೇ

32. ನಾಗೇಗೌಡ ಎಚ್.ಎಲ್. 1966 : ಪೂರ್ವೋಕ್ತ

33. ಚನ್ನಬಸಪ್ಪ ಎಸ್. ಪಾಟೀಲ್ : 1996 : ಪೂರ್ವೋಕ್ತ

34. ವಾಸುದೇವನ್ ಸಿ. ಎಸ್. 1997, ವಿಜಯನಗರ ಪಟ್ಟಣ ಮತ್ತು ಅದರ ಉಪನಗರಗಳು ವಿಜಯನಗರ ಅಧ್ಯಯನ : ಸಂಪುಟ : 2 : ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ಪುಟ 99 -108

35. ಚನ್ನಬಸಪ್ಪ ಎಸ್. ಪಾಟೀಲ್ : 1996 : ಪೂರ್ವೋಕ್ತ

36. ಚಿದಾನಂದ ಮೂರ್ತಿ : 1976 : ಪೂರ್ವೋಕ್ತ

37. ಚಿಂದಾನಂದ ಮೂರ್ತಿ : 1976 : ಪೂರ್ವೋಕ್ತ

38. ನಾಗೇಗೌಡರ ಪ್ರವಾಸಿ ಕಂಡ ಇಂಡಿಯಾ ಸಂಪುಟ 2ರಲ್ಲಿ, ರಾಬರ್ಟ್ಸಿವೆಲ್ಲರ (1992) ಮರೆತು ಹೋದ ಮಹಾಸಾಮ್ರಾಜ್ಯ ವಿಜಯನಗರದ (ಕನ್ನಡ ಅವತರಣಿಕೆ) ಮತ್ತು ವಿವೇಕ ರೈರವರ (2005) ಪ್ರವಾಸಿ ಕಂಡ ವಿಜಯನಗರ ಗ್ರಂಥಗಳನ್ನು ಆಧರಿಸಿದೆ ಇನ್ನು ಮುಂದೆ ಕಂಡು ಬರುವ ಪ್ರವಾಸಿಗರೆಲ್ಲರ ವಿವರಣೆಗಳನ್ನು ದಾಖಲಿಸಲಾಗಿದೆ. ಆಸಕ್ತರು ಹೆಚ್ಚಿನ ವಿವರಗಳಿಗೆ ಮೂಲಗಳನ್ನು ಪರಾಮರ್ಶಿಸಬಹುದು.

39. ಕ್ಯಾಥಲೀನ್ ಡಿ ಮ್ಯಾರಿಸನ್ : 1991 : ವಿಜಯನಗರ ಮೆಟ್ರೋಪಾಲಿಟನ್ ಸರ್ವೆ - ಪ್ರಿಲಿಮಿನರಿ ಇನ್ವೆಸ್ಟಿಗೇಶನ್, ಇನ್ ವಿಜಯನಗರ ಪ್ರೋಗ್ರೆಸ್ ಆಫ್ ರೀಸರ್ಚ್.

40. ವಾಸುದೇವನ್, ಸಿ. ಎಸ್. 1997 : ಪೂರ್ವೋಕ್ತ
41. ಜೋಷಿ, ಎಸ್.ಕೆ : 1985 : ಡಿಫೆನ್ಸ್ ಆರ್ಕಿಟೆಕ್ಚರ್ ಇನ್ ಅರ್ಲಿ ಕರ್ನಾಟಕ, ದೆಹಲಿ, ಪುಟ
42. ಜೋಷಿ ಎಸ್.ಕೆ. 2005 : ವಿಜಯನಗರದ ರಕ್ಷಣಾವಾಸ್ತು ಒಂದು ಪುನರವಲೋಕನ : ವಿಜಯನಗರದ ಅಧ್ಯಯನ : ಸಂಪುಟ : 10 : ಸಂಪಾದಕರು : ಗೋಪಾಲ್ ಆರ್ ಮತ್ತು ಇತರರು, ಮೈಸೂರು, ಪುಟ : 123 - 135
43. ಜೋಷಿ ಎಸ್.ಕೆ. 1985 : ಪೂರ್ವೋಕ್ತ
44. ಅದೇ
45. ವಸುಂಧರ ಫಿಲಿಯೋಜ : 1988 : ಪೂರ್ವೋಕ್ತ
46. ನರಸಿಂಹಯ್ಯ ಬಿ : 1992 : ಪೂರ್ವೋಕ್ತ
47. ಹೆಚ್ಚಿನ ವಿವರಗಳಿಗೆ ನೋಡಿ : ನಾಗರಾಜರಾವ್, ಎಂ.ಎಸ್. ಮತ್ತು ಚೆನ್ನಬಸಪ್ಪ ಎಸ್. ಪಾಟೀಲ್ : 1685 : ಪೂರ್ವೋಕ್ತ ಮತ್ತು ಚೆನ್ನಬಸಪ್ಪ ಎಸ್. ಪಾಟೀಲ್ : 1991 : ಫರ್ದರ್ ಎಪಿಗ್ರಾಫಿಕಲ್ ರೆಫರೆನ್ಸ್ ಟು ಸಿಟಿ ಗೇಟ್ಸ್ ಅಂಡ್ ಟವರ್ಸ್ ಆಫ್ ವಿಜಯನಗರ ಇನ್ ವಿಜಯನಗರ ಪ್ರೋಗ್ರೆಸ್ ಆಫ್ ರೀಸರ್ಚ್ - 1948 - 87; ಪುಟ 191 - 198.

೨೭. ರಾಯಚೂರು ಜಿಲ್ಲೆಯಲ್ಲಿ ವಿಜಯನಗರದರಸರ ಆಳ್ವಿಕೆ

ಡಾ. ಅಮರೇಶ ಯತಗಲ್

ಕೃಷ್ಣೆ - ತುಂಗೆಯರ ಮಧ್ಯದಲ್ಲಿರುವ ರಾಯಚೂರು 'ಇರ್ದೊರೆ ನಾಡು', 'ದೊ-ಅಬ್' ಪ್ರದೇಶವೆಂದು ಹೆಸರಾಗಿದೆ. ರಾಜನೂರು, ರಾಯರ ಊರು, ಪೆರ್ಮನ ರಾಚೂರು, ರಾಚ-ವೂರು, ರಾಚೂರು ಸೀಮೆ, ಎಂಬ ನಾನಾ ಹೆಸರುಗಳಿಂದ ಕರೆಯಲ್ಪಡುತ್ತಿದ್ದ ಈ ಪ್ರದೇಶ ಕ್ರಿ.ಪೂ. 3000 ವರ್ಷಗಳ ಹಿಂದಿನ ಚರಿತ್ರೆಯನ್ನು ತನ್ನ ಮಡಿಲಲ್ಲಿರಿಸಿಕೊಂಡಿದೆ. ಶಿಲಾಯುಗದಿಂದ ಪ್ರಾರಂಭವಾಗುವ ಇಲ್ಲಿಯ ಇತಿಹಾಸ ಮೌರ್ಯರು, ಶಾತ-ವಾಹನರು, ಬನವಾಸಿ ಕದಂಬರು, ಬಾದಾಮಿಯ ಚಾಳುಕ್ಯರು, ಮೌರ್ಯರು, ಶಾತವಾಹನರು, ಬನವಾಸಿ ಕದಂಬರು, ಬಾದಾಮಿಯ ಚಾಳುಕ್ಯರು, ಮಾನ್ಯಖೇಟದ ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಕಲ್ಯಾಣದ ಕಲಚುರಿಗಳು, ಸೇವುಣರು, ಕಾಕತೀಯರು, ಯಾದವರು, ದ್ವಾರ ಸಮುದ್ರದ ಹೊಯ್ಸಳರು, ವಿಜಯನಗರದ ಅರಸರು, ಬಹಮನಿ ಸುಲ್ತಾನರು, ಬಿಜಾಪುರದ ಆದಿಲ್‌ಶಾಹಿಗಳು, ಮೊಘಲರು, ಮರಾಠರು, ಹೈದ್ರಾಬಾದ್ ನಿಜಾಮರು ಹಾಗೂ ಇಂಗ್ಲೀಷರು ಈ ನೆಲವನ್ನು ಆಳಿದ ಕುರುಹುಗಳು ನಮ್ಮ ಕಣ್ಮುಂದೆ ಇವೆ.

ವಿಜಯನಗರ ಅರಸರ ಕಾಲದಲ್ಲಿ ರಾಯಚೂರು ಬಹುಮುಖ್ಯವಾದ ಪಾತ್ರ ವಹಿಸಿರುವುದು ಕಂಡುಬರುತ್ತದೆ. ಎರಡು ನದಿಗಳ ಮಧ್ಯದ ಫಲವತ್ತಾದ ನೆಲಕ್ಕಾಗಿ, ಹಾಗೂ ರಾಯಚೂರು-ಮುದಗಲ್ ಕೋಟೆಗಳ ಸಲುವಾಗಿ ನಿರಂತರವಾಗಿ ವಿಜಯನಗರ ಹಾಗೂ ಬಹಮನಿ ಆದಿಲ್‌ಶಾಹಿಗಳ ನಡುವೆ ನಡೆದ ಹದಿಮೂರು ಯುದ್ಧಗಳು ರಾಯಚೂರು ಪ್ರದೇಶ ಒಂದು ರಣರಂಗವಾಗಿತ್ತು ಎಂಬುದನ್ನು ದೃಢಪಡಿಸುತ್ತವೆ.

14ನೇ ಶತಮಾನದಲ್ಲಿ ವಿಜಯನಗರದಲ್ಲಿ ಸಂಗಮ ವಂಶ ಅಧಿಕಾರಕ್ಕೆ ಬಂದರೆ, ಗುಲಬರ್ಗಾದಲ್ಲಿ ಬಹಮನಿ ಸುಲ್ತಾನರು ಅಧಿಕಾರಕ್ಕೆ ಬಂದರು. ಆಗ ಇವರೀರ್ವರುಗಳ ಮಧ್ಯೆ ರಾಯಚೂರು ಅನೇಕ ಕದನಗಳಿಗೆ ತಾಣವಾಯಿತು. ಇದನ್ನು ತಮ್ಮ ತಮ್ಮ ರಾಜ್ಯಕ್ಕೆ ಸೇರಿಸಿಕೊಳ್ಳಬೇಕೆಂಬ ಹಂಬಲ ಎರಡೂ ಮನೆತನಗಳಿಗಿದ್ದಿತು. ಹೀಗಾಗಿ ಇವುಗಳ ಮಧ್ಯೆ ವಿರಸವುಂಟಾಗಲು ಕಾರಣವಾಯಿತು. ಆ ಸಂದರ್ಭದಲ್ಲಿ ರಾಯಚೂರು ಮತ್ತು ಮುದಗಲ್ ಕೋಟೆಗಳು ಪ್ರತಿಷ್ಠೆಯ ಸಂಕೇತವಾಗಿದ್ದವು. ಮೊದ ಮೊದಲು ಮುದಗಲ್, ವಿಜಯನಗರದ ಪ್ರದೇಶದ ವ್ಯಾಪ್ತಿಗೆ ಸೇರಿದ್ದರೂ, ಬಹಮನಿ ಅರಸರ ಅಧೀನದಲ್ಲಿದ್ದಿತು. ಈ ಸಂದರ್ಭದಲ್ಲಿ ಬಹಮನಿ ಅರಸ ಒಂದನೇ ಮಹ್ಮದ್‌ಶಾಹನು

ವಿಜಯನಗರದ ಅರಸ ಬೊಕ್ಕಸದಿಂದ ಹಣ ಪಡೆಯಲು 300 ಜನ ಸಂಗೀತಗಾರರಿಗೆ ಪತ್ರ ನೀಡಿದನು. ಆಗ ವಿಜಯನಗರದ ಅರಸ ಒಂದನೇ ಬುಕ್ಕ (ಕ್ರಿ.ಶ. 1356-1377) ನಿಗೆ ಅವಮಾನವಾಗಿ ಕ್ರಿ.ಶ. 1366-67ರಲ್ಲಿ ಬಹಮನಿಯ ಮೇಲೆ ದಾಳಿ ಮಾಡಿದನು. ಆಗ ಮುದಗಲ್ ಬುಕ್ಕನ ವಶವಾಯಿತು.

ಈ ಯುದ್ಧವು ಬಹಮನಿ ಸೈನ್ಯಕ್ಕೆ ಅಪಾರ ಹಾನಿಯನ್ನುಂಟು ಮಾಡಿತು. ಇದರಿಂದ ಬಹಮನಿ ಮಹ್ಮದ್‌ಶಾಹನಿಗೆ ವಿಜಯನಗರದ ಮೇಲೆ ದ್ವೇಷವುಂಟಾಯಿತು. ಈ ಸೇಡನ್ನು ತೀರಿಸಿಕೊಳ್ಳಲು ಕ್ರಿ.ಶ. 1366-67ರಲ್ಲಿ ವಿಜಯನಗರದ ಮೇಲೆ ದಾಳಿ ಮಾಡಿ, ಮುದಗಲ್ ಮತ್ತು ಆದವಾನಿಯ ಹತ್ತಿರ ವಿಜಯನಗರದ ಸೈನ್ಯವನ್ನು ಜಯಿಸಿದನು. ಫೆರಿಸ್ತಾನ ಹೇಳಿಕೆಯಂತೆ "ಈ ಯುದ್ಧದಲ್ಲಿ ಗಂಡಸರು, ಹೆಂಗಸರು, ಮಕ್ಕಳು ಹೀಗೆ ಐದು ಲಕ್ಷ ಹಿಂದುಗಳು ಬಲಿಯಾದರು".[1]

ಕ್ರಿ.ಶ. 1375-76ರಲ್ಲಿ ಬುಕ್ಕನು 2000 ಸೈನ್ಯದೊಂದಿಗೆ ದೊ-ಅಬ್ ಪ್ರದೇಶದ ಮೇಲೆ ದಾಳಿ ಮಾಡಿದನು. ಆಗ ಬಹಮನಿ ಸುಲ್ತಾನ ಬುಕ್ಕನೊಂದಿಗೆ ಒಪ್ಪಂದ ಮಾಡಿಕೊಂಡನು. ಆ ಒಪ್ಪಂದದ ಪ್ರಕಾರವಾಗಿ ಬುಕ್ಕನು ಈ ಪ್ರದೇಶಕ್ಕೆ ಒಡೆಯನಾದನು. ನಂತರ ಇಮ್ಮಡಿ ಹರಿಹರ (ಕ್ರಿ.ಶ. 1377-1404)ನು ಅಧಿಕಾರಕ್ಕೆ ಬಂದಾಗ, ಈತ ಬಹಮನಿ ರಾಜ್ಯದ ವೈರತ್ವವನ್ನು ಎದುರಿಸಬೇಕಾಯಿತು. ಆಗ ಸುಲ್ತಾನ ಮುಜಾಹಿದ್ ಷಹನು ಹಿಂದಿನ ಒಪ್ಪಂದವನ್ನು ಮುರಿದನು. ಅಲ್ಲದೆ ತುಂಗಭದ್ರಾ ನದಿ ತನ್ನ ರಾಜ್ಯದ ದಕ್ಷಿಣದ ಗಡಿಯಾಗಬೇಕೆಂದು ಕ್ರಿ.ಶ. 1377ರಲ್ಲಿ ವಿಜಯನಗರದ ಮೇಲೆ ದಂಡೆತ್ತಿ ಬಂದನು. ಆಗ ಮುಜಾಹಿದ್‌ಷಹನಿಗೆ ಆದೋನಿಯಲ್ಲಿ ಸೋಲುಂಟಾಯಿತು.

ಕ್ರಿ.ಶ. 1398-99ರಲ್ಲಿ ಇಮ್ಮಡಿ ಹರಿಹರನಿಗೂ -ಬಹಮನೀಯ ಫಿರೋಜ್ ಶಹನಿಗೂ ಯುದ್ಧವಾಯಿತು. ಆಗ ಹರಿಹರನು ಸಾಗರದ ಕೋಟೆಯನ್ನು ಮುತ್ತಿದಾಗ, ಇಮ್ಮಡಿ ಹರಿಹರನ ಸೈನ್ಯವನ್ನು ಕೃಷ್ಣಾನದಿಯಿಂದ ರಾಯಚೂರು ಮಾರ್ಗವಾಗಿ, ವಿಜಯನಗರದವರೆಗೂ ಬೆನ್ನಟ್ಟಿದನು. ಪ್ರತಿ-ಫಲವಾಗಿ, ಹರಿಹರ ಬಹಮನಿ ರಾಜ್ಯಕ್ಕೆ ಕಪ್ಪ ನೀಡಲು ಒಪ್ಪಿ ಸಂಧಿ ಮಾಡಿಕೊಂಡನು.

ಕ್ರಿ.ಶ. 1406ರಲ್ಲಿ ಸುಲ್ತಾನನಾದ ಫಿರೋಜ್‌ಶಾಹನು ಒಂದನೇ ದೇವರಾಯನ ಮೇಲೆ, ದಂಡೆತ್ತಿ ಬಂದನು. ಆಗ ದೇವರಾಯ ಕೃಷ್ಣ ಮತ್ತು ತುಂಗ ಭದ್ರ ನದಿಗಳ ಮಧ್ಯದ ಪ್ರದೇಶದಲ್ಲಿ ತನ್ನ ಸೈನ್ಯವ್ನನು ಬೀಡುಬಿಟ್ಟನು. ಆಗ ಸುಲ್ತಾನ ವಿಜಯನಗರ ವನ್ನು ಆಕ್ರಮಿಸಿಕೊಳ್ಳುವುದು ಆಗಲಿಲ್ಲ. ಈ ಯುದ್ಧಕ್ಕೆ ಕಾರಣ 2ನೇ ದೇವರಾಯ ಮುದಗಲ್‌ನ ಅಕ್ಕಸಾಲಿಗನ ಮಗಳನ್ನು ಪ್ರೀತಿಸಿ, ವಿವಾಹ ಮಾಡಿಕೊಡಬೇಕೆಂದು ಕೇಳಿ ದ್ದನು. ಆಗ ಅವಳ ರಕ್ಷಣೆಗಾಗಿ ಕ್ರಿ.ಶ. 1406ರಲ್ಲಿ ಫಿರೋಜ್‌ಶಾಹನು ವಿಜಯನಗರದ ಮೇಲೆ ದಾಳಿ ಮಾಡಿ ದೇವರಾಯನನ್ನು ಸೋಲಿಸಿದನೆಂದು ಫೆರಿಸ್ತಾ ಹೇಳುತ್ತಾನೆ. ಈ

ಘಟನೆಯು ಮುದಗಲ್ ಭಾಗದಲ್ಲಿ ಜನರ ಬಾಯಲ್ಲಿ ಒಂದು ಕಥೆಯಾಗಿ ಇಂದಿಗೂ ಉಳಿದಿದೆ.

ಕ್ರಿ.ಶ. 1436ರಲ್ಲಿ ಮುದಗಲ್ ಕೋಟೆಯು 2ನೇ ದೇವರಾಯನ ಅಧೀನದಲ್ಲಿದ್ದು, ಅದು ವರದಣ್ಣನಾಯಕನ ನಾಯಕತನಕ್ಕೆ ಒಳಪಟ್ಟ ಸಂಗತಿಯನ್ನು ಮುದಗಲ್ ಕೋಟೆಯ ಮುಳ್ಳಗಸಿಯ ಶಾಸನ ಹೇಳುತ್ತದೆ.[2] ಕ್ರಿ.ಶ. 1492-93ರಲ್ಲಿ ಅಹ್ಮದ್ ನಗರದ ಖಾಸಿಂ ಬರೀದ್‌ನು, ಬಿಜಾಪುರದ ಯೂಸೂಫ್ ಆದಿಲ್‌ಖಾನನನ್ನು ಸದೆ ಬಡಿ ಯಲು ವಿಜಯನಗರದ ಅರಸ ನರಸನಾಯಕನ ಸಹಾಯ ಬೇಡಿದನು. ಇದಕ್ಕೆ ಪ್ರತಿಫಲ ವಾಗಿ, ಖಾಸಿಂ ಬರೀದ್‌ನಿಂದ ರಾಯಚೂರು ಮತ್ತು ಮುದಗಲ್‌ಗಳನ್ನು ಪಡೆದನು.

ಕೃಷ್ಣದೇವರಾಯ (ಕ್ರಿ.ಶ. 1510-1529)ನು ವಿಜಯನಗರದ ಸಿಂಹಾಸನವನ್ನೇರಿದನು. ಆಗ ಪ್ರತಿಷ್ಠೆಯ ಕೇಂದ್ರವೆಂದು ಗುರುತಿಸಲ್ಪಟ್ಟ ರಾಯಚೂರನ್ನು ಜಯಿಸ ಬೇಕೆಂಬುದು ಈತನ ಪ್ರಮುಖ ಕರ್ತವ್ಯಗಳಲ್ಲಿ ಒಂದಾಗಿತ್ತು. ಆಗ ಅದು ಬಿಜಾಪುರದ ಇಸ್ಮಾಯಿಲ್ ಆದಿಲ್‌ಶಾಹನ ಅಧೀನದಲ್ಲಿತ್ತು. ಅಲ್ಲದೇ ಈ ಆಯಕಟ್ಟಿನ ಪ್ರದೇಶಗಳು ವಿಜಯನಗರದ ರಾಜ್ಯ ರಕ್ಷಣೆಗೆ ಅವಶ್ಯವೆಂದು ತಿಳಿದನಲ್ಲದೆ, ತನ್ನ ತಂದೆ ತುಳುವ ನರಸಿಂಹನು ತನ್ನ ಅಂತ್ಯಕಾಲದಲ್ಲಿ ಬರೆದಿಟ್ಟ ಅಭಿಲಾಷೆಯನ್ನು ಪೂರೈಸಲು ಕೃಷ್ಣದೇವ ರಾಯನು ಪಣತೊಟ್ಟನು. ಆಗ ರಾಯಚೂರಿನ ಮುತ್ತಿಗೆಯ ಕುರಿತಾಗಿ ಯುದ್ಧದ ಪೂರ್ವಸಿದ್ಧತೆಯಲ್ಲಿ ನಿರತನಾದನು. ಒಂದು ವರ್ಷಕಾಲ ನೂಕಿದನು.

ಆಗ ಒಂದು ಸಮಯ ತಾನಾಗಿಯೇ ಒದಗಿ ಬಂದಿತು. ಸೈಯ್ಯದ್ ಮರ್ಕರ್ ಎಂಬ ಕುದುರೆ ವ್ಯಾಪಾರಿ ರಾಯನಿಂದ 40,000 ವರಹ ಹೊನ್ನನ್ನು ಪಡೆದು ರಾಯನಿಗೆ ಮೋಸಮಾಡಿ, ಆದಿಲ್‌ಶಾಹನ ಆಶ್ರಯ ಪಡೆದನು. ಆದಿಲ್‌ಶಾಹನು ಈತನ ರಕ್ಷಕನಾದನು. ಆಗ ಮರ್ಕರ್‌ನನ್ನು ಬಿಟ್ಟುಕೊಡಲು ಕೃಷ್ಣದೇವರಾಯ ಆದಿಲ್‌ಶಾಹನಿಗೆ ಕೇಳಿಕೊಂಡನು. ಆಗ ಆದಿಲ್‌ಶಾಹನು ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ. ಇದೇ ಸಂದರ್ಭವನ್ನು ಸದುಪಯೋಗಪಡಿಸಿಕೊಂಡ ಕೃಷ್ಣದೇವರಾಯನು ಕ್ರಿ.ಶ. 1520ರಲ್ಲಿ ರಾಯಚೂರು ಯುದ್ಧಕ್ಕೆ ಅಣಿಯಾದನು.

ಅಲ್ಲದೇ ಈ ಪ್ರಸಂಗವನ್ನು ನ್ಯೂನಿಜ್ ಹೀಗೆ ಹೇಳುತ್ತಾನೆ. "ಎರಡು ಕಡೆಯ ಪಡೆಗಳು ಕೈಯಲ್ಲಿ ಆಯುಧಧಾರಿಗಳಾಗಿ, ಹಗಲೂ ರಾತ್ರಿ ಯುದ್ಧ ಪ್ರಾರಂಭವಾಗುವುದನ್ನೇ ಕಾಯುತ್ತಿದ್ದರು. ಶುಕ್ರವಾರ ಯುದ್ಧ ಪ್ರಾರಂಭಿಸುವುದು ಸರಿಯಲ್ಲವೆಂದು ಜ್ಯೋತಿಷ್ಯರು ಹೇಳಿದ್ದರಿಂದ ಶನಿವಾರ ಪ್ರಾರಂಭಿಸಬೇಕೆಂದು ನಿರ್ಧರಿಸಿದರು. ಕೃಷ್ಣದೇವರಾಯನ ಸೇನೆಯಲ್ಲಿ ಪದಾತಿಗಳು 7 ಲಕ್ಷ, 30 ಸಾವಿರ, ರಾವುತರು 32 ಸಾವಿರ, ಮತ್ತು ಆನೆಗಳು 551 ಇದ್ದವು. ಸಾಗರೋಪಾದಿಯ ಈ ಬೃಹತ್ ಸೇನೆ ರಾಯಚೂರಿನ ಸಮೀಪಕ್ಕೆ ಬಂದು ಮಲ್ಲಾಪುರ (ಮಲಯಬಾದ) ಎಂಬ ಗ್ರಾಮದ

ಬಳಿ ಠಾಣೆ ಹೂಡಿತು. ಈ ಸಮಯಕ್ಕೆ ಮಲ್ಲಾಪುರದಲ್ಲಿ ತಂಗಲು ಕೆಲವು ಕಾರಣಗಳಿವೆ. ಈ ಸ್ಥಳ ಎಲ್ಲಾ ಕಡೆಯಿಂದ ಸುರಕ್ಷಿತವಾಗಿದೆ ಹಾಗೂ ಸೈನಿಕರು ಚಲನವಲನಗಳ ನಿಯಂತ್ರಣಕ್ಕೆ ತೊಂದರೆಯಾಗಲಾರದ್ದಾಗಿತ್ತು. ಹೀಗಾಗಿ ಇಲ್ಲಿಯೇ 13 ತಿಂಗಳುಗಳ ಕಾಲ ತಂಗಿದ್ದನು.

ಕೃಷ್ಣದೇವರಾಯನ ಪಾಳೆಯದಲ್ಲಿ ಮಹಾಪ್ರಸಿದ್ಧ ದಂಡಾಧಿಪತಿಗಳು ಅದರ ನೇತೃತ್ವವನ್ನು ವಹಿಸಿದ್ದರು. ಇವರ ಪಾಳೆಯದ ಸಂಭ್ರಮ ಸಡಗರಗಳನ್ನು ನೋಡಿದವರು ಇದು ಯುದ್ಧದ ಪ್ರಸಂಗವೇನೋ ಇಲ್ಲವೇ ಕೇವಲ ಉತ್ಸವಕ್ಕೋಸ್ಕರ ಹೂಡಿದ ಬೀಡೋ ಅಥವಾ ಇದೊಂದು ಶಾಶ್ವತವಾದ ದೊಡ್ಡ ಪಟ್ಟಣವೋ ಇರಬೇಕೆಂದು ಆಶ್ಚರ್ಯಪಡುವಂತಿತ್ತು.[3]

ಇತ್ತ ಬಿಜಾಪುರದಿಂದ ಇಸ್ಮಾಯಿಲ್ ಆದಿಲ್‌ಶಾಹ ತನ್ನ ಸೇನೆಯನ್ನು ತೆಗೆದುಕೊಂಡು ಕೃಷ್ಣಾನದಿಯ ಇನ್ನೊಂದು ದಂಡೆಯಲ್ಲಿ ಬೀಡುಬಿಟ್ಟನು. ಈತನಿಗೆ ಹೆಚ್ಚು ದಿನಗಳ ಕಾಲ ಕಾಯುವ ತಾಳ್ಮೆಯಿಲ್ಲದಂತಾಗಿ ತನ್ನ ಸಲಹೆಗಾರರ ಸಲಹೆಗಳಂತೆ ನದಿಯನ್ನು ದಾಟಿದನು. ಈ ಯುದ್ಧಕ್ಕಿಂತ ಮುಂಚಿತವಾಗಿ ಇಸ್ಮಾಯಿಲ್ ಆದಿಲ್ ಶಾಹನು ತನ್ನ ಸೈನ್ಯದ ಗಣತಿಯನ್ನು ಮಾಡಿಸಿದನು. ಇದರಲ್ಲಿ ಕಾಲಾಳುಗಳ ಸಂಖ್ಯೆ 1ಲಕ್ಷದ 20 ಸಾವಿರ, ಅಶ್ವದಳ 18,000, ಆನೆಗಳು 150 ಅವನ ಸೈನ್ಯದಲ್ಲಿದ್ದವು.[4] ಈ ಸೈನ್ಯವನ್ನೆಲ್ಲಾ ತೆಗೆದುಕೊಂಡು ಬಂದು ನದಿಯನ್ನು ದಾಟಿದನು. ತನ್ನ ಶತ್ರುಸೈನ್ಯದ ಮೇಲೆ ಬೀಳುವುದು ಇಸ್ಮಾಯಿಲ್ ಆದಿಲ್‌ಶಾಹನ ಉದ್ದೇಶವಾಗಿದ್ದಿತು. ಹೀಗಾಗಿ ಈತನು ರಾಯಚೂರನ್ನು ಗೆದ್ದೇ ತೀರುವೆನೆಂಬ ನಂಬಿಕೆಯನ್ನು ಹೊಂದಿದ್ದನು.

ಶತ್ರು ಸೈನ್ಯವು ನದಿಯನ್ನು ದಾಟಿ ಬಂದುದರಿಂದ ಕೃಷ್ಣದೇವರಾಯನು ತನ್ನ ಯುದ್ಧ ತಂತ್ರದಿಂದ ಸೈನ್ಯವನ್ನು ಏಳು ಭಾಗಗಳನ್ನಾಗಿ ವಿಭಾಗಿಸಿ, ತನ್ನ ಸೈನ್ಯವನ್ನು ಮಲ್ಲಾಪುರ, ನೀರಮಾನವಿ, ಎಂಬ ಊರುಗಳಲ್ಲಿ ನಿಯೋಜಿಸಿದನು. ತನ್ನ ಸೈನ್ಯವು ಆತುರದಿಂದ ಮುನ್ನುಗ್ಗಕೂಡದೆಂದು ಹಾಗೂ ಶತ್ರು ಸೈನ್ಯದ ಚಲನ-ವಲನವನ್ನು ಗಮನಿಸುವವರೆಗೂ ತಮ್ಮ ಸೈನ್ಯವು ಎಲ್ಲಿಗೂ ಕದಲಕೂಡದೆಂದು ತನ್ನ ಸೈನ್ಯಕ್ಕೆ ಆಜ್ಞೆ ನೀಡಿದನು. ನಂತರ ಕ್ರಿ.ಶ. 1520ಮೇ 20ನೇ ಶನಿವಾರ ವಿಜಯನಗರದ ಸೈನ್ಯ, ಬಿಜಾಪುರದ ಸೈನ್ಯದ ಮೇಲೆ ಬಿದ್ದಿತು. ಕೂಡಲೇ ಆದಿಲ್‌ಶಹನು ಫಿರಂಗಿಗಳ ದಾಳಿ ಮಾಡಿದನು. ಈ ಸಂದರ್ಭದಲ್ಲಿ ಕೃಷ್ಣದೇವರಾಯನ ಸೈನ್ಯವು ಹಿಮ್ಮೆಟ್ಟಿತು. ಆಗ ಕೃಷ್ಣದೇವರಾಯನು ಓಡುವ ತನ್ನ ಸೈನಿಕರನ್ನು ಉದ್ದೇಶಿಸಿ "ಹೇ ಹೇಡಿಗಳಿರಾ, ಎಲ್ಲಿಗೆ ಓಡುವಿರಿ! ಈ ಪ್ರಪಂಚದಲ್ಲಿ ಎಲ್ಲರೂ ಸಾಯಲೇಬೇಕು. ಯುದ್ಧದಲ್ಲಿ ಮಡಿದರೆ ವೀರಸ್ವರ್ಗ, ಆದ್ದರಿಂದ ಎಲ್ಲರೂ ನನ್ನೊಡನೆ ಬನ್ನಿ, ಹೇಡಿಗಳಾಗಬೇಡಿರಿ"[5] ಎಂದನು. ಕೃಷ್ಣದೇವರಾಯನು ತನ್ನ ಬೆರಳಿನಿಂದ ಒಂದು ಉಂಗುರವನ್ನು ಬಿಚ್ಚಿ ತನ್ನ ಸೇವಕ

ನೊಬ್ಬನಿಗೆ ಕೊಟ್ಟು, ತಾನು ಸತ್ತರೆ ಅದನ್ನು ತನ್ನ ರಾಣಿಯರಿಗೆ ತೋರಿಸಬೇಕೆಂದೂ ಅದನ್ನು ನೋಡಿ ಅವರು ಚಿತೆಯೇರುವರೆಂದೂ ಹೇಳುತ್ತಾನೆ.

ಪೋರ್ಚುಗೀಸ್ ಪ್ರವಾಸಿ ಡೊಮಿಂಗೋ ಪಾಯಿಸಾನು ಈ ಯುದ್ಧದ ಮಾಹಿತಿ ಯನ್ನು ನೀಡುವುದು ಹೀಗೆ 'ಕೋಟೆಯ ಹತ್ತಿರಹೋದ ಸೈನಿಕರೆಲ್ಲ ಅಪಾರ ಸಂಖ್ಯೆಯಲ್ಲಿ ಸಾಯುತ್ತಿದ್ದರು. ಯುದ್ಧ ತಂತ್ರಹಾಗೂ ಹಣದಾಸೆಯಿಂದಲಾದರೂ ಕೋಟೆಯನ್ನು ಜಯಿಸಬೇಕೆಂದು ನಿರ್ಧರಿಸಿದ ವಿಜಯನಗರದ ದಳಪತಿಗಳು ಕೋಟೆಯ ಕಲ್ಲನ್ನು ಕಿತ್ತು ತಂದ ಸೈನಿಕರಿಗೆ ಒಂದೊಂದು ಕಲ್ಲಿಗೆ ಕಲ್ಲಿನ ಗಾತ್ರಕ್ಕನುಗುಣವಾಗಿ 10, 20, 30 ಮತ್ತು 40 ಫಣಮ್‌ಗಳನ್ನು ಕೊಡುವುದಾಗಿ ಹೇಳಿದರು. ಈಗ ಹಣದ ಆಸೆಗಾಗಿ ಸೈನಿಕರು ಜೀವದ ಹಂಗು ತೊರೆದು ಕೋಟೆಯ ಕಲ್ಲುಗಳನ್ನು ಕಿತ್ತು ತರಲಾರಂಭಿಸಿದರು. ಅದೇ ರೀತಿ ಕೋಟೆ ಹತ್ತಿರ ಬಿದ್ದಿದ್ದ ಹೆಣಗಳನ್ನು ಹೊರಕ್ಕೆ ಎಳೆದು ತಂದರೆ ಅದಕ್ಕೂ ಹಣ ವನ್ನು ಕೊಟ್ಟರು. ಹೀಗೆ ಕೋಟೆಯ ಕೆಲವು ಭಾಗಗಳನ್ನು ಬೀಳಿಸಿ ಒಳ ನುಗ್ಗಲು ಸಾಧ್ಯ ವಾಯಿತು.[6]

ಅಷ್ಟರಲ್ಲಿಯೇ ಕುದುರೆಯ ವ್ಯಾಪಾರಿಯೂ ಹಾಗೂ ಪೋರ್ಚುಗೀಸ್ ವೀರನೂ ಆದ ಕ್ರಿಸ್ತಾವ್-ದ- ಫಿಗ್ವೆರೆಡೋ ಕೃಷ್ಣದೇವರಾಯನಿಗೆ ಸಹಾಯಕನಾಗಿ ಬಂದನು. ಇವನು ರಾಯನಿಂದ ಬೀಳ್ಕೊಂಡ ಮೇಲೆ ರಾಯಚೂರು ಕೋಟೆಯನ್ನು ಸುತ್ತಿ ಬರುತ್ತಿದ್ದನು. ಇವನೂ ಇವನ ಅನುಯಾಯಿಗಳು ಕೋಟೆಯ ಮೇಲಿದ್ದ ಕಾವಲುಗಾರರು ಮೈಮರೆ ತಿದ್ದುದ್ದನ್ನು ನೋಡಿ ತಮ್ಮಗಳ ತುಪಾಕಿಯಿಂದ ಗುರಿಯಿಟ್ಟು, ಸಾಲುಸಾಲಾಗಿ ಶತ್ರು ಗಳನ್ನು ಕೆಡವ ತೊಡಗಿದರು. ಕಾವಲುಗಾರರು ಹೆದರಿ ಕೋಟೆಯೊಳಕ್ಕೆ ಓಡಿ ಹೋದರು. ದುರ್ಗಪಾಲನು ಧೈರ್ಯದಿಂದ ಶತ್ರುಗಳನ್ನೆದುರಿಸಿದರೂ ವಿಜಯನಗರದವರ ಒಂದು ಗುಂಡಿನ ಹೊಡೆತಕ್ಕೆ ಬಲಿಯಾದನು.

ವಿಜಯನಗರದ ಸೈನ್ಯವು ಉತ್ಸಾಹದಿಂದ ಮುನ್ನುಗ್ಗುವಲ್ಲಿ ಯಶಸ್ವಿಯಾಯಿತು. ಇವರ ಹೊಡೆತವನ್ನು ತಾಳಲಾರದೆ, ಬಿಜಾಪುರದ ಸೈನ್ಯ ಪಲಾಯನ ಮಾಡಿತು. ಅನೇಕ ಸೈನಿಕರು ವಿಜಯನಗರದ ಸೈನ್ಯದ ಹೊಡೆತಕ್ಕೆ ಬಲಿಯಾದರು. ಆದಿಲ್‌ಶಾಹನು ಪರಾ ಜಯದಿಂದ ಓಡಿ ಹೋಗಿ, ಆತ್ಮ ರಕ್ಷಣೆಯನ್ನು ಮಾಡಿಕೊಂಡನು. ಅವನ ಶಿಬಿರದಲ್ಲಿದ್ದ ಅಪಾರವಾದ ಸಾಮಗ್ರಿಗಳು ಕೃಷ್ಣದೇವರಾಯನ ವಶವಾದವು. 4000 ಕುದುರೆಗಳು, 100 ಆನೆಗಳು, 400 ಫಿರಂಗಿಗಳು, ಐವರು ಮುಖ್ಯ ಸೇನಾಧಿಪತಿಗಳು, ಸಾವಿರಾರು ಸೈನಿಕರು ಕೃಷ್ಣದೇವರಾಯನ ಕೈಸೆರೆಯಾದರು. ಸಂಪೂರ್ಣವಾಗಿ ರಾಯಚೂರು ಕೋಟೆಯು ಕೃಷ್ಣದೇವರಾಯನ ವಶವಾಯಿತು.

ಬಿಜಾಪುರದ ಇಸ್ಮಾಯಿಲ್ ಆದಿಲ್‌ಶಹನನ್ನು ಕೃಷ್ಣದೇವರಾಯನು ರಾಯಚೂರು ಕದನದಲ್ಲಿ ಪರಾಜಿತನನನಾಗಿ ಮಾಡಿದ ಮೇಲೆ, ಅವನ ಸೈನಿಕರು ಮಾಡಿದ ಸುಲಿಗೆಯನ್ನು

ನ್ಯೂನಿಜ್ ವರ್ಣಿಸುವುದು ಹೀಗೆ "ರಾಯಚೂರು ಯುದ್ಧದ ನಂತರ, ಕೊಳ್ಳೆ ಹೊಡೆಯುವ ಕೆಲಸ ಪ್ರಾರಂಭವಾಯಿತು. ರಾಯನಿಗೆ 4 ಸಾವಿರ ಕುದುರೆಗಳು, 100 ಆನೆಗಳು, 400 ಭಾರಿ ಫಿರಂಗಿಗಳೂ ಇವನ್ನು ಹೋರುವ 900 ಗಾಡಿಗಳು, ಅನೇಕ ಗುಡಾರ - ಢೇರೆಗಳೂ ಸಿಕ್ಕಿದುವು. ಇವುಗಳಲ್ಲದೆ ಸಣ್ಣ ಪುಟ್ಟ ಕುದುರೆಗಳು, ಎತ್ತು ಕತ್ತೆಗಳು, ಗಂಡುಗಳು, ಹೆಣ್ಣುಗಳು, ಮಕ್ಕಳು ಎಷ್ಟೋ?'[7]

ಇನ್ನೊಂದೆಡೆ ಕೃಷ್ಣದೇವರಾಯನು ತನ್ನ ಸೈನಿಕರುಗಳಿಗೆ ಕೊಲೆ -ಸುಲಿಗೆ, ಲೂಟಿಗಳನ್ನು ನಡೆಸದಂತೆ - ಸೂಚನೆ ನೀಡಿದನು. ಆದರೂ ಸಹಿತ ಆತನಿಗೆ ಗೊತ್ತಿಲ್ಲದಂತೆ ನಡದೇ ಇದ್ದವು. ಕೊನೆಗೆ ಆತ ಕಟ್ಟಾಜ್ಞೆಯನ್ನು ಮಾಡಿದನು.

ವಿಜಯನಗರಕ್ಕೆ ರಾಯಚೂರು ದಂಡಯಾತ್ರೆ ಗೆಲುವನ್ನು ತಂದುಕೊಟ್ಟರೂ, ಭವಿಷ್ಯದಲ್ಲಿ ಕೆಟ್ಟ ಪರಿಣಾಮವನ್ನುಂಟು ಮಾಡಿತು. ಆದರೆ ಕೃಷ್ಣದೇವರಾಯನ ಸಾಮ್ರಾಜ್ಯ ವಿಸ್ತರಣಾ ನೀತಿಯು ಷಾಹಿ ಸುಲ್ತಾನರಲ್ಲಿ ಆಘಾತವನ್ನುಂಟು ಮಾಡಿತು. ಬೀದರ್, ಬೀರಾರ್, ಗೋಲ್ಕೊಂಡ ಹಾಗೂ ಅಹ್ಮದನಗರದ ಸುಲ್ತಾನರುಗಳು ವಿಜಯನಗರದೊಂದಿಗೆ ಸಂಧಾನವನ್ನು ಬೆಳೆಸಿಕೊಳ್ಳಲು, ದೂತರೊಂದಿಗೆ ಪತ್ರವೊಂದನ್ನು ಕಳುಹಿಸಿದರು. ಇದಕ್ಕೆ ಪ್ರಮುಖ ಕಾರಣವೆಂದರೆ ಬಿಜಾಪುರದ ಸುಲ್ತಾನ ರಾಯಚೂರು ಯುದ್ಧದಲ್ಲಿ ಸೋತಿರುವುದೇ ಇವರ ಮೇಲೆ ಪರಿಣಾಮ ಬೀರಿತು.

ಕೃಷ್ಣದೇವರಾಯ ವಿಜಯದ ಸಂಕೇತವಾಗಿ ರಾಯಚೂರು ಕೋಟೆಯ ಉತ್ತರ ದ್ವಾರವನ್ನು ನಿರ್ಮಿಸಿದ್ದಾನೆ. ಅಲ್ಲದೇ ಹೊರ ಕೋಟೆಯ ಮಹಾದ್ವಾರದಲ್ಲಿಯ ಸುಂದರ ಶಿಲ್ಪಗಳನ್ನು ಅವಲೋಕಿಸಿದಾಗ, ಇವು ಆಂಧ್ರದ ಅನಂತಪುರ ಜಿಲ್ಲೆಯ ಗೋರಂಟ್ಲು ಗ್ರಾಮದ ಅಮ್ಮವಾರಿ ದೇವಸ್ಥಾದ ದ್ವಾರದಲ್ಲಿರುವ ವೇಣುಗೋಪಾಲ, ಕಾಳಿಂಗ ಮರ್ದನ, ಅನಂತಶಯನ, ವಿಷ್ಣು, ಶ್ರೀಕೃಷ್ಣಲೀಲಾ ದೃಶ್ಯಗಳು ಇವೆ.ಇವು ರಾಯಚೂರಿನ ಹೊರಕೋಟೆಯ ನವರಂಗ ದರವಾಜದಲ್ಲಿರುವ ಶಿಲ್ಪಗಳನ್ನೇ ಹೋಲುತ್ತವೆ. ಅಲ್ಲದೇ ಕೆಲ ವಿದ್ವಾಂಸರು, ಹಂಪೆಯ ಹಜಾರರಾಮ ದೇವಸ್ಥಾನ ಹಾಗೂ ಮಹಾನವಮಿ ದಿಬ್ಬದ ಮೇಲಿನ ಸಿಂಹಾಸನೂರೂಢ ಅರಸರ ಸನ್ನಿವೇಶಗಳು ಈ ನವರಂಗ ದರ್ವಾಜದ ಅರಸರ ಶಿಲ್ಪಗಳಿಗೆ ಹೋಲುತ್ತವೆ ಎಂದು ಅಭಿಪ್ರಾಯ ಪಡುತ್ತಿರುವುದರಿಂದ ಕೃಷ್ಣದೇವರಾಯನೇ ತನ್ನ ವಿಜಯದ ಸ್ಮರಣೆಗಾಗಿ ಈ ಮಹಾದ್ವಾರವನ್ನು ನಿರ್ಮಿಸಿರಬಹುದಾಗಿದೆ. [8]

ರಾಯಚೂರು ಜಿಲ್ಲೆಯಲ್ಲಿರುವ ವಿಜಯನಗರದ ಕಾಲದ ಅನೇಕ - ಶಾಸನಗಳು, ಆ ಅರಸರು ನೀಡಿದ ದಾನ-ದತ್ತಿಗಳ ಕುರಿತಾಗಿ ಮಾಹಿತಿಯನ್ನು ನೀಡುತ್ತವೆ. ಮಾನವಿ ತಾಲ್ಲೂಕಿನ ಚಿಕಲಪರವಿಯ ಕ್ರಿ.ಶ. 1521ರ ಶಾಸನವು 'ಮಾನುವೆ, ಹಾನಗಲ್ಲು, ಆಲಂಪೂರು, ರಾಯಚೂರು ಮಾಗಡೆ ದುರ್ಗಗಳನ್ನು ಕೃಷ್ಣದೇವರಾಯ ಜಯಿಸಿ,

ತೀರ್ಥಯಾತ್ರೆಗೆಂದು, ಕೃಷ್ಣ ಮತ್ತು ಭೀಮಾನದಿಯ ಸಂಗಮ ಕ್ಷೇತ್ರವೆನಿಸಿದ ಕಾಡ್ಲೂರಿಗೆ ತೆರಳಿ, ಅಲ್ಲಿ ತನ್ನ ಪತ್ನಿ ಚಿನ್ನಾದೇವಿಯ ಕೈಯಿಂದ ಗೋದಾನವನ್ನು, ತಿರುಮಲ ದೇವಿಯ ಕೈಯಿಂದ ಭೂದಾನ, ಹಿರಣ್ಯದಾನವನ್ನು ನೀಡಿ ಚಿಕಲಪರವಿಯನ್ನು ತಿರುವೆಂಗಳನಾಥ ದೇವರಿಗೆ ದಾನ ನೀಡಿದರೆ, (A.R.N. B.522 of 1961-62, I.K. IV.No. - 288) ಸಿದ್ದರಾಮಪುರದ ಕ್ರಿ.ಶ.1523ರ ಶಾಸನದಲ್ಲಿ ರವುಡಕುಂದಿಯ ಸೇನ ಭೋವ, ಸೋಮರಸ ಮತ್ತು ಅವನ ಮಕ್ಕಳಾದ ಸಿಂಗರಸ, ಸೋಮರಸ ಮತ್ತು ನಾಗರಸರುಗಳು ತಮ್ಮ ಮಾತಾ - ಪಿತೃಗಳಿಗೆ ಪುಣ್ಯಲಭಿಸಲೆಂದು ವಿರೂಪಾಕ್ಷ, ವಿಠಲದೇವರಿಗೆ ಅವರವಟ್ಟಿಗೆ ಕಟ್ಟಿಸಿದರು. ಸಿಂಧನೂರು ತಾಲ್ಲೂಕಿನ ಸಾಲಗುಂದೆಯ ಕ್ರಿ.ಶ. 1528ರ ಶಾಸನದಲ್ಲಿ ಕೃಷ್ಣದೇವರಾಯನು. ಅಬ್ಬರಾಮ ಅಯ್ಯನ ಕುದುರೆಯ ನಾಯಕತನಕ್ಕೆ ರವುಡಕುಂದಿಯ ಸೀಮೆಯನ್ನು ಉಂಬಳಿ ನೀಡಿದ್ದನು ಎಂದು ಹೇಳುತ್ತದೆ. (A.R. N. B- 108) of 1985-86. I.K. III - No - 308)

ಕ್ರಿ.ಶ. 1530ರಲ್ಲಿ ಪಟ್ಟಕ್ಕೆ ಬಂದ ಅಚ್ಯುತದೇವರಾಯನ ಕುರಿತಾದ ಮಸ್ಕಿಯ ಪ್ರವಾಸ ಮಂದಿರದ ಮುಂದಿರುವ 7ನೇ ಶಾಸನವು ಮಸ್ಕಿ ಪ್ರದೇಶದಲ್ಲಿದ್ದ ಈ ಭಾಗ ಕ್ರಿ.ಶ. 1537ರಲ್ಲಿ ಅಚ್ಯುತದೇವರಾಯನ ಸಾಮಂತ - ಗುಜ್ಜಲ ಗಮ್ಮಡಿ ಮೆದಿನಿ ರಾಯನು ಆಳುತ್ತಿದ್ದನು. ಈತ ತನ್ನ ಕೈ ಕೆಳಗಿನ ಮಸ್ಕಿಯ ಮೂಲದೇವಸ್ಥಾನದ ದೇವರಾದ ಮಲ್ಲಿಕಾರ್ಜುನನಿಗೆ ಭೂದಾನ ಕೊಟ್ಟ ವಿಷಯವನ್ನು ಇದು ತಿಳಿಸುತ್ತದೆ. ಅಲ್ಲದೇ ಯೆರೆಯಹೆಲನ ಗ್ರಾಮದಲ್ಲಿ ಇಕ್ಕಳ ಭೂಮಿಯನ್ನು ದಾನವಾಗಿ ನೀಡಲಾಗಿದೆ. ಮೊಸಗೆಯನ್ನು ಗುಜ್ಜಲ ಮೇದಿನಿರಾಯನಿಗೆ ಅಮರನಾಯಕತನಕ್ಕೆ ವಿಜಯನಗರದ ಅರಸರು ಕೊಟ್ಟಿದ್ದರು.

ಅದೇ ಪ್ರವಾಸಿ ಮಂದಿರದ ಮುಂದಿನ 8ನೇ ಶಾಸನ (A.P.GAS Vol No. 11, I.K. N. No. -113) ವು. ಇಮ್ಮಡಿ ಮೇದಿನಿರಾಯನು ನತ್ನ ಕೈ ಕೆಳಗಿನ ಮೊಸಗೆ ಸೀಮೆಗೆ ಸೇರಿದ್ದ ತಿದಗಿ ಬಾವಿಯೆಂಬ ಗ್ರಾಮವನ್ನು ಅಲ್ಲಿಯ ದೇವರಿಗೆ ಅಮೃತ-ಪಡಿಗಾಗಿ ಭೂದಾನವನ್ನು ನೀಡುತ್ತಾನೆ, ಅಲ್ಲದೆ ಈ ಮೊಸಗೆಗೆ ಸೇರಿದ ಹಲವು ಗ್ರಾಮಗಳನ್ನು ಹಂಪೆಯಲ್ಲಿದ್ದ ರುದ್ರಪಾದ ಮಠಪತಿ ಒಡೆಯರಿಗೆ ಕೊಟ್ಟ ವಿವರವಿದೆ. (APGAS. Vol. IX. No. 10, I.K. IV - No 112)

ಮಸ್ಕಿಯ ಸಮೀಪದ ಸುಲ್ತಾನಪುರದ ಹನುಮಂತದೇವರ ಗುಡಿಯ ಮುಂದಿನ ಶಾಸನದ ಪ್ರಕಾರ ಇಮ್ಮಡಿ ಮೇದಿನಿರಾಯನು ಮಸ್ಕಿಯ ಮಲ್ಲಯ್ಯ ಚಿಕ್ಕ ಮಲ್ಲಯ್ಯ ಮತ್ತು ಅನಂತಯ್ಯನಿಗೆ ಮಸ್ಕಿಯ ಸೀಮೆಯಲ್ಲಿ ಬರುವ ಉದ್ದಂಡ ಮೇದಿನಿಪುರವನ್ನು ಅಮರನಾಥ ದೇವರಿಗೆ ದಾನ ಬಿಟ್ಟಿರುವನು. (A.R. No. B - 717, of 1958-59, I.K. · IV. No. 234)

ಮಾನವೀಯ ಜೀನಗಾರ ಬಂಡೆ ದಿಬ್ಬದ ಹತ್ತಿರದ ಬಂಡೆಯ ಮೇಲಿನ ಶಾಸನ ವಿಜಯನಗರದ ಅರಸ ಸದಾಶಿವರಾಯ (ಕ್ರಿ.ಶ. 1542-1550)ನ ಕಾಲದ್ದಾಗಿದೆ. ಈತನ ಮಹಾಮಂಡಳೇಶ್ವರನಾಗಿದ್ದ ರಾಮರಾಯದೇವನೆಂಬುವನು ಸದಾಶಿವರಾಯನಿಗೆ ಪುಣ್ಯವಾಗಲೆಂದು ನಾಯಿಂದರ ತಿಂಮ್ಮೋಜ, ಕೊಂಡೋಜ, ಮತ್ತುಭದ್ರೋಜರ ವಿನಂತಿಯ ಮೇರೆಗೆ 'ರಾಚೂರು' ಸೀಮೆಗೆ ನಾವಿಂದ ಸುಂಕವನ್ನು ದಾನಬಿಟ್ಟಂತೆ ಹೇಳಿದೆ.[9]

ಮುದಗಲ್‌ನ ಮುಳ್ಳಗಸಿ ಎಂದು ಕರೆಯಲ್ಪಡುವ ಅಗಸಿ ಮಂಟಪದ ಎಡಗೋಡೆ ಯಲ್ಲಿರುವ ಕ್ರಿ.ಶ. 1560ರ ಶಾಸನವು ರಾಜರಾಜನ್ಯಯಾಭರಣ ಮುಂತಾದ ವಿಶೇಷಣ ಗಳನ್ನು ಧರಿಸಿದ್ದ ಅಳಿಯ ರಾಮರಾಜನ ಮಗನಾದ ಕೃಷ್ಣಪ್ಪ ರಾಜದೇವನ ಸೇವಕನಾದ ರಣರಂಗಧೀರನಾದ ವೆಂಗಳಪ್ಪ ನಾಯಕನು ಮೊಗಸಾಲೆಯನ್ನು ಕಟ್ಟಿಸಿದುದರ ಕುರಿತಾದ ಉಲ್ಲೇಖವಿದೆ. (APGAS XV, RAC 26; I.K. IV - No - 116)

ಅಳಿಯ ರಾಮರಾಜನ ಮಗನೆಂದು ಹೇಳಿಕೊಂಡಿರುವ ಕೃಷ್ಣರಾಜಪ್ಪ ದೇವನು ಮುದಗಲ್‌ನ ಹನುಮಂತನ ಕೊತ್ತಳವನ್ನು ಕಟ್ಟಿಸಿದ ಉಲ್ಲೇಖವಿದೆ (I.K. IV - No 183) ಮುಗ್ಗಗಸಿಯ ಉತ್ತರಕ್ಕಿರುವ ಒಳಕೋಟೆಯಲ್ಲಿಯ ಕೊತ್ತಳದ ಶಾಸನ ಉದಯಗಿರಿ ಬಸವ ರಾಜನು ಕಟ್ಟಿಸಿದಂತೆ - ಉಲ್ಲೇಖವಿದೆ. (I.K. No. - 119) ಸಾಳುವ ತಿಮ್ಮಯ್ಯ ಮುದಗಲ್ ಒಳಕೋಟೆಯಲ್ಲಿಯ ಒಂದು ಕೊತ್ತಳವನ್ನು ಹಾಗೂ ಮುದ ಗಲ್ ಕೋಟೆಯ ಒಳಭಾಗವನ್ನು ಕಟ್ಟಿಸಿದ ಉಲ್ಲೇಖವಿದೆ (I.K. No. 120 and 121)

ಸಿಂಧನೂರು ತಾಲ್ಲೂಕಿನ ಸಾಲಗುಂದೆ ಗ್ರಾಮದ ಮೊಬಮ್ಮನ ಮನೆಯ ಸಮೀಪ ಚಿಕ್ಕಗುಡ್ಡದ ಬಂಡೆಯಲ್ಲಿನ ಶಾಸನ (A.R. No. B - 108 of 1985-86, I.K. III, No. 308) ಹೇಳುವಂತೆ, 'ಕೃಷ್ಣಪ್ಪರಾಜನು ರಾಜ್ಯವಾಳುತ್ತಿರುವಾಗ, ರವುಡಕುಂದೆಯ ಸೀಮೆಯ ಸಾಲಗುಂದಿ ಗ್ರಾಮವು ಅಬ್ಬರಾವು ಅಯ್ಯನ, ಕುದುರೆಯ ನಾಯಕತನಕ್ಕೆ ಸೇರಿತ್ತು. ಆ ಗ್ರಾಮದ ಪಶ್ಚಿಮಕ್ಕೆ ಕಟ್ಟಿರುವ ಕರಿಯಕೆರೆಯ ಕೆಳಗೆ ಎರಡು ಕುಳಗ ಭೂಮಿಯನ್ನು ಅಬ್ಬರಾವು ಅಯ್ಯನಿಗೆ ಪುಣ್ಯವಾಗಲೆಂದು[10] ಅವನ ಅಳಿಯನು ರವುಡಗುಂದಿಯಲ್ಲಿದ್ದ ತಿರುಮಲದೇವರಿಗೆ ದಾನವನ್ನು ನೀಡುತ್ತಾನೆ.

ಹೀಗೆ ರಾಯಚೂರು ಪ್ರದೇಶದಲ್ಲಿ ವಿಜಯನಗರದ ಅರಸರು ಕ್ರಿ.ಶ. 1366 ಒಂದನೇ ಬುಕ್ಕನಿಂದ ಕ್ರಿ.ಶ. 1565ರ ತಾಳೀಕೋಟೆ ಕದನದವರೆಗೆ ಆಳ್ವಿಕೆಯನ್ನು ಮಾಡಿದವರಾಗಿದ್ದಾರೆ. ತಾಳೀಕೋಟೆ ಯುದ್ಧದ ನಂತರ ಇದು ಬಿಜಾಪುರ ಅರಸರ ವಶವಾಯಿತು.

ಟಿಪ್ಪಣಿಗಳು

1. Desai, P.B. Srinivas Ritti, B.R. Gopal - A History of Karnataka, 1981, pp 353- 354.
2. ARIE 1953-54, No. - B - 254, HAS 18, No-18 & APGAS -N0-15, Raichur Dist - pp 206
3. Sewell Robert - A Forgotten Empire, 1988 pp - 317-318,
4. Sewell Robert ಪೂರ್ವೋಕ್ತ ಪುಟ - 320
5. ನಾಗೇಗೌಡ ಎಚ್.ಎಲ್. (ಸಂ) ಪ್ರವಾಸಿ ಕಂಡ ಇಂಡಿಯಾ ಸಂಪುಟ - 2 ಪುಟ 400-401
6. Sewell Robert ಪೂರ್ವೋಕ್ತ ಪುಟ 330
7. ನಾಗೇಗೌಡ ಎಚ್.ಎಲ್. (ಸಂ) ಪೂರ್ವೋಕ್ತ ಪುಟ 401-402
8. ಎಂ.ಎಲ್. ಶಿವಶಂಕರ, ಚನ್ನಬಸಪ್ಪ ಎಸ್. ಪಾಟೀಲ್; ವಿಜಯನಗರ ಅಧ್ಯಯನ ಸಂಪುಟ - 3, ಪುಟ 50-51
9. ದೇವರ ಕೊಂಡಾರೆಡ್ಡಿ (ಸಂ)ಕನ್ನಡ ವಿಶ್ವವಿದ್ಯಾನಿಲಯ ಶಾಸನ ಸಂಪುಟ - 7, ರಾಯಚೂರು ಜಿಲ್ಲೆ, 1998 ಪುಟ 232
10. ಅದೇ ಪುಟ 348

೨೮. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಜಯನಗರದ ಆಡಳಿತ

ಡಾ. ಚೆನ್ನಕ್ಕ ಪಾವಟೆ

[ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಜಯಗರದ ಇತಿಹಾಸ (೧೩೩೬-೧೭೪೫)ರವರೆಗೆ ಅತ್ಯಂತ ಮಹತ್ವದ ಅಧ್ಯಾಯ. ದಿವ್ಯಪರಂಪರೆಯೊಂದನ್ನು ಜತನದಿಂದ ಕಾಯ್ದು ಕೊಂಡು ಬಂದ ಅಪೂರ್ವ ಕಾಲವದು. ಸುಮಾರು ೪೦೦ ವರ್ಷಗಳ ಆಳ್ವಿಕೆಯಲ್ಲಿ ನಾಲ್ಕು ವಿಜಯನಗರದ ಅರಸು ಮನೆತನಗಳು ತಮ್ಮ ಇತಿಹಾಸವನ್ನು ಬೆಸೆದು ಕೊಂಡಿದ್ದರೆ, ವಿಜಯನಗರ ಸಾಮ್ರಾಜ್ಯ ಇತಿಹಾಸ ಆಡಳಿತ ಮಹತ್ವದ ಆಕಾಂಕ್ಷೆ ಚಲ್ಲುವರಿದ ಸಂದರ್ಭವದು. ಅವರ ಸಾಮ್ರಾಜ್ಯದ ವಿಶಾಲವ್ಯಾಪ್ತಿ ಪ್ರದೇಶದಲ್ಲಿ ಸುಮಾರು ಇಲ್ಲಿಯವರೆಗೆ ದೊರೆತ ಶಾಸನಗಳು ಸುಮಾರು ಆರು ಸಾವಿರ ದಕ್ಷಿಣ ಭಾರತದಲ್ಲಿ ಲಭ್ಯವಿದ್ದು, ಅವುಗಳಲ್ಲಿ ೨೫೦೦ ಶಾಸನಗಳು ಕರ್ನಾಟಕದ ಉತ್ತರ ದಕ್ಷಿಣ ಗಡಿ ಭಾಗದಲ್ಲಿ ದೊರೆತ ಬಗ್ಗೆ ಇತ್ತೀಚಿನ ವರದಿಗಳಿಂದ ತಿಳಿದು ಬರುವ ವಿಷಯ.]

ಸ್ವತಂತ್ರ ಅಧಿಕಾರ

ಹಂಪೆ ಮತ್ತು ವಿಜಯನಗರ ಚರಿತ್ರೆಯ ಬಗ್ಗೆ ಇಲ್ಲಿಯವರೆಗೆ ಅನೇಕ ನೂತನ ಅಧ್ಯಾಯಗಳು, ಮಹತ್ವದ ಘಟನೆಗಳೊಂದಿಗೆ ಬೆಳಕುಗೊಂಡಿವೆ. ವಿಜಯನಗರ ಸಾಮ್ರಾಜ್ಯದ ಆಡಳಿತ ಕಾಲದಲ್ಲಿ ಅಲ್ಲಲ್ಲಿಯ ರಾಜಮನೆತಗಳು ಅವರ ಆಡಳಿತ ವ್ಯವಸ್ಥೆ, ಧಾರ್ಮಿಕ ಸಾಮಾಜಿಕ ಸ್ಥಿತಿಗತಿಗಳು ಕಲೆ, ಸಾಹಿತ್ಯ, ಶಿಲ್ಪ, ವಾಸ್ತುಶಿಲ್ಪ ಇವೇ ಮೊದಲಾದ ವಿಷಯಗಳ ಬಗೆಗೆ ಐತಿಹಾಸಿಕ ದೃಷ್ಟಿಕೋನ, ಅಷ್ಟೇ ಮಹತ್ವದ ಅಧ್ಯಾಯ ಪ್ರಸ್ತುತಗೊಂಡಿದೆ. ಆದರೆ, ದಕ್ಷಿಣ ಕನ್ನಡ ಜಿಲ್ಲೆಯ ವಿಜಯನಗರದ ಪ್ರಾಚ್ಯ ದಾಖಲೆ ಗಳನ್ನು ಕುರಿತ ಸಂಶೋಧನಾತ್ಮಕ ಅಧ್ಯಯನ ಇನ್ನೂವರೆಗೆ ಆಗಿಲ್ಲ. ಈ ರೀತಿ ಬೇರೆ ಬೇರೆ ಭಾಗಗಳಲ್ಲಿ ವಿಜಯನಗರ ಸಂಬಂಧಗಳನ್ನು ಗುರುತಿಸುವುದಾದರೆ, ಈಗಿದ್ದ ವಿಜಯನಗರದ ಇತಿಹಾಸ ನೂತನ ಅಧ್ಯಾಯವನ್ನೇ ಪ್ರಾರಂಭಿಸಬೇಕಾಗುವುದು. ಸಾಮ್ರಾ ಜ್ಯದ ಪ್ರಾಚ್ಯ ದಾಖಲೆಗಳು ದಕ್ಷಿಣ ಕನ್ನಡ ಜಿಲ್ಲೆಯ ದೊರೆಗಳೊಂದಿಗೆ ಸಾಂಸ್ಕೃತಿಕ ಸಂಬಂಧ ಗಳಿಸಿಕೊಂಡಿರುವ ಬಗ್ಗೆ ಒಂದು ರೋಚಕ ಇತಿಹಾಸ ಪ್ರಸ್ತುತ ಪ್ರಬಂಧದಲ್ಲಿ ಮೂಡಿ ಬರಲಿದೆ.

ಕ್ರಿ.ಶ. ೧೪ನೆಯ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ ಉದಯದ ಪೂರ್ವಕಾಲದಲ್ಲಿ ಸ್ವತಂತ್ರವಾಗಿದ್ದ ಚಿಕ್ಕ ಪುಟ್ಟ ಅರಸು ಮನೆತನಗಳು ಈ ಜಿಲ್ಲೆಗೆ ಇಂಗ್ಲೀಷ್ ಮತ್ತು ವಿದೇಶಿಯರ ಆಗಮನದ ತನಕ ಹೆಚ್ಚುಕಡಿಮೆ ಸ್ವತಂತ್ರವೇ ಆಗಿದ್ದವು. ಅಂದರೆ ತಮ್ಮ ಅಧಿರಾಜರಿಗೆ ಕಪ್ಪವನ್ನು ಪಾವತಿಸುತ್ತಿದ್ದ ಅರಸರು ತಮ್ಮ ರಾಜ್ಯದ ಆಂತರಿಕ ಆಡಳಿತದಲ್ಲಿ ಸ್ವತಂತ್ರರೇ ಆಗಿದ್ದರು. ವಿಜಯನಗರದ ಕೈವಶ ವಾಗಲಾದರೂ ತುಳುನಾಡನ್ನು ಅಥವಾ ದಕ್ಷಿಣ ಕನ್ನಡ ಜಿಲ್ಲೆಯನ್ನು ಅದರ ನೇರ ಆಡಳಿತ ಕೈ ಕೆಳಗೆ ತರುವ ಯಾವುದೇ ಪ್ರಯತ್ನಕ್ಕೆ ಅಲ್ಲಿಯ ಅರಸರು ಮುಂದಾಗಲಿಲ್ಲ. ಬದಲಿಗೆ ಈ ಪ್ರಾಂತ್ಯವನ್ನು ಬಾರಕೂರು ಮತ್ತು ಮಂಗಳೂರು ಕೇಂದ್ರವಾಗಿರುವ ಎರಡು ಉಪವಿಭಾಗಗಳನ್ನು ಕಲ್ಪಿಸಿ ಇಬ್ಬರು ಪ್ರತ್ಯೇಕ ಗವರ್ನರಗಳ ಮೂಲಕ ಈ ಪ್ರದೇಶದ ಮೇಲೆ ತನ್ನ ವ್ಯವಸ್ಥಿತ ಹತೋಟಿಯನ್ನು ಸಾಧಿಸಿಕೊಳ್ಳುತ್ತಲೇ ಬಂದಿತ್ತು. ಇಲ್ಲಿ ತನ್ನ ಬುದ್ಧಿಚತುರತೆಯನ್ನಾಗಲಿ, ಆಡಳಿತ ಜಾಣ್ಮೆಯನ್ನಾಗಲಿ ಪ್ರಸ್ತುತ ಪಡಿಸದ ವಿಜಯನಗರ ಇಲ್ಲಿನ ಆಳರಸರ ರಾಜಕೀಯ ಸ್ವಾಸ್ಥ್ಯದ ಅಧಿಕಾರವನ್ನು ಪೂರ್ಣವಾಗಿ ಕಿತ್ತುಕೊಳ್ಳುವ ಗೋಜಿಗೆ ಹೋಗದೆ ಅವರಲ್ಲಿ ಮಿತ್ರತ್ವದ ಹಸ್ತ ಚಾಚಿದ್ದು ಗಮನಾರ್ಹ ವಿಚಾರ.

ಸಾಂತರರು ತಮ್ಮ ರಾಜಧಾನಿಯನ್ನು ಹೊಂಬುಚ್ಚದಿಂದ ಕಳಸ, ಹೊಸಗುಂದ, ಸೇತುಗಳಿಗೆ ಬದಲಾಯಿಸಿಕೊಂಡ ಕಾಲದಿಂದ ವಿಜಯನಗರದ ಆಳ್ವಿಕೆಗೆ ಒಳಪಟ್ಟರು. ಸಾಂತಳಿಗೆ ನಾಡಿನ ನೆಲೆ ವೀಡನ್ನು ಹೊಂಬುಜದಿಂದ ಇನ್ನು ತೆಂಕಣಕ್ಕೆ ಮೂಡಿಗೆರೆ ತಾಲ್ಲೂಕು ಕಳಸಕ್ಕೆ ವರ್ಗಾಯಿಸಿ ಕ್ರಿ.ಶ. ೧೨೪೯ ರಿಂದ ೧೫೧೬ರವರೆಗೆ ಆಳ್ವಿಕೆ ನಡೆಸಿದರು. ಕಳಸವನ್ನು ೧೪ನೆಯ ಶತಮಾನದಲ್ಲಿ ತೊರೆದು ಪಟ್ಟ ಬಿಟ್ಟು ಇಳಿದಿದ್ದರೂ ಕಳಸ - ಕಾರ್ಕಳ ರಾಜ್ಯವೆಂಬ ಹೆಸರಿತ್ತು.

ತುಳುನಾಡಿನ ತುಂಡರಸರಾದ ಬಂಗರದಲ್ಲಿ ಮೂರನೆಯವನಾದ ಪಾಂಡ್ಯ ಬಂಗನ ಭಾಗಿನೇಯನಾದ ರಾಮರಾಯ ಬಂಗನ (ಈತನು ವಿಠ್ಠಲಾಂಬಾಮಹದೇವಿಯ ಮಗ) ಆಳ್ವಿಕೆಯಲ್ಲಿ (ಕ್ರಿ.ಶ. ೧೨೬೪ -೭೪) ಕವಿ ವಿಜಯವರ್ಣಿಯು ಸಂಸ್ಕೃತದಲ್ಲಿ 'ಶೃಂಗಾರಾರ್ಣವ ಚಂದ್ರಿಕಾ' ಗ್ರಂಥದಲ್ಲಿ 'ಕಾದಂಬವಂಶ ಜನಿತಾನೇಕ ಭೂಮೀಶ ಪಾಲಿತವಶ್ರ' ಎಂದು ಹೇಳಿದ್ದಾನೆ. ವಾಸ್ತವವಾಗಿ ವಿಜಯನಗರದ ಆಳ್ವಿಕೆ ಸಾಂತರರಿಗೆ ಹೆಚ್ಚು ಅನುಕೂಲ ಕಲ್ಪಿಸಿಕೊಟ್ಟಿದ್ದರಿಂದ ಅವರು ಘಟ್ಟವನ್ನೂ ಬಿಟ್ಟು ಪೂರ್ತಿಯಾಗಿ ಕೆಳಕ್ಕೆ ಇಳಿದುದು ಇವರ ಆಳ್ವಿಕೆಯ ಕಾಲದಲ್ಲಿಯೆ. ಕ್ರಿಶ. ೧೪೩೨ರಲ್ಲಿ ವೀರ ಪಾಂಡ್ಯ ಕಾರ್ಕಳರಲ್ಲಿ ಗೊಮ್ಮಟಮೂರ್ತಿ ನಿಲ್ಲಿಸಿದನು. ಕ್ರಿ.ಶ. ೧೫೧೬ರ ವೇಳೆಗೆ ಕಳಸ - ಕಾರ್ಕಳ ರಾಜ್ಯವೆಂಬ ಹೆಸರು ರೂಢಿಯಾಗಿದ್ದರೂ ಕ್ರಿ.ಶ. ೧೫೩೦ರಿಂದ ಕಾರ್ಕಳ ಎಂಬ ಒಂದೇ ಹೆಸರು ಚಲಾವಣೆಗೆ ಬಂದಿತ್ತು. ವಿಜಯನಗರದ ಕೃಷ್ಣದೇವರಾಯನು ತುಳುನಾಡನ್ನು ಆಕ್ರಮಿಸಿದಾಗ ಭೈರರಸನು ಓಡಿ ಹೋದನು. ತನ್ನ ನಾಡಿನಿಂದ

ವಿಜಯನಗರ ಸೈನ್ಯ ಹಿಂತಿರುಗಿ ತಾನು ಮತ್ತೆ ನೆಮ್ಮದಿಯಿಂದ ನಾಡಿನೊಳಗೆ ಬರುವಂತೆ ಆದಲ್ಲಿ ಕಳಸದ ದೇವಮಂದಿರವನ್ನುಜೀರ್ಣೋದ್ಧಾರಗೊಳಿಸುವುದಾಗಿ ಹರಸಿಕೊಂಡನು. ಅವನ ಅಭಿಪ್ರಾಯದಂತೆ ಸಂಗತಿ ನಡೆದಕೊಂಡವು. ಕ್ರಿ.ಶ. ೧೫೪೨ ರಿಂದ ೧೫೫೫ರ ಅವಧಿಯಲ್ಲಿ ಅವರ ನೆಮೇಡು ಕಾರ್ಕಳ ಬಿಟ್ಟು ಹತ್ತಿರ ಕೆರವಸೆಯನ್ನು ರಾಜಧಾನಿ ಮಾಡಿಕೊಂಡರು. ಭೈರರಸ ಒಡೆಯನ ಕಡೆಯ ಶಾಸನ ಕ್ರಿ.ಶ ೧೫೬೮ರ ಶಾಸನ. ಅನಂತರ ಭೈರರಸವೊಡೆಯನ ತಮ್ಮ ವೀರಪಾಂಡ್ಯನು ಕ್ರಿ.ಶ. ೧೬೦೩ರಲ್ಲಿ ಯೇಣರಲ್ಲಿ ಗೊಮ್ಮಟ ಪ್ರತಿಮೆಯನ್ನು ನಿರ್ಮಾಣ ಮಾಡಿಸಿರುವನು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಕದಂಬ ಕುಲ ಇದ್ದಿತೆಂಬುದಕ್ಕೆ ಮೂಲಿಗೆಯ ಸಾಮಂತರು ಕದಂಬರಕುಲದವರಾಗಿದ್ದುದು ಒಂದು ಆಧಾರ. ತುಳು ದೇಶದ ಮಾಲಿಕೆ (ಅಯ್ಯಕಳ ಒಳಲಂಕ) ಪುರವನ್ನು ದುರ್ಗುಣಸಾಮಂತ (ಕ್ರಿ.ಶ.೧೩೭೦-೧೪೨೦) ಸೋದರಳಿಯ (ತಂಗಿ ದೇವಮ್ಮಾಜಿಯ ಮಕ್ಕಳು) ಚೆನ್ನಿಗ ಸಾಮಂತನ ತರುವಾಯ ಅವನ ತಮ್ಮ ತಿಮ್ಮಲೇಂದ್ರ ದೊರೆಯಾದನು. ಈತನೂ ಹಿಂದಿನಿಂದ ಪರಿಪಾಠವಾಗಿ ಬೆಳಕು ಬಂದಿದ್ದ ಮೂಲಕೆಯ ಸಾಮಂತರಾಜ ಪರಂಪರೆಯವರಂತೆ ಕಾದಂಬ ಕುಲದೀಪಕನಾಗಿದ್ದನು. ಈತನದು ಹನುಮಧ್ವಜ, ಮೂಲಿಕೆಯ ಕದಂಬರು ಕೂಡ ಮೃಗಲಾಂಛನರು, ವಾನರಧ್ವಜರು ಮತ್ತು ಪದ್ಮಾವತಿ ಉಪಾಸಕರು. ತಿರುಮೇಲೆಂದ್ರನ ಕೋಶಾಧ್ಯಕ್ಷನೇ (ಜೀನರತ್ತಿರಾಯಿ ಚಿಂತೆ ಕಾರ್ಲ್ಲಿರಚನೆ ಮಾಡಿದ ಕವಿ) ಪದ್ಮನಾಭ ತಿರುಮಲೇಂದ್ರನ ತರುವಾಯ ಸಂಕರಸನಮಡದಿ ಚೆನ್ನಾಂಬಿಕ ಮೂಲಿಕೆಯ ಒಡತಿ ಯಾದಳು. ಈಕೆ ಹುಂಜರ ಪದ್ಮಾವತಿದೇವಿಯ ಭಕ್ತೆಯಾಗಿದ್ದ ದೇವಿಯವರ ಪ್ರಸಾದದ ಫಲದಿಂದ ಚಿಕ್ಕರಾಯನೆಂಬ ಮಗನನ್ನು ಪಡೆದಳು.

ಕ್ರಿ.ಶ. ೧೫೨೦ ರಲ್ಲಿ ಕೃಷ್ಣದೇವರಾಯನ ಕಾಲದಲ್ಲಿ ಅನಂತರದ ಕೆಲವು ದಶಕಗಳಲ್ಲಿ ಪೋರ್ಚುಗೀಸರು, ಡಚ್ಚರು, ಇಂಗ್ಲೀಷರು ಇಲ್ಲಿ ವಾಣಿಜ್ಯ ಚಟುವಟಿಕೆ ಗಳಲ್ಲಿ ನಿರತರಾಗಿದ್ದರು. ಬಟ್ಕಳ ಕುಂದಾಪುರ ಮಂಗಳೂರುಗಳಲ್ಲಿ ವ್ಯಾಪಾರ ಮಳಿಗೆ ಗಳನ್ನು ಸ್ಥಾಪಿಸಿದರು. ಬರ್ಮಾ, ಮಲಯಾ, ಚೀನ, ಅರೇಬಿಯಾ, ಪರ್ಶಿಯಾ, ದಕ್ಷಿಣ ಆಫ್ರಿಕಾ, ಪೋರ್ತುಗಾಲಗಳೊಂದಿಗೆ ವಿಜಯನಗರದ ಅರಸರು ಅಧಿಕಾರಿ ವರ್ಗದವರು ವ್ಯಾಪಾರ ಸಂಪರ್ಕ ಹೊಂದುತ್ತ ಪಶ್ಚಿಮ ಕರಾವಳಿಯ ಕುಮಟಾ ಅಂಕೋಲಾ, ಮಿರ್ಜಾನ, ಹೊನ್ನಾವರ, ಬಟ್ಕಳ, ಕುಂದಾಪುರ, ಮಂಗಳೂರು ಬಾರಕೂರು ಇವುಗಳ ಮುಖಾಂತರ ವಿದೇಶಿ ವ್ಯಾಪಾರ ಲೇವಾದೇವಿಯನ್ನು ಪ್ರಾರಂಭಿಸಿದರು. ಇವುಗಳಲ್ಲಿ ಬಟ್ಕಳವು ವಿದೇಶಿ ವ್ಯಾಪಾರದ ಪ್ರಮುಖ ಕೇಂದ್ರವಾಗಿತ್ತು ಎಂಬುದು ಪಾಯಿಸ್ ಎಂಬ ವಿದೇಶಿ ಪ್ರವಾಸಿಗನ ವರ್ಣನೆ. ಬಟ್ಕಳ ಮತ್ತು ಚೀನ ನಡುವಣ ವ್ಯಾಪಾರ ಶ್ರೀಲಂಕಾ ಮೂಲಕ ನಡೆಯುತ್ತಿತ್ತು. ಚೀನಾ ಮತ್ತು ವಿಜಯನಗರಗಳ ಮಧ್ಯೆ ರಾಯಭಾರಿ

ಸಂಬಂಧವಿತ್ತು. ಕ್ರಿ.ಶ. ೧೩೭೪ರಲ್ಲಿ ಬುಕ್ಕನ ರಾಯಭಾರಿ ಚೀನದೇಶಕ್ಕೆ ಹೋಗಿದ್ದರು. ಕೃಷ್ಣದೇವರಾಯನು ಪೋರ್ತುಗೀಸರಿಗೆ ಬಟ್ಕಳದಲ್ಲಿ ಕೋಟೆ ಕಟ್ಟಿಸಲು ಅನುಮತಿ ಕೊಟ್ಟಿದ್ದನು.

ಕ್ರಿ.ಶ. ೧೫೧೨ರಲ್ಲಿ ಅಲ್ಬುಕರ್ಕನು ಗೋವಾವನ್ನು ವಿಜಾಪುರದಿಂದ ಗೆದ್ದು ಕೊಂಡಾಗ ಕೃಷ್ಣರಾಯದೇವ ಅವನನ್ನು ಅಭಿನಂದಿಸಿದ್ದ. ನಂತರದ ವಿಜಯನಗರದ ಅರಸರೂ ಸಹ ಪೋರ್ತುಗೀಸರ ಸಂಗಡ ಒಳ್ಳೆ ವ್ಯಾಪಾರ ಸಂಬಂಧ ಇಟ್ಟುಕೊಂಡಿದ್ದರು. ಮೂಡಬಿದುರೆ ಅಂದು ದಕ್ಷಿಣ ಕನ್ನಡ ಜಿಲ್ಲೆಯ 'ಜೈನರ ಕಾಶಿ' ಎಂದು ಪ್ರಸಿದ್ಧವಾಗಿತ್ತು.

ವಿಜಯನಗರದವರ ಆಳ್ವಿಕೆಗೆ ಸಂಬಂಧಪಟ್ಟಂತೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಅಂದು ಮಂಡಲೇಶ್ವರರಾಗಿ ಆಳಿದ ಮಹತ್ವದಲ್ಲಿದವರಲ್ಲಿ ಸಾಳುವರು, ಹಾಡುವಳ್ಳಿಂ ಬರು, ಚೌಟರಸರು, ಬಂಗಕಾಸರಕೋಡು ಕೋಲತ್ತೇರಿ ಅರಸರು ಪ್ರಮುಖರು. ಗೇರುಸೊಪ್ಪೆ ಮತ್ತು ವಿಜಯನಗರದ ನಡುವಣ ರಾಜಕೀಯ ಸಂಬಂಧ ಆಧರಿಸಿ ಸಾಳುವ ವಂಶದವರು ಗೇರುಸೊಪ್ಪೆಯ ಮೂಲದವರು ಇರಬೇಕೆಂದು ಹೇಳಿದ್ದು ವಿಚಾರಣೀಯ.

ಕ್ರಿ.ಶ. ೧೪೯೮ರಲ್ಲಿ ವಿಜಯನಗರದ ವಿರುದ್ಧ ಚೌಟರಸನು ದಂಗೆಯೆದ್ದಾಗ ಮಹಾ ಪ್ರಧಾನ ಮಂಗಪ್ಪದಂಡನಾಯಕನ ಜೊತೆ ಹೈವೆಯರಸು ತನ್ನ ಸೈನ್ಯವನ್ನು ಒದಗಿಸಿದ್ದನು. ಕಾಯ್ಕಿಣಿ ಶಾಸನವೊಂದರಲ್ಲಿ ಕ್ರಿ.ಶ. ೧೪೩೫ರ ವರೆಗೂ ತನ್ನ ಹೆಚ್ಚಿನ ಸಹಾಯವನ್ನು ಯುದ್ಧದಲ್ಲಿ ಕಳೆದ ಈತನು ವಿಜಯನಗರ ಸಾಮ್ರಾಟರ ಅಧಿಪತ್ಯದಿಂದ ಮುಕ್ತನಾಗಲು ಬಯಸಿಕೊಂಡಂತೆ ತೋರುತ್ತಿದೆ. ಇದರಿಂದ ವಿಯನಗರದ ಅಧಿಕಾರಿಗಳಾದ ನಾಗಣ್ಣ ವೊಡೆಯ ಮತ್ತು ಭಾನಪ್ಪ ಒಡೆಯರು ಇವರ ಮೇಲೆ ಯುದ್ಧ ಸಾರಬೇಕಾಯಿತು. ಇದೇ ರೀತಿ ಹಾಡುವಳ್ಳಿಯ ಸಂಗೀರಾಯನೂ ಯುದ್ಧದಲ್ಲಿ ಭಾಗಿಯಾದ ವಿಚಾರ ಕಾಯ್ಕಿಣಿ ಶಾಸನದಲ್ಲಿದೆ.

ಸಾಳ್ವ ಮಲ್ಲರಾಯ ಹೊನ್ನಾವರದ ರಾಜಧಾನಿಯಲ್ಲಿ ಆಳ್ವಿಕೆ ನಡೆಸಿದ್ದ. ಮಹತ್ವಾ ಕಾಂಕ್ಷಿಯಾದ ಈತ ನಗಿರೆಯ ಸಿಂಹಾಸನಕ್ಕೊ, ಅಂಬಿರಾಯನೊಂದಿಗೆ ಯುದ್ಧ ಕೈಕೊಂಡು ಕ್ರಿ.ಶ. ೧೪೭೧ರಲ್ಲಿ ಸಾಳ್ವ ಮಲ್ಲರಾಯ ಜಯಿಗಳಿಸಿದ. ಸಾಳ್ವ ಮಲ್ಲರಾಯನ ಶೌರ್ಯ ಧೈರ್ಯ ಪ್ರತಾಪ ಆತನ ಆಸ್ಥಾನವರ್ಣನೆಯನ್ನು ಆಸ್ಥಾನ ಕವಿಯಾದ ಸಾಳ್ವಮಲ್ಲ ತುಂಬ ಸೊಗಸಾಗಿ ವರ್ಣಿಸಿದ್ದಾನೆ. ಸಾಳ್ವಮಲ್ಲನ ಪಟ್ಟಮಹಿಷಿ ಬೊಮ್ಮಲ ದೇವಿ, ಈಕೆಯ ಸಹೋದರಿ ಮಲ್ಲಿದೇವಿ. ಈಕೆಯನ್ನು ವರಿಸಿದ ಪತಿ ಶಾಂತದಂಡಾಧೀಶ. ಮಲ್ಲಿದೇವಿಯ ಮಗನೂ ಸಾಳ್ವನೆಂದು ಸಾಳ್ವಭಾರತ ಮತ್ತು ಸಮಕಾಲೀನ ಶಾಸನಗಳಲ್ಲಿ ಹೆಸರಾಗಿರುವನು. ಇವನೇ ಮುಂದೆ ನಗಿರೆಯ ದೊರೆಯಾದ. ಕ್ರಿ.ಶ. ೧೪೪೧ರಲ್ಲಿ ಇವನು ಸುಲ್ತಾನನ ಸೈನಾಧಿಕಾರಿಗಳನ್ನು ಗೋವೆಯ ಯುದ್ಧದಲ್ಲಿ ಸೋಲಿಸಿದ. ಇನ್ನೊಮ್ಮೆ ನಿಜಾಮುದ್ದೀನ ಮುಲುಕನು ಹೈವೇ ರಾಜ್ಯದಲ್ಲಿ ನುಗ್ಗಿ ಬಂದಾಗ ಮಿಡಿಚೆ

ಎನ್ನುವಲ್ಲಿ ಭೀಕರ ಕಾಳಗ ಜರುಗಿತು. ಈ ಕಾಳಗದಲ್ಲಿ ಸಾಳ್ವದೇವನ ಬಂಟರಾದ ಕಲ್ಲಣ್ಣನಾಯಕ ಬೈರುನಾಯಕ ತಮ್ಮಣ್ಣನಾಯಕರು ತೋರಿದ ಧೈರ್ಯ ಸಾಹಸಗಳಿಂದ ಸುಲ್ತಾನನ ಸೇನೆ ಸೋತು ಯುದ್ಧದಲ್ಲಿ ವಿಜಯ ಸಾಧಿಸಿದರು. ಆದರೂ ತಮ್ಮ ಸ್ವಾಮಿಗಳಾದ ರಣಗಭಿನಾಯಕ, ದೇವೂ ನಾಯಕರು ವಿರೋಧಿಗಳಿಂದ ಬಂಧಿತರಾದ ವಿಚಾರ ತಿಳಿದು ಪುನಃ ಸುಲ್ತಾನನ ಮೇಲೆ ಬಿದ್ದು ಕಾದಾಡಲು ಈ ಯುದ್ಧದಲ್ಲಿ ಮೂವರು ಗತಪ್ರಾಣರಾದರು.

ಇಂಥ ಮಹತ್ವದ ಸಂದರ್ಭದಲ್ಲಿ ಸಾಳ್ವದೇವನು ವಿಜಯನಗರದವರ ವಿರುದ್ಧ ಸ್ವತಂತ್ರ್ಯನಾಗಲು ಬಯಸಿ 'ರಾಜಾಧಿರಾಜ' ರಾಜಪರಮೇಶ್ವರ ಮುಂತಾದ ಬಿರುದುಗಳನ್ನು ಧರಿಸತೊಡಗಿದ. ಇದನ್ನು ಕಂಡು ಕೋಪಾವಿಷ್ಟನಾದ ವಿಜಯನಗರ ಚಕ್ರವರ್ತಿ ವಿರೂಪಾಕ್ಷನು ಸೈನ್ಯ ಸಮೇತವಾಗಿ ಬಂದು ಸಾಳ್ವ ದೇವನನ್ನು ನಿಯಂತ್ರಿಸಬೇಕಾಯಿತು. ಇವನ ತರುವಾಯ ಅವನ ಸೋದರಳಿಯ ಭೈರರಸ ಕ್ರಿ.ಶ. ೧೫೦೦ ರಲ್ಲಿ ನಗಿರೆಯ ಅರಸನಾದ. ಕ್ರಿ.ಶ. ೧೫೧೦ಕ್ಕೆ ಆತನ ಅಧಿಕಾರ ಕೊನೆಗೊಳ್ಳಲು ವಿಜಯನಗರದಲ್ಲಿ ಇಮ್ಮಡಿ ದೇವರಾಯ ಅಧಿಕಾರಕ್ಕೆ ಬಂದನು. ಮುಂದೆ ಇವನ ಉತ್ತರಾಧಿಕಾರತ್ವ ವಹಿಸಿದ ಈತನಿಗೆ ಸಾಳುವ ಕೃಷ್ಣನೆಂಬ ಹೆಸರು ಇದೆ. ಇವರ ಕಾಲದಲ್ಲಿ ವಿಜಯನಗರ ಕೃಷ್ಣರಾಯನಿಗೂ ಗೋವೆಯ ಪೋರ್ತುಗೀಸರಿಗೂ ವೈಮನಸ್ಯ ಉಂಟಾಗಿ ಚಕ್ರವರ್ತಿಯ ಆಜ್ಞೆಯಂತೆ ಗೋವೆಯ ಮೇಲೆ ದಂಡೆತ್ತಿ ಹೋದರೆಂದು ಮಡಗೋವೆಯಲ್ಲಿ ಯುದ್ಧ ನಡೆದಾಗ ಇಮ್ಮಡಿ ದೇವರಾಯನ ನಚ್ಚಿನ ಬಂಟ ಅಮ್ಮನಾಯಕ ಮತ್ತು ವೀರ ನಾಯಕರು ವೈರಿ ಸೈನ್ಯದ ಮುಂದೆ ವೀರಸ್ವರ್ಗವನ್ನು ಪಡೆದರು.

ವಿಜಯನಗರ ಅರಸರ ನಿರೂಪದಿಂದ ಆಮ್ಮಣ್ಣವೊಡೆಯ ಹೊನ್ನಾವರ ರಾಜಧಾನಿಯಲ್ಲಿ ಹೈವೆ ತುಳು ಕೊಂಕಣಗಳ ಮೇಲಾಳ್ವಿಕೆ ನೋಡುತ್ತಿದ್ದ. ಈಗ ಕಾಸರಗೋಡಿನಲ್ಲಿದ್ದ ಹಂಜಮಾನ ಸಂಘದ ಮುಖ್ಯಸ್ಥ ಉಮರ ಮರಕಾಲನು ತನ್ನ ರಕ್ಷಣೆಗಾಗಿ ನಗಿರೆಯ ಸಂಗೀರಾಯನ ಸಹಾಯ ಯಾಚಿಸಿದಾಗ ಕೋಟೇಶ್ವರ ನಾಯಕನ ನೇತೃತ್ವದಲ್ಲಿ ಸಾವಿರ ಕಾಪಿನ ಭಟರನ್ನು ಸಂಗೀರಾಯನು ಶಾಸಕರೋಡಿಗೆ ಕಳಿಸುತ್ತಾನೆ. ಅಷ್ಟರಲ್ಲಿ ತಿಮ್ಮಣವೊಡೆಯರು ಸೇನಾ ಸಮೇತರಾಗಿ ಮುನ್ನಡೆದು ಮೋಸದಿಂದ ಕಾಸರಗೋಡನ್ನು ಮುತ್ತಿ ಉಮರ ಮಕಾಲನ ಹಾಗೂ ಹಂಜ ಮಾನದವರ ಹೆಣ್ಣು ಮಕ್ಕಳನ್ನು ತೊಂದರೆಗೀಡು ಮಾಡಿದಾಗ ಸಿಟ್ಟಿಗೆದ್ದ ಕೋಟೇಶ್ವರ ನಾಯಕನು ಯುದ್ಧ ಮಾಡಿ ಹಂಜಮಾನದವರನ್ನು ರಕ್ಷಿಸಿ ಸುರಕ್ಷಿತ ಸ್ಥಳಕ್ಕೆ ದೋಣಿಗಳ ಮೂಲಕ ಕಳಿಸಿಕೊಡುತ್ತಾನೆ. ಈ ಭೀಕರ ಯುದ್ಧದಲ್ಲಿ ಕೋಟೇಶ್ವರ ನಾಯಕನು ರಾಜ ಗುರು ದೇವಣ್ಣ ನಾಯಕರನ್ನು ಕೆಡಹಿ ಮುಂದೆ ತನಗಿದಿರಾಗಿ ಬಂದ ಮೂರು ಚಾವಡಿಯ ಭಟರನ್ನು ಓಡಿಸಿ ಧರಣಿಗೆ ಬಿದ್ದು ವೀರಸ್ವರ್ಗವನ್ನು ಪಡೆದಂತೆ ಶಾಸನ ವಿವರಿಸಿದೆ. ಇವನು ಕೂಡ ವಿಜಯನಗರ

ಸಾಮ್ರಾಟರಿಂದ ಮುಕ್ತನಾಗಲು ಬಯಸಿದನಂತೆ. ಈ ಸೂಕ್ಷ್ಮವನ್ನು ಅರಿತುಕೊಂಡು ಹೊನ್ನಾವರದ ರಾಜ್ಯಪಾಲನನ್ನು ಪದಚ್ಯುತಗೊಳಿಸಿ ಆಸ್ಥಾನಕ್ಕೆ ಲಕ್ಕಣ್ಣವೊಡೆಯನನ್ನು ನೇಮಿಸಿ ಸಂಗಾರಾಯನೊಡನೆ ಬಾಂಧವ್ಯವನ್ನು ಮುಂದುವರೆಸಿರುವರು.

ಹೀಗೆ ಭೂತಕಾಲದ ವೈಭವಕ್ಕೆ ಸಾಕ್ಷಿಯಾಗಿ ಕಳೆದು ಹೋದ ದಿನಗಳನ್ನು ಮೇಲಿಂದ ಮೇಲೆ ಸ್ಮರಿಸಿಕೊಳ್ಳುತ್ತ ರಾಜ್ಯಾಡಳಿತ, ಕಾಲಕಾಲದ ಸಾಂಸ್ಕೃತಿಕ ಸಾಂಪ್ರದಾಯಿಕ ವಿಧಿ ವಿಧಾನಗಳಿಗೆ ಚ್ಯುತಿ ಬಾರದಂತೆ ಮುನ್ನಡೆಸಿಕೊಂಡು ಹೋದುದು ಮಹತ್ವದ ವಿಷಯ. ಬ್ರಿಟಿಷ್ ಆಳ್ವಿಕೆಯಲ್ಲಿ ರಾಜಧನ ರದ್ದಾದರೂ ಪ್ರಜಾರಕ್ಷಣೆ, ಸ್ವರಕ್ಷಣೆಯ ದೃಷ್ಟಿಯಿಂದ ಜನಮನದ ಯೋಗಕ್ಷೇಮಕ್ಕಾಗಿ ಜನಸಾಮಾನ್ಯರೋಪಾದಿ ಸ್ಪರ್ಧಾಕಣಕ್ಕೆ ಇಳಿದ ಇವರ ಸ್ಥಿತಿ ಇತರ ರಾಜಮನೆತನದವರಿಗಿಂತ ಭಿನ್ನವಾಗಿಲ್ಲ. ಆದರೆ ಸಾಂಸ್ಕೃತಿಕ ಕಲಾವೈಭವದ ಪ್ರತೀಕವಾಗಿ ಉತ್ಕೃಷ್ಟ ಶಾಶ್ವತಕೊಡುಗೆಗಳನ್ನು ನೀಡಿದ ದಕ್ಷಿಣ ಕನ್ನಡ ಜಿಲ್ಲೆಗೆ ದೇಶದಲ್ಲಿ ಅಗ್ರಸ್ಥಾನವಿದೆ.

೨೯. 'ಹಸ್ತಿನಾವತಿ ವಳಿತ' ವಿಜಯನಗರ ಸಾಮ್ರಾಜ್ಯದ ಒಂದು ವಿಶಿಷ್ಟ ಪ್ರಾದೇಶಿಕ ವಿಭಾಗ

ಡಾ. ಪಿ.ವಿ. ಕೃಷ್ಣಮೂರ್ತಿ

ದಕ್ಷಿಣ ಭಾರತದ ಇತಿಹಾಸದಲ್ಲಿ ವಿಜಯನಗರ ಅರಸರ ಆಳ್ವಿಕೆಗೆ ವಿಶಿಷ್ಟ ಸ್ಥಾನವಿದೆ. ದಕ್ಷಿಣದ ನಾಲ್ಕೂ ಭಾಷಾ ಪ್ರದೇಶಗಳ ಬಹು ಭಾಗವನ್ನು ಒಳಗೊಂಡಿದ್ದ ಅವರ ಸಾಮ್ರಾಜ್ಯದಲ್ಲಿ ಆಡಳಿತದ ಅನುಕೂಲಕ್ಕಾಗಿ ಆ ಹಿಂದೆ ಆಯಾ ಪ್ರದೇಶಗಳಲ್ಲಿ ಪ್ರಚಲಿತ ವಿದ್ದ ಬೇರೆ ಬೇರೆ ತೆರನಾದ ಆಡಳಿತ ವಿಭಾಗಗಳ ಅನುಕ್ರಮಣಿಕೆಯನ್ನು ಕ್ರೋಢೀಕರಿಸಿ ಒಂದು ಸಾಮಾನ್ಯೀಕರಣಗೊಂಡ, ಅವರ ಇಡೀ ಸಾಮ್ರಾಜ್ಯಕ್ಕೆ ಸೂಕ್ತವೆನಿಸಬಹುದಾದ ಆಡಳಿತ ವಿಭಾಗ ಕ್ರಮವನ್ನು ಜಾರಿಗೆ ತರಬೇಕಾದ ಅಗತ್ಯತೆ ಇದ್ದಿತು. ಆ ಹಿನ್ನೆಲೆಯಲ್ಲಿ ಮೂಡಿ ಬಂದ ಅವರ ಆಡಳಿತ ವಿಭಾಗಗಳೇ ದೇಶ / ರಾಜ್ಯ, ವಳಿತ, ವೇಂಠೆ, ಚಾವಡಿ; ನಾಡು / ಸೀಮೆ, ಮಾಗಣಿ; ಸ್ಥಳ ಮತ್ತುಗ್ರಾಮ ಎಂಬುವಾಗಿವೆ. ದೇಶ / ರಾಜ್ಯ, ವಳಿತ, ವೇಂಠೆ, ಚಾವಡಿ ಎಂಬುವು ಮೇಲ್‌ಸ್ತರದ ಆಡತ ಘಟಕಗಳಾಗಿ ದ್ದವು. ಸೀಮೆ / ನಾಡು ಎಂಬುವು ಮಧ್ಯಸ್ತರದ ಘಟಕಗಳು ಹಾಗೂ ಸ್ಥಳ ಮತ್ತು ಗ್ರಾಮಗಳು ಕೆಳಸ್ತರದ ಆಡಳಿತ ಘಟಕಗಳೆಂದು ಗುರುತಿಸಬಹುದಾಗಿದೆ.

ಸಾಮಾನ್ಯವಾಗಿ 'ವಳಿತ' ಎಂಬುವ ವಿಭಾಗವು ರಾಜ್ಯ ಮತ್ತು ನಾಡು / ಸೀಮೆಗಳ ನಡುವೆ ಸಂಪರ್ಕ ಕಲ್ಪಿಸುವ ಆಡಳಿತ ಘಟಕವಾಗಿ ವಿಜಯನಗರ ಕಾಲದ ಶಾಸನಗಳಲ್ಲಿ ವಿಶೇಷವಾಗಿ ಅಸ್ತಿತ್ವವನ್ನು ಪಡೆದಿತ್ತು. 'ವಳಿತ' ಎಂಬುದಕ್ಕೆ ನಿಘಂಟುಗಳಲ್ಲಿ ಸಂಸ್ಥಾನದ ಪೂರ್ಣ ಹಕ್ಕನ್ನು ಪಡೆಯದಿದ್ದರೂ ವ್ಯವಸ್ಥಿತವಾಗಿರುವ ದೇಶಭಾಗ; ಅಧೀನ ಪ್ರಾಂತ; ಎಂಬರ್ಥವಿದೆ. ವಿಜಯನಗರ ಕಾಲದ ಶಾಸನಗಳಲ್ಲಿ ಅನೇಕ 'ವಳಿತಗಳ'ಗಳ ಪ್ರಸ್ತಾಪ ಬಂದಿದೆ. ಉದಾ: ಉಮ್ಮತ್ತೂರ ವಳಿತ, ಬಾಗೂರ ವಳಿತ, ಎಕ್ಕಟಿಯ ವಳಿತ, ರಾಯ ದುರ್ಗ ವಳಿತ ಇತ್ಯಾದಿ. ಪ್ರಸ್ತುತ 'ಹಸ್ತಿನಾವತಿ ವಳಿತ' ಎಂಬುದು ಒಂದು ವ್ಯವಸ್ಥಿತ ದೇಶಭಾಗವೆಂಬುದುರಲ್ಲಿ ಸಂದೇಹವಿಲ್ಲ ಆದರೆ. ವಿಜಯನಗರ ಸಾಮ್ರಾಜ್ಯದ ಇತರೇ ವಳಿತಗಳಿಗಿಂತ ಇದು ಭಿನ್ನವಾಗಿರುವುದು ಒಂದು ವಿಶಿಷ್ಟ ಸಂಗತಿಯಾಗಿದೆ. ಅಂತೆಯೇ ಆ ವಿಶಿಷ್ಟ ಸಂಗತಿಯ ಪರಿಶೀಲನೆಯ ನನ್ನ ಈ ಸಂಪ್ರಬಂಧದ ಉದ್ದೇಶವಾಗಿದೆ.

ವಿಜಯನಗರ ಕಾಲಕ್ಕಿಂತ ಹಿಂದಿನ ಶಾಸನಗಳಲ್ಲಿ 'ಹಸ್ತಿನಾವತಿ' ಯ ಪ್ರಸ್ತಾಪ ಕಂಡುಬಂದಿಲ್ಲ. ವಿಜಯನಗರ ಸಾಮ್ರಾಜ್ಯದ ಆರಂಭ ಕಾಲದಲ್ಲಿ 'ಹಸ್ತಿನಾವತಿ',

ಅನಂತರದಲ್ಲಿ 'ಹಸ್ತಿನಾವತಿ ವಳಿತ' ಎಂಬ ಒಂದು ವಿಶಾಲವಾದ ಪ್ರಾದೇಶಿಕ ವಿಭಾಗದ ಉಲ್ಲೇಖ ಕಂಡುಬರುತ್ತದೆ. ಈ 'ವಳಿತ'ದಲ್ಲಿ ಉಚ್ಛಂಗಿವೇಂಠೆ, ದೊರವಡಿ ವೇಂಠೆ, ರಾಯದುರ್ಗವೇಂಠೆ, ಕೋಗಳಿವೇಂಠೆಗಳೂ; ಮುರುಗಲನಾಡು, ಪಾಂಡ್ಯನಾಡು, ಚಂದ್ರಮಂಡಲನಾಡು, ಮೂಡನಾಡುಗಳೂ; ಕಂಪಿಲಿ ಮತ್ತು ಆನೇಗೊಂದಿ ಮಾಗಾಣಿಗಳು ಅಂತರ್ಗತವಾಗಿದ್ದ ಸಂಗತಿ ಶಾಸನಗಳಿಂದ ತಿಳಿದುಬರುತ್ತದೆ. ಅಂದರೆ; ತುಮಕೂರು, ಅನಂತಪುರ, ಚಿತ್ರದುರ್ಗ, ಬಳ್ಳಾರಿ, ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಯ ಬಹುಭಾಗಗಳನ್ನು ಒಳಗೊಂಡಂತೆ ಈ ಪ್ರಾದೇಶಿಕ ವಿಭಾಗ ಅಸ್ತಿತ್ವವನ್ನು ಪಡೆದಿತ್ತು. ಅಂದರೆ 'ಹಸ್ತಿನಾವತಿವಳಿತ' ಎಂಬುವ ಒಂದು ಪ್ರಾದೇಶಿಕ ವಿಭಾಗದ ವ್ಯಾಪ್ತಿಯಲ್ಲಿ; ದಕ್ಷಿಣಕ್ಕೆ ಇಂದಿನ ತುಮಕೂರು ಜಿಲ್ಲೆಯಿಂದ ಉತ್ತರಕ್ಕೆ ಕೊಪ್ಪಳ-ರಾಯಚೂರು ಜಿಲ್ಲೆಯವರೆಗಿನ ಕುತೂಹಲ ಉಂಟಾಗದೆ ಇರದು. ಇದಕ್ಕೆ ಕಾರಣವೇನು? ಎಂಬುದನ್ನು ಅರಸ ಹೊರಟರೆ; ಅನೇಕ ವಿಶಿಷ್ಟ ಸಂಗತಿಗಳು ಎದುರಾಗುತ್ತವೆ. ಮುಖ್ಯವಾಗಿ 'ಹಸ್ತಿನಾವತಿ ವಳಿತ'ವು ವಿಜಯನಗರ ಸಾಮ್ರಾಜ್ಯದ ಆರಂಭಿಕ ಹಂತದ ಒಂದು ಆಡಳಿತ ಘಟಕವಾಗಿದ್ದುದು ಎದ್ದು ಕಾಣುತ್ತದೆ. ಅಲ್ಲದೆ 'ಹಸ್ತಿನಾವತಿ' ಎಂಬ ಹೆಸರು, ಆ ಹೆಸರನ್ನು ಪಡೆದ 'ಆನೆಗೊಂದಿ' ಸ್ಥಳ - ಆ ಸ್ಥಳದ ಪ್ರಾಚೀನತೆ ಮತ್ತು ನೈಸರ್ಗಿಕ ಸನ್ನಿವೇಶಗಳು- ಹೇಗೆ ಒಂದು ರಾಜ್ಯ ಸ್ಥಾಪನೆಗೆ ಅಗತ್ಯವಾದ ಆಯಕಟ್ಟಿನ ನೆಲೆ ಮತ್ತು ಸನ್ನಿವೇಶವನ್ನು ಒದಗಿಸಿತ್ತೆಂಬುದನ್ನು ಮನಗಾಣಬಹುದಾಗಿದೆ.

'ವಳಿತ' ಎಂಬುದು ಒಂದು ರಾಜ್ಯದ ಭಾಗವಾಗಿ ಅನೇಕ ವೇಂಠೆ, ನಾಡು / ಸೀಮೆ ಮತ್ತು ಮಾಗಾಣಿಗಳನ್ನೊಳಗೊಂಡಂತಹ ಒಂದು ಮಧ್ಯಮ ಪ್ರಮಾಣದ ಆಡಳಿತ ಘಟಕವಾಗಿದ್ದಿತೆಂಬುದನ್ನು ಈ ಮೊದಲೇ ತಿಳಿಸಿದೆ. ಅದರ ಗಾತ್ರ ಇಂದಿನ ಒಂದು ಜಿಲ್ಲೆಯೊಂದಿಗೆ ಸಮೀಕರಿಸಬಹುದೆಂದು ತೋರುತ್ತದೆ. ಆದರೆ 'ಹಸ್ತಿನಾವತಿ ವಳಿತದ' ಕಥೆ ಹಾಗಿದ್ದಂತೆ ತೋರುತ್ತಿಲ್ಲ. ಈ ಮೊದಲೇ ತಿಳಿಸಿರುವಂತೆ ವಿಜಯನಗರ ಇತಿಹಾಸದ ಅವಿಭಾಜ್ಯ ಅಂಗವಾದ 'ಆನೆಗೊಂದಿ'ಯೇ ಹಸ್ತಿನಾವತಿ ಎಂಬುದಾಗಿದೆ. ಇದನ್ನು ಶಾಸನಗಳಲ್ಲಿ 'ಆನೆಗೊಂದಿ', 'ಆನೆಗುಂಡಿ' ಹಾಗೂ 'ಹಸ್ತಿನಾಪುರ' ಎಂದು ಉಲ್ಲೇಖಿಸಲಾಗಿದೆ. ಅದಕ್ಕೆ ಆ ಸ್ಥಳದ ಭೂ ಮತ್ತು ನದಿಯ ಸ್ವರೂಪಗಳೇ ಕಾರಣವೆನ್ನಬಹುದು. ಸಂಸ್ಕೃತ ವಿದ್ವಾಂಸರು ಆನೆಗೊಂದಿಯನ್ನು 'ಹಸ್ತಿಕೋಣಪುರ,' ' ಗಜಗಹ್ವರಪುರ', ' ಕುಂಜಕೋಣಪುರ,' ಎಂದು ಕರೆದಿದ್ದಾರೆ. ಅಷ್ಟೇ ಅಲ್ಲ ಆ ಪ್ರದೇಶವನ್ನು 'ಕಿಷ್ಕಿಂದೆ' ಎಂದು ಕೂಡ ಕರೆದಿರುವುದು ಸರಿಯಷ್ಟೆ. ಮೇಲಿನ ಸಂಸ್ಕೃತ ರೂಪಾಂತರದ ಇತರ ಹೆಸರುಗಳಿಗಿಂತ 'ಕಿಷ್ಕಿಂದೆ' ಎಂಬುದೇ ಹೆಚ್ಚು ಸರಿಯಾಗಿ ಇಲ್ಲಿನ ಭೂ ಸನ್ನಿವೇಶವನ್ನು ನಿರ್ದೇಶಿಸುತ್ತದೆಯೆಂದು ಮೈ.ಹ. ರಾಮಶರ್ಮರು ಅಭಿಪ್ರಾಯ ಪಟ್ಟಿದ್ದಾರೆ(1960, ರಣಧೀರರಾಮನಾಥ, ಪು.73).

ವಿಜಯನಗರ ಸಾಮ್ರಾಜ್ಯದ ಪೂರ್ವದಲ್ಲಿ ಆನೆಗೊಂದಿಯು ಕಂಪಿಲರಾಯನ ರಾಜ್ಯದ ಒಂದು ಆಯಕಟ್ಟಿನ ಸ್ಥಾನವಾಗಿದ್ದಿತು. ಹೊಯ್ಸಳ ವೀರಬಲ್ಲಾಳನು ಕಂಪಿಲದ ಮೇಲೆ ಯುದ್ಧಕ್ಕೆ ಹೊರಟಾಗ ಕಂಪಿಲನ ಸೈನ್ಯ ಆನೆಗೊಂದಿಯಲ್ಲಿ ಬೀಡು ಬಿಟ್ಟು ಮುಂದೆ ಸಾಗಿತು. ಆಗ ಕಂಪಿಲರಾಯನು ಆನೆಯಾಕಾರದ ಮೂರು ಬೆಟ್ಟಗಳು ಸಂಧಿಸುವ ಆನೆಗೊಂದಿ ಎಂಬ ಸ್ಥಳದಲ್ಲಿ ಶತ್ರುಜನ ದುರ್ಗಮವಾದ ಕೋಟೆಯೊಂದನ್ನು ಕಟ್ಟಿಸಿದ್ದನು ಎಂದು ಹೇಳಲಾಗಿದೆ. ಅಂದರೆ ಈ ಕಾಲಕ್ಕಾಗಲೇ ಆನೆಗೊಂದಿಯು ರಾಜಕೀಯ ಮಹತ್ವವನ್ನು ಗಳಿಸಿಕೊಂಡಿದ್ದಿತು. ಅಲ್ಲದೆ ಆನೆಗೊಂದಿಯು ತನ್ನ ನೈಜ ನೈಸರ್ಗಿಕ ವೈಶಿಷ್ಟ್ಯತೆಯಿಂದ ಒಂದು ಸಹಜ ಸ್ವಾಭಾವಿಕ ಸುರಕ್ಷಿತ ಸ್ಥಳವಾಗಿ ಪರಿಣಮಿಸಿತ್ತು. ಭೌಗೋಳಿಕವಾಗಿ ಆನೆಗೊಂದಿ ಪ್ರದೇಶವು ಚದುರಿದಂತೆ ಹರಡಿರುವ ವೈವಿಧ್ಯಮಯವಾದ ಬೂದು ಬಣ್ಣದ ಗಟ್ಟಿಕಲ್ಲಿನಿಂದಾದ ಬೆಟ್ಟ-ಗುಡ್ಡಗಳಿಂದ ಕೂಡಿದೆ. ತುಂಗಭದ್ರಾ ನದಿಯು ಆನೆಗೊಂದಿಯನ್ನು ದಕ್ಷಿಣ, ಪೂರ್ವ ಮತ್ತು ಈಶಾನ್ಯ ದಿಕ್ಕುಗಳಲ್ಲಿ ಬಳಸಿಕೊಂಡಿದೆ. ಇಲ್ಲಿನ ಗುಡ್ಡಗಳ ಓರೆ, ನದಿಯ ತಿರುವು ಆಳ ಮತ್ತು ವಿಶಾಲವಾದ ನೀರಿನ ಹರವು ಸ್ವಾಭಾವಿಕವಾಗಿ ಸೃಷ್ಟಿ ನೀಡಿದ ಪ್ರಥಮ ರಕ್ಷಣಾ ರೇಖೆ (first defence, line) ಯಾಗಿ ಪರಿಣಮಿಸಿ ವಾಸ್ತವಿಕ ಆಯಕಟ್ಟಿನ ಸ್ಥಾನವಾಗಿದೆ. ಹಾಗಾಗಿ ಅದು ಪ್ರಾಗೈತಿಹಾಸಿಕ ಮಾನವನ ನೆಲೆವೀಡು ಕೂಡ ಆಗಿದ್ದಿತು. ಈ ಪ್ರದೇಶದಲ್ಲಿ ಆದಿ ಶಿಲಾಯುಗದ ಸಂಸ್ಕೃತಿ ಗಾಢವಾಗಿದ್ದುದನ್ನು ವಿದ್ವಾಂಸರು ಶೋಧಿಸಿ ರುತ್ತಾರೆ. ಈ ಪ್ರದೇಶದ ಬೆಟ್ಟಗುಡ್ಡಗಳಲ್ಲಿ ಕಲ್ಲಾಸರೆಗಳಿದ್ದು ನವಶಿಲಾಯುಗದ ಮಾನವನ ನೆಲೆಯಾಗಿದ್ದಿತೆಂದು ಹೇಳಬಹುದಾಗಿದೆ. ಅನಂತರದ ಬೃಹತ್ ಶಿಲಾಯುಗದ ಕುರುಹುಗಳು ಈ ಪ್ರದೇಶದಲ್ಲಿ ವಿಪುಲವಾಗಿ ಕಂಡುಬಂದಿವೆ. ಆನೆಗೊಂದಿ ಪ್ರದೇಶವನ್ನು ಕ್ರಿ.ಶ.7ನೇ ಶತಮಾನಕ್ಕಾಗಲೇ ಅಲ್ಲಿನ 'ಪಂಪಾ ಸರೋವರ' ಮತ್ತು ಅದಕ್ಕೆ ಸಂಬಂಧಿಸಿದ ಪಂಪಾದೇವಿಯ ಐತಿಹ್ಯಗಳ ಹಿನ್ನೆಲೆಯಲ್ಲಿ 'ಪಂಪಾತೀರ್ಥ'ಎಂದು ಕರೆಯುತ್ತಿದ್ದರೆಂಬ ಅಂಶ ಶಾಸನಗಳಿಂದ ತಿಳಿದು ಬರುತ್ತದೆ.(Ind. Ant., Vol. VI, p.85). ಹಾಗೇ ಈ ಪ್ರದೇಶಕ್ಕೆ ಕಿಷ್ಕಿಂಧೆ ಎಂಬ ಹೆಸರು ಪ್ರಚಲಿತವಿದ್ದುದು ಇದಕ್ಕೆ ಅಂಟಿಕೊಂಡಿರುವ ಪೌರಾಣಿಕ ಕಥೆಗಳ ಹಿನ್ನೆಲೆಯಲ್ಲಿ ಗ್ರಹಿಸಬಹುದಾಗಿದೆ. ಶಾಸನಗಳಲ್ಲಿ ಕಿಷ್ಕೆಂಧೆಯ ಪ್ರಸ್ತಾಪ ಬಂದಿದ್ದು, ಕಿಷ್ಕಿಂಧ ಪರ್ವತವು ತುಂಗಭದ್ರೆಯ ಉತ್ತರ ದಡದಲ್ಲಿದೆ ಎಂದೂ [ಕ.ವಿ.ಶಾ.ಸಂ.2, ಗಂಗಾವತಿ2, ಕ್ರಿ.ಶ. 1059 (6ನೇ ವಿಕ್ರಮಾದಿತ್ಯನ ದೇವಿಘಾಟ ಶಾಸನ)]. ಕಿಷ್ಕಿಂದೆ ಒಂದು ನಗರವೆಂದೂ (ಎ.ಕVIII, ಸಾಗರ 1, ತೀರ್ಥಹಳ್ಳಿ157), ಒಂದು ಪರ್ವತವೆಂದೂ (ಎ.ಕ.IX, ಬೆಂಗಳೂರು 69), ಅಲ್ಲದೆ ಒಂದು ಆಡಳಿತ ಘಟಕವೆಂದೂ (ಎ.ಕ. XII, ಗುಬ್ಬಿ 77) ವಿಧ ವಿಧವಾಗಿ ಉಕ್ತವಾಗಿದೆ. ವಾಲ್ಮೀಕಿ ರಾಮಾಯಣದಲ್ಲೂ ಕಿಷ್ಕಿಂಧ ನಗರದ ವರ್ಣನೆ ಬಂದಿದೆ (1997, ಅ. ಸುಂದರ; ಕಿಷ್ಕಿಂದೆ ಹನುಮಂತನ ತವರು?,ಹೊಸಪೇಟೆ, ಪು.13). ಇಂತಹ

ಪೌರಾಣಿಕ ಮತ್ತು ಐತಿಹ್ಯಗಳು ಪ್ರಾಗೈತಿಹಾಸಿಕ ಮಾನವನ ಆಚರಣೆಗಳು ಬಳಕೆಯಲ್ಲಿದ್ದ ಎಡೆಗಳ ಸೂಚಕವೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ (1962, Kosambi,k Myth & Reality, Bombay). ಅಂತೆಯೇ ಇಲ್ಲಿ 'ಪಂಪಾ' ಒಬ್ಬ ಮಾತೃದೇವತೆಯ ಸೂಚಕವೆಂದು ಪರಿಭಾವಿಸಿದರೆ, ಆಕೆ ಬೇಟೆ ಹಂತದ, ಅಲೆಮಾರಿ ಮಾನವನ ಆರಾಧನಾ ದೇವತೆಯಾಗಿದ್ದಳೆಂದು ಹೇಳಬಹುದು.

ಸಂಗಮ ಅರಸರು ವಿಜಯನಗರ ರಾಜಧಾನಿಯನ್ನು ಕಟ್ಟುವುದಕ್ಕೆ ಮೊದಲು ಆನೆಗೊಂದಿಯಿಂದಲೇ ರಾಜ್ಯಭಾರ ಮಾಡುತ್ತಿದ್ದರು ಎಂಬುದು ಈಗ ಖಚಿತವಾಗಿರುವ ಸಂಗತಿ. ಇದಕ್ಕೆ ಆ ಆಯಕಟ್ಟಿನ ನೈಸರ್ಗಿಕ ಕಾರಣಗಳಲ್ಲದೆ, ಕಂಪಿಲದೇವನ ಕಾಲದಲ್ಲೇ ರಚನೆಯಾಗಿದ್ದಿರಬಹುದಾದ ಭದ್ರವಾದ ಕೋಟೆಯೂ ಕಾರಣವಾಗಿದ್ದಿರಬಬಹುದು. (ಡಾ. ಚನ್ನಬಸಪ್ಪ ಎಸ್.ಪಾಟೀಲ 1999, ಕರ್ನಾಟಕ ಕೋಟೆಗಳು ಸಂಪುಟ-೧, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. 86.) ಸಂಗಮ ವಂಶದ ಹರಿಹರನು ಹೊಯ್ಸಳ ವೀರ ಬಲ್ಲಾಳನ ಸಾಮಂತರಲ್ಲಿ ಒಬ್ಬನಾಗಿದ್ದನು, ಅಲ್ಲದೆ ಆತನು ಬಲ್ಲಾಳನ ಸಮೀಪ ಬಂಧುವೂ ಆಗಿದ್ದನು. ಬಲ್ಲಾಳನ ಸೋದರಳಿಯನಾದ ಬಲ್ಲಪ್ಪ ದಂಡನಾಯಕನು ಹರಿಹರನ ಅಳಿಯನಾಗಿದ್ದನು. ಇವರ ಸಂಬಂಧ ಸೌಹಾರ್ದಪೂರಿತವಾಗಿದ್ದಿತು. ಬಲ್ಲಾಳನ ಅಧಿಕಾರಿಗಳಲ್ಲಿ ಒಬ್ಬನಾಗಿದ್ದು ಕ್ರಮೇಣ ಮಹಾಮಂಡಳೇಶ್ವರ ಪದವಿಗೆ ಹರಿಹರನು ಏರಿದನು; ಮುಂದೆ ಚತುಃಸಮುದ್ರಾಧಿಪತಿಯೆಂದು ಕರೆಯಿಸಿಕೊಂಡನು, ಅಲ್ಲದೆ 1343ರ ಶಾಸನದಲ್ಲಿ ಮಹಾ ರಾಜಾಧಿರಾಜ ರಾಜಪರಮೇಶ್ವರ ಇತ್ಯಾದಿ ಬಿರುದುಗಳನ್ನು ಧರಿಸಿರುವುದು ಕಂಡುಬರುತ್ತದೆ. ಇವನ ಸೋದರನೂ ಪ್ರಾಂತಾಧಿ ಕಾರಿಯೂ ಆಗಿದ್ದ ಬುಕ್ಕನು ಸಹ ಸಾರ್ವಭೌಮತ್ವದ ಬಿರುದುಗಳನ್ನು ಧರಿಸಿರುವುದು ಶಾಸನಗಳಿಂದ ಸ್ಪಷ್ಟವಾಗುತ್ತದೆ. ಶಾಸನ ಮತ್ತು ಸಾಹಿತ್ಯ ಕೃತಿಗಳನ್ನು ಗಮನಿಸಿದರೆ ಸಂಗಮರ ಹಕ್ಕ, ಬುಕ್ಕ, ಕಂಪ, ಮಾರಪ ಮತ್ತು ಮುದ್ದಪರೆಂಬ ಐವರು ಸಹೋದರರು ಇದ್ದದೂ, ಅವರು ತಮ್ಮ ಹಿರಿಯನಾದ ಹಕ್ಕನ ಸೂಚನೆಯಂತೆ ನಡೆದುಕೊಳ್ಳುತ್ತಿದ್ದುದು ಹಾಗೂ ಉತ್ತರ ವಿಗ್ರಹ ವಿಧ್ವಂಸಕರೂ, ಕ್ರೂರಿಗಳೂ ಆದಂಥ ವೈರಿಗಳಿಂದ ಜನರನ್ನು ರಕ್ಷಿಸಲು ಬದ್ಧರಾಗಿ ತಾವು ಕೈಗೊಂಡ ಹಿಂದೂ ಸಾಮ್ರಾಜ್ಯ ರಕ್ಷಣೆಯ ಕಾರ್ಯದಲ್ಲಿ; ತಮ್ಮನ್ನು ಮಹಾಭಾರತದ ಪಂಚ ಪಾಂಡವರೊಂದಿಗೆ ಸಮೀಕರಿಸಿಕೊಂಡು ತಮ್ಮ ರಾಜಧಾನಿಯನ್ನು 'ಹಸ್ತಿನಾವತಿ'ಎಂದು ಕರೆದುಕೊಂಡಂತೆ ತೋರುತ್ತದೆ. ಮೂಲತಃ ಪಶುಪಾಲನ ವೃತ್ತಿಯವರಾಗಿದ್ದಿರಬಹುದಾದ ಸಂಗಮ ವಂಶೀಯರು ತಾವು ಯಾದವ ವಂಶದವರೆಂದು ಸಾಧಿಸಲು ರಾಜಧಾನಿಯ ಹೆಸರೂ ಸಹಾಯಕವಾಗಿರಬೇಕು. ಹಾಗೇ ಅವರ ರಾಜ ಲಾಂಛನವಾದರೂ ವಿಷ್ಣುವಿನ ಅವತಾರವಾದ 'ವರಾಹ'- ಅದು ಅಧರ್ಮದ ಕಡಲಲ್ಲಿ ಮುಳುಗುತ್ತಿದ್ದ ಭೂಮಿಯನ್ನು ಮೇಲೆತ್ತಲು ತಾಳಿದ ಅವತಾರ. ಹೀಗೆ

ಒಂದಕ್ಕೊಂದು ಧಾರ್ಮಿಕ-ಪೌರಾಣಿಕ ಅಂಶಗಳ ಆಶಯಗಳು ಜನರಲ್ಲಿ ಆಗ್ಗೆ ಉಂಟಾಗಿದ್ದ ಒಂದು ಬಗೆಯಾದ ನಿರಾಶಾ ಭಾವನೆಯನ್ನು ತೊಲಗಿಸುವುದರೊಂದಿಗೆ ವಿಜಯನಗರದ ರಾಜರಿಗೆ, ತಾವು ಕೈಗೊಂಡ ಕಾರ್ಯಕ್ಕೆ ಸ್ಥೈರ್ಯವನ್ನು ತುಂಬಿಕೊಳ್ಳಲು ನೆರವಾಗಿರಬೇಕೆನಿಸುತ್ತದೆ.

ಈ ಮೊದಲೇ ಉಲ್ಲೇಖಿಸುವಂತೆ, ವಿಜಯನಗರ ಸಾಮ್ರಾಜ್ಯದ ಪ್ರಾರಂಭದಲ್ಲಿ 'ಆನೆಗೊಂದಿ'ಯೇ ರಾಜಧಾನಿಯಾಗಿದ್ದಿತು. ಕ್ರಿ.ಶ.1368ರವರೆಗಿನ ಯಾವುದೇ ಅಧಿಕೃತ ದಾಖಲೆಗಳಲ್ಲಿ ವಿಜಯನಗರವನ್ನು ತಮ್ಮ ರಾಜಧಾನಿಯೆಂದು ಉಲ್ಲೇಖಿಸಿರುವುದು ಕಂಡುಬರುವುದಿಲ್ಲ. ಇತ್ತೀಚೆಗೆ ಹಂಪಿಯಲ್ಲಿ ಶೋಧವಾದ ಬುಕ್ಕರಾಯನ ಕಾಲದ ಶಾಸನಗಳು (1985, Vijayanagara : Progress of Research -1983-84, Ins No. 2 & 3, pp. 21-23) 'ಬುಕ್ಕರಾಯನ ವಿಜಯನಗರ' ಎಂದು ಖಚಿತವಾಗಿ ಉಲ್ಲೇಖಿಸಿರುವುದರಿಂದ ಬುಕ್ಕರಾಯನ ಕಾಲಕ್ಕಿಂತ ಹಿಂದೆ ವಿಜಯನಗರ ಸಾಮ್ರಾಜ್ಯಕ್ಕೆ ಪೂರ್ಣ ಪ್ರಮಾಣದ ರಾಜಧಾನಿ ರಚನೆಯಾಗಿರಲಿಲ್ಲ ಎಂಬುದು ಇನ್ನಷ್ಟು ಖಚಿತಪಟ್ಟಿದೆ. ಕ್ರಿ.ಶ.1379ರವರೆಗೂ ಹಸ್ತಿನಾವತಿ-ಆನೆಗೊಂದಿ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿ ಕಾರ್ಯನಿರ್ವಹಿಸುತ್ತಿತ್ತೆಂಬುದಕ್ಕೆ ಶಾಸನಾಧಾರವಿದೆ. (ಎ.ಕ.VII, ಹೊನ್ನಾಳಿ 84), ಕನಕಗಿರಿ ಗೋಪುರದ ಹರಿಹರII ಶಾಸನ , ಹಂಪಿ 53). ಸಾಮ್ರಾಜ್ಯದ ಆರಂಭ ದಿಸೆಯಲ್ಲಿ ರಾಜಧಾನಿಯಾಗಿ ಮೆರೆದ ಆನೆಗೊಂದಿ 'ವಿಜಯನಗರ' ರಾಜಧಾನಿಯಾದ ಅನಂತರ, ಅದು ಆ ಬೃಹತ್ ರಾಜಧಾನಿ ವಿಜಯನಗರದ ಒಂದು ಉಪನಗರವಾಗಿ ಉಳಿಯಿತು. ಆದರೆ ಅದು ಒಂದು ಆಯಕಟ್ಟಿನ ಸೈನಿಕ ಠಾಣೆಯಾಗಿ ಮುಂದುವರೆದಿದ್ದಲ್ಲದೆ ಅದು ಒಬ್ಬ ದಂಡನಾಯಕನ ಆವಾಸಸ್ಥಾನವಾಗಿದ್ದಿತೆಂಬ ಅಂಶ ವಿದೇಶಿ ಪ್ರವಾಸಿ ಕಥನಗಳಿಂದ ತಿಳಿದುಬರುತ್ತದೆ. ಇದು ವಿಜಯನಗರದ ಸಾಮ್ರಾಜ್ಯದ ಉತ್ತರದ ನೆರೆಯಲ್ಲೇ ಇದ್ದು ವೈರಿಗಳಾದ ಬಹಮನಿ ಅರಸರ ನೇರ ಆಕ್ರಮಣಗಳಿಂದ ವಿಜಯನಗರವನ್ನು ಸಂರಕ್ಷಿಸುವಲ್ಲಿ ಈ ನೈಸರ್ಗಿಕ ಆಯಕಟ್ಟಿನ ಸ್ಥಳವು ಪ್ರಧಾನ ಪಾತ್ರವಹಿಸಿದ್ದಿತೆಂದರೆ ತಪ್ಪಾಗಲಾರದು.

ಆದರೆ ಕ್ರಿ.ಶ. 1565ರಲ್ಲಿ ರಕ್ಕಸಗಿ ತಂಗಡಿಗಿ ಯುದ್ಧದ ಪರಿಣಾಮವಾಗಿ, ಅನೇಕ ವರ್ಷಗಳ ಕಾಲ ವೈಭವಯುತವಾಗಿ ಮೆರೆದ ರಾಜಧಾನಿ' ವಿಜಯನಗರ' ಹಾಗೂ ಅದಕ್ಕೆ ಹೊಂದಿಕೊಂಡಂತೆ ಇದ್ದ ಆನೆಗೊಂದಿಯೂ ವೈರಿಗಳ ಲೂಟಿ ಸುಲಿಗೆಗಳಿಗೆ ಈಡಾಗಿ ಸಾಕಷ್ಟು ವಿರೂಪ ಹೊಂದಿತು. ಮೂಲತಃ ಸುಲಿಗೆ-ಲೂಟಿ ಉದ್ದೇಶವನ್ನೇ ಪ್ರಧಾನವಾಗಿ ಹೊಂದಿದ್ದ ಮುಸ್ಲಿಂ ಅರಸರು ತಮ್ಮ ಠಾಣೆಯನ್ನು ಈ ಪ್ರದೇಶದ ಮೇಲೆ ಖಾಯಂ ಆಗಿ ನೆಲೆಗೊಳಿಸಿರಲಿಲ್ಲ- ಎಂಬ ಅಂಶ ಶಾಸನಗಳು ಮತ್ತು ಕೈಫಿಯತ್ತುಗಳಲ್ಲಿ ದಾಖಲಾಗಿರುವ ವಿವರಗಳಿಂದ ಗ್ರಹಿಸಬಹುದಾಗಿದೆ.

ಕೆಳದಿ ಅರಸರ ಆಳ್ವಿಕೆಗೆ ಒಳಪಟ್ಟಿದ್ದ ಶಿವಮೊಗ್ಗ ಜಿಲ್ಲೆಯ ನಗರ ತಾಲೂಕಿನ ಶಾಸನಗಳು ಕ್ರಿ.ಶ.1566ನೇ ವರ್ಷಕ್ಕೆ ಸೇರಿದವಾಗಿದ್ದು, "ಸದಾಶಿವ ಮಹಾರಾಯರು ಹಂಪೆಯ ಹಸ್ತಿನಗರಯಲ್ಲಿ " (ಎ.ಕ.VIII, ನಗರ 3), ಹಸ್ತಿನಾವತಿಯೆಂಬ ವಿದ್ಯಾನಗರಿ ಯಿಂದ (ಎ.ಕ.VIII,ನಗರ4), ಹಂಪೆಯ ಹಸ್ತಿನಾವತಿಯೆಂಬ ವಿದ್ಯಾನಗರಿಯಿಂದ (ಎ.ಕ.VIII, ನಗರ 1), ಆಳುತ್ತಿದ್ದಂತೆ ಉಲ್ಲೇಖಿಸುತ್ತವೆ. ಹಾಗೇ ಕಂಪಿಲಿ ಕೈಫಿಯತ್ತಿನಲ್ಲಿ ಉಕ್ತವಾಗಿರುವ"...ರಾಮರಾಯನು ಪಾದಷಾಹಾ ಸಂಗಡ ಕೃಷ್ಣಾ ತೀರದಲ್ಲಿ ರಕ್ಕಸ ತಂಗಡಿಯಂಬೊ ಗ್ರಾಮದ ಬಳಿಯಲ್ಲಿ ಘೋರವಾದಂಥ ಯುದ್ಧವನ್ನು ಮಾಡಿ, ಪಾದಷಾನವರು ರಾಮರಾಜನ ತಲೆಕೊಯಿದ್ದು ಝುಂಡಾಕ್ಕೆ ಕಟ್ಟಿ, ಅಲ್ಲಿಂದ ಪಾದಷ ನವರು ಬಂದು ವಿಜಯನಗರ ಪಟ್ನ ಶರೆಸೂರಿ ಮಾಡಿಕೊಂಡು, ಬೊಕ್ಕಸ ಮೊದಲಾದ ಲುಟಾಯ್ಸಿಕಂಡು, ಯೀ ದೇಶವನ್ನು ಯಾವತ್ತು ನಿಪಾತ್ತು ಮಾಡಿ ಹೊರಟು ಹೋಗೋ ಸಮಯದಲ್ಲಿ ಸದಾಶಿವರಾಯರಿಗೆ ಅಲ್ಪಸ್ವಲ್ಪ ತಾಲ್ಕು ಕೊಟ್ಟು ಹೋದರ್ರು" (1994, ಡಾ. ಎಂ.ಎಂ. ಕಲಬುರ್ಗಿ(ಸಂ); ಕರ್ನಾಟಕ ಕೈಫಿಯತ್ತುಗಳು, ಹಂಪಿ, ಪು. 495). ಎಂಬ ವಿವರದ ಜೊತೆಗೆ ಕುರುಗೋಡು ಕೈಫಿಯತ್ತಿನಲ್ಲಿ ಉಕ್ತವಾಗಿರುವ "... ಅಳಿಯ ರಾಮರಾಯನು ಹತನಾದ ...ತರುವಾಯ ಬಿಜಾಪುರದ ಮೊಗಲ ಶಾಹಾನವರ ಸ್ವಾಧೀನ ಪೆನುಗೊಂಡೆ ಪರಿಯಂತ್ರ ರಾಜ್ಯ ಸ್ವಾಧೀನವಾಯಿತು. ಠಾಣೆ ಕಾಯಮವಾಗಿ ಸಿಂದರಲಿಲ್ಲ, ಪುನಹಾ ಅಳಿಯ ರಾಮರಾಜನ ತಮ್ಮ ಕೋದಂಡ ರಾಮರಾಜನು ಕೆಲವು ಜಮಿಯತ್ ಭರತಿ ಮಾಡಿಕ್ಕೊಂಡು ಕೃಷ್ಣಾನದಿ ಆರಂಭಾ ಮಾಡಿಕ್ಕೊಂಡು ಠಾಣ್ಯವನ್ನು ಕಾಯಮ ಮಾಡಿ ... " ದರು. (ಅದೇ, ಪು. 450) ಎಂಬ ವಿವರಗಳನ್ನು ಗಮನಿಸಿದರೆ, ವಿಜಯನಗರದ ಅರಸರು ರಕ್ಕಸಗಿ ತಂಗಡಗಿ ಯುದ್ಧದ ನಂತರ ಏಕಾಯೇಕಿ ಹಂಪೆ ಪ್ರದೇಶವನ್ನು ತೊರೆದು, ಕೂಡಲೇ ಪೆನುಗೊಂಡೆಯನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಆಳತೊಡಗಲಿಲ್ಲ; ಎಂಬ ಅಂಶ ಸ್ಪಷ್ಟವಾಗುತ್ತದೆ. ಪೆನುಗೊಂಡೆಯು ಸಂಗಮ ಅರಸರ ಕಾಲದಿಂದಲೂ ವಿಜಯನಗರ ಸಾಮ್ರಾಜ್ಯದ ಒಂದು ಉಪ ರಾಜಧಾನಿ ಯಾಗಿ ಕಾರ್ಯ ನಿರ್ವಹಿಸುತ್ತಿದ್ದುದು ಸರಿಯಷ್ಟೆ. ಆದರೆ ಅದೊಂದು ಅಧಿಕೃತ ರಾಜಧಾನಿಯಾಗಿ ಪರಿಗಣಿತವಾಗಿರುವುದು ಕ್ರಿ.ಶ.1571ರ ಅನಂತರ ಎಂಬ ಅಂಶವನ್ನು ಶಾಸನಗಳು (ಎ.ಕ.VIII ಸೊರಬ 55,ಕ್ರಿ.ಶ. 1571; ARIE 1972-73 / A4, ಕ್ರಿ.ಶ.1577;ಅದೇ.9,ಬೇಲೂರು 219, ಕ್ರಿ.ಶ.1583;ಕ.ವಿ.ಶಾ.ಸಂ-5, ಭಾಗ1,ಶಾ.ಸಂ. 89, ಕ್ರಿ.ಶ.1583; ಅದೇ ಶಾ.ಸಂ.185, ಕ್ರಿ.ಶ.1584; ಅದೇ ಶಾ.ಸಂ.86; KI Vol. V NO.8, ಅದೇ VI, No. 72 etc) ದೃಢಪಡಿಸುತ್ತವೆ. ಅಂದರೆ ಅವರು ತಮ್ಮ ಪ್ರಾಚೀನ ರಾಜಧಾನಿಯಾದ ಆನೆಗೊಂದಿ (ಹಸ್ತಿನಾವತಿ)ಯಿಂದಲೇ ತಮ್ಮ ಆಡಳಿತವನ್ನು ಹಲವು ವರ್ಷಗಳ ಕಾಲ ಮುಂದುವರಿಸಿದ್ದರೆಂಬುದು ಖಚಿತವಾಗುತ್ತದೆ.

ಈ ಮೇಲಿನ ವಿವರಣೆಯಿಂದ 'ಹಸ್ತಿನಾವತಿ ವಳಿತ' ಎಂಬುದು ವಿಜಯನಗರ ಅರಸರ ಆಳ್ವಿಕೆಯ ಆರಂಭದಲ್ಲಿ ರೂಪುಗೊಂಡು ಅವರ ಆಳ್ವಿಕೆಗೆ ಒಳಪಟ್ಟ ಪ್ರದೇಶದ ಸೂಚಕವೆಂದು ಗ್ರಹಿಸಬಹುದಾಗಿದೆ. ಈ ಪ್ರದೇಶದ ಮೇಲೆಯೇ ಮೊದಲಿಗೆ ತಮ್ಮ ಆಡಳಿತವನ್ನು ನೆಲೆಗೊಳಿಸಿದರೆಂದು ಖಚಿತವಾಗಿ ಹೇಳಬಹುದು. ಅಂದು ಪರಕೀಯರ ದುರಾಕ್ರಮಣಗಳಿಂದ ಏರ್ಪಟ್ಟಿದ್ದ ಒಂದು ತೆರನಾದ ರಾಜಕೀಯ ನಿರ್ವಾತ ಪರಿಸ್ಥಿತಿಯ ಲಾಭವನ್ನು ಹಾಗೂ ಆಗ್ಗೆ ಜನರಲ್ಲಿ ರೂಪುಗೊಂಡಿದ್ದ ಈ ಅರಸರ ಬಗೆಗಿನ ಪೌರಾಣಿಕ, ಧಾರ್ಮಿಕ ಭಾವನೆಗಳೂ ಸೇರಿಕೊಂಡು ಪ್ರಾಯಶಃ ಹೆಚ್ಚು ಶ್ರಮವಿಲ್ಲದೆಯೇ ಅನೇಕ ಪ್ರದೇಶಗಳು ಇವರ ಅಧೀನಕ್ಕೆ ಒಳಪಟ್ಟಿರಬೇಕು. ಕೇವಲ ಒಂದು ದಶಕದ ಅವಧಿ ಯೊಳಗೇ, ಕೃಷ್ಣಾನದಿಯ ದಕ್ಷಿಣಕ್ಕಿರುವ ದಕ್ಷಿಣ ಭಾರತದ (ಪರ್ಯಾಯ ದ್ವೀಪದ) ಬಹುಭಾಗಗಳು ವಿಜಯನಗರದ ಅರಸರ ಆಳ್ವಿಕೆಗೊಳಪಟ್ಟಿರುವುದು ಕಂಡುಬರುತ್ತದೆ. ಹೀಗೆ' ಹಸ್ತಿನಾವತಿ ವಳಿತ', ವಿಜಯನಗರ ಸಾಮ್ರಾಜ್ಯದ ಆರಂಭಿಕ ಆಡಳಿತ ತಾಣವಾಗಿ, ಆ ರಾಜ್ಯದ ವಿಸ್ತರಣೆಗೆ ಅಗತ್ಯವಿದ್ದ ನೈಸರ್ಗಿಕ ಭದ್ರತೆಯೊಂದಿಗೆ, ಪೌರಾಣಿಕ, ಧಾರ್ಮಿಕ ಪರಿಸರವನ್ನು ಉಂಟುಮಾಡಿದ್ದ ಒಂದು ವಿಶಿಷ್ಟ ತಾಣವಾಗಿದ್ದಿತೆಂದು ಹೇಳಬಹುದಾಗಿದೆ.

ಆಧಾರ ಸೂಚಿ

Indian Antiqary, Vol. VI.
Epigraphia Carnatica, (old Vols.) VI, VII, VIII, IX & XII.
Epigraphia Carnatica, (New Vols) 5,9 (ಮೈಸೂರು ವಿ.ವಿ.)
South Indian Inscriptions, Vol. IX.
Mysore Archaeological Reports 1929 &^1932.
Annual Reports on Indian Epigraphy 1958-59, 1972-73.
Vijayanagara; Progress of Research - 12983-84 (1985)
Inscription Nos. 2&3 pp. 21-23.
Kosambi D.D.(1962), Myth and Reality, Bombay.
(ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧,೨,೩,೪ ಸಂ. ದೇವರಕೊಂಡಾರೆಡ್ಡಿ ಮತ್ತು ಇತರರು

ಮೈ.ಹ. ರಾಮಶರ್ಮ, (1960), ರಣಧೀರ ರಾಮನಾಥ, ಮೈಸೂರು

ಡಾ. ಅ.ಸುಂದರ(1997), ಕಿಷ್ಕಿಂಧೆ ಹನುಮನ ತವರು? ಹೊಸಪೇಟೆ

ಡಾ.ಎಂ.ಎಂ. ಕಲಬುರ್ಗಿ(1994), ಕರ್ನಾಟಕ ಕೈಫಿಯತ್ತುಗಳು, ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

ಡಾ. ಚೆನ್ನಬಸಪ್ಪ ಎಸ್. ಪಾಟೀಲ (1999) ಕರ್ನಾಟಕ ಕೋಟೆಗಳು ಸಂಪುಟ-೧ ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೦. ವಿಜಯನಗರ ನೀರಾವರಿ ಪದ್ಧತಿ : ಒಂದು ಹೊಸ ಸಂಶೋಧನೆ

ಕೃಷ್ಣ

ಪೀಠಿಕೆ : ಮಧ್ಯಕಾಲೀನ ಇತಿಹಾಸದಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಪಡೆದಂತಹ ರಾಜ ವಂಶಗಳಲ್ಲಿ ವಿಜಯಗರವೂ ಒಂದು. ಈ ಸಾಮ್ರಾಜ್ಯದ ರಾಜಧಾನಿಯಾದ ವಿಜಯ ನಗರವು ಇಂದು ಹಂಪಿ ಎಂದು ಪ್ರಚಲಿತದಲ್ಲಿದ್ದು, ತುಂಗಭದ್ರಾ ನದಿಯ ದಕ್ಷಿಣ ದಂಡೆಯಲ್ಲಿದೆ. ಇದು ಸಾಂಪ್ರದಾಯಿಕವಾಗಿ ಪಂಪಾಕ್ಷೇತ್ರ, ಕಿಷ್ಕಿಂದಾ ಕ್ಷೇತ್ರ ಅಥವಾ ಭಾಸ್ಕರ ಕ್ಷೇತ್ರವೆಂದು ಬಹಳ ಪ್ರಸಿದ್ಧಿಯನ್ನು ಪಡೆದಿದೆ. ಈ ಕ್ಷೇತ್ರವು ವಿಜಯನಗರದ ಪೂರ್ವಕಾಲದಿಂದಲೂ ತನ್ನ ಪಾವಿತ್ರತೆಯನ್ನು ಉಳಿಸಿಕೊಂಡು ಬಂದಿದ್ದು, ಕರ್ನಾಟಕದ ಒಂದು ಪ್ರಮುಖ ಯಾತ್ರಾಸ್ಥಳವಾಗಿದೆ. ವಿಜಯನಗರ ನೈಸರ್ಗಿಕ ಸೌಂದರ್ಯವುಳ್ಳ, ಪರ್ವತಗಳಿಂದ ಸುತ್ತುವರೆಯಲ್ಪಟ್ಟು, ಹೆಚ್ಚಿನ ಸಂರಕ್ಷಣೆಯುಳ್ಳ ಕಣಿವೆ ಪ್ರದೇಶದಲ್ಲಿ ಕ್ರಿ.ಶ. 1336ರಲ್ಲಿ ಸ್ಥಾಪಿಸಲ್ಪಟ್ಟು ಕ್ರಿ.ಶ. 1565ರ ರಕ್ಕಸ ತಂಗಡಿ ಮಹಾಯುದ್ಧದಲ್ಲಿ ಪತನಗೊಳ್ಳುವ ತನಕ ಸುಮಾರು ಎರಡೂವರೆ ಶತಮಾನಗಳ ಕಾಲ ಮೆರೆದು ಅಂದಿನ ಸಮಕಾಲೀನ ಇತಿಹಾಸದಲ್ಲಿ ಒಂದು ಸುಂದರ, ಸುವ್ಯವಸ್ಥಿತ, ಸಂಪದ್ಭರಿತ ರಾಜಧಾನಿ ಎಂದು ಬಹಳ ಪ್ರಖ್ಯಾತಿಯನ್ನು ಪಡೆದಿತ್ತು. ಇದಕ್ಕೆ ಸಾಕ್ಷಿ ಎಂಬಂತೆ ನಿಂತಿರುವ ಬೃಹತ್ತಾದ, ವಿಸ್ತಾರವಾದ ದೇವಾಲಯಗಳ ಸಂಕೀರ್ಣ, ವಿಶಾಲವಾದ ಬಜಾರುಗಳು, ಸುಭದ್ರತೆ ಗಾಗಿ ನಿರ್ಮಿಸಿರುವ ಕೋಟೆ ಕೊತ್ತಳಗಳು, ರಸ್ತೆಗಳು ಮತ್ತು ಸುವ್ಯವಸ್ಥಿತವಾದ ನೀರಾ ವರಿ ವ್ಯವಸ್ಥೆಗಳು ಪ್ರಮುಖ ಆಕರಗಳಾಗಿವೆ. ಇವುಗಳು ತಮ್ಮದೇ ಆದ ಸಾಂಸ್ಕೃತಿಕ ಮತ್ತು ಚಾರಿತ್ರಿಕ ಪ್ರಭಾವವನ್ನು ಪ್ರತಿಯೊಬ್ಬರ ಮನಸ್ಸಿನಲ್ಲೂ ಹಸಿರಾಗಿರುವಂತೆ ಮಾಡಿವೆ.

ನೀರಾವರಿ ಪದ್ಧತಿ


ವಿಜಯನಗರದ ಅರಸರು ದೇಶದ ಆರ್ಥಿಕಾಭಿವೃದ್ಧಿ, ರಕ್ಷಣೆ ಮತ್ತು ಜನ ಸಾಮಾನ್ಯರ ಹಿತದೃಷ್ಟಿಯಿಂದ ಉತ್ತಮವಾದ ನೀರಾವರಿ ಪದ್ಧತಿಯನ್ನು ಜಾರಿಗೆ ತಂದಿದ್ದರು. ಇವರ ನೀರಾವರಿ ವ್ಯವಸ್ಥೆಯ ಬಗ್ಗೆ ತಿಳಿಯಲು ಈಗ ಉಳಿದಿರುವ ಅವಶೇಷಗಳು ಹಾಗೂ ಚರಿತ್ರೆಯನ್ನು ಅವಲೋಕಿಸಿದಾಗ ತಿಳಿದು ಬರುವ ಅಂಶ

ಗಳೆಂದರೆ, ಇವರು ದೈನಂದಿನ ಬಳಕೆಗೆ ಹಾಗೂ ಕೃಷಿಗಾಗಿ ಬೇರೆ ಬೇರೆ ನೀರಾವರಿ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿದ್ದರು. ದೈನಂದಿನ ಬಳಕೆಗೆ ಕೆರೆ, ನದಿ ಮತ್ತುಮಳೆಯಿಂದ ಶೇಖರಿಸಿದ ನೀರನ್ನು ರಾಜಧಾನಿಯ ಎಲ್ಲಾ ಭಾಗಗಳಿಗೂ ವಿಶೇಷವಾಗಿ ಅಂತಃಪುರ ಹಾಗೂ ಅದರ ಸುತ್ತಮುತ್ತ ಲಿನ ಪ್ರದೇಶಗಳಿಗೆ ಹರಿದು ಹೋಗುವುದಕ್ಕೆ ಕಾಲುವೆಗಳು ಮತ್ತು ಅಂತರ್ ಕಾಲುವೆ ಗಳನ್ನು ನಿರ್ಮಿಸಿದ್ದರು. ಅವುಗಳು ತೆರೆದ ಹಾಗೂ ಮುಚ್ಚಿದ ಕಾಲುವೆಗಳಾಗಿದ್ದವು. ನೀರಿನ ಶೇಖರಣೆಗೆ ಅಲ್ಲಲ್ಲಿ ತೊಟ್ಟಿಗಳನ್ನು ನಿರ್ಮಿಸಿದ್ದರು. ಇದರ ತಾಂತ್ರಿಕತೆಯ ಕೌಶಲ್ಯದ ಕುರುಹಾಗಿ ನಿರ್ಮಿಸಿರುವ ಇತ್ತೀಚಿನ ಉತ್ಖನನದ ಮೂಲಕ ರಾಜಪ್ರಾಂಗಣದಲ್ಲಿ ಹೊರತೆಗೆಯಲಾದ ಪುಷ್ಕರಣಿ ಸಾಕ್ಷಿಯಾಗಿದೆ. ಈಗಿನ ಕಮಲಾಪುರ ಕೆರೆಯಿಂದ ರಾಜಪ್ರಾಂಗಣದ ಎಲ್ಲಾ ಭಾಗಗಳಿಗೂ ನೀರು ಸರಬರಾಜಾಗುತ್ತಿತ್ತೆಂದು ತಿಳಿಯುತ್ತದೆ.

ಕೃಷಿ ಬಳಕೆಗಾಗಿ ನದಿ ಮತ್ತು ಹಳ್ಳಗಳಿಗೆ ಹರಿಯುವ ನೀರಿಗೆ ಅಡ್ಡಲಾಗಿ ಒಂದು ಗುಡ್ಡದಿಂದ ಮತ್ತೊಂದು ಗುಡ್ಡಕ್ಕೆ ಅಣೆಕಟ್ಟುಗಳನ್ನು ನಿರ್ಮಿಸುತ್ತಿದ್ದರು. ಅವುಗಳಿಗೆ ಕಾಲುವೆಗಳು ಮತ್ತು ಉಪಕಾಲುವೆಗಳನ್ನು ಜೋಡಿಸಿ ಕೃಷಿ ಭೂಮಿಗೆ ನೀರು ಸರಬರಾಜಾಗುವಂತೆ ಮಾಡಲಾಗಿತ್ತು. ಅಂತಹ ಅಣೆಕಟ್ಟುಗಳೆಂದರೆ ಹುಲಿಗೆ ಅಣೆಕಟ್ಟು, ಶಿವಪುರ ಅಣೆಕಟ್ಟು, ಸಾಣಾಪುರ ಅಣೆಕಟ್ಟು ಮುಂತಾದವುಗಳು. ಈ ಸಾಮ್ರಾಜ್ಯದ ಹೆಚ್ಚಿನ ಅಣೆಕಟ್ಟುಗಳನ್ನು ಕೃಷ್ಣದೇವರಾಯನ ಕಾಲದಲ್ಲಿ ನಿರ್ಮಿಸಲಾಗಿತ್ತೆಂದು ತಿಳಿದು ಬರುತ್ತದೆ. ಅಂತಹ ಅಣೆಕಟ್ಟುಗಳು ಇಂದಿಗೂ ಬಳಕೆಯಲ್ಲಿರುವುದು ಕರ್ನಾಟಕದ ಬಳ್ಳಾರಿ, ಕೊಪ್ಪಳ ಮತ್ತುರಾಯಚೂರು ಜಿಲ್ಲೆಗಳು ಹಾಗೂ ಆಂಧ್ರ ಪ್ರದೇಶದ ಕರ್ನೂಲ್ ಜಿಲ್ಲೆಗಳಲ್ಲಿ ಕಂಡು ಬರುತ್ತದೆ. ಅಣೆಕಟ್ಟುಗಳಲ್ಲಿ ಅತೀ ಮುಖ್ಯವಾದದ್ದು ತುರ್ತು ಅಣೆಕಟ್ಟು. ಇದನ್ನು ಕೃಷಿ ಮತ್ತು ದೈನಂದಿನ ಬಳಕೆಗಳೆರಡರಲ್ಲಿಯೂ ಉಪಯೋಗಿಸಲಾಗಿತ್ತು. ಇದನ್ನು ಎರಡನೆಯ ಬುಕ್ಕನು ಕ್ರಿ.ಶ. 1399ರಲ್ಲಿ ನಿರ್ಮಿಸಿದ ನೆಂದು ತಿಳಿದು ಬರುತ್ತದೆ. ಇದಲ್ಲದೆ ಕೆರೆ ಮತ್ತು ಬಾವಿಗಳನ್ನು ವಿವಿಧ ವಿಸ್ತೀರ್ಣಗಳಲ್ಲಿ ನಿರ್ಮಿಸಲಾಗಿದ್ದು, ಅವುಗಳು ಮಳೆ ಮತ್ತು ನದಿ ಆಧಾರಿತವಾಗಿದ್ದವು. ಅವುಗಳಿಗೆ ಸಾಕ್ಷಿಯಾಗಿ ಈಗಿನ ಕಮಲಾಪುರ ಕೆರೆ, ಪಾಪಿನಾಯಕನ ಹಳ್ಳಿ ಕೆರೆ ಮುಂತಾದವುಗಳನ್ನು ಈಗಲೂ ಕಾಣಬಹುದು. ಇದೇ ರೀತಿ ಧಾರ್ಮಿಕ ಕಾರ್ಯಗಳಿಗಾಗಿ ಪ್ರತಿಯೊಂದು ದೇವಾಲಯಕ್ಕೂ ಒಂದೊಂದು ಪುಷ್ಕರಣಿಗಳನ್ನು ನಿರ್ಮಿಸುತ್ತಿದ್ದರು. ಉದಾಹರಣೆಗೆ ವಿಠಲದೇವಾಲಯದ ಪುಷ್ಕರಣಿ, ಕೃಷ್ಣ ದೇವಾಲಯದ ಪುಷ್ಕರಣಿ, ಅಚ್ಯುತ ದೇವರಾಯ ದೇವಾಲಯದ ಪುಷ್ಕರಣಿ ಮುಂತಾದವುಗಳನ್ನು ಹೆಸರಿಸಬಹುದು.

ಹೊಸ ಸಂಶೋಧನೆ

ಹಂಪಿಯ ಸ್ಮಾರಕಗಳು ಕಾಲಾನುಕ್ರಮದಲ್ಲಿ ಶಿಥಿಲಗೊಂಡಿರುವುದರಿಂದ ಅವುಗಳ ಪುನರ್ನಿರ್ಮಾಣ ಕಾರ್ಯವನ್ನು ಭಾರತೀಯ ಪುರಾತತ್ವ ಸರ್ವೇಕ್ಷಣೆಯ ಬೆಂಗಳೂರು ವಲಯ ಕೈಗೆತ್ತಿಕೊಂಡು ಕೋಟೆ ಗೋಡೆಗಳು, ದೇವಸ್ಥಾನಗಳು ಮುಂತಾದವುಗಳ ಪುನರ್ನಿರ್ಮಾಣ ಮಾಡುತ್ತಿವೆ. ಅದೇ ರೀತಿ ರಾಜಪ್ರಾಂಗಣದ ಪೂರ್ವದ ಹೊರ ಆವರಣ ಗೋಡೆಯನ್ನು ಸಂರಕ್ಷಿಸುವ ಸಲುವಾಗಿ, ನಿಧಾನವಾಗಿ ಗೋಡೆ ಬಿಚ್ಚಲು, ಅದರ



ಪಕ್ಕದಲ್ಲಿ ಶೇಖರಣೆಯಾಗಿದ್ದ ಮಣ್ಣಿನ ರಾಶಿಯನ್ನು ತೆಗೆಯುವಾಗ, ಅದರಲ್ಲಿ ಅಡಗದ್ದಿ ನೀರು ಶೇಖರಣೆ ಮತ್ತು ಸರಬರಾಜು ವ್ಯವಸ್ಥೆಯನ್ನು ಹೊಂದಿದ್ದ ತೊಟ್ಟಿಯೊಂದು ಹೊರತೆಗೆಯಲ್ಪಟ್ಟಿತ್ತು (ನಕ್ಷೆ) ಈ ತೊಟ್ಟಿಯು ಚೌಕಾಕಾರವಾಗಿದ್ದು ಅದರ ಅಳತೆಯು ಪೂರ್ವ-ಪಶ್ಚಿಮ ಹಾಗೂ ಉತ್ತರ -ದಕ್ಷಿಣವಾಗಿ 6.2ಮಿ. ಇದೆ. ತೊಟ್ಟಿಯ ನೈಋತ್ಯ ದಿಕ್ಕಿನಲ್ಲಿ 1.5ಮೀ ಆಳವಿದ್ದು, ಅದರ ಈಶಾನ್ಯ ದಿಕ್ಕಿನಲ್ಲಿ ಕೇವಲ 0.6ಮಿ ಆಳವಿದೆ. ಮಳೆಯ ನೀರನ್ನು ಶೇಖರಣೆ ಮಾಡಲೆಂದು ಈ ತೊಟ್ಟಿಯನ್ನು ಎತ್ತರವಾದ ಪ್ರದೇಶ ದಿಂದ ನೀರು ಹರಿದು ಬರುವ ಇಳಿಜಾರಿನಲ್ಲಿ ನಿರ್ಮಿಸಲಾಗಿದೆ. ಈ ತೊಟ್ಟಿಯ ನೈಋತ್ಯ ದಿಕ್ಕಿನ ಒಂದು ಭಾಗವಾದ ನೈಸರ್ಗಿಕ ಬಂಡೆಯನ್ನು ಕೊರೆದು ನಯಗೊಳಿಸಲಾಗಿದೆ. ಉಳಿದ ಭಾಗಗಳನ್ನು ಕಲ್ಲು ಗೋಡೆಯಿಂದ ಕಟ್ಟಲಾಗಿದೆ. ಈ ಗೋಡೆಗಳಿಗೆ ಗಾರೆಯ ಲೇಪನ ಮಾಡಿ ನೀರು ಪೋಲಾಗದಂತೆ ಮಾಡಲಾಗಿದೆ. ಈ ತೊಟ್ಟಿಗೆ ಎರಡು ಹೊರ ಅರಿವು ಕೊಳವೆಗಳಿವೆ. ಅವುಗಳಲ್ಲಿ ಒಂದು ತೊಟ್ಟಿಯ ಆಗ್ನೇಯ ದಿಕ್ಕಿನ ಎತ್ತರ ಪ್ರದೇಶದಲ್ಲಿದ್ದು, ಅದಕ್ಕೆ ಚಪ್ಪಟೆ ಕಲ್ಲುಗಳ ಕಾಲವೆಯನ್ನು ಜೋಡಿಸಲಾಗಿದೆ. ಈ ಕಾಲುವೆಯ ದಕ್ಷಿಣಾಭಿಮುಖವಾಗಿ ಚಲಿಸುತ್ತಿದೆ. ಮಧ್ಯದಲ್ಲಿ ಎರಡು ಬಂಡೆಗಳ



ಮೂಲಕ ಹಾಯ್ದು ಸ್ವಲ್ಪ ತಿರುವನ್ನು ತೆಗೆದುಕೊಂಡು ಮುಂದೆ ನೈಋತ್ಯ ದಿಕ್ಕಿಗೆ ಸಾಗಿ ಮತ್ತೆ ತಿರುವು ಪಡೆದು ಪಶ್ಚಿಮಾಭಿಮುಖವಾಗಿ ಚಲಿಸುತ್ತದೆ. ತದನಂತರ ರಾಜ ಪ್ರಾಂಗಣದ ಎರಡೂ ಆವರಣ ಗೋಡೆಗಳನ್ನು ಹಾಯ್ದು ಒಳಭಾಗಕ್ಕೆ ಹೋಗಿ ಮುಂದೆ ಕಾಣದಾಗಿದೆ. ಇಲ್ಲಿಂದ ಇದು ಯಾವ ಭಾಗಕ್ಕೆ ಹರಿದುಹೋಗುತ್ತದೆಂದು ನಿಖರವಾಗಿ ಹೇಳಲಾಗುವುದಿಲ್ಲ. ಆದರೆ ಈ ಕಾಲುವೆಯಿಂದ ರಾಜಪ್ರಾಂಗಣದ ಒಳಭಾಗಕ್ಕೆ ನೀರು ಸರಬರಾಜು ಮಾಡಲಾಗುತ್ತಿತ್ತೆಂದು ತಿಳಿದು ಬರುತ್ತದೆ. ಮತ್ತೊಂದು ಒಳ ಅರಿವು ಕೊಳವೆಯನ್ನು ತೊಟ್ಟಿಯ ಮಧ್ಯಭಾಗದಲ್ಲಿ ಅಳವಡಿಸಿದೆ. ಅದು ಪಶ್ಚಿಮ ದಿಕ್ಕಿನಲ್ಲಿದ್ದು, ಅದಕ್ಕೆ ಮಣ್ಣಿನ ಕೊಳವೆಗಳನ್ನು ಜೋಡಿಸಿ ಕಾಲುವೆಯನ್ನು ನಿರ್ಮಿಸಲಾಗಿದೆ. ಈ ಕಾಲುವೆಯೂ ಪಶ್ಚಿಮಾಭಿಮುಖವಾಗಿ ಚಲಿಸುತ್ತಾ ಮಧ್ಯದಲ್ಲಿ ಸ್ವಲ್ಪ ತಿರುವು ತೆಗೆದು ಕೊಂಡು ರಾಜಪ್ರಾಂಗಣದ ಒಳ ಆವರಣ ಗೋಡೆಯ ದಕ್ಷಿಣ ಭಾಗಕ್ಕೆ ಚಲಿಸಿ ಮುಂದೆ ಕಾಣದಾಗಿದೆ. ಈ ಕೊಳವೆಗಳನ್ನು ಮಣ್ಣಿನಿಂದ ಮಾಡಿರುವುದರಿಂದ ಅವುಗಳ ಸಂರಕ್ಷಣೆಗೆ ಕಲ್ಲು, ಇಟ್ಟಿಗೆ ಮತ್ತು ಗಾರೆಗಳನ್ನು ಉಪಯೋಗಿಸಿ ಸಣ್ಣ ಗೋಡೆ ಯನ್ನು ಅವುಗಳ ಇಕ್ಕೆಲಗಳಲ್ಲಿ ನಿರ್ಮಿಸಲಾಗಿದೆ. ಈ ಕಾಲುವೆಯಿಂದ ರಾಜಪ್ರಾಂಗಣದ ದಕ್ಷಿಣದ ಹೊರಭಾಗಗಳಿಗೆ ನೀರು ಸರಬರಾಜಾಗುತ್ತಿತ್ತೆಂದು ತಿಳಿದು ಬರುತ್ತದೆ.

ಈ ನೀರಿನ ತೊಟ್ಟಿ, ಅದರ ವಿನ್ಯಾಸ, ಅದನ್ನು ನಿರ್ಮಿಸಿರುವ ಸ್ಥಳ, ಅಲ್ಲದೆ ಅಲ್ಲಿ ನೀರು ಶೇಖರಿಸಲು ಮತ್ತು ನೀರು ಸರಬರಾಜು ಮಾಡಲು ಅಳವಡಿಸಲಾಗಿದ್ದ ಕೊಳವೆಗಳ ಬಗ್ಗೆ ಮತ್ತು ರಾಜಪ್ರಾಂಗಣಕ್ಕೆ ನೀರು ಹೇಗೆ ಸರಬರಾಜಾಗುತ್ತಿತ್ತು ಎಂಬ ವಿಷಯ ವಿಜಯನಗರ ರಾಜಧಾನಿಯ ನೀರಿನ ವ್ಯವಸ್ಥೆಯ ಹೆಚ್ಚಿನ ಅಧ್ಯಯನಕ್ಕೆ ಮಹತ್ವದ ಕೊಡುಗೆಯನ್ನು ನೀಡಿದೆ ಹಾಗೂ ನೈಸರ್ಗಿಕ ಜಲಸಂಪನ್ಮೂಲ ಕ್ರೋಢೀ ಕರಣಕ್ಕೆ ಇದೊಂದು ಅತ್ಯುತ್ತಮ ನಿದರ್ಶನವಾಗಿದೆ.

ಕೃತಜ್ಞತೆಗಳು

ಈ ಪ್ರಬಂಧವನ್ನು ಬರೆಯಲು ಪ್ರೋತ್ಸಾಹಿಸಿದ ಶ್ರೀ ಸಿ. ಬಾಬು ರಾಜೀವ್, ಮಹಾನಿರ್ದೇಶಕರು, ಡಾ.ಎಸ್.ವಿ.ಪಿ. ಹಳಕಟ್ಟಿ, ಅಧೀಕ್ಷಕ ಪುರಾತತ್ವವಿದ, ಶ್ರೀ ಸಿ.ಬಿ. ಪಾಟೀಲ್, ಉಪಾಧೀಕ್ಷಕ ಪುರಾತತ್ವವಿದ, ಭಾರತೀಯ ಪುರಾತತ್ವ ಸರ್ವೇಕ್ಷಣೆ ಇವರಿಗೆ ನಾನು ಚಿರ ಋಣಿಯಾಗಿದ್ದೇನೆ.

ಆಧಾರ ಗ್ರಂಥಗಳು

1. ಡೆವಿಸನ್ - ಜೆಂಕಿನ್ಸ್, ಡೊಮಿನಿಕ್ ಜೆ, ದಿ ಇರಿಗೇಷನ್ ಅಂಡ್ ವಾಟರ್‌ಸಿಸ್ಟಂ ಆಫ್ ವಿಜಯನಗರ. ನ್ಯೂ ದಿಲ್ಲಿ, ಮನೋಹರ್ / ಅಮೇರಿಕನ್ ಇಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್ 1997
2. ದೇಸಾಯಿ ಪಿ.ಬಿ., ಎ ಹಿಸ್ಟರಿ ಆಫ್ ಕರ್ನಾಟಕ, ಧಾರವಾಡ, ಕರ್ನಾಟಕ ಯೂನಿವರ್ಸಿಟಿ, 1971
3. ದೇವಕುಂಜರಿ, ಡಿ., ಹಂಪಿ, ನ್ಯೂ ದೆಲ್ಲಿ, ಆರ್ಕಿಯಾಲಜಿಕಲ್ ಸರ್ವೆ ಆಫ್ ಇಂಡಿಯಾ, 1998
4. ಫ್ರಿಡ್ಜ್, ಜಾನ್ ಎಂ., ಮಿಚಲ್ ಜಾರ್ಜ್, ಅಂಡ್ ನಾಗರಾಜ ರಾವ್, ಎಂ.ಎಸ್., ದಿ ರಾಯಲ್ ಸೆಂಟರ್ ಅಟ್ ವಿಜಯನಗರ : ಪ್ರಿಲಿಮಿನರಿ ರಿಪೋರ್ಟ್, ವಿಕ್ಟೋರಿಯಾ, ಯೂನಿವರ್ಸಿಟಿ ಆಫ್ ಮೆಲ್ಬೋರ್ನ್, 1984
5. ಕೊಟ್ರಯ್ಯ, ಸಿ.ಟಿ.ಎಂ., ಇರಿಗೇಷನ್ ಸಿಸ್ಟಂ ಅಂಡರ್ ವಿಜಯನಗರ ಎಂಪೈರ್. ಮೈಸೂರು, ಡೈರೆಕ್ಟರೇಟ್ ಆಫ್ ಆರ್ಕಿಯಾಲಜಿ ಅಂಡ್ ಮ್ಯೂಸಿಯಂ, 1995
6. ಲಾಗ್ ಹರ್ಸ್ಟ್, ಎ.ಹೆಚ್., ಹಂಪಿ ರುಯಿನ್ಸ್. ಕಲ್ಕತ್ತಾ 1917
7. ನರಸಿಂಹಯ್ಯ ಬಿ., ಎ ಡಿಕೇಡ್ ಆಫ್ ಎಕ್ಸಕವೇಷನ್ ಅಟ್ ವಿಜಯನಗರ (ಹಂಪಿ) ಇನ್ ದೀಕ್ಷಿತ್, ಜಿ.ಎಸ್. (ಇಡಿ)., ಅರ್ಲಿ ವಿಜಯನಗರ : ಸ್ಟಡೀಸ್ ಇನ್ ಇಟ್ಸ್ ಹಿಸ್ಟರಿ ಅಂಡ್‌ಕಲ್ಚರ್, ಬೆಂಗಳೂರು, ಬಿ.ಎಂ.ಎಸ್. ಮೆಮೋರಿಯಲ್ ಫೌಂಡೇಷನ್ 1988.

೩೧. ವಿಜಯನಗರ ಕಾಲದ ಬಸರೂರಿನ ಮಠಗಳು ಮತ್ತು ಛತ್ರಗಳು

ಡಾ.ಪಿ.ಎನ್. ನರಸಿಂಹಮೂರ್ತಿ

ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನಲ್ಲಿರುವ ಬಸರೂರು ಒಂದು ಪ್ರಾಚೀನ ಬಂದರು ನಗರ. ಪಶ್ಚಿಮ ಸಮುದ್ರಕ್ಕೇ ತೀರ ಸಮೀಪದಲ್ಲಿ ವಾರಾಹಿ ನದಿಯ ದಕ್ಷಿಣ ದಂಡೆಯ ಮೇಲಿದೆ ಇದು. ಪ್ರಾಚೀನ ಆಳುಪ ಅರಸರ ಕಾಲದಿಂದ ಬ್ರಿಟಿಷ್ ಆಡಳಿತ ದವರೆಗೆ ಇದು ಅತಿ ಪ್ರಮುಖವಾದ ವಾಣಿಜ್ಯ ಕೇಂದ್ರವಾಗತ್ತು. ವಿದೇಶೀಯರು ಮತ್ತು ಸ್ವದೇಶೀಯರು ಸೇರಿದಂತೆ ಹಲವು ವರ್ಗಗಳನ್ನು ಹೊಂದಿದ ಜನ ಸಮುದಾಯ ಇಲ್ಲಿತ್ತು. ತುಂಬಾ ಚಟುವಟಿಕೆಯಿಂದ ಇದ್ದ ಈ ನಗರ ಈಗ ಒಂದು ಗ್ರಾಮವಾಗಿ ವಿಶ್ರಾಂತ ಜೀವನದಲ್ಲಿದೆ.

ಬಸರೂರು ತನ್ನ ಪ್ರತಿಷ್ಠೆಯ ಪರಾಕಾಷ್ಠೇಗೇರಿದುದು ವಿಜಯನಗರಕಾಲದಲ್ಲಿ. ಈಗ ಉಳಿದಿರುವ ಇಲ್ಲಿನ ಹೆಚ್ಚಿನ ಸ್ಮಾರಕಗಳು ವಿಜಯನಗರ ಕಾಲದವು ಮತ್ತೆ ಕೆಲವು ಆ ಕಾಲದಲ್ಲಿ ಪುನರ್‌ಜೀವ ಪಡೆದವು. ಇಲ್ಲಿಯ ಶಾಸನಗಳು ನಗರದ ಜನತೆಯಲ್ಲಿದ್ದ ಧಾರ್ಮಿಕ ಬುದ್ಧಿಯ ಬಗ್ಗೆ ಒಂದು ಸುಂದರ ಚಿತ್ರಣವನ್ನು ಕೊಡುತ್ತವೆ. ಪ್ರಸಕ್ತ ಅಧ್ಯಯನದಲ್ಲಿ ಇಲ್ಲಿಯ ಮಠಗಳು ಮತ್ತು ಛತ್ರಗಳ ಸ್ಥಾಪನೆ ಮತ್ತು ನಿರ್ವಹಣೆಯ ಕಾರ್ಯಗಳತ್ತ ಕ್ರೇಂದ್ರೀಯ ಗಮನ ಹರಿಸಲಾಗಿದೆ.

ದೇವಾಲಯ ನಿರ್ಮಿಸುವುದು ಅದಕ್ಕೊಂದು ಛತ್ರ, ಅಲ್ಲಿ ನಿತ್ಯ ಆಹಾರದಾನಕ್ಕೆ ವ್ಯವಸ್ಥೆ ಮಾಡುವುದು-ಇದು ಮಾಮೂಲು ವಿಷಯ. ಒಸರೂರಿನ ಜನ ಇದಕ್ಕೂ ಒಂದು ಹೆಜ್ಜೆ ಮುಂದಿಟ್ಟು ಮಠಗಳನ್ನು ಕಟ್ಟಿಸುವುದು, ಛತ್ರಗಳನ್ನು ನಿರ್ಮಿಸುವುದು ಇತ್ಯಾದಿ ಯಾದ ಬಹುಪಯೋಗಿ ಧಾರ್ಮಿಕ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಇಲ್ಲಿ ದೊರೆತಿರುವ ಹಲವು ಶಾಸನಗಳಲ್ಲಿ ಈ ವಿಷಯ ಬಿಂಬಿತವಾಗಿವೆ.

೧. ಕ್ರಿ.ಶ. 1401 ಮೇ 2 ಸೋಮವಾರದಂದು ಚಕ್ರವರ್ತಿ ಇಮ್ಮಡಿ ಹರಿಹರ ಮಹಾರಾಯನ ಆಜ್ಞೆಯ ಮೇರೆಗೆ ರಾಜ್ಯಪಾಲ ಬಸವಣ್ಣ ಒಡೆಯ ಬಾರಕೂರು ರಾಜ್ಯಪಾಲ ನಾಗಿ ಕಾರ್ಯನಿರ್ವಹಿಸಿದ್ದ ಕಾಲದಲ್ಲಿ ತುಳುವಕ ಹೆಗ್ಗಡಿತಿಯು ಮಾಡಿದ ದಾನ ವಿಚಾರವನ್ನು ಶಾಸನವೊಂದು ತಿಳಿಸುತ್ತದೆ.[1] ಪಡುವಕೇರಿಯು ಒಳಗಣ ಜರಡೆಯ ಬಳಿಯ ಕೋಟೀಸರಡಹನ ಮೋಮಗಳು ತುಳುವರ ಹೆಗ್ಗಡಿತಿಯ ಬಸರೂರಿನ

ತುಳುವೇಶ್ವರ ದೇವಾಲಯದಲ್ಲಿ ಛತ್ರದಲ್ಲಿ ನಿತ್ಯ ಒಂಬತ್ತು ಮಂದಿ ಬ್ರಾಹ್ಮಣರಿಗೆ ಭೋಜನ ವ್ಯವಸ್ಥೆಗಾಗಿ ಹೊಂನು ಮತ್ತು ಭೂದಾನ ಮಾಡಿದಳು. ಇದರಲ್ಲಿ ದೇವರಿಗೆ ನಿತ್ಯ ನಂದಾದೀಪ ಉರಿಸುವ ಖರ್ಚಿನ ಭಾಗವೂ ಇತ್ತು. ಈ ಧರ್ಮದ ಉಸ್ತುವಾರಿಯನ್ನು ಪ್ರಾಯಶಃ ಈಕೆಯ ಮಕ್ಕಳಾದ ಮಾಕಂಣ ಸೆಟ್ಟಿ, ಹೊಸಬುಸೆಟ್ಟಿ, ಕೋಟಿಯಂಣ ಸೆಟ್ಟಿ ಮತ್ತು ಸೋಮಂಣ ಸೆಟ್ಟಿ ಎಂಬೀ ನಾಲ್ವರು ಸೋದರರಿಗೆ ವಹಿಸಿಕೊಡಲಾಯಿತು.[2]

ತುಳುವೇಶ್ವರ ದೇವಾಲಯ ಮತ್ತು ಅಲ್ಲಿಯ ಛತ್ರವನ್ನು ಕಟ್ಟಿದವರಾರು ಎಂಬುದು ಗೊತ್ತಿಲ್ಲ. ಪ್ರಾಯಶಃ ಎರಡೂ ಶಾಸನ ಕಾಲಕ್ಕೂ ಬಹಳ ಹಿಂದೆ ಇದ್ದವು. ಅವುಗಳ ಆಡಳಿತ ಈ ಹೆಗ್ಗಡಿತಿ ಮನೆತನಕ್ಕೆ ಸೇರಿದ್ದಿರಬೇಕು. ಹಾಗಾಗಿ ಈಕೆ ದೇವಾಲಯ ಮತ್ತು ಛತ್ರಗಳ ನಿರ್ವಹಣೆಗಾಗಿ ದಾನ ಮಾಡಿ ಅದರ ನಿರ್ವಹಣೆಯ ಅಧಿಕಾರವನ್ನು ತನ್ನಲ್ಲೇ ಉಳಿಸಿಕೊಂಡು ತನ್ನ ಮಕ್ಕಳಿಗೆ ಜವಾಬ್ದಾರಿವಹಿಸಿದಳು.

ಮಹಾಲಿಂಗೇಶ್ವರ (ಪಡುವ ಕೇರಿ) ಮತ್ತು ಆದಿನಾಥೇಶ್ವರ (ಮೂಡು ಕೇರಿ) ದೇವಾಲಯಗಳು ಬಸರೂರಿನ ಅತ್ಯಂತ ಪ್ರಾಚೀನ ದೇವಾಲಯಗಳು. ಪ್ರಾಯಶಃ ಇಲ್ಲಿ ಛತ್ರದ ವ್ಯವಸ್ಥೆ ಬಹಳ ಹಿಂದಿನಿಂದಲೇ ಇದ್ದಿರಬಹುದು. ಆದರೆ ಶಾಸನಾತೀತವಾದ ಮೊದಲ ಛತ್ರ ತುಳುವೇಶ್ವರ ದೇವಾಲಯದ್ದು. ಈಗ ಈ ದೇವಾಲಯದ ಅವಶೇಷವನ್ನು ಬಹಳ ಕಷ್ಟದಿಂದ ನೋಡಬಹುದು. ತುಳುವರ ಹೆಗ್ಗಡಿತಿಯಿಂದ ಇದು ಪಡೆದದ್ದು 145 ಅರ್ಧಕಾಟಿಗದ್ಯಾಣ ಹೊಂನು ಮತ್ತು 32 ಮುಡಿ ಬತ್ತ ಕೊಟ್ಟು (ವರ್ಷಪ್ರತಿ).

2. ಇಮ್ಮಡಿ ದೇವರಾಯನ ಆಳ್ವಿಕೆ ಕಾಲದಲ್ಲಿ ಚಂಡರಸವೊಡೆಯನು ಬಾರಕೂರು ರಾಜ್ಯವನ್ನಾಳುತ್ತಿದ್ದಾಗ ಕ್ರಿ.ಶ.1433ರಲ್ಲಿ " ಬಸರೂರು ಪಡುವಕೇಯ್ಯ ಕಕ್ಕೆಯಬಳಿಯ ದೆಟ್ಟಿಕಾರ ಬಾಳು ಸೆಟ್ಟಿಯ ಮಗ ಗೋಳದ ಬಳೆಯ ಯಿಸರಸೆಟ್ಟಿ ಶ್ರೀ ನಖರೇಶ್ವರ ದೇವರಲ್ಲಿ ಮಾಡಿದ ಧರ್ಮ" ಇಲ್ಲಿಯ ಶಾಸನವೊಂದು ತಿಳಿಸುತ್ತದೆ.[3] ಇದೊಂದು ಭೂದಾನ. ಇದರಿಂದ ವರ್ಷಂ ಪ್ರತಿ ಬರುವ ಹನ್ನೆರಡು ಮುಡಿ ಅಕ್ಕಿಯನ್ನು ದೇವರ ನಂದಾ ದೀಪ ಮತ್ತು ನಿರ್ದಿಷ್ಟ ಸಮಯಗಳಲ್ಲಿ ನಿರ್ದಿಷ್ಟ ಬ್ರಾಹ್ಮಣರಿಗೆ ಭೋಜನಕ್ಕೆ ಉಪಯೋಗಿಸಬೇಕೆಂದು ಕಟ್ಟು ಮಾಡಲಾಯಿತು. "ದಿನಂಪ್ರತಿ ದಿನದ ಪೂಜೆಯಲ್ಲಿ ಉಂಬ ಬ್ರಾಹ್ಮಣವೊಬ್ಬ । ದ್ವಾದಶಿಗೆ ಯಿಬ್ಬರು । ಪ್ರದೋಷಕ್ಕೆ ಯಿಬ್ಬರು । ಅಮಾವಾಸೆಗೆ ಯಿಬ್ಬರು । ದೇವರಿಗೆವೊಂದು ನಂದಾ ದೀವಿಗೆ।" ಎಂದು ಶಾಸನ ಹೇಳುತ್ತದೆ[4]. ಮಕ್ಕಳು ಮತ್ತು ಮೊಮ್ಮಕ್ಕಳ ಕಾಲದ ತನಕ 'ಬಾನಗೇಡು' ಅನ್ನದ ದಾನವನ್ನು ನಡೆಸಿ ಬಹೆವೇಡು' ಅಂಕಿತ ಹಾಕಲಾಯಿತು. ಪಡುವ ಗೇರಿಯ ಹಲರು ಸೆಟ್ಟಿಕಾರರು ಈ ಧರ್ಮದ ಉಸ್ತು ವಾರಿ ನಡೆಸುವರೆಂದು ಅಂಕಿತ ಹಾಕಲಾಯಿತು. 'ಬಾನಗೇಡು, ಬರಗೇಡು' ಅಂದರೆ ಅತಿವೃಷ್ಟಿಯಾಗಲೀ, ಅನಾವೃಷ್ಟಿಯಾಗಲಿ ಎಂದು ಅರ್ಥ. ಇದು ಮಾಡಿದ ದಾನದ ಮಹತ್ವವನ್ನು ಹೆಚ್ಚಿಸಿದೆ.

೩. ಚಕ್ರವರ್ತಿ ಇಮ್ಮಡಿ ದೇವರಾಯನ ಆಜ್ಞೆ ಮೇರೆಗೆ ಮಹಾಪ್ರಧಾನ ಅಣ್ಣಪ್ಪ ಒಡೆಯನು ಬಾರಕೂರು ರಾಜ್ಯವನ್ನಾಳುತ್ತಿದ್ದ ಕಾಲದಲ್ಲಿ ಕಂದಾವರದ ಅಧಿವಾಸದೊಳಗಿನ ಭೂಮಿಯನ್ನು ಬಳೆಗಾರ ಬಳಿಯ ಬಳ ವಿಜ್ಜುನ ಬೆಂದುಸೆಟ್ಟಿ ನಾರಣ ಸೆಟ್ಟಿ ಮಾಡಿದ ದಾನದ ವಿಷಯವನ್ನು ಒಂದು ಶಾಸನ ತಿಳಿಸುತ್ತದೆ [5]. ಇದರ ಆದಾಯದಲ್ಲಿ ಕುಂದಾಪುರದ ಕುಂಧೇಶ್ವರ ದೇವರಿಗೆ ಎರಡು ಮುಡಿ ಬತ್ತ ಮತ್ತು (ಬಸರೂರಿನ) ಮಠವೊಂದರಲ್ಲಿ ಪ್ರತಿದಿನ ಒಂಭತ್ತು ಮಂದಿ ಬ್ರಾಹ್ಮಣರ ಭೋಜನ ವ್ಯವಸ್ಥೆಗಾಗಿ ನಿರ್ದೇಶಿಸಲಾಯಿತು. ಇಲ್ಲಿ ಮಠ ಯಾವುದು ಎಂದು ಗೊತ್ತಾಗುವುದಿಲ್ಲ. ಕ್ರಿ.ಶ. 1436 ಸೆಪ್ಟೆಂಬರ್ 20 ಗುರುವಾರದಂದು ಮಾಡಿದ ಈ ಅಂಕಿತ ಹೊತ್ತ ಶಾಸನ ದೊರೆತಿರುವುದು ಇಲ್ಲಿಯ ದೊಡ್ಡ ಕೆರೆಕಟ್ಟೆಯ ದಕ್ಷಿಣದಲ್ಲಿ ಮನೆಯೊಂದರ ಹಿತ್ತಿಲಿನಲ್ಲಿ. ಹಾಗಾಗಿ ಊಹಿಸುವುದು ಕಷ್ಟ.

4. ಇದೇ ದೊಡ್ಡ ಕೆರೆಯ ಇನ್ನೊಂದು ಮನೆಯ ಬಳಿ ದೊರೆತಿರುವ ಕ್ರಿ.ಶ.1450 ಏಪ್ರಿಲ್24 ಶುಕ್ರವಾರಕ್ಕೆ ಸೇರುವ ಒಂದು ಶಾಸನವು ಕೋಟಿಯಕ ನಾಯಕಿತಿಯು ಮಠವೊಂದಕ್ಕೆ ಮಾಡಿದ ಧರ್ಮದ ವಿವರ ನೀಡುತ್ತದೆ.[6] ಚಕ್ರವರ್ತಿ ಮಲ್ಲಿಕಾರ್ಜುನನ ಆಜ್ಞೆ ಮೇರೆಗೆ ಲಿಂಗಪ್ಪ ವೊಡೆಯನು ಆಗ ಬಾರಕೂರು ರಾಜ್ಯಪಾಲನಾಗಿ ಕಾರ್ಯ ನಿರ್ವಹಿಸಿದ್ದ. ಆಗ ನಂಡುಹಳಿಯ ಉಲಿನಕುಳೆಯರ ಬಳಿಯ ಕೋಟಿಯಕ ನಾಯಕಿತಿ ಮತ್ತು ಆಕೆಯ ಮಗ ಮೆರವಣ್ಣ ಸೆಟ್ಟಿಯರು ತಾವು ನಡೆಸಿಕೊಂಡು ಬರುತ್ತಿದ್ದ ಮಠಕ್ಕೆ ಭೂಮಿ ಮತ್ತು ಹೊಂನಿನ ದಾನ ಮಾಡಿದರು. ಇದರ ಆದಾಯದಿಂದ ಮಠದಲ್ಲಿ ನಿತ್ಯಪೂಜೆ, ವಿಶೇಷ ದಿನಗಳ ಪೂಜೆ ಮತ್ತು ಬ್ರಾಹ್ಮಣರ ಭೋಜನಗಳಿಗೆ ವ್ಯವಸ್ಥೆ ಮಾಡಲಾಯಿತು.

ಕೋಟಿಯಕನಾಯಕಿತಿಯು ಭೂಮಿ ಅದಕ್ಕು ಮಿಗಿಲಾಗಿ ಹಣಸಂಬಂಧದ ಭಾರಿ ಆರ್ಥಿಕ ಕಾರ್ಯ ಚಟುವಟಿಕೆಯಲ್ಲಿ ತೊಡಗಿದ್ದಂತೆ ಕಾಣುತ್ತದೆ. ಬಸರೂರು ಪಡುವ ಕೇರಿಯ ಹಲವರು ಸೆಟ್ಟಿಕಾರರು ಈಕೆಯಿಂದ 200 ಹೊನ್ನು ಕಾಟಿಗದ್ಯಾಣವನ್ನು ಸಾಲವಾಗಿ ಪಡೆದಿದ್ದರು. ಇದಕ್ಕೆ ತೆರಬೇಕಾದ ಬಡ್ಡಿಯ ಹಣಕ್ಕೆ ಹದಿಮೂರು ಮುಡಿ ಅಕ್ಕಿ ಕೊಡಬೇಕೆಂದು ನಿರ್ಧರಿಸಿ ಅದರಲ್ಲಿ ವಾರ್ಷಿಕ 10 ಮುಡಿಯನ್ನು ಮಠಕ್ಕೆ ಕೊಡುವಂತೆ ಮಾಡಿದಳು.[7] ಇದಲ್ಲದೆ ಅನ್ಯಮೂಲಗಳಿಂದಲೂ ಮಠಕ್ಕೆ ವರಮಾನ ಬರುವಂತೆ ಮಾಡಿದಳು.ಇದು ಒಟ್ಟು ಅಕ್ಕಿರೂಪದಲ್ಲಿ ವಾರ್ಷಿಕ 99 ಮುಡಿ ಎಂದು ಶಾಸನ ಹೇಳುತ್ತದೆ.[8] ಈ ಮಠದಲ್ಲಿ ಪ್ರತಿ ದ್ವಾದಶಿ ಮತ್ತು ಅಮಾವಾಸ್ಯೆಯಂದು ದೋಸೆ ಮಾಡುವ ರೂಢಿ ಇತ್ತೆಂದು ಶಾಸನದಿಂದ ತಿಳಿದುಬರುತ್ತದೆ. ದೋಸೆಯ ಉದ್ದಿಗಾಗಿ ಪ್ರತ್ಯೇಕ ವ್ಯವಸ್ಥೆ ಮಾಡಿದ್ದನ್ನು ಇಲ್ಲಿ ಕಾಣುತ್ತೇವೆ.[9] ಪ್ರಾಯಶಃ ಈ ಮಠ "ಕೋಟೆಯ ನಾಯಕಿತಿಯ ಮಠ" ಎಂದೇ ಹೆಸರಾಗಿತ್ತು. ಹಲರು ಸೆಟ್ಟಿಕಾರರು ಕೊಂಡ ಸಾಲದ

ಬಗ್ಗೆ ಹೇಳುವಾಗ ಶಾಸನದಲ್ಲಿ " ಕಾಟಿ ಗ 200 ಅಕ್ಷರದಲು ಯಿಂನೂರು ಹೊನು ಯಿ ಹೊನ್ನಿಂಗೆ ಬಡ್ಡಿ ಪ್ರತಿವರುಷಣ ೧ಕ್ಕೆ ನಾಲ್ವಂಡೆಯಲು ಅಕ್ಕಿ ಮುಡಿ ೧೩ ಒಳಗೆ ಮುದೆಸೆಟಿಯ ಧರ್ಮಕ್ಕೆ ಅಕ್ಕಿ ಮುಡೆ ೩ ನುಳಿಯೆ ಕೋಟಿಯಕನಾಯಕಿಯ ಮಟಕೆ ನಡಸುವ ಅಕಿ ಮು ೧೦" ಎಂದಿದೆ[10].

ಬಸರೂರು ಒಂದು ಅತ್ಯಂತ ಪ್ರಮುಖವಾದ ಬಂದರು ಮತ್ತು ವಾಣಿಜ್ಯ ಕೇಂದ್ರ ವಾಗಿದ್ದರಿಂದ ಇದರ ರಕ್ಷಣೆಗೆ ವಿಜಯನಗರ ಚಕ್ರವರ್ತಿಗಳು ನೇರ ಆಳ್ವಿಕೆಯ ಸೂಕ್ತ ವ್ಯವಸ್ಥೆ ಮಾಡಿದ್ದರು. ಊರು ಕೋಟೆಯಿಂದ ರಕ್ಷಿಸಲ್ಪಟ್ಟಿತ್ತು. ಅದನ್ನು ನೋಡಿಕೊಳ್ಳಲು ನಾಯಕ ದಳಪತಿಗಳ ರಕ್ಷಣಾವ್ಯವಸ್ಥೆ ಇತ್ತು ಎಂಬ ವಿಚಾರ ಇಲ್ಲಿ ಪರೋಕ್ಷವಾಗಿ ಗೋಚರಕ್ಕೆ ಬಂದಿದೆ. ಸಹಜವಾಗಿಯೇ ಆ ನಾಯಕ ಮನೆತನಕ್ಕೆ ಹಲವಾರು ರೀತಿಯ ಜವಾಬ್ದಾರಿ ಕರ್ತವ್ಯಗಳು ಇದ್ದುವು. ಕೋಟಿಯ ನಾಯಕಿ ಇಲ್ಲಿ ಒಂದು ರೀತಿಯ ಜವಾಬ್ದಾರಿಯನ್ನು ಪ್ರಕಟಿಸಿದ್ದಾಳೆ. ಈಕೆಯ ಹೆಸರು ಬೇರೆ ಇದ್ದಿರಬಹುದು. ಆದರೆ ರೂಢಿ ನಾಮವೇ ಅಂಕಿತನಾಮವಾಗಿದೆ. ಒಟ್ಟಿನಲ್ಲಿ ಈಕೆ ತನ್ನ ಅಂತಸ್ತು, ಅಧಿಕಾರಗಳಿಗೆ ತಕ್ಕುದಾದ ರೀತಿಯಲ್ಲಿ ಮಠವನ್ನು ಮೇಲೆತ್ತಿ ಅದು ಇತೋಪ್ಯತಿಶಯವಾಗಿ ನಡೆಯು ವಂತೆ ಮಾಡಿದಳು. ಈಕೆಯ ಗುಣ ನಿಜಕ್ಕೂ ಮೆಚ್ಚುವಂತಹುದು.

5. ಬಸರೂರಿನ ಬರಿಯಪ್ಪ ಎನ್ನುವವರು ಕ್ರಿ.ಶ. 1472ರ ವೇಳೆಗೆ ಕಾಶಿಯಾತ್ರೆಯನ್ನು ಯಶಸ್ವಿಯಾಗಿ ಪೂರೈಸಿಕೊಂಡು ಊರಿಗೆ ಮರಳಿದರು. ಬರುವಾಗ ಜೊತೆಯಲ್ಲಿ ಕಾಶಿ ವಿಶ್ವನಾಥನ ಲಿಂಗವನ್ನು ತಂದರು. ಮಾರ್ಗದಲ್ಲಿ ಲಿಂಗಕ್ಕೆ ದಿನಂ ಪ್ರತಿ ಪಂಚ ಪರ್ವಪೂಜೆ ಸಲ್ಲಿಸುತ್ತಾ ಬಂದರು. ಈ ವಿಚಾರವನ್ನು ತಿಳಿಸುವ ಶಾಸನ ವೊಂದಿದೆ.[11]. ಕ್ರಿ.ಶ.1472 ಆಗಸ್ಟ್ 26, ಬುಧವಾರದ ತೇದಿ ವಿವರವಿರುವ ಈ ಶಾಸನವು ಚಕ್ರವರ್ತಿ ವಿರೂಪಾಕ್ಷನ ಕಾಲದ್ದು. ಆಗ ವಿಠ್ಠರಸವೊಡೆಯನು ಬಾರಕೂರು ರಾಜ್ಯದ ರಾಜ್ಯಪಾಲನಾಗಿ ಕಾರ್ಯ ನಿರ್ವಹಿಸಿದ್ದ. ಬರಿಯಪ್ಪ ತಂದ ಕಾಶಿ ವಿಶ್ವನಾಥ ಲಿಂಗಕ್ಕೆ (ಒಂದು ಗುಡಿ ನಿರ್ಮಿಸಿ ಅದರ) ಪೂಜಾ ವಿನಿಯೋಗಾರ್ಥ ಎಪ್ಪತ್ತು ಮುಡಿ ಉತ್ಪತ್ತಿ ಭೂದಾನವನ್ನು ಪಡುವ ಕೇರಿಯ ದುಗ್ಗಣಸೆಟ್ಟಿ ಹಾಗೂ ಆತನ ಮೂವರು ಸೋದರಳಿಯಂದಿರು ಕೂಡಿ ಮಾಡಿದರು[12].

ಈ ನಾಲ್ಕು ಜನರೂ ಕೂಡಿ ತಾವು ಕಟ್ಟಿಸಿದ ಮಠ (ಪ್ರಾಯಶಃ ಕಾಶಿ ವಿಶ್ವನಾಥ ಮಠ)ಕ್ಕೆ ಮೇಲಿನ ಶಾಸನದ ದಿನದಂದೇ ಕಾಟಿಗದ್ಯಾಣ ೧೨೫ ಹೊನ್ನಿನಭೂಮಿ ದಾನ ಮಾಡಿದರು. ಇದರ ಆದಾಯದಲ್ಲಿ ತೆರಿಗೆ ಕಳೆದು ವಾರ್ಷಿಕ ಐವತ್ತು ನಾಲ್ಕು ಮುಡಿ ಅಕ್ಕಿಯನ್ನು ಮಠಕ್ಕೆಸಂದಾಯ ಮಾಡುವಂತೆ ಮಾಡಲಾಯಿತು. ವಿವಿಧ ಮೂಲ ಗಳಿಂದಲೂ ಸುಮಾರು ಹದಿನೈದು ಮುಡಿ ಅಕ್ಕಿ ಇಲ್ಲಿಗೆ ಸಂದಾಯ ಮಾಡಲಾಯಿತು. ಎಂದು ಇಲ್ಲಿಯ ಇನ್ನೊಂದು ಶಾಸನ ತಿಳಿಸುತ್ತದೆ.[13]. ಬಹಳ ಧೀರ್ಘವಾಗಿ ಭೂ

ವಿವರಗಳನ್ನು ಕೊಡುವ ಈ ಶಾಸನ ದಾನದ ಆದಾಯದಿಂದ ಮಠದಲ್ಲಿ ಏನು ಕಾರ್ಯ ನಡೆಯಬೇಕೆಂದು ಹೇಳುವುದಿಲ್ಲ. ಆದರೆ ಮೊದಲಿನ ಶಾಸನದಲ್ಲಿ ದಾನ ಪಡೆದ "ಸಿರಿಯಪ್ಪಗಳೇ ಪೂಜೆಯನ್ನು ಮಾಡಿಕೊಂಡು ದೀವಳಿಗೆ ಹಬ್ಬದ ಮೂರುದಿನದ ರಂಗಪೂಜೆಯನ್ನು ನಡೆಸಿಕೊಂಡು ಬಾಳುವರು"ಎಂದಿದೆ[14] ಈ ದಾನಪತ್ರದ ಇನ್ನೊಂದು ವಿಶೇಷತೆ ಎಂದರೆ ಪಡೆದ ದಾನವನ್ನು (ಭೂ ಹಾಗೂ ಹೊಂನ್ನು) ಯಾವುದೇ ಕಾರಣಕ್ಕೂ ಪರಭಾರೆ ಮಾಡುವ ಹಕ್ಕು ದಾನ ಪಡೆದ (ಕಾಶೀಯಾತ್ರೆ ಮಾಡಿ ಬಂದ) ಸಿರಿಯಪ್ಪ (ಈತ ತಿರುಮಲೆನಾಥಸೆಟ್ಟಿಯ ಮಗ)ನಿಗೆ ಇಲ್ಲ- ಎಂದು ಶಾಸನ ಹೇಳುತ್ತದೆ.[15]. ಶಾಸನ ಗಳನ್ನು ಬರೆಸುವ ಮೊದಲು ಅವುಗಳ ಸಿದ್ಧ ಪ್ರತಿಯನ್ನು ತಯಾರು ಮಾಡಿ (ಓಲೆಗರಿ ಇಲ್ಲವೆ ಕಡತದಲ್ಲಿ ಬರೆದು) ಅದಕ್ಕೆ ಸಂಬಂಧಪಟ್ಟವರ ಒಪ್ಪಿಗೆಯ ಅಂಕಿತ ಹಾಕಿಸಿ ಆನಂತರ ಕಲ್ಲಿನ ಮೇಲೆ ಬರೆಸುವುದು ರೂಢಿ. ಕೆಲವೊಮ್ಮೆ ತಾಮ್ರ ಪತ್ರದಲ್ಲಿ ನಕಲು ಮಾಡಿರುವುದು ಇದೆ. ಇಲ್ಲಿಯ ವೈಶಿಷ್ಟ್ಯವೆಂದರೆ ಮೂಲ ದಾಖಲೆಯ ಎರಡು ಪ್ರತಿ ಗಳನ್ನು ಶಿಲೆಯ ಮೇಲೆ ಮಾಡಿಸಿರುವುದು. ಹಾಗಾಗಿ ಮೇಲಿನ ಶಾಸನದ ಇನ್ನೊಂದು ಪ್ರತಿ ಹೊತ್ತ ಶಿಲಾ ಶಾಸನ ಅಲ್ಲಿ ಸಮಿಪದಲ್ಲಿ ದೊರೆತಿದೆ.[16].

6. ಕ್ರಿ.ಶ.1487 ಅಕ್ಟೋಬರ್21 ಭಾನುವಾರಕ್ಕೆ ಸೇರುವ ಶಾಸನವೊಂದರಲ್ಲಿ ಬಸರೂರಿನ ಪಡುವ ಕೇರಿಯಲ್ಲಿ ರುದ್ರಾಕ್ಷಿ ಒಡೆಯರು ಕಟ್ಟಿಸಿದ ಮಠದ ಪ್ರಸ್ತಾಪ ಇದೆ.[17].ಆಗ ಚಕ್ರವರ್ತಿ ವಿರೂಪಾಕ್ಷನ ಮಗನಾದ ಪ್ರತಾಪರಾಯನು ಸಾಮ್ರಾಜ್ಯ ವನ್ನಾಳುತ್ತಿದ್ದ ಎಂದು ಶಾಸನ ಹೇಳುತ್ತದೆ. ಇವನ ಆಜ್ಞಾವರ್ತಿಯಾಗಿ ವಿರೂಪಾಕ್ಷ ದೇವೊಡೆಯನು ಬಾರಕೂರು ರಾಜ್ಯದ ರಾಜ್ಯಪಾಲನಾಗಿ ಕಾರ್ಯನಿರ್ವಹಿಸಿದ್ದ.

ಆ ಸಮಯದಲ್ಲಿ ಬಸರೂರ "ಪಡುವ ಕೇರಿಯ್ಯ ಒಳಗೆ ಶ್ರೀ ಮಹಾದೇವರ ಸಂನಿಧಿಯಲ್ಲಿ ಪಡುವಕೇರಿಯ್ಯ ಹಲರು ಸೆಟ್ಟಿಕಾಱರಿಗೆ ಗುರುಸ್ತನವಾಗಿದ್ದ ರುದ್ರಾಕ್ಷಿ ಒಡೆಯರು ಮಠವನ್ನು ಕಟ್ಟಿಸಿ"ಎಂದು ಶಾಸನ ಹೇಳುತ್ತದೆ[18]. ಈ ಮಠಕ್ಕೆ "ಆ ಚಂದ್ರಾರ್ಕ ವಾಗಿ ಆ ಮಠದ ಧಮ(0)ಮ್ಮಕ್ಕೆ ಬರೆಸಿದಂಥಾ ಶಿಲಾಶಾಸನದ ವಿವರ"[19] ತೆಂಗಿನ ತೋಟ, ಹಿತ್ತಿಲು ಇತ್ಯಾದಿಯಾಗಿ ಒಟ್ಟು 195 ಗದ್ಯಾಣ ಹೊಂನ ಭೂಮಿಯನ್ನು ಅದರ ವಾರ್ಷಿಕ ಉತ್ಪತ್ತಿಯಾಗಿ ಹದಿಮೂರು ಮುಡಿ ಅಕ್ಕಿಯನ್ನು ಮಠಕ್ಕೆ ದಾನ ಮಾಡ ಲಾಯಿತು. ಇದಲ್ಲದೆ ಎರಡು ಪ್ರತ್ಯೇಕ ಸ್ಥಳಗಳಿಂದ ಒಟ್ಟು 90 ಗದ್ಯಾಣವನ್ನು ದಾನ ಮಾಡಲಾಯಿತು. ಮಠದಲ್ಲಿ ನಡೆಯಬೇಕಾದ ಕಾರ್ಯ ಕಲಾಪಗಳ ಬಗ್ಗೆ ಶಾಸನದಲ್ಲಿ ಪ್ರಸ್ತಾಪವಿಲ್ಲ.

7. ಕೃಷ್ಣದೇವರಾಯನ ಆಳ್ವಿಕೆ ಕಾಲದಲ್ಲಿ ಬಸರೂರ ಪಡುವ ಕೇರಿಯ ಜೋಕಿ ಸೆಟ್ಟಿಯ ಮಗಳು ಮತ್ತು ನಾರಣಸೆಟ್ಟಿಯ ಹೆಂಡತಿಯೂ ಆದ ತಿರುಮಕ್ಕಿ ಸೆಟ್ಟಿತಿಯು ಪಡುವ ಕೇರಿಯಲ್ಲೊಂದು ಮಠವನ್ನು ಕಟ್ಟಿಸಿ ಅದಕ್ಕೆ ಕ್ರಿ.ಶ.1519 ಅಕ್ಟೋಬರ್25

ಮಂಗಳವಾರ ದಂದು ಭೂಮಿ ಹಾಗೂ ಒಂದು ನೂರು ದೊಡ್ಡ ವರಹವನ್ನು ದಾನ ಮಾಡಿದಳು. ದಾನದ ವಿವರಗಳು ಸಾಲ, ಮೈಸಾಲ ಅವುಗಳ ಬಡ್ಡಿ, ತೆರಿಗೆ ಮತ್ತು ಭೂ ವ್ಯವಹಾರಗಳ ವಿಚಾರ ಶಾಸನದಲ್ಲಿದೆ. ಮೂವತ್ತು ಸಾಲು ಬರಹ ಇರುವ ಈ ಶಾಸನ ಅಪೂರ್ಣವಾಗೇ ಉಳಿವಂತಿದೆ.[20] ವಿಜಯನಪ್ಪವೊಡೆಯ ಆಗ ಬಾರಕೂರಿನ ರಾಜ್ಯಪಾಲನಾಗಿದ್ದ.

8. ಸೆಟ್ಟಿವಾಡಿಯ ಅಲ್ಲು ಸೆಟ್ಟಿಯ ಮಗ ಸಂಕರ ಸೆಟ್ಟಿಯು ತನ್ನ ಮೊಮ್ಮಗಳಾದ ತಿರುಮಕ್ಕರಾವುತಿಯು ಮಕ್ಕಳಿಲ್ಲದೆ ಇದ್ದ ಕಾರಣ ಆಕೆಯ ಸಂಪತ್ತಿನಿಂದ ಬಸರೂರ ಪಡುವ ಕೇರಿಯಲ್ಲೊಂದು ಮಠವನ್ನು ಕಟ್ಟಿಸಿ ಅದಕ್ಕೆ ಕ್ರಿ.ಶ. 1520 ಏಪ್ರಿಲ್ 1 ಭಾನುವಾರದಂದು ಭೂಮಿ ದಾನ ಮಾಡಿದ. ಇದರೊಂದಿಗೆ ನಖರೇಶ್ವರ ದೇವರಿಗೂ ಭೂದಾನ ಮಾಡಿದ[21]. ಸಂಕರ ಸೆಟ್ಟಿಯು ಪ್ರಾಯಶಃ ಈ ಮಠವನ್ನು ಇನ್ನೂ ಹಿಂದೆಯೇ ಕಟ್ಟಿಸಿರಬೇಕು. ದಾನಶಾಸನ ಹಾಕಿಸಿದ ವರ್ಷ ಶಕ 1442 ವಿಕ್ರಮ ಸಂವತ್ಸರ. ಆದರೆ ಇದಕ್ಕೂ ಮುಂಚೆ ಭಾ ಪ್ರ. (ಶಕ.೧೪೩೬)[22] ಮತ್ತು ವಿಭವ (ಶಕ. 1430)[23] ಸಂವತ್ಸರ ಗಳಲ್ಲಿ ಮಾಡಿದ ದಾನದ ವಿಚಾರಗಳನ್ನು ಈ ಶಾಸನ ತಿಳಿಸುತ್ತದೆ. ಈ ಶಾಸನದಲ್ಲಿ ದೀರ್ಘವಾದ ಭೂ ವಿವರ,ಸಾಲಗಳು, ಬಡ್ಡಿ ಇತ್ಯಾದಿ ವಿವರಗಳಿವೆ.

9. ಕೃಷ್ಣದೇವರಾಯನ ಆಡಳಿತ ಕಾಲದಲ್ಲಿ ಲಕ್ಷ್ಮೀನಾರಾಯಣ ಕರಣಿಕನ ಮಗನಾದ ವಿಠ್ಠರಸ ಒಡೆಯನು ಬಾರಕೂರು ರಾಜ್ಯದ ರ್‍ಯಾಜ್ಯಪಾಲನಾಗಿ ಕಾರ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಬಸರೂರ ಪಡುವ ಕೇರಿಯ ಸಂಕರಸೆಟ್ಟಿಯ ಮಗ ಚಿನ್ನವಾರ ನಾರಣ ಮುನಿಲ ಮತ್ತು ಕುಪಣ ಸೆಟ್ಟಿಯರು ಲಕ್ಷ್ಮೀನಾರಾಯಣ ದೇವರ ಮಠವನ್ನು ಕಟ್ಟಿಸಿ ಕ್ರಿ.ಶ.1525ರಲ್ಲಿ ಮಠದ ಸ್ವಾಸ್ಥೆಗೆ ಅಪಾರವಾದ ದಾನಗಳನ್ನು ಮಾಡಿದರು.[24] ಈ ದಾನದ ಸ್ವರೂಪ ಬಹಳ ರೋಚಕವಾದುದು. ನಾನಾ ಭಾಗಗಳಲ್ಲಿ ಭೂಮಿಯ ಮೇಲೆ ಹಣ ಹೂಡಿಕೆಯನ್ನುಸಾಲದ ರೂಪದಲ್ಲಿ ಮಾಡಿ ಅದರ ಬಡ್ಡಿಯ ರೂಪವಾಗಿ ನಿಗಧಿತ ಮುಡಿ ಅಕ್ಕಿ ಪ್ರತಿವರ್ಷ ತಾವು ಕಟ್ಟಿಸಿದ ಈ ಮಠಕ್ಕೆ ಸಲುವಂತೆ ಈ ದಾನಿಗಳು ಮಾಡಿದರು. ಶಾಸನದಲ್ಲಿ ಈ ಭೂಮಿಗಳ ವಿವರ ಇದೆ. ಶಾನುಭೋಗರ ಲೆಕ್ಕ ಒಪ್ಪಿಸಿದಂತಿದೆ ಇಲ್ಲಿ ವಕ್ಕಣೆ.[25]

10. ಬಸರೂರು ಮಹಾಲಿಂಗ ದೇವಸ್ಥಾನದಲ್ಲಿರುವ ಒಂದು ಶಿಲಾಶಾಸನ ಕ್ರಿ.ಶ. 1528 ಅಕ್ಟೋಬರ್ 14 ಬುಧವಾರಕ್ಕೆ ಸೇರಿದ್ದ[26] ಚಕ್ರವರ್ತಿ ಕೃಷ್ಣರಾಯ ಮಹಾರಾಯನ ಆಡಳಿತವನ್ನು ಪ್ರಸ್ತಾಪಿಸಿ ಆಗ ಬಾರಕೂರಿನ ರಾಜ್ಯಪಾಲನಾಗಿ ಅರಗದ ಅಳಿಯ ತಿಮ್ಮಣ್ಣವೊಡೆಯ ಕಾರ್ಯನಿರ್ವಹಿಸಿದ್ದ ಎಂದು ತಿಳಿಸುತ್ತದೆ. ಆ ಸಂದರ್ಭದಲ್ಲಿ ಸೋಮಣ್ಣ ಸೆಟ್ಟಿಯ ಮಗ ಶಂಕರ ಸೆಟ್ಟಿಯು 'ಬಸರೂರು ಪಡುವ ಕೇರ್‍ಯಾ ನಖರೇಶ್ವರ ಶ್ರೀ ಮಹಾಲಿಂಗದೇವರ ಬದಗಟ್ಟಿನಲ್ಲಿ ಮಠವನೂ ಕಟ್ಟಿಸಿದ". ಈ ಮಠದ

ಸ್ವಾಸ್ಥೆಗೆ ಶಂಕರಸೆಟ್ಟಿಯ ಹಿರಿಯ ಹೆಂಡತಿಯ ಮಗ ಮಲ್ಲಪಸೆಟಿ, ಎರಡನೆಯ ಹೆಂಡತಿ ಸಂಕಮ್ಮ ನಾಯಕಿತಿ ಮತ್ತು ಆಕೆಯ ಸೋದರಿ ದೇಕು ಅಡೆಯಿತಿ ಯರು ಭೂಮಿ ಹಾಗೂ ಹೊಂನಿನ ದಾನಗಳನ್ನು ಮಾಡಿದರು. ನಂದಾ ದೀಪ ಉರಿಸುವುದಕ್ಕಾಗಿ ಒಂದು ತೋಟವನ್ನು ದಾನ ಮಾಡಿದರು. ಶಾಸನದಲ್ಲಿ ಈ ಬಗ್ಗೆ ವಿವರ ಇದೆ [27]. ಇಲ್ಲಿ ಮಾಡಿರುವ ಹೊಂನಿನ ದಾನವನ್ನು ಭೂ ವ್ಯವಹಾರಗಳಲ್ಲಿ ಮೂಲಧನವಾಗಿ ಉಪಯೋಗಿಸಿ ನಾನಾ ರೀತಿಯ ಸಾಲಗಳನ್ನುಕೊಟ್ಟು ಅದರಿಂದ ಬರುವ ಬಡ್ಡಿಯ ಹಣಕ್ಕಾಗಿ ಅಂದಿನ ಮೌಲ್ಯಕ್ಕೆ ಅಕ್ಕಿ ಪ್ರಮಾಣವನ್ನು ನಿಗದಿಪಡಿಸಿ ಅದನ್ನು ಮಠಕ್ಕೆ ಕೊಡುವುದೆಂದು ಆದೇಶಿಸಲಾಯಿತು.

11. ಬಸರೂರು ಹಲವರ ಕಟ್ಟೆಯ ಸಮೀಪದ ಜಾಗವೊಂದರಲ್ಲಿ ಕ್ರಿ.ಶ.1546 ಅಕ್ಟೋಬರ್25 ಸೋಮವಾರಕ್ಕೆ ಸೇರುವ ಶಾಸನ[28] ವೊಂದು ದೊರೆತಿದ್ದು ಇದು ಚಕ್ರವರ್ತಿ ಸದಾಶಿವರಾಯನ ಕಾಲದ್ದಾಗಿದೆ. ಆಗ ಅಚ್ಚವೊಡೆಯ ಬಾರಕೂರಿನ ರಾಜ್ಯಪಾಲನಾಗಿದ್ದ. ಶಾಸನ ದಿನಾಂಕದಂದು ಕುಪ್ರಣ ಸೆಟಿ ಮತ್ತು ಉದರೆ ಸೂರಿ ಸೆಟಿಯರು ವಿಠಲದೇವರ ಮಠವನ್ನು ಜೀರ್ಣೋದ್ಧಾರ ಮಾಡಿ ವಿಠ್ಠಲ ದೇವರ ಸರ್ವಕಾಲದ ಪೂಜಾ ವಿನಿಯೋಗಾರ್ಥ116 ಮುಡಿ ವಾರ್ಷಿಕ ಅಕ್ಕಿ ಉತ್ಪತ್ತಿಯ ಭೂ ಮತ್ತು ಹಿರಣ್ಯ ದಾನಗಳನ್ನು ಮಾಡಿದರು. ಇದಲ್ಲದೆ ಪಡುವಕೇರಿಯ ತಿರುಮಲ ದೇವರಿಗೂ ಇವರು ದಾನ-ಧರ್ಮಗಳನ್ನು ಅದೇ ದಿನದಂದು ಮಾಡಿದರು[29].

ಈ ವಿಠಲದೇವರ ಮಠವನ್ನು ಹಿಂದೆ ಸಂತಾನ ಸಂಕರಸೆಟಿ ಎಂಬುವನು ಕಟ್ಟಿಸಿ ಅದರ ಸ್ವಾಸ್ಥೆಗೆ ತಕ್ಕುದಾದ ರೀತಿಯಲ್ಲಿ [29] ಮುಡಿ ಅಕ್ಕಿ ಉತ್ಪತ್ತಿ ಬರುವಂತೆ ಭೂಮಿ ಮತ್ತು ಹೊಂನಿನ ದಾನಗಳನ್ನು ಮಾಡಿದ್ದ. ಆದರೆ ಕಾಲಾನಂತರ ಈ ಧರ್ಮ ನಷ್ಟವಾಗಿ ಸಂತಾನ ಸಂಕರಸೆಟಿಯ ಮಠವು ದುಃಸ್ಥಿತಿಗೆ ಬಂದಾಗ ಕುಪಣ ಸೆಟಿ ಮತ್ತು ಸೂರಿಸೆಟಿಯೂ ಕೂಡಿ ಅದನ್ನು ಉದ್ಧಾರ ಮಾಡಿದರು ಎಂದು ಶಾಸನ ತಿಳಿಸುತ್ತದೆ.[30]

ಈ ಮಠದಲ್ಲಿ ಮಾಣಿಹೆಗಡೆ ಕುಪಣಸೆಟಿಯು ಇಬ್ಬರು, ಕುಪ್ಪಣ ಸೆಟಿಯಯೋಳು ಮಂದಿಯ ಮತ್ತು ಉದರೆ ಸೂರಿಸೆಟಿಯು ಒಬ್ಬರ (ಅಶನಾರ್ಥ) ವ್ಯವಸ್ಥೆಯನ್ನು ಮಾಡಿದರು.[31] ಉಳಿದಂತೆ ಇದೂ ಒಂದು ಧೀರ್ಘ ಶಾಸನ. 77 ಸಾಲುಗಳ ಬರಹವಿರುವ ಇದರಲ್ಲಿ ಹೆಚ್ಚಿನ ಭಾಗ ಭೂಗಡಿ ಗುರುತಿಸುವಿಕೆ ಬಡ್ಡಿ ವ್ಯವಹಾರ, ಹಣ ಹೂಡಿಕೆ ಇತ್ಯಾದಿ ವಿವರಗಳನ್ನು ಹೊಂದಿದೆ.

12. ಇದೇ ರೀತಿಯಲ್ಲಿ ಇನ್ನೊಂದು ಪ್ರಾಚೀನ ಮಠವು ಜೀರ್ಣೋದ್ಧಾರಗೊಂಡ ವಿಷಯವನ್ನು ಸಣ್ಣಕೆರೆ ಕಟ್ಟೆ ಬಳಿಯಿರುವ ಬಸರೂರ ಶಾಸನವೊಂದು ತಿಳಿಸುತ್ತದೆ.[32] ಈ ಹಿಂದೆ ಹಡಕಳಬಳಿಯ ಕಲ್ಲುಸೆಟ್ಟಿ ಕಟ್ಟಿಸಿದ ಮಠವನ್ನೂ ಅವರ ಸಂತಾನದ ಸಂತಯ ಕಳಿಯ ಚಿಂಮಬಚ ಸೆಟಿ ಜೀರ್ಣೋದ್ಧಾರ ಮಾಡಿ ಅದರ ಪೋಷಣೆಗಾಗಿ ಭೂಮಿ ಮತ್ತು

ಹೊಂನಿನ ದಾನಗಳನ್ನು ಮಾಡಿದ ಎಂದು ಕ್ರಿ.ಶ.1548 ಅಕ್ಟೋಬರ್2 ಮಂಗಳವಾರಕ್ಕೆ ಸೇರುವ ಈ ಶಾಸನ ತಿಳಿಸುತ್ತದೆ. ಕಲ್ಲುಸೆಟ್ಟಿ ಯಾವಾಗ ಈ ಮಠಗಳನ್ನು ಕಟ್ಟಿಸಿದ ಮತ್ತು ಅದರ ಸ್ವಾಸ್ಥೆಗೆ ಏನು ದಾನ ಮಾಡಿದ ವಿಚಾರಗಳು ಗೊತ್ತಾಗುವುದಿಲ್ಲ.

ಈ ಶಾಸನದಲ್ಲಿ ಚಕ್ರವರ್ತಿ ಸದಾಶಿವರಾಯನ ಉಲ್ಲೇಖ ಮಾತ್ರ ಇದೆ. ಬಾರಕೂರಿನ ಅಂದಿನ ರಾಜ್ಯಪಾಲ ಯಾರು ಎಂಬುದು ಗೊತ್ತಾಗುವುದಿಲ್ಲ. ಇಲ್ಲೂ ಸಹ ಭೂವಿವರ, ಹಣಕಾಸಿನ ವ್ಯವಹಾರ ಸಾಲ,ಬಡ್ಡಿ, ವ್ಯವಹಾರಗಳು ಮಾಮೂಲಿನಂತಿವೆ. ಒಂದು ಗಮನಿಸಿಬೇಕಾದ ಅಂಶವೆಂದರೆ " ಸಿಂಗೇರಿ ವೊಡೆಯರ ಮೇಲೆ ಮಯಿಸಾಲದ ವರಹ ಗ೫೦ ಕ್ಕೆ ಬಡಿ ವರಹ ಗ೫" ಎಂದಿರುವುದು.[33]

13. ಬಸರೂರ ಪಡುವಕೇರಿಯಲ್ಲಿ ಮಠವನ್ನು ಕಟ್ಟಿಸುವ ಸಲುವಾಗಿ ಅಲ್ಲಿಯ ಹಲರು ಸೆಟ್ಟಿಕಾರರಿಂದ ಸ್ಥಳವನ್ನು ಖರೀದಿಸಿ ಅಲ್ಲಿ ಮಠ ಮತ್ತು ಛತ್ರದ ನಿರ್ಮಾಣ ಮಾಡಿದ ವಿಷಯ ಇಲ್ಲಿ ಸಣ್ಣ ಕೆರೆ ಕಟ್ಟೆ ಬಳಿ ದೊರೆತಿರುವ ಶಾಸನದಿಂದ ತಿಳಿದು ಬರುತ್ತದೆ. ಈ ಸ್ಥಳಕ್ಕೆ ಮೇರೆಗಳಾಗಿ ಹೊಳೆಯ ಬಳಿಯವರ ಮಠ, ಬಳಗಾರ ಬಳಿಯವರ ಧರ್ಮದ ಕಟ್ಟೆ ಮತ್ತು ಕಲುಡಿಚ ಬಳಿಯವರ ಮಠ ಗಳಿದ್ದುವು ಎಂದು ಶಾಸನ ತಿಳಿಸುತ್ತದೆ.[35] ಈ ಮಠ ಮತ್ತು ಅದರ ಛತ್ರದ ಸ್ವಾಸ್ಥ್ಯಕ್ಕೆ ಭೂಮಿಯೊಂದನ್ನು ಖರೀದಿಸಿ ದಾನಮಾಡಲಾಯಿತು. ಈ ಧರ್ಮ ಕಾರ್ಯ ಮಾಡಿದಾತ " ತೊಳಹರ ಬಳಿಯ ಅಲ್ಲಾಳ ಸೆಟ್ಟಿಯ ಹೊಸಬು ಸೆಟ್ಟಿಯ ಅಳಿಯ ತಿಂಮಯ್ಯ ಸೆಟ್ಟಿ". ಶಾಸನ ಅಪೂರ್ಣ ವಾಗಿರುವ ಕಾರಣ ದಾನದ ವಿವರ ಇಲ್ಲ. ಕ್ರಿ.ಶ.1554 ಅಕ್ಟೋಬರ್ 27 ಶನಿವಾರಕ್ಕೆ ಸೇರುವ ಈ ಶಾಸನವು ಚಕ್ರವರ್ತಿ ಸದಾಶಿವರಾಯನ ಆಳ್ವಿಕೆಯಲ್ಲಿ ಇಡೀ ತುಳು ರಾಜ್ಯವು ಸದಾಶಿವ ನಾಯಕನ ಆಡಳಿತಾಧಿಕಾರಕ್ಕೆ ಒಳಪಟ್ಟಿದ್ದು ಆಗ ಮಲ್ಲಪ್ಪ ವೊಡೆಯ ಬಾರಕೂರಿನ ರಾಜ್ಯಪಾಲನಾಗಿದ್ದ ಎಂದು ತಿಳಿಸುತ್ತದೆ.

14. ಬಸರೂರ ಪಡುವ ಕೇರಿಯ ಬಳಾಬಳಿಯ ಶಂಕರ ಹ್ರಡು ಪಾಳೆಯ ಮೊಂಮಗ ಕೋಟೀ ಸರಸೆಟ್ಟಿಯು ತನ್ನ ಮಠದ ಛತ್ರಕ್ಕೆ ಕ್ರಿ.ಶ.1555ರಲ್ಲಿ ಮಾಡಿದ ಭೂದಾನದ ವಿಚಾರವನ್ನು ದೇವರಕೆರೆ ಬಳಿಯ ಶಾಸನವೊಂದು ತಿಳಿಸುತ್ತದೆ. [36] ಶಾಸನ ಅಪೂರ್ಣ ವಾಗಿದ್ದು ದಾನದ ವಿವರ ನೀಡುವಲ್ಲಿ ಇಪ್ಪತ್ತಾರನೆಯ ಸಾಲಿನಲ್ಲಿ ಇದ್ದಕ್ಕಿದಂತೆಯೇ ನಿಂತು ಹೋಗಿದೆ. ಪ್ರಾಯಶಃ ಕೋಟೀಸರ ಸೆಟ್ಟಿಯು ತನ್ನ ಮಠಕ್ಕೆ ಸಾಕಷ್ಟು ಉತ್ಪತ್ತಿಯ ಭೂದಾನವನ್ನು ಮಾಡಿರಬೇಕು. ಆದರೆ ಈತ ಯಾವಾಗ ಮಠವನ್ನು ಕಟ್ಟಿಸಿದ ಎಂದು ಗೊತ್ತಾಗುವುದಿಲ್ಲ.

ಶಾಸನದಲ್ಲಿ ಚಕ್ರವರ್ತಿ ಸದಾಶಿವರಾಯನ ಅವನ ನಿರೂಪದಿಂದ ತುಳುರಾಜ್ಯದ ಆಡಳಿತ ನೋಡುತ್ತಿದ್ದ ಸದಾಶಿವರಾಯನು ನಾಯಕನ ಮತ್ತು ಬಾರಕೂರು ರಾಜ್ಯಪಾಲ ಮಲ್ಲಪ್ಪ ವೊಡೆಯನ ಉಲ್ಲೇಖ ಇದೆ.

ಬಡ್ಡಿ ವ್ಯವಹಾರಗಳಿಗೆ ಸಂಬಂಧಿಸಿದಂತೆ ಶಾಸನದಲ್ಲಿ ಒಂದು ಮುಖ್ಯ ಅಂಶ ಇದೆ. " ಬಳಿ ಅಗರ ಸಹಿತವಾಗಿ ಕೊಟ್ಟ ಅರ್ಧಕಾಟಿ ಗ ೮೦/ಕೆ ದೊಡ್ಡ ವರಹ ಗ ೩೨" ಎಂದು ಶಾಸನ ತಿಳಿಸುತ್ತದೆ. [35] ಇದರ ಪ್ರಕಾರ ಒಂದು ದೊಡ್ಡ ವರಹಕ್ಕೆ ಪರಿವರ್ತನ ಮೌಲ್ಯ ಎರಡೂವರೆ ಅರ್ಧಕಾಟಿ ಗದ್ಯಾಣ.

15. ತಾಳಿಕೋಟೆ ಯುದ್ಧಾನಂತರವೂ ಚಕ್ರವರ್ತಿಗಳ ಹೆಸರಿನಲ್ಲೇ ಮಾಡಿದ ದಾನ ಧರ್ಮಗಳ ಶಾಸನಾಂಕಿತಗಳ್ನು ರಚಿಸಿದ ಉದಾಹರಣೆ ಇಲ್ಲಿದೆ. ಕ್ರಿ.ಶ. 1608 ಮಾರ್ಚ್ 7 ಸೋಮವಾರಕ್ಕೆ ಸೇರುವ ಶಾಸನವೊಂದು ವೆಂಕಟಪತಿರಾಯನ ಆಳ್ವಿಕೆಯನ್ನು ಪ್ರಸ್ತಾಪಿಸಿ ಅಜಿನಾರು ಸಿಂಹ ಸೆಟ್ಟಿಯರ ಮಗ ತೊಳಹರ ಬಳಿಯ ಅಜ್ಜಿ ನಾರಣ ಸೆಟಿಯರು ಬಸರೂರ ಪಡುವ ಕೇರಿಯಲ್ಲಿ ತಾನು ಕಟ್ಟಿಸಿದ ಮಠಕ್ಕೆ ಬಿಟ್ಟ ಧರ್ಮದ ವಿಷಯ ತಿಳಿಸುತ್ತದೆ.[38]. ಒಂದೂ ನೂರ ಮೂವತ್ತು ಅರ್ಧವರಹ ಗದ್ಯಾಣವನ್ನು ವಿನಿಯೋಗಿಸಿ ವಾರ್ಷಿಕ ಎಪ್ಪತ್ತೊಂದು ಮುಡಿ ಉತ್ಪತ್ತಿಯ ಭೂಮಿಯನ್ನು ಈ ಮಠಕ್ಕೆ ಈತ ದಾನ ಮಾಡಿದ. ಅಕ್ಕಿಯ ಪ್ರಮಾಣವನ್ನು 'ಸಂಣಮುಡಿ ೭೧" ಎಂದು ಶಾಸನ ಉಲ್ಲೇಖಿಸುತ್ತದೆ. ಇದರಲ್ಲಿ ದೇವರ ನೈವೇದ್ಯ, ಪೂಜೆ, ಪರುವ ಪಾಡ್ಯಗಳಲ್ಲಿ ರಂಗ ಪೂಜೆ ಮತ್ತು ನಿತ್ಯ ಆರು ಜನರಿಗೆ ಛತ್ರದಲ್ಲಿ ಭೋಜನ ವ್ಯವಸ್ಥೆಗಳನ್ನು ನಡೆಸುವುದೊಂದು ಶಾಸನ ಸೂಚಿಸಿದೆ.[39]

16. ಕ್ರಿ.ಶ.1531 ನವೆಂಬರ್ 9 ಗುರುವಾರಕ್ಕೆ ಸೇರಿದ ಇಲ್ಲಿನ ಶಾಸನವೊಂದು[40] ವಿಜಯನಗರ ಚಕ್ರವರ್ತಿಯನ್ನಾಗಲಿ ಮತ್ತು ಬಾರಕೂರಿನ ರಾಜ್ಯಪಾಲನನ್ನಾಗಲಿ ಹೆಸರಿಸುವುದಿಲ್ಲ. ಇದೊಂದು ದಾನ ಶಾಸನ. ಅಜ್ಜಿಯ ಸದಾನಂದ ಸೆಟ್ಟಿ ಮಹಾಲಿಂಗೇಶ್ವರ [ನಖರೇಶ್ವರ] ದೇವಾಲಯದಲ್ಲಿ ದುರ್ಗಾದೇವಿಯನ್ನು ಪ್ರತಿಷ್ಠಾಪಿಸಿ ಎರಡೂ ದೇವರುಗಳ ಪೂಜೆ, ಉತ್ಸವ ಇತ್ಯಾದಿಗಳಿಗಾಗಿ, ನವರಾತ್ರಿ, ಕಾರ್ತಿಕ ವಿಶೇಷ ಪೂಜೆಗಳಿಗಾಗಿ ಬ್ರಾಹ್ಮಣ ಸುವಾಸಿನಿಯರ ಭೋಜನಕ್ಕಾಗಿ ಅಪಾರವಾದ ಭೂಮಿ ಮತ್ತು ಹೊನ್ನಿನ ದಾನಗಳ ವಿಚಾರ ಇಲ್ಲಿದೆ. ಇದರ ಜೊತೆಯಲ್ಲಿ ಅಜ್ಜಿಯ ದೇಉಸೆಟಿಯು 'ಗುಪ್ಪೆಯ ಬಾಲುಗೊಟಗೆ ಜೀರ್ನೋದ್ಧಾರಕೆ' ವರಹ ಗದ್ಯಾಣ 25ನ್ನು ಕೊಟ್ಟಿರುವ ವಿಚಾರವಿದೆ[41]

ಗುಪ್ಪೆಯ ಹಾದಿ ಎಂದು ಹೇಳುವ ಸ್ಥಳವೊಂದು ಬಸರೂರಿನಲ್ಲಿದೆ. ಇಲ್ಲಿ ಮಠವೊಂದು ಇತ್ತು ಎಂಬುದು ನನಗೆ ದೊರೆತ ಶಾಸನವೊಂದರಿಂದ ತಿಳಿದುಬರುತ್ತದೆ.[42] ಇಲ್ಲಿಯ ಅವಶೇಷಗಳೆಡೆಯಲ್ಲಿ ದೊರೆತ ಈ ಶಾಸನ ಒಂದು ಸ್ತ್ರೀ ವಿಗ್ರಹದ ಹಿಂಬದಿಯಲ್ಲಿ ಬರೆಯಲಾಗಿದೆ. ವಿಗ್ರಹ ತುಂಡಾಗಿದ್ದು, ನಮ್ಮ ಕ್ಷೇತ್ರ ಕಾರ್ಯ ಸಮಯದಲ್ಲಿ ತುಂಡುಗಳು ದೊರೆತವು. ಶಾಸನ ಬಹಳಷ್ಟು ಮಾಸಿದೆ. ಇದರಲ್ಲಿ ಮಠವನ್ನು ಸದಾನಂದ ವೊಡೆಯರ ಮಠ ಎಂದು ಹೆಸರಿಸಿದೆ. ಈ ಮಠಕ್ಕೆ 220 ಗದ್ಯಾಣಗಳನ್ನು ದಾನ ಮಾಡಲಾಗಿದೆ. ತೇದಿ ವಿವರಗಳ ಅಲಭ್ಯವಾದ ಈ ಶಾಸನವು

ಪ್ರಾಯಶಃ 15ನೆಯ ಶತಮಾನಕ್ಕೆ ಸೇರುವಂತಹುದು. ಶಾಸನದ ಕೊನೆಯಲ್ಲಿ 'ಗೋಪಿನಾಥ ದೇವರಿಸಿ' ಎಂದಿರುವುದು ಪ್ರಾಯಶಃ ಈ ಮಠದ ದೇವರನ್ನು ಉಲ್ಲೇಖಿಸಿರುವುದೆಂದು ಕಾಣುತ್ತದೆ.

ಈ ಮಠ ಕ್ರಿ.ಶ.1531ರ ವೇಳೆಗೆ ಜೀರ್ಣೋದ್ಧಾರಗೊಂಡಿರುವುದು ಅಜ್ಜಿದೇಲು ಸೆಟ್ಟಿಯ ದಾನದಿಂದ ತಿಳಿಯುತ್ತದೆ.

ಬಸರೂರಿನಲ್ಲಿ ಅಧಿಕ ಸಂಖ್ಯೆಯಲ್ಲಿ ವಿಜಯನಗರ ಕಾಲೀನ ಶಾಸನಗಳು ನನಗೆ ದೊರೆತಿವೆ. ಅವುಗಳಲ್ಲಿ ಕೆಲವು ಮಠ-ಛತ್ರಗಳಿಗೆ ಮಾಡಿದ ಧರ್ಮವನ್ನು ತಿಳಿಸುತ್ತವೆ.[43]

ಇಲ್ಲಿ ನಾವು ಗಮನಿಸಬೇಕಾದ ಒಂದು ಮುಖ್ಯ ಸಂಗತಿ ಎಂದರೆ ಎಲ್ಲರೂ ಮಠ ನಿರ್ಮಿಸಿರುವುದು ಬಸರೂರಿನ ಪಡುವ ಕೇರಿಯಲ್ಲ. ಇದು ಊರಿನ ಅತ್ಯಂತ ಶ್ರೀಮಂತ ಮತ್ತು ಪ್ರಮುಖ ಭಾಗವಾಗಿತ್ತು. ಸ್ವದೇಶೀ, ವಿದೇಶೀ ವ್ಯಾಪಾರ, ವಾಣಿಜ್ಯ ವಹಿವಾಟು, ಸಾಲ, ಲೇವಾದೇವಿ ಇತ್ಯಾದಿ ಬಡ್ಡಿ ವ್ಯವಹಾರ, ಭೂ ವ್ಯವಹಾರ ಇತ್ಯಾದಿ ಎಲ್ಲ ರೀತಿಯ ವ್ಯವಹಾರಗಳು ಇಲ್ಲಿ ನಡೆಯುತ್ತಿದ್ದವು. ಇಂತಹ ಕಾರ್ಯಗಳಲ್ಲಿ ನಿರತರಾಗಿದ್ದ ಸಮಾಜದ ವಿವಿಧ ವರ್ಗಗಳು ಇಲ್ಲಿದ್ದವು. ಇವರಲ್ಲಿ ಕೆಲವರು ತಮ್ಮ ಅಂತಸ್ತಿಗೆ ತಕ್ಕಂತೆ ಧರ್ಮಕಾರ್ಯನಿರತರಾಗಿದ್ದರು. ಇವರು ಕಟ್ಟಿಸಿದ ಮಠಗಳು ಆ ಸಂಬಂಧ ಹಾಕಿಸಿರುವ ಶಾಸನಗಳು ಇವರ ವ್ಯವಹಾರದ ದೀರ್ಘ ಪರಿಚಯವನ್ನು ಮಾಡಿಕೊಡುತ್ತದೆ. ಕೇವಲ ವೈಯ್ಯಕ್ತಿಕ ನೆಲೆಯಲ್ಲಿಹುಟ್ಟಿಕೊಂಡ ಈ ಮಠಗಳು ಆಧರಿಸಿದ್ದು ಆಯಾ ವ್ಯಕ್ತಿಗಳನ್ನು. ಮಠವನ್ನು ಉದ್ಧಾರ ಮಾಡಿ ದಾನಮಾಡಿದ ಉದಾಹರಣೆ ಕೇವಲ ಒಂದೆರಡಿರುವುದರಿಂದ ಆ ವ್ಯಕ್ತಿಗಳ ವಂಶದವರು ಮುಂದೆ ಅವುಗಳನ್ನು ನಡೆಸಿಕೊಂಡು ಬರುವ ಬಗ್ಗೆ ಗಮನ ಹರಿಸಿದಂತೆ ಕಾಣುವುದಿಲ್ಲ. ಈಗ ಉಳಿದಿರುವುದು ಮಠ-ಛತ್ರಗಳಲ್ಲಿ; ಅವುಗಳ ಸ್ಮಾರಕ ದಾಖಲೆಗಳಾಗಿ ಶಾಸನಗಳಿವೆ.

ಅಡಿ ಟಿಪ್ಪಣಿಗಳು

1. ಸೌತ್ ಇಂಡಿಯನ್ ಇನ್‌ಸ್ಕ್ರಿಪ್‌ಷನ್ಸ್ ಸಂಪುಟ.IX ಭಾಗ II. ಸಂಖ್ಯೆ-424ಇಲ್ಲಿ ಉಕ್ತವಾಗಿರುವ ಎಲ್ಲ ಶಾಸನಗಳೂ ಈ ಸಂಪುಟದಿಂದ ಆದದ್ದು. ಹಾಗಾಗಿ ಇನ್ನು ಮುಂದೆ ಅವುಗಳ ಸಂಖ್ಯೆಯನ್ನು ಮಾತ್ರ ಕೊಡಲಾಗುವುದು.
2. ಅದೆ-ಶಾಸನ ಪಾಠ ಸಾಲು 57-59.
3. ಸಂಖ್ಯೆ444
4. ಶಾಸನ ಪಾಠದ ಸಾಲು 8-10
5. ಸಂಖ್ಯೆ446
6. ಸಂಖ್ಯೆ452

7. ಅದೇ ಶಾಸನ ಪಾಠ ಸಾಲು 33-37
8. ಅದೇ ಶಾಸನ ಪಾಠ ಸಾಲು 49
9. ಅದೇ ಶಾಸನ ಪಾಠ ಸಾಲು47
10. ಅದೇ ಶಾಸನ ಪಾಠ ಸಾಲು 36-38
11. ಸಂಖ್ಯೆ 464
12. ಅದೇ ಶಾಸನ ಪಾಠ ಸಾಲು 5-11
13. ಸಂಖ್ಯೆ465
14. ಸಂಖ್ಯೆ 464ರ ಶಾಸನ ಪಾಠ ಸಾಲು 23-24
15. ಅದೇ ಸಾಲು 32-33
16. ಸಂಖ್ಯೆ468
17. ಸಂಖ್ಯೆ473
18. ಅದೇ ಶಾಸನ ಪಾಠ ಸಾಲು 8-10
19. ಅದೇ ಶಾಸನ ಪಾಠ ಸಾಲು10
20. ಸಂಖ್ಯೆ 511
21. ಸಂಖ್ಯೆ512
22. ಅದೇ - ಶಾಸನ ಪಾಠ ಸಾಲು 46
23. ಅದೇ-ಶಾಸನ ಪಾಠ ಸಾಲು 51
24. ಸಂಖ್ಯೆ-517
25. ಇದೊಂದು 55 ಸಾಲು ಬರಹವಿರುವ ದೊಡ್ಡ ಶಾಸನ, ಅಪೂರ್ಣವಾಗಿದೆ. ಆ ಕಾಲದಲ್ಲಿ ಚಾಲ್ತಿಯಲ್ಲಿದ್ದ ವ್ಯವಹಾರಗಳ ಬಗ್ಗೆ ಮಾಹಿತಿ ಇದೆ.
26. ಸಂಖ್ಯೆ 525
27. ಇದೂ ಒಂದು ದೊಡ್ಡ ಶಾಸನ: ಮೇಲಿನ ಶಾಸನದ ಗುಣವನ್ನೇ ಹೊಂದಿದೆ.
28. ಸಂಖ್ಯೆ 620
29. ಅದೇ ಶಾಸನ ಪಾಠ ಸಾಲು 72-74
30. ಅದೇ ಶಾಸನ ಪಾಠ ಸಾಲು 28-29
31. ಅದೇ ಶಾಸನ ಪಾಠ ಸಾಲು 70-71
32. ಸಂಖ್ಯೆ 632
33. ಅದೇ ಶಾಸನ ಪಾಠ ಸಾಲು 24
34. ಸಂಖ್ಯೆ 655

35. ಅದೇ ಶಾಸನ ಪಾಠ ಸಾಲು 10-12
36. ಸಂಖ್ಯೆ 659
37. ಅದೇ ಶಾಸನ ಪಾಠ ಸಾಲು 22
38. ಸಂಖ್ಯೆ 694
39. ಅದೇ ಶಾಸನ ಪಾಠ ಸಾಲು 43-45
40. ಸಂಖ್ಯೆ 540
41. ಅದೇ ಶಾಸನ ಪಾಠ ಸಾಲು 32
42. ಈ ಶಾಸನಗಳಲ್ಲಿ ಈಗ ಬಸರೂರು ಶಾರದಾ ಕಾಲೇಜಿನ ವಸ್ತು ಸಂಗ್ರಹಾಲಯದಲ್ಲಿದೆ.
43. ಬಸ್ರೂರು- ಒಂದು ಅಧ್ಯಯನ(1997) ಶಾರದಾ ಕಾಲೇಜು, ಬಸ್ರೂರು ಇದರ ಬೆಳ್ಳಿ ಹಬ್ಬದ ನೆನಪಿನ ಸಂಚಿಕೆ-ಅನುಬಂಧುಕ-ಬಸರೂರಿನ ಶಾಸನಗಳು-ಪು.221-248

೩೨. ವಿಜಯನಗರ ಸ್ಥಳ ಸೋಸಲೆ ಕುಳ

ಡಾ. ಎಸ್. ಚಿನ್ನಸ್ವಾಮಿ ಸೋಸಲೆ

ಮಾನವನು ಹಿಂದಿನ ಹಳೆಯ ಅನುಭವಗಳೊಡನೆ ಬದುಕುತ್ತಾ ಅವುಗಳನ್ನು ಮೆಲುಕು ಹಾಕುತ್ತಲೇ ಮುಂದಿನ ತನ್ನ ಭವಿಷ್ಯವನ್ನು ರೂಪಿಸಿಕೊಳ್ಳುವ ಶಕ್ತಿಯನ್ನು ಪಡೆಯಲು ಬಯಸುತ್ತಾನೆ ಎನ್ನಬಹುದು. ಇದಕ್ಕಾಗಿಯೇ 'ಇತಿಹಾಸವನ್ನು ಮರೆತವರು ಇತಿಹಾಸವನ್ನು ಸೃಷ್ಟಿಸಲಾರರು' ಎಂಬ ಹೇಳಿಕೆ ಹುಟ್ಟಿರುವುದೆನ್ನಬಹುದು. ತನ್ನ ಊರಿನ, ಪ್ರಾಂತ್ಯದ, ರಾಜ್ಯದ, ದೇಶದ ಹಾಗೂ ಜನಾಂಗದ ಬಗ್ಗೆ ಅಧ್ಯಯನ ಮಾಡಬೇಕಾದರೆ ಸಂಶೋಧಕರಿಗೆ ಪ್ರಮುಖವಾಗಿ ಹಿಂದಿನ ಇತಿಹಾಸದ ಪರಿಜ್ಞಾನವಿರಲೇಬೇಕು. ಇದನ್ನೇ 'ಇತಿಹಾಸ ಪ್ರಜ್ಞೆ' ಎಂದು ಕರೆದಿರುವುದು. ಇತಿಹಾಸದ ಪ್ರಜ್ಞೆಯಿಲ್ಲದ ಮನುಷ್ಯರನ್ನು ಮಾತುಬಾರದ ಮೂಕ ಅಥವಾ ಆ ಮನುಷ್ಯರು ಸಮಾಜದ ಸಾಂಸ್ಕೃತೀಕರಣ ಕ್ರಿಯೆಗೆ ಒಳಗಾಗದ ಪಶುಗಳು ಎಂದು ಉಲ್ಲೇಖಿಸಿದರೆ ತಪ್ಪಗಲಾರದು. ಏಕೆಂದರೆ ಪರ್ಯಾಲೋಚಿಸುವಂತಹ ಪ್ರತಿಯೊಂದು ವಿಷಯಕ್ಕೂ ತನ್ನದೇ ಆದಂತಹ ಚರಿತ್ರೆ ಇದ್ದೇ ಇರುತ್ತದೆ. ಇದನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಉತ್ತಮ ಫಲಿತಾಂಶ ಪಡೆಯುವ ಕಡೆ ಹೆಚ್ಚಿನ ಗಮನಹರಿಸಬೇಕಾಗುತ್ತದೆ. ಇಂದು ನಾವು ವೈಜ್ಞಾನಿಕ ಕ್ಷೇತ್ರಧಲ್ಲಿ ಪ್ರಗತಿ ಹೊಂದುತ್ತಿದ್ದು, ಆ ಸಂಸ್ಕೃತಿಗೆ ಹೊಂದಿಕೊಂಡು ಬದುಕುತ್ತಿದ್ದೇವೆ ಎಂದು ಹೇಳಿಕೊಳ್ಳುತ್ತಿದ್ದೇವೆ. ಆದರೆ ಸ್ವಲ್ಪ ನಮ್ಮ ಇತಿಹಾಸವನ್ನು ಮೆಲುಕು ಹಾಕಿದರೆ, ನಾವೆಲ್ಲರೂ ಒಂದು ಐತಿಹಾಸಿಕ ಯುಗದಲ್ಲಿಯೇ ಇದ್ದೇವೆ ಎಂಬುದು ಸ್ಪಷ್ಟವಾಗುತ್ತದೆ. ಇದು ಸಹಾ ಸತ್ಯವೇ. ಈ ಸತ್ಯವೆ ನಮಗೆ ಇತಿಹಾಸದ ವಿಚಾರದಲ್ಲಿ ಗಮನ ಹರಿಸುವುದಕ್ಕೆ ಪ್ರಧಾನವಾದಂತಹ ಕಾರಣವಾಗುತ್ತದೆ. ಒಂದರ್ಥದಲ್ಲಿ ಇತಿಹಾಸವು ನಮಗೆ ತಿಳಿದೋ ತಿಳಿಯದೆಯೋ ನಮ್ಮ ಬೌದ್ಧಿಕ ಪ್ರತಿಕ್ರಿಯೆಗಳ ಹಾಗೂ ಬದುಕಿನ ಅನಿವಾರ್ಯವಾದಂತಹ ಭಾಗವೂ ಆಗಿರುತ್ತದೆ ಎಂಬುದನ್ನು ಮರೆಯಬಾರದು.

ಇತಿಹಾಸವೆಂದರೆ ಕೇವಲ ರಾಜಮಹಾರಾಜರ, ರಾಣಿಯರ ಅರಮನೆ ಹಾಗೂ ಸಾಮ್ರಾಜ್ಯದ ವರ್ಣನೆ ಎಂದು ತಿಳಿದುಕೊಂಡಿದ್ದರ ಕಾಲವು ಒಂದಿತ್ತು. ಆದರೆ ಇಂದು ಇತಿಹಾಸದ ಸಂಶೋಧನಾ ವಿಧಾನವು ತನ್ನ ಮೂಲ ಧ್ಯೇಯವನ್ನು ಕಲಾನುಕ್ರಮವಂತೆ, ವಿಶಿಷ್ಟ ರೀತಿಯಲ್ಲಿ ಬದಲಾಯಿಸಿಕೊಳ್ಳುತ್ತಾ ಹೋಗುತ್ತಿದೆ. ಕೇವಲ ಬೃಹತ್ ಸಾಮ್ರಾಜ್ಯಗಳ ಅಧ್ಯಯನವೆ ಅಲ್ಲದೆ, ಹಾಗೂ ಚರಿತ್ರೆಯ ಅಧ್ಯಯನಕ್ಕೆ ಶಾಸನಗಳು, ನಾಣ್ಯಗಳು,

ಸ್ಮಾರಕಗಳು, ಲಿಖಿತ ದಾಖಲೆಗಳ ಸಹಾಯವೊಂದನ್ನೇ ಅವಲಂಬಿಸದೆ ಮೌಖಿಕವಾಗಿ ದೊರಕುತ್ತಿರುವ ಆಧಾರಕ್ಕೆ ಹೆಚ್ಚಿನ ಮಹತ್ವ ನೀಡಿ, ಸ್ಥಳೀಯ ಚರಿತ್ರೆಯ ಅಧ್ಯಯನಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ.

ಇದರಿಂದಾಗಿ ಇತ್ತೀಚೆಗೆ ಇತಿಹಾಸವು ತನ್ನ ಅಧ್ಯಯನದ ವ್ಯಾಪ್ತಿಯಲ್ಲಿ ಬೃಹತ್ ಪ್ರಮಾಣದಲ್ಲಿ ವಿಕಾಸ ಹೊಂದುತ್ತಾ ಹೋಗುತ್ತಿದೆ. ಈ ಹಿನ್ನೆಲೆಯಲ್ಲಿ ಇತಿಹಾಸ ತಾನು ಬೆಳೆಯುತ್ತಿರುವ ಮತ್ತು ಪ್ರಗತಿಶೀಲ ಅಧ್ಯಯನವು ಸ್ಥಳೀಯ ಚರಿತ್ರೆಯ ಸಂಶೋಧನೆಯಲ್ಲಿ ತಿಳಿದು ಬರುವಂತಹ ಅಂಶಗಳನ್ನು ಸೇರಿಸಿಕೊಂಡು ಶಾಶ್ವತ ವಾದಂತಹ ಸತ್ಯವನ್ನು ಪರಿಗಣಿಸುವಂತೆ ಮಾಡುತ್ತಿದೆ ಎನ್ನಬಹುದು. ಈ ನಿಟ್ಟಿನಲ್ಲಿ ಹೆಚ್ಚಿನ ದೃಷ್ಟಿ ಹರಿಸಿ ಸ್ಥಳೀಯ ಇತಿಹಾಸವನ್ನು ಹೊರಚಲ್ಲಲು ಹೆಚ್ಚಿನ ಸಂಶೋಧನೆಯ ಅವಶ್ಯಕತೆ ಇದೆ. ಇಂತಹ ಸಂತ್ಯಾಂಶದ ಹಿನ್ನೆಲೆಯಲ್ಲಿಯೇ ನಮ್ಮ ಸ್ಥಳೀಯ ಹಾಗೂ ಜನಾಂಗೀಯ ಇತಿಹಾಸವು ಮನೆ ಮಾಡಿಕೊಂಡಿದೆ ಎನ್ನಬಹುದು.

ಸ್ಥಳೀಯ ಹಾಗೂ ಜನಾಂಗೀಯ ಚರಿತ್ರೆಯ ಸ್ಥಿತಿ ಪ್ರಾಚೀನ ಕಾಲದಿಂದ ಇಂದಿನ ಕಾಲದವರೆಗೂ ಯಾವ ರೀತಿಯದಾಗಿದೆ ಎಂಬುದನ್ನು ಲಿಖಿತ ದಾಖಲೆಗಳಿಗಿಂತಲೂ ಪ್ರಮುಖವಾಗಿ ಕಾಲವೆಂಬ ದಾಖಲೆಯು ಉತ್ತಮ ಮಾಹಿತಿಯನ್ನು ಒದಗಿಸುತ್ತದೆ. ಏಕೆಂದರೆ ಯಾವುದೇ ವಿಷಯದ ಆಳವಾದ ಅಧ್ಯಯನಕ್ಕೆ ಇಂದಿನ ವರ್ತಮಾನದಲ್ಲಿನ ಆಚರಣೆಗಳು ಹೆಚ್ಚಾಗಿ ಸಹಾಯ ಮಾಡುತ್ತವೆ. ಈ ಸಂದರ್ಭದಲ್ಲಿಯೇ ಕಾಲವೆಂಬುದು ಮಹತ್ವವಾದದ್ದು ಎಂದಿರುವುದು. ಇಂದಂತು ಒಂದರ್ಥದಲ್ಲಿ ಪ್ರಾಚೀನ, ಮಧ್ಯಕಾಲೀನ ಮತ್ತು ಸಮಕಾಲೀನ ಸಂದರ್ಭಗಳು ಒಟ್ಟಿಗೆ ಕಾಡಿಸುತ್ತಿರುವ ಕಾಲವಾಗಿದೆ ಎನ್ನಿಸುತ್ತದೆ. ಏಕೆಂದರೆ ಕಾಲ ಮತ್ತು ಮನುಷ್ಯನ ಸಂಬಂಧ ವಿಶಿಷ್ಟವಾದದ್ದು. ಕಾಲದೊಳಗೆ ಮನುಷ್ಯ, ಮನುಷ್ಯನೊಳಗೆ ಕಾಲ ನೆಲೆಯೂರಲು ನಡೆಸುವ ಪ್ರಯತ್ನಗಳ ಪ್ರಕ್ರಿಯಾ ರೂಪವೇ ಬದುಕು. ಯಾವದೆ ಕಾಲವಾಗಲಿ, ಮೇಲ್ನೋಟಕ್ಕೆ ಸ್ವತಂತ್ರ ಪ್ರತ್ಯೇಕ ಘಟಕದಂತೆ ಕಂಡರೂ ಸಹ ಪ್ರಧಾನ ಗುಣಲಕ್ಷಣಗಳ ದೃಷ್ಟಿಯಿಂದ ಇದು ನಿಜವಾಗಿರುತ್ತದೆ. ಆದರೆ ಭೂತಕಾಲವೂ ವರ್ತಮಾನದ ದೃಷ್ಟಿಯಿಂದ ಭೂತದ ಲಕ್ಷಣಗಳನ್ನು ಹೊಂದಿರುತ್ತದೆ. ಆದರೆ ಈ ಭೂತಕಾಲವೂ ಒಂದು ಕಾಲದಲ್ಲಿ ವರ್ತಮಾನವೇ ಆಗಿರುತ್ತದೆ. ವರ್ತಮಾನ ಎನ್ನುವುದು ಪ್ರಧಾನ ಗುಣಲಕ್ಷಣಗಳ ದೃಷ್ಟಿಯಿಂದ ವರ್ತಮಾನವೆ ಆಗಿದ್ದರೂ ಅದರೊಳಗೆ ಭೂತಕಾಲವೂ ಸೇರಿಕೊಂಡಿರುತ್ತದೆ. ಆದರೆ ವರ್ತಮಾನವೂ ಭೂತದೊಳಗಿನಿಂದ ಹೊರಬರುವಾಗ ಬರಿಗೈಲಿ ಬರುವುದಿಲ್ಲ. ಜೊತೆಗೆ ಭೂತದ ಬುತ್ತಿಯನ್ನು ಹೊತ್ತು ಬರುತ್ತದೆ. ಹೀಗೆ ಹೊರಬಂದಂತಹ ವರ್ತಮಾನವು ನಂತರದಲ್ಲಿ ತನ್ನ ಹೊರರೂಪ ಪಡೆಯುತ್ತದೆ. ಈ ಹೊರರೂಪವನ್ನು ಒಳಗೆ ಸೆಳೆದುಕೊಂಡು ಕೇಂದ್ರಕ್ಕೆ ಬಗ್ಗಿಸಿಕೊಳ್ಳುವ ಕ್ರಿಯೆಯೇ ವರ್ತಮಾನದ ಉಸಿರಾಗಿರುತ್ತದೆ. ಈ ಕ್ರಿಯೆ ಪ್ರಕ್ರಿಯೆಗಳ

ಪೂರ್ಣರೂಪವೇ ಮನುಷ್ಯ. ಅಂದರೆ 'ವಿಜಯನಗರ ಸ್ಥಳ ಸೋಸಲೆ ಕುಳ' ಎನ್ನುವ ಮಾತನ್ನು ಅನಾದಿ ಕಾಲದಿಂದ ಇಂದಿನವರೆವಿಗೂ ಆಚರಿಸಿಕೊಂಡು ಬರುತ್ತಿರುವವರು ಮನುಷ್ಯರೆ ಹೊರತು ಮತ್ಯಾವ ದೇವಾನುದೇವತೆಗಳೂ ಅಲ್ಲ ಎಂಬುದಾಗಿದೆ.

ನಮ್ಮ ಸಂಸ್ಕೃತಿಯು ಭೂತವನ್ನು ಹೇಗೆ ಹೊತ್ತುಕೊಂಡೇ ಬಂದಿದೆ ಎಂಬುದು ಇಂದಿನ ಜನಜೀವನದ ಪಾಲಿನ ಶಾಪ ಹೌದಾದರೂ, ಅವು ಚರಿತ್ರೆಯ ಪಾಲಿಗೆ ವರವಾಗಿ ಕಂಡುಬರುತ್ತದೆ. ನಾಲ್ಕು ಸಾವಿರ ವರ್ಷಗಳ ಚರಿತ್ರೆಯೊಳಗೂ ಎಲ್ಲ ಸ್ಥಿತ್ಯಂತರಗಳೂ, ಅವುಗಳಲ್ಲಿನ ಸಂಘರ್ಷಗಳೂ ತಮ್ಮ ಕುರುಹುಗಳನ್ನು ನಮ್ಮ ಸಮಾಜದಲ್ಲಿ ಉಳಿಸಿಯೇ ಹೋಗಿದೆ. ಅವುಗಳು ಎಂದಿಗೂ, ಎಂದೆಂದಿಗೂ ನಮ್ಮ ಸುತ್ತಮುತ್ತಲಿನಲ್ಲೇ ಇರುತ್ತವೆ. ಈ ದೃಷ್ಟಿಯಿಂದ ಚರಿತ್ರೆ ಎಂಬುವುದು ಕೇವಲ ಭೂತದಲ್ಲಿಯೇ ಅಲ್ಲದೆ ಹೆಚ್ಚಾಗಿ ವರ್ತಮಾನದಲ್ಲಿಯೂ 'ವಿಜಯನಗರ ಸ್ಥಳ ಸೋಸಲೆ ಕುಳ' ಎನ್ನುವ ಸಂಪ್ರದಾಯ ಹಾಗೂ ಸಾಮಾಜಿಕ ಸಂಬಂಧದ ಹೊನ್ನುಡಿ

-2-

ವಿಜಯನಗರ ಸ್ಥಳ

ವಿಜಯನಗರದರಸರ ರಾಜಧಾನಿಯಾದ ವಿದ್ಯಾರಣ್ಯವು (ವಿದ್ಯಾನಗರ) ಹಂಪಿಯ ಸುಂದರ ಪ್ರದೇಶದಲ್ಲಿ ದಕ್ಷಿಣಗಂಗೆ ಎಂದು ಪ್ರಸಿದ್ಧವಾಗಿರುವ ತುಂಗಭದ್ರೆಯ ಮಡಿಲಿನಲ್ಲಿ ವಾಸ್ತುವಿನ ಕ್ರಮದಂತೆಯೇ ನಿರ್ಮಾಣವಾಗಿತ್ತೆಂದು ಇತಿಹಾಸಕಾರರು ಹೇಳುತ್ತಾರೆ. ಮುಂದೆ ಕೃಷ್ಣದೇವರಾಯನ ಕಾಲದಲ್ಲಿ ವಿಜಯನಗರವೆಂಬುದಾಗಿ ಮರುನಾಮಕರಣ ಹೊಂದಿತು. ಪ್ರಸಿದ್ಧ ವಾಸ್ತುಗ್ರಂಥವೆಂದು ಪರಿಗಣಿಸಿರುವ 'ಶುಕ್ರನೀತಿ'ಯಲ್ಲಿ ರಾಜಧಾನಿಯ ರಚನಾಕ್ರಮದ ಬಗ್ಗೆ ಯಾವ ರೀತಿಯ ವರ್ಣನೆ ಕಂಡು ಬರುತ್ತದೋ ಅದಕ್ಕೆ ತಕ್ಕಂತೆ ವಿಜಯನಗರ ಸಾಮ್ರಾಜ್ಯದ ರಾಜಧಾನಿಯು ನಿರ್ಮಾಣವಾಗಿರುವುದನ್ನು ನಾವು ಇಂದಿಗೂ ಕಾಣುತ್ತೇವೆ. ಈ ಭವ್ಯ-ಸುಂದರ- ವೈಭವದ ಸಾಮ್ರಾಜ್ಯವೆಂದು ದೇಶೀಯ ಹಾಗೂ 'ವಿದೇಶಿಯ ಇತಿಹಾಸಕಾರರಿಂದ ಕರೆಸಿಕೊಂಡ ವಿಜಯನಗರ ಸಾಮ್ರಾಜ್ಯದ ನಿಜವಾದ ಭವ್ಯತೆ ಸುಂದರತೆಯ ಹಾಗೂ ಅದರ ಉಜ್ವಲವಾದ ಸಂಸ್ಕೃತಿಯನ್ನು ನಿರ್ದಿಷ್ಟವಾಗಿ ಅರ್ಥ ಮಾಡಿಕೊಳ್ಳಲು ಅಂದಿನ ಕಾಲದಲ್ಲಿದ್ದ ಜಾತಿ ವ್ಯವಸ್ಥೆ ಹಾಗೂ ಅದರ ವಿವಿಧ ಸ್ತರಗಳ ಅಧ್ಯಯನವು ಅತ್ಯಾವಶ್ಯಕವೆನ್ನಿಸುತ್ತದೆ. ವಿಜಯನಗರದಲ್ಲಿಲ್ಲದೆ ಭರತ ಖಂಡದಲ್ಲಿಯೇ ಜಾತಿಯು ಸಮಾಜದ ಮೂಲಭೂತ ಹಾಗೂ ವಿಶಿಷ್ಟವಾದ ಸಂಸ್ಥೆಯಾಗಿ ಬೆಳೆದುಬಂದಿದೆ ಎನ್ನಬಹುದು. ಏಕೆಂದರೆ ಭಾರತದ ಜಾತಿ ವ್ಯವಸ್ಥೆಯನ್ನು ಹೋಲುವ ಕೆಲವು ಪದ್ಧತಿಗಳಂತೂ ಪ್ರಪಂಚದ ಇತರೆ ಭಾಗಗಳಲ್ಲಿ ಹೆಚ್ಚಾಗಿ ಕಂಡು ಬರುವುದೇ ಇಲ್ಲ. ಅಂತೆಯೇ ವಿಜಯನಗರದಲ್ಲಿಯೂ ಜಾತಿಯು

ಸಾಮ್ರಾಜ್ಯದ ಹಾಗೂ ಸಮಾಜದ ವಿಶಿಷ್ಟ ಸಂಸ್ಥೆಯಾಗಿತ್ತೆಂದು ಹೇಳಿದರೆ ತಪ್ಪಾಗಲಾರದು. ಈ ಆಧಾರದ ಮೇಲೆಯೇ ಪ್ರಸ್ತುತ ಪ್ರಬಂಧವು ಚರ್ಚಿತವಾಗಿರುತ್ತಿರುವುದು.

ಸೋಸಲೆ

ಸೋಸಲೆ ಗ್ರಾಮವು ಮೈಸೂರು ಜಿಲ್ಲೆಯಿಂದ 30 ಕಿ.ಮೀ. ದೂರದಲ್ಲಿದೆ. ಟಿ. ನರಸೀಪುರ ತಾಲ್ಲೂಕಿನಲ್ಲಿರುವ ಪ್ರಮುಖ ಹೋಬಳಿ ಕೇಂದ್ರವಾಗಿರುವ ಈ ಗ್ರಾಮ ಜೀವನದಿ ಕಾವೇರಿಯ ತಪ್ಪಲಿನಲ್ಲಿಯೇ ಇದೆ. ಸುಮಾರು 5000 ಸಾವಿರ ಜನಸಂಖ್ಯೆಯನ್ನು ಹೊಂದಿರುವ ಈ ಗ್ರಾಮದಲ್ಲಿ ಗಾಣಿಗ, ಅಗಸ, ಕುಂಬಾರ, ಕಮ್ಮಾರ, ಹೊಲೆಯ, ಮಾದಿಗ, ಉಪ್ಪಾರರು, ಒಕ್ಕಲಿಗರು (ಗೌಡರು) ಬೆಸ್ತರು (ಗಂಗಾ ಮತಸ್ಥರೆಂದು ಕರೆದುಕೊಳ್ಳುತ್ತಾರೆ)ಗಳು ಹೆಚ್ಚಾಗಿ ವಾಸಿಸುತ್ತಿರುವುದು ಕಂಡು ಬರುತ್ತದೆ.

ಸೋಸಲೆ ಎಂಬ ಪದವು ಸುಮಾರು ಮೂರನೇ ಶತಮಾನದ ಶಾಸನದಲ್ಲಿ ಉಲ್ಲೇಖಿತವಾಗಿರುವುದು ಕಂಡುಬರುತ್ತದೆ. ಈ ಶಾಸನವು ಸೋಸಲೆ ಪಕ್ಕದ ಕೃಷ್ಣಪುರ ಅಗ್ರಹಾರದಲ್ಲಿ ದೊರೆತದ್ದಾಗಿದೆ. ಕೃಷ್ಣಪುರದ ಅಗ್ರಹಾರದಲ್ಲಿರುವ ದೇವಾಲಯಕ್ಕೆ ಸೋಸಲೆ ಅಗ್ರಹಾರದಿಂದ ನೀಡಿದ ದಾನವನ್ನು ಈ ಶಾಸನವು ತಿಳಿಸುವುದಾದರೂ ಸಹ ಈ ಶಾಸನ ಮೂಲತಃ ಜೈನಶಾಸನವೆಂದು ತಜ್ಞರ ಅಭಿಪ್ರಾಯವಾಗಿದೆ.

ಸೋಸಲೆ ಎಂಬ ಸ್ಥಳನಾಮದ ಬಗ್ಗೆ ಗಮನಹರಿಸುವುದಾದರೆ. ಸೋ : ಎಂದರೆ ಇದೊಂದು ಕ್ರಿಯಾಪದ ಸೂಚಕವಾಗಿ ಕಂಡು ಬರುತ್ತದೆ. ಉದಾಹರಣೆಗೆ : 1. ಸೋ - ಎಂದರೆ ಸೋಯು, ಸೋವು, ಸೋಹು (ಕ್ರಿ)

(1) ಅಟ್ಟು : ಓಡಿಸು: ನಿವಾರಿಸು ಎಂಬರ್ಥ ಬರುತ್ತದೆ.

(2) (ಬೇಟೆಗಾಗಿ ಪ್ರಾಣಿಗಳನ್ನು) ಅಡಗಿರುವ ಪೊದೆ ಇತ್ಯಾದಿ ಸ್ಥಳಗಳಿಂದ ಎಬ್ಬಿಸಿ ಹೊರಡಿಸುವ ಎಂಬರ್ಥವೂ ಬರುತ್ತದೆ.

(3) ಹುಲಿಯನ್ನು ಸೋಯುವವರು ಬಲ್ಲಿನವರ ಕಡೆಗೆ ಅದನ್ನು ಅಟ್ಟುವುದೆಂದೂ, ಸೋಯುವವರು ರಕ್ಷಣೆಗಾಗಿ ಕೋವಿಯಿದ್ದವರು ಕೆಲವರು ಅವರನ್ನು ಹಿಂಬಾಲಿಸಬೇಕೆಂದೂ ತೀರ್ಮಾನ ಮಾಡಿದವರು.

(4) ತಿರುಗಿಸು, ಓಡುವಂತೆ ಮಾಡು:

ಉದಾಹರಣೆ : 2

ಸೋ - ಎಂದರೆ ನಾಮ ಪದವಾಗಿಯೂ ಕಂಡು ಬರುತ್ತದೆ.

(1) ಸೋಬಾನೆ ಎಂಬ ನುಡಿಯ ಸಂಕ್ಷಿಪ್ತರೂಪ; ಸೋಬಾನೆ ಪದಗಳ ಕೊನೆಯಲ್ಲಿ ಗುಂಪಾಗಿ ಹೇಳುವ ಮಾತು.

(2) ಒಪ್ಪಿಗೆ : ಅನುಮತಿ : ದನಿಗೂಡಿಸು ಎಂಬರ್ಥ ಸೂಚಿಸುತ್ತದೆ.

ಸಲೆ : ಎಂದರೆ ಇದೊಂದು ನಾಮಪದ ಸೂಚಕವಾಗಿ ಕಂಡು ಬರುತ್ತದೆ.

ಉದಾಹರಣೆಗೆ :

(1) ಹಣ ಮಂತಾದುದನ್ನು ಸಲ್ಲಿಸಿದುದು ; ಸಂದಾಯ ಮಾಡಿದುದು ; ಪಾವತಿ

(2) ಆಯ, ವಿಸ್ತೀರ್ಣ ; ಕ್ಷೇತ್ರ ಫಲ (ಒಂದು ಪದಾರ್ಥದ ಮೇಲ್ಮೆಯ ಅಳತೆಯನ್ನು ಅದರ ಸೆಲೆ ಅಥವಾ ಕ್ಷೇತ್ರಫಲ ಎನ್ನುತ್ತಾರೆ)

(3) ಒಂದೇ ಸಮನೆ ; ಏಕಪ್ರಕಾರವಾಗಿ ; ಯಾವಾಗಲೂ ; ನಿರಂತರವಾಗಿ ; ಚೆನ್ನಾಗಿ ; ವಿಶೇಷವಾಗಿ ; ಅತಿಶಯವಾಗಿ, ಉತ್ತಮವಾಗಿ, ಯೋಗ್ಯವಾಗಿ, ಸರಿಯಾಗಿ, ತಕ್ಕಂತೆ ; ಸಂಪೂರ್ಣವಾಗಿ, ಪೂರ್ತಿಯಾಗಿ, ನಿಜವಾಗಿ, ನಿಶ್ಚಯವಾಗಿ, ಮೆಚ್ಚುಗೆ, ಕೊಂಡಾಟ ಮುಂತಾದವುಗಳನ್ನು ಸೂಚಿಸುವ

ಒಂದು ಮಾತು. ಮೇಲಿನ ಸೋಲ+ಸಲೆ ಗಳೊಂದು ಪದಗಳ ಅರ್ಥವನ್ನು ಗಮನಿಸಿದಾಗ ಇಗಿನ ಊರಿನ ಚಿತ್ರಣ ಸ್ಥಳೀಯ ಚರಿತ್ರೆಗಾರರಿಗೆ ಗೋಚರವಾಗುತ್ತದೆ. ಸೋಸಲೆ ಮೂಲತಃ ಒಂದು ಪ್ರಸಿದ್ಧ ಅಗ್ರಹಾರ ಸ್ಥಳ. ಬ್ರಾಹ್ಮಣರು ಹೆಚ್ಚಾಗಿ ನೆಲಸಿ ವಿಜಯನಗರದರಸರು ಹಾಗೂ ಮೈಸೂರು ಅರಸರಿಂದ ಅನೇಕ ದಾನದತ್ತಿಗಳನ್ನು ಅಗ್ರಹಾರಕ್ಕೆ ಪಡೆದುಕೊಂಡು, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕವಾಗಿ ಉನ್ನತ ಸ್ಥಾನವನ್ನು ಪಡೆದುಕೊಂಡಿತ್ತು. ಈ ಅಗ್ರಹಾರವು ಕಾವೇರಿ ನದಿಯ ದಂಡೆಯಲ್ಲಿಯೇ ಇದ್ದುದರಿಂದ ಇವರು ನಿತ್ಯಧಾರ್ಮಿಕ ಕಾರ್ಯಗಳಿಗೆ ಕಾವೇರಿ ನದಿಯನ್ನು ಅವಲಂಬಿಸಿದರು. ಆದರೆ ಇಂದು ಸ್ವಲ್ಪ ಕಡಿಮೆಯಾಗಿದೆ. ಆದರೆ ಅಂದು ಅಲ್ಲಿನ ಹಿರಿಯರು ಹೇಳುವ ಹಾಗೆ ಈ ಪ್ರದೇಶವೆಲ್ಲವೂ ಗೊಂಡಾರಣ್ಯದಂತಿತ್ತು. ಅಲ್ಲಿ ಕರಡಿ, ಚಿರತೆ, ನರಿ, ಆನೆ, ಮುಳ್ಳಂದಿ, ಕಾಡುಬೆಕ್ಕು ಮುಂತಾದ ಪ್ರಾಣಿಗಳು ಸ್ವಚ್ಛಂದದಿಂದ ಜೀವಿಸುತ್ತಿದ್ದಂತಹ ಸಂದರ್ಭದಲ್ಲಿ ಅಗ್ರಹಾರದ ಬ್ರಾಹ್ಮಣರು ನದಿಗೆ ಹೋಗಿ ತಮ್ಮ ನಿತ್ಯದ ಹಾಗೂ ಧಾರ್ಮಿಕ ಕೆಲಸ ಕಾರ್ಯಗಳಿಗೆ ಸುಲಲಿತವಾಗಿ ಹೋಗಿಬರಲು ಅನುಕೂಲವಾಗುವಂತೆ ಸೋ -ಗಳನ್ನು ಅಂದರೆ ಅಟ್ಟಿಸುವ, ಓಡಿಸುವ, ಪೊದೆಯಲ್ಲಿ ಅಡಗಿರುವ ಪ್ರಾಣಿಗಳನ್ನು ಓಡಿಸುವವರನ್ನು -ಸೆಲೆ -ಯಾಗಿ ಅಂದರೆ ಹಣ ಮುಂತಾದುವನ್ನು ಸಲ್ಲಿಸಿದುದು, ಸಂದಾಯ ಮಾಡಿ, ವರ್ಷಕ್ಕೆ ಇಷ್ಟರಂತೆ ಒಪ್ಪಂದ ಮಾಡಿಕೊಂಡು ದುಡಿವ ಜನರ ಪಡೆಯೊಂದನ್ನು ನೇಮಿಸಿಕೊಂಡರು. ಹೀಗೆ ಬ್ರಾಹ್ಮಣರ ರಕ್ಷಣೆಗಾಗಿ ನಿಂತ ಪಡೆಯ ಕ್ರಿಯೆ ಹಾಗೂ ನಾಮಪದಗಳ ರೂಪವೇ ಸೋಸಲೆ ಎಂದು ನಾಮಕರಣಗೊಂಡಿದೆ ಎನ್ನಬಹುದಾಗಿದೆ.

ಸೋಸಲೆ ಕುಳ

ಪ್ರಾರಂಭದಿಂದಲೂ ವಿಜಯನಗರ ಸಾಮ್ರಾಜ್ಯವು ಹಲವಾರು ಬ್ರಾಹ್ಮಣಯತಿಗಳನ್ನು ತನ್ನ ಮಡಿಲಿನಲ್ಲಿ ಪೋಷಿಸಿದೆ. ಈ ಹಂತದಲ್ಲಿ ಮಧ್ಯಯುಗದ ಕೃಷ್ಣದೇವರಾಯರ ಆಳ್ವಿಕೆಯಲ್ಲಿ ವಿಜಯನಗರದಲ್ಲಿದ್ದಂತಹ ಪ್ರಸಿದ್ಧ ಬ್ರಾಹ್ಮಣ ಯತಿಯರೇ ಶ್ರೀ ವ್ಯಾಸರಾಯರು. ವ್ಯಾಸರಾಯರು ಸುಮಾರು ಆರು ಜನ ಚಕ್ರವರ್ತಿಗಳಿಗೆ ರಾಜಗುರುಗಳಾಗಿ, ಮಾರ್ಗದರ್ಶಕರಾಗಿ ಸೇವೆಸಲ್ಲಿಸಿದ್ದಾರೆ. ವ್ಯಾಸರಾಜರ ಜನ್ಮಸ್ಥಳ ಮೈಸೂರು ಜಿಲ್ಲೆ ಟಿ. ನರಸೀಪುರ ತಾಲ್ಲೂಕಿನ ಬನ್ನೂರು ಎಂಬ ಗ್ರಾಮ. ಈ ಗ್ರಾಮ ಸಹ ಜೀವನದಿ ಕಾವೇರಿಯ ಮಡಿಲಲ್ಲಿದೆ. ಇವರ ಜನನ ಹಾಗೂ ಜೀವನದ ಬಗ್ಗೆ ಅನೇಕ ಪುರಾಣ ಮಿಶ್ರಿತವಾದ ಮೌಖಿಕ ಚರಿತ್ರೆಗಳಿವೆ. ಆದರೆ ಇವರು ಸನ್ಯಾಸಿಗಳಾಗಿ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿದರು. ಇವರ ಚಿಂತನೆ ಹಾಗೂ ಸೂಕ್ತ ಸಮಯ ದಲ್ಲಿ, ಸಂದರ್ಭಗಳಲ್ಲಿ ನೀಡುತ್ತಿದ್ದಂತಹ ಸಲಹೆ ಸೂಚನೆಯು ವಿಜಯನಗರದರಸರಿಗೆ ಹೆಚ್ಚಿನ ಪ್ರಮಾಣದಲ್ಲಿ ಉಪಯೋಗವಾಗುತ್ತಿದ್ದುದ್ದರಿಂದ ಇವರನ್ನು ರಾಜುಗುರು ವನ್ನಾಗಿ ಒಪ್ಪಿಕೊಳ್ಳುವಂತೆಯೂ ಮಾಡಿತು. ಮೇಲೆ ಪ್ರಸ್ತಾಪಿಸಿರುವ ಹಾಗೆ ವಿಜಯನಗರದ ಆರು ಜನ ಪ್ರಭುಗಳಿಗೆ ರಾಜಗುರುವಾಗಿ ಸೇವೆ ಸಲ್ಲಿಸಿದ್ದಾರೆ.

ಪ್ರಸಿದ್ಧ ಸಾಮ್ರಾಜ್ಯದಲ್ಲಿ ರಾಜಗುರುಗಳಾಗಿದ್ದಂತಹ ವ್ಯಾಸರಾಯರಿಗೆ ಅವರದೆ ಆದ ಒಂದು ಸೇವಕ ಬಳಗವೂ ಇತ್ತು. ವ್ಯಾಸರಾಯರನ್ನು ಪಲ್ಲಕಿಯ ಮೆಲೆ ಕೂರಿಸಿ ಹೊತ್ತೊಯ್ಯುವವರು 'ಪರಿವಾರದವರು', ಹಾಗೂ ಎಣ್ಣೆ ನೀಡುತ್ತಿದ್ದ 'ಗಾಣಿಗರು', 'ಕುಂಬರರು', 'ಉಪ್ಪಾರರು', 'ಅಗಸರು, ಹೊಲೆಯರು, ಮಾದಿಗರು, ಪೂಜಾರಿಗಳು (ತಂಬಡಿಗಳು)'. ಇವರ ಒಂದು ಗುಂಪು ವಿಜಯನಗರ ಸಾಮ್ರಾಜ್ಯದಲ್ಲಿ ಇವರಿಗೆ ಭಕ್ತಿಯಿಂದ ನಡೆದುಕೊಂಡು ಬರುತ್ತಿದ್ದರು.

ವಿಜಯನಗರ ಸಾಮ್ರಾಜ್ಯದ ಪತನದ ನಂತರ ವ್ಯಾಸರಾಯರು ತಮ್ಮ ರಾಜಧಾನಿಯ ಜೀವನವನ್ನು ಅಂತ್ಯಗೊಳಿಸಿ ತಮ್ಮ ಜನ್ಮಸ್ಥಳವಾದ ಬನ್ನೂರಿನ ಕಡೆಗೆ ಪ್ರಯಾಣ ಬೆಳೆಸಿದರು. ಆದರೆ ಆಗ ಅವರು ಬಂದು ನೆಲೆಸಿದ್ದು ಬನ್ನೂರಿಗೆ ಹತ್ತು ಕಿ.ಮೀ. ದೂರದಲ್ಲಿರುವ ಕಾವೇರಿ, ಕಪಿಲೆ ಹಾಗೂ ಗುಪ್ತಗಾಮಿಯಾಗಿ ಹರಿಯುವ ಸ್ಪಟಿಕ ಸರೋವರ ಎಂಬ ಮೂರು ನದಿಗಳ ಸಂಗಮ ಸ್ಥಳವಾಗಿರುವ ಸುಂದರ ಪರಿಸರದ ಮಡಿಲಲ್ಲಿದ್ದಂತಹ ಸೋಸಲೆ ಎಂಬ ಆಗ್ರಹಾರಕ್ಕೆ. ಸೋಸಲೆ ಆ ಕಾಲಕ್ಕಾಗಲೇ ಘಟಿಕಾಲಯವನ್ನು ಹೊಂದಿದ್ದಂತಹ ಪ್ರಸಿದ್ಧ ವಿದ್ಯಾಕೇಂದ್ರವಾಗಿತ್ತು. ಸೋಸಲೆ ಆಗ್ರಹಾರದ ವಿದ್ವಾಂಸರು ಮೈಸೂರು ಅರಸರ ಅಸ್ಥಾನದಲ್ಲಿ ರಾಜಗುರುಗಳಾಗಿ, ವಿದ್ವಾಂಸರಾಗಿ ಸೇವೆ ಸಲ್ಲಿಸುತ್ತಿದ್ದರು. ಮೈಸೂರು ಸಂಸ್ಥಾನದಲ್ಲಿದ್ದಂತಹ ಅನೇಕ ಆಗ್ರಹಾರಗಳಲ್ಲಿ

ಸೋಸಲೆ ಅಗ್ರಹಾರ ಅತ್ಯಂತ ಶ್ರೀಮಂತವಾಗಿತ್ತು. ಕಾವೇರಿಯ ತಪ್ಪಲಲ್ಲಿದ್ದರಿಂದ ಉತ್ತಮವಾದ ಕೃಷಿ ಭೂಮಿಯನ್ನು ತನ್ನದಾಗಿಸಿಕೊಂಡಿತ್ತು.

ಸೋಸಲೆ ಆಗ್ರಹಾರವು ತನ್ನ ಸೇವೆಗಾಗಿಯೇ ಅನೇಕ ವೃತ್ತಿ ನಿರತ ಜಾತಿಯ ಜನಾಂಗದವರನ್ನು ತನ್ನ ಸುತ್ತಮುತ್ತಾ ನೇಮಿಸಿಕೊಂಡಿತ್ತು. ಇದರಲ್ಲಿ ಹೊಲೆಯರು, ಮಾದಿಗರು, ಅಗಸರು, ಗಾಣಿಗರು, ಕುಂಬಾರರು ಪ್ರಮುಖರು, ವ್ಯಾಸರಾಯರು ರಾಜಧಾನಿಯ ಸೇವೆ ಹಾಗೂ ಪ್ರವಾಸ ಮುಗಿಸಿ ದಕ್ಷಿಣಕ್ಕೆ ಪ್ರಯಾಣ ಮಾಡಿದಾಗ ಅವರ ಜೊತೆಯಲ್ಲಿ ಅನೇಕ ಜನಾಂಗದ ಅನುಯಾಯಿಗಳು ಬಂದರು. ವ್ಯಾಸರಾಯರು ಸೋಸೆಲೆಯಲ್ಲಿ ಮಠ ಸ್ಥಾಪಿಸಿದರು. ಇದು ಇಂದಿಗೂ ದೇಶವಿದೇಶಗಳಲ್ಲಿ ತನ್ನ ಶಾಖೆಗಳನ್ನು ಹೊಂದಿದ್ದು ಸೋಸಲೆ ವ್ಯಾಸರಾಯ ಮಠವೆಂದೇ ಪ್ರಸಿದ್ಧಿಯಾಗಿದೆ. ಈ ಮಠವು ಇಂದು ಮೈಸೂರು, ಬೆಂಗಳೂರು, ಬಾಂಬೆ, ಕಲ್ಕತ್ತಹಾಗೂ ಅಮೇರಿಕದ ನ್ಯೂಯಾರ್ಕ್ ನಗರಗಳಲ್ಲಿಯೂ ತನ್ನ ಶಾಖೆಗಳನ್ನು ತೆರೆದಿದ್ದು. ಅದರ ತಲೆ ಬರಹದಲ್ಲಿ 'ಶ್ರೀ ವ್ಯಾಸರಾಯ ಮಠ, ಸೋಸಲೆ' ಎಂಬುದಾಗಿ ಇರುವುದನ್ನು ಕಾಣಬಹುದಾಗಿದೆ. ಇವರು ಸ್ಥಾಪಿಸಿದ ಅನೇಕ ಮಠಗಳಲ್ಲಿ ಸೋಸಲೆಯ ಮಠವು ಅತ್ಯಂತ ಪ್ರಸಿದ್ಧಿ ಪಡೆದ ಮಠವಾಗಿತ್ತು.

ವ್ಯಾಸರಾಯರ ಜೊತೆಯಲ್ಲಿ ವಿಜಯನಗರ ಪ್ರದೇಶದಿಂದ ದಕ್ಷಿಣದ ಸೋಸಲೆ ಎಂಬುವಲ್ಲಿಗೆ ಬಂದಂತಹ ಹೊಲೆಯ, ಮಾದಿಗ, ಗಾಣಿಗ, ಕುಂಬಾರ, ಉಪ್ಪಾರರು, ಬೆಸ್ತರು (ಪರಿವಾರದವರು) ಈಗಾಗಲೇ ಇದ್ದಂತಹ ತಮ್ಮ ತಮ್ಮ ಜನಾಂಗದವರ ಮನೆಗಳ ಪಕ್ಕದಲ್ಲಿಯೇ ವಾಸಿಸತೊಡಗಿದ್ದರು. ಇವರೂ ಸಹ ಆ ಗ್ರಾಮದ ಪ್ರಮುಖ ಅಂಗವಾಗಿ ತೊಡಗಿಸಿಕೊಂಡು ಮೂಲ ಗ್ರಾಮಸ್ಥರೊಂದಿಗೆ ಬೆರೆತರು. ಮೂಲ ಗ್ರಾಮಸ್ಥರೊಂದಿಗೆ ವೈವಾಹಿಕ ಸಂಬಂಧವನ್ನು ಬೆಳೆಸಿದರು. ವಿಜಯನಗರದಿಂದ ಬಂದಿರುವ ನಾವೆಲ್ಲಹರೂ ಒಂದೇ ಕುಟುಂಬದವರು (ಆಯಾ ಜಾತಿಗೆ ಸಂಬಂಧಿಸಿದಂತೆ) ಆದ್ದರಿಂದ ನಾವು ಮದುವೆಯಾಗಬೇಕಾದರೆ ನಮ್ಮವರು ನಮಗೆ ಅಕ್ಕ ತಂಗಿಯರಾಗುತ್ತಾರೆ. ಆದ್ದರಿಂದ ಅವರು ಸ್ಥಳೀಯ ಸ್ವ ಜಾತಿಯವರೊಂದಿಗೆ ಕೊಡು-ಕೊಳ್ಳುವ ವೈಮಾಸಿಕ ಸಂಬಂಧಕ್ಕೆ ಮುಂದಾದರು. ಈ ಸಂದರ್ಭದಲ್ಲಿ ಸೃಷ್ಟಿಯಾದ ಪದವೆ 'ವಿಜಯನಗರ ಸ್ಥಳ ಸೋಸಲೆ ಕುಳ' ಎಂಬುವುದು. ಇದರರ್ಥ ನಾವು ಮೂಲತಃ ವಿಜಯ ನಗರ ಸ್ಥಳದವರು. ಆದರೆ ಈಗ ಬಂದು ನಮ್ಮ ಕುಳ ನೆಲೆಸಿರುವುದು ಸೋಸಲೆಯಲ್ಲಿ. ಆದ್ದರಿಂದ ಅವರು ಅಂದಿನಿಂದ ಇಂದಿವರೆವಿಗೂ ಹೆಚ್ಚಾಗಿ ತಮ್ಮ ಸ್ಥಳವನ್ನು ಮೇಲಿನ ರೀತಿ ಹೇಳಿಕೊಳ್ಳುವುದು ಕಂಡು ಬರುತ್ತದೆ. ಈ ರೀತಿ ಹೇಳುವುದರ ಹಿಂದೆ ಈ ಜನಾಂಗಕ್ಕೆ ಒಂದು ರೀತಿಯ ಹೆಮ್ಮೆಯೂ ಇತ್ತು. ಏಕೆಂದರೆ ಒಂದು ಕಡೆ ನಾವು ಪ್ರಸಿದ್ಧ ಸಾಮ್ರಾಜ್ಯವಾಗಿದ್ದ ವಿಜಯನಗರದವರೆಂಬುವುದು ಒಂದಾದರೆ, ಮತ್ತೊಂದು ಯತಿಗಳಾದ

ವ್ಯಾಸರಾಯರ ಅನುಯಾಯಿಗಳು ಎಂದು ಹೇಳಿಕೊಳ್ಳುವುದು ಮತ್ತೊಂದು ಕಡೆ. ಇದರಿಂದಾಗಿ ಪ್ರವಾಸಿ ಬಂಧುಗಳಿಗೆ ಮೂಲ ಸೋಸಲೆಯ ಮೂಲ ಜನಾಂಗವು ಅತ್ಯಂತ ಹೆಚ್ಚಿನ ಸಹಕಾರ ಹಾಗೂ ಆದ್ಯತೆಗಳನ್ನು ನೀಡಿತ್ತೆನ್ನಬಹುದು.

ಸೋಸಲೆಯಲ್ಲಿರುವ ಹೊಲೆಯ ಜನಾಂಗದವರ ಬಗ್ಗೆ ಹೇಳಬೇಕಾದರೆ ಇವರಲ್ಲಿ ಎರಡು ಗುಂಪು (1) ಚಕ್ರರು, (20) ಚ್ಯಾಜಗಾರರು.

ಚಕ್ರರು : ಇವರು ದೇವಾಲಯದ ರಕ್ಷಕರು, ದೇವಾಲಯದ ಭೂಮಿ ಹಾಗೂ ಊರಿನ ಉತ್ಸವಾದಿಯನ್ನು ನೋಡಿಕೊಳ್ಳುವವರು. ಇವರ ಸೇವೆಗಾಗಿ ಇವರಿಗೆ ಚಕ್ರಭೂಮಿ ಯನ್ನು ದಾನವಾಗಿ ನೀಡಲಾಗುತ್ತಿತ್ತು. ಹಾಗೂ ಗ್ರಾಮದೇವತೆಯ ಅರ್ಚಕರು. ಇವರ ಕುಲ ಅರ್ಚಕರ ಕುಲ. ಇವರೆಲ್ಲರೂ ಒಂದೇ ಕುಲ ಹಾಗೂ ಒಂದೇ ಸ್ಥಳದಿಂದ ಬಂದವರಾಗಿರುವುರಿಂದ ಇವರು ತಮ್ಮ ಕುಲದಲ್ಲಿ ಯಾವುದೇ ರೀತಿಯ ವೈವಾಹಿಕ ಸಂಬಂಧ ಮಾಡಿಕೊಳ್ಳಬಾರದು. ಅಷ್ಟೇ ಅಲ್ಲ ಅರ್ಚಕ ಕುಲದವರು ಯಾವುದೇ ಊರಿನಲ್ಲಿ ನೆಲೆಸಿದ್ದರೂ ಅವರೆಲ್ಲರೂ ಇವರಿಗೆ ಅಣ್ಣ-ತಮ್ಮ ಸಂಬಂಧ. ಇವರೂ ಪೂಜಿಸುವ ದೇವರು ಮಲ್ಲಿಕಾರ್ಜುನ (ಶಿವ), ಆದಿ ಚುಂಚನಗಿರಿ, ಮುಡುಕು ತೊರೆ ಮಲ್ಲಿಕಾರ್ಜುನ, ಹುಕ್ಕಲ ಗೆರೆ ಮಲ್ಲಿಕಾರ್ಜುನ ಇವರ ಮನೆ ದೇವರುಗಳು. ಇವರು ಮೂಲತಃ 'ಜೋಗಿ'ಗಳು ಎಂದು ಗುರ್ತಿಸಿಕೊಳ್ಳುತ್ತಾರೆ. ಸೋಸಲೆಯಲ್ಲಿ ನಡೆಯುವ ಗ್ರಾಮ ದೇವತೆಯ ಹಬ್ಬವಾದ ಹೋನದೇವಿ ಹಾಗೂ ಹೂವಮ್ಮ ದೇವತೆಗಳ ಹಬ್ಬದಲ್ಲಿ ಚಕ್ರರದು ಪ್ರಮುಖ ದೇವತಾ ಹಾಗೂ ದೇವಾಲಯದ ಕೆಲಸ ಕಾರ್ಯದಲ್ಲಿ ತೊಡಗಿಸಿಕೊಳ್ಳುತ್ತಾರೆ. ಇದು ನಮಗೆ ದೈವದತ್ತಾಗಿ ಬಂದಿರುವ ಹಕ್ಕು ಎಂಬುದು ಇವರ ಪ್ರತಿಪಾದನೆ.

ಚ್ಯಾಜಗಾರರು : ಅಲ್ಲಿನ ಮೌಖಿಕ ಆಧಾರದ ಪ್ರಕಾರ ಇವರು ಸೋಸಲೆಯ ಮೂಲ ನಿವಾಸಿಗಳು. ಚಕ್ರ ಅಲ್ಲಿರುವ ಹಾಗೆ ಇವರೆಲ್ಲರೂ ಒಂದೇ ಕುಟುಂಬದವರೆಂಬ ಭಾವನೆ. ಇವರ ಆರಾಧ್ಯ ದೈವ ಬಿಳಿಗಿರಿ ರಂಗನನಾಥಸ್ವಾಮಿ, ಮಂಟ್ಯಾಸ್ವಾಮಿ, ಒಡ್ಡಗಲ್ಲು ರಂಗನಾಥಸ್ವಾಮಿಯವರುಗಳು. ಇವರು ಮೂಲತಃ ದಾಸರುಗಳೆಂದು ಗುರ್ತಿಸಿಕೊಳ್ಳುತ್ತಾರೆ. ಈ ದೇವರುಗಳಿಗೆ ಇವರು ದೇವರ ಗುಡ್ಡರಾಗಿರುತ್ತಾರೆ. ಚಕ್ರರಿಗೂ ಚ್ಯಾಜಗಾರರಿಗೂ ಬಾವ-ಮೈಧುನರ ಸಂಬಂಧ.

ಈ ಮೇಲಿನ ವಿಂಗಡಣೆಯು ಕೇವಲ ಹೊಲೆಯ ಜನಾಂಗದಲ್ಲಿಯೇ ಮಾತ್ರ ವಲ್ಲದೆ ಮಾದಿಗರು, ಗಾಣಿಗ, ಕುಂಬಾರ, ಬೆಸ್ತರು ಹಾಗೂ ಅಗಸರಲ್ಲಿಯೂ ಕಂಡು ಬರುತ್ತದೆ.

ವ್ಯಾಸರಾಯರ ಆರ್ಶೀವಾದ ಪಡೆದವರೆಂದು ಇಂದಿಗೂ ಈ ದಲಿತ ವರ್ಗ ಸೋಸಲೆ ವ್ಯಾಸರಾಯರ ಮಠಕ್ಕೆ ಹಾಗೂ ಅಗ್ರಹಾರದ ಬ್ರಾಹ್ಮಣರಿಗೆ ಸುಗ್ಗಿಯ ಸಮಯದಲ್ಲಿ

ಕಾಣಿಕೆ ಅರ್ಪಿಸುವುದು ನಡೆದು ಬರುತ್ತಿದೆ. ಮಠಕ್ಕೆ ಗೌರವವಾಗಿ ನಡೆದುಕೊಳ್ಳುತ್ತಾರೆ. ಮಠದ ಸ್ವಚ್ಛತಾಕಾರ್ಯದಲ್ಲಿ ತಮ್ಮ ಕರ್ತವ್ಯವೆಂದು ತಿಳಿದು ಭಾಗವಹಿಸುತ್ತಾರೆ. (ರಜ -ಕೈಗೊಳ್ಳುವ ಕಾಯಕವೂ ಇದೆ. ರಜ-ಎಂದರೆ ಸೇವೆ ಮಾಡುವುದು, ಗಲೀಜನ್ನು ತೆಗೆಯುವುದು ಎಂಬರ್ಥ).

ಈ ಮೇಲಿನ ಕಾರಣಗಳಿಂದಾಗಿ ಈ ಜನಾಂಗವು ನಮ್ಮದು 'ವಿಜಯನಗರ ಸ್ಥಳ - ಸೋಸಲೆ ಕುಳ' ಎಂದು ಹೇಳಿಕೊಂಡು ಪಾರಂಪರಿಕ ಚರಿತ್ರೆಗೆ ಸಾಕ್ಷಿಯಾಗಿದೆ. ಈ ದೃಷ್ಟಿಯಲ್ಲಿ ಜನಾಂಗೀಯ ಸಾಂಸ್ಕೃತಿಕ ಚರಿತ್ರೆ ಶ್ರೀಮಂತವಾಗಿದೆ.

ವಿಜಯನಗರದ ಕಾಲದಲ್ಲಿ ಬ್ರಾಹ್ಮಣ, ವೈಶ್ಯ, ಕ್ಷತ್ರಿಯರು ಹಾಗೂ ಶೂದ್ರ ಎಂಬ ನಾಲ್ಕು ವರ್ಣದ ಕಲ್ಪನೆ ವೈದಿಕ ಪಂಗಡಗಳಿಗೆ ಸೀಮಿತವಾದ ಒಂದು ಲೋಕದೃಷ್ಟಿ ಯಾಗಿತ್ತು ಎನ್ನಬಹುದು. ಏಕೆಂದರೆ ಇದೊಂದು ವೈದಿಕ ಕೇಂದ್ರಿತ ಸಾಮಾಜಿಕ ನಿರೂಪಣೆ. ವೈದಿಕ ಸಮಾಜದಲ್ಲಿ ಅವಿಭಾಜ್ಯ ಅಂಗವಾಗದ ಅನೇಕ ಅವೈದಿಕ ಬುಡಕಟ್ಟು ಸಮಾಜಗಳ ಹಾಗೂ ಕೆಳಸ್ತರದ ಸಮಾಜಗಳು ಈ ಕಾಲದಲ್ಲಿ ಕಂಡು ಬರುತ್ತವೆ. ಉದಾಹರಣೆಗೆ : ಚಂಡಾಲರು, ಹೊಲೆಯರು, ಮಾದಿಗರು, ನಿಷಾದರು, ಪುಳಿಂದರು, ದಸ್ಯು, ಕೋಚ್ಚಾ-ಕೊರಮ ಮುಂತಾದವರು. ಮೇಲ್ಕಂಡವರೆಲ್ಲರನ್ನು ವರ್ಣ ವ್ಯವಸ್ಥೆಯ ಒಂದು ಭಾಗವನ್ನಾಗಿ ನೋಡಲಾಗುತಿತ್ತೆಂದು ಹೇಳಬಹುದು. ಏಕೆಂದರೆ ಮಧ್ಯಯುಗದ ಚರಿತ್ರೆಯಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಜಾರಿಯಲ್ಲಿದ್ದಂತಹ ವ್ಯವಸ್ಥೆಯಲ್ಲಿ 'ಸಂಕೀರ್ಣ ಜಾತಿ ವ್ಯವಸ್ಥೆ'. ಈ ಕಾಲದಲ್ಲಿದ್ದಂತಹ ವರ್ಣ ಪ್ರತಿಪಾದಕರು ತಮ್ಮ ತಿಳುವಳಿಕೆಗೆ ಬಂದಂತಹ ಹೊಸ ಸಮಾಜವನ್ನು ಸಂಕೀರ್ಣ ಜಾತಿಗಳೆಂದು ತಿಳಿಸಿ ಅವು ಯಾವ ಸನ್ನಿವೇಶದಲ್ಲಿ ಉದಯಿಸಿದವೆಂಬುದನ್ನು ವಿವರಿಸಿ ವರ್ಣ ವ್ಯವಸ್ಥೆಗೆ ಅದನ್ನು ಜೋಡಿಸುತ್ತಿದ್ದರು ಎಂದು ತಿಳಿಸುವ ಅನೇಕ ಆಧಾರಗಳು ನಮಗೆ ಲಭ್ಯವಾಗುತ್ತವೆ. ಈ ರೀತಿಯಸಂಕೀರ್ಣ ಜಾತಿಯ ಕಲ್ಪನೆಗಳನ್ನು ಬೆಳೆಸಲು ಮತ್ತೊಂದು ಪ್ರಮುಖ ಕಾರಣವೆಂದರೆ ಅಂದಿನ ಕಾಲದಲ್ಲಿ ಹೆಚ್ಚುತ್ತಿದ್ದಂತಹ ವೃತ್ತಿಗಳು. ವಿಜಯನಗರ ಕಾಲ ದಲ್ಲಿ ವಿಭಿನ್ನ ಲೋಹಗಳ ಕೆಲಸಗಾರರು, ಬುಟ್ಟಿ ಹೆಣೆಯುವವರು, ನೇಯ್ಗೆಯವರು, ಬಣ್ಣ ಹಾಕುವವರು, ಬಡಗಿಗಳು, ಕುಂಬಾರರು, ಚರ್ಮಕಾರರು, ಮಣಿಕಾರರು, ನರ್ತಕರು, ಕಣಿಹೇಳುವವರು,ಡೊಂಬರು ಮುಂತಾದ ಅನೇಕ ವೃತ್ತಿಪರ ಪಂಗಡಗಳನ್ನು ಅಂದೇ ಜಾತಿಗಳ ಪಟ್ಟಿಯಲ್ಲಿ ಸೇರಿಸಲಾಗಿತ್ತು ಎಂಬುದಕ್ಕೆ ಆಧಾರಗಳಿವೆ. ಇದಕ್ಕೆ ಕನಕ ದಾಸರ ಪದಗಳೇ ಹೆಚ್ಚಿನ ಆಧಾರಗಳಾಗಿವೆ.

ಆಧಾರ ಗ್ರಂಥಗಳು

1. ಪ್ರವಾಸಿ ಕಂಡ ಇಂಡಿಯಾ - ಸಂಪುಟ - 7, 6 ಡಾ. ಎಚ್.ಎಲ್. ನಾಗೇಗೌಡ ಪ್ರಸಾರಂಗ, ಮೈಸೂರು ವಿ.ವಿ.
2. ಎಫಿಗ್ರಾಫಿಯ ಕರ್ನಾಟಕ, ಮೈಸೂರು ಜಿಲ್ಲೆ, ಪ್ರಸಾರಂಗ, ಮೈಸೂರು ವಿಶ್ವ ವಿದ್ಯಾಲಯ, ಮೈಸೂರು.
3. ಸ್ಥಳೀಯ ಚರಿತ್ರೆ ಅಧ್ಯಯನದ ತಾತ್ವಿಕತೆ ಮತ್ತು ಸ್ವರೂಪ.

   ಸಂ.ಲಕ್ಷ್ಮಣ್ ತೆಲಗಾವಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
4. ನಾಲ್ವಡಿ ಕೃಷ್ಣನ ಮೈಸೂರು

   ಡಾ.ಎನ್. ಚಿನ್ನಸ್ವಾಮಿ ಸೋಸಲೆ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
5. ಸಾಮ್ರಾಜ್ಯ ಮತ್ತು ಸಂಸ್ಥಾನ

   ಡಾ. ಎನ್.ಚಿನ್ನಸ್ವಾಮಿ ಸೋಸಲೆ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
6. `ರಾಮಧಾನ್ಯ ಚರಿತ್ರೆ', ಕನಕದಾಸರು, ಕ್ರಿ.ಶ 1550 (ಸಂ) ಪಂಚಲಿಂಗೇಗೌಡ, ಕಲಾಕ್ಷೇತ್ರ, ಮೈಸೂರು.
7. ಸೋಸಲೆಯ ಹಿರಿಯ ನಾಗರಿಕರು

   (ಬ್ರಾಹ್ಮಣ, ಗಾಣಿಗ, ಬೆಸ್ತರು, ಅಗಸರು, ಮಾದಿಗರು, ಹೊಲೆಯ ಜನಾಂಗದವರಿಂದ ಸಂದರ್ಶನದ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ)
8. ಕನ್ನಡ ವಿಷಯ ನಿಘಂಟು (ಸಂಪುಟ - 8)

   ಕನ್ನಡಸಾಹಿತ್ಯ ಪರಿಷತ್, ಬೆಂಗಳೂರು.

೩೩. ತಾಳಿಕೋಟೆ ಯುದ್ಧದ ಸ್ಥಳ ಸಮೀಕ್ಷೆ

ಡಾ. ವಾಸುದೇವ ಬಡಿಗೇರ

ವಿಜಯನಗರ ಅರಸರು ಹಂಪಿಯನ್ನು ತಮ್ಮ ಸಾಮ್ರಾಜ್ಯದ ರಾಜಧಾನಿಯನ್ನಾಗಿ ಮಾಡಿಕೊಂಡು ಕ್ರಿ.ಶ. 1336 ರಿಂದ 1565ರ ಸುದೀರ್ಘ ಅವಧಿಯವರೆಗೆ ಆಳ್ವಿಕೆಯನ್ನು ಮಾಡಿದರು. ಹರಿಹರ -ಬುಕ್ಕರಿಂದ ಆರಂಭವಾಗಿ, ಕೃಷ್ಣದೇವರಾಯನ ಕಾಲಕ್ಕೆ ಉಚ್ಛ್ರಾಯ ಸ್ಥಿತಿಯನ್ನು ತಲುಪಿ, ರಾಮರಾಯನ ಅವಧಿಯಲ್ಲಿ ಅವನತಿಯನ್ನು ಹೊಂದಿತು. ಈ ಅವನತಿಗೆ ರಾಮರಾಯನ ಧೋರಣೆಯೇ ಕಾರಣವೆಂದು ಅನೇಕ ವಿದ್ವಾಂಸರು ಗುರುತಿಸಿದ್ದಾರೆ. ಕೃಷ್ಣಾನದಿಯ ಉತ್ತರದ ಬಹುಭಾಗ ಪ್ರದೇಶವನ್ನು ಸುಲ್ತಾನರು ಹಿಡಿದುಕೊಳ್ಳುವಲ್ಲಿ ಯಶಸ್ವಿಯಾಗಿದ್ದರು. ವಿಜಯನಗರ ಸಾಮ್ರಾಜ್ಯ ಕೃಷ್ಣಾನದಿಯ ದಕ್ಷಿಣ ಭಾಗದ ಕರ್ನಾಟಕ, ಆಂಧ್ರಪ್ರದೇಶದ ಹಾಗೂ ತಮಿಳುನಾಡಿನ ಕೆಲವು ಭಾಗಗಳನ್ನೊಳಗೊಂಡಂತೆ ವಿಸ್ತಾರವನ್ನು ಪಡೆದುಕೊಂಡಿತ್ತು. ಸಾಮ್ರಾಜ್ಯದ ವಿಸ್ತರಣೆ, ಆಡಳಿತದ ಧೋರಣೆಗಳಿಂದಾಗಿ ಸುಲ್ತಾನರ ಹಾಗೂ ವಿಜಯನಗರ ಅರಸರ ಮಧ್ಯ ಪದೆ ಪದೆ ಯುದ್ಧಗಳು ನಡೆಯುತ್ತಿದ್ದವು. ಕ್ರಿ.ಶ. 1518ರ ನಂತರ ಬಹಮನಿ ಸಾಮ್ರಾಜ್ಯ ಐದು ಸ್ವತಂತ್ರ ರಾಜ್ಯಗಳಾಗಿ ವಿಭಾಗವಾಯಿತು. ಆಗ ಅಹಮ್ಮದ್‌ನಗರದ ನಿಝಾಂಶಾಹಿ, ವಿಜಾಪುರದ ಆಲಿ ಆದಿಲ್‌ಶಾಹಿ, ಗೋಲ್ಕೊಂಡದ ಕುತ್ಬಶಾಹಿ ಹಾಗೂ ಬೀದರದ ಆಲಿ ಬರೀದ್‌ಶಾಹಿ ಇವರೆಲ್ಲರು ಸಾಮ್ರಾಜ್ಯವನ್ನು ವಿಸ್ತರಿಸುವ ಆಕಾಂಕ್ಷೆಯಿಂದ ತಮ್ಮ ತಮ್ಮಲ್ಲಿಯೇ ಪೈಪೋಟಿಗಿಳಿದರು. ಬಹುಸಂಖ್ಯಾಬಲದ ಸೈನ್ಯವನ್ನು ಹೊಂದಿದ ವಿಜಯನಗರದೊಂದಿಗಿನ ಸ್ನೇಹ ಅನಿವಾರ್ಯವಾಗಿತ್ತು. ಈ ಅವಕಾಶವನ್ನು ಬಳಸಿಕೊಂಡ ರಾಮರಾಯ ಒಬ್ಬ ನಂತರ ಇನ್ನೊಬ್ಬರನ್ನು ಎತ್ತಿಕಟ್ಟುವ ಆಡಳಿತ ತಂತ್ರವನ್ನು ಬಳಸಿ ಕೊಂಡನು. ಇದರಿಂದ ಮುಕ್ತಿ ಇಲ್ಲವೆಂಬುದನ್ನು ಅರಿತುಕೊಂಡ ಸುಲ್ತಾನರು, ವಿಜಯ ನಗರ ಸಾಮ್ರಾಜ್ಯವನ್ನೇ ಕಬಳಿಸಿದರೆ ಬಹುವಿಸ್ತಾರ ಪ್ರದೇಶವನ್ನು ಹಿಡಿದುಕೊಳ್ಳ ಬಹುದೆಂಬುದನ್ನು ಅರಿತುಕೊಂಡರು.ಇದರಿಂದ ಎಲ್ಲರೂ ಒಟ್ಟುಗೂಡಿ ವಿಜಯನಗರದ ವಿರುದ್ಧ ಯುದ್ಧಮಾಡಿ ಯಶಸ್ವಿಯಾದರು.

ಶಾಹಿಸುಲ್ತಾನರ ಹಾಗೂ ವಿಜಯನಗರ ಮಧ್ಯನಡೆದ ಯುದ್ಧದ ಸ್ಥಳ ನಿರ್ಣಯದಲ್ಲಿ ಅನೇಕ ಗೊಂದಲಗಳುಂಟಾಗಿವೆ. ಈ ಕುರಿತು ಇತಿಹಾಸಕಾರರು ವಿಭಿನ್ನ ಅಭಿಪ್ರಾಯಗಳನ್ನು ನೀಡಿದ್ದಾರೆ. ಸುಲ್ತಾನರ ಚರಿತ್ರೆಯ ಮೇಲೆ ಬೆಳಕು ಚೆಲ್ಲುವ ಬಸಾತಿನೆ -

ಸಲಾತೀನ ಗ್ರಂಥ ಒಂದು ಬಗೆಯ ಮಾಹಿತಿಯನ್ನು ಒದಗಿಸಿದರೆ, ಸ್ಥಳೀಯರ ಹೇಳಿಕೆಗಳು ಇನ್ನೊಂದು ಬಗೆಯಲ್ಲಿವೆ. ಅಲ್ಲದೇ ವಿದ್ವಾಂಸರು ನೀಡಿರುವ ವಿಭಿನ್ನ ಹೇಳಿಕೆಗಳನ್ನು ಕಾಣಬಹುದು. ಇವೆಲ್ಲವುಗಳನ್ನು ಒಟ್ಟುಗೂಡಿಸಿ ಚರ್ಚಿಸಿ ನಿರ್ದಿಷ್ಟ ಸ್ಥಳವನ್ನು ಗೊತ್ತುಪಡಿಸಲು ಅವಕಾಶವಿದೆ.

ತಾಳಿಕೋಟೆ ಯುದ್ಧ

ವಿಜಯನಗರ ಮತ್ತು ಶಾಹಿಸುಲ್ತಾನರ ಮಧ್ಯೆ ನಡೆದ ಈ ನಿರ್ಣಾಯಕ ಕದನವನ್ನು ತಾಳೀಕೋಟೆ ಇಲ್ಲವೇ ರಕ್ಕಸ -ತಂಗಡಗಿ ಯುದ್ಧವೆಂದು ಕರೆಯುತ್ತಾರೆ. ತಾಳಿಕೋಟೆ ನಗರ ಕೃಷ್ಣಾ ನದಿಯಿಂದ 22ಕಿ.ಮೀ. ದೂರದಲ್ಲಿದೆ. ರಕ್ಕಸಗಿ -ತಂಗಡಗಿ ಗ್ರಾಮಗಳು ಕೃಷ್ಣಾನದಿಯ ಉತ್ತರ ದಂಡೆಯ ಮೇಲಿವೆ. ಅವುಗಳ ನಡುವಿನ ಅಂತರ 13 ಕಿ.ಮೀ. ಹೀಗಾಗಿ ಯುದ್ಧ ನಡೆದ ಸ್ಥಳ ಕೃಷ್ಣಾನದಿಯ ಉತ್ತರ ಭಾಗವೆಂದೇ ಗುರುತಿಸಲಾಗಿದೆ. ಆದರೆ ಕೆಲವು ವಿದ್ವಾಂಸರು ಈ ಯುದ್ಧ ಕೃಷ್ಣಾ ನದಿಯ ದಕ್ಷಿಣ ಭಾಗದಲ್ಲಿ ನಡೆಯಿತೆಂದು ಗುರುತಿಸಲು ಪ್ರಯತ್ನಿಸಿದ್ದಾರೆ.

ಜೇಮ್ಸ ಎಮ್ ಕಾಂಪ್‌ಬೆಲ್ : ಈ ಯುದ್ಧ ಸಂಬಂಧವಾಗಿ ಬರೆಯುತ್ತ, ತಾಳಿಕೋಟೆಯಿಂದ 30 ಮೈಲು ಹಾಗೂ ನಾಲತವಾಡದಿಂದ 6 ಮೈಲು ದೂರದಲ್ಲಿ ಯುದ್ಧ ನಡೆಯಿತು.

ಫಿರಿಸ್ತಾನ ತರ್ಜುಮೆಕಾರ ಜಾನ್ ಬ್ರಿಗ್ಸ್ : ಕೃಷ್ಣಾನದಿಯದಕ್ಷಿಣದಲ್ಲಿ 30 ಮೈಲುಗಳ ಅಂತರದಲ್ಲಿ ಯುದ್ಧವಾಯಿತು.

ರಾಬರ್ಟ್ ಸಿವೆಲ್ : ವಿಜಯನಗರಕ್ಕೆ ಸಂಬಂಧಿಸಿದಂತೆ ಮರೆತುಹೋದ ಸಾಮ್ರಾಜ್ಯ ಗ್ರಂಥವ್ನನು ರಚಿಸಿರುವ ಇವನು, ಯುದ್ಧದ ಬಗ್ಗೆ ಹೇಳುತ್ತ ಇಂಗಳಗಿ ಮತ್ತು ಮುದಗಲ್ ಕಡೆಗೆ ಹೋಗುವ ಮಾರ್ಗದಲ್ಲಿ ಬಾಯಾಪುರ ಅಥವಾ ಭೋಗಾಪುರ ಗ್ರಾಮಗಳ ಹತ್ತಿರ ಬಯಲು ಪ್ರದೇಶದಲ್ಲಿ ಯುದ್ಧವಾಯಿತು. ರಾಬರ್ಟ ಸಿವೆಲ್‌ನ ಸಿದ್ಧಾಂತವನ್ನೇ ಡಾ. ವಿನ್ಸೆಂಟ ಸ್ಮಿಥ್ ಅನುಸರಿಸಿರುವುದನ್ನು ಕಾಣಬಹುದು.

ಆರ್. ಸುಬ್ಬರಾವ್ : ಇಂಗಳಗಿಯಿಂದ ಮುದಗಲ್ಲಿಗೆ ಹೋಗುನ ಮಾರ್ಗದಲ್ಲಿ ಉಪಸ್ಥಿತವಿರುವ ಭೋಗಾಪುರ ಗ್ರಾಮದ ಸನಿಹವೇ ರಕ್ಕಸತಂಗಡಿ ಸ್ಥಳವಿದೆ. ಅಲ್ಲಿ ಯುದ್ಧವಾಯಿತು.

ಪಿ.ಎನ್. ಪಟವರ್ಧನ್ : ರಾಮರಾಯನ ಬಖೈರನ್ನು ಆಧಾರವಾಗಿಟ್ಟುಕೊಂಡು ರಾಕ್ಷಸ ತಂಗಡಿ ನಿಜದಲ್ಲಿ ಎರಡು ಪ್ರತ್ಯೇಕ ಗ್ರಾಮಗಳೆಂದೂ, ಅವುಗಳ ನಡುವೆ 7-8 ಮೈಲು ಅಂತರವಿದೆ. ಇವೆರಡೂ ಗ್ರಾಮಗಳು ಕೃಷ್ಣಾ ತೀರದಲ್ಲಿ ಉಪಸ್ಥಿತ ಇವೆ. ಆದ್ದರಿಂದ ಈ ಯುದ್ಧಕ್ಕೆ ರಕ್ಕಸ - ತಂಗಡಗಿ ಎಂದು ಹೆಸರಿಟ್ಟರು.

ಹೆರಾಸ್ : ಯುದ್ಧಭೂಮಿಯ ಸ್ಥಳದ ಬಗ್ಗೆ ವಿಶ್ಲೇಷಿಸುತ್ತ, ಅದು ಕೃಷ್ಣಾನದಿಯ ದಕ್ಷಿಣಕ್ಕೆ ರಕ್ಕಸಗಿ, ತಂಗಡಗಿ ಎಂಬ ಗ್ರಾಮಗಳ ಪಕ್ಕದಲ್ಲಿ ಅಂದರೆ ರಕ್ಕಸ -ತಂಗಡಗಿಯಲ್ಲಿ ಈ ಯುದ್ಧವಾಯಿತು. ಇದನ್ನು ಸಿದ್ದಿಕಿ, ಡಾ.ಪಿ.ಎಮ್. ಜೋಶಿ ಹಾಗೂ ಡಾ. ಬಿ.ಎ. ಸಾಲೆತೂರ ಇತರರು ಒಪ್ಪಿಕೊಂಡರು.

ಎಸ್.ಕೆ. ಅಯ್ಯಂಗಾರ್ : ತಾಳಿಕೋಟೆ ಯುದ್ಧವೆಂದು ತೆಗೆದುಹಾಕಿ ರಕ್ಕಸ-ತಂಗಡಗಿ ಎಂದು ಹೆಸರು ಕೊಡಬೇಕು ಏಕೆಂದರೆ ರಕ್ಕಸಗಿ - ತಂಗಡಗಿ ಗ್ರಾಮಗಳ ಹತ್ತಿರ ಯುದ್ಧವಾಯಿತು.

ಡಾ.ಎನ್. ವೆಂಕಟರಮಣಯ್ಯ : ರಕ್ಕಸ-ತಂಗಡಗಿ ಕೃಷ್ಣಾ ನದಿಯ ಉತ್ತರಕ್ಕಿವೆ. ಮುಸಲ್ಮಾನ್ ಇತಿಹಾಸಕಾರರ ಮೇರೆಗೆ ಕೃಷ್ಣಾನದಿಯನ್ನು ದಾಟಿದ ನಂತರವೇ ಯುದ್ಧವಾಯಿತೆಂದು ಸ್ಪಷ್ಟ ದಾಖಲೆಯಿದೆ. ಯುದ್ಧವಾದದ್ದಾದರೂ ಎಲ್ಲಿ ಎಂದು ಪ್ರಶ್ನೆ ಮಾಡಿದ್ದಾರೆ.

ಮೇಲಿನ ಸಮೀಕ್ಷೆಯಿಂದ ಈ ಯುದ್ಧದ ಬಗ್ಗೆ ಸಂಪೂರ್ಣ ಗೊಂದಲವಿರುವುದು ಸ್ಪಷ್ಟವಾಗುತ್ತದೆ. ಬಸಾತಿನೆ ಸಲಾತೀನ ಗ್ರಂಥ ಯುದ್ಧಕ್ಕೆ ಸಂಬಂಧಿಸಿದಂತೆ ಕೆಲವು ಮಹತ್ವದ ಅಂಶಗಳನ್ನು ಒದಗಿಸುತ್ತದೆ.

ಬಸಾತಿನೆ ಸಲಾತೀನ

ಇದು ಪರ್ಶಿಯನ್ ಗ್ರಂಥ. ವಿಜಾಪುರದ ಮಹಮ್ಮದ್ ಇಬ್ರಾಹಿಮ್ ಜುಬೇರಿ ಎಂಬುವವನು ಕ್ರಿ.ಶ. 1824-30ರ ಮಧ್ಯ ಈ ಗ್ರಂಥವನ್ನು ರೂಪಿಸಿರಬಹುದೆಂದು ತರ್ಕಿಸಲಾಗಿದೆ. ಬ್ರಿಟಿಷ್ ಅಧಿಕಾರಿಗಳ ಆದೇಶದಂತೆ ಸತಾರೆಯ ನರಸಿಂಹ ವಿಠಲ ಪಾರಸನೀಸ ಎಂಬುವವನು ಕ್ರಿ.ಶ.1850ರಲ್ಲಿ ಇದನ್ನು ಮರಾಠಿ ಭಾಷೆಗೆ ಅನುವಾದಿಸಿದನು. ಇದರಲ್ಲಿ, ನಾಲ್ವರು ಬಾದಶಹರು ಸೇರಿ ಸೈನ್ಯದೊಂದಿಗೆ ಯುದ್ಧ ಸಾರಲು ಇತ್ತ ಬರುತ್ತಿದ್ದಾರೆಂದು ರಾಮರಾಯನಿಗೆ ತಿಳಿಸಿದಾಗ, ಒಂದಿಷ್ಟೂ ವಿಚಲಿತನಾಗದೆ ಮನದಲ್ಲಿ ಕಿಂಚಿತ್ತು ಭಯತರದೆ ತನ್ನ ಗರ್ವದಲ್ಲಿ ಹಟಮಾರಿಯಂತೆ ಇದ್ದನು. ಯುದ್ಧಸಿದ್ಧತೆಯನ್ನು ಮಾಡಿದನು. ಮೊದಲಿಗೆ ತನ್ನ ಬಂಧುವಿನೊಂದಿಗೆ 20 ಸಾವಿರ ಕುದುರೆ, 500 ಆನೆಗಳು, 5 ಲಕ್ಷ ಕಾಲ್ದಳ ಕಳುಹಿಸಿ, ಮುಸಲ್ಮಾನ ಜನರ ಸೈನ್ಯ ಬಂದು ಮುಟ್ಟುವ ಮೊದಲೇ ಕೃಷ್ಣಾನದಿ ತೀರವನ್ನು ಮುಟ್ಟಿ, ನದಿಯ ಮಾರ್ಗವನ್ನು ತಡೆಯಬೇಕೆಂದು ಆಜ್ಞಾಪಿಸಿದನು. ಮುಸಲ್ಮಾನರ ಸೈನ್ಯ ಕೃಷ್ಣಾತೀರಕ್ಕೆ ಬಂದು ನದಿಯನ್ನು ದಾಟಿ ಹೋಗುವ ಮಾರ್ಗ ಮುಚ್ಚಿದೆಯೆಂದು ಗೊತ್ತಾದಾಗ, ಜಲಮಾರ್ಗದಲ್ಲಿ ಅಭ್ಯಾಸವಿರುವ ಬೇಹುಗಾರರನ್ನು ಬೇರೆಡೆ ನದಿ ದಾಟುವ ಮಾರ್ಗವನ್ನು ಹುಡುಕಲು ಕಳುಹಿಸಲಾಯಿತು. ಆಗ ಎರಡು ಮೂರು ಕಡೆಗೆ ರಾಮರಾಯನ ಸೈನ್ಯ ನಿಂತಿದೆಯೆಂದು ತಿಳಿಯಿತು. ಮಾರ್ಗ

ಬದಲಿಸಿ, ಬೇರೊಂದು ಮಾರ್ಗದಿಂದ ಮುಸಲ್ಮಾನರ ಸೈನ್ಯ ನದಿ ದಾಟುತ್ತಿದೆಯೆಂದು ವದಂತಿ ಹಬ್ಬಿಸಿ, ಇದು ನಿಜವೆಂದು ತಿಳಿದು ರಾಮರಾಯನ ಸೈನ್ಯ ಅಲ್ಲಿಂದ ಕಾಲ್ತೆಗೆದು ಬೇರೆಡೆ ಹೊರಟಿತು. ಈ ಸಂಧಿಯನ್ನು ಸಾಧಿಸಿ ಮುಸಲ್ಮಾನರ ಸೈನ್ಯ ಕೃಷ್ಣಾ ನದಿಯನ್ನು ಸುರಕ್ಷಿತವಾಗಿ ದಾಟಿತು.

ಪ್ರಸ್ತುತ ಉಲ್ಲೇಖವನ್ನು ಪರಿಶೀಲಿಸಿದಾಗ, ಸುಲ್ತಾನರ ಹಾಗೂ ವಿಜಯನಗರ ಮಧ್ಯ ನಡೆದ ಯುದ್ಧ ಕೃಷ್ಣಾನದಿಯ ದಕ್ಷಿಣ ಭಾಗದಲ್ಲಿ ಎಂಬುವುದು ಸ್ಪಷ್ಟವಾಗುತ್ತದೆ. ಆದರೆ ಇಲ್ಲಿ ನದಿದಾಟಿದ ಮಾರ್ಗ, ಊರು, ಸ್ಥಳ ಯಾವುದು ದಾಖಲೆಯಾಗಿಲ್ಲ. ಈ ಒಂದು ನಿರ್ಣಾಯಕ ಯುದ್ಧದಲ್ಲಿ ಶಾಹಿಸುಲ್ತಾನರಿಗೆ ಜಯವಾಗಿ, ವಿಜಯನಗರ ಸಾಮ್ರಾಜ್ಯ ಅವನತಿಯಾಯಿತು. ಆದ್ದರಿಂದ ಈ ಯುದ್ಧದ ಉಲ್ಲೇಖಗಳು ವಿಜಯನಗರ ದಾಖಲೆಗಳಲ್ಲಿ ಇಲ್ಲದಿರುವುದು ನಿರೀಕ್ಷಿತವಾಗಿದೆ.

ಸುಲ್ತಾನರು ಈ ಯುದ್ಧದಲ್ಲಿ ಜಯಸಾಧಿಸಿದ್ದರಿಂದ ಅವರಲ್ಲಿ ವಿಜಯದ ನೆನಪು ಸಹಜವಾಗಿಯೇ ವಿಜೃಂಭಿಸಲಾಯಿತು. ಸುಲ್ತಾನರ ಆಸ್ಥಾನದ ಕವಿಗಳು ಸ್ಥಳೀಯರು ಈ ವಿಜಯದ ಸಂಕೇತವನ್ನು ತಮಗೆ ಅನುಕೂಲವಾದ ರೀತಿಯಲ್ಲಿ ವರ್ಣಿಸಿರುವುದು ಪ್ರಸ್ತುತವೆನಿಸುತ್ತದೆ. ಇಂತಹ ವರ್ಣನೆಗಳು ಅನೇಕ ಅರಸರ ಆಸ್ಥಾನ ಕವಿಗಳಿಂದಲೂ ನಡೆದಿರುವುದನ್ನು ಗಮನಿಸಬಹುದು. ಬಸಾತಿನೆ - ಸಲಾತೀನ ಗ್ರಂಥ ರಚನೆಯಾದದ್ದು 1824-30ರ ಮಧ್ಯವೆಂದು ಅಂದಾಜಿಸಲಾಗಿದೆ. ಅಂದರೆ ಯುದ್ಧವಾದ 250 ವರ್ಷಗಳ ನಂತರ. ಆದರೆ ವಿದೇಶಿ ಪ್ರವಾಸಿಗರ ಹೇಳಿಕೆಗಳು ಇದಕ್ಕೆ ಪುಷ್ಟಿ ನೀಡುತ್ತವೆ. ಹೀಗಾಗಿ ಯುದ್ಧ ನಡೆದ ಸ್ಥಳವಾದರೂ ಯಾವುದೆಂದು ಪ್ರಶ್ನಿಸಿದ ಡಾ. ಎನ್.ವೆಂಕಟರಮಣಯ್ಯ ನವರ ಊಹೆ ಸರಿಯಾಗಿದೆ.

ವಿಜಯನಗರ ಪತನಕ್ಕೆ ಕಾರಣವಾದ ಈ ಯುದ್ಧದ ಸೋಲಿನ ಪರಿಣಾಮಗಳಲ್ಲಿ, ಯುದ್ಧ ನಡೆದ ಸ್ಥಳವೂ ಕೂಡಾ ಅಷ್ಟೇ ಮಹತ್ವವನ್ನು ಪಡೆದುಕೊಂಡಿದೆ. ರಾಮರಾಯನ ಆಡಳಿತ ನೀತಿ ಯುದ್ಧ ನಡೆಯಲು ಎಷ್ಟು ಮುಖ್ಯವಾಗಿತ್ತೋ, ಅಧಿಕಾರಿ, ಸೇನಾಧಿಪತಿ ಗಳ ಮುಂದಾಲೋಚನೆ ಹಾಗೂ ಸೈನಿಕರ ಜವಾಬ್ದಾರಿ ಯುದ್ಧದ ಸೋಲಿನ ಕಾರಣಗಳಲ್ಲಿ ಬಂದುಸೇರುತ್ತವೆ. ವಿಜಯನಗರ ಸಾಮ್ರಾಜ್ಯ ಭೌಗೋಳಿಕವಾಗಿ ಸುಲ್ತಾನರ ರಾಜ್ಯ ಕ್ಕಿಂತಲೂ ವಿಸ್ತಾರವಾಗಿತ್ತು. ಅಲ್ಲದೇ ರಾಮರಾಯ ಸುಲ್ತಾನರೊಂದಿಗಿನ ಸಂಬಂಧ ನಿರಂತರವಾಗಿದ್ದು, ಅವರ ಸೈನಿಕ ಸಂಖ್ಯಾಬಲವನ್ನು ಅರಿತಿದ್ದರಿಂದ ಈ ಯುದ್ಧ ಅವನಿಗೆ ಮಹತ್ವವಾಗಿ ಕಾಣಲೇ ಇಲ್ಲ. ಯುದ್ಧದ ಪೂರ್ವತಯಾರಿಯಲ್ಲಿ ಸುಲ್ತಾನರಿಗಿದ್ದ ಆತಂಕ ರಾಮರಾಯ ಮತ್ತು ಅವನ ಅಧಿಕಾರಿಗಳಿಗಿರಲಿಲ್ಲ. ರಾಮರಾಯನ ಅಧಿಕಾರಾವಧಿ ಯಲ್ಲಿಯೇ ಪಾರಂಪರಿಕ ದೊರೆ ಸದಾಶಿವರಾಯನು ಜೀವಂತವಾಗಿದ್ದುದರಿಂದ ಮಾಂಡಳಿಕರಲ್ಲಿಯೂ ಕೂಡಾ ಜಿಗುಪ್ಸೆ ಹುಟ್ಟಲು ಕಾರಣವಾಗಿರಬಹುದು. ಸುಲ್ತಾನರು

ಯುದ್ಧ ತಯಾರಿಯಲ್ಲಿ ತಾಳಿಕೋಟೆಯನ್ನು ಕೇಂದ್ರವನ್ನಾಗಿ ಮಾಡಿಕೊಂಡು ಅಲ್ಲಿ ಬಹುದಿನಗಳವರೆಗೆ ಯುದ್ಧ ಸಾಮಗ್ರಿಗಳನ್ನು ಸಂಗ್ರಹಿಸುತ್ತಾರೆ. ಕೃಷ್ಣಾನದಿ ಸುಲ್ತಾನರ ಹಾಗೂ ವಿಜಯನಗರ ಸಾಮ್ರಾಜ್ಯದ ಗಡಿಯಾಗಿತ್ತು. ಈ ನದಿಗೆ ಹೊಂದಿಕೊಂಡಂತೆ ದಕ್ಷಿಣಭಾಗದ ಇಸ್ಲಾಂಪುರದಲ್ಲಿ ಕೋಟೆ ಕಟ್ಟಿಸಿ, ಅಲ್ಲಿಯೂ ಯುದ್ಧದ ಪೂರ್ವ ತಯಾರಿಯಲ್ಲಿ ಶಸ್ತ್ರಾಸ್ತ್ರಗಳ ಸಂಗ್ರಹಣಾ ಕಾರ್ಯವನ್ನು ಕೈಗೊಳ್ಳುತ್ತಾರೆ. ವಿಜಾಪುರದ ಆದಿಲ್‌ಶಾಹಿ ಅನೇಕ ಬಾರಿ ಇಸ್ಲಾಂಪುರಕ್ಕೆ ಭೇಟಿ ನೀಡುತ್ತ ಮೇಲ್ವಿಚಾರಣೆ ಮಾಡುತ್ತಿರುತ್ತಾನೆ. ವಿಜಾಪುರದಿಂದ ಇಸ್ಲಾಂಪುರಕ್ಕೆ ಬಂದು ಹೋಗುವ ಮಾರ್ಗದಲ್ಲಿರುವ ಖಾನಾಪುರದಲ್ಲಿ ಬಡೆಮಯಾ ಮಸೀದಿ ಕಟ್ಟಿಸುತ್ತಾನೆ. ಈ ಎಲ್ಲ ಕಾರ್ಯ ಚಟುವಟಿಕೆಗಳ ಹಿನ್ನೆಲೆಯಲ್ಲಿ ಅವರ ಮಧ್ಯದ ನಿರ್ಣಾಯಕ ಮಹಾಯುದ್ಧವು ರಕ್ಕಸಗಿ - ತಂಗಡಗಿ ಮಧ್ಯದ ಬಯಲು ಪ್ರದೇಶದಲ್ಲಿ ನಡೆಯಿತೆಂದು ನಿರ್ಣಯಕ್ಕೆ ಬರುವುದು ಸಹಜವಾಗಿಯೇ ಕಾಣುತ್ತದೆ. ಇದಕ್ಕೆ ಪುಷ್ಟಿ ಎಂಬಂತೆ ಸ್ಥಳೀಯ ಮೌಖಿಕ ಹೇಳಿಕೆಗಳು ಆಕರಗಳನ್ನೊದಗಿಸುತ್ತವೆ.

ಸ್ಥಳೀಯ ಆಕರಗಳು

ಕೃಷ್ಣಾನದಿಯ ಉತ್ತರ ದಂಡೆಯ ಮೇಲಿರುವ ಗ್ರಾಮಗಳಾದ ಬೂದಿಹಾಳ, ಬೊಮ್ಮಣಗಿ, ಕಂದಕನೂರು, ಹಂದರಗಲ್ಲ, ಗಂಗೂರು, ತಂಗಡಗಿ, ಅವರಗೋಳ, ಬೈಲಕೂರು, ಹುನಗುಂಡೆ, ಬಂಗಾರದ ಗುಂಡ, ರಕ್ಕಸಗಿ, ಘಾಳಪೂಜೆ, ಬಿಜ್ಜೂರು, ಬಲದಿನ್ನಿ ಹಾಗೂ ಎಡದಂಡೆಯ ಮೇಲಿರುವ ಹುನಗುಂದ ತಾಲ್ಲೂಕಿನ ದಾಸಬಾಳ, ಧನ್ನೂರ, ಹುಲ್ಲಳ್ಳಿ, ಮರೋಳ, ಹಾವರಗಿ, ಕೌಜಗನೂರ, ಇಂಗಳಗಿ, ಇಸ್ಲಾಂಪುರ, ಅಮರವಾಡಗಿ, ಕಮಲದಿನ್ನಿ, ಕೊಪ್ಪ, ವಡೆಯರಗೋನಾಳ ಮತ್ತು ಲಿಂಗಸಗೂರು ತಾಲ್ಲೂಕಿನ ಅಂಕನಾಳ, ಚಿತಾಪುರ, ಗುಡಿಜಾಪುರ, ಹಾಲವಟಗಿ, ಹೀರೇಜಾಪುರ, ಕಮಲದಿನ್ನಿ, ನವಲಿ, ಪಲಗಲದಿನ್ನಿ, ರಾಂಪುರ, ತೊಂಡಿಹಾಳ, ತುಂಬಲಗಡ್ಡಿ, ಉಪನಾಳ, ಇಂಗಳಗಿ, ಬೋಗಾಪುರ ಮೊದಲಾದ ಗ್ರಾಮಗಳಲ್ಲಿ ಕ್ಷೇತ್ರ ಕಾರ್ಯ ಕೈಗೊಂಡು ಯುದ್ಧ ನಡೆದ ಸ್ಥಳದ ಬಗ್ಗೆ ಮಾಹಿತಿ ಸಂಗ್ರಹಿಸಿದಾಗ, ಎಲ್ಲರ ಅಭಿಪ್ರಾಯವು ರಕ್ಕಸಗಿ - ತಂಗಡಗಿ ಮಧ್ಯ ಸಮತಟ್ಟಾದ ಬಯಲು ಪ್ರದೇಶದಲ್ಲಿ ಯುದ್ಧ ನಡೆಯಿತೆಂದು ಹೇಳುತ್ತಾರೆ. ಇದಕ್ಕೆ ಅನೇಕ ವಿದ್ವಾಂಸರು ರಕ್ಕಸ -ತಂಗಡಗಿ ಮಹಾಯುದ್ಧವೆಂದು ಕರೆಯಲು ನಿರ್ಧರಿಸಿದುದರಿಂದ ಅದು ಶಾಲಾ ಪಠ್ಯಪುಸ್ತಕಗಳಲ್ಲೂ ಸೇರ್ಪಡೆಗೊಂಡಿತು. ಕ್ರಮೇಣ ಇದು ಪರಿಣಾಮ ಬೀರುತ್ತ ಜನಮನದಲ್ಲಿ ಉಳಿದುಬರಲು ಕಾರಣವಾಗಿರಬಹುದೆಂದು ಊಹಿಸಲು ಸಾಧ್ಯವಿದೆ. ವಿದ್ವಾಂಸರು ರಕ್ಕಸಗಿ-ತಂಗಡಗಿಯಂತೆ ತಾಳಿಕೋಟೆ ಯುದ್ಧವೆಂದೂ ಕರೆದಿದ್ದಾರೆ. ಆದರೆ ತಾಳಿಕೋಟೆ ಪರಿಸರದ ಹೆಸರು ಯುದ್ಧ ನಡೆದ

ಸ್ಥಳ ನಿರ್ಣಯದಲ್ಲಿ ಪ್ರಚಾರವಾಗಲಿಲ್ಲ. ಇದನ್ನು ಸೂಕ್ಷ್ಮವಾಗಿ ಗಮನಿಸಿದರೆ, ಮೌಖಿಕ ಪರಂಪರೆಯನ್ನು ಸುಲಭವಾಗಿ ಅಲ್ಲಗೆಳೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಪ್ರದೇಶದಲ್ಲಿರುವ ರೆಡ್ಡಿ ಜನಾಂಗದ ದೇಸಗತಿ ಮನೆತನಗಳು ತಮ್ಮ ಮೂಲವನ್ನು ಆಂಧ್ರಪ್ರದೇಶದಿಂದ ಆರಂಭಿಸುತ್ತಾರೆ. ತಾವು ವಿಜಯನಗರ ಅರಸರ ಮಾಂಡಳಿಕ ರಾಗಿದ್ದು, ಯುದ್ಧದ ನಂತರ ಆ ಸಾಮ್ರಾಜ್ಯ ಪತನವಾಯಿತು. ಮುಂದಿನ ದಾರಿ ತೋರದೆ ನಾವು ಇಲ್ಲಿಯೇ ಉಳಿಯಬೇಕಾಯಿತು. ಆ ಸಮಯದಲ್ಲಿ ಅನಿವಾರ್ಯವಾಗಿ ಆದಿಲ್‌ಶಾಹಿಗಳ ಪ್ರಭುತ್ವವನ್ನು ಒಪ್ಪಿಕೊಂಡಾಗ, ನಮಗೆ ಜಾಗೀರು ವಹಿಸಿ ಕೊಟ್ಟರು ಎಂದು ಹೇಳುತ್ತಾರೆ. ಅವುಗಳಲ್ಲಿ ಬಲದಿನ್ನಿ ನಾಡಗೌಡರ ಮನೆತನ ಪ್ರಮುಖವಾದದ್ದು. ಅವರು ಬಲದಿನ್ನಿ ಮತ್ತು ನಾಲತವಾಡಗಳಲ್ಲಿ ವಾಡೆ ಕಟ್ಟಿಸಿ, ನಲವತ್ತು ಹಳ್ಳಿಗಳ ಜಾಗೀರನ್ನು ನೋಡಿಕೊಳ್ಳುತ್ತಿದ್ದರು. ಬಲದಿನ್ನಿಯಲ್ಲಿರುವ ಇವರ ಮೂಲ ವಾಡೆ ನಾರಾಯಣಪುರ ಯೋಜನೆಯ ಹಿನ್ನೀರಿನಲ್ಲಿ ಮುಳುಗಡೆಯಾಗಿದೆ. ಎತ್ತರ ಪ್ರಾಕಾರ ಗೋಡೆ, ಅದಕ್ಕೆ ನಾಲ್ಕೂ ಮೂಲೆಗಳಲ್ಲಿ ಬುರುಜುಗಳನ್ನು ಹೊಂದಿ ವಿಶಾಲ ಪ್ರದೇಶ ವನ್ನೊಳಗೊಂಡಿರುವ ಈವಾಡೆ ಬೇಸಿಗೆ ಕಾಲದಲ್ಲಿ ಮಾತ್ರ ಕಾಣಸಿಗುತ್ತದೆ.

ಬಲದಿನ್ನಿ ನಾಡಗೌಡರ ಮೂಲ ವಂಶಸ್ಥರು ಆಂಧ್ರ ಪ್ರದೇಶದ ಪುರ್ತಲಾಬಾದಿನಲ್ಲಿ ಇದ್ದರು. ಇಲ್ಲಿ ವಿಜಯನಗರ ಮಾಂಡಳಿಕರಾಗಿ ಆ ಪ್ರದೇಶದಲ್ಲಿ ಅಧಿಕಾರ ಮಾಡುತ್ತಿದ್ದರು. ಕ್ರಿ.ಶ. 1565ರಲ್ಲಿ ಶಾಹಿಸುಲ್ತಾನ ಮತ್ತು ರಾಮರಾಯನ ಮಧ್ಯೆ ನಡೆದ ಯುದ್ಧದಲ್ಲಿ, ವಿಜಯನಗರ ಅರಸರ ಬೆಂಬಲವಾಗಿ ಈ ಪ್ರದೇಶಕ್ಕೆ ಬಂದರು. ವಿಜಯನಗರ ಸೈನ್ಯ ಸೋತು ಪಲಾಯನ ಮಾಡಿದಾಗ, ಎಲ್ಲಾ ಮಾಂಡಳಿಕರು ದಿಕ್ಕು ತೋಚದೆ ಕೆಲವರು ತಮ್ಮ ಪ್ರದೇಶಗಳಿಗೆ ಮರಳಿಹೋದರೆ, ಇನ್ನೂ ಕೆಲವರು ಆದಿಲ್ ಶಾಹಿಗೆ ಶರಣಾಗತರಾದರು. ವಿಜಯನಗರ ಸಾಮ್ರಾಜ್ಯ ನಾಶವಾಗಿ, ಅವರ ಮಾಂಡಳಿಕತ್ವವನ್ನು ಕಳೆದುಕೊಂಡ ಇವರು ಮರಳಿ ಹೋಗುವ ಪೂರ್ವದಲ್ಲಿ ಅಯ್ಯನಗುಡಿಯಲ್ಲಿ ವಾಸವಾಗಿದ್ದರು. ಈ ಗ್ರಾಮಕ್ಕೆ ಮೊದಲು ಖಾನಾಪುರವೆಂಬ ಹೆಸರಿತ್ತು. ಇದಕ್ಕೆ ಕಾರಣ ಇಲ್ಲಿ ಒಬ್ಬ ಮುಸ್ಲಿಂ ಸಂತ ಬಡೆಮಿಯ್ಯಾ ವಾಸವಾಗಿದ್ದು, ಮರಣಹೊಂದಿದ್ದ. ವಿಜಾಪುರದ ಸುಲ್ತಾನ ದೇಶಾವರಕ್ಕೆ ಬಂದಾಗ, ಈ ಸಂತನ ಪವಾಡ ಕೇಳಿ ಸಮಾಧಿ ಕಟ್ಟಿಸಿ ಖಾನಾಪುರವೆಂದು ಹೆಸರಿಡುತ್ತಾನೆ. ನಂತರ ವಿಶ್ವಕರ್ಮ ಪವಾಡಪುರುಷ ಗಂಗಪ್ಪಯ್ಯನೆಂಬುವನು ಈ ಗ್ರಾಮದಲ್ಲಿ ಜೀವಂತ ಸಮಾಧಿ ಹೊಂದಿದಾಗ, ಅಯ್ಯನ ಗುಡಿ ಎಂಬ ಗ್ರಾಮನಾಮವಾಯಿತು. ಈ ಮಾಂಡಳಿಕರು ಮುಂದಿನ ವ್ಯವಸ್ಥೆ ಕಾಣದೇ ಅಯ್ಯನಗುಡಿಯಲ್ಲಿದ್ದಾಗ, ಗಂಗಪ್ಪಯ್ಯನು ಸ್ವಪ್ನದಲ್ಲಿ ಬಂದು ಇಲ್ಲಿಯ ನಾಡಗೌಡಿಕೆ ನಿಮಗೆ ಸಿಗುತ್ತದೆ. ನೀವು ಮರಳಿ ಹೋಗಬೇಡಿ ಎಂದು ಹೇಳುತ್ತಾನೆ. ಆಗ ಬಲದಿನ್ನಿ ನಾಡಗೌಡನಿಗೆ ಮಕ್ಕಳಿರಲಿಲ್ಲ. ಅವನು ಆಂಧ್ರ ಪ್ರದೇಶದಿಂದ ಬಂದಂಥ ಇವರಿಗೆ

ತನ್ನ ಜಾಗೀರು ನೀಡಿ ಒಡೆತನ ವಹಿಸಿಕೊಡುತ್ತಾನೆ. ಅಂದಿನಿಂದ 40 ಹಳ್ಳಿಗಳು ಸೇರಿ ನಾಡಗೌಡಿಕೆ ನಡೆದುಬಂದಿದೆಯೆಂದು ಈ ಮನೆತನದ ಹಿರಿಯರಾದ ಶಂಕರರಾವ್ ಅವರು ಹೇಳುತ್ತಾರೆ. ಈ ಮನೆತನದವರು ಐನಗುಡಿಯಲ್ಲಿ ಗಂಗಪ್ಪಯ್ಯನ ಗುಡಿ ಕಟ್ಟಿಸಿ, ಪೂಜಾರಿಗಳಾಗಿದ್ದ ಬಡಿಗೇರರಿಗೆ ಭೂಮಿ ದಾನ ಕೊಟ್ಟಿದ್ದಾರೆ. ಪ್ರತಿ ವರ್ಷವೂ ಗಂಗಪ್ಪಯ್ಯನ ಜಾತ್ರೆ ಬಲದಿನ್ನಿ, ನಾಲತವಾಡ ನಾಡಗೌಡರ ಮುಖಂಡತ್ವದಲ್ಲಿ ನೆರವೇರುತ್ತದೆ. ಗಂಗಪ್ಪಯ್ಯನನ್ನು ನಾಡಗೌಡರು ತಮ್ಮ ಮನೆತನದ ಗುರುಗಳೆಂದು ಆರಾಧಿಸುತ್ತ ಬಂದಿದ್ದಾರೆ.

ನಾಡಗೌಡರ ಮನೆತನದಲ್ಲಿ ಮೌಖಿಕವಾಗಿ ಬಂದಿರುವ ಶಾಹಿಸುಲ್ತಾನ ಮತ್ತು ವಿಜಯನಗರ ಸಾಮ್ರಾಜ್ಯಗಳ ಮಧ್ಯೆ ನಡೆದ ಯುದ್ಧದ ಚಿತ್ರಣವನ್ನೂ ಕೊಡುತ್ತಾರೆ. ಶಾಹಿಸುಲ್ತಾನರು ತಾಳಿಕೋಟೆಯಲ್ಲಿ ಆಹಾರ ಸಾಮಗ್ರಿ ಹಾಗೂ ಯುದ್ಧಕ್ಕೆ ಬೇಕಾಗುವ ಮದ್ದು -ಗುಂಡು ಇತರ ಶಸ್ತ್ರಾಸ್ತ್ರಗಳನ್ನು ಸಂಗ್ರಹಣೆ ಮಾಡಿಕೊಂಡಿದ್ದರು. ಕೃಷ್ಣಾನದಿ ದಡದಲ್ಲಿರುವ ಇಸ್ಲಾಂಪುರದಲ್ಲಿ ಕೋಟೆ ಕಟ್ಟಿಸಿ, ಯುದ್ಧಕ್ಕೆ ಬೇಕಾಗುವ ವಸ್ತುಗಳು ಮತ್ತು ಆಹಾರ ಸಾಮಗ್ರಿಗಳನ್ನು ಅಲ್ಲಿಯೂ ಸಂಗ್ರಹಣೆ ಮಾಡಿಕೊಂಡು ತಾಳಿಕೋಟೆ ಯಿಂದ ಇಸ್ಲಾಂಪುರಕ್ಕೆ ನೇರ ಸೈನ್ಯ ಸಂಪರ್ಕವನ್ನಿಟ್ಟುಕೊಂಡಿದ್ದರು. ವಿಜಯನಗರ ಸೈನ್ಯ ಹಂಪಿಯಿಂದ ನೇರವಾಗಿ ಕೃಷ್ಣಾ ನದಿಗೆ ಬಂದು, ಧನ್ನೂರಿನ ಹತ್ತಿರ ನದಿ ದಾಟಿ ತಂಗಡಗಿಯಲ್ಲಿ ಬೀಡುಬಿಟ್ಟಿತ್ತು. ಇವರಿಗೆ ಆಹಾರ, ಯುದ್ಧ ಸಾಮಗ್ರಿಗಳನ್ನು ಕೃಷ್ಣಾ ನದಿದಾಟಿ ಪೂರೈಸಬೇಕಾಗಿತ್ತು. ತಮ್ಮ ಸಾಮ್ರಾಜ್ಯದ ಗಡಿ ಭಾಗದಲ್ಲಿಯೇ ಯುದ್ಧ ನಡೆದದ್ದರಿಂದ ಸುಲ್ತಾನರಿಗೆ ಈ ಸಮಸ್ಯೆ ಇರಲಿಲ್ಲ. ಈ ಯುದ್ಧದಲ್ಲಿ ವಿಜಯನಗರ ಅರಸರಿಗೆ ಸೋಲುಂಟಾಗಲು ಅನೇಕ ಮುಸಲ್ಮಾನ ಸೈನಿಕರು ಸುಲ್ತಾನರ ಪಕ್ಷ ಸೇರಿದ್ದು ಒಂದು ಕಾರಣವಾದರೆ, ಸರಿಯಾದ ಅವಧಿಗೆ ಸಾಕಷ್ಟು ವಸ್ತುಗಳನ್ನು ನದಿದಾಟಿ ಪೂರೈಸುವಲ್ಲಿ ವಿಳಂಬವಾದುದು. ಇವರಿಬ್ಬರ ಮಧ್ಯ ರಕ್ಕಸಗಿ -ತಂಗಡಗಿ ಮಧ್ಯದ ಬಯಲು ಪ್ರದೇಶದಲ್ಲಿ ಯುದ್ಧವಾಯಿತು.

ಮೇಲಿನ ಅಂಶಗಳನ್ನು ಗಮನಿಸಿದಾಗ, ಬಸಾತಿನೆ - ಸಲಾತೀನ ಹಾಗೂ ವಿದೇಶಿ ವಿದ್ವಾಂಸರ ಹೇಳಿಕೆಗಳಿಗೆ ಇದು ವಿರುದ್ಧವಾಗಿ ಕಾಣುತ್ತದೆ. ಇಸ್ಲಾಂಪುರ ಕೃಷ್ಣಾನದಿಯ ದಕ್ಷಿಣ ಭಾಗದಲ್ಲಿ ಹುನಗುಂದ ತಾಲೂಕಿನಲ್ಲಿದೆ. ತಾಳಿಕೋಟೆ ಮತ್ತು ಇಸ್ಲಾಂಪುರದಲ್ಲಿ ಏಕಕಾಲದಲ್ಲಿ ಯುದ್ಧದ ಸಿದ್ಧತೆಗಳನ್ನು ಮಾಡಿಕೊಂಡಿರುವುದರಿಂದ ನದಿ ದಾಟಲು ಅನೇಕ ತಂತ್ರಗಳನ್ನು ಉಪಯೋಗಿಸುವ ಪ್ರಮೇಯವೇ ಬರುವುದಿಲ್ಲ. ಕೃಷ್ಣಾನದಿಯ ಉತ್ತರ ದಂಡೆಯ ಮೇಲಿರುವ ಬೂದಿಹಾಳ ಗ್ರಾಮದ ಜನರು, ರಕ್ಕಸಗಿ - ತಂಗಡಗಿ ಯುದ್ಧದಲ್ಲಿ ಮಡಿದ ಸೈನಿಕರನ್ನು ಅಗ್ನಿಕ್ರಿಯೆ ಮಾಡಿದರು. ಆಗ ಈ ಪ್ರದೇಶದಲ್ಲಿ ರಾಶಿ ರಾಶಿಯಾಗಿ ಬೂದಿ ಹರಡಿದ್ದರಿಂದ ಗ್ರಾಮಕ್ಕೆ ಬೂದಿಹಾಳವೆಂಬ ಹೆಸರು ಬಂತೆಂದು

ಹೇಳುತ್ತಾರೆ. ರಕ್ಕಸಗಿ -ತಂಗಡಗಿ ಮಧ್ಯದ ಗ್ರಾಮಸ್ಥರು, ಸುಲ್ತಾನರು ಮತ್ತು ವಿಜಯನಗರ ಅರಸರ ಮಧ್ಯೆ ಯುದ್ಧ ನಡೆದು ಪ್ರಾಣ ಕಳೆದುಕೊಂಡ ಸೈನಿಕರ ದೇಹಗಳು ಭೂಗತವಾದವು. ಹೊಲಕ್ಕೆ ರೆಂಟೆ ಹೊಡೆಯುವಾಗ, ಬಿತ್ತನೆ ಮಾಡುವಾಗ ಮತ್ತು ನೆಲ ಅಗೆದಾಗ ಮನುಷ್ಯರ, ಪ್ರಾಣಿಗಳ ಮೂಳೆಗಳು ಹರಡಿರುವುದು ಕಂಡು ಬರುತ್ತೆ ಎಂದು ಹೇಳುತ್ತಾರೆ. ಡಾ. ಅ. ಸುಂದರ ಅವರು ಯುದ್ಧ ನಡೆದ ಸ್ಥಳವನ್ನು ವಿಶ್ಲೇಷಿಸುವಾಗ ಇಂಥ ಅವಶೇಷಗಳನ್ನು ಪುರಾತಾತ್ವಿಕ ಹಿನ್ನೆಲೆಯಲ್ಲಿ ಸಮರ್ಥಿಸುತ್ತಾರೆ. ಅವರ ವಿಶ್ಲೇಷಣೆಯಲ್ಲಿ ಯುದ್ಧದ ಸ್ಥಳ ರಕ್ಕಸಗಿ- ತಂಗಡಗಿಯ ಬಯಲು ಪ್ರದೇಶವೇ ಆಗಿದೆ.

ಈ ಎಲ್ಲ ಹಿನ್ನೆಲೆಗಳಿಂದ ಶಾಹಿಸುಲ್ತಾನರು ಮತ್ತು ವಿಜಯನಗರ ಅರಸರ ಮಧ್ಯೆ ನಡೆದ ಯುದ್ಧ ರಕ್ಕಸಗಿ -ತಂಗಡಗಿ ಬಯಲು ಪ್ರದೇಶವೆಂದು ಗೊತ್ತು ಮಾಡಬೇಕಾಗುತ್ತದೆ. ಆದರೆ ವಿದೇಶಿ ಪ್ರವಾಸಿಗರು ಕೃಷ್ಣಾನದಿಯ ದಕ್ಷಣದಲ್ಲಿ ಅಥವಾ ಇಂಗಳಗಿ- ಭೋಗಾಪುರ ಪರಿಸರದಲ್ಲಿ ಯುದ್ಧವಾಯಿತೆಂದು ಗುರುತಿಸಲು ಕಾರಣಗಳನ್ನು ಹುಡುಕಬೇಕಾಗುತ್ತದೆ. ರಕ್ಕಸಗಿ - ತಂಗಡಗಿ ಸ್ಥಳಗಳು ಅವರ ಗಮನಕ್ಕೆ ಬರಲೇ ಇಲ್ಲ. ವಿಜಯನಗರ ಸಾಮ್ರಾಟರ ದಂಡಯಾತ್ರೆ, ವ್ಯವಹಾರ ಮುದಗಲ್ - ರಾಯಚೂರು ಮಾರ್ಗವಾಗಿಯೇ ನಡೆದುಬಂದಿತ್ತು. ಈ ಯುದ್ಧದ ಸಂದರ್ಭದಲ್ಲಿ ಅವರು ಮುದಗಲ್ ಮಾರ್ಗದ ಮೂಲಕ ಭೋಗಾಪುರ -ಇಂಗಳಗಿ ಹತ್ತಿರ ಬಂದು ತಂಗಿರಬಹುದು. ಆ ಗ್ರಾಮಗಳ ಹತ್ತಿರದಲ್ಲಿ ಅಂದರೆ ಇಸ್ಲಾಂಪುರದಲ್ಲಿ ಶಾಹಿಸುಲ್ತಾನರ ಸೈನ್ಯ ಎಲ್ಲ ವ್ಯವಸ್ಥೆಗಳೊಂದಿಗೆ ಯುದ್ಧ ಸಿದ್ಧತೆ ಮಾಡಿಕೊಂಡಿರುವುದನ್ನು ಗಮನಿಸಿದ ವಿಜಯನಗರ ಅರಸರು ತಮ್ಮ ಸೈನ್ಯದ ಸ್ವಲ್ಪ ಭಾಗವನ್ನು ಅಲ್ಲಿ ಕಾವಲಿರಿಸಿ, ಬೃಹತ್ ತುಕಡಿಯನ್ನು ಮಾರ್ಗಬದಲಿಸಿಕೊಂಡು ಧನ್ನೂರು ಕಡೆಗೆ ತಿರುಗಿಸಿರಬಹುದು. ನದಿ ದಾಟಲು ಕೂಡಲಸಂಗಮ - ಇಂಗಳಗಿ ಮಧ್ಯದ ಸ್ಥಳ ಸೂಕ್ತವಾಗಿದ್ದುದರಿಂದ ಧನ್ನೂರಿನಲ್ಲಿ ನದಿದಾಟಿ ತಂಗಡಗಿಯಲ್ಲಿ ಬಿಡಾರಗಳನ್ನು ಹೂಡುತ್ತಾರೆ. ತಾಳಿಕೋಟೆಯಿಂದ ಇಸ್ಲಾಂಪುರದವರೆಗೆ ನೇರ ಸಂಪರ್ಕವನ್ನು ಹೊಂದಿದ್ದ ಶಾಹಿಸುಲ್ತಾನರ ಮತ್ತು ವಿಜಯನಗರ ಮಧ್ಯ ರಕ್ಕಸಗಿ - ತಂಗಡಗಿ ಮಧ್ಯದ ಸ್ಥಳ ಸೂಕ್ತವಾಗಿದ್ದುದರಿಂದ ಧನ್ನೂರಿನಲ್ಲಿ ನದಿದಾಟಿ ತಂಗಡಗಿಯಲ್ಲಿ ಬಿಡಾರಗಳನ್ನು ಹೂಡುತ್ತಾರೆ. ತಾಳಿಕೋಟೆಯಿಂದ ಇಸ್ಲಾಂಪುರದವರೆಗೆ ನೇರ ಸಂಪರ್ಕವನ್ನು ಹೊಂದಿದ್ದ ಶಾಹಿಸುಲ್ತಾನರ ಮತ್ತು ವಿಜಯನಗರ ಮಧ್ಯ ರಕ್ಕಸಗಿ - ತಂಗಡಗಿ ಮಧ್ಯದ ಬಯಲು ಪ್ರದೇಶದಲ್ಲಿ ಮಹಾ ಯುದ್ಧ ಸಂಭವಿಸಿರಬೇಕು. ಅಲ್ಲದೆ ಕೃಷ್ಣಾನದಿಯ ದಕ್ಷಿಣ ದಂಡೆಯ ಮೇಲಿರುವ ಇಸ್ಲಾಂಪುರದಲ್ಲಿದ್ದ ಸುಲ್ತಾನರ ಸೈನ್ಯ ಇಂಗಳಗಿ ಪ್ರದೇಶದಲ್ಲಿದ್ದ ವಿಜಯನಗರ ಸೈನ್ಯದ ಇನ್ನೊಂದು ತುಕಡಿಯೊಂದಿಗೆ ಮುಖಾಮುಖಿಯಾಗಿರಬೇಕು. ಆದ್ದರಿಂದ ವಿದೇಶಿ

ಪ್ರವಾಸಿಗರು ಮತ್ತು ಮುಸ್ಲಿಂ ಲೇಖಕರು ಮಹಾಯುದ್ಧ ನಡೆದ ಮುಖ್ಯ ಸ್ಥಳವನ್ನು ಬಿಟ್ಟು ಇಂಗಳಗಿ -ಭೋಗಾಪುರ ಪ್ರದೇಶವನ್ನೇ ಹೆಚ್ಚು ಬಿಂಬಿಸಿದಂತೆ ಕಾಣುತ್ತದೆ.

ಟಿಪ್ಪಣಿಗಳು

ಕೋಡದ, ಎಸ್.ಬಿ., 1999 ತಾಳಿಕೋಟೆ ಯುದ್ಧ, ಧಾರವಾಡ

ಜಾನ ಬ್ರಿಗ್ಸ್, 1910, ಹಿಸ್ಟರಿ ಆಫ್ ದಿ ರೈಸ್ ಆಫ್ ಮಹಮ್ಮದನ್ ಪವರ್ ಇನ್ ಇಂಡಿಯಾ, ಕಲಕತ್ತಾ

ನಾಗೇಗೌಡ, ಎಚ್.ಎಲ್., 1966, ಪ್ರವಾಸಿ ಕಂಡ ಇಂಡಿಯಾ, ಸಂಪುಟಗಳು, ಮೈಸೂರು

ಕೃಷ್ಣಕೋಲ್ಹಾರ ಕುಲಕರ್ಣಿ, (ಅನು), 1999, ಮಹಮ್ಮದ ಇಬ್ರಾಹಿಮ ಜುಬೇರಿ: ಬಸಾತೀನೆ ಸಲಾತೀನ್, ವಿಜಾಪುರ ಆದಿಲಶಾಹಿಗಳ ಚರಿತ್ರೆ, ಹಂಪಿ

ರಾಮಸ್ವಾಮಿ ಅಯ್ಯಂಗಾರ್, 1916, ಜೀರ್ಣ ವಿಜಯನಗರ ದರ್ಶನ, ಮೈಸೂರು

ವಿವೇಕ ರೈ, ಬಿ.ಎ., (ಸಂ) 2005, ಪ್ರವಾಸಿಕಂಡ ವಿಜಯನಗರ, ಹಂಪಿ

ಶಿವಣ್ಣ, ಕೆ.ಎಸ್., (ಸಂ) 1997, ಕರ್ನಾಟಕ ಚರಿತ್ರೆ, ಹಂಪಿ

ಸುಂದರ, ಅ., 1996, ದಿ ವಿಜಯನಗರ ವಾರ್ ಸೈಟ್ ಅಂಡ್ ರಾಮರಾಯಾಸ್ ಡೆಥ್, ವಿಜಯನಗರ ಹೆರಿಟೇಜ್, ರಾಮಮೂರ್ತಿ, ಜೆ.ಆರ್., (ಸಂ), ಹೊಸಪೇಟೆ

ಸೀವೆಲ್, ಆರ್, 1962, ಎ ಫರ್‌ಗಾಟನ್ ಎಂಪಾಯರ್, ದೆಹಲಿ.

೩೪. ಶ್ರೀಕೃಷ್ಣದೇವರಾಯನ ತಾಯಿ ನಾಗಲಾದೇವಿ : ಚಾರಿತ್ರಿಕ ಹಿನ್ನೋಟ

ಡಾ. ವಿರೂಪಾಕ್ಷಿ ಪೂಜಾರಹಳ್ಳಿ

ಏಷ್ಯಾಖಂಡದಲ್ಲಿರುವ ಭಾರತವು ಪರ್ಯಾಯ ದ್ವೀಪವಾಗಿದ್ದು, ಭವ್ಯ ಹಾಗೂ ರಮ್ಯ ಮನೋಹರವಾದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದೆ. ಇಂಥ ಹಿನ್ನೆಲೆಯುಳ್ಳ ದಕ್ಷಿಣ ಭಾರತದಲ್ಲಿ ರಾಜ್ಯಾಳ್ವಿಕೆ ಮಾಡಿದ ಸಾಮ್ರಾಜ್ಯಗಳ ಪೈಕಿ ವಿಜಯ ನಗರವು ಒಂದು. ಆಳ್ವಿಕೆ ಮತ್ತು ಪ್ರಗತಿ ದೃಷ್ಟಿಯಿಂದ ಇದು ಪ್ರಭಾವ ಶಾಲಿಯಾಗಿತ್ತು. ಭಾಸ್ಕರ ಕ್ಷೇತ್ರ, ಕಿಷ್ಕಿಂಧಾ, ವಾನರನೆಲೆ, ದಕ್ಷಿಣ ಕಾಶಿ, ದೇವನಗರ, ಪಂಪಾಕ್ಷೇತ್ರ, ವಿದ್ಯಾನಗರ, ವಿಜಯನಗರ, ವಿದ್ಯಾರಣ್ಯನಗರ, ವಿರೂಪಾಕ್ಷಪುರ ಎಂದೆಲ್ಲ ಖ್ಯಾತಿ ಪಡೆದಿದ್ದ ಹಂಪೆ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ಇದು ಚಾರಿತ್ರಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕವಾಗಿ ಮಹತ್ವ ಪಡೆದಿತ್ತು.

ವಿಜಯನಗರ ಸಾಮ್ರಾಜ್ಯವನ್ನು ನಾಲ್ಕು ವಂಶಗಳು ಎರಡೂವರೆ ಶತಮಾನಗಳಷ್ಟು ಕಾಲ ಆಳ್ವಿಕೆ ನಡೆಸಿದ್ದು ಗಮನಾರ್ಹ. ಕುಮ್ಮಟದುರ್ಗದ ಅರಸರಾದ ಮುಮ್ಮಡಿ ಸಿಂಗೆಯನಾಯಕ, ಕಂಪಲಿರಾಯ ಮತ್ತು ಕುಮಾರರಾಮನ ಸಂಬಂಧಿಯೇ ಸಂಗಮ. ಈತನಿಗೆ ಭಾವಸಂಗಮನೆಂದು ಕರೆಯುವರು. ಭಾವಸಂಗಮನ ಮಕ್ಕಳಾದ ಹರಿಹರ, ಬುಕ್ಕರಾಯ, ಮಾರಪ್ಪ, ಮುದ್ದಪ್ಪ ಮತ್ತು ಕಂಪಣ ವಿಜಯನಗರಕ್ಕೆ ಅಡಿಗಲ್ಲು ಹಾಕಿದವರು. ಇವರಲ್ಲಿ ಹರಿಹರ ಮತ್ತು ಬುಕ್ಕರಾಯರು ಪ್ರಾತಃಸ್ಮರಣೀಯರು. ಸಂಗಮ, ಸಾಳುವ, ತುಳುವ, ಮತ್ತು ಅರವೀಡು ವಂಶಗಳು ರಾಜ್ಯಾಳ್ವಿಕೆ ನಡೆಸುತ್ತವೆ. ಮೂರನೇ ವಂಶವಾದ ತುಳುವ (ತಳವಾರ) ಅರಸರಲ್ಲಿ ತಳವಾರ ಈಶ್ವರನಾಯಕ, ನರಸನಾಯಕ ಮತ್ತು ಶ್ರೀಕೃಷ್ಣದೇವರಾಯರು ಖ್ಯಾತ ಅರಸರಾಗಿರುವರು.

ಹಂಪೆ - ಅನೆಗೊಂದಿ ಪರಿಸರದಲ್ಲಿ ಶೂರ, ಧೈರ್ಯ, ಪರಾಕ್ರಮಶಾಲಿ ಯೋಧ ಸಮುದಾಯಕ್ಕೆ ಸೇರಿದ ಜನವರ್ಗಗಳಿದ್ದವು. ಇವರಲ್ಲಿ ಬೇಡ, ತಳವಾರ, ಗುರಿಕಾರ, ನಾಯಕರನ್ನು ಉಲ್ಲೇಖಿಸಬಹುದು. ಈ ತಳವಾರರು ಊರಿನ ಕಾವಲುಗಾರರಾಗಿ, ಗ್ರಾಮ ರಕ್ಷಕರಾಗಿ, ಪ್ರಾಚೀನ ಕಾಲದಿಂದಲೂ ಇಲ್ಲಿದ್ದಾರೆ. ತುಳುವ ವಂಶವು ತಳವಾರ ವೃತ್ತಿ ಮತ್ತು ಜಾತಿಯಿಂದ ವಿಕಾಸಗೊಂಡಿರಬೇಕೆಂಬ ಊಹೆಯಿದೆ. ಇದಕ್ಕೆ ಉತ್ತಮ ಉದಾಹರಣೆಯೆಂದರೆ ತಳವಾರಿಕೆ ಇಂದಿಗೂ ಜೀವಂತವಾಗಿರುವುದು ಸ್ಪಷ್ಟ. ಹಂಪೆಯಲ್ಲಿ ನಾಡತಳವಾರ, ಮೀಸಲು ತಳವಾರರ ಕುಟುಂಬಗಳೂ ಇಂದಿಗೂ ಇವೆ.

ತುಳುವ ವಂಶದ ಮೂಲವು ವಿಜಯನಗರದ ಪೂರ್ವಕ್ಕೆ ಹೋಗುತ್ತದೆ. ನಾಡತಳವಾರರಾಗಿದ್ದ ಕುಮಾರರಾಮನ ವಂಶಸ್ಥರೇ ವಿಜಯನಗರ ಸ್ಥಾಪನೆಗೆ ಕಾರಣರಾದರು. ಹಾಗೆಯೇ ಪ್ರಖ್ಯಾತಿಪಡೆದ ತುಳುವ ವಂಶವು ತಳವಾರಿಕೆಯ ಹಿನ್ನೆಲೆಯಿಂದ ಬಂದು ರೂಢಿಯಲ್ಲಿ ತುಳುವ ಎಂದಾಗಿರಬೇಕು. ಶಾಸನಗಳಲ್ಲಿ ತುಳುವ ಎಂದಿದ್ದರೂ ತಳವಾರ ಎಂಬ ಪದವು ಸಹಾ ಇದೆ. ಈ ವಂಶದ ಕೃಷ್ಣದೇವರಾಯ ಸಮರ್ಥ, ದಕ್ಷ ಅರಸನೆಂದು ಖ್ಯಾತಿ ಪಡೆಯಲು ಅನೇಕ ಸಂಗತಿಗಳು ಕಾರಣವಾಗಿವೆ. ಈತನ ತಂದೆ ನರಸನಾಯಕ ತನ್ನ ಪೂರ್ವಜರಂತೆ ರಾಜ್ಯಪರಿಪಾಲನೆ ಮಾಡಿದ್ದು ನಿಜ. ನರಸನಾಯಕನಿಗೆ ನಾಗಲಾದೇವಿ, ಓಬಾಂಬೆ ಮತ್ತು ತಿಪ್ಪಾಂಬೆ ಎಂಬ ಮೂರು ಜನ ರಾಣಿಯರಿದ್ದರು. ನಾಗಲಾದೇವಿ ನರಸನಾಯಕ ನೆಚ್ಚಿನ ರಾಣಿಯಾಗಿದ್ದಳು. ಇವಳ ಮಗನೇ ಕೃಷ್ಣದೇವರಾಯ, ಇವನ ಬಾಲ್ಯ, ಶಿಕ್ಷಣ ವಿವಿಧ ಹಂತಗಳ ಬೆಳವಣಿಗೆಗೆ ತನ್ನ ತಂದೆ-ತಾಯಿಗಳ ಆರೈಕೆ, ಪೋಷಣೆ ಪರಿಗಣನಾರ್ಹವಾದುದು. ಕೃಷ್ಣದೇವರಾಯನು ತನ್ನ ತಂದೆ ತಾಯಿಗಳ ಬಗ್ಗೆ ಇಟ್ಟಿರುವ ಭಕ್ತಿ, ಗೌರವ, ಸಲ್ಲಿಸಿದ ಕಾಣಿಕೆ ಅಷ್ಟಿಷ್ಟಲ್ಲ ವೆಂಬುದಕ್ಕೆ ಶಾಸನಗಳೇ ಸಾಕ್ಷಿ.

ಕೃಷ್ಣದೇವರಾಯ ವಿಜಯನಗರದ ಖ್ಯಾತ ಅರಸ ಎಂಬುದರಲ್ಲಿ ಎರಡು ಮಾತಿಲ್ಲ. ಚರಿತ್ರೆಯಲ್ಲಿ ಈತನ ಹೆಸರು ಅಜರಾಮರ. ಜೈತ್ರಯಾತ್ರೆ, ತೀರ್ಥಯಾತ್ರೆ ಕೈಗೊಂಡ ಬಗೆ ಹಾಗೂ ದೇವಾಲಯಗಳ ನಿರ್ಮಾಣವು ಇವನ ವ್ಯಕ್ತಿತ್ವವನ್ನು ಸಾಕಾರಗೊಳಿಸಿವೆ. ಹಾಗೆಯೇ ವಿಜಯನಗರ ಸಾಮ್ರಾಜ್ಯದಲ್ಲಿ ಹೊಸ ಪರಿವರ್ತನೆಗೆ ನಾಂದಿ ಹಾಡಿದವನೇ ಕೃಷ್ಣದೇವರಾಯ. ಈ ಸಾಮ್ರಾಜ್ಯದ ಕೀರ್ತಿ ಪತಾಕೆಯನ್ನು ಜಗತ್ತಿಗೆ ಪರಿಚಯಿಸಿದ ಅಪೂರ್ವ ವ್ಯಕ್ತಿ ಈತ. ಈ ಎಲ್ಲ ಸಾಧನೆಗಳ ಹಿಂದೆ ಆತನ ತಾಯಿಯ ಪಾತ್ರ ಇರುವುದನ್ನು ಅಲ್ಲಗಳೆಯುವಂತಿಲ್ಲ. ಇಂದಿನ ಮಹಿಳಾ ಚರಿತ್ರೆಯ ಚಿಂತನೆ ಅಡಿಯಲ್ಲಿ ಚಿಂತಿಸಿದರೆ, ನಿಜಕ್ಕೂ ನಾಗಲಾದೇವಿಯ ಪಾತ್ರವನ್ನು ವಿಜಯನಗರದ ಚರಿತ್ರೆಯಲ್ಲಿ ಪರಿಗಣಿಸಿರುವುದು ವಿರಳ. ಇಂಥ ವಿಶಿಷ್ಟ ವ್ಯಕ್ತಿತ್ವವುಳ್ಳ ರಾಣಿಯ ಬಗ್ಗೆ ಇಂದಿನ ತಲೆಮಾರಿಗೆ ತಿಳಿಸುವುದು ಅಗತ್ಯ.

ನರಸನಾಯಕ ಮತ್ತು ನಾಗಲಾದೇವಿಯವರು ಕೃಷ್ಣದೇವರಾಯನಿಗೆ ಸದಾ ಆರಾಧನಾ ಮತ್ತು ದೇವರಿಗೆ ಸಮನರಾದವರಾಗಿದ್ದರು. ನರಸನಾಯಕ ವಿಜಯನಗರದಲ್ಲಿ ವಹಿಸಿದ ಪಾತ್ರದಷ್ಟೇ ರಾಣಿ ನಾಗಲಾದೇವಿಯವರು ಗಮನಾರ್ಹ ಪಾತ್ರ ವಹಿಸಿದ್ದು ಈವರೆಗೆ ಬೆಳಕಿಗೆ ತಂದಿಲ್ಲ. ಇವಳ ಹಿನ್ನೆಲೆ, ಸಾಂಸ್ಕೃತಿಕ ಬದುಕು ಹೇಗಿತ್ತೆಂಬ ಬಗ್ಗೆ ತಿಳಿಯುವುದು ಅಗತ್ಯ. ಇಲ್ಲಿ ಕೃಷ್ಣದೇವರಾಯನ ಮೂಲ ಹೆಸರು ಸಹಾ ಬೇರೆ ಇದ್ದಂತೆ ಇದೆ. ತಮ್ಮ ತಾತ, ತಂದೆಗೆ ನಾಯಕ ಎಂದಿದ್ದು (ಈಶ್ವರನಾಯಕ, ನರಸನಾಯಕ) ಈತನಿಗೆ ರಾಯ ಎಂದು ಬಂದ ಬಗ್ಗೆ ಪರಿಶೀಲನೆ ನಡೆಯಬೇಕಾಗಿದೆ. ಈ ಎಲ್ಲ

ಸಂಗತಿಗಳ ಮೂಲಕ ನಾಗಲಾದೇವಿ ಸ್ಥಳೀಯಳೊ ಅಥವಾ ಹೊರಗಿನವಳೋ, ಕನ್ನಡಿಗಳೋ - ತೆಲಗಿನವಳೊ ಎಂಬ ಅನುಮಾನಗಳು ಕಾಡುತ್ತವೆ. ನಾಗಲಾದೇವಿ ಶೈವ ಪಂಥಕ್ಕೆ ಸೇರಿದ್ದರೆ, ನರಸನಾಯಕ ವೈಷ್ಣವ ಪಂಥಕ್ಕೆ ಸೇರಿರುತ್ತಾನೆ. ಎಲೆಮರೆ ಕಾಯಿತಂತೆ ಸಾಮ್ರಾಜ್ಯಕ್ಕೆ ಸಲ್ಲಿಸಿದ ಅನುಪಮ ಸೇವೆಯಿಂದ ತಂದೆ -ತಾಯಿಗಳಿಗೆ ಪೂಜನೀಯ ಸ್ಥಾನ ನೀಡಿದ್ದಾನೆ. ನಾಗಲಾದೇವಿಯ ಹಿನ್ನೆಲೆ, ಪ್ರಭಾವವು ಸಾಕಷ್ಟು ಪ್ರಬಲವಾಗಿದ್ದಿರಬೇಕು. ವಿಜಯನಗರ ಕಾಲದ ಸಾಮಾಜಿಕ ಚರಿತ್ರೆಯಲ್ಲಿ ಮಹಿಳೆಯರ ಸ್ಥಾನ-ಮಾನ ತುಂಬಾ ಶೋಚನೀಯವಾಗಿತ್ತು. ರಾಜಪ್ರಭುತ್ವವು ಜನಸಾಮಾನ್ಯರಿಗೂ ಉನ್ನತ ಸ್ಥಾನ-ಮಾನ ನೀಡಿದ್ದು ಶ್ಲಾಘನೀಯ. ಹಾಗೆಯೇ ಕನಿಷ್ಠ ಜನಜೀವನ ನಡೆಸಿದವರ, ಅಲಕ್ಷಿತರ, ಶೋಷಿತರ ನೆಲೆಗಳನ್ನು ಗುರುತಿಸುವ ಅಗತ್ಯವಿದೆ. ನಾಗಲಾದೇವಿ ಉನ್ನತ ರಾಜವಂಶ ದವಳೆಂದು ಹೇಳಿದರೆ, ಇನ್ನೊಂದು ವಾದವು ಸ್ಥಳೀಯ ಬೇಡ ಜನಾಂಗದವಳೆಂದು, ನರ್ತಕಿ, ದಾಸಿ, ದೇವದಾಸಿ, (ಹುಲಗಿ ಪರಿಸರ), ಗಣಿಕಸ್ತ್ರಿ, ಮೂಲ ಬುಡಕಟ್ಟಿನವಳೆಂದು, ಶಿಷ್ಟ ಸಂಪ್ರದಾಯಕ್ಕೆ ಸೇರಿದವಳೆಂಬ ವಾದಗಳಿವೆ.

ವಿಜಯನಗರ ಕಾಲದ ಕೆಲವು ಶಾಸನಗಳಲ್ಲಿ ನಾಗಲಾದೇವಿ ಉಲ್ಲೇಖವಿದ್ದರೂ ಮೂಲ, ಹಿನ್ನೆಲೆ ಬಗ್ಗೆ ಬೆಳಕು ಚೆಲ್ಲುವುದಿಲ್ಲ. ಕೃಷ್ಣದೇವ ರಾಯನ ಕಾಲದ ಶಾಸನ ಗಳಲ್ಲಿಯು ತಂದೆ - ತಾಯಿಗಳಿಗೆ ಕೊಟ್ಟಿರುವ ಮೊದಲ ಆದ್ಯತೆ. ನರಸನಾಯಕ ಮತ್ತು ನಾಗಲಾದೇವಿಯರ ಉಲ್ಲೇಖಗಳು ಧಾರ್ಮಿಕ ಮತ್ತು ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಅನನ್ಯತೆ ಬಿಂಬಿತವಾಗಿವೆ. ವಿಜಯವಿಠಲ ದೇವಸ್ಥಾನದ ರಂಗಮಂಟಪದ ಪೂರ್ವ ದಿಕ್ಕಿನ ದಕ್ಷಿಣದ ತೋಳಿನ ಮೇಲಿರುವ ಶಾಸನ ದಿ. 11-3-1513 ಶುಕ್ರವಾರದಂದು 'ಅರಸನು ತನ್ನ ತಂದೆ ನರಸಣ ನಾಯಕ ವೊಡೆಯ ಮತ್ತು ತಾಯಿ ನಾಗಾಜಿದೇವಿ ಅಮ್ಮನವರಿಗೆ ಪುಣ್ಯವಾಗಲೆಂದು ಹೊಸ ಊರ ಮಾಗಣಿಯ ಹರಿಹರಪುರ, ವಿರೂಪಾ ಪುರ ಮತ್ತು ಗೋಪಿ ಸೆಟಿಯ ಹಳ್ಳಿ ಎಂಬ ಮೂರು ಗ್ರಾಮಗಳನ್ನು ಮತ್ತು ಗೋರಿಯ ಕೆಳಗಿನ ಗದ್ದೆಯನ್ನು ವಿಠಲದೇವರಿಗೆ ದಾನಕೊಟ್ಟನು.

ಹೊಸಪೇಟೆ ಮತ್ತು ಕಡ್ಡಿರಾಂಪುರ ಮಧ್ಯೆ ಬರುವ ಅನಂತಶಯನ (ಗುಡಿ) ದೇವಾಲಯಪುರದ ಶಾಸನವು ದಿ. 12-3-1513 ಶನಿವಾರದಂದು ಅರಸನು ತನ್ನ ತಂದೆ ನರಸನಾಯಕ ವೊಡೆಯ ಮತ್ತು ತಾಯಿ ನಾಗಾಜಿದೇವಿಯವರಿಗೆ ಪುಣ್ಯವಾಗಲೆಂದು ಪ್ರಸನ್ನ ವಿರೂಪಾಕ್ಷದೇವರ ಪೂಜೆಗೆ ಕನ್ನಕಿಯ ಕಟೆ ಗ್ರಾಮವನ್ನು ದಾನಮಾಡಿದನೆಂದು ತಿಳಿದುಬರುತ್ತದೆ. ಹೀಗೆ ವಿಠಲ ದೇವಸ್ಥಾನದ ರಂಗಮಂಟಪದ ದಕ್ಷಿಣ ಗೋಡೆಯ ಮೇಲಿನ ಶಾಸನ ಕ್ರಿ.ಶ. 12-3-1513ರಂದು (ಮೇಲಿನ ಶಾಸನದ ದಿನಾಂಕದಂದು 6 ಶಾಸನಗಳನ್ನು ಹಾರಿಸಲಾಗಿದೆ) ಅರಸನು ತನ್ನ ತಂದೆ ನರಸಣನಾಯಕ ವೊಡೆಯ ಮತ್ತು ತಾಯಿ ನಾಗಾಜಿದೇವಿಯವರಿಗೆ ಪುಣ್ಯವಾಗಲೆಂದು ಅನೇಕ ಗ್ರಾಮಗಳನ್ನು ಮತ್ತು ನದಿ

ದಾಟಲು ಹರಿಗೋಲನ್ನು ದೇವರ ಸೇವೆಗೆ ಬಿಟ್ಟ ಸಂಗತಿ ವೇದ್ಯವಾಗುವುದು. ಇವನ ರಾಣಿಯರಾದ ಚಿನ್ನಾದೇವಿ ಮತ್ತು ತಿರುಮಲಾದೇವಿಯರು ವಿಠಲದೇವಸ್ಥಾನದ ಗೋಪುರವನ್ನು ಕಟ್ಟಿಸಿ, ಒಂದು ಚಿನ್ನದ ತಟ್ಟೆ ಮತ್ತು 25 ಬೆಳ್ಳಿಯ ಆರತಿಗಳನ್ನು ಕೊಟ್ಟ ಸಂಗತಿ ನಾಗಲಾದೇವಿಯವರ ಗೌರವದ ಸಂಕೇತ. ಮಾತಾ - ಪಿತೃಗಳ ಬಗ್ಗೆ ಕೃಷ್ಣದೇವರಾಯನಿಗಿದ್ದ ಭಕ್ತಿ - ಗೌರವ ಮುಕ್ತವಾಗಿ ಅನಾವರಣಗೊಂಡಿರುವುದು ನಗ್ನ ಸತ್ಯ.

ಹಂಪೆ ಮತ್ತು ಕಮಲಾಪುರ ನಡುವೆ ಕಂಡು ಬರುವ ಪ್ರಸನ್ನ ವಿರೂಪಾಕ್ಷ ದೇವಾಲಯದ ಕಲ್ಲಿನ ಮೇಲಿರುವ ಶಾಸನವು ವೀರಪ್ರತಾಪ ಶ್ರೀಕೃಷ್ಣದೇವರಾಯ ದಿ. 12-3-1513 ಶನಿವಾರದಂದು ತನ್ನ ತಂದೆ ನರಸಣ್ಣನಾಯಕ ಮತ್ತು ತಾಯಿ ನಾಗಾಜಿ ಅಮ್ಮನವರಿಗೆ ಪುಣ್ಯವಾಗಲೆಂದು ಕನ್ನಕಿಯ ಕಟೆ, ಬುಕಾಪುರ, ನಾಗಲಾಪುರ ಮತ್ತು ಗೌರಾಜಿಯಕೆರೆ ಗ್ರಾಮಗಳನ್ನು, ಮೂರು ತೋಟಗಳನ್ನು ಮತ್ತು ಅನೇಕ ಭೂಮಿಗಳನ್ನು ಪ್ರಸನ್ನ ವಿರೂಪಾಕ್ಷದೇವರ ಸೇವೆಗೆ ದಾನ ಮಾಡಿದ್ದು ಸ್ಪಷ್ಟ. ಈ ಬಗೆಯ ದಾನ-ಧರ್ಮವು ತಂದೆ - ತಾಯಿಗಳ ಮೇಲಿರುವ ಪ್ರೀತಿಯ ಜೊತೆಗೆ ವೈಷ್ಣವ ಮತ್ತು ಶೈವ ಧರ್ಮಗಳಿಗೆ ಸಮಾನ ಪ್ರೋತ್ಸಾಹ ನೀಡಲು ಅವರು ಕಾರಣ ಕರ್ತೃಗಳಾಗಿದ್ದಾರೆ.

ಕಮಲಮಹಲ್ ಮತ್ತು ಮಹಾನವಮಿ ದಿಬ್ಬದ ಮಧ್ಯೆ ಕಂಡು ಬರುವ ಹಜಾರರಾಮ ದೇವಾಲಯದ ಈಶಾನ್ಯ ದಿಕ್ಕಿನ ಮಂಟಪದ ದಕ್ಷಿಣಗೋಡೆಯ ಮೇಲೆ ಕೃಷ್ಣ ದೇವರಾಯ ದಿನಾಂಕ 12-3-1513 ರಂದು ನರಸನಾಯಕ ವೊಡೆಯ ಮತ್ತು ತಾಯಿ ನಾಗಾಜಿ ಅಮ್ಮನವರಿಗೆ ಪುಣ್ಯವಾಗಲೆಂದು ರಾಮಚಂದ್ರ ದೇವರ ಸೇವೆಗೆ ಕಳಸಾಪುರ ಮಾಗಣಿಯಲ್ಲಿ ವೊಳಕೋಟೆ ಗ್ರಾಮ, ಸೊಂಡೂರು ಸೀಮೆಯಲ್ಲಿ ತಾಳೂರು ಗ್ರಾಮ, ನಾರಿಯ ಸೀಮೆಯಲ್ಲಿ ಇಟ್ಟಿಗೆ ಗ್ರಾಮ ಔಬಲ್(ಓ) ದೇವಕಣಿವೆಯ ಹತ್ತಿರ ಮುದ್ದಾಪುರ ಗ್ರಾಮ, ಕೊಪಣ ಸೀಮೆಯಲ್ಲಿರುವ ಕುಟುಕನಹಳ್ಳಿ ಮತ್ತು ನಾರಿಯ ಸೀಮೆಯಲ್ಲಿರುವ ಜಾಯನೂರ ಗ್ರಾಮಗಳನ್ನು ದಾನ ಮಾಡಿದನೆಂದು (ಆಭರಣ, ಗ್ರಾಮ, ದೇವಾಲಯ) ತಿಳಿದು ಬರುತ್ತದೆ.

ಶ್ರೀಕೃಷ್ಣದೇವರಾಯ ತನ್ನ ತಂದೆ ನರಸಣನಾಯಕ ಮತ್ತು ತಾಯಿ ನಾಗಾಜಿ ದೇವಿಯರಿಗೆ ಪುಣ್ಯವಾಗಲೆಂದು ವಿಠಲದೇವರ ಸೇವೆಗೆ ಹೊಸ ಊರ ಮಾಗಣಿಯೊಳಗಣ ವಿರುಪಾಪುರ ಗ್ರಾಮವನ್ನು 12-3-1513ನೇ ಶನಿವಾರ (7-3-1512?) ದಾನವಾಗಿ ಬಿಟ್ಟದ್ದು ಗಮನಾರ್ಹ. ಅದೇ ರೀತಿ ಶ್ರೀ ಪಂಪಾವಿರೂಪಾಕ್ಷ ದೇವಸ್ಥಾನದ ಮುಖ್ಯ ಗುಡಿಯಲ್ಲಿನ ಶಾಸನ ಪಾಠ 8-6-1513 ಬುಧವಾರದಂದು ಕೃಷ್ಣದೇವರಾಯ ತನ್ನ ತಂದೆ ನರಸನಾಯಕ ಒಡೆಯ ಮತ್ತು ತಾಯಿ ನಾಗಾಜಿ ಅಮ್ಮನವರಿಗೆ ಪುಣ್ಯವಾಗಲೆಂದು ವಿರೂಪಾಕ್ಷ ದೇವರ ಪಕ್ಷೋತ್ಸಾಹ, ಮಾಸೋತ್ಸಾಹ ಮತ್ತು ಸಂವತ್ಸರೋತ್ಸಾಹಗಳಿಗೆ ಮತ್ತು ಪ್ರತಿನಿತ್ಯದ

ಪೂಜೆಗೆ ಚಿನ್ನಿನಾಯಕನಹಳ್ಳಿ, ಕಾಳಗಟ್ಟ, ಕಣಾಯಕಪುರ, ರಾಮುಚಂದ್ರ ಪುರ, ಕಂಚುಮಂತಿನಕುಂಪಿ, ಅಯೋದಿ, ಹೊನ್ನಪುರ, ಮಂಚನೂರು, ದಮ್ಮೂರು, ಭಯಿರ ದೇವನಹಳ್ಳಿ, ಕಲುಕಂಭ, ಗೋನಹಾಳ, ಗುಂಡೆಗನೂರು, ಪಾಡಿರುಳ ಮತ್ತು ಮುದಗೆರೆ ಗ್ರಾಮುಗಳನ್ನಲ್ಲದೆ, ಚಿನ್ನದ ಮಣಿ ಇತರ ವಸ್ತುಗಳನ್ನು ದಾನ ಮಾಡುತ್ತಾನೆ. ನಾಗೇನ ಹಳ್ಳಿಯ ರಂಗನಾಥಸ್ವಾಮಿ ದೇವಸ್ಥಾನದಲ್ಲಿ ಮಂಟಪದ ಎಡಕ್ಕಿರುವ ಕೊಠಡಿಯ ಮೇಲೆ ಕೃಷ್ಣದೇವರಾಯ 9-11-1516 ಆದಿವಾರ ನಂಜಿನಾಥ ಭಟ್ಟರ ಮಗನೂ ಮತ್ತು ಅರಸನ ಪುರೋಹಿತನೂ ಆದ ರಂಗನಾಥ ದೀಕ್ಷಿತನು ಅರಸನಿಂದ ನಾಗಲಾದೇವಿಪುರ ಗ್ರಾಮವನ್ನು ಪಡೆದು ನಾಗೇಶ್ವರ ಮತ್ತು ನಾಗೇಂದ್ರ ಶಯನ ದೇವಸ್ಥಾನಗಳನ್ನು ಮತ್ತು ಅರಸನ ತಾಯಿ ನಾಗಲಾದೇವಿಗೆ ಪುಣ್ಯವಾಗಲೆಂದು ನಾಗಾಂಬಿಕಾ ಸಮುದ್ರ (ನಾಗಸಮುದ್ರ) ಎಂಬ ಕೆರೆಯನ್ನು ಕಟ್ಟಿಸುತ್ತಾನೆ. ಮೇಲಿನ ಎರಡು ಶಾಸನಗಳಲ್ಲಿ ಅಯೋದಿ ಮತ್ತು ನಾಗಾಂಬಿಕಾ ಸಮುದ್ರಗಳು ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನ ಗೌರಸಮುದ್ರ ಮತ್ತು ಮೊಳಕಾಲ್ಮುರು ತಾಲ್ಲೂಕಿನ ನಾಗಸಮುದ್ರ ಗ್ರಾಮುಗಳಾಗಿವೆ ಎಂದು ಶೋಧಿಸಬಹುದಾಗಿದೆ. ನಾಗಲಾದೇವಿ ಈ ಗ್ರಾಮಗಳಲ್ಲಿ ಹುಟ್ಟಿ ಬೆಳೆದಿರಬೇಕು. ಅಲ್ಲದೆ, ಬಳ್ಳಾರಿ ಜಿಲ್ಲೆ ಮತ್ತು ಹಂಪೆ ಪರಿಸರದಲ್ಲಿ ಅನೇಕ ಹಳ್ಳಿಗಳಿಗೆ ನಾಗಲಾಪುರ ಗಳೆಂಬ ಹೆಸರುಗಳಿವೆ. ಇವಳ ಪ್ರಭಾವವೇ ಇರಬೇಕು ಮತ್ತು ಕೃಷ್ಣದೇವರಾಯನು ತಂದೆ -ತಾಯಿಗಳ ಬಗ್ಗೆ ಪುಣ್ಯಲಭಿಸಲೆಂದು ಉದಾರ ದಾನ ನೀಡಿದ್ದನು. ಕೃಷ್ಣದೇವ ರಾಯನಂತೆ ಇವನ ಸಹೋದರ ಅಚ್ಚುತದೇವರಾಯನು ತಂದೆ ನರಸಣನಾಯಕ ಮತ್ತು ಓಬಾಜಿ ಅಮ್ಮನವರಿಗೆ ಪುಣ್ಯವಾಗಲೆಂದು ಜಂಬುನಾಥ ದೇವರ ಪೂಜೆಗೆ ತಿರುಮಲದೇವಿ ಅಮ್ಮನವರ ಪಟ್ಟಣದ ಉಪ ಗ್ರಾಮವಾದ ಕಲ್ಲಹಳ್ಳಿ ಯನ್ನು ದಾನ ನೀಡಿರುವುದು ಗಮನಾರ್ಹ. ರಾಜಾಪುರದ ಶಾಸನದಲ್ಲಿ ಕೃಷ್ಣದೇವರಾಯ 24-6-1523 ರಂದು ನಾಗಲಾದೇವಿ ಹೆಸರಿನಲ್ಲಿ ರಾಮದೇವರ ದೇವಸ್ಥಾನಕ್ಕೆ ದಾನ ಬಿಟ್ಟ ಸಂಗತಿ ಉಲ್ಲೇಖನಾರ್ಹ. ವಿಜಯನಗರದ ಅರಸರು ತಮ್ಮ ಹಿರಿಯರ ಬಗ್ಗೆ ಇರುವ ಗೌರವವನ್ನು ಮೆಚ್ಚುವಂತೆ ಕೃಷ್ಣದೇವರಾಯನು ಮಾಡಿರುವುದು ಶ್ಲಾಘನೀಯ.

ಚರಿತ್ರೆಯಲ್ಲಿ ದಾಖಲಾಗಿರುವಂತೆ ನಾಗಲಾದೇವಿ ನರಸನಾಯಕನ ರಾಣಿ ಮತ್ತು ಕೃಷ್ಣದೇವರಾಯನ ಪ್ರೀತಿಯ ತಾಯಿ ಎಂಬುದು ಸ್ಪಷ್ಟ. ಆರಂಭದ ಚರಿತ್ರೆಕಾರರಲ್ಲಿ ಹಲವು ಗೊಂದಲ ಕಾರಣ ರಾಣಿಯರ ಹಿನ್ನೆಲೆಗಳನ್ನು ಸಮಗ್ರವಾಗಿ ಚಿತ್ರಿಸಿಲ್ಲ. ಹಾಗಾಗಿ, ಕಾಲಾಂತರದಲ್ಲಿ ಹುಟ್ಟಿ ಕೊಂಡ ಜನಪದ ಕಥೆ ಮತ್ತು ಚರಿತ್ರಕಾರರ ದ್ವಂದ್ವ ನಿಲುವುಗಳಿಂದ ನಾಗಲಾದೇವಿಯವರ ಬಗೆಗಿನ ಅಭಿಪ್ರಾಯಗಳು ಭಿನ್ನವಾಗಿರುವುದು ಸತ್ಯ. ಆದರೆ ಕರ್ನಾಟಕದ ಕೈಫಿಯತ್ತುಗಳಲ್ಲಿ ಮಾತ್ರ ಮೇಲಿನ ಸಂಗತಿ ಅನುಮಾನಕ್ಕೆಡೆ ಮಾಡಿಕೊಟ್ಟಿದೆ. 'ನರಸಿಂಗ ದೇವರಾಯ ರಾಜ್ಯಭಾರ ಮಾಡುವಾಗ ಎಷ್ಟು ವರ್ಷ

ಗಳಾದರೂ ಮಕ್ಕಳಾಗಲಿಲ್ಲ. ಹೋಗಿ ಬ್ರಾಹ್ಮಣರನ್ನು ಕೇಳಿದಾಗ ಈ ರಾಜ್ಯವನ್ನು ಪರಿಪಾಲನೆ ಮಾಡುವಂತಾ ಪುತ್ರನು ಆಗುವ ಹಾಗೆ ಜಪತಪ ಅನುಷ್ಠಾನವನ್ನು ಮಾಡಿ ಪುತ್ರೋತ್ಸವ ಆಗುವ ಮರಿಯಾದಿ ಹೇಳುತ್ತಾ ಇದ್ದೇವೆಂದು ಹೇಳಿದರು. ಅದೇ ರೀತಿಯಾಗಿ ಒಂದು ನಕ್ಷತ್ರ, ಸಮಯವನ್ನು ತಿಳಿಸಿದರು. ಅವರು ಹೇಳಿದ ವೇಳೆಯಲ್ಲು ಆ ಪಟ್ಟದ ಹೆಂಡತಿಯಾದಂತಾಕಿ ಆ ಸಮಯಕ್ಕೆ ಅನುಕೂಲಿಸದ ಕಾರಣ, ನಾಗಲಾದೇವಿ ಯೊಂಬೆ ಸ್ತ್ರೀಯಳು ಯಂಬುವ ಆಕೆಯನನು (ದಾಸಿಯು) ಅನುಕೂಲಿಸಿದಳು. ಆ ನಾಗಲಾದೇವಿಯ ಗರ್ಭದಲ್ಲೂ ಕ್ರಿಷ್ಣರಾಯ ಯಂಬುವ ಹೆಸರುಳ್ಳವನು ಜನಿಸಿದನು. ಆ ನಕ್ಷತ್ರ ವಿರಹಿತ ದಿನದಲ್ಲಿ ಗರ್ಭವುತ್ಪತ್ಯವಾಗಿ ಪಟ್ಟದರಸಿ ಗರ್ಭದಲ್ಲಿ ಅಚ್ಯುತರಾಯ ಯಂಬುವಂತಾವ ಹುಟ್ಟಿದನು.

ಹೀಗೆ ಚಾರಿತ್ರಿಕ ಘಟನೆಗೆ ಅಭಾಸದ ಪ್ರಸಂಗಗಳು ವಾಸ್ತವ ಸಂಗತಿಯನ್ನು ದಿಕ್ಕು ತಪ್ಪಿಸುವುದು ಇಲ್ಲಿನ ಸಮಸ್ಯೆಯಾಗಿದೆ. ಹಾಗಾಗಿ ಕ್ಷತ್ರಿಯರಿಗೆ ಜಾತಿ-ಮತ, ಭೇದವಿಲ್ಲದ ಕಾರಣ ಸುಂದರ ಕನ್ಯೆಯನ್ನು ವಿವಾಹವಾಗಿರಲೂಬಹುದು. ವ್ಯಾಪಕವಾಗಿ ನೆಲೆಸಿ ನರ್ತನ, ನಾಟ್ಯ, ಸಂಗೀತ ಇತರ ಸೇವೆಗಳಲ್ಲಿ ತೊಡಗಿಸಿಕೊಂಡಿದ್ದ ಬೇಡರಲ್ಲಿ ನಾಗಲಾ ದೇವಿ ಬಹು ವೈವಿಧ್ಯಮಯವಾದ ವ್ಯಕ್ತಿತ್ವವನ್ನು ಬೆಳೆಸಿಕೊಂಡಿರಬೇಕು. ದಾಸಿ ಎಂಬ ಮಾತ್ರಕ್ಕೆ ಈಗಿನಂತೆ ನೀಚಾರ್ಥವಿರಲಿಲ್ಲ. ಏನೆಲ್ಲಾ ಅಭಿಪ್ರಾಯಗಳಿದ್ದರೂ ನಾಗಲಾ ದೇವಿ ಚೆಂಚು ಅಥವಾ ಬೇಡ ಬುಡಕಟ್ಟಿನ ಪಾಮುಡ್ಲಾರು ಗೋತ್ರಕ್ಕೆ ಸೇರಿರಬೇಕೆಂಬುದಕ್ಕೆ ಆಧಾರಗಳಿವೆ. ಈ ಪಾಮುಡ್ಲಾರು ಗೋತ್ರದವರು ಹಂಪಿ ಹಾಗೂ ಬಳ್ಳಾರಿ ಜಿಲ್ಲೆಯಲ್ಲಿ ವ್ಯಾಪಕವಾಗಿ ನೆಲೆಸಿರುತ್ತಾರೆ. ಕರ್ನಾಟಕದ ಕೆಲವು ಪಾಳೆಯಗಾರರು ಈ ವಂಶಕ್ಕೆ ಸೇರಿದವರಿದ್ದಾರೆ. ಅಕ್ಕನಾಗಮ್ಮ, ನಾಗಮ್ಮ, ನಾಗದೇವಿ, ನಾಗರತ್ನ, ನಾಗವೇಣಿ, ನಾಗಮಣಿ, ನಾಗಲಕ್ಷ್ಮಿ, ನಾಗಲಮ್ಮ (ಬೇಡರ ತಗಡೆಯವರು ಬೆಡಗು) ಮೊದಲಾದ ದೇವತೆಗಳು ಬೇಡರಲ್ಲಿ ಪ್ರಚಲಿತದಲ್ಲಿವೆ. ಬೇಡರು ಇಂಥ ದೇವತೆಗಳನ್ನು ಆರಾಧಿಸುವುದು ಇಂದಿಗೂ ನಡೆದು ಬಂದಿದೆ. ನಾಗಲಾದೇವಿ ಮೂಲತಃ ರಾಣಿಯಾಗಿದ್ದು ಆನಂತರ ದೈವತ್ವಕ್ಕೇರಿಸಿಸುತ್ತಾರೆ. ನಾಗಲಾದೇವಿ ನರಸನಾಯಕನ ಹೆಂಡತಿ. ಹಾಗಾಗಿ ನರಸನಾಯಕ ಬೇಡನಾಗಿದ್ದು, ತಳವಾರ ಈಶ್ವರನಾಯಕನ ಮಗ. ಈ ಹಿನ್ನೆಲೆಗಳಿಂದ ನಾಗಲಾದೇವಿಯು ಸಹ ಬೇಡ ವಂಶಕ್ಕೆ ಸೇರಿದ್ದಾಳೆಂದು ಹೇಳಬಹುದು. ಆಂಧ್ರದಲ್ಲಿ ಕೃಷ್ಣದೇವರಾಯನಿಗೆ (ಆಂಧ್ರಭೋಜ - ಬೋಯರಾಯ) ಬೇಡನೆಂದು ಕರೆದಿದ್ದಾರೆ.[1] ಮಹಾದೈವ ಭಕ್ತನಾದ ಕೃಷ್ಣದೇವರಾಯ ಯಾತ್ರೆ, ಭಕ್ತಿ, ದಾನ ಮಾಡುವುದರ ಮೂಲಕ ವೈಷ್ಣವ ಮತ್ತು ಶೈವ ಪಂಥದವರಿಗೆ ಅಚ್ಚುಮೆಚ್ಚಿನವನಾಗಿದ್ದನು. ನಾಗಲಾದೇವಿ ಹೆಸರಲ್ಲಿ ಅನೇಕ ಹಳ್ಳಿಗಳಿದ್ದರೂ, ಅವಳ ಮೂಲ ನೆಲೆ ಒಂದೇ ಆಗಿರುವ ಸಾಧ್ಯತೆಯಿದೆ. ಇಂದಿಗೂ ಆಂಧ್ರದವರು ಕೃಷ್ಣದೇವರಾಯ ಆತನ ಪರಿವಾರವನ್ನು ಬೇಡರೆಂದೇ

ಪರಿಗಣಿಸಿದ್ದು ಕಂಡುಬರುತ್ತದೆ. ಒಟ್ಟಾರೆ ಹೇಳುವುದಾದರೆ ನಾಗಲಾದೇವಿ ಕನ್ನಡ ನಾಡಿನ ಗಿರಿಜನರ ಮಧ್ಯಮ ಕುಟುಂಬದಿಂದ ಬಂದವಳೆಂದು, ಅವಳು ವಿಜಯನಗರ ಸಾಮ್ರಾಜ್ಯಕ್ಕೆ ಪರಿವರ್ತನೆ ಮತ್ತು ಪ್ರಗತಿಯನ್ನು ತಂದುಕೊಡುವ ಹೆಮ್ಮೆಯ ಪುತ್ರನನ್ನು ಹೆತ್ತವಳೆಂಬ ಕೀರ್ತಿಯಿದೆ. ನಾಗಲಾದೇವಿ ವಿಜಯನಗರ ಸಾಮ್ರಾಜ್ಯಕ್ಕೆ ಒಂದು ತಿರುವು ಸಿಕ್ಕಿತೆಂದು ತಿಳಿಯಬೇಕಾಗುತ್ತದೆ. ಈ ಬಗ್ಗೆ ಶಾಸನ, ಕಾವ್ಯ, ವಾಸ್ತು ಶಿಲ್ಪದಲ್ಲಿ ಕಂಡು ಬರುವ ಸಂಗತಿಗಳನ್ನು, ಮರೆಯಾದ ವಿವರಗಳನ್ನು ಪರಿಗಣಿಸುವ ಅಗತ್ಯವಿದೆ. ಈ ಕೃಷ್ಣದೇವರಾಯನು ಏನೆಲ್ಲಾ ಸಾಧನೆಗೆ ಅವನ ತಾಯಿಯೇ ಕಾರಣ ಎಂಬುದು ಸ್ಪಷ್ಟ.

ಟಿಪ್ಪಣಿಗಳು ಮತ್ತು ಆಧಾರ ಸೂಚಿ

1. ವಿ.ಎಸ್. ಸ್ಮಿತ್ ಎಂಬ ಇತಿಹಾಸಕಾರ ಶ್ರೀ ಕೃಷ್ಣದೇವರಾಯನು ಬೇಡ ಜನಾಂಗಕ್ಕೆ ಸೇರಿದವನೆಂದು ತಿಳಿಸಿರುವುದನ್ನು ಅನೇಕ ವಿದ್ವಾಂಸರು ವಿಶ್ಲೇಷಿಸಿದ್ದಾರೆ.
2. The Hindu 28-5-1982 Letters to the editor caste system (Title) M.C. Albert Xavier, Madras - S.D. Thirumala Rao Anantapura (May 21, 1982) ಇದರಲ್ಲಿ Sri Krishna Devaraya who belonged to the Boyar caste in hailed as a Kshatriya by the poets.
3. ಕರ್ನಾಟಕದ ಕೈಫಿಯತ್ತುಗಳು (ಪು. 546) : ಅಚ್ಯುತರಾಯನ ವ್ಯಾಮೋಹದಿಂದ ಕೃಷ್ಣದೇವರಾಯನನ್ನು ಶಿರಚ್ಛೇದನ ಮಾಡಿಸಲು ಸ್ತ್ರೀ ಪ್ರೇರಣೆಯಿಂದ ಮುಂದಾದ ನರಸಿಂಗರಾಯ. ನರಸಿಂಹದೇವರಾಯ ಅಚ್ಚುತಯೋಗ್ಯನಲ್ಲದ ಅರಸ. ಕ್ರಿಷ್ಣನನ್ನು ಸ್ಮರಿಸುತ್ತಾನೆ. ಕಾರಣ ಅವನು ದೈವನು ಪುರುಷನೆಂದು ಗುರು ಹಿರಿಯರು ಆಡುತ್ತಾ ಇದ್ದರು. ಇದನ್ನು ತಿಳಿಯದೇ ನಾನು ಸ್ತ್ರೀಯ ವ್ಯಾಮೋಹಕ್ಕೆ ಒಳಗಾಗಿ ಸ್ತ್ರೀ-ಬುದ್ಧಿ ಪ್ರಳಯಾಂತಕಾ ಎಂದು ನ್ಯಾಯ ತಿಳಿದು ಈ ರೀತಿಯಾಯಿತು. ಪ್ರಧಾನಿಯನ್ನು ಕೇಳಲಾಗಿ ರಾಜ್ಯಭಾರ ಮಾಡಲು ಪಟ್ಟಾಭಿಷೇಕವನ್ನು ಮಾಡಬೇಕೆಂದು ತಿಳಿಸಿದರು. ಕೃಷ್ಣದೇವರಾಯ ಮಹಾದೈವಾನನು, ಅತ್ಯುತ್ಕೃಷ್ಟರಾಜಿತ ಪುರುಷನಾಗಿದ್ದನು. ಈ ಎಲ್ಲ ಕಾರಣಗಳಿಂದ ಕೃಷ್ಣದೇವರಾಯನ ಮೂಲ ಬೇರೆ ಇರುವುದರಿಂದಲೇ ದಾಯದಿ ಮತ್ಸರ ಹುಟ್ಟುತ್ತದೆ. ತಾಯಿ ಮತ್ತು ತಂದೆ ಇಬ್ಬರೂ ಒಂದೇ ಕೋಮಿಗೆ ಸೇರಿದ್ದರೂ ಇಲ್ಲಿ ಚಿಕ್ಕಮ್ಮನ ಮಗ ಬೇರೆ (ಜಾತಿಯ ಹೆಣ್ಣಿನ ಮಗ) ಜಾತಿಗೆ ಸೇರಿರುವ ಶಕ್ಯತೆ ಕಡಿಮೆ. ಒಂದು ವೇಳೆ ರಾಜ ಬೇರೆ ಬೇರೆ ಸಮುದಾಯದ ಹೆಣ್ಣುಗಳನ್ನು ವಿವಾಹ ವಾಗಿದ್ದರು ಅವರು ರಾಜನ ಕುಲಗೋತ್ರಕ್ಕೆ ಅಧೀನರಾಗಿ ಬಾಧ್ಯರಾಗಿರುತ್ತಿದ್ದರು.
4. ವಿಜಯನಗರ ಶಾಸನಗಳು ಸಂ: 178, ಪು. 50 ಮತ್ತು ಬಳ್ಳಾರಿ ಜಿಲ್ಲಾ ದೇವಾಲಯ ಕೋಶ (P-xxxvii)ದಲ್ಲಿ ಕ್ರಿ.ಶ. 1508 ರಲ್ಲಿ ಕೃಷ್ಣದೇವರಾಯನ ಪಟ್ಟಾಭಿಷೇಕ

ನೆನಪಿಗಾಗಿ ವಿರೂಪಾಕ್ಷ ದೇವರ ಅಮೃತ ಪಡಿ, ನೈವೇದ್ಯ ಸಿಂಗಿನಾಯಕನಹಳ್ಳಿಯನ್ನು ದತ್ತಿಬಿಟ್ಟನು. ಈ ಸಂಗತಿ ಆತನ ಧಾರ್ಮಿಕ ಪ್ರೋತ್ಸಾಹವನ್ನು ಸಂಕೇತಿಸುತ್ತದೆ.

5. ಸೌ ಇಇ ಸಂ ix ಪಾರ್ಟ್ I ಮತ್ತು Ii (iv ಸಂ 277)

(1) ಸಂ 49 xxxiii, 500 (2) 511-iv ಸಂ 253 (3) ಅದೇ ii ಸಂ. 504

6. ವಿಜಯನಗರ ಪ್ರೋಗ್ರೆಸ್ ರೀಪೋರ್ಟ್ 1984-87 ಸಂ. 152

7. ವಿಜಯನಗರ ಅಧ್ಯಯನ 1 ರಿಂದ 10 ಸಂಪುಟಗಳು

8. ಇತಿಹಾಸ ದರ್ಶನ ಸಂ 1ರಿಂದ 19ರ ವರೆಗೆ

9. 1534ರಲ್ಲಿ ಅಚ್ಯುತ ದೇವರಾಯನು ತಮ್ಮ ತಾತ ಈಶ್ವರನಾಯಕ, ಅಜ್ಜಿ ಬುಕ್ಕಾಜಿ ಅಮ್ಮನ ನೆನಪಿನಲ್ಲಿ ವೀರಾಪುರ ಗ್ರಾಮದ ವಿರೂಪಾಕ್ಷ ದೇವಾಲಯದ ಪಶ್ಚಿಮಕ್ಕೆ ಬುಕ್ಕೇಶ್ವರನನ್ನು ಪ್ರತಿಷ್ಠಾಪಿಸಿ ಕೊಂಡವಟ್ಟ ಗ್ರಾಮವನ್ನು ರಾಮಚಂದ್ರ ದೀಕ್ಷಿತನಿಗೆ ನೀಡುತ್ತಾನೆ.

10. ಬಳ್ಳಾರಿ ಜಿಲ್ಲಾ ದೇವಾಲಯ ಕೋಶ (xxxvii) ಕ್ರಿ.ಶ. 1516ರಲ್ಲಿ ರಂಗನಾಥ ದೀಕ್ಷಿತನು ರಾಜನ ತಾಯಿ ನಾಗಲಾದೇವಿ ಹೆಸರಿನಲ್ಲಿ ನಾಗಸಮುದ್ರವೆಂಬಕೆರೆ, ನಾಗೇಶ್ವರಬೆಂಬ ಶಿವಾಲಯ ಮತ್ತು ನಾಗೇಂದ್ರ ಶಯ್ಯ ಎಂಬ ವಿಷ್ಣುದೇವಾಲಯಗಳನ್ನು ಕಟ್ಟಿಸುತ್ತಾನೆ. ಅಲ್ಲದೆ, ನಾಗಲಾದೇವಿಪುರ ಎಂಬ ಅಗ್ರಹಾರವನ್ನು ಸ್ಥಾಪಿಸಿ ಬ್ರಾಹ್ಮಣರಿಗೆ ವೃತ್ತಿ ಹಂಚಿದನು. ಇದರಿಂದ ಕೃಷ್ಣದೇವರಾಯನು ತನ್ನ ತಾಯಿ ಬಗ್ಗೆ ಇಟ್ಟಿರುವ ಗೌರವವನ್ನು ಮತ್ತು ಅಭಿಮಾನವನ್ನು ಸಂಕೇತಿಸುತ್ತವೆ.

೩೫. ಮತ್ತೋಡು ಗಿರಿಯಪ್ಪನಾಯಕನ ಸಾಹಸಗಳು ಮತ್ತು ವಿಜಯನಗರದ ವೆಂಕಟಪತಿರಾಯ

ಡಾ. ಡಿ.ಎನ್. ಯೋಗೀಶ್ವರಪ್ಪ

ಮತ್ತೋಡು ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕಿನ ಹೋಬಳಿಯಾಗಿದೆ. ಶಾಸನಗಳಲ್ಲಿ ಮತ್ತಿನಡು, ಮತ್ತಿನಾಡು, ಮತ್ತನಡು, ಮತನಡು, ಮತ್ತೇಡು, ಮತ್ತೋಡು ಎಂದು ಕರೆಯಲ್ಪಟ್ಟಿರುವ ಈ ಊರು ಐತಿಹಾಸಿಕವಾಗಿ ಸಾಕಷ್ಟು ಪ್ರಸಿದ್ಧಿ ಪಡೆದಿತ್ತೆಂದು ಹೇಳಬಹುದು. ಮತ್ತೋಡು ಒಂದು ಪಾಳೆಯಪಟ್ಟಿನ ಕೇಂದ್ರವಾಗಿ ವಿಜಯನಗರದ ರಾಜಕೀಯ ಅಭಿವೃದ್ಧಿಗೆ ಸಾಕಷ್ಟು ಕೊಡುಗೆ ನೀಡಿದೆ. ವಿಜಯನಗರದ ವೆಂಕಟಪತಿ ಮತ್ತು ಮತ್ತೋಡುವಿನ ಗಿರಿಯಪ್ಪನಾಯಕನ ಸಾಹಸಗಳ ಹಿನ್ನೆಲೆಯಲ್ಲಿ ಇಬ್ಬರ ನಡುವಣ ಸಂಬಂಧವನ್ನು ಗುರುತಿಸುವುದೇ ಈ ಲೇಖನದ ಉದ್ದೇಶ. ವಿಜಯನಗರ ಸಾಮ್ರಾಜ್ಯ ಕೇಂದ್ರೀಕರಣ ವ್ಯವಸ್ಥೆಗಿಂತ ಭಿನ್ನವಾಗಿತ್ತು. ಅದು ದೂರ ದೂರದ ಪ್ರದೇಶಗಳ ಮೇಲೆ ನೇರವಾದ ಹತೋಟಿಯನ್ನು ಹೊಂದಿರಲಿಲ್ಲ. ವಿಕೇಂದ್ರೀಕರಣ ಆ ಸಾಮ್ರಾಜ್ಯದ ಪ್ರಧಾನ ಸ್ವರೂಪವಾಗಿತ್ತು. ಎ.ವಿ. ವೆಂಕಟರತ್ನಂರವರು ಈ ವಿಷಯವನ್ನು ವಿಸ್ತಾರವಾಗಿ ಪ್ರಸ್ತಾಪಿಸಿದ್ದಾರೆ[1]. ಈ ಸಾಮ್ರಾಜ್ಯದ ವ್ಯವಸ್ಥೆ ಯನ್ನು ಫೆಡರಲ್ ವ್ಯವಸ್ಥೆಗೆ ಹೋಲಿಸಬಹುದು. ಮತ್ತೋಡು ಅಂತಹ ಫೆಡರಲ್ ವ್ಯವಸ್ಥೆಯ ಒಂದು ಸಣ್ಣ ಘಟಕವಾಗಿತ್ತು ಎಂಬ ಅಂಶ ಇಲ್ಲಿನ ಶಾಸನಗಳಿಂದ ವ್ಯಕ್ತ ವಾಗುತ್ತದೆ[2].

ವಿಜಯನಗರ ಸಾಮ್ರಾಜ್ಯದ ಆಧಾರ ಸ್ತಂಭದಂತೆ ಇದ್ದವರು ಅಮರನಾಯಕರು. ಇವರ ಪ್ರಸ್ತಾಪ ಶಾಸನಗಳಲ್ಲಿ ಮತ್ತು ಸಾಹಿತ್ಯಾಧಾರಗಳಲ್ಲೂ ಬರುತ್ತದೆ. ಇಂತಹ ಅಮರನಾಯಕರನ್ನು ಗುರುತಿಸಿ ಅವರಿಗೆ ಅವರ ಆರ್ಥಿಕ ಮತ್ತು ಮಿಲಿಟರಿ ಪ್ರಾಬಲ್ಯಕ್ಕನುಗುಣವಾಗಿ ಮನ್ನಣೆ ಹಾಗೂ ಗೌರವಗಳನ್ನು ನೀಡಿ ವಿಜಯನಗರದ ಚಕ್ರವರ್ತಿಗಳು ಅವರನ್ನು ತಮ್ಮ ಸಾಮ್ರಾಜ್ಯಕ್ಕೆ ಸೇರ್ಪಡೆ ಮಾಡಿಕೊಳ್ಳುತ್ತಿದ್ದರು. ವಿಜಯನಗರ ಸಾಮ್ರಾಜ್ಯ ಕೇವಲ ಆಕ್ರಮಣಕಾರಿ ಯುದ್ಧಗಳಿಂದ ವಿಸ್ತಾರಗೊಂಡಿತೆಂದು ಹೇಳುವುದು ಕಷ್ಟವಾಗುತ್ತದೆ. ಮತ್ತೋಡುವಿನಂತಹ ಚಿಕ್ಕ ಚಿಕ್ಕ ನಾಯಕರ ಇತಿಹಾಸವನ್ನು ಗಮನಿಸಿದರೂ ಈ ವಿಷಯ ಸ್ಪಷ್ಟವಾಗುತ್ತದೆ. ಈ ಅಂಶವನ್ನು ಇಲ್ಲಿ ಪ್ರಸ್ತಾಪಿಸಬಹುದು.

ಮತ್ತೋಡು ನಾಯಕರ ಮನೆತನಕ್ಕೆ ೧೭೫ ವರ್ಷಗಳ ದೀರ್ಘವಾದ ಇತಿಹಾಸವಿದೆ. ಆದರೆ ಅದನ್ನು ಇಲ್ಲಿ ಪ್ರಸ್ತಾಪಿಸದೆ ಕೇವಲ ಮತ್ತೋಡು ಮತ್ತು ವಿಜಯನಗರದ ನಡುವಣ ಸಂಬಂಧದ ಬಗೆಗೆ ಮಾತ್ರ ಇಲ್ಲಿ ವಿವರಣೆ ನೀಡಲಾಗುವುದು.

ಮೆಕಂಜಿಯ Historical Account of the Mathod District Received At Mathod July - 1801 ಎಂಬ ದಾಖಲೆ ಮತ್ತು ರೈಸ್‌ರವರ ಗೆಜೆಟಿಯರ್[೩] ದಾಖಲೆಗಳು ತಿಳಿಸಿರುವಂತೆ ಗಿರಿಯಪ್ಪ ನಾಯಕನು ಈ ವಂಶದ ಸ್ಥಾಪಕ. ಅವನು ವಿಜಯನಗರದ ಕೃಪೆಯಿಂದ ಈ ಸಂಸ್ಥಾನವನ್ನು ಸ್ಥಾಪಿಸಿದನೆಂದು ಹೇಳಲಾಗಿದೆ. ರೈಸ್ ಮಾಹಿತಿಯನ್ನೇ ಆಧಾರವಾಗಿಟ್ಟುಕೊಂಡು ಸಿ. ಹಯವದನರಾವ್[೪] ಶ್ರೀ ಲಕ್ಷ್ಮಣ್ ತೆಲಗಾವಿ[೫], ಯಶೋಧಾ ರಾಜಶೇಖರಪ್ಪ[೬] ಗಿರಿಯಪ್ಪನಾಯಕನೇ ಈ ವಂಶದ ಸ್ಥಾಪಕ ನೆಂದು ಪ್ರತಿಪಾದಿಸಿದ್ದಾರೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಮತ್ತೊಂದು ಮಾಹಿತಿಯಲ್ಲಿ ಚಿನ್ನದ ಗಿರಿಯಪ್ಪನಾಯಕ ಮೂಲ ಪುರುಷನೆಂದೂ ಅವನ ನಂತರ ಗಿರಿಯಪ್ಪನಾಯಕ ಎಂಬುವನು ಆಳಿದನೆಂದೂ ಹೇಳಿದ್ದಾರೆ [೭] ಇದಕ್ಕೆ ಅವರು ಆಧಾರವನ್ನು ಕೊಟ್ಟಿಲ್ಲದೆ ಇರುವುದರಿಂದ ಸದ್ಯಕ್ಕೆ ಅವರ ಅಭಿಪ್ರಾಯವನ್ನು ಒಪ್ಪಿ ಕೊಳ್ಳಲು ಸಾಧ್ಯವಿಲ್ಲ.

ಮೆಕಂಜಿಯವರ ಇಂಗ್ಲೀಷ್ ಭಾಷೆಯ ದಾಖಲೆಯು ಗಿರಿಯಪ್ಪ ನಾಯಕನು ಪೆನುಗೊಂಡೆಯಲ್ಲಿದ್ದ ವಿಜಯನಗರ ಚಕ್ರವರ್ತಿಯ ಅನುಮತಿಯನ್ನು ಪಡೆದುಕೊಂಡು ಹೇಗೆ ರಾಜ್ಯ ಸ್ಥಾಪಿಸಿದನೆಂದು ತಿಳಿಸುತ್ತದೆ. ಅದರ ಪ್ರಕಾರ “ಬೇಡಕುಲದ ತಿಮ್ಮಣ್ಣ ನಾಯಕ ಎಂಬುವನು ಅಂದು ಅರಣ್ಯದಿಂದಾವೃತವಾಗಿದ್ದ ಇಂದಿನ ಲಕ್ಕವನ ಹಳ್ಳಿಯಲ್ಲಿ ಪತಿವ್ರತಾ ಶಿರೋಮಣಿ ಎನಿಸಿದ್ದ ಸುಂದರ ಪತ್ನಿ ಲಕ್ಕವ್ವಳೊಂದಿಗೆ ನೆಲಸಿದ್ದನು. ಈ ದಂಪತಿಗಳಿಗೆ ತಮ್ಮ ಕುಲದಲ್ಲಿಯೇ ಬಲಶಾಲಿ ಎನಿಸಿದ್ದ ಅಜಾನುಬಾಹುವೂ, ಸುಂದರನೂ ಆಗಿದ್ದ ಗಿರಿಯಪ್ಪನಾಯಕ ಎಂಬ ಮಗನಿದ್ದನು. ಗೋಪಾಲಕನಾಗಿದ್ದ ಈತನು ಆ ಪ್ರಾಂತ್ಯದಲ್ಲಿ ಹಾವಳಿ ಮಾಡುತ್ತಿದ್ದ ದುಷ್ಟ ಪ್ರಾಣಿಗಳನ್ನು ಕಳ್ಳಕಾಕರನ್ನು ಸದೆಬಡಿದು ಆ ಪ್ರಾಂತ್ಯದಲ್ಲಿ ಪರಾಕ್ರಮಿ ಎನಿಸಿದ್ದನು. ತನ್ನ ಪ್ರೀತಿಯ ತಾಯಿಯ ಹೆಸರಿನಲ್ಲಿ ಲಕ್ಕವ್ವನಹಳ್ಳಿ ಎಂಬ ಗ್ರಾಮವನ್ನು ನಿರ್ಮಿಸಿದನು. ಇದರ ಸಮೀಪದಲ್ಲೇ ಬೂದಿಹಾಳಿನಲ್ಲಿ ವಲ್ಲಭರಾಯ ಎಂಬ ರಾಜನು ಆಳ್ವಿಕೆ ನಡೆಸುತ್ತಿದ್ದನು. ಅವನು ಗಿರಿಯಪ್ಪನಾಯಕನ ಜನಪ್ರಿಯತೆಯನ್ನು ಕೇಳಿದುದಲ್ಲದೆ ತನ್ನ ಪ್ರಾಂತ್ಯದಲ್ಲಿ ಜನರಿಗೆ ತೊಂದರೆ ಕೊಡುತ್ತಿದ್ದ ಕ್ರೂರ ಪ್ರಾಣಿಗಳನ್ನು, ಕಳ್ಳಕಾಕರನ್ನು ಅಡಗಿಸಿದ್ದರಿಂದ ಸಂತೋಷ ಗೊಂಡು ಅವನಿಗೆ ಬಹುಮಾನವನ್ನು ಕಳುಹಿಸಿಕೊಟ್ಟನು. ಕೆಲವಾರು ದಿನಗಳ ನಂತರ ವಲ್ಲಭರಾಯನು ವಿಜಯನಗರದ ದೊರೆಯಾದ ವೆಂಕಟಪತಿಗೆ ಗೌರವ ಸಲ್ಲಿಸಲು ಪೆನುಗೊಂಡೆಗೆ ತೆರಳಿದನು. ಸಮಯ ನೋಡಿ ವೆಂಕಪತಿರಾಯರಿಗೆ ತನ್ನ ಪ್ರಾಂತ್ಯದಲ್ಲಿ ಹಾವಳಿ ಮಾಡುತ್ತಿದ್ದ ಕ್ರೂರಪ್ರಾಣಿಗಳು ಮತ್ತು ದರೋಡೆಕೋರರನ್ನು ಅಡಗಿಸಿ ಶಾಂತಿ

ಸ್ಥಾಪಿಸಲು ಅಜಾನುಬಾಹುವೂ ಸುಂದರನೂ ಆದ ಗಿರಿಯಪ್ಪನಾಯಕನೇ ಕಾರಣ ಎಂದು ಅವನ ವ್ಯಕ್ತಿತ್ವದ ಬಗೆಗೆ ದೊರೆಗಳಿಗೆ ತಿಳಿಸಿದನು. ದೊರೆಗಳು ಅವನನ್ನು ನೋಡಲು ಬಯಸಿದರು, ಆದುದರಿಂದ ವಲ್ಲಭರಾಯನು ಗಿರಿಯಪ್ಪನಾಯಕನನ್ನು ಪೆನುಗೊಂಡೆಗೆ ಕರೆತಂದು ಚಕ್ರವರ್ತಿಯನ್ನು ಭೇಟಿ ಮಾಡಿಸಿದನು. ವಲ್ಲಭರಾಯನ ವರ್ಣನೆಗಿಂತಲೂ ಹೆಚ್ಚಾಗಿದ್ದ ಗಿರಿಯಪ್ಪ ನಾಯಕನನ್ನು ನೋಡಿದ ಚಕ್ರವರ್ತಿಗಳು ಸಂತೋಷಗೊಂಡು ಅವನನ್ನು ತಮ್ಮ ಬಳಿಯಲ್ಲಿಯೇ ಇರಿಸಿಕೊಂಡರು. ಗಿರಿಯಪ್ಪ ನಾಯಕನಿಗೆ ಪೆನುಗೊಂಡೆಯಲ್ಲಿ ತನ್ನ ಸಾಹಸವನ್ನು ಪ್ರದರ್ಶಿಸುವ ಅವಕಾಶ ಒದಗಿ ಬಂದಿತು.ರಾಜ ವೆಂಕಟಪತಿಯು ಪೆನುಗೊಂಡೆಯ ಅರಮನೆಯಲ್ಲಿದ್ದಾಗ ಒಬ್ಬ ಸೇವಕನು ಬಂದು ರಾಜಗೋಪಾಲ ಎಂಬ ಆನೆಯು ಸಿಟ್ಟಿಗೆದ್ದು ನಗರದ ಬೀದಿಗಳಲ್ಲಿ ಹಾವಳಿ ಮಾಡುತ್ತಿದ್ದ ಸುದ್ದಿಯನ್ನು ಚಕ್ರವರ್ತಿಗೆ ಅರಿಕೆ ಮಾಡಿಕೊಂಡನು. ಇದರಿಂದ ಎಚ್ಚರಗೊಂಡ ಚಕ್ರವರ್ತಿಯು ಆಸ್ಥಾನದಲ್ಲಿದ್ದ ಪೈಲ್ವಾನರನ್ನು, ಜಟ್ಟಿಗಳನ್ನು ಆನೆಯನ್ನು ಪಳಗಿಸುವಂತೆ ಆಜ್ಞೆ ಮಾಡಿದನು. ಆದರೆ ಅವರು ಒಬ್ಬರ ಮುಖವನ್ನೊಬ್ಬರು ನೋಡುತ್ತಾ ಯಾರೂ ಮುಂದೆ ಬರಲಿಲ್ಲ. ಅಲ್ಲಿಯೇ ಇದ್ದ ಗಿರಿಯಪ್ಪನಾಯಕನು ರಾಜನ ಎದುರು ತನ್ನ ಶಕ್ತಿಯನ್ನು ಪ್ರದರ್ಶಿಸಲು ಇದೇ ಸರಿಯಾದ ಸಮಯ ಎಂದು ಮನಸ್ಸಿನಲ್ಲಿಯೇ ಭಾವಿಸಿ ಚಕ್ರವರ್ತಿಯ ಮುಂದೆ ತನ್ನ ಬಳಿ ಇದ್ದ ಕತ್ತಿಯನ್ನು ಗೌರವಯುತವಾಗಿ ಬಾಗಿಸಿ, ನಮಿಸಿ ಅವರ ಅನುಮತಿ ಪಡೆದುಕೊಂಡು ಹಾವಳಿ ಮಾಡುತ್ತಿದ್ದ ಆನೆಯನ್ನು ಕೊಲ್ಲಲು ಹೊರಟನು. ಮನದಲ್ಲಿಯೇ ತನ್ನ ಮನೆ ದೇವರಾದ ಹನುಮಾನನನ್ನು ಪ್ರಾರ್ಥಿಸುತ್ತಾ ರೊಚ್ಚಿಗೆದ್ದ ಆನೆಯ ಮೇಲೆರಗಿ ಜೋರಾಗಿ ಅದರ ತಲೆಯ ಮೇಲೆ ಹೊಡೆದು ಕೊಂದುಹಾಕಿದನು. ರಾಜ ವೆಂಕಪಟತಿ ಅಲ್ಲಿದ್ದ ಪಾಳೆಯಗಾರರು, ನವಾಬರುಗಳು ಎಲ್ಲರೂ ಗಿರಿಯಪ್ಪನಾಯಕನ ಸಾಹಸವನ್ನು ಕೊಂಡಾಡಿದರು. ಈ ಅವಕಾಶವನ್ನುಪ ಯೋಗಿಸಿಕೊಂಡ ವಲ್ಲಭರಾಯನು ಚಕ್ರವರ್ತಿಗೆ ಗಿರಿಯಪ್ಪನನ್ನು ಲಕ್ಕವನಹಳ್ಳಿಯ ಪಾಳೆಯಗಾರರನ್ನಾಗಿ ಮಾಡುವಂತೆ ಅರಿಕೆ ಮಾಡಿ ಕೊಂಡನು. ಅವನ ಅರಿಕೆ ಫಲಿಸಿ ಚಕ್ರವರ್ತಿ ಅವನನ್ನು ಲಕ್ಕವ್ವನಹಳ್ಳಿಗೆ ಪಾಳೆಯಗಾರನನ್ನಾಗಿ ನೇಮಕ ಮಾಡಿದನು".

ಮೇಲೆ ತಿಳಿಸಿದ ವಿವರಗಳನ್ನು ಅಭ್ಯಸಿಸಿದಾಗ ಗಿರಿಯಪ್ಪನಾಯಕ ಅವನನ್ನು ಪೆನುಗೊಂಡೆಗೆ ಕರೆತಂದ ವಲ್ಲಭರಾಯ ಮತ್ತು ಚಕ್ರವರ್ತಿ ವೆಂಕಟಪತಿ ಈ ಮೂರೂ ಜನರ ಸಂಬಂಧದಲ್ಲಿ ಮತ್ತೋಡು ಪಾಳೆಯಪಟ್ಟಿನ ಸ್ಥಾಪನೆಯನ್ನು ಗುರ್ತಿಸಬಹುದು. ಈ ಪಾಳೆಯಪಟ್ಟಿನ ಸ್ಥಾಪಕನಾದ ಗಿರಿಯಪ್ಪನಾಯಕನ ಮೂಲಸ್ಥಾನ ಲಕ್ಕವ್ವನಹಳ್ಳಿಯ ಬಳಿಯ ಅರಣ್ಯ ಪ್ರದೇಶವಾಗಿದ್ದು ಇದರಲ್ಲಿ ಸ್ಥಳೀಯತೆಯ ಅಂಶವನ್ನು ಗುರ್ತಿಸ ಬಹುದು. ಮೂಲತಃ ಬೇಡ ಜನಾಂಗದವನಾದ ಈತನು ಸಾಹಸಕ್ಕೆ ಹೆಸರಾಗಿದ್ದು ತಾಯಿಯ ಮೇಲಿನ ಪ್ರೀತಿಯಿಂದ ಲಕ್ಕವ್ವನಹಳ್ಳಿಯನ್ನು ನಿರ್ಮಿಸಿದನು. ಆಗ ಬೂದಿ

ಹಾಳು ಸೀಮೆಯಲ್ಲಿ ವಿಜಯನಗರ ಚಕ್ರವರ್ತಿಯ ಮಹಾಮಂಡಲೇಶ್ವರ ಮತ್ತು ಅಮರನಾಯಕನಾಗಿದ್ದ ವಲ್ಲಭರಾಯನು[೮] ಆಳ್ವಿಕೆ ಮಾಡುತ್ತಿದ್ದನು. ಅವನು ಗಿರಿಯಪ್ಪ ನಾಯಕನನ್ನು ಯಾವ ಉದ್ದೇಶವನ್ನಿಟ್ಟು ಕೊಂಡು ಪೆನುಗೊಂಡೆಯ ವೆಂಕಟಪತಿ (ಕ್ರಿ.ಶ. ೧೫೮೭-೧೬೧೪) ಬಳಿಗೆ ಕರೆತಂದನು ಎಂಬ ಬಗ್ಗೆ ಖಚಿತವಾಗಿ ಹೇಳಲು ಸಾಧ್ಯವಾಗ ದಿದ್ದರೂ ಕೆಲವೊಂದು ಊಹೆ ಮಾಡಲು ಸಾಧ್ಯವಿದೆ. ವಿಜಯನಗರದ ವೆಂಕಟಪತಿಯ ಆಜ್ಞೆಗೆ ಅನುಸಾರವಾಗಿ ಗಿರಿಯಪ್ಪ ನಾಯಕನು ಪೆನುಗೊಂಡೆಗೆ ಬಂದನು, ಅಲ್ಲಿ ಅವನು ತನ್ನ ಸಾಹಸದಿಂದ ಚಕ್ರವರ್ತಿಯ ಮನಸ್ಸನ್ನು ಗೆದ್ದನು. ಆದರೂ ಅಧಿಕಾರ ಸುಲಭವಾಗಿ ದಕ್ಕಲಿಲ್ಲ. ಇಲ್ಲಿ ಗಿರಿಯಪ್ಪ ನಾಯಕನು ಅಮರನಾಯಕ ಹುದ್ದೆಯನ್ನು ಪಡೆಯಬೇಕಾ ದರೆ ಬೂದಿಹಾಳು ಸೀಮೆಯ ವಲ್ಲಭರಾಯನ ಪಾತ್ರ ಪ್ರಮುಖವಾಗಿದೆ. ಅವನು ಚಕ್ರವರ್ತಿಯ ಮೇಲೆ ಪ್ರಭಾವ ಬೀರಿ ಗಿರಿಯಪ್ಪನಾಯಕನನ್ನು ಅವನೇ ನಿರ್ಮಿಸಿದ ಲಕ್ಕವ್ವನಹಳ್ಳಿಗೆ ಅಮರನಾಯಕನನ್ನಾಗಿ ನೇಮಕ ಮಾಡಿಸಿದನು. ಇದರಿಂದ ವಲ್ಲಭ ರಾಯನು ವಿಜಯನಗರದ ಆಸ್ಥಾನದಲ್ಲಿ ಅತ್ಯಂತ ಪ್ರಭಾವಯುತ ವ್ಯಕ್ತಿಯಾಗಿದ್ದುದು ಸ್ಪಷ್ಟವಾಗುತ್ತದೆ. ಹೀಗೆ ಲಕ್ಕವ್ವನಹಳ್ಳಿಯು ಗಿರಿಯಪ್ಪನಾಯಕನ ನಂತರದ ರಾಜಕೀಯ ಮತ್ತು ಮಿಲಿಟರಿ ಬೆಳವಣಿಗೆಗೆ ಕೇಂದ್ರವಾಯಿತು. ಒಂದು ಸ್ವಾರಸ್ಯ ಸಂಗತಿ ಎಂದರೆ ಗಿರಿಯಪ್ಪನಾಯಕನ ಸಾಹಸದ ಜೊತೆಗೆ ವಲ್ಲಭರಾಯನ ಪ್ರಭಾವವೂ ಪಾಳೆಯಪಟ್ಟಿನ ಸ್ಥಾಪನೆಯಲ್ಲಿ ಪ್ರಧಾನವಾಗಿ ಕಂಡು ಬರುತ್ತದೆ.

ಬೂದಿಹಾಳು ಸೀಮೆಯ ವಲ್ಲಭರಾಯ ವಿಜಯನಗರದಿಂದ ಮನ್ನಣೆಪಡೆದು ಅದಕ್ಕೆ ಅಧೀನವಾಗಿ ಆಡಳಿತ ನಡೆಸುತ್ತಿದ್ದ ಮಹಾ ಮಂಡಲೇಶ್ವರ ಮತ್ತು ಅಮರ ನಾಯಕ ನಂತರ ಬಂದವರು ಗಿರಿಯಪ್ಪನಾಯಕನ ವಂಶದ ಮತ್ತೋಡು ಪಾಳೆಗಾರರು. ಬೂದಿಹಾಳು ಮತ್ತು ಮತ್ತೋಡು ಒಗ್ಗೂಡಿ ಅಥವಾ ಜೊತೆಯಾಗಿ ವಿಜಯನಗರವನ್ನು ಬಲಪಡಿಸಿದವು.

ವಿಜಯನಗರದ ದೊರೆ ವೆಂಕಟಪತಿಯಿಂದ ಪಾಳೇಗಾರ ಹುದ್ದೆ ಪಡೆದುಕೊಂಡ ಗಿರಿಯಪ್ಪನಾಯಕನಿಗೆ "ಚಕ್ರವರ್ತಿಯು ಕುದುರೆ, ಪಲ್ಲಕ್ಕಿ, ಆನೆ, ಎರಡು ಶ್ವೇತಛತ್ರಿ, ಐದು ಬಣ್ಣದ ರೇಷ್ಮೆ ಮುಂಡಾಸು, ಮುತ್ತಿನಸರ, ಹಳದಿಧ್ವಜ ಬಾಸಿಂಗ, ಎದೆಹಾವು ಪಲ್ಲಕ್ಕಿಗೆ ಬಳಸುವ ಸಿಂಹತಲೆಯ ಅಮೂಲ್ಯ ಕಾಣಿಕೆಗಳನ್ನು ಕೊಟ್ಟನು. ಇವುಗಳನ್ನು ತನ್ನ ಮುಂದೆ ಉಪಯೋಗಿಸುವ ಅನುಮತಿಯನ್ನು ನೀಡಿದನು. ಜೊತೆಗೆ ಅವನಿಗೆ "ಶ್ರೀಮನ್ ಮಹಾನಾಯಕ ಶಿರೋಮಣಿ" ಎಂಬ ಬಿರುದುನ್ನು ನೀಡಿ ಸೂರ್ಯ ಚಂದ್ರರು ಇರುವ ತನಕ ಈ ಪ್ರಾಂತ್ಯವನ್ನು ಆಳ್ವಿಕೆ ಮಾಡಬಹುದು ಎಂದು ದತ್ತಿಕೊಟ್ಟನು"[೯]

ಈ ರೀತಿ ವಿಜಯನಗರದವರಿಂದ ಶ್ರೀಮನ್ ಮಹಾನಾಯಕ ಶಿರೋಮಣಿ ಎಂಬ ಬಿರುದನ್ನು ಪಡೆಯುವುದರ ಮೂಲಕ ತನ್ನ ಪ್ರಾಂತ್ಯದಲ್ಲಿ ಹೆಚ್ಚಾಗಿದ್ದ ಬೇಡಕುಲದ

ಮೇಲೆ ಏಕಸ್ವಾಮ್ಯ ಪಡೆದನು. ಈ ಬಿರುದು ಬೇಡನಾಯಕರಲ್ಲಿ ವಿಶಿಷ್ಟವಾಗಿದ್ದು ಅವರ ಜನಾಂಗಕ್ಕೆ ಮಠಗಳಾಗಲೀ ಮಠಾಧಿಪತಿಗಳಾಗಲೀ ಇಲ್ಲದ್ದರಿಂದ ಬೇಡರ ದೊರೆಗಳೇ ಮತ ಸಂಪ್ರದಾಯಗಳಿಗೆ ಮಾಗದರ್ಶಕರಾಗಿರುತ್ತಿದ್ದರು. 13ನೇ ಶತಮಾನದಲ್ಲೇ ಬಳಕೆಗೆ ಬಂದ ಈ ಬಿರುದು[೧೦] ವಿಜಯುಗರ ಕಾಲದಲ್ಲೂ ಮುಂದುವರಿದು ಇತರೆ ಬೇಡನಾಯಕರಂತೆ ಇವನಿಗೂ ಕೂಡ ಚಕ್ರವರ್ತಿಗಳಿಂದ ಈ ಬಿರುದು ಲಭ್ಯವಾಯಿತು. ಈ ರೀತಿ ತನ್ನ ಪ್ರಾಂತ್ಯದಲ್ಲಿ ತಮ್ಮ ಜನಾಂಗದ ಮತ ಸಂಪ್ರದಾಯದ ಮುಖ್ಯಸ್ಥನಾಗಿಯೂ ಮತ್ತು ರಾಜ್ಯಾಡಳಿತದ ಮುಖ್ಯಸ್ಥನಾಗಿಯೂ ಕಾರ್ಯನಿರ್ವಹಿಸತೊಡಗಿದನು.

ಕ್ರಿ.ಶ 1604ರಲ್ಲಿ ಅಮರನಾಯಕ ಹುದ್ದೆಗೆ ನೇಮಕಗೊಂಡ ಗಿರಿಯಪ್ಪ ನಾಯಕನು ಅದೇ ವರ್ಷ ಲಕ್ಕವ್ವನಹಳ್ಳಿಯಲ್ಲಿ ಅರಣ್ಯ ನಿರ್ಮೂಲನೆ ಮಾಡಿ ಕೋಟೆ ಕಟ್ಟಿದನು. ಅಲ್ಲದೆ ಬೇವಿನಹಳ್ಳಿ ಮತ್ತು ಮಾಡದಕೆರೆ ಎಂಬ ಹಳ್ಳಿಗಳನ್ನು ಸ್ಥಾಪಿಸಿದನು[೧೧].

ಪೆನುಗೊಂಡೆಯ ವೀರ ವೆಂಕಟಪತಿರಾಯನು ಆನೆಗೊಂದಿಯಲ್ಲಿದ್ದಾಗ ಅವನನ್ನು ಕಾಣಲು ಗಿರಿಯಪ್ಪನಾಯಕನು ಅಲ್ಲಿಗೆ ಹೋದನು. ಅಲ್ಲಿ ಅವನಿಗೆ ಮತ್ತೊಮ್ಮೆ ಚಕ್ರವರ್ತಿಯ ಎದುರು ತನ್ನ ಸಾಹಸ ತೋರಿಸುವ ಅವಕಾಶ ದೊರೆಯಿತು. ದಾಖಲೆಯೊಂದರ ಪ್ರಕಾರ [೧೨]

"ಆನೆಗೊಂದಿಯಲ್ಲಿ ಮಲ್ಲಯುದ್ಧದಲ್ಲಿ ತನ್ನನ್ನು ಸೋಲಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ಅಹಂಕಾರದಿಂದ ಜಟ್ಟಿಯೊಬ್ಬನು ಮೆರೆಯುತ್ತಿದ್ದನು. ಆಗ ವೆಂಕಪತಿರಾಯ ಗಿರಿಯಪ್ಪನಾಯಕನಿಗೆ ಆ ಜಟ್ಟಿಯನ್ನು ಮಣಿಸುವಂತೆ ಆದೇಶಿಸಿದನು. ಗಿರಿಯಪ್ಪನು ಚಕ್ರವರ್ತಿಯ ಬಳಿ ಬಂದು ತನಗೆ ಮಲ್ಲಯುದ್ಧದಲ್ಲಿ ಹೆಚ್ಚಿನ ಜ್ಞಾನವಿಲ್ಲ ಎಂತಲೂ ತನಗೆ ಬಿಲ್ಲುಗಾರಿಕೆ ಕತ್ತಿವರಸೆಯಲ್ಲಿ ಮಾತ್ರ ಪರಿಣತಿ ಇದೆ ಎಂದು ಹೇಳಿ, ಆದಾಗ್ಯೂ ಅವನನ್ನು ಜಟ್ಟಿ ಕಾಳಗದಲ್ಲಿ ಸೋಲಿಸುವೆನು ಎಂದು ದೊರೆಗೆ ತಿಳಿಸಿ ಹೊರಟನು. ಕಾಳಗದ ಸ್ಥಳದಲ್ಲಿ ಜಟ್ಟಿಯನ್ನುದ್ದೇಶಿಸಿ ಗಿರಿಯಪ್ಪನು ತನಗೆ ಮಲ್ಲಯುದ್ಧದ ಜ್ಞಾನವಿಲ್ಲವೆಂದು ಇಷ್ಟಪಟ್ಟರೆ ತೋಳಿನ ಬಲವನ್ನು ಪ್ರದರ್ಶಿಸ ಬಹುದು ಎಂದು ಹೇಳಿದನು. ಇದಕ್ಕೆ ಜಟ್ಟಿಯು ಒಪ್ಪಿದನು. ಕಾಳಗ ಆರಂಭವಾಗಿ ಗಿರಿಯಪ್ಪನಾಯಕನು ಜಟ್ಟಿಯನ್ನು ಸೋಲಿಸಿ ಅವನ ಅಹಂಕಾರವನ್ನು ದಮನ ಮಾಡಿದನು. ಇದರಿಂದ ವೆಂಕಪತಿಯು ಸಂತೋಷಗೊಂಡು ಅವನನ್ನು ಆಸ್ಥಾನದಲ್ಲಿ ಸತ್ಕರಿಸಿ ಅಮೂಲ್ಯ ಕಾಣಿಕೆಗಳೊಂದಿಗೆ ಅವನ ರಾಜ್ಯಕ್ಕೆ ಗೌರವಪೂರ್ವಕವಾಗಿ ಬೀಳ್ಕೊಟ್ಟನು".

ಮೊದಲನೆ ಘಟನೆಯಲ್ಲಿ ಪೆನುಗೊಂಡೆಯಲ್ಲಿ ವಿಜಯನಗರದ ದೊರೆಯು ಆನೆಯನ್ನು ಪಳಗಿಸಲು ಅಲ್ಲಿ ನೆರೆದಿದ್ದ ಎಲ್ಲಾ ಜಟ್ಟಿಗಳಿಗೆ, ಪಾಳೇಗಾರರಿಗೆ ಆಹ್ವಾನವನ್ನಿತ್ತಿದ್ದನು. ಎರಡನೇ ಘಟನೆಯಲ್ಲಿ ಗಿರಿಯಪ್ಪನಾಯಕನ ಬಲದ ಪರಿಚಯವಿದ್ದ ವೆಂಕಟಪತಿಯು ನೇರವಾಗಿ ಅವನಿಗೆ ಆಹ್ವಾನ ನೀಡಿದ್ದು ಗಿರಿಯಪ್ಪನಾಯಕನ ಬಲದಲ್ಲಿ

ಚಕ್ರವರ್ತಿಗೆ ವಿಶ್ವಾಸವಿದ್ದುದು ಗೊತ್ತಾಗುತ್ತದೆ. ಇದು ರಾಜನ ಆಸ್ಥಾನದಲ್ಲಿ ಗಿರಿಯಪ್ಪ ನಾಯಕನ ಬೆಳವಣಿಗೆಯ ಸಂಕೇತ ಎಂದೇ ಹೇಳಬಹುದು. ಹೀಗೆ ದಿನದಿಂದ ದಿನಕ್ಕೆ ಚಕ್ರವರ್ತಿಯ ಬಳಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಂಡು ತನ್ನ ಪ್ರಾಂತ್ಯಕ್ಕೆ ಹಿಂತಿರುಗಿದನು.

ಕೆಲವು ದಿನಗಳ ನಂತರ ಗಿರಿಯಪ್ಪನಾಯಕನಿಗೆ ಪೆನುಗೊಂಡೆಯಲ್ಲಿ ಮತ್ತೊಮ್ಮೆ ತನ್ನ ಶಕ್ತಿ ಪ್ರದರ್ಶಿಸುವ ಅವಕಾಶ ಒದಗಿಬಂದಿತು. ಅದನ್ನು ದಾಖಲೆಯು ಹೀಗೆ ತಿಳಿಸುತ್ತದೆ[೧].

"ಪೆನುಗೊಂಡೆಯಲ್ಲಿದ್ದ ವಿಜಯನಗರದ ಚಕ್ರವರ್ತಿ ವೆಂಕಟಪತಿರಾಯನನ್ನು ಬೇಟಿಯಾಗಲು ಗಿರಿಯಪ್ಪನಾಯಕನು ಹೋದನು. ಅಲ್ಲಿ ಒಬ್ಬ ಬೇಟೆಗಾರ ಹುಲಿಯ ಜೊತೆ ಬಂದು ಚಕ್ರವರ್ತಿಗೆ ತೋರಿಸಿ ಇದರ ವಿರುದ್ಧ ಹೋರಾಡಿ ಗೆಲ್ಲುವ ಸಾಹಸಿಗಳು ನಿಮ್ಮಲ್ಲಿದ್ದಾರೆಯೇ ಎಂದು ಪ್ರಶ್ನಿಸಿದನು. ಚಕ್ರವರ್ತಿಗಳು ಗಿರಿಯಪ್ಪ ನಾಯಕನ ಕಡೆ ನೋಡಿದಾಗ ಅದಕ್ಕೆ ಅವನು ತಾವು ಅನುಗ್ರಹಿಸಿದರೆ ಯಾವುದೇ ಆಯುಧ ವನ್ನು ಉಪಯೋಗಿಸದೆ ಎಲ್ಲಾ ಜನರ ಸಮಕ್ಷಮದಲ್ಲಿ ಹುಲಿಯೊಡನೆ ಹೋರಾಡುವೆ ಎಂದು ತಿಳಿಸಿದನು. ಆದರೆ ದೊರೆಗಳು ಅವನಿಗೆ ಕಠಾರಿಯನ್ನು ಬಳಸುವಂತೆ ಸಲಹೆ ನೀಡಿದರು. ಗಿರಿಯಪ್ಪನಾಯಕನು ಆಯುಧವನ್ನು ಬಳಸಿ ಹುಲಿ ಜೊತೆ ಕಾಳಗ ಮಾಡುವುದು ಹೇಡಿಗಳ ಲಕ್ಷಣ ಎಂದು ಜರಿದು ರಾಜನ ಸಲಹೆಯನ್ನು ತಿರಸ್ಕರಿಸಿ ಹೋರಾಟಕ್ಕೆ ಸಿದ್ಧನಾದನು. ಕೇವಲ ತನ್ನ ತೋಳ್ಬಲದಿಂದಲೇ ಹೋರಾಡಿ ಎಲ್ಲರೂ ಅಚ್ಚರಿಪಡುವಂತೆ ಹುಲಿಯ ಶಿರಸ್ಸನ್ನು ಹಿಡಿದು ಅದರ ಮೇಲೆ ಆಕ್ರಮಣ ಮಾಡಿ ಕೊಂದು ಹಾಕಿದನು."

ನಂತರ ವೆಂಕಟಪತಿರಾಯನು ಅವನ ಧೈರ್ಯವನ್ನು ಮೆಚ್ಚಿ ಅವನು ಬಯಸಿದ ಕಾಣಿಕೆಗಳನ್ನೆಲ್ಲಾ ನೀಡಿ ಅವನ ಮಗನಾದ ದೊಡ್ಡಳನಾಯಕನನ್ನು ಮತ್ತೋಡು ಸಂಸ್ಥಾನಕ್ಕೆ ಪಾಳೆಯಗಾರನನ್ನಾಗಿ ಮಾಡಿ ಸಾಹಸಿಯಾದ ಗಿರಿಯಪ್ಪನಾಯಕನನ್ನು ತನ್ನ ಬಳಿಯಲ್ಲಿಯೇ ಇರಿಸಿಕೊಂಡನು. ಹೀಗೆ ಲಕ್ಕವ್ವನಹಳ್ಳಿಯಲ್ಲಿ ಆಳ್ವಿಕೆ ನಡೆಸುತ್ತಿದ್ದ ಗಿರಿಯಪ್ಪನಾಯಕನು ತನ್ನ ಸ್ವಸಾಮರ್ಥ್ಯದಿಂದ ಪೆನುಗೊಂಡೆಯ ರಾಜರ ಆಸ್ಥಾನದಲ್ಲಿ ನೆಲಸಿ, ಅತ್ಯಂತ ಪ್ರಭಾವಶಾಲಿಯಾದ ವ್ಯಕ್ತಿಯಾಗಿ ಬೆಳೆದು ವೆಂಕಟಪತಿಗೆ ಹಲವಾರು ಯುದ್ಧಗಳಲ್ಲಿ ಸಹಾಯಕನಾಗಿ ದುಡಿದು ಮರಣ ಹೊಂದಿದನು. ನಂತರ ಅವನ ಮಗ ದೊಡ್ಡಳನಾಯಕನು ಗಿರಿಯಪ್ಪನಾಯಕನಿಗೆ ವಿಜಯನಗರ ದೊರೆಗಳು ನೀಡಿದ್ದ ಪ್ರಾಂತ್ಯವನ್ನು ಯಾವುದೇ ತೊಂದರೆ ಇಲ್ಲದೆ ವಿಜಯನಗರದವರ ಜೊತೆ ಸೌಹಾರ್ದ ಬಾಂಧವ್ಯವನ್ನಿರಿಸಿಕೊಂಡು ಆಳ್ವಿಕೆ ನಡೆಸಿದನು ಎಂದು ದಾಖಲೆಗಳು ತಿಳಿಸುತ್ತವೆ. ಈ ಸಂದರ್ಭದಲ್ಲಿ ಚಿಕ್ಕನಾಯಕನಹಳ್ಳಿಯಲ್ಲಿ ಆಳ್ವಿಕೆ ಮಾಡುತ್ತಿದ್ದ ಪಾಳೆಯಗಾರರು ರಣದುಲ್ಲಾಖಾನನಿಗೆ ಪರಾಭವಗೊಂಡು ಆ ಸ್ಥಳವನ್ನು ತೆರವು ಮಾಡಿ ಹಾಗಲವಾಡಿಗೆ ಸ್ಥಳಾಂತರಗೊಂಡರು. ಆಗ ಪ್ರಬಲರಾದ ಇವರು ಚಿತ್ರದುರ್ಗನಾಯಕರ ಹಿಡಿತಕ್ಕೆ

ಸಿಕ್ಕಿದರು. ಆ ವೇಳೆಗಾಗಲೇ ವಿಜಯನಗರದವರು ನಾಮಾವಶೇಷವಾಗಿದ್ದರು. ಇದರಿಂದ ಮತ್ತೋಡು ನಾಯಕರು ದುರ್ಗದವರ ಜೊತೆ ವೈವಾಹಿಕ ಸಂಬಂಧದ ಮೂಲಕ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡು ಹಲವಾರು ವರ್ಷಗಳ ಕಾಲ ಆಳ್ವಿಕೆ ಮಾಡುತ್ತಾ ಹೈದರಾಲಿಯ ಕಾಲದಲ್ಲಿ ಪತನ ಹೊಂದಿದರು. ಒಟ್ಟಿನಲ್ಲಿ ಮತ್ತೋಡು ಗಿರಿಯಪ್ಪ ನಾಯಕನ ಸಾಹಸಗಳು ಮತ್ತು ವಿಜಯನಗರದ ವೆಂಕಪತಿರಾಯ ಇವರ ಸಂಬಂಧಗಳು ಕೆಲವು ತೀರ್ಮಾನಗಳಿಗೆ ಎಡೆಮಾಡಿಕೊಡುತ್ತವೆ.

೧. ಪ್ರಧಾನವಾಗಿ ಯೋಗ್ಯತೆಗೆ ಪುರಸ್ಕಾರ ಎಂಬುದು ವಿಜಯನಗರದ ಚಕ್ರವರ್ತಿಗಳ ಆಡಳಿತದ ಒಂದು ಸೂತ್ರ. ಧರ್ಮ ಮತ್ತು ಜಾತಿ, ಭಾಷೆಯಂತಹ ಸಂಕುಚಿತ ಅಂಶಗಳು ವ್ಯಕ್ತಿಯೊಬ್ಬನ ಹುದ್ದೆಯ ನೇಮಕಕ್ಕೆ ಅಡ್ಡಿಯಾಗುತ್ತಿರಲಿಲ್ಲ. ರಾಜ್ಯದ ಅವಶ್ಯಕತೆ, ಪರಿಸ್ಥಿತಿ, ಸಮಸ್ಯೆಗಳು ಮುಖ್ಯವಾದ ಅಂಶಗಳಾಗಿದ್ದು ಅವುಗಳನ್ನು ಬಗೆಹರಿಸಲು ಸಾಧ್ಯವಿರುವ ಸಮರ್ಥ ವ್ಯಕ್ತಿಗಳನ್ನು ಆಯ್ಕೆಮಾಡುತ್ತಿದ್ದರೆಂದು ಗಿರಿಯಪ್ಪ ನಾಯಕನ ಆಯ್ಕೆಯಲ್ಲಿ ನಾವು ಗುರ್ತಿಸಬಹುದು.

೨. ಮತ್ತೋಡು ಪಾಳೆಯಪಟ್ಟು ಸ್ಥಾಪನೆಯಾದುದು ವಿಜಯನಗರದ ಅರಸರ ವೆಂಕಟಪತಿರಾಯನ ಪ್ರೇರಣೆಯಿಂದ.

೩. ಅಂತಹ ಪಾಳೆಯಪಟ್ಟಿಗೆ ಕೋಟೆ ಕಟ್ಟಿಕೊಳ್ಳಲು ಅನುಮತಿ ಸಿಕ್ಕಿದ್ದು ವಿಜಯನಗರದ ವೆಂಕಟಪತಿರಾಯನಿಂದ

೪. ಅವನ ಪ್ರಾಂತ್ಯದ ಬೇಡ ಸಮೂಹಕ್ಕೆಲ್ಲಾ ಗಿರಿಯಪ್ಪನಾಯಕನು ಧಾರ್ಮಿಕ ಮುಂಖಡನಾಗಿದ್ದದು ವಿಜಯನಗರದ ವೆಂಕಪತಿರಾಯನಿಂದಲೇ ಎನ್ನಬಹುದು.

೫. ತಮ್ಮದೇ ಆದ ಪ್ರತ್ಯೇಕ ರಾಜ್ಯ ಘಟಕ ಹೊಂದಿದ್ದರೂ ಮತ್ತೋಡು ಪಾಳೆಯಗಾರರು ಪೆನುಗೊಂಡೆಯಿಂದ ಆಳ್ವಿಕೆ ಮಾಡುತ್ತಿದ್ದ ವಿಜಯನಗರ ಸಾಮ್ರಾಜ್ಯದ ಆಡಳಿತ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿದ್ದರು.

೬. ಈ ಪಾಳೆಯಪಟ್ಟಿ ಸ್ಥಾಪನೆಯಲ್ಲಿ ಗಿರಿಯಪ್ಪನಾಯಕನ ಸಾಹಸಪ್ರವೃತ್ತಿ ಮುಖ್ಯವಾಗಿದ್ದು ಬೇರೆ ಪಾಳೇಪಟ್ಟುಗಳ ಸ್ಥಾಪನೆಯೊಂದಿಗೆ ಇದನ್ನು ಹೋಲಿಸಿದರೆ ಇದು ವೈಶಿಷ್ಟ್ಯಪೂರ್ಣವಾದುದೇ ಎಂದು ಹೇಳಬಹುದು.

ಟಿಪ್ಪಣಿ

೧. ಎ.ವಿ. ವೆಂಕಟರತ್ನಂ - ವಿಜಯನಗರದಲ್ಲಿ ಸ್ಥಳೀಯ ಸರ್ಕಾರ.

೨. ಎ.ಕ.ಸಂ. ೧೧, ಹೊಳಲ್ಕೆರೆ ೯೮, ೦೯

೩. ರೈಸ್ -ಮೈಸೂರ್ ಎ ಗೆಜೆಟಿಯರ್ ಕಂಪೈಲ್ಡ್ ಫಾರ್ ಗವರ್ನಮೆಂಟ್ ಸಂಪುಟ -೨, ಪು. ೫೩೧, ಲಂಡನ್ - ೧೮೯೭

೪. ಸಿ.ಹೆಚ್. ಹಯವದನರಾವ್ - ಮೈಸೂರ್ ಗೆಜೆಟಿಯರ್

೫. ಲಕ್ಷ್ಮಣ್ ತೆಲಗಾವಿ - ಹೊಸದುರ್ಗ ತಾಲ್ಲೂಕು ಇತಿಹಾಸ ಕೆಲವು ಸಂಗತಿಗಳು - ತರಳಬಾಳು ಸ್ಮರಣ ಸಂಚಿಕೆ ೨೪, ೪, ಮೇ, ಜುಲೈ ೧೯೮೮

೬. ಯಶೋಧಾರಾಜಶೇಖರಪ್ಪ - ದಕ್ಷಿಣ ಕರ್ನಾಟಕದ ಅರಸು ಮನೆತನಗಳು ಸಂ.ಎಂ.ವಿ. ವಸು ಪು ೧೭, ಹಂಪೆ ಕನ್ನಡ ವಿ.ವಿ.

೭. ಬಾಗೂರು ಆರ್. ನಾಗರಾಜಪ್ಪ - ಹೊಸದುರ್ಗ ಸುತ್ತ - ಹೊಸದುರ್ಗ - ಪು ೬೨, ೬೩ - ೧೯೮೪

೮. ಎಕ ೧೨, ಚಿಕ್ಕನಾಯಕನಹಳ್ಳಿ - ೮, ೨೨

೯. ಮೆಕಂಜಿ ದಾಖಲೆ

೧೦. ನೋಡಿ - ನಿಡಗಲ್ಲುನಾಯಕರ ಬಿರುದುಗಳು ವಿವೇಚನೆ - ಡಿ.ಎನ್. ಯೋಗೀಶ್ವರಪ್ಪ - ಸೂರ್ಯಕೀರ್ತಿ ಸಂ-ಪಿ.ವಿ. ಕೃಷ್ಣಮೂರ್ತಿ - ಸೂರ್ಯನಾಥ ಕಾಮತ್ ಅಭಿನಂದನಾ ಸಮಿತಿ - ಬೆಂಗಳೂರು - ೨೦೦೦

೧೧. ಮೆಕಂಜಿ ದಾಖಲೆ

೧೨. ಅದೇ

೧೩. ಅದೇ

೩೬. ವಿಜಯನಗರ ಚಕ್ರವರ್ತಿ ಪಳೆಯುಳಿಕೆ ಆನೆಗೊಂದಿ ಅಚ್ಯುತದೇವರಾಯರು

ಕೆಳದಿ ಗುಂಡಾಜೋಯಿಸ್

ರಾಮಾಯಣ ಕಾಲದಿಂದಾರಂಭಿಸಿ, ಮಧ್ಯಕಾಲೀನ ಚರಿತ್ರೆಯಲ್ಲಿ ಶೋಭಿಸಿ, ಬ್ರಿಟಿಷರ ಕಾಲವನ್ನು ಹಾಯ್ದು, ಈಗ ವಿಶ್ವಪರಂಪರೆಯ ಸಾಂಸ್ಕೃತಿಕ ಜಗತ್ತಿನ ಸಾಲಿಗೆ ವಿಜಯ ನಗರ, ಹಂಪೆ ಆನೆಗೊಂದಿಯು ಸೇರ್ಪಡೆಗೊಂಡಿವೆ. ಭಾರತ ಬ್ರಿಟಿಷರ ಆಧಿಪತ್ಯಕ್ಕೆ ಸೇರುವ ಮುನ್ನ ಹಾಗೂ ಒಳಪಟ್ಟ ನಂತರ ಇದರ ಸಾಂಸ್ಕೃತಿಕ ಉಚ್ಛ್ರಾಯ ಸ್ಥಿತಿಯು ವೈವಿಧ್ಯಮಯವಾಗಿ ಪ್ರಕಟಿತಗೊಂಡಿವೆ. ಇವುಗಳನ್ನು ಪರಿಚಯಿಸಲು ಧೈರ್ಯ ಸಾಲದೆ, ಪ್ರಕೃತ ವಿಜಯನಗರ ಸಾಮ್ರಾಜ್ಯದ ಚಕ್ರವರ್ತಿಗಳ ಪಳೆಯುಳಿಕೆಗಳ ಬಿಂದು ಆನೆಗೊಂದಿ ಅಚ್ಯುತದೇವರಾಯರ ಕರುಣಾರ್ದ್ರ ಪರಿಸ್ಥಿತಿಯನ್ನು ಬಿಂಬಿಸುವಲ್ಲಿ ಪುರಾತತ್ವ ಸಾಂಸ್ಕೃತಿಕ ಜಡತೆಯ ಜಗತ್ತು ಕಾಲಚಕ್ರದಲ್ಲಿ ಉರುಳುತ್ತಾ, ಹೇಗೆ ಮರೆ ಮಾಚಿಸುತ್ತಿದೆ ಎಂಬುದನ್ನು ಹಾಗೂ ವಿಜಯನಗರದ ರಾಜಪೀಳಿಗೆಯ ಆರ್ದ್ರತೆಯನ್ನು ವಿದ್ವಾಂಸರ ಗಮನಕ್ಕೆ ತರುವುದೇ ಈ ಪ್ರಬಂಧದ ಪ್ರಾಮುಖ್ಯ ಅಂಶಗಳಲ್ಲೊಂದಾಗಿದೆ.

ಪೌರಾಣಿಕ ಕಾಲ ಸ್ಮರಣೆಯೊಂದಿಗೆ ಪೂರ್ವದಲ್ಲಿ ತುಂಬಿ ಪ್ರವಹರಿಸುತ್ತಿರುವ ತುಂಗಭದ್ರೆ, ಉತ್ತರ - ಪಶ್ಚಿಮಗಳಲ್ಲಿ ಪರ್ವತ ಶ್ರೇಣಿಗಳಿಂದ ರಮಣೀಯವಾಗಿ ಸುತ್ತು ವರೆದಿರುವ ಆನೆಗೊಂದಿ ವೈಶಿಷ್ಟ್ಯ ಪೂರ್ಣವಾಗಿದ್ದು ನದಿಯ ಬಲದಂಡೆಯ ಮೇಲೆ ಮಾತಂಗ ಪರ್ವತ (ಮತಂಗ>ಆನೆ) ಸದಾ ಈ ಪ್ರದೇಶದ ಕಾವಲುಗಾರನಂತಿದೆ, ವಿರೂಪಾಕ್ಷ ದೇವಾಲಯ ಧಾರ್ಮಿಕ ಜಗತ್ತನ್ನು ಪ್ರಚೋದಿಸುವಲ್ಲಿ ಚೇತೋಹಾರಿ ಯಾಗಿದೆ. ಮಹಾನ್ ವಾಯುಪುತ್ರನ ವಾಸಸ್ಥಳವಿದೆಂದು ಹನುಮನಹಳ್ಳಿ, ಕಿಷ್ಕಿಂಧ, ಅಂಜನಾದ್ರಿ, ತಾರಾಪರ್ವತ, ವಾಲೀಖಿಲ್ಲಗಳು ಮುಂತಾದ ಸ್ಥಳನಾಮಗಳು ಇವುಗಳನ್ನು ನಿರ್ದೇಶಿಸುತ್ತವೆ.

ಆಕರ ಮೂಲಗಳು

'ಆನೆಗೊಂದಿ'ಯನ್ನು ಕುರಿತು ಅರಮನೆಯ ಮೂಲ ಸಾಮಗ್ರಿಗಳು, ಪೇರರಾಜು ನೂತಲಪಾಟಿ (ತೆಲುಗು), Vijayanagar Sex centenery Commemoration Volume, ರಾಬರ್ಟ್ ಸೀವೆಲ್ Furgotton Empire, Sugandha (History and Archaeology of Anegondi, Ph-D., Thesis submitted to the University

of Poona (un Published), ಶಾಸನ ಸಂಪುಟಗಳು, ತಮಿಳುಭಾಷೆಯ ಕೃತಿಗಳು, ಶ್ರೀ ಅಚ್ಯುತದೇವರಾಯರ ವೈಯಕ್ತಿಕ ಸಂಗ್ರಹಗಳು, ಜರ್ಮನಿ ಮುಂತಾದ ವಿದೇಶ ಗಳಲ್ಲಿ ಪ್ರಕಟವಾದ ಮಾಹಿತಿಗಳು, Vijayanagara through the eyes of Alexander J Greelan 1856, John Collings, Anegondi, Architectural Ethnography of a Royal Village by Natalie Tobert ಮುಂತಾದ ಆಕರಗಳು ಸಹಕಾರ ನೀಡುತ್ತವೆ.

ಆನೆಗೊಂದಿ

ವಿಜಯನಗರ ಚರಿತ್ರೆಯಲ್ಲಿ ವಿಜಯಗರ ಪೂರ್ವ, ವಿಜಯನಗರ ಕಾಲದ ಅವಧಿ, ವಿಜಯನಗರೋತ್ತರ ಕಾಲಗಳಲ್ಲಿಪ್ರಮುಖವಾದ ಕೆಳದಿ, ಮರಾಠೆಯವರ ಶಿವಾಜಿ, ಮೈಸೂರು, ಬ್ರಿಟಿಷರ ಕಾಲಗಳ ಮಹತ್ವ ಘಟನೆಗಳ ಸಾಮಾಜಿಕ, ಧಾರ್ಮಿಕ ಹಾಗೂ ಆಧ್ಯಾತ್ಮಿಕ ಪರಿಸರಗಳ ಪ್ರಭಾವದಿಂದ ಸಹಜವಾಗಿಯೇ ಆನೆಗೊಂದಿಯು ನಿರಂತರವಾಗಿ ಸಾಂಸ್ಕೃತಿಕ ತಾಣವಾಗಿದ್ದು. ಇಂದಿನ ಪ್ರಭಾವೀ ಸಾಮಾಜಿಕ ವಲಯಗಳ ದೃಷ್ಟಿಯಲ್ಲಿ ಗಮನಾರ್ಹವಾಗಿ ಕೇಂದ್ರೀಕೃತವಾಗಿದೆ. ವಿಜಯನಗರೋತ್ತರ ತಾಳೀಕೋಟೆ ಯುದ್ಧದ ಪರಿಣಾಮವಾಗಿ ಹಾಳು ಹಂಪೆಯಾಗಿ ವಿಜಯನಗರ ದುರಾದೃಷ್ಟ ಪರಿಸ್ಥಿತಿಯನ್ನು ಅನುಭವಿಸಿತು - ಕ್ರಿ.ಶ. 1565ರ ನಂತರ ಆನೆಗೊಂದಿಯನ್ನು ವಿದೇಶೀ ಪುರಾತತ್ವ ವಿದ್ವಾಂಸ ನಟೇಲೀ ಟೋಬರ್ಟ್ (Natalie Tobert)ನು-

'Vijayanagara is destroyed by the combined armies of five sultans from the Deccan, It is never again reoccupied. Seuel suggests that the city of Vijayanagara has been over 100,000 dwellings, Rama Raya's brother and Sadasiva take refuge at Penukonda unitll Tirumala usurps the crown to from the aravidu dynasty. He dwindles in importance except as patron of the arts, and moves again in 1585 to Chandragiri. After the defeat of Vijayanagara and the departure of the nobility, the four sultans of the Deccan stop in **Anegondi** while their armies raid Vijayanagara. The four kings enter Vijayanagara by the bridge built by Rama Raya 1 (Hera, 1980, 224. After sacking Vijayanagara, The Aravidu family stays united : different members settle in Penkonda, Chandragiri and Vellore, while some return to **Anaegondi** (Imperial Gezetteer of India 1909:100). The family possesses territory on both sides of the Tungabhadra, including the lands on which the city of Vijayanagara was established. This forms an independent state known as Anegondi for more than 200 years. While some relatives of the king of Vijayanagara remian in Anegondi from 1565,

the direct descendants moved the seat of power from Penukonda to Chandragiri in Southern Andhra Pradesh. The Vijayanagara royal family intermarries with the chiefs of Anegondi, presumably they were already close relations or equal in royal status. (fig.4)

ವಿಜಯನಗರದಲ್ಲಿ ಉಂಟಾದ ಇಂತಹ ದುಸ್ಥಿತಿಯಿಂದ ಅನೇಕ ಅಧಿಕಾರಿಗಳು, ಜನರು ನೆಮ್ಮದಿಯ ಜೀವನಕ್ಕಾಗಿ ವಿವಿಧ ಪ್ರದೇಶಗಳಿಗೆ ವಲಸೆ ಹೋಗುವಂತಾಯಿತು. ಈ ಕಾಲದಲ್ಲಿ ಕೆಳದಿ ರಾಜ್ಯದ ಪ್ರದೇಶಗಳು ಸುರಕ್ಷಿತ ತಾಣವಾಗಿದ್ದರಿಂದ ವಿಜಯ ನಗರದ ರಾಜ ಭಂಡಾರದ ಅಧಿಕಾರಿ ಚಿನ್ನಭಂಡಾರದ ನಾರಣಪ್ಪಯ್ಯನು ಕೆಳದಿ ಅರಸರಲ್ಲಿ ನೌಕರನಾಗಿ ಸೇರಿದನು. ಇವನೊಂದಿಗೆ ಆಗಮಿಸಿದವರೆಲ್ಲರಿಗೂ ಕೆಳದಿಯು ಆಶ್ರಯ ನೀಡಿತು.

ವಿಜಯನಗರ ಚಕ್ರವರ್ತಿಗಳ ದುಸ್ಥಿತಿ

1565ರಲ್ಲಿ ತಿರುಮಲರಾಯನು ರಾಣೀವಾಸದವರನ್ನೂ ಸಾಧ್ಯವಿದ್ದಷ್ಟು ಸಂಪತ್ತನ್ನು ಸಾಗಿಸಿಕೊಂಡು ಚಂದ್ರಗಿರಿಯಲ್ಲಿ ನೆಲೆಸಿದನು. ಹಂಪೆಗೆ ಹಿಂದಿರುಗುವುದು ಅಸಾಧ್ಯವೆಂದು ಮನಗಂಡ ಚಕ್ರವರ್ತಿಯು ಪೆನುಗೊಂಡೆಯಲ್ಲಿ 1570 ರಲ್ಲಿ ಪಟ್ಟಾಭಿಷಿಕ್ತನಾದನು. ಬಿಜಾಪುರದ ಸತತ ಧಾಳಿಯಿಂದಾಗಿ 1592ರಲ್ಲಿ ಹಿರಿಯ ವೆಂಕಟಪತಿಯು ರಾಜಧಾನಿಯನ್ನು ಚಂದ್ರಗಿರಿಗೆ ಬದಲಾಯಿಸಿದನು. ವಿಜಯನಗರ ಚಕ್ರವರ್ತಿಗಳಿಗೆ ಇಷ್ಟಕ್ಕೆ ಆಪತ್ತುಗಳು ಮುಗಿಯಲಿಲ್ಲ. 1656ರಲ್ಲಿ ಶ್ರೀರಂಗರಾಯನು ಬಿಜಾಪುರದವರ ಉಪಟಳ ತಾಳಲಾರದೇ ಕೆಳದಿ ದೊರೆ ಶಿವಪ್ಪನಾಯಕನಿಗೆ ರಕ್ಷಿಸಲು ಮೊರೆ ಹೋದನು. ಕೆಳದಿ ಅರಸನು ಮೈಸೂರು ಅರಸರಿಂದ ವೇಲೂರನ್ನು ಗೆದ್ದು ವಶಪಡಿಸಿಕೊಂಡು ಶ್ರೀರಂಗರಾಯನಿಗೆ ಸಕ್ಕರೇ ಪಟ್ಟಣದ ಆಧಿಪತ್ಯವನ್ನು ದೊರಕಿಸಿ ಕೊಟ್ಟ ಸಂಗತಿಯನ್ನು ಕೆಳದಿ ನೃಪವಿಜಯದಲ್ಲಿ ಲಿಂಗಣ್ಣನು - ಮಾ || ಇಂತು ನೆಗಳ್ತೆವೆತ್ತ ಭುಜಬಲಪ್ರತಾಪಾತಿಶಯದಿಂಸದ್ಧರ್ಮದಿಂ ರಾಜ್ಯವನಾಳುತಿರ್ದಾ ಶಿವಪಾಪನಾಯಕಂ ವಿಕಾರಿ ಸಂವತ್ಸರದಲ್ಲಿ ರಾಯ ಸಂಸ್ಥಾನವನುದ್ಧರಿಸಲ್ವೇಳೆಂದು ಮನಂದಂದು ಸೋದೆ ಬಳಿಗೆ ತರಿಕೆರೆ ಹರಪುರ ಮುಂತಾದ ನಾಡದೊರೆಗಳ ಸೈನ್ಯ ಸ್ವಸೈನ್ಯಂವೆರಸು ತೆರಳ್ದು ಬೇಲೂರಂ ತೆಗೆದುಕೊಂಡು ಶ್ರೀರಂಗರಾಯರ್ಗಿತ್ತು ರಾಯಸಂಸ್ಥಾನಮಂ ನೆಲೆಗೊಳಿಸಿ ನಿಲಿಸಿ ತದ್ರಾಯರಿಂ ಶಂಖಚಕ್ರ ಸ್ಥೂಲನೀಲ ಪಶೋಭಿತ ವಜ್ರಖಚಿತ ಕರ್ಣಾಭರಣಂ ಮುಂತಾದ ಬಿರುದುಗಳಂ ಪಡೆದು ರಾಮಬಾಣನೆಂಬಾನೆಯಂ ಕೊಡಲದಂ ಪರಿಗ್ರಹಿಸಿ ನಿಲಿಸಿ ಪಟ್ಟಣದ ಮುಖಕ್ಕೆ ದಂಡಂ ತೆರಳ್ಚೆದಿ ಗ್ರಾಮದ ಸಮೀಪಮಂಸಾರ್ದು ಪಾಳಯವನಿಳಿದಿರಲಾ ಪ್ರಸ್ತಾವದೊಳ್

ಮಾ|| ಘನತರದುರ್ಮದಾಂಧ ಮಹಿಸೂರ ಮಹೀಪ ನೇಮದಿಂ ಮಹಾ ವನಧಿ ಯುಗಾಂತದೊಳ್ ಕವಿವವೊಲ್ ಬಹುಸೈನ್ಯಸಮೇತರಾಗಿ ಭೋಂಕನೊದವಿ ತನ್ನವಂ

ಪಿಡಿಯಲ್ಕೈದಿದ ತದ್ಬಳವಾಯಿ ಹಂಪವರ್ಯನನೆಸೆವಾಜಿಯೊಳ್ ಪಿಡಿದು ತಾಂ ಜಯಲಕ್ಷ್ಮಿಯನಾಂತನಾನೃಪಂ||

ಕಂ|| ಆರಣದೊಳೊಡವಿದುರುಮದ
ವಾರಣಗಳನಶ್ವಚಯವ ಷೋಡಶಸಂಖ್ಯಾ
ಧೀರ ಗುರಿಕಾರರಂ ಬಹು
ವೀರರ್ಕಳನಾಕ್ಷಣದೊಳ್ ಕೈಸೆರೆವಿಡಿದಂ ||೨೭||

ವ|| ಮತ್ತಮದಲ್ಲದೆ

ಕಂ|| ಧಾರಿಣಿಗಪ್ರತಿಯಹ ಕಾ
ವೇರಿಯ ಪೆರ್ಬೊಳೆಗೆ ಸೇತುವಂ ವಿರಚಿಸಿತ
ದ್ಧೀರ ಶಿವಾವನಿಪಂ ಮೈ
ಸೂರರಸನ ಗಾಢಗರ್ವಮಂ ಮುಗ್ಗಿಸಿದಂ ||೩೧||

ವ|| ಇಂತಾ ಶಿವಪ್ಪನಾಯಕಂ ಕಾವೇರೀ ನದಿಗೆ ಸೇತುವಂ ಕಟ್ಟಿಸಿ ನಿಜಸೈನ್ಯ ಸಮೂಹಮಂ ತೆರಳ್ಚಿ ಪಾಳೆಯವನಿಳಿದು ಪಟ್ಟಣದ ಕೋಂಟೆಯಂ ವೇಢೈಸಲವರ್ ಯುದ್ಧ ಮುಖದೊಳ್ ನಿತ್ತರಿಸಲಮ್ಮದೆ [2]

ಈ ಕೆಳಕಂಡ ಆಕರಗಳು ಲಿಂಗಣ್ಣ ಕವಿಯು ಕೆಳದಿ ನೃಪ ವಿಜಯದಲ್ಲಿ ನಿರೂಪಿಸಿರುವುದನ್ನು ಸಮರ್ಥಿಸುತ್ತವೆ.

I . About 1656 A.C. Sri Ranga was again betrayed by his vassals (the Nayaks of Madurai, Tanjore and Jinji) and was obliged to seek refuge on the confines of his kindom in the forests where he led a miserable life. But there was one loyal feudatory of his, Shivappa Nayaka who boldly stood up and offered protection and asylum to the refugee monarch. Between 1656 and 1659 Sri Ranga appears to have stayed at Bednur (the capital of Keladi) after his sojourm at Mysore, Shivappa Nayaka have given Sri Ranga the Governments of Sakkarepattna and Vasudhare.[3]

II. It must be after this that he turned his attention towards his neighbour, Krishnappa Nayaka, Chief of Belur, with whom he was at war on and off for many years. Renewing the war in 1657-58 AD, he first captured Hassan and Belur, when, however, he heard that Narasa Raja Wodeyar of Mysore had sent considerable help to Krishnappa, Shivappa Nayaka despatched his own army

against them. In the course of the operations that followed Shivappa engaged and defeated the combined forces. Meanwhile Venkatadri Nayaka, son the Krishnappa, attached the Keladi forces, which not only defeated the enemy but also captured Venkatadri who later was set free.[4]

ಹೀಗೆ ಕೆಳದಿ ಶಿವಪ್ಪನಾಯಕನು ಹೊನ್ನಾವರದಿಂದ ಪೋರ್ಚುಗೀಸರನ್ನು ಓಡಿಸಿದುದಲ್ಲದೆ, ಡಚ್ಚರ ಸಹಾಯ ಪಡೆದುಕೊಂಡು ಬೇಲೂರು, ಸಕ್ಕರೇಪಟ್ಟಣವನ್ನು ಸ್ವಾಧೀನಪಡಿಸಿಕೊಡು ವಿಜಯನಗರದಿಂದ ಆಶ್ರಯಕ್ಕಾಗಿ ಓಡಿಬಂದ ಶ್ರೀರಂಗರಾಯನಿಗೆ ಸಕ್ಕರೇಪಟ್ಟಣದ ಆಧಿಪತ್ಯವನ್ನು ವಹಿಸಿದ ಕುರಿತು ಪೂರಕ ಮಾಹಿತಗಳು ಲಭಿಸುತ್ತವೆ.

ಶಿವಾಜಿಯು ತಿರುಮಲರಾಯನಿಗೆ ನೀಡಿದ ಬೆಳ್ಳಿ ಶಾಸನ

ಮರಾಠಾ ಸರದಾರ ಶಿವಾಜಿಯು ತಿರಮಲರಾಯನಿಗೆ ನೀಡಿದ ಬೆಳ್ಳಿ ಶಾಸನವೊಂದು ವಿಜಯನಗರ - ಆನೆಗೊಂದಿ ರಾಜಪೀಳಿಗೆಯ ಶ್ರೀ ಅಚ್ಯುತ ದೇವರಾಯರಲ್ಲಿದ್ದು ಶಾಸನ ವಿವರಗಳನ್ನು ಈ ಕೆಳಗೆ ನೀಡಲಾಗಿದೆ. ಮರಾಠೀ ಮೋಡಿ ಲಿಪಿ ಹಾಗೂ ಭಾಷೆಯಲ್ಲಿರುವ ಈ ಶಾಸನ ಗಮನಾರ್ಹವಾದುದು.

ಮರಾಠೀ ಪಠ್ಯಭಾಗ

1 राजेश्री तिरुमलराये गोसा
2 वी यां स
3 श्रीमद्राजाधिराज राज परमेस्वर श्री वीरप्र
4 ताप श्रीवीर सिवाजीराजे कृतानेक वि
4 द्नापना तुमचे वडील राजेश्री श्रीरंगराज या
6 णी राज्य अन्याक्रांत होउन परस्थली। दै
7 होंवयाबदल मातेश्री तिमाजैमा याणी तुम्हा
9 स व रामराये उभयेतास व्यंकटकृष्णप
10 वकील यास समागमे घेउन अम्बापासी पाठ
11 विले त्याजवरून सर्व मार अवगत होऊन तदान
12 सार तुमचे संवरक्षण बदल तालूक मार करू
13 न दील्हे न ।।
14 1 संवस्थान विद्यानगर आनिगुंदि

15 1 गंगावती प।। 1 होसूर समत
16 1 कंपली समत 1 वड समत
17 1 कामलापुर समत 1 दरोजी समन
18 1 तेकलकोटे प।। 1 बाणरावी अंतापुर
19 सिरेकोळसमत प ।।

ಹಿಂಭಾಗ

20 येणे प्रमाणे स्थल तुम्हास सुफुर्द करून दे
21 विल असे तरी तुम्ही आचेंद्रार्क वंशपारंपर
22 अनभव करून श्री स्वामिचे क्षेत्री तुंगभद्रा
23 स्थान देवता सेवाधर्म इत्यादी करून धेऊन
25 सुस्वरूप राहुतेस करावे या धर्मास कोणी अं
25 तर केलिया अपले कुलस्वामी गुरूच शापृत
26 आहे जाणिजे 6 10 माहे जमादिलावल सुमास
27 मान स्वमसैन अलप् हेविलंबी संवछर वैशा
28 स्व सु ।। 23 शके शालिवाहन 1579 रुजु

ಕನ್ನಡದಲ್ಲಿ ಲಿಪ್ಯಂತರ

1. ರಾಜೇಶ್ರೀ ತಿರುಮಲರಾಯೇಗೋ
2. ಸಾವೀಯಾಂಸ
3. ಶ್ರೀಮತ್ ರಾಜಾಧಿರಾಜ ರಾಜ ಪರಮೇಶ್ವರ ಶ್ರೀ ವೀರ ಪ್ರ
4. ತಾಪ ಶ್ರೀ ವೀರ ಸಿವಾಜಿರಾಜೆ ಕೃತನೇ ಕವಿ
5. ಜ್ಞಾಪನಾ ತುಮಚೆ ವಡೀಲ ರಾಜಶ್ರೀ ಶ್ರೀರಂಗ ರಾಜ್ಯಾ
6. ಣೀ ರಾಜ್ಯ ಅನ್ಯಾಕ್ರಾಂತ ಹೋವೂನ ಪರಸ್ಥಳೀ ದೈ
7. ವಾಧೀನ ಜಾಹಲ್ಯಾ ಕಡೂನ ಫುಡೆ ತುಮಚೆ ಸಂರಕ್ಷಣ
8. ವ್ಯಾವ ಹ್ಯಾ ಬದಲಂ ಮತೋ ಶ್ರೀ ತಿಮ್ಮಮ್ಮಾಜಿ ಹ್ಯಾಣೀತುಮ್ಹಾ
9. ಸವ ರಾಮರಾಯೇ ಉಭಯತಾಸ ವ್ಯಂಕಟಕೃಷ್ಣಪ್ಪಾ

10. ವಕೀಲ ಹ್ಯಾಸ ಸಮಾಗಮೇ ದೇವೂನ ತುಹ್ಮಾಸ ಪಾಠ
11. ವಿಲೆ ತ್ಯಾಜವರೂನ ಸರ್ವ ಮಜಕೂರ ಅವಗತ ಹೊವೂನ ತದಾನು
12. ಸಾರ ತುಮಚೆ ಸಂರಕ್ಷಣಾ ಬದಲ್ ತಾಲೂಕ ಮಾರ ಕರೂ
13. ನ ದೀಲ್ಹೇ ತ॥
14. ೧ ಸಂಸ್ಥಾನ ವಿದ್ಯಾನಗರ ಆನಿಗುಂದಿ
15. ೧ ಗಂಗಾವತೀ ಪ ೧ ಹೊಸೂರ (ಹಾವನೂರ) ಸಮತ
16. ೧ ಕಂಪಲೀ ಸಮತ ೧ ವಡಸಮತ
17. ೧ ಕಾಮಲಾ ಪುರ ಸಮತ ೧ ದರೋಜಿ ಸಮತ
18. ೧ ತೆಕಲ ಕೋಟ ಪರಗಣಾ ೧ ಬಾ (ಹಾ) ಣರಾವಿ ಅಂತಾಪುರ
19. ಸೀರೋಕೋಳ ಸಮತ
20. ಏಣೆ ಪ್ರಮಾಣೆ ಸ್ಥಳ ತುಮ್ಹಾಸ ಸುಫರ್ದಕರೂನ ದೇ
21. ವಿಲ ಅಸೆತರಿ ತುಮ್ಹಿ ವಂಶಪರಂಪರಾ
22. ಅನುಭವ ಕರೂನ ಸ್ರೀ ಸ್ವಮಿಂಚೆ ಕ್ಷೇತ್ರೆ ತುಂಬಭದ್ರಾ
23. ಸ್ಥಾನ ದೇವತಾ ಸೇವಾ ಧರ್ಮ ಇತ್ಯಾದಿ ಕರೂನ ದೇವೂನ
24. ಸುಖರೂಪ ರಾಹತಸೆ ಕರಾವೆ ಹ್ಯಾ ಧರ್ಮಾಸ ಕೋಣೇ ಅಂ
25. ತರ ಕೇಲಿ ಯಾ ಅಪಲೆ ಕುಲಸ್ವಾಮಿ ಶಪತ
26. ಆಹೆ ಜಾಣಿಜೆ ಛ ೧೦ ಮಾಹೆ ಜಮಾದಿಲಾವಲ ಸುಮಾ
27. ಸಮಾನ ಖಮಸ್ಯೆನ ಅಲಫ ಹೇವಿಲಂಬಿ ಸಂವತ್ಸರ
28. ವೈಶಾಖ ಶುದ್ಧ ೩೩ ಶಕೆ ಶಾಲಿವಾಲನ ೧೫೭೯ ರುಜು

ಕನ್ನಡ ಭಾಷಾಂತರ

ರಾಜಶ್ರೀ ತಿರುಮಲ ಗೋಸಾವಿ ಇವರಿಗೆ ಶ್ರೀ ಮಹಾರಾಧಿರಾಜ ರಾಜ ಪರಮೇಶ್ವರ ಶ್ರೀ ವೀರ ಪ್ರತಾಪ ಶ್ರೀ ವೀರ ಶಿವಾಜಿ ಮಹಾರಾಜ ಇವರ ವಿಜ್ಞಾಪನೆ -

ನಿಮ್ಮ ತಂದೆ ಶ್ರೀರಂಗ ರಾಜರು ತಮ್ಮ ರಾಜ್ಯವನ್ನು ಕಳೆದುಕೊಂಡು ಪರಸ್ಥಳದಲ್ಲಿ ದೈವಾಧೀನರಾದರೆಂದು ತಿಳಿಯಿತು. ಮುಂದೆ ನಿಮ್ಮ ಸಂರಕ್ಷಣೆಯ ದೃಷ್ಟಿಯಿಂದ ನಿಮ್ಮ ತಾಯಿ ಮಾತೋ ಶ್ರೀ ತಿಮ್ಮಾಜಮ್ಮಾ ಅವರು ನಿಮಗೆ ಮತ್ತು ರಾಮರಾಯ ಇಬ್ಬರಿಗೆ ವಕೀಲರಾದ ವೆಂಕಟಕೃಷ್ಣಪ್ಪಾ ಅವರ ಸಮಕ್ಷಮದಲ್ಲಿ ಈ ಕೆಳಗಿನ ಊರುಗಳನ್ನು ನಿಮಗೆ ನೀಡಲಾಗಿದೆ.

ಆನೆಗೊಂದಿ ಸಂಸ್ಥಾನದ ಗಂಗಾವತಿ ಪರಗಣೆ, ಹೊಸೂರ (ಹಾವನೂರ) ಸಮತ, ಕಾಮಲಾಪುರ, ತೆಕಲಕೋಟೆ, ವಡಸಮುತ, ದರೋಜಿ ಸಮತ, ಬಾ(ಹಾ)ಣರಾವಿ ಸಿರಕೋಳ ಸಮತ-

ಇವುಗಳನ್ನು ನೀವು ಹಾಗೂ ನಿಮ್ಮ ವಂಶ ಪರಂಪರೆ ಇರುವವರೆಗೆ ಅನುಭವಿಸ ಬೇಕು ಹಾಗೂ ಶ್ರೀ ಸ್ವಾಮಿಯ ಕ್ಷೇತ್ರ ತುಂಗಭದ್ರಾ ಸ್ಥಳ ದೇವರಿಗೆ ಸೇವೆ, ಧರ್ಮ ಕಾರ್ಯ ಇತ್ಯಾದಿ ಮಾಡಿ ಸುಖ ರೂಪದಿಂದ ಇರಬೇಕು. ಇದಕ್ಕೆ ಯಾರಾದರೂ ಅಡ್ಡಿ ಪಡಿಸಿದರೆ ಅಥವಾ ಆತಂಕ ಪಡ್ಡಿದರೆ ಕುಲದೇವತೆಯ ಶಪತ ಇರುವದು ತಿಳಿಯಲಿ.

ರುಜು (ಸಹಿ)

ತಾ.೧೦ ಜಮಾದಿಲಾವಲ (ಅಕ್ಟೋಬರ್ ತಿಂಗಳು) ಸನ್ ಅರಬಿ ೧೦೫೮ ಸನ್ ಇಸವಿ 1658. ಶಕೆ ಶಾಲಿವಾಹನ ೧೫೭೯.

ಸಾರಾಂಶ

ಉ ಅ ತೂಕವಿರುವ ಬೆಳ್ಳಿ ತಗಡಿನಲ್ಲಿದ್ದ ೨೮ ಸಾಲುಗಳಿಂದ ಕೂಡಿ ಮರಾಠಿ ಮೋಡಿಲಿಪಿ ಭಾಷೆಯಲ್ಲಿರುವ ಶಾಸನ ಇತಿಹಾಸ ಹಾಗೂ ಮರಾಠೀ ಶಾಸನ ಸೂಚಿಯಲ್ಲಿ ಅಪೂರ್ವವಾದ ಅಪ್ರಕಟಿತ ಶಾಸನಗಳ ಸಾಲಿಗೆ ಸೇರಿದೆ. ಅಂತ್ಯದಲ್ಲಿರುವ ಕೊನೆಯ ಎರಡು ಅಕ್ಷರಗಳು ರುಜು ಎಂದಿರುವುದು ಶಿವಾಜಿಯ ಸ್ವಹಸ್ತಾಕ್ಷರವೆಂದು ಖ್ಯಾತ ಮರಾಠಾ ವಿದ್ವಾಂಸ ಡಾ.ಹಿ.ವೈ. ಸಾವಂತರು ಅಭಿಪ್ರಾಯಪಟ್ಟಿದ್ದಾರೆ. ಇದು ಅತ್ಯಂತ ಗಮನಾರ್ಹವಾದುದು. ಕೆಳದಿ ನೃಪ ವಿಜಯದಲ್ಲಿ ಲಿಂಗಣ್ಣನು ಉಲ್ಲೇಖಿಸಿದ ಹೇವಿಳಂಬಿ ಸಂವತ್ಸರ ಕಾಲಮಾನವೂ ಗಮನಾರ್ಹವಾಗಿದ್ದು ಈ ಐತಿಹಾಸಿಕ ಸಂಗತಿ ಕುರಿತು ಆಸಕ್ತಿಯನ್ನು ಕೆರಳಿಸುತ್ತದೆ. ಇದನ್ನು ಸಮರ್ಥಿಸಲು ಈ ಕೆಳಗಿನ Monumenta Historiac Indiae, Extracts from the Dutch Dairies of the Castle of Batavia. ಡಚ್ ದಾಖಲೆಯು ಕುತೂಹಲಕಾರಿಯಾಗಿದೆ.

War between the Sultan of Bijapur
and the Nayak of Keldi (Ikeri)

Ali Adilsiah, King of Visiapour, has invaded the country of canara with his army and had already practically conquered it. But being out mostly for booty he has arranged with the Neyk that the conquered countries would be given back to him, on condition that he would pay the said king 1500 thousand pagodas of 5 guilders each. And the said Majesty has therefore returned to Visiapaur trinmphantly in Jamuary last. Sivasi (>Shivaji) is ver much loved and honoured there........... [5]

ಕೆಳದಿ ಶಿವಪ್ಪನಾಯಕನ ನಂತರ (1660) ವಿಜಯನಗರ ಅರಸರು

ಕೆಳದಿ ನೃಪ ವಿಜಯನಗರದ ಅದೇ ಕವಿ ಲಿಂಗಣ್ಣನು - ಕ್ರಿ.ಶ. 1662-1667ರಲ್ಲಿ ಆಳಿದ ಶಿವಪ್ಪನಾಯಕನ ಜೇಷ್ಠ ಪುತ್ರ ಭದ್ರಪ್ಪ ನಾಯಕನ ಕಾಲದಲ್ಲಿ -

................ಸದ್ಧರ್ಮದಿಂ ರಾಜ್ಯಪರಿಪಾಲನಂಗೆಯ್ಯುತುಂವರ್ತಿಸುಮಿರ್ದಾಕಾಲ ದೊಳ್ ಮಾಯಾವಿಗಳ ಮೇಲಣ ರಾಜಕಾರ್ಯಾರ್ಥಂ ಅಳಿಯ ಶಿವಲಿಂಗಯ್ಯನಂ ಸೈನ್ಯ ಸಹಿತಂ ಪ್ರಯಾಣವನೊಡರ್ಚಿಸಲಾತಂ ತೆರಳ್ದು ಬೇಲೂರ್ಗೈದಿ ರಾಯಪುರಂ ಸಂಧಿಸಿ ತತ್ಸೈನ್ಯಂವೆರಸು ಮುಂತೆರಳ್ದು ಮಾಯಾವಿಗಳ್ವೇಷ್ಟೈಸಿದ ಹೆಬ್ಬಾಳೆ ಕೋಂಟೆಯಂ ಮುತ್ತಿಗೆ ದೆಗೆಸಿ ಮುಂತೈದಿ ನರಸಿಂಹಪುರಕ್ಕೆ ಮುತ್ತಿಗೆಯಿಕ್ಕಲವರೈತಂದು ಕೊಣನೂರು ಕೋಂಟೆಯಂ ತೆಗೆದುಕೊಳಲಿವರತಿತ್ವರಿತದಿಂದಲ್ಲಿಗೈದಿ ತಳಿಸುರಂಗಂಳಂ ನಡೆಸುತ್ತು ಮಿರಲಾವೇಳೆಯೊಳ್ಮೈಸೂರ ಮಹೀಪತಿಯನುಜ್ಞೆಯುಂ ॥

ತಳತಂತ್ರಸಹಿತಮಲ್ಲಿಗೆ
ಕಳಿಲೆಯ ಕಾಂತಯ್ಯಂಬ ಸೇನಾಧೀಶಂ ।
ಘಳಿಲನ್ನೈತಂದು ಕಣಗಾ
ಲಿಳೆಯೊಳ್ಪಾಳೆಯವನಿಳಿಯಲಂದವರ್ಗಿವರ್ಗಂ ॥

ಯುದ್ಧಂ ಪಣ್ಣಲ್ಕಾರ್ಯಸ
ಮುದ್ರಂ ಶಿವಲಿಂಗನಾಯಕಂ ಕೈಗೈದ ।
ತ್ಯುದ್ಧತರಿಪುಸುಭಟಾಸೃ
ಗ್ಬದ್ಧಾಸಿಕರಾಬ್ಜನೆನಿಸಿ ರಾರಾರಾಜಿದಂ ॥

ಕೊಳುಗುಳದೊಳಾಂತ ಸುಭಟರ
ತಲೆಗಳನುರೆ ಕೇಣಗೊಂಡಿದಿರ್ಚಿದ ಬಲವ ।
ತ್ಕಳಿಲೆಯಕಾಂತಯ್ಯನ ಕೈ
ಚಳಕವನುರೆ ನಿಲಿಸಿ ಧುರದೆ ಮುರಿದೋಡಿಸಿದಂ ॥೫॥

ಹಾಗೂ ಶಿವಪ್ಪನಾಯಕನ ತಮ್ಮ ವೆಂಕಟಪ್ಪನಾಯಕ 1660-1661 ಮತ್ತು ಭದ್ರಪ್ಪ ನಾಯಕನ ಕಾಲದಲ್ಲಿ ಮೈಸೂರು ಅರಸರ ಉಪಟಳವು ಹೆಚ್ಚುತ್ತಿದ್ದುದನ್ನು ನಿವಾರಿಸಿ ವಿಜಯನಗರವನ್ನು ರಕ್ಷಿಸಿ ಕೆಳದಿಯು ಕಾಪಾಡಿತು. [6] ನಂತರ ಟೊಬರ್ಟ್‌ರ ಪ್ರಕಾರ -

AD 1653 : Fort St George in Madras is raised to the rank of a Presidency.

AD 1657 : Gulbarga falls to the Mughal emperor Anrangazeb ; 7689 Aneghondi comes under the rule of Aurangazeb.

1672 - 1698ರಲ್ಲಿ ಕೆಳದಿ ರಾಣಿ ಚೆನ್ನಮ್ಮಾಜಿಯು ಮರಾಠಾ ಸರದಾರ ಶಿವಾಜಿಯ ಮಗ ರಾಜಾರಾಮನನ್ನು ಔರಂಗಜೇಬನ ಉಪಟಳದಿಂದ (ರಾಜಾರಾಮನು ಕೆಳದಿಗೆ ಆಶ್ರಯಕ್ಕಾಗಿ ಮೊರೆ ಹೊಕ್ಕು ಓಡಿಬಂದಿದ್ದರಿಂದ) ಪಾರು ಮಾಡಿ ಮಹಾರಾಷ್ಟ್ರವನ್ನು ಉಳಿಸಿದುದು ಕರ್ನಾಟಕ ಭಾರತ ಹಾಗೂ ಮಹಾರಾಷ್ಟ್ರದ ಇತಿಹಾಸದಲ್ಲಿಯೇ ಖ್ಯಾತಿ ಹೊಂದಿದೆ. 1749ರಲ್ಲಿ ಆನೆಗೊಂದಿಯು ಮರಾಠರ ಆಕ್ರಮಣಕ್ಕೆ ತುತ್ತಾದುದು ರಾಬರ್ಟ್ ಸೀವೆಲ್‌ನಿಂದ ವ್ಯಕ್ತಪಡಿಸುತ್ತದೆ. ಟೋಬರ್ಟ್ ಪ್ರಕಾರ -

1750 : The Maratha chieftains come to Hampi and impose a tax of 7000 pagodas, depriving the Anegondi rulers of some settlements, leaving them with 78 villages and a revenue of 1,53,234 pagodas.

1775 : Anegondi is reduced by Hyder Ali, but continues to exist as a quasi - independent state Haider raises the tax ot 12,000 pagodas.

1786 : Tipu Sultan annexes Anegondi to his dominions and destroys the temples of Anegondi and Hampi, exples the raja, burns the palace and all the records, occupies the territory, and deprives the family of its lands until his death 1799. Purnayya arranges that the Anegondi Raja receives a monthly allownace of Rs. 2,000-

ಬ್ರಿಟಿಷರ ಕಾಲದಲ್ಲಿ ಆನೆಗೊಂದಿ ಅರಸರು

ಅದೇ ಟೋಬರ್ಟ್‌ನ ಸಂಗ್ರಹದಲ್ಲಿ -

1790 : A treaty is signed between the British and Nizam by which the taxes are restored to the royal family at Anegondi. The raja becomes a Zamindar underthe Nizam's Govt. Tipu reliquishes half his dominions when peace is restored, A treaty is made with the Nizam and East India company in 1790 against Tipu, to deprive him of the means of disturbing the general traquillity. At the time 'Annugoondy' is a polygar of Hydarabad.

A. D. 1795 : A map by William Faden shows 'Anagoondy Resid. ce of the Rayel'. It indicates areas on both sides of the Tungabhardra as belonging to Anegondi.[7]

A.D. 1801: The British give a monthly pension of 1377 Rs tothe Anegondi Raja. The Nizyam's minister grants Anegondi tax free revenue rights.

A.D. 1880 : The gates of the temple near Anegondi east side landing are removed to the Madras Govt Museum, (Campbell 1898)

A.D. 1898 : The Population of Anegondi is around 1500 (camp bell 438-44) 'Anagundi' is taken tot he synonymons with Viajayanagara: captions on P. 439 read as 'The Raja's, palace, Vizyianagar' and 'A Juggarnath car, Vizyanagar' Both illustrate scenes at Anegondi.

1947 : The Anegondi principality is absorbed into the Indian Union.

1948 : The practices of taxes is stoped, though pensions continue to be paid by Indian Government.

1984 : Rani Lala Kumari dies and the Government pension comes to an end.

1987 : Anegondi becomes he administrative head quarters for 29 villages under the new Mandal Panchayayt, (and in 1998 within the newly formed Koppal district)

ರಾಜ ಪೀಳಿಗೆಯ ಅಚ್ಯುತದೇವರಾಯರು

1947ರ ನಂತರ ಭಾರತದ ಸ್ವಾತಂತ್ರ್ಯ ಪರಿವರ್ತನೆಯ ಯುಗದಲ್ಲಿ ವಿಜಯನಗರ - ಆನೆಗೊಂದಿಯ ಚಕ್ರವರ್ತಿಗಳ ಪೀಳಿಗೆಯು ಕಣ್ಮರೆಯಾಗಲು ವಿವಿಧ ರೀತಿಗಳಲ್ಲಿ ರಾಜಕೀಯ ಮಾರ್ಪಾಟುಗಳ ಮಧ್ಯೆಯೂ ಸರಕಾರದ ದೃಷ್ಟಿಗೆ ಅಚ್ಯುತ ದೇವರಾಯರು ಹಂಪೆ ಉತ್ಸವ ಕಾಲದಲ್ಲಿ ಸರಕಾರದ ಆಹ್ವಾನದ ಮೇರೆಗೆ ಅಗ್ರಾಸನದಲ್ಲಿ ಗೋಚರಿಸುತ್ತಿರುವುದು ಕಂಡುಬರುತ್ತಿದೆ. ಅಚ್ಯುತ ದೇವರಾಯರಲ್ಲಿರುವ ರಾಜಮುದ್ರೆಗಳು, ಪಳೆಯುಳಿಕೆಗಳು, ಶಿವಾಜಿ ನೀಡಿದ ಬೆಳ್ಳಿಯ ಶಾಸನ, ಆಯುಧಗಳು ಮುಂತಾದ ಪುರಾತನ ಸಾಮಾಗ್ರಿಗಳು ಆನೆಗೊಂದಿ ವಿಜಯನಗರ ಚಕ್ರವರ್ತಿಗಳ ವಂಶದ ಹಿರಿಮೆಗೆ ಆಕರ ಸಾಮಗ್ರಿಗಳನ್ನು ಒದಗಿಸುತ್ತವೆ. ಆನೆಗೊಂದಿಯ ನಿವಾಸಿಗಳು ಅಚ್ಯುತದೇವ ರಾಯರನ್ನು ರಾಜಮರ್ಯಾದೆಯಿಂದಲೇ ಈಗಲೂ ಮಾನ್ಯತೆಯಿತ್ತು, ಗೌರವಿಸುತ್ತಿ ದ್ದಾರೆ. ಸರಕಾರವೂ ಹಲವು ಕಾರಣಗಳಿಂದ ಅಚ್ಯುತದೇವರಾಯರನ್ನು ರಾಜ ಮರ್ಯಾದೆಯಿಂದ ಗೌರವಿಸುತ್ತಿದ್ದಾರೆ. ಇವರಲ್ಲಿನ ಕುಟುಂಬ ವರ್ಗದವರು ವಿಧಾನಸಭೆ ಹಾಗೂ ಪರಿಷತ್ತಿನಲ್ಲಿ ಸದಸ್ಯರಾಗಿದ್ದುದಲ್ಲದೆ ಸಚಿವರಾಗಿದ್ದು ಕಂಡುಬರುತ್ತದೆ. ಆನೆಗೊಂದಿಯ ಸುತ್ತಮುತ್ತಲಿನ ನಿವಾಸಿಗಳು ಈಗಲೂ ವಿವಾದಗಳ ನ್ಯಾಯ ತೀರ್ಮಾನಗಳಿಗೆ ಅಚ್ಯುತ

ದೇವರಾಯ ಮತ್ತು ರಾಮದೇವರಾಯರ ಮುಂದಾಳತ್ವದಲ್ಲಿ ಸಹಕರಿಸಿ ಮುನ್ನಡೆದು ನೆಮ್ಮದಿ ಹೊಂದುತ್ತಿದ್ದಾರೆ. 1987ರಲ್ಲಿ ಈ ಪೀಳಿಗೆಯ ಹರಿಹರದೇವ ರಾಯನು ತನ್ನ ಪ್ರಾಪ್ತ ವಯಸ್ಸಿನಲ್ಲಿಯೇ ಜನಾನುರಾಗಿಯಾಗಿದ್ದು (ಅವಿರೋಧವಾಗಿ ಆರಿಸಿಬಂದು) ದುರಂತ ಮರಣಕ್ಕೀಡಾದಾಗ ಬೃಹತ್ ಜನ ಸಮೂಹವೇ ದುಃಖಕ್ಕೀಡಾಗಿ ಈತನ ಕುರಿತು ಬಿ. ಬಸವರಾಜ್ ರಚಿಸಿದ ಕವನವೊಂದನ್ನು ಟೋಬರ್ಟ್‌ರವರು ಮಾರ್ಮಿಕವಾಗಿ ನೀಡಿದ್ದಾರೆ. ಹಿಂದೆ ನಡೆಯುತ್ತಿದ್ದ ಅರಮನೆಯ ಧಾರ್ಮಿಕ ಸಂಪ್ರದಾಯಗಳು ಈಗಲೂ ಖಾಸಗಿಯಾಗಿ ಜರುಗುತ್ತಿವೆ.

ಶ್ರೀ ಅಚ್ಯುತ ದೇವರಾಯರ ಸಹಧರ್ಮಿಣಿ ರಾಣಿ ಚಂದ್ರಕಾಂತರಾಯರು ಮಧ್ಯ ಪ್ರದೇಶದ ವಿಕ್ರಂ ವಿಶ್ವವಿದ್ಯಾಲಯದಲ್ಲಿ ಬಿ.ಎ. ಪದವೀಧರರಾಗಿದ್ದು, ಮಧ್ಯ ಪ್ರದೇಶದ ರಾಜಪೀಳಿಗೆಗೆ ಸೇರಿದವರು. ಗೋವಾ ರಾಜ್ಯಪಾಲರು ಹಾಗೂ ಭಾರತದ ಕ್ಯಾಬಿನೆಟ್ ದರ್ಜೆಯ ಸಚಿವರಾಗಿದ್ದ ಮಹಾರಾಜ ಭಾನುಪ್ರತಾಪ್ ಸಿಂಗಜೀರವರು ಈಕೆಯ ಸಹೋದರರು. ಈ ರಾಣಿಯು ಅಮೇರಿಕಾ ಪ್ರವಾಸವನ್ನೂ ಕೈಗೊಂಡು ಅನುಭವಗಳಿಸಿಕೊಂಡು ಅರ್ಪಿತಾ ಸಂಸ್ಥೆಯ (ಬೆಳ್ಳಾರಿ ಜಿಲ್ಲೆಯ) ಸ್ಥಾಪಕರಾಗಿದ್ದಾರೆ. ವಿಕ್ರಮಾದಿತ್ಯ - ಭೋಜರಾಜ ಪೀಳಿಗೆಯಲ್ಲಿ ಪರಮಾರ್ ವಂಶಕ್ಕೆ ಸೇರಿದ ರಾಣಿಯವರ ತಂದೆ ಮಹಾರಾಜ್‌ಪ್ರಭುನಾಥ್ ಸಿಂಗ್‌ರವರು ನರಸಿಂಹಗಡದ ದಿವಾನರಾಗಿದ್ದರು. ತಾಯಿ ರಾಣಿ ತೇಜ್ ಕುಮಾರ್‌ರವರೂ ಮಧ್ಯ ಪ್ರದೇಶದವರು. ಬಾನುಪ್ರಸಾದ್ ಸಿಂಗ್‌ರವರು ಬಿಟ್ಟುಕೊಟ್ಟ ಹುದ್ದೆಯನ್ನು ಮಿ|| ಕಟ್ಜುರವರು ಸೇರಿ ಮಧ್ಯಪ್ರದೇಶದ ಮುಖ್ಯಮಂತ್ರಿಯಾದರು. (ಇಂದಿರಾ ಗಾಂಧಿರವರ ಕಾಲದಲ್ಲಿ) ಹಂಪೆ ವಿರೂಪಾಕ್ಷೇಶ್ವರ ದೇವಾಲಯದ ಉತ್ಸಾವಾದಿಗಳು, ವಿದ್ಯಾರಣ್ಯ ಪೀಠದ ಉತ್ತರಾಧಿಕಾರಿಗಳ ನೇಮಕ ಪಟ್ಟಾಭಿಷೇಕಾದಿಗಳಲ್ಲಿ ಈಗಲೂ ಅಚ್ಚ್ಯುತದೇವರಾಯರ ಗೌರವದ ಉಪಸ್ಥಿತಿಯಿದೆ. ನವರಾತ್ರಿ ಉತ್ಸವವೂ ನಡೆಯುತ್ತಿದೆ. ಇಸ್ಲಾಂ ಧರ್ಮದವರೂ ಅಚ್ಯುತದೇವರಾಯರನ್ನು ಧಾರ್ಮಿಕ ಉತ್ಸವದಲ್ಲಿ ಆಹ್ವಾನಿಸಿ ಗೌರವಿಸುತ್ತಿದ್ದಾರೆ.

ಶ್ರೀ ಅಚ್ಯುತದೇವರಾಯರಿಂದ ಸಾಮಾಜಿಕ, ಧಾರ್ಮಿಕ ಸೇವೆಗಳು ಅವಿರತವಾಗಿ ನಡೆಯುತ್ತಿದ್ದು, 1996ರಲ್ಲಿ ವಿಜಯ ವಿದ್ಯಾರಣ್ಯ ಹೆರಿಟೇಜ್ ಟ್ರಸ್ಟ್ ಸ್ಥಾಪಿಸಲ್ಪಟ್ಟಿದೆ. ಈ ಟ್ರಸ್ಟಿನಿಂದಲೆ ಹಂಪೆಯಲ್ಲಿ ಕರ್ನಾಟಕ ಇತಿಹಾಸ ಅಕಾಡೆಮಿ ವಿದ್ವತ್ ಸಭೆಯು ಅದ್ದೂರಿಯಿಂದ ಜರುಗಿತು. ದಿ. 30-10-1998ರಂದು ಆಂಧ್ರ ಸರಕಾರ ಶ್ರೀ ಅಚ್ಯುತ ದೇವರಾಯರಿಂದ ಕೃಷ್ಣದೇವರಾಯ ವಿಶ್ವವಿದ್ಯಾಲಯ ಹಾಗೂ ಕೃಷ್ಣದೇವರಾಯನ ಪ್ರತಿಮೆಯನ್ನು ಉದ್ಘಾಟಿಸಿದ್ದುದಲ್ಲದೆ ಲೋಕಸಭಾ ಅಧ್ಯಕ್ಷರಾಗಿದ್ದ ದಿ|| ಬಾಲಯೋಗಿ ಗಳ ಸಮಕ್ಷಮದಲ್ಲಿಯೇ ಉದ್ಘಾಟಿಸಿರುವುದು ವಿಜಯನಗರ ಇತಿಹಾಸದ ಅಧ್ಯಾಯ ದಲ್ಲಿ ಮೈಲುಗಲ್ಲಾಗಿದೆ. ಆಂಧ್ರ ಹಾಗೂ ತಮಿಳುನಾಡಿನಲ್ಲಿ, ತಿರುಪತಿಯಲ್ಲಿ ಜರುಗಿದ

ಸಭೆ-ಸಮಾರಂಭಗಳಲ್ಲಿ ಅಚ್ಯುತದೇವರಾಯರಿಗೆ ಸನ್ಮಾನಗಳು ಲಭಿಸಿವೆ. ಶ್ರೀ ಅಚ್ಯುತದೇವ ರಾಯರು ಈಗ ಹಂಪಿ ಉಳಿಸಿ ಆಂದೋಳನ ಸಮಿತಿಯ ನೇತಾರರಾಗಿದ್ದಾರೆ. (ಅಪೂರ್ಣ).

ವಿಜಯನಗರ - ಆನೆಗೊಂದಿ ರಾಜಪೀಳಿಗೆಯ ಮ್ಯೂಜಿಯಂ

ಉತ್ತರ ಭಾರತದಲ್ಲಿ ಅಕ್ಬರ್, ಜಹಾಂಗೀರ್, ಹುಮಾಯೂನ್, ನೆಹರೂ, ಸುಭಾಷ್‌ಚಂದ್ರಬೋಷ್, ಬಿರ್ಲಾ, ಬೃಂದಾವನ್ ಮ್ಯೂಜಿಯಂ ಇತ್ಯಾದಿ ವಸ್ತು ಸಂಗ್ರಹಾಲಯಗಳ ಸಾಲಿನಲ್ಲಿ ಭಾರತ ಹಾಗೂ ವಿಶ್ವಖ್ಯಾತಿ ಗಳಿಸಿದ ಆನೆಗೊಂದಿ - ವಿಜಯನಗರ ರಾಜಪೀಳಿಗೆಯ ಮ್ಯೂಜಿಯಂ ಸ್ಥಾಪನೆ ಎಂದಿಗಿಂತಲೂ ಇಂದು ಅತ್ಯಗತ್ಯವೆಂಬುದನ್ನು ಪ್ರಾಮಾಣಿಕ ವಿದ್ವಾಂಸರೆಲ್ಲರೂ ಅಲ್ಲಗಳೆಯುವುದಿಲ್ಲ. ಮೈಸೂರು ರಾಜಪೀಳಿಗೆಗಿಂತಲೂ ವೈಶಿಷ್ಟ್ಯ ಪೂರ್ಣವಾದ ವಿಜಯನಗರ ಚಕ್ರವರ್ತಿ ಪೀಳಿಗೆಯ ಮ್ಯೂಜಿಯಂ ದೇಶವಿದೇಶಗಳ ಆಕರ್ಷಣೆ ಕೇಂದ್ರವಾಗಬಲ್ಲುದು. ಆನೆಗೊಂದಿಯಲ್ಲಿರುವ Natalie Tobertರವರು ವಿವರಿಸಿದಂತೆ ಶ್ರೀ ಅಚ್ಯುತದೇವರಾಯರ ಅರಮನೆಯಲ್ಲಿಯೇ ಇದನ್ನು ಸ್ಥಾಪಿಸಿ, ಅವರಲ್ಲಿರುವ ಪುರಾತನ ಆಯುಧಗಳು, ಛಾಯಾಚಿತ್ರಗಳು, ನಾಣ್ಯಗಳು, ಶಾಸನಗಳು, ರಾಜ ಮುದ್ರೆಗಳು, ಪೋಷಾಕುಗಳು, ಪ್ರಕಟಿತ - ಅಪ್ರಕಟಿತ ಕಾಗದ ಪತ್ರಗಳು ವಂಶವೃಕ್ಷಗಳು, ಕಲಾತ್ಮಕ ಸಾಮಗ್ರಿಗಳು, ಮುಂತಾದವನ್ನು ಶೇಖರಿಸಿ ಅವರ ಅರಮನೆಯಲ್ಲಿಯೇ ವೈಜ್ಞಾನಿಕಾಗಿ ಪ್ರದರ್ಶಿಸಿದಲ್ಲಿ ಅಧ್ಯನಯ ಶೀಲರಾದಿಯಾಗಿ ಪ್ರವಾಸೋದ್ಧಿಮೆಯಲ್ಲಿ ಅಭಿವೃದ್ಧಿ ಸಾಧಿಸುವಲ್ಲಿ ಸಹಕಾರಿಯಾಗಲಿದೆ. ಹಂಪೆ ಉತ್ಸವದ ಯೋಜನೆಯಡಿಯಲ್ಲಿ ಇದನ್ನು ರೂಪಿಸುವುದು ಅಗತ್ಯ ಕರ್ತವ್ಯಗಳಲ್ಲೊಂದಾಗಿದೆ. ಮೈಸೂರು ಅರಸರ ಪೀಳಿಗೆಯ ಮ್ಯೂಜಿಯಂ ಬಿಟ್ಟಲ್ಲಿ ಕೆಳದಿ ಅರಸು ಪೀಳಿಗೆಯ ಗ್ರಾಮಾಂತರ ವಸ್ತುಸಂಗ್ರಹಾಲಯಗಳು ಆಯಾ ಅರಸರ ಒಿನ್ನೆಲೆಯಿಂದ ಕೂಡಿದ ಪ್ರದರ್ಶನಾಲಯವಾಗಿದೆ. ಹಲವು ಮಾದರಿಗಳನ್ನು ಇಲ್ಲಿ ಪ್ರದರ್ಶಿಸಬಹುದು. ಭಾರತ ಸರಕಾರದ ಕಮಲಾಪುರ ವಸ್ತುಸಂಗ್ರಹಾಲಯ ಎಲ್ಲವನ್ನೂ ಒಳಗೊಂಡ ಸಾಮಾನ್ಯ ಮ್ಯೂಜಿಯಂ ಆಗಿದ್ದು, ಆನೆಗೊಂದಿ - ವಿಜಯನಗರ ರಾಜವಂಶದ ಸಮಗ್ರ ಅಧ್ಯಯನಾದಿಗಳ ಉದ್ದೇಶಕ್ಕಾಗಿ ವಿಶೇಷ ಮ್ಯೂಜಿಯಂನೊಂದಿಗೆ, ಮೈಸೂರು ಅರಸರ ಖಾಸಗಿ ಸಂಗ್ರಹಾಲಯಗಳಂತೆ ಇದಕ್ಕೂ ಮಹತ್ವ ದೊರಕಿಸಿಕೊಡುವಲ್ಲಿ ಕಾರ್ಯಪ್ರವೃತ್ತರಾಗುವುದು ಅಗತ್ಯ. ನವರಾತ್ರಿ ಹಾಗೂ ವಿಜಯನಗರ ಇತಿಹಾಸದಲ್ಲಿ ಕಂಡು ಬರುವ ಉತ್ಸವಗಳನ್ನು ಇಲ್ಲಿ ಕೈಗೊಂಡಲ್ಲಿ ವಿನೂತನ ಪ್ರಯೋಜನಕಾರಿಯಾಗಬಲ್ಲುದು. ಈ ದಿಸೆಯಲ್ಲಿ ಹೋರಾಡುತ್ತಿರುವ ಅದೇ ಪೀಳಿಗೆಯ ಶ್ರೀ ಅಚ್ಯುತರಾಯರನ್ನೇ ಮುಂದುವರಿಸಿಕೊಂಡು ಆನೆಗೊಂದಿಯಲ್ಲಿ

Natalie Tobert ರವರು ಉಲ್ಲೇಖಿಸಿದ. ನಂ. 50ರ ನಕ್ಷೆ ಹಾಗೂ ಅನುಬಂಧದಲ್ಲಿ ನೀಡಿದ ಛಾಯಾಚಿತ್ರದಲ್ಲಿ ಕಂಡಂತೆ ಸ್ವಾಭಾವಿಕವಾಗಿಯೇ ಪಳೆಯುಳಿಕೆಯ ಅರಮನೆಯಂತಿರುವ ಇದರಲ್ಲಿ ವಿಜಯನಗರ ಪೀಳಿಗೆ ವಸ್ತುಸಂಗ್ರಹಾಲಯ ಸ್ಥಾಪಿಸಲು ಸರಕಾರ, ಜನ ಸಾಮಾನ್ಯರು ಮುಂದೆ ಬರಬೇಕಾದದ್ದು ಅಗತ್ಯ. ಕಾಲಕ್ರಮದಲ್ಲಿ ಕೆಳದಿ ವಸ್ತು ಸಂಗ್ರಹಾಲಯದಂತೆ ದೇಶವಿದೇಶಗಳ ಆಕರ್ಷಣೆಯ ಕೇಂದ್ರವಾಗಲು ವಿಶಿಷ್ಟ ಅರ್ಹತೆಗಳು ಇದಕ್ಕೆ ಲಭಿಸುವಲ್ಲಿ ಸಂದೇಹವೇ ಇರಲಾರದು.

ಉಪ ಸಂಹಾರ

ವಿಜಯನಗರ - ಆನೆಗೊಂದಿ ಚರಿತ್ರೆ ಗ್ರೀಕ್, ರೋಂ, ಈಜಿಪ್ಟ್ ಮುಂತಾದ ವಿಶ್ವದ ಮಧ್ಯಕಾಲೀನ ಚರಿತ್ರೆಯಲ್ಲಿ 'City of Victory' ಎಂಬ ನಾಮಾಂಕಿತದಿಂದ ಕೂಡಿ ವೈವಿಧ್ಯತೆಯಿಂದ ಅಗ್ರಸ್ಥಾನ ಗಳಿಸಿಕೊಂಡಿದೆ. ರಾಬರ್ಟ್ ಸೆವೆಲ್ ಆದಿಯಾಗಿ ಸಿಪಾಯಿ ದಂಗೆ ಕಾಲದಲ್ಲಿ ಅಲೆಗ್ಸಾಂಡರ್ ಜೆ ಗ್ರೀನ್ ಲಾ (Alexander J. Green Law) ಸರ್ವೇಕ್ಷಣಾದಿ ಸಂಶೋಧನೆ ಕೈಗೊಂಡು ಇದರ ಮಹತ್ವವನ್ನೂ ಬೆಳಕಿಗೆ ತಂದಿದ್ದಾರೆ. ಇವುಗಳ ಆಧಾರಗಳಿಂದ ಸರಕಾರವು ಎಚ್ಚುತ್ತುಕೊಂಡು ವಿಜಯನಗರಕ್ಕೆ ಇಲಾಖೆಯಿಂದ ವಿಶೇಷ ಸ್ಥಾನ ನೀಡಿ ಉತ್ಖನನಾದಿಗಳನ್ನು ನಡೆಸಿದ ಪರಿಣಾಮವಾಗಿ ಯುನೆಸ್ಕೋ ಇದಕ್ಕೆ ರಕ್ಷಣೆಗಾಗಿ ಮುಂದೆ ಬಂದಿರುವುದು ಶುಭೋದಯ ಸಂಕೇತ ವಾಗಿದೆ. ಮುಂದಿನ ಪೀಳಿಗೆಗೆ ಇದನ್ನು ಉಳಿಸಿ ಕರ್ನಾಟಕ ಹಾಗೂ ಭಾರತದ ಸಾಂಸ್ಕೃತಿಕ ಆಸ್ತಿಯಾಗಿ ರಕ್ಷಿಸಲು ಹಂಪೆ ಉತ್ಸವದ ಮುಖಾಂತರ ಪ್ರಜಾಪ್ರಭುತ್ವದ ಮುಖಂಡ ರೊಂದಿಗೆ ಜನಸಾಮಾನ್ಯರೂ ಸಹಕಾರ ಹಸ್ತ ನೀಡುತ್ತಿದ್ದಾರೆ. ಈ ಉತ್ಸವವನ್ನೂ ಮೈಸೂರು ನವರಾತ್ರಿ ಸಾಲಿನಲ್ಲಿ ಅಂತರರಾಷ್ಟ್ರೀಯವಾಗಿ ಖ್ಯಾತಿಗಳಿಸಲು ಅಗ್ರಮಾನ್ಯತೆ ಗಾಗಿ ಶ್ರಮಿಸುತ್ತಿದೆ. ಇದರ ರೂವಾರಿ ಶ್ರೀ ಎಂ.ಪಿ. ಪ್ರಕಾಶ್‌ರವರ ಶ್ರಮಕ್ಕೆ ಕರ್ನಾಟಕ ಕೃತಜ್ಞವಾಗಿದೆ.

ಮೈಸೂರು ಅರಸರಿಗಿಂತಲೂ ಅಗ್ರಸ್ಥಾನದಿಂದ ಕೂಡಿದ ಆನೆಗೊಂದಿ - ವಿಜಯನಗರ ರಾಜಪೀಳಿಗೆಯ ಪಳೆಯುಳಿಕೆ ರಕ್ಷಣೆ ವಿಜಯನಗರ ನವರಾತ್ರಿ ಉತ್ಸವಕ್ಕೆ ಶೋಭೆ ತರಬಲ್ಲುದೆಂಬುದನ್ನು ಅಲ್ಲಗಳೆಯುವಂತಿಲ್ಲ. ಮೈಸೂರು ದಸರಾ ಪ್ರದರ್ಶನದಲ್ಲಿರುವ ರತ್ನ ಸಿಂಹಾಸನ ವಿಜಯನಗರದಿಂದ ಶ್ರೀರಂಗರಾಯನ ಕೈ ಸೇರಿದ್ದ ಇದರ ಆರೋಹಣ ವಿಧಿಕಾರ್ಯ 1610ರಲ್ಲಿ ಆರಂಭಗೊಂಡಿದ್ದು ಈಗ ಇತಿಹಾಸವಾಗಿದೆ. (ವಿ.ಕ. 20-9-2005) ವಿದೇಶೀಯ ಖ್ಯಾತ ವಿದ್ವಾಂಸ ಡಾ. ನಟೇಲೀ ಟೋಬರ್ಟ್ (Natalae Tobert)ರವರ ಆನೆಗೊಂದಿ ಪುರಾತತ್ವ ಅಧ್ಯಯನ ಕೃತಿ ಹಾಗೂ ಆನೆಗೊಂದಿ ಕುರಿತು 'ಸುಗಂಧ' ನಾಮಾಂಕಿತದಲ್ಲಿ ಪೂನ ವಿಶ್ವವಿದ್ಯಾನಿಲಯ

ದಲ್ಲಿ ಸಾದರ ಪಡಿಸಿದ ಮಹಾಪ್ರಬಂಧವೂ ಸಾಕ್ಷಿಯಾಗಿದೆ. (ಇದನ್ನು ಅವಲೋಕಿಸಲು ನನ್ನ ಪ್ರಯತ್ನ ಮುಂದುವರಿಯುತ್ತಲೇ ಇದೆ) ಡಾ. ನಟೇಲೀ ಟೋಬರ್ಟ್‌ರವರ ಕೃತಿಯ ಆಯ್ದ ಭಾಗಗಳನ್ನೂ ಅವರ ಮಾತಿನಲ್ಲಿಯೇ ಮನಗಾಣಿಸಿಕೊಡುವುದು ಅಗತ್ಯವೆಂದು ಪರಿಭಾವಿಸಿ ಮೂಲ ಮಾತೃಕೆಗಳ ಕನ್ನಡಾನುವಾದಗಳ ಗೊಡವೆಗೆ ಕೈ ಹಾಕಿರುವುದಿಲ್ಲ ವೆಂಬುದನ್ನು ನಮ್ರತೆಯಿಂದ ನಿವೇದಿಸದಿರಲಾರೆನು. ವಿಜಯನಗರ - ಆನೆಗೊಂದಿ ಚರಿತ್ರೆ ರಚನೆಗೆ ಹಲವು ದೇಶೀಯ ಆಕರಗಳ ಪ್ರಾಮುಖ್ಯತೆಗಳ ಅಗತ್ಯಗಳನ್ನು ಮನಗಾಣುವುದು ಸೂಕ್ತವೆಂಬುದನ್ನು ಮರೆಯಬಾರದು. ವಿಜಯನಗರ ಚರಿತ್ರೆಯ ಖ್ಯಾತ ವಿದ್ವಾಂಸ ದಿ|| ರಾಮಶರ್ಮರೇ ನಿರೂಪಿಸಿದಂತೆ ಆಕರಗಳಲ್ಲಿ ಕೆಳದಿ ನೃಪ ವಿಜಯ ಕೃತಿಯ ಅವಲೋಕನೆಯೂ ಅತ್ಯಗತ್ಯವೆಂಬುದನ್ನು ಈ ಪ್ರಬಂಧದಲ್ಲಿ ಕಾಣ ಬಹುದು. ವಿಜಯನಗರ -ಆನೆಗೊಂದಿ- ಕೆಳದಿಯು ಗಾಢ ಸಂಬಂಧ ಹೊಂದಿದ್ದುದು ಐತಿಹಾಸಿಕ ಸತ್ಯವಲ್ಲವೇ?

ಆನೆಗೊಂದಿ - ವಿಜಯನಗರ ಚಕ್ರವರ್ತಿಗಳು ಸನಾತನ ಧರ್ಮ ರಕ್ಷಣೆಗಾಗಿ ಅಪಾರ ಕಷ್ಟ ಕಾರ್ಪಣ್ಯಗಳನ್ನು ಅನುಭವಿಸುವಲ್ಲಿ ತಮ್ಮತನವನ್ನು ರಕ್ಷಿಸಿಕೊಳ್ಳಲು ಕೆಳದಿ ಅರಸರ ಮೊರೆ ಹೋಗಿದ್ದುದನ್ನು ಸಾಧಾರವಾಗಿ ನಿರೂಪಿಸಲಾಗಿದೆ. ಈ ದಿಸೆಯಲ್ಲಿ ಶ್ರೀ ಅಚ್ಯುತದೇವರಾಯರ ಪೀಳಿಗೆಯಲ್ಲಿ ಮರಾಠೀ ಸರದಾರ ಶಿವಾಜಿಯು ನೀಡಿದ ಬೆಳ್ಳಿ ತಗಡಿನ ಶಾಸನ, ಅಂತ್ಯದಲ್ಲಿ ಅವನ ಸ್ವಹಸ್ತಾಕ್ಷರದಿಂದ ಕೂಡಿದ್ದು, ಅತ್ಯಂತ ಗಮನಾರ್ಹವಾದುದು. ಶಾಸನ ಸಂಪುಟ ಇತಿಹಾಸದಲ್ಲಿಯೇ ಮರಾಠೀ ಶಾಸನಗಳ ಆಕರಕ್ಕೆ ಈ ಅಪ್ರಕಟಿತ ಶಾಸನವು ವಿನೂತನ ಬೆಳಕನ್ನು ನೀಡುತ್ತದೆ. ಮೈಸೂರು ಅರಸರಿಗಿಂತಲೂ ಉನ್ನತ ದರ್ಜೆಯ ಸ್ಥಾನಮಾನಗಳಿಂದ ಕೂಡಿದ ಈ ವಂಶದ ಕುಡಿಗೆ ಯಾವ ರಾಜಮಾನ್ಯ ಗೌರವಾರ್ಹತೆಗಳೂ ಲಭಿಸದಿರುವುದು ಖೇದದ ಸಂಗತಿ. ಮೈಸೂರು ಅರಸರ ಪೀಳಿಗೆಗೆ ಸಲ್ಲುತ್ತಿದ್ದ 2ಲಕ್ಷ ರೂಪಾಯಿಗಳ ವರ್ಷಾಶನವನ್ನು ಈಚೆಗೆ 3 ಲಕ್ಷ ರೂಪಾಯಿಗೆ ಏರಿಸಿದ್ದು ವರದಿಯಾಗಿದೆ. ಈ ಹಿನ್ನೆಲೆಯನ್ನು ಗಮನಿಸಿ ದಲ್ಲಿ ಆನೆಗೊಂದಿ - ವಿಜಯನಗರ ವಂಶವನ್ನು ಗುರ್ತಿಸವಿರುವುದು ವಿಜಯ ನಗರ ಚರಿತ್ರೆಗೆ ಅಪಚಾರವೆಸಗಿದಂತಾಗಿದೆ. ಇದನ್ನು ಮನಗಂಡಲ್ಲಿ ನಮ್ಮವರಿಗಿಂತಲೂ ಇತಿಹಾಸ ಪ್ರೇಮಿಗಳಿಂದ ಬ್ರಿಟಿಷ್ ವಿದೇಶಾಂಗ ಇಲಾಖೆ ಅಧಿಕಾರಿ ಫೋರ್ಬ್ಸ್‌ನು (Forbes) ದಿ 8-8-1902 ಮತ್ತು ದಿ 27-6-1902ರಲ್ಲಿ ಲಂಡನ್‌ನ ಎಡ್ವರ್ಡ್ VII ರಾಜನಿಗೆ ಒತ್ತಾಸೆಯಿಂದ ಚಾರಿತ್ರಿಕ ಮಹತ್ವ ಹಾಗೂ ಮಾನವೀಯತೆ (Historically and Humanitarian) ದೃಷ್ಟಿಯಿಂದ ಈ ರಾಜಪೀಳಿಗೆಗೆ ವಿಶಾಲ ಹೃಯದಿಂದ ರಾಜವಂಶಕ ವರ್ಷಾಶನದ ಅಗತ್ಯತೆಯನ್ನು ಮನಗಾಣಿಸಿಕೊಟ್ಟು ಇದನ್ನು ಉಳಿಸಿ ಕೊಳ್ಳಲು ಒತ್ತಿ ಹೇಳಿದ್ದು ಮನನೀಯವಾದುದು. ವಿಜಯನಗರ ಸಂಸ್ಥಾಪಕ ವಿದ್ಯಾ

ರಣ್ಯರು ಕನ್ನಡ ನಾಡಿನ ಹೊನ್ನಾವರದರೆಂಬುದಾಗಿ ಮೆಕಂಝಿ ಸಂಗ್ರಹದಲ್ಲಿ ಉಲ್ಲೇಖನವಿದೆ. ವಿಶ್ವವಿಖ್ಯಾತ ವಿಜಯನಗರ ಕನ್ನಡಿಗರ ಸಾಂಸ್ಕೃತಿಕ ಸಂಪತ್ತಿನ ಆಸ್ತಿ ಹಾಗೂ ಈಗ ನಡೆಯುತ್ತಿರುವ ಮೈಸೂರಿನ ದಸರಾ ನಾಡಹಬ್ಬದ ಮೂಲಕ ವಿಜಯ ನಗರವೆಂಬುದನ್ನು ಮರೆಯಬಾರದು. ಇದನ್ನು ಉಳಿಸಿಕೊಳ್ಳುವಲ್ಲಿ, ವಿಶ್ವದ ಆಕರ್ಷಣೆಗೆ ಒಳಪಡಿಸುವಲ್ಲಿ, ಉತ್ಸವದ ಹಿನ್ನೆಲೆಯಲ್ಲಿ, ರಾಜಪೀಳಿಗೆಯ ಸ್ಥಾನಮಾನ ಗೌರವವೂ ವಿಶೇಷ ಶೋಭೆಯ್ನನುಂಟು ಮಾಡುವುದು ಸ್ವಾಭಾವಿಕವಾದುದು. ಈ ರಾಜಪೀಳಿಗೆಯು ಸರಕಾರವನ್ನು ಯಾಚಿಸುವುದೂ ಅಷ್ಟು ಸೂಕ್ತವಾಗಲಾರದು. ಸರಕಾರ ಹಾಗೂ ಜನ ಸಾಮಾನ್ಯರೇ ತಮ್ಮ ಸಾಂಸ್ಕೃತಿಕ ಆಸ್ತಿಯೆಂದು ಪರಿಗಣಿಸಿ ರಕ್ಷಿಸಿಕೊಳ್ಳುವಲ್ಲಿ ಇನ್ನಾ ದರೂ ಕಾರ್ಯ ಪ್ರವೃತ್ತರಾಗಬೇಕಾದ ಸನ್ನಿವೇಶವಿದೆ. ಆನೆಗೊಂದಿಯಲ್ಲಿ ರಾಜ ಪೀಳಿಗೆಯ ವಸ್ತು ಸಂಗ್ರಹಾಲಯದ ಸ್ಥಾಪನೆಗೆ ಮುಂದಿನ ಪೀಳಿಗೆಗೆ ಉಳಿಸಲು ಶ್ರೀ ಅಚ್ಯುತರಾಯ ರಾಜದಂಪತಿಗಳು, ಸಹಕಾರ ನೀಡಲು ನನ್ನ ಕೋರಿಕೆಗೆ ಭರವಸೆ ನೀಡಿದ್ದಾರೆ. ಇವುಗಳ ಉಪಯೋಗ ಪಡೆದು ಹಂಪೆ ಉತ್ಸವವನ್ನೂ ವಿಶ್ವದ ಆಕರ್ಷಣೆ ಗೊಳಪಡಿಸಲು ಹೋರಾಡುತ್ತಿರುವ ರೂವಾರಿ ಹಾಗೂ ಉಪ ಮುಖ್ಯಮಂತ್ರಿ ಶ್ರೀ ಎಂ.ಪಿ. ಪ್ರಕಾಶ್‌ರವರು ಈ ದಿಸೆಯಲ್ಲಿ ಕಾರ್ಯಶೀಲರಾಗಲು ವಿದ್ವಾಂಸರ ಪರವಾಗಿ ಒತ್ತಾಯಿಸುವೆನು. ವಿಜಯನಗರ-ಆನೆಗೊಂದಿಗೆ ಸದಾ ಬೆಂಗಾವಲಾಗಿದ್ದ ಕೆಳದಿ ರಸರು ಹಂಪೆ ಜಾತ್ರೆ ಉತ್ಸವಕ್ಕೆ ಭೂದಾನ ಶಾಸನವಿತ್ತಿರುವುದನ್ನೂ ಮನಗಂಡು ಇದರ ಸ್ಮರಣಾರ್ಥವಾಗಿ ಮುಂದಿನ ಪೀಳಿಗೆಗೆ ಸರಕಾರೀ ಮಟ್ಟದಲ್ಲಿ ಕೆಳದಿ ಉತ್ಸವನನ್ನೂ ಇನ್ನಷ್ಟು ಶೋಭಿಸಲು ಕೈಗೊಳ್ಳಲು ವಿಜಯನಗರವನ್ನು ಸದಾ ಉದ್ಧರಿಸಿದ ಕೆಳದಿ ಇತಿಹಾಸ - ಸಂಸ್ಕೃತಿ ಅಭಿಮಾನಿಯಾಗಿ ಸರಕಾರಕ್ಕೆ ವಿನಮ್ರದಿಂದ ಆಗ್ರಹಿಸುತ್ತಿದ್ದೇನೆ.[11]. ಸರಕಾರ ಇದಕ್ಕೆ 5 ಲಕ್ಷ ರೂ. ಮೀಸಲಿರಿಸಿತ್ತು. ಏಕೋ ಏನೋ ಅದು ಕೈಗೂಡದಿದ್ದು ರಿಂದ ಈಗಲಾದರೂ ಕಾರ್ಯಶೀಲರಾಗಲು ವಿನಂತಿ.

ಕೊನೆಯದಾಗಿ, ನಮ್ಮ ಪೂರ್ವಿಕರಾದ ವೆಂಕಟಾದ್ರಿ ಯಜಮಾನರು ಆನೆಗೊಂದಿ ನಿವಾಸಿಯಾಗಿದ್ದು ಅಚ್ಯುತದೇವರಾಯನ ಪುರೋಹಿತರಾಗಿದ್ದರು. ಕಾಲಧರ್ಮದಿಂದ ಇವರೂ ಕೆಳದಿಗೆ ವಲಸೆ ಬಂದಿದ್ದರಿಂದ ಕೆಳದಿ ಅರಸರು ಆಶ್ರಯವಿತ್ತರು. ಈ ಕುರಿತು ಶಾಸನವನ್ನು ಕೆಳದಿ ಸಂಶೋಧನಾಲಯದಲ್ಲಿರಿಸಿದೆ. ಬ್ರಿಟಿಷ್ ಸರಕಾರದಿಂದ ಇತ್ತೀಚಿನವರೆಗೂ ಈ ಮನೆತನಕ್ಕೆ ಪೊಗದಿ ಮಾನ್ಯತೆ ಸಲ್ಲುತ್ತಿತ್ತು.[12] ಇದರ ಪ್ರೇರಣೆಯಿರಬಹುದೋ ಏನೋ? ಸಿದ್ಧಪಡಿಸಿದ ಈ ಪ್ರಬಂಧದಿಂದ ಆನೆಗೊಂದಿ ವಿಜಯನಗರ ಈಗಿನ ರಾಯಪೀಳಿಗೆಗೆ ಸರಕಾರ ಹಾಗೂ ಜನಸಾಮಾನ್ಯರು ಮಾನ್ಯತೆ ಯಿತ್ತು ಐತಿಹಾಸಿಕ ರಾಜಗೌರವ ಸಲ್ಲಿಸುವಂತಾದಲ್ಲಿ ನಮ್ಮ ಶ್ರಮ ಸಾರ್ಥಕವೆಂದು ನಂಬಿರುವೆನು. ಕಾಲಧರ್ಮಕ್ಕಾಗಿ ಕಾಯಬೇಕಷ್ಟೇ?

ಅಡಿಟಿಪ್ಪಣಿ

1. ವಿಜಯನಗರ ಕಾಲದ ಸೇತುವೆ ಛಾಯಾಚಿತ್ರವನ್ನು 1856ರಲ್ಲಿ ಅಲೆಗ್ಸಾಂಡರ್ ಗ್ರೀನ್ ಲಾ (Alexander Green Law) ಪ್ರಾಚ್ಯ ವಸ್ತು ಸಂಗ್ರಹಾಲಯ ಇಲಾಖೆ ಪ್ರಕಟಿಸಿದ್ದು ಅನುಬಂಧ ನೋಡಿರಿ. ಇದೇ ರೀತಿಯಲ್ಲಿ ಕೆಳದಿ ಅರಸರ ಕಾಲದಲ್ಲಿ ನಿರ್ಮಾಣಗೊಂಡ ಕಲ್ಲಿನ ಸೇತುವೆಯನ್ನು ಈಗಲೂ ಕೆಳದಿ ರಾಜಧಾನಿಯಲ್ಲಿ ನೋಡಬಹುದು. (The Glorious Keladi : Keladi Gunda Jois; Director of Archaeology, Mysore) ಭಾರತದ ಪುರಾತತ್ವ ಅಪೂರ್ವ ಇಂತಹ ಪಳೆಯುಳಿಕೆಗಳನ್ನು P.W.D ಇಲಾಖೆಯು ರಕ್ಷಿಸುವುದು ಅಗತ್ಯ.

2. ಕೆನೃವಿ. VII ಆ.

3. (a) ಚಿಕ್ಕದೇವರಾಯ ವಂಶಾವಳಿ, ಪು 191; ಕೆನೃವಿ VII: From these tests it is obvious that Sri Ranga's stay at Bednur was for 3 years (1656-59) as he was established at Belur and Hassan by Sivappa in 1659. His period of exile has therefore to be pushed back to 1654-56 in the height of Hagnen Transcripts and Proenzas letter cited above. ಹೇಗ್‌ನಲ್ಲಿರುವ ಡಚ್ - ಭಾರತ ದಾಖಲೆಗಳ ಕ್ಯಾಟಲಾಗನ್ನು (Bibliography and Archival guide tot he National Archives GOM at the Hagne, Netherlands) Dutch sources on south Asia 1600-1825 AD, Vol I ಸಂಪುಟದಲ್ಲಿ JOS GOMMANS LENNART BES GIJS KRUIJTZERರವರು ಪ್ರಕಟಿಸಿದ್ದು - ದಾಖಲೆ ಸಂಖ್ಯೆ 3.1.5 Missions to Indian States - VOC 1231, ff 5. 13-14 Missions to Ikkeri by Abram Carter 1659 (instructions) ಕಂಡು ಬರುತ್ತದೆ. ಇದರಲ್ಲಿ Sivapa Neijck > Shivappa Nayak ಎಂಬುದಾಗಿ ಉಲ್ಲೇಖವಿದೆ.

4.(a) According to KNV, The cyclic year given in footnote being Hevilambi without the name of the month, may be in 1658 AD. Hence the sequence remains to be settled

(b) The same chief is called as Arakala gudu Krishnappa Nayaka. This suggests that both are indentical, Hassan is the District head quater and Belur is a taluk of Hassan Dt.

5. Journal of the Bombay Historical Society, Vol III, No 1. Mach 1930; Ed: Brzy A. Fernandezy. pp. 266, ಮರಾಠಿ ಮೋಡಿ ದಾಖಲೆ ಪರಿಚಯಿಸಿಕೊಟ್ಟ ಪೂನಾ ವಿಶ್ವವಿದ್ಯಾಲಯ ಪ್ರಾಧ್ಯಾಪಕ ಡಾ.ಚಿಟ್ನೀಸ್ ಹಾಗೂ ಕರ್ನಾಟಕ ವಿಶ್ವವಿದ್ಯಾಲಯದ ಡಾ. ಪಿ.ವೈ. ಸಾವಂತ್‌ರವರಿಗೆ ಕೃತಜ್ಞತೆಗಳು. ಎಫೆಮರೀಸ್ ಪ್ರಕಾರ ಶಾಸನ ಕಾಲ : 15-4-1657 ಬುಧವಾರ, ಕೆ.ನೃ.ವಿ. ಎಷ್ಟು ಪ್ರಮಾಣೀಭೂತ ಆಕರವೆಂಬುದನ್ನು ಈ ಕಾಲದಿಂದ ಗಮನಾರ್ಹ ಅಂಶವಾಗಿದೆ.

6. ಕೆ.ನೃ.ವಿ. ಆ VIII; ಇಲ್ಲಿ ಉಲ್ಲೇಖನಗೊಂಡ ಕೊಣನೂರು ಅರಕಲಗೂಡು ತಾಲ್ಲೂಕಿನಲ್ಲಿದ್ದು, ನರಸಿಂಹಪುರ > ಹೊಳೆ ನರಸಿಂಹಪುರ, ಕಣಗಲ > ಸರ್ವಮಾನ್ಯ

ಕಗಳಲೆ - ಇವುಗಳು ಹಾಸನ ಜಿಲ್ಲೆಯಲ್ಲಿವೆ, ಡಚ್‌ನ ಬಟಾವಿಯ ಡಾಗ್ ರಿಜಿಷ್ಟರಿನಲ್ಲಿ - The news from canara mention that Badrapaneyk has been poisoned and that his brother, a child of 8 years, has succeeded him. ಅದೇ ದಾಖಲೆಯು ಈ ಕೆಳಗಿನಂತೆ....... that Seylon (Ceylon) will have to Import a big quantity of that grain from Keladi State........ ಎಂದು ಹೇಳಿದೆ. JBHS:Vol III No.1 (ಪೂರ್ವೋಕ್ತ)

7. ದಿ. 1795ರ ನಕ್ಷೆ ನೋಡಿರಿ.

8. ಜೆರಾಕ್ಸ್ ಪ್ರತಿ ಮಾದರಿ ನೋಡಿರಿ. Natalie Tobert ರವರ ಆನೆಗೊಂದಿ ಅರಮನೆ House No. 50. Secretariat and Archives Office (50c). The long room has cupboards with wooden doors at either end, and a tall square wall niche opposite the door. This is crammed full of thick books is Southern Indian languages, Urdu and English. The Urdu books date from the time when Anegondi came under the rule of Hydarabad. Here also is a stuffed mongoose, the skin parthy eaten away. (Anegondi : ntalie Tobert : p. 179 : ಅರಮನೆಯ ನಕ್ಷೆ, ಪಳೆಯುಳಿಕೆ ಹಾಗೂ ಮೇಲ್ಕಂಡ ಸಾಮಗ್ರಿಗಳು ಕರ್ನಾಟಕ (ಹೈದರಾಬಾದ್) ಇತಿಹಾಸ ಆಕರಗಳಿಗೆ ಅತ್ಯವಶ್ಯ ಅಧ್ಯಯನ ಸಾಮಗ್ರಿಗಳಾಗಿವೆ. ಅರಮನೆ ನಕ್ಷೆಗೆ ಅನುಬಂಧ ನೋಡಿರಿ. ಉರ್ದು ಲಿಪಿ ದಾಖಲೆ ನೋಡಿರಿ

9. ಅದೇ

10. ಪಾಳೆಯಗಾರರ ಇತಿಹಾಸಕ್ಕೆ ಗಮನಾರ್ಹ ದಾಖಲೆಗಳಾಗಿವೆ.

11. ವಿಜಯನಗರ ಅಧ್ಯಯನ ಸಂಪುಟ 7 : 2001 ಲೇಖನ : ಹಂಪೆ ಜಾತ್ರೆಗೆ ಕೆಳದಿ ಅರಸರ ದಾನ ಶಾಸನ : ಡಾ. ಕೆಳದಿ ವೆಂಕಟೇಶ ಜೋಯಿಸ್. ಪು. 106.

12. ಇನಾಂ ಕ್ವಿಟ್ ರೆಂಟ್ ದಾಖಲೆ ನಂ. 36694

ಆಕರ ಗ್ರಂಥಗಳು

1. Vijayanagar Sex Centenary Commemoration Volume.
2. ಪೇರರಾಜು ನೂತನಪಾಟಿ - ತೆಲುಗು
3. Sewell. R. (1900) A- Forgotten Empire, Vijayanagara.
4. Anegondi, Architectural Ethnography of a Royal Village. Natalie Tobert, Illustrations by Graham Reed, Manohar : New Delhi - 2000
5. Vijayanagar a through the eyes of Alexander J. Green law 1856. John Collings 1983. Director of Archaeology and Museums 1988.
6. ಕೆಳದಿ ನೃಪ ವಿಜಯ, ಗದ್ಯಾನುವಾದ : ಕೆಳದಿ ಗುಂಡಾ ಜೋಯಿಸ್. ಕ.ಸಾ.ಪ. 1977.

7. ಆನೆಗೊಂದಿ : ರಾಜಾ ಅಚ್ಯುತದೇವರಾಯ, ಜೆ.ಆರ್.ರಾಮಮೂರ್ತಿ, ಟಿ. ಪರಮೇಶ್ವರಪ್ಪ, ಹಂಪಿ ಉತ್ಸವ ಸಮಿತಿ, ಕುಮಾರರಾಮ ಮಂಟಪ, ಆನೆಗೊಂದಿ, 1998.

8. ವಿಜಯನಗರ ಅಧ್ಯಯನ ಸಂಪುಟ 7/2001. ಪ್ರಾಚ್ಯ ವಸ್ತು ಸಂಗ್ರಹಾಲಯದ ನಿರ್ದೇಶನಾಲಯ, ಮೈಸೂರು.

9. Journal of the Bombay Historical Society, Vo. III No. I, March 1930. Ed: Braz, A. Fernandez.

10. Bibliography and Archival Guide tot the National Archieves, GOM at the Hange, Netherlands.

11. The History of the Vijayanagar Empire: M- H, Rama Sharma, Bombay popular Prakashan 1980.

Catalogue of Political Pension Satement of Shri Achyutadevaraya

Sl.No. 1	Date 2	Particulars 3	Remarks and Reference 4
1.	-	Family tree of the Rajas of Anegondi Samasthanam, The Great Hindu Kingdom of Vijayanagar Geneological Chart.	Published in Madras Gezetteer
2	-	A Desendant of Shri Krishna Deva Raya, Documentary by P.R. Ramachandra Rao.	The Residence of Achyutadevaraya
3	(1999-1800)	Urdu Correspondance of Anegondi Samsthanam. 10 ಪುಟಗಳು*	ಉರ್ದು ಅಂಚೆ ಕಛೇರಿ ಮುದ್ರೆ, ಸ್ಟಾಂಪು, ಛಾಪಾ ಕಾಗದಗಳಿವೆ. ಛಾಪಾ ಕಾಗದದಲ್ಲಿ ತೆಲುಗು, ಉರ್ದು, ಇಂಗ್ಲೀಷ್, ಹಿಂದಿ, ಲಿಪಿಗಳಿಂದ ಕೂಡಿದ್ದು ಇಂಗ್ಲೀಷಿನಲ್ಲಿ (?) Our Annas, ಉರ್ದು ಲಿಪಿ? ಹಿಂದಿಯಲ್ಲಿ..................ತೆಲುಗಿನಲ್ಲಿ ಯಿಲಾಕೆಮಲ್ -ಅಣೆ; ಇಂಗ್ಲೀಷಿನಲ್ಲಿ ಕಾಲಮಾನ 1880; ಉರ್ದುವಿನಲ್ಲಿ ಕಾಲ ?, ಮರಾಠಿ ಮೋಡಿ ಲಿಪಿಗಳು. ಸಹಿಗಳು .... ಚಿತ್ರ ಹಾಗೂ ಉರ್ದುವಿನಲ್ಲಿ ಸಹಿಗಳಿವೆ. 1872x2 ಸಂಖ್ಯೆ ಯಿದೆ. [8]
	1799		Tipu Sultan is killed and his territory in state of Anegondi, is made over to the Nizam of

Sl.No. 1	Date 2	Particulars 3	Remarks and Reference 4
			Hyderabad; the lands to the south of the Tungabhadra are retained by the English Govt. The British recognise that these lands, which include the ruins of the capital city of Vijayanagara, once belonged to the Rajas of Anegondi. Accordingy, they allocate a pension to the head of the Anegondi family. The province of Anegondi is ceded by the Nizam to the British under Article 5 of the Hydarabad treaty of 1800, It is later devided between the British and the Nizam, the Tungabhadra serving as the bondary between the two dominions 1/3 of the province remains under the Nizam, and 2/3 rds are allocated to the British as part of the ceded Districts being absorbed into the Madras Presidency. Anegondi comes under a Muslim State with Urdu as the official language. ಕರ್ನಾಟಕ ಇತಿಹಾಸಕ್ಕೆ ಇವುಗಳ ಅಧ್ಯಯನ ಅಗತ್ಯ [9]

Sl.No. 1	Date 2	Particulars 3	Remarks and Reference 4
4	1799 20-3-1802	Memorandum of Polygars of the Ceded Districts ; enclosed in Report of Principal Collector	5th Report of the Madras Presidency page 449; Tippu burned his palace 1790 and again seized the District, but was driven out in 1792 by Cummur - uldeen khan [10]
5		Krishna Deva Raya's Donations to Shri Lord Venkateshwara of Tirumalai. Prof Parameshwarappa,	ಕೃಷ್ಣದೇವರಾಯನ ಏಳುಬಾರಿಯ ತಿರುಪತಿ ಯಾತ್ರೆಗಳು, ನೀಡಿದ ವಜ್ರ ವೈಢೂರ್ಯಾದಿ ಆಭರಣಗಳು, ಪಂಚಲೋಹ ಮೂರ್ತಿಗಳಲ್ಲಿರುವ ಕನ್ನಡ ಲಿಪಿಯ ಸಾಮಗ್ರಿಗಳು, ವಿಜಯ ನಗರ ಧಾರ್ಮಿಕ ಇತಿಹಾಸಗಳ ಆಕರಗಳಾಗಿದ್ದು, ಇಂತಹ ಸಮಗ್ರ ಪುರಾತತ್ವ ಸಾಮಗ್ರಿಗಳ ಕ್ಯಾಟಲಾಗ್ ಸರಕಾರ ಹಾಗೂ ವಿದ್ವಾಂಸರ ಅಧ್ಯಯನಗಳಿಗೆ ಅಗತ್ಯ ಶ್ರೀ ವಿರೂಪಾಕ್ಷ ದೇವಾಲಯದಲ್ಲಿಯೂ ಕೃ.ದೇ. ರಾಯನು ನೀಡಿದ ಚಿನ್ನದ ಮುಖವಾಡವಿದೆ.
6		ಆನೆಗೊಂದಿ ರಾಜರಿಗೆ ಸಲ್ಲುತ್ತಿದ್ದ ರಾಜ ಮರ್ಯಾದೆ ಗೌರವವನ್ನೊಳಗೊಂಡ ತೆಲುಗು ಲಿಪಿ ದಾಖಲೆ ಪತ್ರ	ಶ್ರೀ ಹಂಪೆ ವಿರೂಪಾಕ್ಷ ಸ್ವಾಮಿ ಟೆಂಪಲ್ ಹಂಪಿ ಮುದ್ರೆ

Sl.No. 1	Date 2	Particulars 3	Remarks and Reference 4
7		ದಿ. 3-11-99ರಲ್ಲಿ ರಾಜ್ಯ ಪತ್ರಾಗಾರದಲ್ಲಿ ನನಗೆ ಲಭಿಸಿದ ವಿಜಯನಗರ ದಾಖಲೆಗಳು	ಹಾಗೂ ಅಂತ್ಯದಲ್ಲಿ ಮೊಹರು ಇದೆ.
8		Shri Krishna Deva Rayar by Dr. Anthati Narasimhan Tamil Translation, Dr. G. Guna sekhar 11-30, NGO, Colony Puthur - 517583	ತಮಿಳುನಾಡಿನಲ್ಲಿ ಅಚ್ಯುತದೇವರಾಯ ನೀಡಿದ ಸನ್ಮಾನಗಳು. ಆಂಧ್ರದ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಉದ್ಘಾಟನೆ ಕುರಿತು ಮಾಹಿತಿಗಳಿವೆ.
9		ಜರ್ಮನ್ ಭಾಷೆಯ (Reisen)ಪತ್ರಿಕೆಯಲ್ಲಿ ಆನೆಗೊಂದಿ ಅಚ್ಯುತದೇವರಾಯರ ಕುರಿತು ಸಚಿತ್ರ ಲೇಖನ ಪ್ರಕಟವಾಗಿದೆ.	Reisen
10		ಬರೋಡಾ ರೆಸಿಡೆಂಸಿಯಿಂದ ಶ್ರೀ ಅಚ್ಯುತ ದೇವರಾಯರಿಗೆ ಬಂದ ಪತ್ರ	From the Governor: Re: Political Pension.
11		ಸುಮಾರು 30x2160 ಸೆ.ಮೀ. ಉದ್ದದ ಸುರುಳಿ ಸುತ್ತಿದ ಕೋರಿ ಕಾಗದದಲ್ಲಿ ತೆಲುಗು ಲಿಪಿಯಲ್ಲಿ ಉಲ್ಲೇಖನಗಳಿವೆ.	ವಂಶವೃಕ್ಷ ಇತ್ಯಾದಿಗಳನ್ನೊಳಗೊಂಡಿವೆ.
12	4-7-1790 29-7-1790	ವಿಜಯನಗರ ಕುರಿತಂತೆ Treaty with the Niyam, East India Company, Nizam and the Peshwa ಇತ್ಯಾದಿ	ಇದರಲ್ಲಿ (Madras Gezetteer) List of polygars and Zamindars, The District of Abdool Hakim

1	2	3	4
	22-6-1799 12-10-1800 8-8-1801 18-3-1802 27-6-1871	-	Khan, The Chief of Shanoor (Savannur), Letter from the Govt of Major Munro - Acting Secretary to Govt (Frederick price) J.H. Master (Acting Collector) proceedings of the Madras Govt Revenue Dept Date 27-6-1871. D.F. Carnichael (Acting Secy of Govt)
13		German News, Devine Marriage (Heritage)	ಈಗಿನ ಅಚ್ಯುತದೇವರಾಯರ ಮಾಹಿತಿ ಬಗ್ಗೆ ಸಮಗ್ರ ಲೇಖನ
14		Bio-data of Mrs Rani Chandrakanth Raya, B.A., and Achyuta Deva Raya.	ರಾಣಿ ಚಂದ್ರಕಾಂತಾದೇವಿರವರ ಬಂಧುಗಳು ರಾಜ್ಯಪಾಲರು ಹಾಗೂ ಭಾರತದ ಸಚಿವರಾಗಿದ್ದ ಮಾಹಿತಿಗಳಿವೆ.
15	5-9-1885 15-12-1886	Report of A.G. Dunlop Qur, Inspector General of Revenue H.H. Nizam's Dominions of the Political Secretaries	D.O. Letter N. 66, ಇದರಲ್ಲಿ ಲಿಂಗಸುಗೂರು ತಾಲ್ಲೂಕು ಕಛೇರಿ, ಇನಾಂ ಹಾಗೂ ಮುಜರಾಯಿ ವಾರ್ಷಿಕ ಲೆಖ್ಖ ಹಾಗೂ ರಾಣಿಗೆ ಸಲ್ಲುವ ತಸದೀಕು ಮುಂತಾದ ಅಪೂರ್ವ ಮಾಹಿತಿಗಳು ರಾಜ್ಯ ಪತ್ರಾಗಾರಕ್ಕೆ ಗಮನಾರ್ಹವಾಗಿವೆ.
16	16-7-1872	His Excellency the Right Hon'ble John Baron Pentland or Lyth P.C., G.C.I.E., Governor - in -	Re: Political compensation - also to the Board of Revenue Petition of Ranee Rangamma

1	2	3	4
		Council, Fort St. George, Madras ರವರಿಗೆ ಆನೆಗೊಂದಿ ರಾಜರಿಂದ ಪತ್ರ -	Gaurdian by W.M. Scharliee.
17		To His excellency Sir Arthur Elibank Havelock, G.C.M.G., G.C.I.E., Governor of Fort St. George, Madras - From the Raja of Anagundi, Re: Political compensation.	1799ರಿಂದ ಬಳ್ಳಾರಿ ಜಿಲ್ಲಾ ಕುರಿತು ಐತಿಹಾಸಿಕ ಮಾಹಿತಿ ಗಳಿವೆ.
18		His excellency Sir Arthus Lawley, G.C.M.G., G.C.I.E. Governor and President in council, Fort St. George Madras.	
19		His Excellency, The Right Hon'ble Arthur Oliver Villiers, Baron Ampthill, G.C.I.E. Governor in council, Fort St George.	From Anegondi Raja for Political Compensation, 5th Petition.
20	18-8-1902 27-6-1902	No 413, Political : Govt of Madra, Political Dept Forbes (Ag Chief Secy) Pensionery Allowance; Secy, Govt. of India, Foreigh Dept.	Political compensation should by given on the grounds of Historical value and Sentimental claims of the Anegondi family coronation of

1	2	3	4
			his imperial Majesty King - Edward the VII the Governor General in Council ಮುಖಾಂತರ justification ನೀಡಿ enhance ಮಾಡಿದ್ದು. Sd - G.S. Forbes (Ag. Chief Secy) to the collector of Bellary, Act General and A copy of the Board of Revenue (Land Revenue) ಮಾಹಿತಿಗಳು ಗಮನಾರ್ಹ.
21		His Most August and gracious Highness Asaf Jah, Muzaffaraul - Mamalik, Nizyam- ul - Mulk, Nizam- ud - Dawla, Huzyur - i - Permur, Band - in - Gani - Ali, Mattali - Madha - Zilla - hut - Ali, Nizam of the Dominions of Hydarabad - Deccan ರವರಿಂದ The Humble Memorial of Sri Ranga Deva Rayalu Raja of Anegondiರವರಿಗೆ ಬರೆದ ಪತ್ರ	ಇದರಲ್ಲಿ Most Respectfully Sheweth ಎಂದು ರಾಜರಿಗೆ ಸಂಬೋಧಿಸಿದ್ದು, ನೈಜಾಮ ಪ್ರಾಂತದ ವಿವಿಧ ಅಧಿಕಾರಿಗಳ ಹೆಸರುಗಳು ಗಮನಾರ್ಹವಾಗಿವೆ.
22	23-6-1906	From Sir Arthur Lawiey, G.C. M.G., G.C.I.E., Governor in Council of Fort St George	Most respectfully Sheweth ಎಂದು ರಾಜರಿಗೆ ಸಂಬೋಧಿಸಲಾಗಿದೆ.


1	2	3	4
		Otakamund to the Humble Memorial of Sreemanth Sree Ranga Deva Rayalu Varu, Raja of Anegondi	

ಅಪೂರ್ಣ

ಇಂತಹ ಮಾಹಿತಿಗಳನ್ನು ನೀಡಿದ ರಾಯಪೀಳಿಗೆಯ ಶ್ರೀ ಅಚ್ಯುತದೇವರಾಯರು ಹಾಗೂ ರಾಣಿಯರಿಗೂ ಮತ್ತು ಈ ಪರಿವಾರದವರೆಲ್ಲರಿಗೂ ಇತಿಹಾಸಜ್ಞರ ಪರವಾಗಿ ಕೃತಜ್ಞತೆಗಳು



Diaspora of royal families after the sack of Vijayanagara in 1565



۳۴۹

جریدۂ غیر معمولی سرکار عالی
نشان (۱۱۰)



جلد ۷۸	حیدرآباد دکن مورخہ ۲۸ شہریور ۱۳۵۵ ف م ۶ شوال ۱۳۶۵ھ م ۳ ستمبر ۱۹۴۶ء یوم سہ شنبہ	نمبر ۴۷

حصہ اول

باب اول۔ احکام سرکار عالی متعلق تقرر تبدل رخصت و استقلال ملازمین وغیرہ۔ ندارد۔


باب دوم۔ احکام صدر ناظم کوتوالی اضلاع متعلق تقرر تبدل رخصت و استقلال ملازمین وغیرہ۔ ندارد۔

باب سوم۔ احکام متعلق سزا و جزا۔ ندارد۔

باب چہارم

رزولیوشن محکمہ سرکار و گشتیات و مراسلات دیگر محکمہ جات و احکام صدر ناظم

کوتوالی اضلاع سرکار عالی



೩೭. ವಿಜಯನಗರ ಮತ್ತು ಟೀಕಾ ಸಾಹಿತ್ಯ

ಡಾ|| ಕೆ.ರವೀಂದ್ರನಾಥ

'ಹಂಪಿ' ವಿಜಯನಗರ ಸಾಮ್ರಾಜ್ಯದ ಸಾಂಸ್ಕೃತಿಕ ರಾಜಧಾನಿ. ಇದು ಕೆಲವು ಗುಣಗಳಿಂದ ವಿನೂತನ ಪರಂಪರೆಗೆ ಶ್ರೀಕಾರ ಹಾಕಿದ ಸ್ಥಳ. ವಾಸ್ತುಶಿಲ್ಪದಲ್ಲಿ ವಿಜಯನಗರ ಶೈಲಿಯನ್ನು ಅನುಷ್ಠಾನಕ್ಕೆ ತಂದಂತೆ; ಸಾಹಿತ್ಯಕವಾಗಿ 'ರಗಳೆ' 'ಷಟ್ಪದಿ'ಗಳಂಥ ದೇಶಿ ಛಂದಸ್ಸಿಗೆ ಬಹುದೊಡ್ಡ ಮಾರ್ಗ ಹಾಕಿಕೊಟ್ಟ ನೆಲೆವೀಡು. ಅದೇ ರೀತಿ 'ಟೀಕಾ ಸಾಹಿತ್ಯ' ರಚನಾಕೇಂದ್ರವಾಗಿಯೂ ಹೆಸರು ಮಾಡಿದೆ.

'ಟೀಕು' ಎಂದರೆ ಒಂದು ಕೃತಿಯ ಅರ್ಥ-ಭಾವ-ಉದ್ದೇಶಗಳನ್ನು ವಿವರಿಸಿ ಹೇಳುವ ಒಂದು ಸಾಹಿತ್ಯ ಪ್ರಕಾರವೆಂದು ಸ್ಥೂಲವಾಗಿ ಹೇಳಬಹುದು. ಕಾವ್ಯಸೃಷ್ಟಿಯ ಬೆನ್ನಹಿಂದೆ ಹುಟ್ಟಿಕೊಂಡ ಕಾವ್ಯಮೀಮಾಂಸೆ; ವಿಮರ್ಶೆಗಳ ಗುಂಪಿಗೆ ಸೇರುವ ಮತ್ತೊಂದು ಪ್ರಕಾರ; 'ಟೀಕಾ ಸಾಹಿತ್ಯ'. ಈ ಸಾಹಿತ್ಯದಲ್ಲಿ ಮೀಮಾಂಸೆಯ ರಸ-ಧ್ವನಿ-ಗುಣ-ಔಚಿತ್ಯ ಮುಂತಾದ ಕಾವ್ಯಪ್ರಸ್ಥಾನಗಳನ್ನು ಪ್ರಮಾಣೀಕರಿಸುವುದರ ಜೊತೆಗೆ; ಒಂದು ಸಾಹಿತ್ಯ ಕೃತಿಯ ಶಬ್ದಾರ್ಥ ಹಾಗೂ ಭಾವಾರ್ಥಗಳನ್ನು ತಡಕಿ ನೋಡುವ ವಿಮರ್ಶಾ ದೃಷ್ಟಿಯನ್ನು ತನ್ನ ತೆಕ್ಕೆಯಲ್ಲಿ ಅವುಚಿಕೊಂಡು ಬೆಳೆಯುತ್ತದೆ; 'ಟೀಕಾ ಸಾಹಿತ್ಯ'.

ಕರ್ನಾಟಕದಲ್ಲಿ ಶಾಸ್ತ್ರ, ವೇದ,ಇತಿಹಾಸ, ಪುರಾಣಗಳಂತೆ, ಟೀಕಾ ಸಾಹಿತ್ಯ ಪಠ್ಯಕ್ರಮದ ಶೈಕ್ಷಣಿಕ ಅಧ್ಯಯನದ ವಿಷಯವಾಗಿದ್ದಂತೆ ತೋರುತ್ತದೆ. ಇದಕ್ಕೆ ನಿದರ್ಶನವಾಗಿ ೧೧ನೇ ಶತಮಾನದ ಕಾಡಿಯೂರಿನ ಆಗ್ರಹಾರದಲ್ಲಿ ಕಲಿಯುತ್ತಿದ್ದ ವಿಷಯವನ್ನು ಶಾಸನ ಹೀಗೆ ವಿವರಿಸುತ್ತದೆ.

ವ್ಯಾಕರಣಮರ್ಥ ಶಾಸ್ತ್ರ
ನೀಕಂ ಸಾಹಿತ್ಯ ವಿದ್ಯೇಯಿತಿಹಾಸಂ ಮಿ
ಕ್ಕೇಕಾಕ್ಷರ ಮಿನಿ ತರ್ಕ
ಟೀಕಂ ಬರೆಯಲ್ ಸಮಗ್ರರಭ್ಯಾಸಿಸುವರ್

- ಎಂಬಂತೆ ಪರಿಣಿತಿ ಹೊಂದಿದ್ದರು; ಹಾಗೆಯೇ ಬಳ್ಳಿಗಾವೆಯ ಕೋಡಿಮಠ 'ಶಬ್ದಾನುಶಾಸನಾದಿ ವ್ಯಾಕರಣ ವ್ಯಾಖ್ಯಾನ, ಷಡುದರ್ಶನ ವ್ಯಾಖ್ಯಾನ, ಪಾತಂಜಳಾದಿ ಯೋಗ ಶಾಸ್ತ್ರ ವ್ಯಾಖ್ಯಾನ ಸ್ಥಾನವಾಗಿದ್ದಿತ್ತೆಂಬುದನ್ನು ಗಮನಿಸಬಹುದು. ಕರ್ನಾಟಕ ದಲ್ಲಿ ಟೀಕಿನ ಮಠಗಳು, ಟೀಕಾಚಾರ್ಯರು ಇದ್ದರೆಂಬುದಕ್ಕೆ ಬಾಗಲಕೋಟೆಯ ತೆಂಗಿನ

ಮಠ ಮೂಲತಃ ಟೀಕಿನ ಮಠವಾಗಿದೆ; ಅದೇ ರೀತಿ ಕನ್ನಡ ಸಾಹಿತ್ಯಚರಿತ್ರೆಯಲ್ಲಿ ೧೫೦ಕ್ಕೂ ಹೆಚ್ಚು ವೀರಶೈವ ಟೀಕಾಚಾರ್ಯರು, ೩೫ಕ್ಕೂ ಹೆಚ್ಚು ಜೈನ ಟೀಕಾಚಾರ್ಯರು, ೬೨ಕ್ಕೂ ಹೆಚ್ಚು ವೈದಿಕ ಟೀಕಾಚಾರ್ಯರು ಕಂಡು ಬರುತ್ತಾರೆ. ಹೀಗಾಗಿ ಪ್ರಾಚೀನ ಕಾಲದ ಅಧ್ಯಯನ ಶಿಸ್ತಾಗಿ 'ಟೀಕಾ ಸಾಹಿತ್ಯ' ಬೆಳೆದು ಬಂದಿದೆ.

'ಟೀಕು' ಎಂಬುದನ್ನು ಪ್ರಾಕೃತ (ಜೈನ) ಸಾಹಿತ್ಯದಲ್ಲಿ ಚೂರ್ಣಿ (ಚುಣ್ಣಿ ಇದು ಗದ್ಯಾತ್ಮಕ ಟೀಕು) ನಿರ್ಯುಕ್ತಿ (ನಿಜ್ಜುತ್ತಿ - ಇದು ಪದ್ಯಾತ್ಮಕ ಟೀಕು), ಪಂಚಿಕೆ (ಪದ್ಧತಿ - ವೃತ್ತಿ, ಸೂತ್ರ, ಕೊಷ್ಟಪದಗಳಿಗೆ ಬರೆದ ವಿರವಣಾತ್ಮಕ ಬೇಕು) ಎಂಬ ಹೆಸರುಗಳಿಂದ ಗುರುತಿಸುತ್ತಾರೆ. ಸಂಸ್ಕೃತ (ವೈದಿಕ) ಸಾಹಿತ್ಯದಲ್ಲಿ ವ್ಯಾಖ್ಯಾನ, ಭಾಷ್ಯ, ವಾರ್ತಿಕ, ಅಧಿಕರಣ, ನಿರ್ಣಯ, ನ್ಯಾಸ, ವೃತ್ತಿ ಎಂಬ ಹೆಸರುಗಳಿಂದ ಕರೆಯುತ್ತಾರೆ. ಕನ್ನಡ (ವೀರಶೈವ) ಸಾಹಿತ್ಯದಲ್ಲಿ ಸಾರ, ಟಿಪ್ಪಣಿ, ಸಾರಾರ್ಥ, ಸಾರಾಮೃತ, ವಾಚ್ಯ,ನುಡಿ, ವಚನಾಗಮ, ಪ್ರವಚನ, ಸಂಕಲ (ಸಂಕಲನಯುಗ), ಅನ್ವಯ ಎಂಬ ಹೆಸರುಗಳಿಂದ ಹೆಸರಿಸುತ್ತಾರೆ.

೧೨ನೆಯ ಶತಮಾನದ ವಚನಸಾಹಿತ್ಯ ಕಲ್ಯಾಣಕ್ರಾಂತಿಯಿಂದ ಅಲ್ಲಲ್ಲಿ ಚದುರಿ ಹೋಯಿತು. ಅದನ್ನು ಮತ್ತೆ ಸಂಗ್ರಹಿಸುವ, ಸಂರಕ್ಷಿಸುವ, ವಿಶ್ಲೇಷಿಸುವ ಕಾರ್ಯಕ್ಕೆ ವಿಜಯನಗರ ಮುಖ್ಯಕೇಂದ್ರವಾಯಿತು. ಪ್ರೌಢದೇವರಾಯನ ನೇತೃತ್ವದಲ್ಲಿ ಅನೇಕ ಜನ ದಂಡಾಧಿಪತಿಗಳು, ಮಠಾಧಿಪತಿಗಳು, ಅನುಭಾವಿ ವಿರಕ್ತರು ವಚನ ಸಾಹಿತ್ಯದ ಪುನರುಜ್ಜೀವನ, ಹೊಸಸಾಹಿತ್ಯ, ಸೃಷ್ಟಿ, ನೂತನ ಸಾಹಿತ್ಯ ಪ್ರಕಾರಗಳ ಹುಟ್ಟು, ವಚನ ಹಾಗೂ ಕಾವ್ಯಗಳಿಗೆ ಟೀಕೆ, ಸ್ಥಲ ಕಟ್ಟು ಜೋಡನೆ, ತಾತ್ವಿಕ ವಿವರಣೆ, ವಿವೇಚನೆ ಕಾರ್ಯದಲ್ಲಿ ತೊಡಗಿದರು. ಅಧ್ಯಯನದ ಅನುಕೂಲಕ್ಕಾಗಿ ಈ ಕಾಲದ ಸಾಹಿತ್ಯವನ್ನು ಕಾವ್ಯಸಾಹಿತ್ಯ, ವಚನ - ಸ್ವರ ವಚನಸಾಹಿತ್ಯ, ಸ್ಥಳಕಟ್ಟು ಸಾಹಿತ್ಯ, ಟೀಕಾ ಸಾಹಿತ್ಯ ಎಂದು ವರ್ಗೀಕರಿಸಿಕೊಳ್ಳಬಹುದು. ಈ ಟೀಕಾಕಾರರಲ್ಲಿ

೧. **ಮಹಾಲಿಂಗದೇವ :** ಈತನು ಸಂಕಲಿಸಿದ ಕೃತಿ ಏಕೋತ್ತರ ಶತಸ್ಥಲ. ವಚನ ಸಂಕಲನದ ಪರಂಪರೆಗೆ ಕಾರಣವಾದ ಆದ್ಯಪುರುಷನೀತ. ಪುಲಿಗೆರೆಯವನಾದ ಈತ ವೇದಶಾಸ್ತ್ರಾಗಮಕೋವಿದ, ವೀರಶೈವಾಗಮಚಾರ್ಯ ನೆನೆಸಿಕೊಂಡಿದ್ದಾನೆ. ಕ್ರಿ.ಶ. ೧೪೩೦ರಲ್ಲಿ ಈತನಿಗೆ ವಾರಣಾಸೀಂದ್ರ ಎಂಬ ಪರ್ಯಾಯನಾಮ ಇರುವುದು ತಿಳಿದು ಬರುತ್ತದೆ. ಈತನ ಏಕೋತ್ತರ ಶತಸ್ಥಲ ಕೃತಿ ಅಂಗಸ್ಥಲ ೪೪, ಲಿಂಗಸ್ಥಲ ೫೭ ಒಟ್ಟು ನೂರೊಂದು ಸ್ಥಳಗಳಲ್ಲಿ ೧೪೭೫ ವಚನಗಳನ್ನು ಸಂಗ್ರಹಿಸಿದ ಈ ಕೃತಿಯನ್ನು ಸ್ಥಲಕಟ್ಟು, ಸ್ಥಲವಚನ, ಸ್ಥಲ ಸೂತ್ರಗಳು, ಸ್ಥಲ ನಿರ್ದೇಶನ ಪದಗಳು ಎಂಬ ನಾಲ್ಕು ವಿಭಾಗಗಳಲ್ಲಿ ಅಧ್ಯಯನಕ್ಕೊಳಪಡಿಸಬಹುದಾಗಿದೆ.

ಇದು ಟೀಕಾ ಸಾಹಿತ್ಯ ಕೃತಿಯಲ್ಲದಿದ್ದರೂ ಮುಂದಿನ ಟೀಕಾಕಾರರಿಗೆ ಉತ್ತಮ ತಳಹದಿಯನ್ನೆ ಹಾಕಿತೆನ್ನಬಹುದು. ಶರಣರ ವಚನಗಳ ಮೂಲಕ ವೀರಶೈವ ಸಿದ್ಧಾಂತ ರಹಸ್ಯವನ್ನು ೧೦೧ ಸ್ಥಲಗಳಲ್ಲಿ ಶ್ರುತಪಡಿಸಿದ ಕಾರಣ ಮುಂದಿನ ಟೀಕಾಕಾರರಿಗೆ ಈತನ ಕೃತಿ ಅಧ್ಯಯನ ಯೋಗ್ಯವಾಯಿತೆಂದು ಹೇಳಬಹುದು.

ಈತನಿಂದಲೇ ರಚನೆಗೊಂಡ 'ಪ್ರಭುದೇವರ ಷಟ್ಸ್ಥಲ ವಚನ ವ್ಯಾಖ್ಯಾನ' ಎಂಬ ಕೃತಿಯ ಕುರಿತು ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಅದೇನೇ ಇದ್ದರೂ ಇಲ್ಲಿನ ಟೀಕಿನ ವಚನಗಳ ಸಂಖ್ಯೆ ೬೯೪.

೨. ಜಕ್ಕಣಾರ್ಯ : ಈತನ ಕೃತಿ 'ನೂರೊಂದು ಸ್ಥಲ'. ಇದನ್ನು 'ಸ್ವರವಚನಗಳ ಪಾರಿಭಾಷಿಕ ಪದಕೋಶ'ವೆಂದು ಕರೆಯುತ್ತಾರೆ. ಈತನ ವಿಶೇಷವೆಂದರೆ ವಚನಗಳ ಜೊತೆಗೆ ಬಸವಾದಿ ಪ್ರಮಥರ ಸ್ವರವಚನಗಳನ್ನು ಸಂಕಲಿಸಿದುದು, ಮತ್ತು ಅವುಗಳಿಗನು ಗುಣ ವಾಗಿ ಸೂತ್ರವಿಟ್ಟುದು. ಈ ಕೃತಿ ರಚನೆಗೆ ಕಾರಣವನ್ನು ಅದ್ರೀಶಕವಿಯ 'ಪ್ರೌಢ ದೇವರಾಯನ ಕಾವ್ಯ' ಹೀಗೆ ಉಲ್ಲೇಖಿಸುತ್ತದೆ.

ರಾಜಿಸುವ ವಿದ್ಯಾನಗರ ವಾಳುವಂ ಪ್ರೌಢಭೂವರ ಚಂದ್ರನು
ಕಪ್ಪುಗೊರಳನ ಭಕ್ತ ಜಕ್ಕಣಾರ್ಯ ಜನ
ದೊಪ್ಪಿನಲಿ ಮಂತ್ರಿತನಮಮಂ ನಡೆಸುತಿರಲಲ್ಲಿ
ಇಪ್ಪರಾ ಮುಕ್ಕುಂದ ಪೆದ್ದಿ ವೃಂದಾಚಾರ್ಯರೆಂಬ ವೈಷ್ಣವ ಗುರುಗಳು

(ಸಂಧಿ ೧ ಪದ್ಯ ೩೯)

ಪ್ರಮಥ ಗಣ ಪ್ರಭುಸ್ವಾಮಿ ಪೇಳ್ದ ವಚನಂಗಳಿಗೆ
ಕ್ರಮದಿ ಏಕೋತ್ತರಶತಸ್ಥಲ ಸೂತ್ರಗಳನಿಟ್ಟು
ರಮಣೀಯಮವಾಗಿ ವಸ್ತುಕ ವರ್ಣಕಗಳಿಂದ ವ್ಯಾಖ್ಯಾನಂಗಳ ಮಾಡುತ

(ಸಂಧಿ ೧ ಪದ್ಯ ೪೧)

ಈ ಮೇಲಿನ ಪದ್ಯಗಳಿಂದ ತಿಳಿದು ಬರುವುದೇನೆಂದರೆ ಅನಾಸಕ್ತ, ಅನ್ಯಮತೀಯ ರಿಂದ ಶರಣರ ಬೆಡಗಿನ ವಚನಗಳು ಅಪಾರ್ಥಕ್ಕೆಡೆಗೊಟ್ಟಿದ್ದವು. ಇಂಥ ಸಂದರ್ಭದಲ್ಲಿ ವಚನಗಳನ್ನು ನೂರೊಂದು ಸ್ಥಳಕ್ಕಳವಡಿಸಿ, ಸೂತ್ರವಿಟ್ಟು, ಸಂಗ್ರಹಿಸಿದ್ದೂ ಅಲ್ಲದೆ, ಸ್ಥಲಕ್ಕೊಂದರಂತೆ ಆಯಾಸ್ಥಲದ ವಚನಗಳ ಒಟ್ಟು ಭಾವವನ್ನು ಕೂಡಿಸಿ ಸ್ಥಲ ನಿರ್ದೇಶನ ಪರವಾದ ಹಾಡುಗಳನ್ನು ನಿರೂಪಿಸಿದ್ದಾರೆ. ಸ್ಥಲಸೂತ್ರ ಹಾಗೂ ಸ್ಥಲ ವಚನ ಗಳಿಂದ ವಸ್ತುಕ ರೂಪದ ವ್ಯಾಖ್ಯಾನ ಇಲ್ಲವೇ ಟೀಕಾ ಕೃತಿಯಾಗಿ, ಸ್ವರವಚನಗಳಿಂದಾಗಿ ವರ್ಣಕರೂಪದ ವ್ಯಾಖ್ಯಾನ ಕೃತಿಯಾಗಿ 'ನೂರೊಂದು ಸ್ಥಲ' ಪರಿಣಮಿಸಿತು. ಶರಣರ ವಚನಗಳಿಗೆ ಪಲ್ಲವಿ, ಅನುಪಲ್ಲವಿ, ರಾಗ, ತಾಳ ಮಾನಗಳಿಂದೊಡಗೂಡಿದ ಸ್ವರ ವಚನಗಳ ಸಂಯೋಜನೆಯಿಂದಾಗಿ ವಚನ ಸಾಹಿತ್ಯಕ್ಕೆ ಶಾಸ್ತ್ರ - ಸಾಹಿತ್ಯ ಹಾಗೂ ಸಂಗೀತವೆಂಬ ಮೂರು ಹೆಗ್ಗಳಿಕೆಯನ್ನು ತಂದುಕೊಟ್ಟನೀತ.

೩.ಕುಮಾರ ಬಂಕನಾಥ: 'ಪ್ರಭುದೇವರ ಷಟುಸ್ಥಲಜ್ಞಾನ ಚಾರಿತ್ರ ವಚನದ ಟೀಕು' ಈತನ ಕೃತಿ. ಪ್ರಭುದೇವರ ವಚನಗಳ್ನು ಷಟ್ಸ್ಥಲ ಕ್ರಮದಲ್ಲಿ ಸಂಯೋಜಿಸಿ, ವ್ಯಾಖ್ಯಾನಿಸಿರುವುದಾಗಿ ಕೃತಿಯ ಆರಂಭದಲ್ಲಿ ಹೇಳಿಕೊಂಡಿದ್ದಾನೆ.

ಘನ ವೀರಶೈವಕ್ಕೆ ಮುಖ್ಯ ಇಪ್ಪತ್ತುವೊಂ
ದನೆಯ ಗುರು ಸಂಪ್ರದಾಯಿಕ ಶ್ರೇಷ್ಠ ಸುಕುಮಾರ
ಕನು ಬಂಕನಾಥ.... '

ಎಂಬ ಪ್ರೌಢದೇವರಾಯನ ಕಾವ್ಯದ (ಸಂಧಿ - ೧, ಪದ್ಯ ೪೦) ಹೇಳಿಕೆಯಿಂದ ಸಂಕಲನಕಾರ ಮಹಲಿಂಗ ದೇವರ ಗುರು ಪರಂಪರೆಯಲ್ಲಿ ೨೧ನೆಯವನು. ಈತನ ಶಿಷ್ಯ ಜಕ್ಕಣಾರ್ಯ. ಪ್ರಭುದೇವರ ಷಟ್ಸ್ಥಲ ಸಂಬಂಧಿ ೬೯೪ ವಚನಗಳಿಗೆ ಟೀಕು ಬರೆಯುತ್ತಾನೆ. ವಚನಗಳ ಸಾಲು ಸಾಲುಗಳನ್ನು ಅರ್ಥೈಯಿಸುವಾಗ 'ಎಂಬುದೀಗ ದ್ರಷ್ಟ' 'ಎಂಬುದೀಗ ವಚನಾರ್ಥ' 'ಎಂಬ ವಚನಾನ್ವಯ' 'ನಿರ್ವಚನ ಎಂಬುದೀ ವಚನ ತಾತ್ಪರ್ಯ' ಎಂದು ಉಲ್ಲೇಖಿಸುವಲ್ಲಿ `ಟೀಕು' ಎಂಬುದಕ್ಕೆ ದ್ರಷ್ಟ, ಅರ್ಥ, ಅನ್ವಯ, ನಿರ್ವಚನ, ತಾತ್ಪರ್ಯ ಎಂಬ ವಿವಿಧ ಪರ್ಯಾಯ ಪದಗಳನ್ನು ಟಂಕಿಸಿದ್ದಾನೆ.

೪. ಶ್ರೀಗಿರೀಂದ್ರ: ಜಕ್ಕಣಾರ್ಯನ 'ನೂರೊಂದು ಸ್ಥಲ ಕೃತಿಗೆ' ಈತ ಟೀಕೆಯನ್ನು ಬರೆದಿದ್ದಾನೆ. ಈ `ಟೀಕಾ ಕೃತಿಯನ್ನು ಸ್ವರವಚನಗಳ ಪಾರಿಭಾಷಿಕ ಪದಕೋಶವೆಂದು ಕರೆಯಲಾಗಿದೆ. ಇಲ್ಲಿ ಸೂತ್ರವೆಂದರೇನು? ಪಲ್ಲವಿಯೆಂದರೇನು? ಸ್ವರ ವಚನವೆಂದರೇನು? ಸ್ಥಲವೆಂದರೇನು? ತಾಳ - ರಾಗಗಳೆಂದರೇನು? ಎಂಬತ್ಯಾದಿ ಸಾಹಿತ್ಯ ಗುಣಲಕ್ಷಣಗಳನ್ನು ತನ್ನ ವ್ಯಾಖ್ಯಾನ ಕೃತಿಯ ಮೂಲಕ ಈತ ಚರ್ಚಿಸಿದ್ದಾನೆ.

೫. ಕಲ್ಲುಮಠದ ಪ್ರಭುದೇವ: ವಿಜಯನಗರದ ಕಲ್ಲುಮಠಕ್ಕೆ ಅಧಿಪತಿಯಾಗಿದ್ದ ಈತನಿಂದ 'ಲಿಂಗಲೀಲಾ ವಿಲಾಸ ಚಾರಿತ್ರ' ಹಾಗೂ 'ಪ್ರಭುದೇವರ ಮಂತ್ರಗೋಪ್ಯದ ಟೀಕಾ' ಕೃತಿಗಳು ರಚನೆಯಾಗಿವೆ. ಪುರಾತನ ವಚನ ಏಳುನೂರು ಎಪ್ಪತ್ತು ತೆಗೆದುಕೊಂಡು ಷೋಡಶ (೧೬ ಸ್ಥಲ) ಸ್ಥಲ ಪರಿಕ್ರಮದಿಂದ ಸೇರಿಸಿ ವ್ಯಾಖ್ಯಾನ ಮಾಡಿರುವುದಾಗಿ ಹೇಳಿಕೊಂಡಿದ್ದಾನೆ.

ಈ ಕೃತಿಯನ್ನು ವಿಷಯಕ್ಕನುಗುಣವಾಗಿ ಸ್ಥಲ ನಿರ್ದೇಶನ, ಸೂತ್ರ ನಿರೂಪಣ, ಶ್ಲೋಕ ಭಾಗಗಳು, ವಚನ ಸಂಕಲನ, ಟೀಕೆ ಅಥವಾ ತಾತ್ಪರ್ಯ ಎಂದು ವಿಭಾಗಿಸಬಹುದಾಗಿದೆ. ಇದರಿಂದ ವಚನ ಸಾಹಿತ್ಯ ಈತನಲ್ಲಿ 'ವಚನಾಗಮ' ಮನ್ನಣೆಯನ್ನು ಪಡೆದುಕೊಂಡಿತು.

ಸಿದ್ಧಾಂತ ಹಾಗೂ ಶಿವಯೋಗ ಪ್ರತಿಪಾದನಾನುಸಾರವಾಗಿ ಮಂತ್ರಗೋಪ್ಯ ಸಾಹಿತ್ಯ ಸೃಷ್ಟಿಯಾಗಿದೆ. ಇಂದು ಕನ್ನಡದಲ್ಲಿ ಚನ್ನಬಸವಣ್ಣ, ಪ್ರಭುದೇವ, ಹಡಪದ ಲಿಂಗಮ್ಮ,

ಅಪ್ಪಣ್ಣ, ಜಕ್ಕಣ್ಣಯ್ಯ, ಮುರಿಗಾಗುರುಸಿದ್ಧರು (ಶಭ್ಯಮಂತ್ರಗೋಪ್ಯ) ಮುಂತಾದವರಿಂದ ಈ ಸಾಹಿತ್ಯ ಸೃಷ್ಟಿಯಾಗಿದೆ. ಕಲ್ಲು ಮಠದ ಪ್ರಭುದೇವರು ಅಲ್ಲಮ ಪ್ರಭುದೇವರ ೨೭ ನುಡಿಗಳನ್ನೊಳಗೊಂಡ ಮಂತ್ರಗೋಪ್ಯಕ್ಕೆ ಟೀಕು ಬರೆದಿದ್ದಾರೆ.

೬.ಗುಬ್ಬಿಯ ಮಲ್ಲಣಾರ್ಯ : (ಕ್ರಿ.ಶ. ೧೪೩೦) ಪುರಾಣಕಾರನೂ, ವ್ಯಾಖ್ಯಾನಕಾರನೂ ಆದ ಗುಬ್ಬಿಯ ಮಲ್ಲಣಾರ್ಯ ಗಣಭಾಷ್ಯಮಾಲೆ, ವಾತುಲ ತಂತ್ರಟೀಕೆ ಎಂಬ ಟೀಕಾ ಕೃತಿಗಳನ್ನು ರಚಿಸಿದ್ದಾನೆ. ೧೦೧ ಸ್ಥಲಗಳಿಂದ ಕೂಡಿದ ಗಣಭಾಷ್ಯೆ ಮಾಲೆಯಲ್ಲಿ ಪ್ರತಿಸ್ಥಲದ ಆರಂಭದಲ್ಲಿ ಕನ್ನಡದ ಅವತರಣಿಕೆ, ನಂತರ ಸಂಸ್ಕೃತ ಶ್ಲೋಕ, ಆ ಶ್ಲೋಕಗಳಿಗೆ ಟೀಕು, ನಂತರ ವಚನಗಳನ್ನು ನೀಡಿ ಸ್ಥಲ ಮುಗಿಸಿರುವುದು ಈತನ ಟೀಕಾಕೃತಿಯ ಶಿಲ್ಪವಾಗಿದೆ.

೭. ಮಗ್ಗೆಯ ಮಾಯಿದೇವ : ವೀರಶೈವಾಮೃತ ಪುರಾಣದಿಂದ ಈತ `ಪ್ರಭುಗೀತೆ' ಬರೆದುದಾಗಿ ತಿಳಿದು ಬರುತ್ತದೆ.

ವಿದ್ಯಾನಗರಿಯಲ್ಲಲ್ಲಮ ಪ್ರಭುದೇವ
ಹೃದ್ಯವಚನನೊಗಟಿಯನಲಾಗ ನೃಥ ಸಭಾ
ವೇದ್ಯ ವಪ್ಪಂತೆ ವೇದಾಗಮಾರ್ಥ ನಿಘಂಟು ಸಮ್ಮತ ಪ್ರಭುಗೀತೆಯಾ"

ಇದರಿಂದ ವಿದ್ಯಾನಗರಿಯ ಪ್ರಭುದೇವ (ಅಂದರೆ ಕಲ್ಲು ಮಠದ ಪ್ರಭುದೇವರ ಲಿಂಗಲೀಲಾ ವಿಲಾಸ ಚಾರಿತ್ರದ) ವಚನಗಳಿಗೆ ವೇದ, ಆಗಮ, ನಿಘಂಟು ಸಮ್ಮತವಾದ ವ್ಯಾಖ್ಯಾನವನ್ನು ಮಾಯಿದೇವ ಬರೆದಂತೆ ತೋರುತ್ತದೆ.

ಸಮಾರೋಪ

೧. ಈ ಮೇಲಿನ 'ಟೀಕಾಕಾರರನ್ನು ಅವರ ಸಾಹಿತ್ಯವನ್ನು ಗಮನಿಸಿದಾಗ ವೀರಶೈವ ಟೀಕಾಸಾಹಿತ್ಯದ ಶಿಷ್ಯ - ಪ್ರಶಿಷ್ಯರ ಪರಂಪರೆ ಇಲ್ಲಿ ಕಂಡು ಬರುತ್ತದೆ. ಮಹಾಲಿಂಗದೇವ ವಚನಗಳನ್ನು ನೂರೊಂದು ಸ್ಥಳಗಳಿಗೆ ಸಂಯೋಜಿಸಿಕೊಟ್ಟರೆ ಈತನ ಶಿಷ್ಯ ಕುಮಾರ ಬಂಕನಾಥ ಈ ಸಂಕಲನಕ್ಕೆ ಟೀಕು ರಚಿಸಿದ್ದಾನೆ. ಅದೇ ರೀತಿ ಜಕ್ಕಣಾರ್ಯನ 'ನೂರೊಂದು ಸ್ಥಲ'ದ ಸಂಯೋಜನಾ ಕೃತಿಗೆ ಈತನ ಶಿಷ್ಯ ಶ್ರೀ ಗಿರೀಂದ್ರ ಟೀಕು ಬರೆದಿದ್ದಾನೆ. ಹೀಗಾಗಿ ಟೀಕಾ ಸಾಹಿತ್ಯದಲ್ಲಿ ಮಹಾಲಿಂಗದೇವರ ಪರಂಪರೆ, ಕಲ್ಲು ಮಠದ ಪ್ರಭುದೇವರ ಪರಂಪರೆ ವಿಜಯನಗರದಲ್ಲಿ ಕಂಡು ಬರುತ್ತದೆ.

೨. ೧೨ನೆಯ ಶತಮಾನದ ನಂತರ ಶಿವಶರಣರ ವಚನಗಳು ಸಂಕಲನ ಹಾಗೂ ಸಂಪಾದನಾಗಳೆಂಬ ಎರಡು ಸ್ಥಿತ್ಯಂತರಗಳನ್ನು ಪಡೆದುಕೊಂಡಿತು. ಇಲ್ಲಿ ಏಕೋತ್ತರ ಶತಸ್ಥಲದ ಮೂಲಕ ಸಂಕಲನ ಸಮಯವಾಗಿ ವಚನ ಸಾಹಿತ್ಯ ಟೀಕಾಸಾಹಿತ್ಯಧ್ಯಯನದ ಹುಟ್ಟಿಗೆ ಕಾರಣವಾದಂತೆ, ಶೂನ್ಯ ಸಂಪಾದನೆಗಳ ಮೂಲಕ ಸಂಪಾದನಾ ಸಮಯವಾಗಿ

ವಚನ ಸಾಹಿತ್ಯ ಪ್ರಸಂಗ ಸಾಹಿತ್ಯಾಧ್ಯಯನದ ನಿರ್ಮಾಣಕ್ಕೆ ಹಾದಿ ಮಾಡಿಕೊಟ್ಟಿದೆ.

೩. ಏಕೋತ್ತರ ಶತಸ್ಥಲ ವೆಂಬ ವಚನ ಸಿದ್ಧಾಂತ ಕೃತಿ ಸಂಕಲನ ಸಮಯದಲ್ಲಿ ಮುಂದಿನ ಶೂನ್ಯ ಸಂಪಾದನೆಗಳಷ್ಟೇ ಮಹತ್ವಾಕಾಂಕ್ಷೆಯಿಂದ ರಚನೆಗೊಂಡಂತಾಗಿದೆ. ಉದಾ : ಮಹಾಲಿಂಗದೇವನ ಏಕೋತ್ತರ ಶತಸ್ಥಲ, ಜಕ್ಕಣಾರ್ಯನ ನೂರೊಂದು ಸ್ಥಲ, ಗುಬ್ಬಿಮಲ್ಲಣ್ಣನ ನೂರೊಂದು ಸ್ಥಲ ವಿವೇಚನೆಯ ಗಣಭಾಷ್ಯಮಾಲೆ. (ಇಲ್ಲಿ ಗಣ ಅಂದರೆ ಸ್ಥಲ ಭಾಷ್ಯೆಯೆಂದರೆ ಟೀಕು) ಪ್ರಭುದೇವರಲಿಂಗಾಲೀಲಾವಿಲಾಸದ ಟೀಕಾ ಕೃತಿ ಏಕೋತ್ತರ ಸ್ಥಲ ನಿರ್ದೇಶನವನ್ನು ಪ್ರತಿಪಾದಿಸುತ್ತವೆ.

೪. ಟೀಕಾ ಸಾಹಿತ್ಯವನ್ನು ಅವಲೋಕಿಸಿದಾಗ ೧೨ನೆಯ ಶತಮಾನದ ವಚನಕಾರರ ಸಾಮಾಜಿಕ ಮುಖ ಗೌಣವಾಗಿ ಇಲ್ಲವೇ ಉಪೇಕ್ಷೆಗೆ ಒಳಗಾಗಿ ಕೇವಲ ಪಾರಮಾರ್ಥಿಕ ವಚನಗಳು ಅಲೌಕಿಕ ನೆಲೆಯಲ್ಲಿ ಅಧ್ಯಯನಕ್ಕೊಳಪಟ್ಟವು. ಅಂದರೆ ಲೌಕಿಕವನ್ನು ಹೊರತು ಪಡಿಸಿದ ಸಿದ್ಧಾಂತ ಮಾರ್ಗ ಇಲ್ಲವೇ ಸಾಧನ ಮಾರ್ಗವಾಗಿ ವಚನಗಳನ್ನು ನಿರ್ವಹಿಸುವ ಉಪಕ್ರಮ ಕಂಡು ಬರುತ್ತದೆ.

೫. ಸಾಸುವೆಯಲ್ಲಿ ಅಡಗಿದ ಸಾಗರದ ವಿಸ್ತಾರವನ್ನು ಟೀಕಾ ಸಾಹಿತ್ಯ ಹರಿಬಿಟ್ಟಿರುವುದನ್ನು ನೋಡಬಹುದು. ಉದಾಹರಣೆಗೆ ಅಲ್ಲಮ ಪ್ರಭುವಿನ ಶಿಲೆಯೊಳಗಣ ಪಾವಕನಂತೆ, ಉದಕದೊಳಗಣ ಪ್ರತಿಬಿಂಬದಂತೆ, ಬೀಜದೊಳಗಣ ವೃಕ್ಷದಂತೆ ಟೀಕಾ ಸಾಹಿತ್ಯದ ವಿಸ್ತಾರ ಬೆಳೆಯುತ್ತದೆ. ಇಂತಹ ನೂರಾರು ಟೀಕಾ ಕೃತ ವಚನಗಳು ಈ ಸಾಹಿತ್ಯದ ಲಕ್ಷ್ಯ ಪದ್ಯವೋ ಆಗುತ್ತವೆ ; ಲಕ್ಷಣ ಪದ್ಯವೂ ಆಗುತ್ತವೆ.

೬. ಈ ಯುಗದ ಟೀಕಾ ಸಾಹಿತ್ಯ ಏಕಾರ್ಥ, ಉಭಯಾರ್ಥ, ವಾಚ್ಯರ್ಥ, ತಾತ್ವಿಕಾರ್ಥ, ತಾತ್ಪರ್ಯಾರ್ಥ, ವಿಶಿಷ್ಟಪದಾರ್ಥ ಸ್ವರೂಪದಲ್ಲಿ ತನ್ನ ಎಲ್ಲೆಯನ್ನು ವಿಸ್ತರಿಸಿಕೊಂಡಿದೆ.

೭. ಟೀಕಾ ಸಾಹಿತ್ಯ ಗದ್ಯದಲ್ಲಿರುವುದರಿಂಮದ 'ವ್ಯಾಖ್ಯಾನಗದ್ಯ' ಎಂಬ ವಿಶಿಷ್ಟ ಪ್ರಕಾರವೊಂದನ್ನು ಅನುಷ್ಠಾನಗೊಳಿಸಿದ ಶ್ರೇಯಸ್ಸು ಇಲ್ಲಿ ಟೀಕಾಕಾರರಿಗೆ ಸಲ್ಲುತ್ತದೆ.

೮. ಟೀಕಾ ಸಾಹಿತ್ಯದ ನೆಪದಲ್ಲಿ ಸಾವಿರಾರು ವಚನಗಳನ್ನು, ವಚನ ಕಾರರನ್ನು ದಾಖಲಿಸಿದ ಇವರು ಕಾವ್ಯೋಕ್ತ ಕನ್ನಡ ಕವಿಚರಿತೆಯ ನಿರ್ಮಾಣಕಾರರೆಂಬ ಹೆಗ್ಗಳಿಕೆಗೆ ಭಾಜನರಾಗಿದ್ದಾರೆ.

೯. ರಗಳೆ, ಷಟ್ಪದಿಗಳಿಂಥ ದೇಶಭಾಷಾ ಛಂದಸ್ಸಿಗೆ ಆದ್ಯತೆ ನೀಡಿದ ವಿಜಯನಗರ, ಕನ್ನಡ ಭಾಷೆಗೆ (ಬೆಡಗಿನ ವಚನ ಸಾಹಿತ್ಯ) ಮತ್ತು ಅನ್ಯ ಭಾಷೆಗೆ (ಸಂಸ್ಕೃತ ಸಾಹಿತ್ಯ)ಕ್ಕೆ 'ಟೀಕು - ಟಿಪ್ಪಣಿ ಬರೆಯುವುದರ ಮೂಲಕ ದೇಶ ಭಾಷೆಯ ಚರಿತ್ರೆಯಲ್ಲಿ ಅಪೂರ್ವ ಸಾಧನೆ ಗೈದಿದರೆಂಬುದನ್ನು ಹೇಳಬಹುದು.

೧೦. 'ವಚನ' ಸಂಕಲನ ಎಂದರೆ ಕೇವಲ ವಚನಗಳನ್ನು ಕೂಡಿ ಹಾಕುವುದಲ್ಲ; ಅದರ ಜೊತೆಗೆ ವರ್ಗೀಕರಣ, ಪರಿಷ್ಕರಣ ವ್ಯಾಖ್ಯಾನಗಳೆಂಬ ಗ್ರಂಥಸಂಯೋಜನಾ ಮನ್ನಣೆಯನ್ನು ಸಂಕಲನ ಸಾಹಿತ್ಯಕ್ಕೆ ನೀಡಿದರು.

೩೮. ಜೀರ್ಣವಿಜಯನಗರಾದರ್ಶಂ: ಹಂಪಿ ಕುರಿತ ಪ್ರಥಮ ಪ್ರವಾಸಿ ಕೈಪಿಡಿ

ಪ್ರೊ. ಲಕ್ಷ್ಮಣ್ ತೆಲಗಾವಿ

ಕನ್ನಡದ ಪ್ರಕಟಿತ ಪ್ರವಾಸಕಥನಗಳ ಪೈಕಿ ೧೮೯೦ರಲ್ಲಿ ಪ್ರಕಟಗೊಂಡ 'ದಕ್ಷಿಣ ಯಾತ್ರಾ ಚರಿತ್ರೆ' ಎಂಬುದು ಪ್ರಥಮ ಕೃತಿಯೆಂಬ ಅಭಿಪ್ರಾಯವಿದೆ.[೧] ಇದನ್ನು ರಚಿಸಿದವನು ಉತ್ತರ 'ಕನ್ನಡ ಜಿಲ್ಲೆಯ 'ಧೀರ ಪ್ರತಿಕೋದ್ಯಮಿ' ಹಾಗೂ 'ಆದ್ಯ ಸಾಮಾಜಿಕ ನಾಟಕಕಾರ' ಕರ್ಕಿ ವೆಂಕಟರಮಣಶಾಸ್ತ್ರಿ ಸೂರಿ (ಸು. ೧೮೫೨-೧೮೯೨). ಇದು ಈತನ ಮೊತ್ತ ಮೊದಲ ಕೃತಿಯೂ ಹೌದು. ಈ ಕೃತಿಯಲ್ಲಿ ಉಡುಪಿಯಿಂದ ಗುರುವಾಯೂರುಗಳವರೆಗಿನ ಕ್ಷೇತ್ರಗಳನ್ನು ಒಂದೊ ಎರಡೊ ಪದ್ಯಗಳಲ್ಲಿ ವರ್ಣಿಸಲಾಗಿದೆ. ೩೭ ಪದ್ಯಗಳ, ಅಂಗೈಯಗಲದ ಪುಸ್ತಕವಿದು.[೨] ಆದರೆ ವಿಮರ್ಶಕರು ವಿ.ಸೀ. (ವಿ. ಸೀತಾರಾಮಯ್ಯ) ಅವರ 'ಪಂಪಾಯಾತ್ರೆ'ಯನ್ನೇ ಕನ್ನಡದ ಮೊತ್ತ ಮೊದಲ ಪ್ರವಾಸ ಕಥನವೆಂದು ಭಾವಿಸಿರುವುದುಂಟು.[೩] ಇದು ೨೦ ನೇ ಶತಮಾನಕ್ಕಷ್ಟೆ ಸಂಬಂಧಿಸಿದ ಹೇಳಿಕೆಯೆಂದರೂ ಕನ್ನಡದ ಪ್ರವಾಸಸಾಹಿತ್ಯ ಕೃತಿಗಳ ಚರಿತ್ರೆಯನ್ನು ೧೯ನೇ ಶತಮಾನದ ಕೊನೆಯ ದಶಕದಿಂದಲೇ ಗುರುತಿಸುವ ಪ್ರಯತ್ನ ನಡೆದಿದೆ. ಇಂಥಾ ಚರಿತ್ರೆಯನ್ನು ಸ್ಥೂಲವಾಗಿ ಮೂರು ಘಟ್ಟಗಳಲ್ಲಿ ವಿಂಗಡಿಸಿರುವ ವಿಮರ್ಶಕರು, ಆರಂಭದಿಂದ ವಿ.ಸೀ. ಅವರ ಕೃತಿ ಪ್ರಕಟವಾಗುವವರೆಗಿನ ಕಾಲಾವಧಿಯನ್ನು ಮೊದಲನೇ ಘಟ್ಟವೆಂತಲೂ ವಿ.ಸೀ. ಅವರ ನಂತರ ಸುಮಾರು ೧೯೫೦ರ ವರೆಗಿನ ಕಾಲಾವಧಿಯನ್ನು ಎರಡನೇ ಘಟ್ಟವೆಂತಲೂ ಆ ನಂತರದ್ದು ಮೂರನೇ ಘಟ್ಟವೆಂತಲೂ ಕರೆದಿದ್ದಾರೆ. ಮೊದಲನೇ ಘಟ್ಟದಲ್ಲಿ ಕಂಡುಬರುವ ಕೃತಿಕಾರರೆಂದರೆ ಕರ್ಕಿ ವೆಂಕಟರಮಣಶಾಸ್ತ್ರಿ ಸೂರಿ, ಜೆ. ಕೃಷ್ಣಮೂರ್ತಿ, ಕರವೀರಪ್ಪ ಅಂದಾನೆಪ್ಪ ಕುಲಕರ್ಣಿ-ಇಂಥವರು.[೪] ಸದ್ಯಕ್ಕಂತೂ ಕನ್ನಡದ ಮಟ್ಟಿಗೆ ಹಾಗೂ ವಿಮರ್ಶಕರ ಮಟ್ಟಿಗೆ, ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿಯೇ ಪ್ರಥಮ ಪ್ರವಾಸಿ ಸಾಹಿತ್ಯ ಕೃತಿಯ ಕರ್ತೃ.

ಹಾಗೆಯೇ, ವಿಶ್ವಪ್ರಸಿದ್ಧಿ ಪಡೆದಿರುವ ಹಂಪಿ ಸ್ಮಾರಕಗಳನ್ನು ಕುರಿತು ಕನ್ನಡದಲ್ಲಿರುವ ಪ್ರಥಮ ಪ್ರಕಟಿತ ಪ್ರವಾಸಿ ಕೈಪಿಡಿ ಯಾವುದಿರಬಹುದು? ಮೇಲೆಯೇ ಹೇಳಿದಂತೆ, ವಿ.ಸೀ. ಅವರ 'ಪಂಪಾಯಾತ್ರೆ'ಯೇ ಹಂಪಿ ಕುರಿತು ಮೊತ್ತ ಮೊದಲ ಪ್ರವಾಸಕಥನವೆಂದು ಸಾಮಾನ್ಯವಾಗಿ ಎಲ್ಲ ವಿಮರ್ಶಕರು ಹೇಳುತ್ತಾ ಬಂದಿದ್ದಾರೆ.

ಈ ಕೃತಿಯು ಹಂಪಿ ಮತ್ತು ಕರ್ನಾಟಕ ಯಾತ್ರೆಯ ದಿಕ್ಕಿನಲ್ಲಿ ಮೊದಲನೇ ಕೃತಿ ಮಾತ್ರವಲ್ಲದೆ, ಕರ್ನಾಟಕದಲ್ಲಿ ಪ್ರವಾಸಸಾಹಿತ್ಯ ಪ್ರಾರಂಭಗೊಂಡ ಕಾಲಕ್ಕೆ ಹೆಸರಿಸಬಹುದಾದ ಬಹುದೊಡ್ಡ ಕೃತಿಯೆಂತಲೂ ಪರಿಗಣಿಸಲ್ಪಟ್ಟಿದೆ. ಈ ಕೃತಿಯ ಶೀರ್ಷಿಕೆಯೇ ಸೂಚಿಸುವಂತೆ, ಇದು ಕೇವಲ ಹಂಪಿ ಮತ್ತು ಪರಿಸರ ಕುರಿತು ವರ್ಣನಾತ್ಮಕ ವಿವರಗಳುಳ್ಳದ್ದು. ಇದು ಈಗಾಗಲೇ ದೃಢಪಟ್ಟಿರುವ ಸಂಗತಿಯೂ ಹೌದು. ಇದು ೧೯೨೭ರಲ್ಲಿ ಕನ್ನಡದಲ್ಲಿ ಪ್ರಕಟಗೊಳ್ಳುವ ವೇಳೆಗೆ, ಹಂಪಿ ವೀಕ್ಷಣೆಗೆಂದು ಬರುತ್ತಿದ್ದ ಪ್ರಜ್ಞಾವಂತ ಪ್ರವಾಸಿಗರು ಅವಲಂಬಿಸಿದ್ದುದು ಎ.ಹೆಚ್. ಲಾಂಗ್‌ಹರ್ಸ್ಟ್ ಅವರ 'ಹಂಪಿ ರೂಯಿನ್ಸ್' ಎಂಬ ಆಂಗ್ಲಭಾಷಾ ಕೈಪಿಡಿಯನ್ನು. ಇದು 'ಪಂಪಾಯಾತ್ರೆ' ಪ್ರಕಟಗೊಳ್ಳುವ ಒಂಬತ್ತು ವರುಷ ಮೊದಲು, ಅಂದರೆ ೧೯೧೭ರಲ್ಲಿ ಕಲ್ಕತ್ತಾದಿಂದ ಪ್ರಕಟಗೊಂಡಂಥಾದ್ದು. ವಿ.ಸೀ. ಹಾಗೂ ಅವರ ತಂಡದವರು ಹಂಪಿ ವೀಕ್ಷಣೆಗೆ ಇದೇ ಕೈಪಿಡಿಯನ್ನು ಅವಲಂಬಿಸಿದ್ದಂತೆ ತೋರುತ್ತದೆ.'ಹಂಪೆಯ ಹಾಳುಗಳ ಪುಸ್ತಕವೊಂದನ್ನು ಕೈಲಿ ಹಿಡಿದುಕೊಂಡು ಹೊರಟ' ಸೂಚನೆಯನ್ನು ತಮ್ಮ ಪ್ರವಾಸಕಥನದಲ್ಲಿ ಕೊಡುತ್ತಾರೆ ವಿ.ಸೀ.[೫] ಇಲ್ಲಿ ನಾವು ಗಮನಿಸಬೇಕಾದ ಸಂಗತಿಯೆಂದರೆ, ವಿ.ಸೀ. ಅವರ 'ಪಂಪಾಯಾತ್ರೆ' ಕೃತಿಯು ಪ್ರವಾಸಿ ಕೈಪಿಡಿಯಂತಿರದೆ ಪ್ರವಾಸಕಥನ ಸ್ವರೂಪದಲ್ಲಿದೆ; ಹಾಗೂ ಪ್ರವಾಸ ಸಾಹಿತ್ಯ ಪ್ರಕಾರಕ್ಕೆ ಸಂಬಂಧಿಸಿದೆ.

ಆದರೆ ಕೇವಲ ಹಂಪಿಗೆ ಸಂಬಂಧಿಸಿದಂತೆ- ಆರಂಭದಿಂದ, ಅಂದರೆ ೧೮೯೦ ರಿಂದ ವಿ.ಸೀ. ಅವರ 'ಪಂಪಾಯಾತ್ರೆ'ಯ ಪ್ರಕಟಣೆವರೆಗಿನ ಮೊದಲನೇ ಘಟ್ಟದವರೆಗೆ- ಯಾವುದೇ ಪ್ರಕಟಿತ ಕೈಪಿಡಿಯ ಪ್ರಸ್ತಾಪ ಎಲ್ಲಿಯೂ ದೊರೆಯದಿರುವುದು ಆಶ್ಚರ್ಯದ ಸಂಗತಿ. ಈ ಸಾಲಿಗೆ ಕೆ. ರಾಮಸ್ವಾಮಯ್ಯಂಗಾರ್ ಅವರ ' 'ಜೀರ್ಣವಿಜಯನಗರಾ ದರ್ಶಂ' ಕೈಪಿಡಿಯೂ ಸೇರಿದೆ. ಪ್ರಸ್ತುತ ಪ್ರಬಂಧದ ಉದ್ದೇಶವಾದರೂ ಈ ಕೈಪಿಡಿ ಕುರಿತು ಸ್ಥೂಲವಾಗಿಯಾದರೂ ಇಲ್ಲಿ ಪರಿಚಯಿಸುವುದು.

ವಾಸ್ತವದಲ್ಲಿ, ಹಂಪಿ ಕುರಿತ ಆರಂಭದ ಕೈಪಿಡಿಯೆಂದರೆ 'ಜೀರ್ಣವಿಜಯನಗರಾ ದರ್ಶಂ' ಎನ್ನಬಹುದೇನೊ. 'ಜೀರ್ಣವಿಜಯನಗರಾದರ್ಶಂ'ಎಂದರೆ ನಾಶಗೊಂಡ ವಿಜಯನಗರ/ಹಂಪಿಯ ನೋಟ ಎಂದರ್ಥ. ಇದು ಪ್ರಕಟಗೊಂಡುದು ೧೯೧೬ರಲ್ಲಿ; ಅಂದರೆ 'ಪಂಪಾಯಾತ್ರೆ' ಪ್ರಕಟಗೊಳ್ಳುವುದಕ್ಕೆ ಹತ್ತು ವರುಷ ಮೊದಲು. 'ಪಂಪಾ ಯಾತ್ರೆ' ಪ್ರಕಟಗೊಂಡ ಇಲ್ಲಿಗೆ ಎಂಬತ್ತು ವರುಷಗಳಾಗಿದ್ದರೆ, 'ಜೀರ್ಣವಿಜಯ ನಗರಾದರ್ಶಂ' ಪ್ರಕಟಗೊಂಡು ತೊಂಬತ್ತು ವರುಷಗಳಾಗುತ್ತವೆ. ಈ ಕೈಪಿಡಿಯನ್ನು ರಚಿಸಿದ ಕೆ. ರಾಮಸ್ವಾಮಿಯ್ಯಂಗಾರ್ ಅವರು ಬೆಂಗಳೂರು ಡಿಸ್ಟ್ರಿಕ್ಟ್ ತ್ಯಾಮಗುಂಡ್ಲು ಎ.ವಿ. ಸ್ಕೂಲ್‌ನ ಹೆಡ್ಮಾಸ್ಟರ್ ಆಗಿದ್ದವರು. ಇವರ ಪೂರ್ವೋತ್ತರ ಇನ್ನೂ ತಿಳಿಯ ಲಾಗಿಲ್ಲ. ಇವರು ರಚಿಸಿದ ಪ್ರಸ್ತುತ ಕೃತಿಯು ಮೈಸೂರಿನ ಕರ್ನಾಟಕ ಗ್ರಂಥ ಮಾಲಾ

ಪ್ರಕಟಿಸಿದ ಕೃತಿಸರಣಿಯಲ್ಲಿ ೭೪ ನೆಯದು (The Karnataka Granthamala-Series No. 74). ಇದರ ಪಠ್ಯವು ಮೈಸೂರಿನ ಜಿ.ಟಿ.ಎ.ಪ್ರೆಸ್ (ಗ್ರ್ಯಾಜ್ಯುಯೇಟ್ ಟ್ರೇಡಿಂಗ್ ಅಸೋಸಿಯೇಶನ್ ಪ್ರೆಸ್)ನಲ್ಲಿ ಮುದ್ರಣಗೊಂಡಿದ್ದರೆ, ಪುಸ್ತಕದ ಹೊರಕವಚ ಮುದ್ರಣಗೊಂಡು ಪ್ರತಿಗಳು ಸಿದ್ಧಗೊಂಡುದು ಬೆಂಗಳೂರು ನಗರ ಕೋಟೆ ಪ್ರದೇಶದ ಸಿಟಿಪ್ರೆಸ್‌ನಲ್ಲಿ. ಒಟ್ಟು ಪುಟಗಳು ೬೮ (೬೨+೬); ಆಕಾರ:ಡೆಮ್ಮಿ ಅಷ್ಟದಳ.

'ಜೀರ್ಣವಿಜಯನಗರಾದರ್ಶಂ'ಕೈಪಿಡಿಯನ್ನು ಪ್ರಕಟಿಸಿದ ಮೈಸೂರಿನ ಕರ್ನಾಟಕ ಗ್ರಂಥಮಾಲಾ ಪತ್ರಿಕೆಯು ಪುಸ್ತಕಗಳನ್ನು ಧಾರಾವಾಹಿಯಾಗಿ ಪ್ರಕಟಿಸುತ್ತಿದ್ದುದು ವಿಶೇಷ.[೬] ಇದೇ ಸರಣಿಯಲ್ಲಿ ೭೪ನೇ ಕೃತಿಯಾಗಿ ಹೊರಬಂದುದು 'ಜೀರ್ಣವಿಜಯ ನಗರಾದರ್ಶಂ'. ಹಳೆಯ ಕೃತಿಗಳನ್ನು ಹಾಗೂ ಹೊಸ ಲೇಖಕರನ್ನು ಬೆಳಕಿಗೆ ತರುವ ನಿಟ್ಟಿನಲ್ಲಿ ಕರ್ನಾಟಕ ಗ್ರಂಥಮಾಲಾ ಪತ್ರಿಕೆಯದು ಉಪಯುಕ್ತ ಸೇವೆ. 'ಜೀರ್ಣವಿಜಯ ನಗರಾದರ್ಶಂ' ಕೈಪಿಡಿಯು ೧೯೧೬ರಲ್ಲಿ ಪ್ರಕಟಗೊಂಡುದಾದರೂ ಅದರ ಹಸ್ತಪ್ರತಿಯು ಅದಕ್ಕೂ ಮುಂಚೆಯೇ ಸಿದ್ಧಗೊಂಡಿದ್ದಿರಬೇಕು. ಕೈಪಿಡಿಯಲ್ಲಿ ಲೇಖಕ ಹಾಗೂ ಸಂಪಾದಕ ಅಥವಾ ಪ್ರಕಾಶಕರ ಮಾತುಗಳ ಪ್ರತ್ಯೇಕ ಪುಟಗಳಿಲ್ಲದಿರುವುದರಿಂದ ಈ ಕುರಿತು ಯಾವ ಸೂಚನೆಯೂ ದೊರೆಯುವುದಿಲ್ಲ. ಪುಟ ೩೧ರಲ್ಲಿ ಲೇಖಕರು 'ವಿಜಯನಗರವನ್ನಾಳಿದ ಅರಸರ ಪಟ್ಟಿ'ಯನ್ನು ೧೮೯೭ರಲ್ಲಿ ವೆಸ್ಟ್‌ಮಿನ್‌ಸ್ಟರ್‌ನಿಂದ ಪ್ರಕಟವಾದ ಬಿ.ಎಲ್. ರೈಸ್ ಅವರ 'ಮೈಸೂರು ಗೆಝೆಟಿಯರ್' (ಭಾಗ ೧-೨) ಸಂಪುಟವನ್ನಾಧರಿಸಿ ಕೊಟ್ಟಿರುವುದರ ವಿನಾ ಸಮಕಾಲೀನವಾದ ಇತರ ಯಾವ ಪ್ರಕಟಣೆಯನ್ನೂ ಹೆಸರಿಸಿರುವುದಿಲ್ಲ. ಆದರೆ ಹೊಸಪೇಟೆಗೆ ೬ ಕಿ.ಮೀ. ದೂರದಲ್ಲಿರುವ ಮಲಪನಗುಡಿಯಲ್ಲಿ ದೊರೆತ ದೇವರಾಯಮಹಾರಾಯನ ೧೯೧೨ರ ಶಾಸನಶಿಲೆಯ (ಸಂಖ್ಯೆ ೨೫) ಪ್ರಸ್ತಾಪವನ್ನು ೧೪೦೪ರ 'ಆನ್ಯುಯಲ್ ರಿಪೋರ್ಟ್ ಆನ್ ಸೌತ್ ಇಂಡಿಯನ್ ಎಪಿಗ್ರಫಿ' ಸಂಪುಟವನ್ನು ಆಧರಿಸಿ ಮಾಡಿರುವುದುಂಟು.

– ೨ –

ಕೆ. ರಾಮಸ್ವಾಮಯ್ಯಂಗಾರ್ ರಚಿಸಿರುವ 'ಜೀರ್ಣವಿಜಯನಗರಾದರ್ಶಂ' ಕೈಪಿಡಿಯನ್ನು 'ಪೂರ್ವಭಾಗ' ಮತ್ತು 'ಉತ್ತರ ಭಾಗ'ಗಳಾಗಿ ವಿಂಗಡಿಸಿದೆ. ಪೂರ್ವಭಾಗವು ೩೧ ಪುಟಗಳಷ್ಟು ವಿಸ್ತಾರವಾಗಿದ್ದು, ಈ ಭಾಗದಲ್ಲಿ ವಿಜಯನಗರ ಚರಿತ್ರೆಯನ್ನು ಆದಿಯಿಂದ ಅಂತ್ಯದವರೆಗೆ, ಅಂದರೆ ೧೩೩೬ ರಿಂದ ೧೫೬೫ರ ವರೆಗೆ ನಿರೂಪಿಸಲಾಗಿದೆ. ಲೇಖಕರು ೧೫೬೫ರಲ್ಲಿ ತಾಳಿಕೋಟೆ ಬಳಿ ನಡೆದ (ಇತಿಹಾಸ ಸಂಶೋಧಕ ನಾ. ಶ್ರೀ. ರಾಜಪುರೋಹಿತರು, ೧೯೨೯ರಲ್ಲಿ ಈ ರಣಭೂಮಿ ತಾಳೀಕೋಟೆ ಆಗಿರದೆ ರಕ್ಕಸಗಿ ತಂಗಡಗಿ ಆಗಿದೆಯೆಂದು ಶೋಧಿಸಿದರು) ನಿರ್ಣಾಯಕ ಯುದ್ಧದ ನಂತರ ವಿಜಯನಗರವು

'ವಿಜನಸ್ಥಾನ'ವಾಗಿ ಮಾರ್ಪಟ್ಟು 'ಶಿಥಿಲ ವಿಜಯನಗರ'ವೆಂದು ಕರೆಸಿ ಕೊಂಡುದನ್ನು ಸಂಕ್ಷಿಪ್ತವಾಗಿ ವಿವರಿಸಿರುವರು. ಈ ಭಾಗದ ಅಂತ್ಯತಲ್ಲಿ, "ಆಹಾ! ಎಷ್ಟೋ ವೈಭವದಿಂದ ಹೊಳೆಯುತ್ತಿದ್ದ ಈ ಪಟ್ಟಣವು ಸ್ವಲ್ಪ ಕಾಲದಲ್ಲಿಯೇ ಯಾವ ಗತಿಗೆ ಬಂತು? " ಜಾತಸ್ಯ ಮರಣಂ ಧ್ರುವಂ'ಎಂಬ ವಾಕ್ಯವು ಸುಳ್ಳಲ್ಲ. ಮುಂದೆ ಈ ಶಿಥಿಲ ವಿಜಯನಗರದ ಪ್ರತಿ ಒಂದು ಸ್ಥಳವನ್ನೂ ಸಮಗ್ರವಾಗಿ ನೋಡೋಣ" (ಪು. ೩೦) ಎನ್ನುವುದರೊಡನೆ, ಈ ಕೃತಿಯ ಪ್ರಮುಖ ಭಾಗವಾದ 'ಉತ್ತರ ಭಾಗ'ವನ್ನು ಪ್ರವೇಶಿಸಲು ಓದುಗರಲ್ಲಿ ಉತ್ಸಾಹವನ್ನುಂಟು ಮಾಡಿರುವರು.

'ಉತ್ತರ ಭಾಗ' ಅಥವಾ ಜೀರ್ಣ/ ಶಿಥಿಲ ವಿಜಯನಗರ ಸ್ಮಾರಕಗಳ ವಿವರಣೆ ಯುಳ್ಳ ಭಾಗವು ಪುಟ ೩೨ ರಿಂದ ೬೨ರವರೆಗೆ, ಅಂದರೆ ೩೦ ಪುಟಗಳಷ್ಟು ದೀರ್ಘವಾಗಿ ಸಾಗಿದೆ. ಈ ಭಾಗದ ಆರಂಭದಲ್ಲಿ, ಅಂದರೆ ೭ ಪುಟಗಳಲ್ಲಿ ಕಂಡುಬರುವುದ ವಿದೇಶಿ ಪ್ರವಾಸಿಗರು ಕಂಡ ವಿಜಯನಗರ ವೈಭವ, ಹಬ್ಬ - ಉತ್ಸವಾದಿಗಳ ಯಥಾವತ್ತಾದ ವರ್ಣನೆ. ಇನ್ನುಳಿದ ೨೪ ಪುಟಗಳು ಹಂಪಿಯ ವಿವಿಧ ಸ್ಮಾರಕಗಳ ವಿವರಣೆ ಯನ್ನೊಳಗೊಂಡಿವೆ. ಈ ಕೈಪಿಡಿಯ ಕರ್ತೃ ಕೆ. ರಾಮಸ್ವಾಮಯ್ಯಂಗಾರ್ ಅವರು ಸುಶಿಕ್ಷಿತರೂ ಲೇಖಕರೂ ಆಗಿರವುದರಿಂದ, ಹಂಪಿಯಂಥಾ ಪ್ರಸಿದ್ಧ ಚಾರಿತ್ರಿಕ ಅವಶೇಷಗಳ ನಿವೇಶನವನ್ನು ಕಾಣುವಲ್ಲಿ, ಅರ್ಥೈಸುವಲ್ಲಿ ವಹಿಸಿರುವ ಕಾಳಜಿ ಅವರ ಇಲ್ಲಿಯ ವಿವರಣೆಯಲ್ಲಿ ವ್ಯಕ್ತಪಟ್ಟಿದೆ. ಕೇವಲ ಪ್ರಮುಖ ಸ್ಮಾರಕ/ ಸಂಗತಿಗಳೇ ಅಲ್ಲದೆ ಆಯಾ ಪರಿಸರದಲ್ಲಿಯ ಸೂಕ್ಷ್ಮ ಮಾಹಿತಿಯೂ ಇವರ ಕೈಪಿಡಿ ಒದಗಿಸ ಬೇಕೆನ್ನುವ ಮನೋಭಾವ ಹೊಂದಿದ್ದಂತೆ ತೋರುತ್ತದೆ. ರಾಮಸ್ವಾಮಯ್ಯಂಗಾರ್ ಅವರ ಕನ್ನಡ ಬರವಣಿಗೆ ಸರಳ ಹಾಗೂ ಶುದ್ಧ. ಅದು ಕೇವಲ ಮಾಹಿತಿ ಪ್ರಧಾನ ವಾಗಿರದೆ, ಅಲ್ಲಲ್ಲಿ ರಸವತ್ತಾದ ಸನ್ನಿವೇಶಗಳನ್ನು ಒಳಗೊಂಡಿದೆ. ಮತಂಗ ಪರ್ವತ/ ಮಾತಂಗನ ಬೆಟ್ಟದಿಂದ ಕಾಣ ಬರುವ ಹಂಪಿ ಸುತ್ತಮುತ್ತಲ ಪ್ರಾಕೃತಿಕ ಪರಿಸರದ ವರ್ಣನೆ (ಪು. ೪೮-೪೯); ವಿಠ್ಠಲ ಸ್ವಾಮಿ ದೇವಾಲಯದ ಶಿಲ್ಪಕಲಾ ವರ್ಣನೆ (ಪು. ೫೮-೫೯); ಹಾಗೂ ವಿಷಾದರೂಪ ದಲ್ಲಿರುವ 'ಉಪಸಂಹಾರ' (ಪು. ೬೧-೬೨)ಭಾಗಗಳು ಕೆಲವು ಉದಾಹರಣೆಗಳು (ಅನುಬಂಧ ನೋಡಿ).

ಕೆ. ರಾಮಸ್ವಾಮಯ್ಯಂಗಾರ್ ಅವರು ತಮ್ಮ 'ಜೀರ್ಣವಿಜಯನಗರಾದರ್ಶಂ' ಕೈಪಿಡಿಯಲ್ಲಿ ಹಂಪಿ ವೀಕ್ಷಣೆಯನ್ನು ಸ್ವಯಂ ಕೈಗೊಂಡಿರುವುದು ಹಾಗೂ ಸೂಚಿಸಿರು ವುದು ಮೂರು ಹಂತದಲ್ಲಿ: ೧. ಹೊಸಪೇಟೆಯಿಂದ ಹೊರಟು ಅನಂತಶಯನಗುಡಿ, ಮಲಪನಗುಡಿ, ಇದರ ಸಮೀಪದಲ್ಲಿರುವ ಗುಂಡಾಗಿರುವ ಬಾವಿ (ಮಾಳಿಗೆ-ಕೂಪ-ಆರಾಮ) ಹಾಗೂ ಕಮಲಾಪುರದ ಪಟ್ಟಾಭಿರಾಮ ದೇವಾಲಯಗಳ ವೀಕ್ಷಣೆ (ಪು. ೩೯-೪೨); ೨. ಕಮಲಾಪುರದಿಂದ ಹಾಳುಪಟ್ಟಣ (ಹಂಪಿ)ದೆಡೆಗೆ ಹೊರಟು ಚಂದ್ರ

ಶೇಖರಮಠ (ದೇವಾಲಯ), ಅಂತಃಪುರದ (ರಾಣಿಯರ)ಸ್ನಾನಗೃಹ, ವಿಜಯದಶಮಿಯ ಸಿಂಹಾಸನ(ಮಹಾನವಮಿದಿಬ್ಬ), ಈಶಾನ್ಯದಿಕ್ಕಿನ ರಂಗಸ್ವಾಮಿ (ರಂಗನಾಥ) ದೇವಾಲಯ; ಸಭಾಭವನ (ಕಮಲಮಹಲ್),ಜನಾನಾ, ಗಜಶಾಲೆ, ನಾಟ್ಯಶಾಲೆ ಮೊದಲಾದವುಗಳನ್ನೊಳಗೊಂಡ ರಾಜಾಂತಃಪುರಾವರಣ (ರಾಜಪ್ರಾಂಗಣ)ಗಳ ವೀಕ್ಷಣೆ; ಹಾಗೂ ಮತಂಗ ಪರ್ವತಾರೋಹಣ ಮತ್ತು ಪರಿಸರ ವೀಕ್ಷಣೆ (ಪು. ೪೨-೫೧); ૩. ವಿಜಯದಶಮಿ ಸಿಂಹಾಸನ (ಮಹಾನವಮಿದಿಬ್ಬ)ದಿಂದ ಮತ್ತೆ ಮುಂದುವರೆದು ಹಜಾರ ರಾಮಚಂದ್ರಾಲಯ (ಹಜಾರ ರಾಮ ದೇವಾಲಯ), ನೆಲಮಾಳಿಗೆ, ಪಾತಾಳೇಶ್ವರ ದೇವಾಲಯ, ಉದ್ಯಾನ ವೀರಭದ್ರಾಲಯ, ಚಂಡಿಕೇಶ್ವರ (ಚಂಡೇಶ್ವರ) ದೇವಾಲಯ, ಉಗ್ರನರಸಿಂಹ (ಲಕ್ಷ್ಮೀನರಸಿಂಹ), ದೊಡ್ಡಲಿಂಗ(ಶಿವ ದೇವಾಲಯ), ಕೃಷ್ಣ(ಸ್ವಾಮಿ) ದೇವಾಲಯ, (ಸಾಸಿವೆಕಾಳು)ಗಣೇಶಾಲಯ, ವಿಘ್ನೇಶ್ವರ (ಕಡಲೆಕಾಳುಗಣೇಶ) ಆಲಯ, ವಿರೂಪಾಕ್ಷ ದೇವಾಲಯ, ಕೋದಂಡ ರಾಮಸ್ವಾಮಿ ದೇವಾಲಯ, ಚಕ್ರತೀರ್ಥ, ವಿಠ್ಠಲಸ್ವಾಮಿ ದೇವಾಲಯ, ತಳವಾರನಕಟ್ಟೆ (ತಳಾರಿಗಟ್ಟ), ಒಂಬತ್ತು ಋಷಿಗಳ ಸಮಾಧಿ(ನವವೃಂದಾವನ), ಆನೆಗೊಂದಿ, ರಂಗನಾಥಸ್ವಾಮಿ ದೇವಾಲಯ, ಗವಿರಂಗನಾಯಕ, ಪಂಪಾಸರೋವರ ಮುಂತಾದವುಗಳ ವೀಕ್ಷಣೆ; ಹಾಗೂ ಸಮೀಪಮಾರ್ಗದ ಮೂಲಕ(ತೆಪ್ಪದ ಸಹಾಯದಿಂದ ನದಿಯನ್ನು ದಾಟಿ ಹಂಪಿಯ ಪ್ರವೇಶ; ಅಲ್ಲಿಂದ ಕಮಲಾಪುರ ಸತ್ರಕ್ಕೆ ವಾಪಸ್(ಪು. ೫೧-೬೨).

ಈ ಮೇಲಿನ ಸ್ಮಾರಕಗಳ ವೀಕ್ಷಣೆಗೆಂದು ಲೇಖಕರು ತಮ್ಮ ಕೈಪಿಡಿಯಲ್ಲಿ ಸೂಚಿಸಿರುವ ಮಾರ್ಗಸೂಚಿಯಾದರೂ ಅಲ್ಪಸ್ವಲ್ಪ ಬದಲಾವಣೆಯೊಡನೆ ಇಂದಿಗೂ ಎಲ್ಲ ಪ್ರವಾಸಿಗರು ಅನುಸರಿಸುತ್ತಿರುವ ಮಾರ್ಗಸೂಚಿಯಂತೆಯೇ ಇದೆ. ಆದರೆ ಬಹುಸಂಖ್ಯೆಯ ಪ್ರವಾಸಿಗರು ಕಡಿರಾಂಪುರ ಅಥವಾ ಕಮಲಾಪುರಗಳನ್ನು ಹಾದು ನೇರವಾಗಿ ಹಂಪಿಯ ಹೃದಯಸ್ಥಾನವನ್ನೇ ತಲುಪುವ ಇಂದಿನ ದಿನಗಳಲ್ಲಿ, ಈ ಲೇಖಕರು ಸೂಚಿಸುವ ಮಾರ್ಗಗಳನ್ನು ಅನುಸರಿಸಿ ಅಲ್ಲಲ್ಲಿಯ ಸ್ಮಾರಕಗಳನ್ನು ಕ್ರಮವಾಗಿ ವೀಕ್ಷಿಸುವ ಪ್ರಯತ್ನ ಮಾಡುವವರು ಕಡಿಮೆಯೇ. ಅಲ್ಲದೆ, ವಸತಿಗಾಗಿ ಸ್ಥಳೀಯ (ಹಂಪಿ, ಕಮಲಾಪುರ, ಕನ್ನಡ ವಿಶ್ವವಿದ್ಯಾಲಯ) ಅತಿಥಿಗೃಹಗಳನ್ನು ಬಳಸುವವರ ಸಂಖ್ಯೆಯೂ ಹೆಚ್ಚೇನಲ್ಲ. ಹೊಸಪೇಟೆಯೇ ಎಲ್ಲ ಚಟುವಟಿಕೆಗಳ ಕೇಂದ್ರವಾಗಿ ಅಭಿವೃದ್ಧಿ ಹೊಂದಿರುವುದರಿಂದ ಹಾಗೂ ಸಾರಿಗೆ ವ್ಯವಸ್ಥೆ ಅತ್ಯುತ್ತಮವಾಗಿರುವುದರಿಂದ ಈಗ ಹಂಪಿ ಸ್ಮಾರಕಗಳ ವೀಕ್ಷಣೆ ಹಿಂದಿನಂತೆ ದುಸ್ತರಕಾರ್ಯವೇನಲ್ಲ. ಕರ್ನಾಟಕ ಪ್ರವಾಸೋದ್ಯಮ ಇಲಾಖೆಯೂ ಹಂಪಿವೀಕ್ಷಣೆಯ ಪ್ರವಾಸಿಗರಿಗಾಗಿ ತನ್ನದೇ ವಾಹನ ವ್ಯವಸ್ಥೆ ಮಾಡಿರುವುದೂ ಈ ನಿಟ್ಟಿನಲ್ಲಿ ಸಹಕಾರಿಯೆನಿಸಿದೆ.

– ೩ –

ಕೆ. ರಾಮಸ್ವಾಮಯ್ಯಂಗಾರ್ ಅವರು ಪ್ರವಾಸಿಗರಿಗಾಗಿ ತಮ್ಮ ಕೈಪಿಡಿಯಲ್ಲಿ ಸಂಗ್ರಹಿಸಿರುವ ಹಾಗೂ ಸೂಚಿಸಿರುವ ಕೆಲವು ವಿಶೇಷ ಅಂಶಗಳನ್ನು ಈ ಕೆಳಗಿನಂತೆ ಸಂಗ್ರಹಿಸ ಬಹುದು ಹಾಗೂ ಚರ್ಚಿಸಬಹುದು:

i) ಹಂಪಿ ಮಾರ್ಗದಲ್ಲಿ ಮಲಪನಗುಡಿಯ ಹೊರವಲಯದಲ್ಲಿರುವ 'ಗುಂಡಾಗಿರುವ ಬಾವಿ', ಅಂದರೆ 'ಮಾಳಿಗೆ-ಕೂಪ-ಆರಾಮ'ವೆಂಬುದು ವಿಜಯನಗರ ಕಾಲದಲ್ಲಿ ಬಾವಿತೋಟದಿಂದೊಡಗೂಡಿದ ವಿಶ್ರಾಂತಿಧಾಮ. ಲೇಖಕರು ಇದನ್ನು ವೀಕ್ಷಿಸುವ ವೇಳೆಗೆ ಅದಿನ್ನೂ ಸುಸ್ಥಿತಿಯಲ್ಲಿದ್ದಿತು. "ಇದು ಪುರಾತನ ಕಟ್ಟಡವಾದರೂ ನೋಡುತ್ತಾ ನೋಡುತ್ತಾ ಕಣ್ಣುಗಳಿಗೆ ಸೊಬಗನ್ನು ಬೀರುವುದು. ಇದರಲ್ಲಿನ ನೀರು ಬಹು ಶೀತಲ ವಾಗಿರುವುದರಿಂದ ದೇಹದ ಬಳಲಿಕೆಯನ್ನು ತೀರಿಸಿ ಆರೋಗ್ಯವನ್ನುಂಟು ಮಾಡತಕ್ಕದ್ದಾಗಿರುವುದು" (ಪು.೪೦)ಎಂದಿರುವುದು ಗಮನಾರ್ಹ.

ii) ಮಲಪನಗುಡಿಯ ಪೂರ್ವದಿಕ್ಕಿನ ಹೊಲವೊಂದರಲ್ಲಿ ದೇವರಾಯನ ಕ್ರಿ.ಶ. ೧೪೧೨ರ (ಲೇಖಕರು ಇದನ್ನು ೧೪೧೦ ಎಂದು ತಪ್ಪಾಗಿ ಉಲ್ಲೇಖಿಸಿದ್ದಾರೆ) ದಾನ ಶಾಸನಕಲ್ಲೊಂದು ಮಲಗಿರುವುದೆಂಬ ಮಾಹಿತಿ ಸಂಗ್ರಹಿಸಿದ ಲೇಖಕರು, ಅದರ ಶೋಧನೆಗೆ ಮುಂದಾದದು ಕುತೂಹಲಕಾರಿ ಸಂಗತಿ. ಅವರೇ ಬರೆದಿರುವಂತೆ, "ಆದರೆ ಎಲ್ಲೆಲ್ಲಿ ನೋಡಿದರೂ ಇದು ಕಾಣಬಂದಿಲ್ಲವಾದುದರಿಂದ ನೆಲದಲ್ಲಿ ಹೂತುಹೋಗಿರ ಬಹುದೆಂದು ಸಂಶಯವುಂಟಾಗಿರುವುದು. ಮುಂದೆ ಯಾತ್ರಿಕರಿಗೆ ದೊರೆತರೆ ಅದರ ನಿಜವಾದ ಸ್ಥಾನವನ್ನು ತಿಳಿಯಬಹುದ" (ಪು.೪೦). ಆದರೆ ಈ ಶಾಸನಕಲ್ಲು ಕಾಣೆಯಾಗಿರದೆ ಅದನ್ನು ಮಲಪನಗುಡಿ ಈಶ್ವರ ದೇವಾಲಯದ ಮುಂದೆ ಈಗ ಇರಿಸಲಾಗಿದೆಯೆಂಬುದನ್ನು ಇಲ್ಲಿ ಪ್ರಸ್ತಾಪಿಸಬಹುದು.

iii) ಕಮಲಾಪುರದ ಸತ್ರವೊಂದರ ಬಗ್ಗೆ ಲೇಖಕರು ಪ್ರಸ್ತಾಪಿಸುತ್ತಾರೆ. ಇದು ಯಾವ ಸತ್ರವೆಂಬುದು ನಿಖರವಿಲ್ಲ. ಅವರು ಬರೆಯುವಂತೆ, "ಈ ಕಮಲಾಪುರದಲ್ಲಿ ಪ್ರಯಾಣಿಕರು ಇಳಿಯುವುದಕ್ಕೆ ಒಂದು ಸತ್ರವಿರುವುದು. ಇದು ಪೂರ್ವಕಾಲದಲ್ಲಿ ಒಂದು ಪ್ರಾಚೀನ ಮಂಟಪವಾಗಿತ್ತು. ಬಳ್ಳಾರಿಯಲ್ಲಿ ಕಲೆಕ್ಟರಾಗಿ ಇದ್ದ ಮಾಸ್ಟಿರ್ ಸಾಹೇಬರು ಈ ಮಂಟಪವನ್ನು ಸತ್ರವಾಗಿ ಮಾರ್ಪಡಿಸಿ ಲೋಕಲ್ ಬೋರ್ಡಿನವರ ವಶಕ್ಕೆ ಕೊಟ್ಟರು. ಮತ್ತು ಈ ಗ್ರಾಮದಲ್ಲಿ ಒಂದು ಪೋಸ್ಟ್ ಆಫೀಸೂ, ಒಂದು ಪೋಲೀಸ್ ಸ್ಟೇಷನೂ ಇರುವುವು. ಇಲ್ಲಿಯ ಭಾಷೆ ಕನ್ನಡ. ಜೀರ್ಣವಿಜಯನಗರವನ್ನು ನೋಡಲಪೇಕ್ಷಿಸು ವವರು ಈ ಸತ್ರವನ್ನು ಬಿಡದಿಮನೆಯಾಗಿ ಮಾಡಿಕೊಂಡರೆ ಮುಂದೆ ಹೇಳುವ ಸ್ಥಳಗಳನ್ನು ನೋಡಲು ಅನುಕೂಲವಾಗಿರುವುದು" (ಪು. ೪೧). ಲೇಖಕರು ಮುಂದುವರೆದು ಹೇಳುವಂತೆ, "ಸತ್ರದಿಂದ ಉತ್ತರದಿಕ್ಕಿಗೆ ಊರ ಹೊರಗೆ ಹೊರಟು ಅಲ್ಲಿಂದ

ಪೂರ್ವದಿಕ್ಕಿಗೆ ಸುಮಾರು ಒಂದುವರೆಮೈಲು ದೂರ ಹೋದರೆ ಅಲ್ಲಿ ಪಟ್ಟಾಭಿರಾಮಸ್ವಾಮಿ ದೇವಾಲಯವು ಕಾಣಬರುವುದು" (ಅದೇ ಪುಟ). ಅಲ್ಲದೆ, "ಸತ್ರದಿಂದ ಉತ್ತರಕ್ಕೆ ಡಿ.ಪಿ. ಡಬ್ಲ್ಯೂ(DPW) ಇನ್‌ಸ್ಪೆಕ್ಷನ್ ಬಂಗಲೆಯು ಇದೆ. ಮುಂದುಗಡೆ ಹೋಗುವ ಸೊಟ್ಟೆಯಾದ ಮಾರ್ಗದ ಮೂಲಕ 'ಹಾಳುಪಟ್ಟಣ' ಎಂದು ಈಗ ಕರೆಯಲ್ಪಡುವ ನಗರಮಧ್ಯಕ್ಕೆ ಹೋಗಬಹುದು" (ಪು.೪೨)ಎಂತಲೂ ಸೂಚಿಸಿರುವರು. ಈ ವಿವರಣೆ ಹಾಗೂ ದಿಕ್ಕು-ನಿರ್ದೇಶನಗಳನ್ನು ಗಮನಿಸಿದರೆ, ಆಗ ಕಮಲಾಪುರದಲ್ಲಿ ಪ್ರವಾಸಿಗರು / ಅತಿಥಿಗಳು ತಂಗಲು ಎರಡು ತಂಗು ಸ್ಥಳಗಳಿದ್ದುದು ಸ್ಪಷ್ಟ.

ಹಂಪಿ ಸ್ಮಾರಕಗಳ ವೀಕ್ಷಣಕಾರ್ಯವನ್ನು ಕಮಲಾಪುರದಿಂದ ಆರಂಭಿಸುವುದು ಸರಿಯಾದ ಕ್ರಮ. ಪ್ರಮುಖ ಹಾಗೂ ಆಕರ್ಷ ಸ್ಮಾರಕಗಳು ನೆಲಸಿರುವ ತಾಣಗಳು ಕಮಲಾಪುರಕ್ಕೆ ಹೊಂದಿಕೊಂಡಂತೆ ಇರುವುದೇ ಇದಕ್ಕೆ ಮುಖ್ಯಕಾರಣ. 'ಜೀರ್ಣ ವಿಜಯನಗರಾದರ್ಶಂ' ಕೈಪಿಡಿಯ ಕರ್ತೃ ಕೆ. ರಾಮಸ್ವಾಮಯ್ಯಂಗಾರ್ ಅವರು ಕಡಿರಾಂಪುರದ ಮೂಲಕ ಹಾದು ಹೋಗುವ ಮಾರ್ಗವನ್ನು ತೊರೆದು ಕಮಲಾಪುರದ ಮೂಲಕವೇ ಪ್ರವಾಸಿಗರನ್ನು ಹಂಪಿಗೆ ಕರೆದೊಯ್ಯುವ ಕೆಲಸ ಮಾಡಿರುವುದು ಉಚಿತವಾಗಿಯೇ ಇದೆ. 'ಕಮಲಾಪುರದ ಸತ್ರ'ವನ್ನು 'ಬಿಡದಿಮನೆ'ಯಾಗಿ ಮಾಡಿಕೊಂಡು, ಹಂಪಿಯನ್ನು ಸುತ್ತುವ ಬಗೆಗೆ ಅವರು ನೀಡಿರುವ ಸಲಹೆಯೂ ಸೂಕ್ತವಾಗಿದೆ. ಆದರೆ ತಮ್ಮ ಹಂಪಿಪ್ರವಾಸ ಸಂದರ್ಭದಲ್ಲಿ ರಾಮಸ್ವಾಮಯ್ಯಂಗಾರ್ ಅವರು ತಂಗಿದ್ದ ಸತ್ರ ಯಾವುದು? ಹಾಗೆಯೇ, ಅವರು ಪ್ರಸ್ತಾಪಿಸಿರುವ 'ಡಿ.ಪಿ.ಡಬ್ಲ್ಯೂ. ಇನ್‌ಸ್ಪೆಕ್ಷನ್ ಬಂಗಲೆ' ಯಾವುದು?

ಹೊಸಪೇಟೆಯಿಂದ ಕಂಪಿಲಿಗೆ ಹೋಗುವ ಬಸ್‌ಮಾರ್ಗದಲ್ಲಿ ಕಮಲಾಪುರವನ್ನು ಪ್ರವೇಶಿಸುತ್ತಿದ್ದಂತೆಯೇ ಬಲಬದಿಯಲ್ಲಿ ಕಂಡುಬರುವ ಹಳೆಯ ಕಲ್ಲುಕಟ್ಟಡವೇ ಹಿಂದಿನ ಸತ್ರ/ ಛತ್ರ. ಇದನ್ನು ಇಂದಿಗೂ ದಾದಾಪೀರ್ ಛತ್ರವೆಂತಲೇ ಕರೆಯಲಾಗುತ್ತದೆ.[೨] ರಾಮಸ್ವಾಮಯ್ಯಂಗಾರ್ ಅವರು ಪ್ರಸ್ತಾಪಿಸಿರುವ ಸತ್ರವೆಂದರೆ ಇದೇ. ಹಿಂದೆಲ್ಲ ವಿಜಯನಗರ ಕುರಿತು ಅಧ್ಯಯನ ಕೈಗೊಂಡ ವಿದ್ವಾಂಸರು ತಂಗುತ್ತಿದ್ದುದು ಇದೇ ಸತ್ರದಲ್ಲಿ. ಹಂಪಿ ವೀಕ್ಷಣೆಗೆಂದು ಬರುತ್ತಿದ್ದ ಪ್ರವಾಸಿಗರ ವಸತಿ ಇಲ್ಲಿಯೇ ಆಗುತ್ತಿದ್ದಿತು. ಹಿಂದೂ-ಮುಸ್ಲಿಂ ವಾಸ್ತು ಶೈಲಿಯ ಈ ಕಟ್ಟಡ ಈಗ ತುಂಬಾ ನಿರ್ಲಕ್ಷ್ಯಕ್ಕೊಳಗಾಗಿದೆ. ೧೮೩೩ರಲ್ಲಿ ಈ ಸತ್ರ ನಿರ್ಮಾಣಗೊಳ್ಳಲು ಕಾರಣನಾದವನು ದಾದಾಪೀರ್ (ಸೈಯದ್ ಶಂಸುದ್ದೀನ್ ಖಾದ್ರಿ). ಈತನ ವಂಶಸ್ಥರು ಗುರುಪರಂಪರೆಯಂತೆ ನಡೆದು ಬಂದವರೆಂತಲೂ ಪರಂಪರೆಯಲ್ಲಿ ಈತ ೧೨ನೇ ಗುರುವೆಂತಲೂ ವ್ಯಕ್ತಪಡುತ್ತದೆ. ಬಡವ ಬಲ್ಲಿದರಿಗಾಗಿ ಹಾಗೂ ಭಕ್ತರಿಗಾಗಿ ಕಟ್ಟಿಸಲಾದ ಈ ಸತ್ರದ ನಿರ್ಮಾಣದಲ್ಲಿ ದಾದಾಪೀರ್ ತನ್ನ ಸ್ವಂತ ಹಣವನ್ನೂ ಹಿತೈಷಿಗಳು ನೀಡಿದ ಹಣವನ್ನೂ ಬಳಸಿದ.

ಆದರೆ ರಾಮಸ್ವಾಮಯ್ಯಂಗಾರ್ ಅವರು, ಬಳ್ಳಾರಿಯಲ್ಲಿ ಕಲೆಕ್ಟರ್ ಆಗಿದ್ದ ಮಾಸ್ಟರ್ ಸಾಹೇಬರು ಹಿಂದೆ ಇದ್ದ ಹಳೆಯ ಮಂಟಪವನ್ನೆ ಸತ್ರವಾಗಿ ಮಾರ್ಪಡಿಸಿದರೆಂದು ಹೇಳಿರುವರು. ಈ ಲೇಖಕರು ತಾವು ತಂಗಿದ್ದ ದಾದಾಪೀರ್ ಛತ್ರ ಕುರಿತೇ ಈ ಮಾತುಗಳನ್ನು ಬರೆದರೇ? ಹೀಗಿದ್ದಲ್ಲಿ, ಸತ್ರದಿಂದ ಉತ್ತರಕ್ಕೆ ಇರುವ ಇನ್‌ಸ್ಪೆಕ್ಷನ್ ಬಂಗಲೆಯನ್ನು ಸಜ್ಜುಗೊಳಿಸಿದವರಾರು?

೧೮೭೮ರಲ್ಲಿ ಹಂಪಿಯನ್ನು ಸಂದರ್ಶಿಸಿದ ಎಡ್ವರ್ಡ್ ಈಸ್ಟ್‌ವಿಕ್ ಎಂಬ ಆಂಗ್ಲ ಪ್ರವಾಸಿಯು, ಹಂಪಿ ಸ್ಮಾರಕಗಳನ್ನು ಕುರಿತ ತನ್ನ ವಿವರಣೆಯಲ್ಲಿ[೯] ಕಮಲಾಪುರದ ಪ್ರವಾಸಿಮಂದಿರದ ಬಗೆಗೂ ಪ್ರಸ್ತಾಪಿಸಿದ್ದಾನೆ. ಈತ ಅಲ್ಲಿ ತಂಗಿದ್ದನೆಂಬುದು ಮುಖ್ಯ. ಹಳೆಯ ದೇವಾಲಯವನ್ನು ಪ್ರವಾಸಿಮಂದಿರವಾಗಿ ಮಾರ್ಪಡಿಸಿ ಅದಕ್ಕೆ ಸುಣ್ಣ ಬಳಿಯಲಾಗಿದೆ; ಅದರಲ್ಲಿ ಶಯನಕ್ಕಾಗಿ ಎರಡು ಕೊಠಡಿಗಳಿವೆ ಹಾಗೂ ದೊಡ್ಡ ಕೊಠಡಿಯು ಭೋಜನಾಲಯವಾಗಿದೆಯೆಂದು ಬರೆಯುತ್ತಾನೆ ಈಸ್ಟ್‌ವಿಕ್.[೧೦] ಇಪ್ಪತ್ತರ ದಶಕದಲ್ಲಿ 'ದಿ ಮದರಾಸ್ ಅಂಡ್ ಸದರ್ನ್ ಮರಾಠಾ ರೈಲ್ವೆ ಕಂಪನಿ'ಯು ಬಿಡುಗಡೆ ಗೊಳಿಸಿದ ಹಂಪಿ ಕುರಿತ ಪ್ರವಾಸಿ ಕೈಪಿಡಿಯಲ್ಲಿ[೧೧], ಕಮಲಾಪುರದ ಪ್ರವಾಸಿ ಮಂದಿರ (ವಸತಿಗೃಹ)ದ ಬಗೆಗೆ ಸ್ವಲ್ಪ ಮಾಹಿತಿಯಿದೆ. ಕಮಲಾಪುರದಲ್ಲಿ ಹಾಳುಬಿದ್ದಿದ್ದ ದೇವಾಲಯವೊಂದನ್ನು ಬಳ್ಳಾರಿ ಜಿಲ್ಲೆಯ ಹಿಂದಿನ ಕಲೆಕ್ಟರ್ ಜೆ.ಹೆಚ್. ಮಾಸ್ಟರ್ ಎಂಬುವನು ವಸತಿಗೃಹ (ವಿಶ್ರಾಂತಿಗೃಹ)ವಾಗಿ ಪರಿವರ್ತಿಸಿದ; ಇದು ಸಾರ್ವಜನಿಕರ ಬಳಕೆಗೂ ಲಭ್ಯವಿದೆ ಎಂದು ಅದರಲ್ಲಿ ಬರೆಯಲಾಗಿದೆ. ಹಿಂದಿನ ಕಲೆಕ್ಟರ್ ಒಬ್ಬರು ಕಮಲಾಪುರದಲ್ಲಿ ಹಾಳುಬಿದ್ದಿದ್ದ ವಿಷ್ಣು ದೇವಾಲಯವನ್ನು ಪ್ರವಾಸಿಬಂಗಲೆಯನ್ನಾಗಿ ಪರಿವರ್ತಿಸಿ ವಾಸಯೋಗ್ಯ ಕೊಠಡಿಗಳನ್ನಾಗಿಸಿದರೆಂದು ಒಂದು ಮಾತಿನಲ್ಲಿ ಹೇಳಿದ್ದಾರೆ ಡಿ. ದೇವಕುಂಜರಿ.[೧೨] ಈ ಹೇಳಿಕೆಗಳನ್ನು ಗಮನಿಸಿದರೆ, ಸತ್ರ ಮತ್ತು ಇನ್‌ಸ್ಪೆಕ್ಷನ್ ಬಂಗಲೆಗಳ ಹಿನ್ನೆಲೆ ಒಂದೇ ಅಲ್ಲವೆಂಬುದು ಸ್ಪಷ್ಟ. ಈ ದೃಷ್ಟಿಯಿಂದ ಕಮಲಾಪುರದಿಂದ ಸತ್ರ ಕುರಿತು ಕೆ. ರಾಮಸ್ವಾಮಯ್ಯಂಗಾರ್ ಅವರು ಪ್ರಸ್ತಾಪಿಸಿರುವ ಸಂಗತಿ ಅಸ್ಪಷ್ಟ ವಾದುದೆನ್ನಬಹುದು.

iv) ಹಂಪಿ ಸ್ಮಾರಕಗಳ ಸಂರಕ್ಷಣೆ ಸಂಬಂಧದಲ್ಲಿ ಕಲೆಕ್ಟರ್‌ಗಳ ಕಾಲದಿಂದಲೂ ಆಸಕ್ತಿ ವಹಿಸುತ್ತಾ ಬಂದಿರುವುದು ಕಂಡಂತೆಯೇ ಇದೆ. ಆದರೆ ಪೂರ್ವಯೋಜಿತ ಹಾಗೂ ವ್ಯವಸ್ಥಿತ ಕಾರ್ಯವನ್ನು ಕೈಗೊಳ್ಳದಿರುವ ಸಂದರ್ಭದಲ್ಲಿ ಸ್ಮಾರಕಗಳಿಗೋ ಅವುಗಳ ಸಂರಕ್ಷಣೆಯಲ್ಲಿ ತೊಡಗಿದವರಿಗೋ ಕೆಲವು ಬಗೆಯ ತೊಂದರೆಗಳುಂಟಾಗುವುದು ಸಹಜ. ಇಂಥಾ ಒಂದು ಉದಾಹರಣೆಯನ್ನು ಸಂಗ್ರಹಿಸಿಕೊಟ್ಟಿದ್ದಾರೆ ಕೆ. ರಾಮ ಸ್ವಾಮಯ್ಯಂಗಾರ್. ಅವರು ಮಹಾನವಮಿದಿಬ್ಬ (ವಿಜಯದಶಮಿಯ ಸಿಂಹಾಸನ)ವನ್ನು

ದರ್ಶಿಸಿದಾಗ ಸಂಗ್ರಹಿಸಿದ ಮಾಹಿತಿ ಇದು: "ಈಗ್ಗೆ ನಾಲ್ಕು ವರುಷಗಳ ಹಿಂದೆ ಈ ದಿಬ್ಬದೊಳಕ್ಕೆ ಹೊರಡುವುದಕ್ಕೆ ಎಲ್ಲಿಯಾದರೂ ದ್ವಾರವಿದೆಯೋ ಏನೋ ನೋಡಬೇಕೆಂದು ಆ ತಿಟ್ಟಿನ ನಾಲ್ಕು ಪಾರ್ಶ್ವಗಳಲ್ಲಿಯೂ ಸುಮಾರು ಹತ್ತು ಅಡಿಗಳ ಆಳದ ತನಕ ಅಗೆದು ನೋಡಿದರೆಂತಲೂ ಆಗ ಕೂಲಿಯವರಲ್ಲಿ ಕೆಲವರು ಅಲ್ಲಿ ಮಡಿದಿದ್ದರಿಂದಲೂ, ದ್ವಾರವು ಎಲ್ಲಿಯೂ ಕಾಣಬಾರದ್ದರಿಂದಲೂ, ಆ ಪ್ರಯತ್ನವನ್ನು ಬಿಟ್ಟು, ಆ ಹಳ್ಳವನ್ನು, ಮರಳಿ ಹೂತುಬಿಟ್ಟರೆಂತಲೂ ತಿಳಿಯಬಂದಿದೆ" (ಪು. ೪೪-೪೫). ಈ ಘಟನೆ ನಡೆದುದು ಲೇಖಕರು ಹಂಪಿಗೆ ಭೇಟಿ ನೀಡುವ ಪೂರ್ವದಲ್ಲಿ, ಅಂದರೆ ನಾಲ್ಕು ವರ್ಷಗಳ ಹಿಂದೆ. ವಾಸ್ತವದಲ್ಲಿ, ಲೇಖಕರು ಹಂಪಿಗೆ ಬಂದಿದ್ದ ನಿರ್ದಿಷ್ಟ ಕಾಲಾವಧಿಯೇ ಸದ್ಯಕ್ಕೆ ತಿಳಿಯದ್ದರಿಂದ, ಈ ಘಟನೆ ಯಾವ ವರ್ಷದಲ್ಲಿ ನಡೆಯಿತೆಂಬುದನ್ನು ಹೇಳಲಾಗುವುದಿಲ್ಲ. ಹಾಗೆಯೇ, "ಇದರ (ಮಹಾನವಮಿದಿಬ್ಬದ) ಸುತ್ತಲೂ ಒಂದು ಪ್ರಾಕಾರದ ಗೋಡೆಯಿದ್ದು, ಈಗ ಅದೆಲ್ಲವೂ ಶಿಥಿಲವಾಗಿ ಉತ್ತರ ದಿಕ್ಕಿನ ಗೋಡೆ ಮಾತ್ರ ನಿಂತಿದೆ"(ಪು.೪೫) ಎಂಬ ಅವರ ಹೇಳಿಕೆಯೂ ಪರಿಶೀಲನಾರ್ಹ. ಏಕೆಂದರೆ, ಒಳಗಿನ ಪಾವಟಿಗೆಯನ್ನು ಮರೆಮಾಡಿದ್ದ ಹೊರಗೋಡೆಯನ್ನು ಭಾರತೀಯ ಪುರಾತತ್ವ ಸರ್ವೇಕ್ಷಣದವರು ೧೯೭೫ರಲ್ಲಿ, ಹಮ್ಮಿಕೊಂಡ 'ವಿಜಯನಗರ ಪುನರುತ್ಥಾನ' ಯೋಜನೆಯ ಸಂದರ್ಭದಲ್ಲಿ ಕೆಡವಿಹಾಕಿದರೆಂದು ಹಾಗೂ ಈ ಬಗೆಯಲ್ಲಿ ಹಳೆಯ ರಚನೆಗಳನ್ನು ತೆಗೆದುಹಾಕುವ ಕಾರಣಗಳು ಏನಿದ್ದಿರಬೇಕೆಂಬುದು ತಮಗೆ ತಿಳಿಯಲಿಲ್ಲವೆಂದು ವಸುಂಧರಾ ಫಿಲಿಯೋಜಾ ಅವರು ಬರೆದಿರುವುದುಂಟು.[೧೩]

v) ಆನೆಗೊಂದಿ ಕುರಿತು ಕೆ. ರಾಮಸ್ವಾಮಯ್ಯಂಗಾರ್ ಅವರು ನೀಡಿರುವ ಚಿತ್ರಣ ಕುತೂಹಲಕಾರಿಯಾದುದು. ತಳವಾರನಕಟ್ಟೆ(ತಳಾರಿಗಟ್ಟ)ಯಿಂದ ಈ ಗ್ರಾಮದವರೆಗೆ ಒಂದು ಮೈಲಿ ತನಕ ಕಲ್ಲು ಚಪ್ಪಡಿಗಳನ್ನು ಹಾಸಿರುವ ರಸ್ತೆ ಕಾಣುತ್ತಿದ್ದಂತೆ(ಪು. ೫೯). ಈ ಭಾಗದ ನಡುಗಡ್ಡೆಯಲ್ಲಿರುವ ನವವೃಂದಾವನವನ್ನು ಪರಿಚಯಿಸುವ ಲೇಖಕರು, ಅಲ್ಲಿಯ ಆವರಣದ ಆಚೆ ಹೊಸದಾಗಿ ಕಟ್ಟಲಾಗಿರುವ ದೇವಾಲಯಕ್ಕೆ ಸಂಬಂಧಿಸಿದ ದುರಂತಕಥೆಯೊಂದನ್ನು ಹೇಳುತ್ತಾರೆ. "ಆನೆಗುಂದಿ ಸಂಸ್ಥಾನದ ಈಚಿನ ರಾಜರುಗಳಲ್ಲೊಬ್ಬನು ವೇಶ್ಯಾಪ್ರಿಯನಾಗಿ ಅವರೊಂದಿಗೆ ಅಲ್ಲಿ ವಾಸಮಾಡಿ ಕೊಂಡಿದ್ದನಂತೆ. ಆ ಸ್ಥಳವನ್ನು ಬಿಟ್ಟುಹೋಗೆಂದು ಅವನಿಗೆ ಎಷ್ಟೆಷ್ಟೋ ಕನಸುಗಳು ಬಿದ್ದರೂ ಅವನು ಅವುಗಳನ್ನು ಲಕ್ಷ್ಯಮಾಡದೆ ಅಲ್ಲಿಯೇ ಇದ್ದುಬಿಟ್ಟನಂತೆ. ಒಂದುದಿನ ಆ ನದಿಯ ಎರಡು ದಡಗಳಲ್ಲಿಯೂ ನೀರು ತುಂಬಿ ಹರಿಯುತ್ತಿದ್ದಾಗ ಆ ರಾಜನು ತನ್ನ ಪ್ರಿಯಾಂಗನೆಯರೊಂದಿಗೆ ಆಚಿನ ದಡಿಯಲ್ಲಿರುವ ಆನೆಗೊಂದಿಗೆ ಹೋಗುತ್ತಿರುವಾಗ ದೋಣಿಯು ಮುಳುಗಿಹೋಗಿ, ಅದರಲ್ಲಿದ್ದವರೆಲ್ಲರೂ ಜಲಸಮಾಧಿಯನ್ನು ಹೊಂದಿದರಂತೆ!" (ಪು.೬೦). ಪವಿತ್ರಸ್ಥಳವನ್ನು ಮೋಜಿನತಾಣವಾಗಿ ಪರಿವರ್ತಿಸಿಕೊಂಡವರಿಗೆ ಒದಗಿದ

ದುರಂತದ ಕಥೆ ಇದು. ತಮ್ಮ ಪ್ರವಾಸದ ಸಂದರ್ಭದಲ್ಲಿ ಇಂಥಾ ಘಟನೆಗಳನ್ನೂ ದಾಖಲಿಸಿಕೊಂಡ ಲೇಖಕರ ಕುತೂಹಲಾಸಕ್ತಿಯನ್ನು ಮೆಚ್ಚಲೇಬೇಕು.

ಅವರು ಹೇಳುವಂತೆ, ಆಗ ಆನೆಗೊಂದಿ ಇದ್ದುದು ನೈಜಾಮರ ರಾಜ್ಯದಲ್ಲಿ. "ಇಲ್ಲಿ ಶ್ರೀಕೃಷ್ಣದೇವರಾಯರ ಸಂತತಿಯವರಾಗಿ ಮೃದುಮಧುರಸ್ವರಗಳನ್ನುಳ್ಳ ಶ್ರೀ ರಾಜ ರಂಗದೇವರಾಯರು ಈಗ ವಾಸವಾಗಿರುವರು" (ಅದೇ ಪುಟ) ಎಂದು ಸೂಚಿಸುತ್ತಾರೆ. ಪ್ರಾಯಶಃ ಈ ವ್ಯಕ್ತಿಯನ್ನು ಲೇಖಕರು ಖುದ್ದಾಗಿ ಸಂದರ್ಶಿಸಿದ್ದಿರ ಬಹುದು. ಏನೇ ಇದ್ದರೂ ೧೭೯೦ರ ಹೈದರಾಬಾದ್ ನಿಜಾಮ್ ಮತ್ತು ಮರಾಠಾ ಪೇಶ್ವೆಗಳ ನಡುವೆ ಆದ ಒಪ್ಪಂದದಲ್ಲಿ ಆನೆಗೊಂದಿಯನ್ನು ಜಹಗೀರನ್ನಾಗಿ ರೂಪಿಸ ಲಾಗಿತ್ತು. ಇಂಗ್ಲಿಷರ ಆಳ್ವಿಕೆಗೆ ಒಳಪಟ್ಟನಂತರ ಈ ಮನೆತನದವರಿಗೆ ಗೌರವವೇತನ (ಪಿಂಚಣಿ)ದ ಸಮಸ್ಯೆ ತಲೆದೋರಿದ್ದಿತು. ಇದಕ್ಕೆ ಕಾರಣವೆಂದರೆ, ಆನೆ ಗೊಂದಿಯು ನೈಜಾಮರ ಆಡಳಿತಕ್ಕೆ ಒಳಪಟ್ಟಿದ್ದುದು.[೧೪] ರಾಮಸ್ವಾಮಯ್ಯಂಗಾರ್ ಅವರು ಪ್ರಸ್ತಾಪಿಸುವ ಶ್ರೀ ರಾಜ ರಂಗದೇವರಾಯ ಎಂಬವರು ೧೯೦೨ ರಿಂದ ೧೯೧೪ರ ವರೆಗೆ ಆನೆಗೊಂದಿ ದೊರೆ ಯಾಗಿದ್ದ ರಾಜಾ ಶ್ರೀರಂಗದೇವರಾಯರೇ. ಇವರನ್ನು ಪಂಪಾಪತಿರಾಜು ಎಂತಲೂ ಗುರುತಿಸಲಾಗುತ್ತಿತ್ತು.

* * *

'ಜೀರ್ಣವಿಜಯನಗರಾದರ್ಶಂ' ಕೈಪಿಡಿಯು ಹಂಪಿಯ ಸ್ಮಾರಕಗಳನ್ನು ಆತ್ಮೀಯ ವಾಗಿ ಪರಿಚಯಿಸುವ ಗುಣವುಳ್ಳದ್ದು. ಮುಖ್ಯವಾಗಿ, ವಿದ್ಯಾರ್ಥಿಗಳನ್ನೂ ಜನಸಾಮಾನ್ಯ ರನ್ನೂ ಗಮನದಲ್ಲಿರಿಸಿಕೊಂಡು ಸಿದ್ಧಗೊಂಡುದು. ಇದನ್ನು ರಚಿಸುವ ಕೆ. ರಾಮಸ್ವಾಮಯ್ಯಂಗಾರ್ ಅವರು ವಿಜಯನಗರ ಇತಿಹಾಸವನ್ನು ಆದ್ಯಂತವಾಗಿ ಅಭ್ಯಾಸ ಮಾಡಿದಂತೆ ತೋರುತ್ತದೆ. ಇಂಥದೊಂದು ಕೈಪಿಡಿಯನ್ನು ರಚಿಸುವ ಪ್ರೇರಣೆ ಅವರಿಗೆ ಒದಗಿದ್ದರೆ, ಅದು ವಿಜಯನಗರ ಇತಿಹಾಸದಲ್ಲಿ ಹುದುಗಿರುವ ಮಹೋನ್ನತ ಸಂಗತಿಗಳಿಂದಲೇ. ಹಿಂದಿನ ಹಾಗೂ ಸಮಕಾಲೀನ ಶಾಸನಸಂಪುಟಗಳು, ಪ್ರಕಟಿತ ಬರಹಗಳು, ಸಂದರ್ಶನ ಮತ್ತು ಕ್ಷೇತ್ರಕಾರ್ಯ ಮಾಹಿತಿ ಇತ್ಯಾದಿಯನ್ನು ಅವರು ತಮ್ಮ ಬರವಣಿಗೆಯಲ್ಲಿ ಬಳಸಿಕೊಂಡಿರುವರು. ಅಲ್ಲದೆ, ಹಂಪಿಯ ಸ್ಮಾರಕಗಳ ಸ್ವಯಂ ವೀಕ್ಷಣೆಯಿಂದ ಗ್ರಹಿಸಿದ ವಿಚಾರಗಳೂ ಅವರ ಕೈಪಿಡಿಯಲ್ಲಿ ವ್ಯಕ್ತಪಟ್ಟಿವೆ. ಅಧ್ಯಯನದ ಹಿನ್ನೆಲೆಯುಳ್ಳ ಅನುಭವಿ ಲೇಖಕನ ಸ್ಮೃತಿಯಾಗಿ ರೂಪುಗೊಂಡಿರು ವಂಥಾದ್ದು 'ಜೀರ್ಣವಿಜಯನಗರಾಧರ್ಶಂ'.

ಹಂಪಿ ಸ್ಮಾರಕಗಳ ಸಮೂಹವನ್ನು ರಾಮಸ್ವಾಮಯ್ಯಂಗಾರ್ ಅವರು ಮೂರು ಭಾಗಗಳಾಗಿ ವಿಂಗಡಿಸಿರುವಂತೆಯೇ ಅವುಗಳ ವೀಕ್ಷಣೆಗೂ ಮೂರು ದಿನಗಳು ಅಗತ್ಯ ವಿರುವುವೆಂದು ಸ್ವಯಂ ಸುತ್ತಾಡಿ ತಿಳಿದು ಹೇಳಿರುವರು. "ಈ ವಿಜಯನಗರವನ್ನು

ನೋಡಿದ ಒಬ್ಬ ದೊಡ್ಡ ಮನುಷ್ಯನು ಅಲ್ಪಕಾಲ ಅಲ್ಲಿದ್ದು ನೋಡದವುಗಳನ್ನು ಸಂಗ್ರಹವಾಗಿ ಬರೆದ ವಿಷಯವಿದು. ಈ ನಗರವನ್ನು (ಹಂಪಿಯನ್ನು) ಸಮಗ್ರವಾಗಿ ನೋಡಬೇಕೆಂದರೆ ಕೆಲವು ತಿಂಗಳ ಕಾಲ ಅಲ್ಲಿಇದ್ದ ಹೊರತು ತಿಳಿಯದು" (ಪು.೬೧) ಎಂಬ ಅವರ ಹೇಳಿಕೆಯಲ್ಲಿಯ ಪ್ರಾಮಾಣಿಕತೆಯನ್ನು ಮೆಚ್ಚದಿರುವಂತಿಲ್ಲ. ತಮಗೆ ದೊರೆತ ಅಲ್ಪಕಾಲಾವಧಿಯಲ್ಲೆ ಹಂಪಿಯನ್ನು ಸಮಗ್ರವಾಗಿ ನೋಡಿ ಅಲ್ಲಿಯ ಸ್ಮಾರಕಗಳನ್ನು ಕರಾರುವಾಕ್ಕಾಗಿ ಹಾಗೂ ಸುಂದರವಾಗಿ ಬಣ್ಣಿಸಿರುವ ಅವರ ಶ್ರದ್ಧೆ-ಆಸಕ್ತಿಗಳನ್ನು ಗಮನಿಸಿದರೆ, ಜೀವನಪ್ರೀತಿ, ಅಗಾಧ ಉತ್ಸಾಹ ಹಾಗೂ ಬರವಣಿಗೆಯ ಆನಂದಗಳನ್ನು ಹೊಂದಿದ ವ್ಯಕ್ತಿಯಾಗಿ ಕಂಡುಬರುತ್ತಾರೆ ರಾಮಸ್ವಾಮಯ್ಯಂಗಾರ್.

ಇಪ್ಪತ್ತನೇ ಶತಮಾನದ ಆದಿಯಲ್ಲೆ ಕೈಪಿಡಿಯೊಂದನ್ನು ರಚಿಸಿ ಹಂಪಿ ವೀಕ್ಷಣೆಗೆ ಬರುವವರಿಗೆ ಅನುಕೂಲ ಮಾಡಿಕೊಟ್ಟ ಈ ಲೇಖಕರು ಅಭಿನಂದನೆಗೆ ಪಾತ್ರರು. ಸದುದ್ದೇಶದಿಂದ ಕೈಗೊಳ್ಳುವ ಯಾವುದೇ ಕೆಲಸಕ್ಕೂ ಯಾವ ಕಾಲಕ್ಕಾದರೂ ತಕ್ಕ ಮರ್ಯಾದೆ ದೊರೆಯುತ್ತದೆನ್ನುವುದಕ್ಕೆ ಪ್ರಸ್ತುತ 'ಜೀರ್ಣವಿಜಯನಗರಾದರ್ಶಂ' ಒಂದು ಅತ್ಯುತ್ತಮ ಉದಾಹರಣೆ!

ಅನುಬಂಧ

೧. ಮತಂಗ ಪರ್ವತ/ ಮಾತಂಗನ ಬೆಟ್ಟದಿಂದ ಕಾಣಬರುವ ಹಂಪಿ ಸುತ್ತಮುತ್ತಲ ಪ್ರಾಕೃತಿಕ ಪರಿಸರದ ವರ್ಣನೆ

ಈ ಪರ್ವತರಾಶಿಗೆ ದಕ್ಷಿಣಪಾರ್ಶ್ವದ ಕೆಳಭಾಗದಲ್ಲಿ ಉದ್ದಕ್ಕೂ ಹಸುರು ಹುಲ್ಲಿನಿಂದಲೂ, ಅಲ್ಲಲ್ಲಿ ನಾನಾವಿಧಗಳಾದ ಲತೆಗಳು, ವಿವಿಧ ವರ್ಣಗಳುಳ್ಳ ಹೂಗಳು, ಅರಳಿರುವುದರಿಂದಲೂ, ಅಲ್ಲಿನ ಭೂಮಿಯು ರತ್ನಕಂಬಳಿಯನ್ನು ಹಾಸಿದಹಾಗೆ ಕಣ್ಣುಗಳಿಗೆ ಹಬ್ಬವನ್ನುಂಟುಮಾಡುತ್ತಿರುವುದು. ಇದಕ್ಕೆ ಮುಂದಿನ (ದಕ್ಷಿಣ) ಭಾಗದಲ್ಲಿನ ಭೂಮಿಯು ದೊಡ್ಡ ಮರಗಳಿಗೆ ನೆಲೆಯಾಗದಿದ್ದರೂ ಅಲ್ಲಲ್ಲಿ ವಿವಿಧ ಜಾತಿಗಳ ಸಣ್ಣ ಗಿಡಗಳೂ ಪೊದರುಗಳಂತೆ ಹೆಣೆದುಕೊಂಡಿರುವ ಲತಾನಿಕುಂಜಗಳೂ ನೇತ್ರಪರ್ವವನ್ನೊದಗಿಸುತ್ತಿರುವುವು. ಮೃದುಮಧುರವಾಗಿ ದನಿಗೈಯ್ವ ಪಕ್ಷಿಗಳು ಆ ವೃಕ್ಷಗಳ ಮೇಲೆ ಕುಳಿತುಕೊಂಡು ಇಂಪಾಗಿ ಗಾನಮಾಡುತ್ತಾ ಶ್ರವಣರಂಧ್ರಗಳಿಗೆ ಔತನವನ್ನು ಮಾಡುತ್ತಿರುವುವು. ಕೀರಶಾರಿಕಾದಿ ಪಕ್ಷಿಗಳ ಸವಿನುಡಿಗಳು ಶ್ರೋತ್ರ ರಸಾಯನವಾಗಿ ಕೇಳಬರುತ್ತ ಗುಡ್ಡವನ್ನು ಹತ್ತಿದ್ದರಿಂದ ಉಂಟಾದ ಪರಿಶ್ರಮವನ್ನು ತೋರದಂತೆ ಮಾಡುವುವು. ಇಂತಹ ಸೊಬಗಿನಿಂದ ಮೆರೆಯುವ ಈ ಭುವನವು ಶರಭ, ಸಿಂಹ, ಶಾರ್ದೂಲಾದಿ ಕ್ರೂರಮೃಗಗಳ, ಸಂಚಾರಕ್ಕೆ ತಕ್ಕದ್ದಲ್ಲದೆ ಇದ್ದರೂ, ಸುಂದರ ವಿಶಾಲ ಚಂಚಲಲೋಚನಗಳುಳ್ಳ ಹುಲ್ಲೆಗಳು, ಮೊಲಗಳು, ಮರ್ಕಟ, ಮಾರ್ಜಾಲಾದಿ

ಸಾಧಾರಣಮೃಗಸಮೂಹಗಳು ಇವುಗಳಿಗೆ ಸ್ಥಾನವಾಗಿರುವುದೆಂದು ಹೇಳಲು ಅಡ್ಡಿಯಿಲ್ಲ. ಈ ವನದ ದಕ್ಷಿಣಭಾಗದಲ್ಲಿ ತುಂಗಭದ್ರಾನದಿಯು ಸಣ್ಣದಾಗಿ ಪಶ್ಚಿಮದಿಂದ ಪೂರ್ವಕ್ಕ ಪ್ರವಹಿಸುತ್ತಲಿರುವುದು. ಈ ಪ್ರವಾಹಕ್ಕೆ ಮುಂದುಗಡೆ ಬತ್ತದಗದ್ದೆಗಳು ಸಮೃದ್ಧಿಯಾಗಿ ಬೆಳೆದಿರುವುವು. ಅವುಗಳಲ್ಲಿ ಸುವರ್ಣಛಾಯೆಯುಳ್ಳ ಕೆಲವು ಬತ್ತದಗದ್ದೆಗಳಲ್ಲಿನ ಪೈರುಗಳು ಹೊರಲಾರದಷ್ಟು ಧಾನ್ಯಕಾಳುಗಳುನ್ನಳ್ಳ ತೆನೆಗಳನ್ನು ತಳೆದು ವಿದ್ಯಾ, ವಿನಯಸಂಪನ್ನರಾದ ಸಜ್ಜನರತೆರದಿಂದ ವಸುಂಧರೆಗೆ ತಮ್ಮ ತಲೆಗಳನ್ನು ಸೋಕುವಂತೆ ಕಾಣಬರುವುವು. ಅವುಗಳಲ್ಲಿ ಕೆಲವು ಜಳ್ಳುಕಾಳುಗಳುಳ್ಳವಾಗಿ ವಂಗವರ್ಣವುಳ್ಳ ತೆನೆಗಳಿಂದ ಕೂಡಿದ ಪೈರುಗಳು ವಿದ್ಯಾವಿಹೀನರಾದ ದುರ್ಜನರ ತೆರದಿಂದ ತಮ್ಮ ಲೋಪಗಳನ್ನು ತಿಳಿಯದೆ ಡಾಂಭಿಕದಿಂದ ತಲೆಎತ್ತಿ ತಮ್ಮ ಬೆಳ್ತನವನ್ನೆಲ್ಲರಿಗೂ ತೋರಿ ಸುತ್ತಿರುವುವು ಮತ್ತು ಅಲ್ಲಿನ ಜಲಪ್ರವಾಹಗಳೂ, ಬಾಳೆ ಮತ್ತು ಕಬ್ಬಿನತೋಟಗಳೂ, ಅತಿಶಯವಾಗಿ ಬೆಳೆದು ನೇತ್ರಾನಂದವನ್ನುಂಟುಮಾಡುತ್ತಾ ಅಲ್ಲಿಂದ ಬೀಸುವ ಮಂದ ಮಾರುತವೂ ಮನಸ್ಸಿಗೆ ತಂಬ ಉಲ್ಲಾಸವನ್ನುಂಟುಮಾಡುತ್ತಿರುವುವು. ಆಹಾ! ನಗರ ಶೋಚನೆಯು ಹೆಚ್ಚಿ, ಎಲ್ಲಿ ನೋಡಿದರೂ ಲತಾಕುಂಜಗಳೂ, ಪುಷ್ಪೋದ್ಯಾನ ಗಳೂ, ದ್ರಾಕ್ಷಾತಾಂಬೂಲಾದಿ ತೋಟಗಳೂ, ಸಮೃದ್ಧಿಯಾಗಿ ಬೆಳೆದು, ವಿವಿಧ ಕುಸುಮ ಪರಿಮಳ ಭಾರವನ್ನು ವಹಿಸಿ, ವಾಯುವು ತನ್ನ ಗಂಧವಹನಾಮವನ್ನು ಸಾರ್ಥಕ ಗೊಳಿಸುವಂತೆ ಬೀಸುತ್ತಿದ್ದಾಗ ಪ್ರಾಚೀನಕಾಲದಲ್ಲಿ ಪ್ರಜೆಗಳು ಎಷ್ಟು ಆನಂದವನ್ನು ಹೊಂದುತ್ತಿದ್ದರೊ ಬಣ್ಣಿಸಲಾರಳವು! ಆ ವನವು ಅತ್ಯಂತ ಮನೋಹರವಾಗಿ ಫಲಭಾರದಿಂದ ಬಾಗಿ ಭೂಮಿಯನ್ನು ಸ್ಪೃಶಿಸುತ್ತಾ ಹೊಸ ಪೂಗಳ ಕಾಂತಿಯುಳ್ಳ ತರುಗಳಿಂದ ಸೇವಿತವಾಗಿರುವುವು. ಅಲ್ಲಿನ ದೇವಾಲಯಗಳು ದಿನದಿನವೂ ಭಗವನ್ನಾಮಗಳು ಭಜಿಸುವ ಭಕ್ತರ ನೆಲೆಯಾಗಿ ಅನುದಿನವೂ ನೃತ್ತ ಗೀತ ವಾದ್ಯಾದಿ ವೈಭವಗಳಿಗೆ ಯೋಗ್ಯವಾಗಿ ಮೆರೆಯುತ್ತಿರುವ ಆ ಪುಣ್ಯಭೂಮಿಯು ಭೂತಗಳ ಸ್ವರ್ಗವಾಗಿರುವು ದೆಂದು ಹೇಳಲಿಕ್ಕೆ ಲೇಶವಾದರೂ ಸಂದೇಹವುಂಟೆ? (ಪು. ೪೮-೪೯).

೨. ವಿಠ್ಠಲಸ್ವಾಮಿ ದೇವಾಲಯದ ಶಿಲ್ಪಕಲಾ ವರ್ಣನೆ

ಶ್ರೀ ವಿಠ್ಠಲಸ್ವಾಮಿ ದೇವಾಲಯವು ಶ್ರೀ ವಿದ್ಯಾನಗರದ ಪೂರ್ವದಿಕ್ಕಿನಲ್ಲಿ ತುಂಗಭದ್ರಾನದಿಯ ಓರೆಯಲ್ಲಿ ಕಟ್ಟಲ್ಪಟ್ಟಿರುವುದು. ಈ ದೇವಾಲಯವು ಒಬ್ಬ ರಾಜನ ಕಾಲದಲ್ಲಿಯೇ ಕಟ್ಟಲ್ಪಟ್ಟುದಲ್ಲ. ಕೃಷ್ಣದೇವರಾಜರು ವಿಷ್ಣುಭಕ್ತಿ ಪರಾಯಣರಾಗಿ ಇದನ್ನು ಕಟ್ಟಿಸಲಾರಂಭಿಸಿದರೆಂದು ಹೇಳುತ್ತಾರೆ. ಈ ದೇವಾಲಯದ ಸಿಂಹದ್ವಾರವು ಪೂರ್ವಾಭಿಮುಖವಾಗಿರುವುದು. ಗರ್ಭಾಲಯದ ಎರಡು ಪಾರ್ಶ್ವಗಳಲ್ಲಿಯೂ ಇರುವ ಮಂಟಪಗಳ ಶಿಲ್ಪಕಳಾನೈಪುಣ್ಯವನ್ನು ಹೊಗಳಲು ಸಾವಿರ ನಾಲಿಗೆಗಳಾದರೂ ತೀರದು.

ಏಕಶಿಲಾಮಯವಾಗಿ ಒಂದೊಂದು ಕಲ್ಲು ಕಂಭದಲ್ಲಿ ಹದಿನಾರು ಕಂಭಗಳು ವಿಂಗಡಿಸಲ್ಪಟ್ಟು ಅವುಗಳಲ್ಲಿ ನಾನಾವಿಧವಾದ ವಿಗ್ರಹಗಳು ಸಹಿತ ಕೆತ್ತಲ್ಪಟ್ಟಿರುವುವು. ದೇವಾಲಯದ ಛಾವಣಿ ಕೂಡ ಶಿಲಾಮಯವಾಗಿ, ಅದರಲ್ಲಿ ಶಿಲ್ಪ ಕೆಲಸಗಳನ್ನು ನೋಡಿದರೆ ಆ ಕಾಲದಲ್ಲಿನ ಶಿಲ್ಪಕಳಾವಿಜ್ಞಾನದ ಔನ್ನತ್ಯವನ್ನು ಸಾರಿ ಹೇಳುವಂತಿರುವುದು. ದೇವಾಲಯದ ಹೊದಿಕೆಯ ಸೂರುಗಳಿಂದ ಮೂಲೆಗಳಲ್ಲಿ ಜೋಲಾಡುತ್ತಿರುವ ಕಲ್ಲಿನ ಸರಪಣಿಗಳಿಗೆ ದೀಪದ ಬಟ್ಟಲುಗಳನ್ನು ತಗುಲಿಸುತ್ತಿದ್ದರಂತೆ. ಈಗ ಈ ಸರಪಣಿಗಳು ಮಾತ್ರ ಕಾಣಬರುವುವು. ಆ ದೇವಾಲಯವು ಉಳಿದ ದೇವಾಲಯಗಳಂತೆಯೇ ಶಿಲಾಮಯ ನಿರ್ಮಿತವಾದುದು. ಕಬ್ಬಿಣವಾಗಲಿ, ಮರವಾಗಲಿ, ಮೊಳೆಗಳಾಗಲಿ ಇಲ್ಲದೆ ನಿರ್ಮಿಸಲ್ಪಟ್ಟಿರುವುದನ್ನು ನೋಡಿದ ಜನರು ಆಶ್ಚರ್ಯ ನಿಮಗ್ನಮನಸ್ಕರಾಗದೆ ಹೋಗಲಾರರು. ಚೆನ್ನಾಗಿ ಪರಿಶೀಲಿಸಿ ನೋಡಿದರೆ ಈ ಆಲಯವು ಸಂಪೂರ್ಣ ವೈಭವದಿಂದಿದ್ದಾಗ ಮಾಳಿಗೆಗೂ ಕಂಭಗಳಿಗೂ ವಿವಿಧಗಳಾದ ಬಣ್ಣಗಳನ್ನು ಬಳಿಯುತ್ತಿದ್ದಂತೆ ಗುರುತುಗಳು ಕಾಣಬರುತ್ತಿವೆ. ಇಂತಹ ಆಶ್ಚರ್ಯ ನಿರ್ಮಾಣವನ್ನು ಹೊಂದಿ, ಸುತ್ತಲೂ ದೀಪಮಾಲೆಯು ತೇಜಸ್ಸನ್ನು ಪ್ರಸರಿಸುತ್ತಿರಲು, ವಾದ್ಯಘೋಷವು ನಭೋಂತರಾಳವನ್ನು ತುಂಬುತ್ತಿರಲು ಪರಮ ವೈಭವದಿಂದ ಒಪ್ಪುತ್ತಿದ್ದ ಕಾಲದ ಸಾಯಂ ಸಮಯಗಳು ಹೇಗಿದ್ದುವೋ ಊಹಿಸಲಸಾಧ್ಯವು (ಪು. ೫೮-೫೯).

೩. ಉಪಸಂಹಾರ

ಪೂರ್ವದಲ್ಲಿ ಒಂದಾನೊಂದು ಕಾಲದಲ್ಲಿ ವಿಜಯನಗರ ಸಾಮ್ರಾಜ್ಯಲಕ್ಷ್ಮಿಗೆ ತಿಲಕಪ್ರಾಯವಾಗಿ ಆಂಧ್ರಭಾಷಾ ಯೋಷಾಮಣಿಯು ಯೌವನವನ್ನು ಹೊಂದಿದ ಮಂದಿರವಾಗಿ ಅಪ್ರತಿಮ ವೀರಾಗ್ರೇಸರರಿಗೆ ಹುಟ್ಟಿದ ಮನೆಯೆನಿಸಿ ತುರುಷ್ಕರಾಜರ ಎದೆ ಬಿರಿಯುವಂತೆ ದಿನದಿನಾಭಿವೃದ್ಧಿಯನ್ನು ಹೊಂದಿ ಐಶ್ವರ್ಯ ಶೌರ್ಯ ಪ್ರಾಭಾವಗಳಲ್ಲಿ ಪ್ರಪಂಚದಲ್ಲಿ ಇದಕ್ಕೆಣೆಯಾದುದು ಮತ್ತೊಂದಿಲ್ಲವೆಂದು ಪಶ್ಚಿಮಖಂಡ ವಾಸಿಗಳಿಂದಲೂ ಪೂರ್ವಖಂಡ ವಾಸಿಗಳಿಂದಲೂ ಸಾವಿರ ಬಾಯಿಗಳಿಂದ ಹೊಗಳಿಕೆ ಯನ್ನು ಪಡೆದು ಶಿಲ್ಪಿಗಳ ನೈಪುಣ್ಯಕ್ಕೆ ವಿಹಾರಭೂಮಿಯಾಗಿ ಶರಣಾಗತರಿಗೆ ರಕ್ಷಕಸ್ಥಾನ ವಾಗಿ ಹೆಸರುಗೊಂಡ ವಿಜಯನಗರ ಸಂಸ್ಥಾನವು, ಈಗ ರೂಪರಹಿತವಾಗಿ, ಜನಶೂನ್ಯ ವಾಗಿ, ಅನಾರೋಗ್ಯ ಪ್ರದೇಶವಾಗಿ ಅರಣ್ಯವಾಗಿ ನೋಟಕರಿಗೆ ಭಯವನ್ನೂ ಮನಸ್ಸಂತಾಪವನ್ನೂ ಉಂಟುಮಾಡುತ್ತಲಿಧೆ. ಆಹಾ! ಕಾಲಪ್ರಭಾವಕ್ಕೆ ಯಾರೇನು ಮಾಡಬಹುದು!! (ಪು. ೬೧-೬೨).

ಟಿಪ್ಪಣಿಗಳು

೧. ಮಲ್ಲೇಪುರಂ ಜಿ. ವೆಂಕಟೇಶ (ಸಂ.),೧೯೯೨, ಪ್ರವಾಸಸಾಹಿತ್ಯ: ಒಂದು ಅಧ್ಯಯನ, ಹೊನ್ನ ಪ್ರಕಾಶನ, ಬೆಂಗಳೂರು, ಪು.ix -x :ಪ್ರಸ್ತಾವನೆ;೭೫ , ೯೧

೨. ಶ್ರೀನಿವಾಸ ಹಾವನೂರ, ೧೯೭೪, ಹೊಸಗನ್ನಡದ ಅರುಣೋದಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪು. ೨೮೯-೨೯೦; ಈ ಪುಸ್ತಕವು ೧೮೯೦ ರಲ್ಲಿ ಭಾರತೀ ಪ್ರೆಸ್, ಮುಂಬಯಿ ಇಲ್ಲಿ -ಮುದ್ರಣಗೊಂಡು ಹೊರಬಿದ್ದಿತು.

೩. ಎಲ್.ಎಸ್. ಶೇಷಗಿರಿರಾವ್, 'ಹೊಸಗನ್ನಡ ಸಾಹಿತ್ಯ', ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ (ಸಂ:ಜಿ.ಎಸ್. ಶಿವರುದ್ರಪ್ಪ), ಸಂಪುಟ ೧೦, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೫, ಪು.೨೮೬

೪. ಪ್ರವಾಸ ಸಾಹಿತ್ಯ: ಒಂದು ಅಧ್ಯಯನ, ಪು.xi : ಪ್ರಸ್ತಾವನೆ

೫. ಪಂಪಾಯಾತ್ರೆ (೫ ನೇ ಆವೃತ್ತಿ), ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೦, ಪು. ೨೨

೬. ಹೊಸಗನ್ನಡದ ಅರುಣೋದಯ, ಪು. ೫೭, ೨೭೫-೨೭೬, ೫೧೧-೫೧೨; ಮೈಸೂರಿನ ಗ್ರ್ಯಾಜುಯೇಟ್ ಟ್ರೇಡಿಂಗ್ ಅಸೋಸಿಯೇಷನ್(ಜಿ.ಟಿ.ಎ.) ಮತ್ತು ಕರ್ನಾಟಕ ಗ್ರಂಥಮಾಲಾ-ಇವುಗಳ ಆರಂಭದ ಕಾರ್ಯಕರ್ತರೆಂದರೆ ಎಲ್. ಜಯರಾವ್. ಎಂ. ಶಾಮರಾವ್. ಬಾಪು ಸುಬ್ಬರಾಯ ಮತ್ತು ಅಪ್ಪಣ್ಣಶೆಟ್ಟಿ.

೭. ಆನ್ಯುಯಲ್ ರಿಪೋರ್ಟ್ ಆನ್ ಸೌತ್ ಇಂಡಿಯನ್ ಎಪಿಗ್ರಫಿ, ೧೯೦೪, ಸಂಖ್ಯೆ ೨೫, ಕ್ರಿ.ಶ. ೩-೨-೧೪೧೨:ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್, ಸಂಪುಟ IX, ಭಾಗ II, ಸಂಖ್ಯೆ ೪೩೬; ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ:೧, ಬಳ್ಳಾರಿ ಜಿಲ್ಲೆ, ಮಲಪನಗುಡಿ ೩೨, ಹೊಸಪೇಟೆ ತಾಲ್ಲೂಕು

೮. ವಿವರಗಳಿಗೆ: ವಿರೂಪಾಕ್ಷಿ ಪೂಜಾರಹಳ್ಳಿ, 'ಕಮಲಾಪುರದ ದಾದಾಪೀರ್ ಛತ್ರ', ಕನ್ನಡಪ್ರಭ, ೨-೩-೧೯೯೭:ಸಾಪ್ತಾಹಿಕ ಪ್ರಭ

೯. ನೋಡಿ: ವಸುಂಧರಾ ಫಿಲಿಯೋಜಾ(ಸಂ.), ೧೯೯೯, ವಿಜಯನಗರ ಆ್ಯಸ್ ಸೀನ್ ಬೈ ಡೊಮಿಂಗೊ ಪೇಸ್ ಅಂಡ್ ಫರ್ನೊ ನ್ಯೂನಿಜ್, ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ, ನ್ಯೂಡೆಲ್ಲಿ, ಪು. ೩೩೨: ಅನುಬಂಧ-ಬಿ; ಎಡ್ವರ್ಡ್ ಈಸ್ಟ್‌ವಿಕ್, ೧೮೭೯, ಮುರ್ರೆಸ್ ಹ್ಯಾಂಡ್‌ಬುಕ್ ಆಫ್ ದಿ ಮದರಾಸ್ ಪ್ರೆಸಿಡೆನ್ಸಿ (೨ ನೇ ಆವೃತ್ತಿ), ಲಂಡನ್, ಪು. ೩೪೬-೩೫೫. ಹಂಪಿ ಸ್ಮಾರಕಗಳನ್ನು ಕುರಿತ ಎಡ್ವರ್ಡ್ ಈಸ್ಟ್‌ವಿಕ್ ನೀಡಿರುವ ವಿವರಣೆಯೇ ಖಂಡಿತವಾಗಿಯೂ ಹಂಪಿ ಕುರಿತ ಮೊತ್ತ ಮೊದಲ ಕೈಪಿಡಿಯಾಗಿದೆಂಬುದು ವಸುಂಧರಾ ಫಿಲಿಯೋಜಾ ಅವರ ಅಭಿಪ್ರಾಯ.

೧೦. ಪೂರ್ವೋಕ್ತ, ೧೯೯೯, ಪು. ೩೩೨-೩೩೩: ಅಡಿಟಿಪ್ಪಣಿ ೨ : ಈ ಪ್ರವಾಸಮಂದಿರವು ವಿಜಯನಗರ ಶೈಲಿಯ ದೇವಾಲಯವಾಗಿದ್ದಿತೆಂದೂ ಇದು ನರಸಿಂಹದೇವರಿಗೆ ನಿರ್ಮಿಸಿದುದೇ ಆಗಿದ್ದಿರಬೇಕೆಂದೂ ವಸುಂಧರಾ ಫಿಲಿಯೋಜಾ ಅವರು ಸೂಚಿಸಿದ್ದಾರೆ.

೧೧. ಹೆಚ್.ಜಿ. ಕಾರ್ಪೆಂಟರ್(ಪಬ್ಲಿಷರ್), ವಿಜಯನಗರ: ಸಿಟಿ ಆಫ್ ವಿಕ್ಟರಿ (ಎ ಹಿಸ್ಟರಿ ಆಫ್ ದಿ ಹಂಪಿ ರೂಯಿನ್ಸ್), ದಿ ಮದರಾಸ್ ಅಂಡ್ ಸದರ್ನ್ ಮರಾಠಾ ರೈಲ್ವೆ ಕಂಪನಿ ಲಿಮಿಟೆಡ್, ಮದರಾಸ್, ಪು. ೪

೧೨. ಹಂಪಿ, ಆರ್ಕಿಯಾಲಜಿಕಲ್ ಸರ್ವೆ ಆಫ್ ಇಂಡಿಯಾ, ನ್ಯೂ ದೆಹಲಿ, ೧೯೮೩, ಪು. ೭೧

೧೩. ಪೂರ್ವೋಕ್ತ, ೧೯೯೯, ಪು. ೩೩೩: ಅಡಿ ಟಿಪ್ಪಣಿ ೧

೧೪. ರಾಜಾ ಅಚ್ಯುತ ದೇವರಾಯ, ಜೆ.ಆರ್. ರಾಮಮೂರ್ತಿ, ಟಿ. ಪರಮೇಶ್ವರಪ್ಪ, ೧೯೯೮, ಆನೆಗೊಂದಿ-ಒಂದು ಕಿರು ಪರಿಚಯ, ಹಂಪಿ ಉತ್ಸವ ಸಮಿತಿ, ಆನೆಗೊಂದಿ, ಪು. ೧೩-೧೪

೩೯. ಹರಿಹರನ ಕಾರಿಕಾಲಮ್ಮೆರಗಳೆ : ಒಂದು ಸ್ತ್ರೀವಾದಿ ದೃಷ್ಟಿಕೋನ

ಡಾ. ಶ್ರೀಧರ ಪಿಸ್ಸೆ

ಹಂಪೆಯಲ್ಲಿ ಹದಿಮೂರನೆಯ ಶತಮಾನದ ಪೂರ್ವಾರ್ಧದಲ್ಲಿ ಜೀವಿಸಿದ್ದನೆಂದು ವಿದ್ವಾಂಸರು ಅಭಿಪ್ರಾಯಪಡುವ ಹರಿಹರನು ಪುರಾತನ ಶರಣರ ರಗಳೆಗಳು ಹಾಗೂ ಸಮಕಾಲೀನ ಶರಣರ ರಗಳೆಗಳನ್ನು ರಚಿಸಿರುವುದು ಎಲ್ಲರಿಗೂ ತಿಳಿದ ವಿಚಾರವಾಗಿದೆ. ಹರಿಹರನು ಶಿವಭಕ್ತರ ಜೀವನ ಚರಿತ್ರೆಯನ್ನು ನಿರೂಪಿಸುತ್ತ ಚರಿತ್ರೆ ಮತ್ತು ಪುರಾಣ ಗಳನ್ನು ಸೂಕ್ಷ್ಮ ನೆಲೆಯಲ್ಲಿ ಸಂಯೋಜಿಸಿ ತಾನು ಮಂಡಿಸಿದ ನಿರ್ಭರ ಭಕ್ತಿಯ ಭಾಗ ವಾಗಿ ಮಾಡಿದ್ದಾನೆ. ಯಾವುದೇ ಜೀವನ ಚರಿತೆ ತನ್ನ ಕಾಲದ ಚಾರಿತ್ರಿಕ ಬೆಳವಣಿಗೆ ಒಂದಂಗವಾಗಿರುತ್ತದೆ ಮತ್ತು ವಾಸ್ತವ ಸತ್ಯಗಳು ಒಳಗೊಂಡ ಸಾಮಾಜಿಕ ಆಯಾಮ ವನ್ನು ಬಿಂಬಿಸುತ್ತದೆ. ಈ ಮಾತು ಹರಿಹರನ ರಗಳೆಗಳಿಗೂ ಅನ್ವಯಿಸುತ್ತದೆ. ಪ್ರಭುದೇವರ ರಗಳೆ ಮತ್ತು ಮಹಾದೇವಿಯಕ್ಕನ ರಗಳೆಗಳಿಗೂ ಅನ್ವಯಿಸುತ್ತದೆ. ಪ್ರಭುದೇವರ ರಗಳೆ ಮತ್ತು ಮಹಾದೇವಿಯಕ್ಕನ ರಗಳೆಗಳು ಒಳಗೊಂಡಿರುವ ಚಾರಿತ್ರಿಕ ಬೆಳವಣಿಗೆ ಮತ್ತು ಸಾಮಾಜಿಕ ವಾಸ್ತವಾಂಶಗಳು ವಾಸ್ತವವಾದದ ನೆಲೆಗಟ್ಟನ್ನು ಆಧರಿಸಿದೆ. ಇದು ಹರಿಹರನ ಎಲ್ಲ ರಗಳೆಗಳಲ್ಲೂ ಸಾಮಾನ್ಯ ಅಂಶವಾಗಿದ್ದು ಭಕ್ತಿಯ ನಿರ್ಭರತೆಯೊಂದಿಗೆ ಹೆಣೆದುಕೊಂಡಿದೆ. ಈ ಅಂಶ ಹರಿಹರನ ಪುರಾತನ ಶರಣರ ರಗಳೆಗಳಲ್ಲಿ 'ಕಾರಿಕಾಲಮ್ಮೆಯರ ರಗಳೆ'-ಯಲ್ಲಿ ಪ್ರಧಾನವಾಗಿ ಪ್ರಕಟವಾಗಿದೆ. ಕಾರಿ ಕಾಲಮ್ಮ ಎಂಬ ಸ್ತ್ರೀ ಭಕ್ತೆಯು ತನ್ನ ಸಮಾಜದ ಲಿಂಗಭೇದ ನೀತಿಯನ್ನು ಮುರಿದು ಒಬ್ಬ ಅಸಾಮಾನ್ಯ ಸಾಧಕಿಯಾಗಿ ಬೆಳೆಯುವ ಮತ್ತು ಬೆಳಗುವ ಪರಿಯನ್ನು ವರ್ಣಿಸ ಲಾಗಿದೆ.

ಹೆಣ್ಣಿನ ಹಕ್ಕು - ಅಧಿಕಾರವನ್ನು ದಮನಗೊಳಿಸಿ ನಿರಂತರ ಶೋಷಣೆಗೆ ತುತ್ತಾಗಿಸಿದ ಕಾರಣವನ್ನು ಶೋಧ ಮಾಡಿ ಪುರುಷಾಧಿಕಾರವನ್ನು ಪ್ರಶ್ನೆ ಮಾಡುವ ಮೂಲಕ ಅದರ ಅಧಿಕಾರ ಮೊಟಕುಗೊಳಿಸುವ ವಿಧಾನ ಅನುಸರಿಸುವುದಕ್ಕೆ ಇಂದು ಸ್ತ್ರೀವಾದವೆಂದು ಕರೆಯಲಾಗಿದೆ. ಆದರೆ ಸ್ತ್ರೀ ಶೋಷಣೆಯ ಪ್ರಜ್ಞೆ ಮತ್ತು ಮಹಿಳಾ ಸಂಘಟನೆ, ಚಳವಳಿ, ಸ್ತ್ರೀತ್ವ ಪ್ರತಿಪಾದನೆಯ ಕಲ್ಪನೆ ಮುಂತಾದವನ್ನೆಲ್ಲ ಕಾರಿಕಾಲಮ್ಮೆಯ ರಗಳೆಯ ಚೌಕಟ್ಟಿನಲ್ಲಿ ಊಹಿಸಲು ಸಾಧ್ಯವಿಲ್ಲದ ಮಾತು. ಕಾರೀಕಾಲಮ್ಮನ ಕತೆ ಮೊದಲಿಗೆ

ಪೆರಿಯ ಪುರಾಣದಲ್ಲಿ ಹೇಳಿದ್ದು, ಈಕೆ ಆರನೆಯ ಶತಮಾನದಲ್ಲಿ ಹುಟ್ಟಿ ತನ್ನ ತನವನ್ನು ನಿರೂಪಿಸಿದವಳೆಂದು ತಿಳಿದು ಬರುತ್ತದೆ. (ವಿವರಗಳಿಗೆ ಡಾ. ಶಾಂತಾ ಇಮ್ರಾಪುರ, 2001, ಧರ್ಮ : ಮಹಿಳೆ ಮತ್ತು ಸಮಾಜ, ಚೇತನ ಪ್ರಕಾಶನ, ಬೆಂಗಳೂರು, ಪುಟ - 81 ನೋಡಿ) ಇದನ್ನು ಆಧರಿಸಿದ ಪುರುಷರಷ್ಟೇ ಸಶಕ್ತವಾದುದು ಎಂಬುದನ್ನು ತನ್ನ ಜೀವನದ ಮೂಲಕ ತೋರಿಸಿದಳು ಎಂಬುದನ್ನು ಕಟ್ಟಿಕೊಡುತ್ತದೆ. ಆಕೆಯ ಕಾಲದಲ್ಲೂ ಪುರುಷ ಪರ ಮೌಲ್ಯಗಳು ಹೆಣ್ಣನ್ನು ಅವಗಣನೆಯಿಂದ ಕಾಣುತ್ತಿದ್ದುದು, ಲೈಂಗಿಕತೆಯ ಸೀಮಿತ ದೃಷ್ಟಿಕೋನಕ್ಕೆ ಕುಬ್ಜಳನ್ನಾಗಿಸಿದ್ದುದು ಸ್ಪಷ್ಟವಾಗಿ ಈ ರಗಳೆಯಲ್ಲಿ ಕಂಡು ಬರುತ್ತದೆ. ಕಾರಿಕಾಲಮ್ಮ ತನ್ನ ಕಾಲದಲ್ಲಿ ಧಾರ್ಮಿಕವಾಗಿ ಹಾಗೂ ಸಾಮಾಜಿಕವಾಗಿ ಮಾನ್ಯತೆ ಪಡೆದಿದ್ದ ಭಕ್ತಿ ಕಲ್ಪನೆಯ ಸಾಧನೆ ಮೂಲಕ ಸ್ತ್ರೀ ಕುರಿತ ಪುರುಷ ದೃಷ್ಟಿಕೋನವನ್ನು ಮೀರಿನಿಲ್ಲುವ ಬಗೆಯು ಅವಳ ರಗಳೆಯಿಂದ ತಿಳಿದು ಬರುತ್ತದೆ. ಕಾರಿಕಾಲಮ್ಮೆಯ ರಗಳೆಯಲ್ಲಿ ಆಕೆ ತನ್ನ ಸಾಧನೆಗೆ ಕಂಡುಕೊಂಡ ಏಕಮಾತ್ರ ಸಾಧನ ವೆಂದರೆ ಭಕ್ತಿ ಎಂಬ ಅಂತರಂಗ ಸಾಧನೆಯ ತೀವ್ರ ಹಂಬಲ. ಆಕೆ ಪುರುಷ ನಿರ್ಮಿತ ವೈಚಾರಿಕ ಆಕೃತಿಗಳನ್ನು ಬಳಸಿಕೊಂಡು ಅದನ್ನು ಲಿಂಗ ವ್ಯವಸ್ಥೆಯ ಆಚೆಗೆ ತಂದು ನಿಲ್ಲಿಸಿದುದು ಮತ್ತು ಸ್ತ್ರೀಪುರುಷರ ಒಟ್ಟು ಮಾನವ ಹಿತಸಾಧನೆಯ ಮೂಲಕ ಸ್ತ್ರೀಶಕ್ತಿಯನ್ನು ವ್ಯಕ್ತಪಡಿಸಿದುದು ಇಲ್ಲಿ ಕಾಣುವ ಮತ್ತೊಂದು ಮುಖ್ಯ ಅಂಶವಾಗಿದೆ. ಆಕೆ ಪುರುಷ ಕೇಂದ್ರಿತ ಅಹಂಕಾರಕ್ಕೆ ಪೆಟ್ಟು ನೀಡದೆಯೂ ಪುರುಷ ಆಕ್ರಮಣ ಸ್ವಭಾವವನ್ನು ಮಣಿಸಿದುದು ಇಲ್ಲಿ ಕಾಣುತ್ತದೆ. ಕಾರಿಕಾಲಮ್ಮ ತನ್ನ 'ತೀವ್ರ ಹಂಬಲ'ವೆಂಬ ಮಾನಸಿಕ ಸಾಧನಕ್ಕೆ ಏಕಪ್ರಕಾಶನ ನಿಷ್ಠೆ - ಬದ್ಧತೆಯನ್ನು ಹೊಂದಿದ್ದು, ಅದನ್ನೇ ತನ್ನ ಜೀವನದ ರೀತಿಯನ್ನಾಗಿಸಿಕೊಂಡಿದ್ದಳು ಎಂದು ಹರಿಹರ ಚಿತ್ರಿಸಿದ್ದಾನೆ. ಇದರಿಂದ ಆಕೆಯ ಸಾಧನೆಯ ಸ್ವಭಾವವನ್ನು ಪುರುಷ ಸಮಾಜದ 'ಸಾತ್ವಿಕ', 'ಮುಗ್ಧ ಸ್ವಭಾವ' ಎಂದು ಕರೆದು ಮಾನ್ಯ ಮಾಡಲು ಸಾಧ್ಯವಾಗಿದೆ. ಇದು ಪುರುಷತ್ವವು ಸ್ತ್ರೀಶಕ್ತಿಯ ಸ್ವರೂಪವನ್ನು ಒಪ್ಪಿ ಗೌರವಿಸಿದ ಸಂಕೇತವಾಗಿ ಕಾಣುತ್ತದೆ. ಹರಿಹರನ ಈ ರಗಳೆಯಲ್ಲಿ ಕಾರಿಕಾಲಮ್ಮೆಯ ಕತೆಯ ಸ್ವರೂಪ ಮತ್ತು ಬೆಳವಣಿಗೆಯನ್ನು ಈ ಕೆಳಗಿನಂತೆ ಗುರುತಿಸಿ ಅಧ್ಯಯನ ಮಾಡಲಾಗಿದೆ.

1. ಗುಪ್ತ ಸಾಧನೆಯ ಬಯಲು : ಸ್ತ್ರೀ ಶಕ್ತಿಯ ಪ್ರಕಟ
2. ಸಾಮಾಜಿಕ ದೃಷ್ಟಿಕೋನ ಮೀರಿ ಬೆಳೆದು ನಿಂತ ಸ್ತ್ರೀ ಪ್ರಜ್ಞೆಯ ಬಗೆ
3. ಇಷ್ಟ ದೈವದ ನಾಟ್ಯ - ಆಕಸ್ಮಿಕವಲ್ಲದ ಸಾಧಿತ ಮಾರ್ಗ
4. ತಲೆ ಕೆಳಗು ನಡಿಗೆ - ಸಾಧಕರ ಮತ್ತು ಸಾಮಾನ್ಯರ ನಡುವೆ ನಡವಳಿಕೆಯ ಅಂತರ

5. ಸಾಧಕರ ಭೇಟಿ - ಸಾಧಕಿಯ ಸ್ವಸಾಧನೆಯ ವಿವೇಚನಾ ಪ್ರಜ್ಞೆ
6. ಸಾಧಿತ ಸ್ಥಿತಿಗಿಂತ ಸಾಧನೆಯಿಂದ ಹೆಚ್ಚಿನವಳಾದ ಬಗೆ
7. ಸಾಧಕಿಯ ವಿನಯಶೀಲತೆ

ಕಾರಿಕಾಲಮ್ಮೆಯ ರಗಳೆಯ ವಿವಿಧ ಹಂತಗಳನ್ನು ಪರಿಶೀಲನೆ ಮಾಡುವ ಮೂಲಕ ಹರಿಹರನು ಚಿತ್ರಿಸಿರುವ ಆಕೆಯ ಸ್ತ್ರೀಶಕ್ತಿಯ ಸ್ವರೂಪವನ್ನು ಅರಿಯಬಹುದು.

1. ಗುಪ್ತ ಸಾಧನೆಯು ಬಯಲು : ಸ್ತ್ರೀಶಕ್ತಿಯ ಪ್ರಕಟ

ಕಾರಿಕಾಲಮ್ಮೆ ಕಾರಿಕಲ್ ಎಂಬ ಊರಿನ ಮಾಣಿಕಶೆಟ್ಟಿಯ ಮಡದಿ. ಆಕೆಯ ಪತಿ ವ್ಯಾಪಾರಿ ವಂಶದ ಕುಲಕ್ಕೆ ಸೇರಿದವನು. ತನ್ನ ಕುಲ ಪರಂಪರೆಯಿಂದಾಗಿ ಆತ ವ್ಯವಹಾರ ಪರಿಣತಿಯಲ್ಲಿ ಸಿದ್ಧಹಸ್ತ. ಇಂಥ ವ್ಯವಹಾರಿ ಗಂಡನನ್ನು ಪಡೆದಿರುವ ಕಾರಿಕಾಲಮ್ಮೆ ಅರಿವಿನ ಹಾದಿಯ ಹಂಬಲ ಹೊತ್ತವಳು. ತನ್ನ ಸಾಂಸಾರಿಕ ವ್ಯವಹಾರ ಗಳಿಗೆ, ಕೌಟುಂಬಿಕ ವ್ಯವಹಾರಗಳಿಗೆ ಧಕ್ಕೆ ಉಂಟಾಗದ ಹಾಗೆ ಕಾರಿಕಾಲಮ್ಮೆ ಅರಿವಿನ ಸಾಧನೆಯಲ್ಲಿ ತೊಡಗಿಕೊಂಡವಳು. ಹಾಗಾಗಿ ಭಕ್ತಿ ಮಾರ್ಗದಲ್ಲಿ ಆಕೆ ಜ್ಞಾನಸಾಧನೆ ಮಾಡಿರುವುದು ಅವಳನ್ನು ಬಿಟ್ಟು ಉಳಿದವರಿಗೆ ತಿಳಿದಿಲ್ಲ. ಕಾರಿಕಾಲಮ್ಮೆ ಒಬ್ಬ ಗುಪ್ತ ಸಾಧಕಿಯಾಗುವಲ್ಲಿ ಆಕೆಯ ಕುಟುಂಬದ, ಸಂಸಾರದ ಮಾನಸಿಕ ಪರಿಸರವೇ ಕಾರಣ ವಾಗಿದೆ ಎಂದು ಹರಿಹರ ಚಿತ್ರಿಸಿದ್ದಾನೆ.

ಭಕ್ತಿ ಸಾಧಕಿಯರೆಲ್ಲ ತಮ್ಮ ಕಾಯಕವನ್ನೇ ಸಾಧನೆಯ ಸಾಧನವನ್ನಾಗಿ ಮಾಡಿ ಕೊಂಡವರು. (ಇದಕ್ಕೆ ಹರಿಹರನ ಇತರ ರಗಳೆಗಳಲ್ಲಿ ಹಾಗೂ ವಚನ ಚಳುವಳಿಯ ಕೆಳವರ್ಗದ ವಚನಕಾರರಲ್ಲಿ ಸಾಕಷ್ಟು ವಿವರಗಳು ದೊರೆಯುತ್ತದೆ) ಗುಪ್ತ ಸಾಧಕಿಯಾದ ಕಾರಿಕಾಲಮ್ಮೆ ಕೂಡ ತಾನು ಮಾಡುವ ಅಡುಗೆ ಮನೆಯ ಕಾಯಕವನ್ನು ತನ್ನ ಸಾಧನೆಯ ಉಪಕರಣವನ್ನಾಗಿಸಿಕೊಂಡಿದ್ದಾಳೆ. ಅಡುಗೆಯನ್ನು ಮಾಡುವ ಎಡೆಯೆ ಆಕೆಗೆ ದೇವಾರ್ಚನ ಸ್ಥಳವಾಗಿದೆ. 'ನೆನೆವ ಘನ ಚಿಂತೆ ಸಕಲ ಸ್ತೋತ್ರವಭವಂಗೆ, ಮನದ ನಿರ್ಮಲದಗ್ಘವಣಿ... ಕಯ್ಯ ಕೀರೆಯೆ ಪರಿಮಳದ ಪುಷ್ಪವಭವಂಗೆ... ಸುಯ್ಯ ಕಂಪೇ ಗುಗ್ಗಳದ ಧೂಪವಭವಂಗೆ... ನೋಟವೇ ಬೆಳಗಿದಾರತಿ ಶಂಕರಂಗಲ್ಲಿ... ಊಟವಲ್ಲಿಯೆ ಸವೆದ ಬೋನ ದೋಗರವಲ್ಲಿ. ಇದು ಹರಿಹರ ವರ್ಣಿಸುವ ಕಾರಿಕಾಲಮ್ಮೆಯ ಭಕ್ತಿಯ ಮಾಟ. ಈ ಎಲ್ಲ ಕ್ರಿಯೆಗಳು ಭಾವನಾತ್ಮಕವಾಗಿ, ಮಾನಸಿಕವಾಗಿ, ಅಂತಃಕರಣ ಪೂರ್ವಕವಾಗಿ ನಡೆಯುತ್ತಿದ್ದವೆಂದು ಸೂಚಿತವಾಗಿದೆ. ಈಕೆಗೆ ರುದ್ರನೆ ತಂದೆಯಾಗಿದ್ದು, ಉಮಾದೇವಿಯೆ ತಾಯಿಯಾಗಿದ್ದಳೆಂದು ಬಣ್ಣಿಸಲಾಗಿದೆ. ಹಾಗೆಯೆ ಕುಮಾರಸ್ವಾಮಿ, ಗಣೇಶ, ವೀರಭದ್ರರು ಸೋದರರಾಗಿದ್ದರೆಂದು ಹೇಳಲಾಗಿದೆ. ಶಿವಪಾರ್ವತಿಯರಲ್ಲಿ ತನ್ನ ಕಷ್ಟಸುಖಗಳನ್ನು ಅರುಹಿಕೊಳ್ಳುತ್ತಿದ್ದಳು. 'ಮಾಡುವದು ಕೆಲಸವದು ಪೂಜೆ

ಸರ್ವೇಶಂಗೆ, ನೋಡುವದು ಮನೆವಾರ್ತೆ ದರ್ಶನವದೀಶಂಗೆ' ಎಂದು ಹರಿಹರ ಕಾರಿಕಾಲಮ್ಮೆಯ ಜೀವನಕ್ರಮವನ್ನು ವಿವರಿಸುತ್ತ ಆಕೆಯ ಗುಪ್ತಾರಾಧನೆಯನ್ನು ಹೇಳುತ್ತಾನೆ. ಹೀಗೆ ಕಾರಿಕಾಲಮ್ಮೆ ಮಾಣಿಕಶೆಟ್ಟಿಯ ಮಡದಿಯಾಗಿ ಕೌಟುಂಬಿಕ ಮತ್ತು ಸಾಂಸಾರಿಕ ಜೀವನದ ಆಚೆಗಿನ ಸಾಧನೆಯಲ್ಲಿ ತೊಡಗಿದ್ದಳು. ಇಂಥ ಸಾಧನೆಗೆ ಹೆಣ್ಣು ಮಕ್ಕಳಿಗೆ ವಿಶೇಷವಾಗಿ ಮದುವೆಯಾದ ಸಂಸಾರಸ್ಥ ಹೆಣ್ಣಿಗೆ ಅವಕಾಶವಿರಲಿಲ್ಲ. ಜ್ಞಾನ ಸಾಧನೆಯ ತೀವ್ರ ಹಂಬಲ, ತುಡಿತವಿರುವ ಕಾರಿಕಾಲಮ್ಮೆ ಪುರುಷ ಸಮಾಜವು ಹೆಣ್ಣಿಗೆ ವಿಧಿಸಿದ ಮದುವೆ, ಕುಟುಂಬ, ಸಾಂಸಾರಿಕ ಜೀವನ, ಪುರುಷಾಧೀನತೆ, ಲಿಂಗತಾರತಮ್ಯತೆ ಈ ಎಲ್ಲವನ್ನು ಹೊರನೋಟಕ್ಕೆ ಒಪ್ಪಿಕೊಂಡು ಆಚರಿಸುತ್ತಿದ್ದಾಳೆ. ಆದರೆ ಆಕೆ ಪುರುಷ ವ್ಯವಸ್ಥೆಯ ಹೆಣ್ಣಿಗೆ ವಿಧಿಸಿದ ದಮನಿತ ಸ್ಥಿತಿಯನ್ನು ಒಪ್ಪಿಕೊಂಡವಳ ಹಾಗೆ ಕಾಣುವುದಿಲ್ಲ. ತನ್ನ ಮನದ ಇಂಗಿತವನ್ನು, ಹಂಬಲವನ್ನು ವ್ಯಕ್ತಪಡಿಸಿದರೆ ಅದನ್ನು ಆರಂಭದಲ್ಲೆ ಪುರುಷ ವ್ಯವಸ್ಥೆ ಚಿವುಟಿ ಹಾಕುತ್ತದೆ ಎಂಬುದು ಆಕೆಗೆ ಹೇಗೋ ಗೊತ್ತಿದೆ. ಪುರುಷ ಸಮಾಜದಲ್ಲಿ ಸ್ತ್ರೀಯರಿಗೆ ಮುಕ್ತ ಅವಕಾಶವಿಲ್ಲದಿರುವುದು ಸ್ವಂತಿಕೆಯ ತೀವ್ರ ತುಡಿತವಿರುವ ಹೆಣ್ಣಿಗೆ ಅಡ್ಡಿಯುಂಟು ಮಾಡಿ ಮಿತಿಯನ್ನು ಹೇರುವುದಿಲ್ಲ ಎಂಬ ಅರಿವು ಕೂಡ ಕರಿಕಾಲಮ್ಮೆಗೆ ಇರುವುದು ಕಂಡು ಬರುತ್ತದೆ. ಈ ಎಲ್ಲ ಅಂಶಗಳು ಕರಿಕಾಲಮ್ಮೆ ಗುಪ್ತ ಸಾಧಕಿಯ ಮಾರ್ಗ ಹಿಡಿದವಳು ಎಂದು ರಗಳೆ ನಮಗೆ ಸೂಚಿಸುತ್ತದೆ. ಆಕೆ ತನ್ನ ಇಷ್ಟ ದೈವವನ್ನೇ (ಶಿವ ಪಾರ್ವತಿ - ಸಗುಣ ಆರಾಧನೆಯ ಫಲ) ಅಂದರೆ ಸಾಧಿತವಾಗಬೇಕಿಂದ ಗುರಿಯನ್ನೆ ತಂದೆತಾಯಿಯರಾಗಿ ಸ್ವೀಕರಿಸಿರುವುದನ್ನು ಹೇಳುತ್ತದೆ. ಇದು ಆಕೆಯ ಉತ್ಕಟ ಸ್ವಭಾವ, ಹಿಡಿದ ಕೆಲಸ ಪೂರೈಸುವ ಹಟ, ಛಲ ಹಾಗೂ ಆತ್ಮ ವಿಶ್ವಾಸದ ಬಗೆಯನ್ನು ನಿರೂಪಿಸಲು ಬಳಸಿಕೊಂಡ ಉಪಾಯವಾಗಿದೆ. ಅಲ್ಲದೆ ಆಕೆ ಪುರುಷ ಅಧೀನತೆಯಲ್ಲಿ ದಮನಕ್ಕೆ ಒಳಗಾಗಿದ್ದರೂ ಅಂತರಂಗದಲ್ಲಿ, ತನ್ನ ಸಾಧನೆಯ ಮುಕ್ತ ಜಗತ್ತಿನಲ್ಲಿ ಸ್ವತಂತ್ರಳಾಗಿದ್ದಳೆಂಬುದನ್ನು ನಿರೂಪಿಸಿರುತ್ತದೆ. ಗುರಿಸಾಧನೆಯ ಕಾಯಕದಲ್ಲಿ ಆಕೆ ತನ್ನ ಸರ್ವಶಕ್ತಿಯನ್ನು ತೊಡಗಿಸಿದ್ದಳು ಎಂಬುದನ್ನು ಕಾಣಿಸುತ್ತದೆ.

ಹರಿಹರ ನಿರೂಪಿತ ರಗಳೆಯ ಪ್ರಕಾರ ಅವಳ ಗಂಡ ಮಾಣಿಕಶೆಟ್ಟಿಗೆ ಒಮ್ಮೆ ರಸಭರಿತ ಸೊಗಸಾದ ಮಾವಿನ ಹಣ್ಣುಗಳು ಕಾಣಿಕೆಯಾಗಿ ಬರುತ್ತವೆ. ಅವನ್ನು ಯಾರ ಕಣ್ಣಿಗೂ ಬೀಳದ ಹಾಗೆ ಮುಚ್ಚಿಡುವಂತೆ ಆತ ಕಾರಿಕಾಲಮ್ಮೆಗೆ ಸೂಚಿಸುತ್ತಾನೆ. ಕಾರಿಕಾಲಮ್ಮೆ ಮಾಣಿಕಶಿಟ್ಟಿಯ ವಶವರ್ತಿ. ಅವನಿಗೆ ಕಾಣಿಕೆಯಾಗಿ ಬಂದ ಹಣ್ಣುಗಳನ್ನು ಆತನ ಆದೇಶ ಮೀರಿದ ಹಾಗೆ ಕಾಪಿಡುವುದು ಅವಳ ಕರ್ತವ್ಯ. ಪುರುಷ ಸುಂದರವಾದುವು, ರಸಭರಿತವಾದುವು ತನ್ನ ವಶವಾಗಬೇಕು. ತಾನೆ ಉಪಭೋಗಿಸಬೇಕು ಎಂದು ಬಯಸುತ್ತಾನೆ ಎಂಬುದು ಕಾರಿಕಾಲಮ್ಮೆಗೆ ಗೊತ್ತಿರುವ ಪುರುಷ ಸ್ವಭಾವ. ಆದರೂ ಆಕೆ ಪುರುಷ ಸ್ವಭಾವವನ್ನು ಮೀರಲು ತೊಡಗಿರುವಂತೆ ಕಾಣುತ್ತಾಳೆ. ಹಾಗಾಗಿ ಅವಳು

ತನ್ನ ಗಂಡನ ಮಾತನ್ನು ಧಿಕ್ಕರಿಸುವುದಾಗಲೀ ಕಡೆಗಣ್ಣಿನಿಂದ ನೋಡುವುದಾಗಲೀ ನಿರಾಕರಿಸುವುದಾಗಲೀ ದ್ವೇಷಿಸುವುದಾಗಲೀ ಮಾಡುವುದಿಲ್ಲ. ಅದರ ಬದಲು ಪುರುಷ ಸ್ವಭಾವದ ಬಗ್ಗೆ ನಿರ್ಲಿಪ್ತಳಾಗಿರುವಂತೆ ಕಾಣುತ್ತಾಳೆ, ತನಗೆ ಸರಿಕಂಡಂತೆ ಮಾಡಲು ಉದ್ಯುಕ್ತಳಾಗುತ್ತಾಳೆ. ಆಕೆಯ ಪ್ರಕಾರ ತನ್ನ ಗಂಡನಿಗೆ ಕಾಣಿಕೆಯಾಗಿ ಬಂದ ಹಣ್ಣುಗಳು 'ಭಕ್ತಿರ್ಗೆ ಯೋಗ್ಯವಿವು ಮರ್ತ್ಯಂಗಯೋಗ್ಯವಿವು' ಎಂಬುದಾಗಿ ಹರಿಹರ ಬಣ್ಣಿಸಿದ್ದಾನೆ. ಈ ಮಾತು ತನ್ನ ಪತಿ ಅರಿವಿನ ಹಾದಿ ತಿಳಿಯದ ಪಕ್ಕಾ ವ್ಯವಹಾರಸ್ಥನಾಗಿದ್ದು, ಅವನ ಮನಸ್ಸು ಜೀವನದ ಸೂಕ್ಷ್ಮ ಅನುಭವ ಸವಿಯುವ ಸ್ಥಿತಿಯನ್ನು ಕಳೆದುಕೊಂಡಿದೆ ಎಂಬ ಕಾರಿಕಾಲಮ್ಮೆಯ ಗ್ರಹಿಕೆಯನ್ನು ಕಟ್ಟಿಕೊಡುತ್ತದೆ. ತನ್ನ ಪತಿ ಮರ್ತ್ಯನಾಗಿದ್ದು, ಆ ಹಣ್ಣನ್ನು ಸವಿಯಲು ಅಯೋಗ್ಯನೆಂದು ತಿಳಿಯುತ್ತಾಳೆ. ಭಕ್ತರು -ಸಾಧಕರು ಮಾತ್ರ ಜೀವನದ ಸೂಕ್ಷ್ಮತೆಯನ್ನು ಬಲ್ಲವರು. ಅವರ ಮನಸ್ಸು ಹಣ್ಣಿನ ಸೊಗಸನ್ನು ಚೆನ್ನಾಗಿ ಸವಿಯಬಲ್ಲುದು, ತೃಪ್ತಿಹೊಂದಬಲ್ಲುದು, ಅದರಿಂದ ಹೊಸ ಅನುಭವ ಪಡೆಯ ಬಲ್ಲದು. ಕಾರಿಕಾಲಮ್ಮೆಯ ಅರಿವು ಈ ಬಗೆಯದು ಎಂಬುದು ಹರಿಹರನ ನಿಲುವು. ಹಾಗಾಗಿ ತನಗೆ ಸರಿಕಂಡ ಸತ್ಯವನ್ನು ಸಾಧಿಸುವ ಪ್ರವೃತ್ತಿ ಸಾಧಕರ ಸಾಮಾನ್ಯ ಗುಣ ವೆಂಬಂತೆ ಈ ರಗಳೆಯಲ್ಲಿ ಚಿತ್ರಿಸಿರುವುದು ಕಂಡು ಬರುತ್ತದೆ. ಆ ಪ್ರಕಾರವಾಗಿ ಕಾರಿಕಾಲಮ್ಮೆ ತನ್ನ ಮನೆಗೆ ಹಸಿದು ಬಂದ ಸಿದ್ಧ ಪುರುಷನಿಗೆ ಆ ಹಣ್ಣುಗಳನ್ನು ಉಣಬಡಿಸುತ್ತಾಳೆ. (ಶಂಕರನೇ ಭಕ್ತನ ವೇಷದಲ್ಲಿ ಕಾರಿಕಾಲಮ್ಮೆಯ ಮನೆಗೆ ಹಸಿದು ಬಂದನೆಂದು ಹರಿಹರ ವಿವರಿಸಿದ್ದಾನೆ. ರೂಪಕದ ಭಾಷೆಯಲ್ಲಿ ಗುಪ್ತ ಭಕ್ತಿಯನ್ನು ಬಯಲು ಮಾಡಲು ಬಂದ ಭಕ್ತನ ವೇಷಧಾರಿ ಕೂಡ ಸಾಧಕನೇ ಆಗಿದ್ದಾನೆ.) ಎಲ್ಲ ಸಾಧಕರೂ ಸೂಕ್ಷ್ಮಜ್ಞಾನಿಗಳೂ ಆಗಿರುವುದರಿಂದ ತಾನು ಒಬ್ಬ ಸಾಧಕಿ ಎಂದು ಅರಿತರೆ ತನ್ನ ಗುಪ್ತ ಭಕ್ತಿ ಬಯಲಾಗಬಹುದು ಎಂದು ಕಾರಿಕಾಲಮ್ಮೆ ಆ ಸಾಧಕನ ಬಗೆಗೆ ಭಯ ಪಡುತ್ತಾಳೆ. ಇದರಿಂದ ತನ್ನ ಸಾಧನೆಯ ಕಾಯಕ ಮುಂದುವರಿಯಲಾರದೆ ಉಳಿಯಬಹುದು ಎಂದು ಅಂಜುತ್ತಾಳೆ. ಹಾಗಾಗಿ ಕಾರಿಕಾಲಮ್ಮೆ 'ಬಳಿಕಾಂ ಬದುಕೆ ನರಿದೆಂಡಿರಿದಂತಕ್ಕು' ಎಂದು ಹೇಳುತ್ತಾಳೆ. ಆಕೆಯ ಭಯ ನಿಜ ಮಾಡುವ ಹಾಗೆ ಆ ತಪಸಿ ನಡೆದುಕೊಳ್ಳುತ್ತಾನೆ. ಆಕಸ್ಮಿಕವಾಗಿ ಹಿಂದಿರುಗಿದ ಆಕೆಯ ಪತಿಗೆ ಅನುಮಾನ ಉಂಟಾಗುತ್ತದೆ. ಆತ ಹಣ್ಣುಗಳ ಮೇಲಿನ ತನ್ನ ಹಕ್ಕು ಅಭಾಧಿತವೆಂದು ತಿಳಿದು ಉಣಬಡಿಸುವಂತೆ ಹೇಳುತ್ತಾನೆ. ಸುಂದರವಾದುದೆಲ್ಲ ತನ್ನ ಉಪಭೋಗದ ವಸ್ತು ಎಂಬ ಪುರುಷ ವಾಂಛೆ ಮಾಣಿಕ್ಯಶೆಟ್ಟಿಯ ನಡವಳಿಕೆಯಲ್ಲಿ ತುಂಬಿಕೊಂಡಿರುವುದು ಕಾಣುತ್ತದೆ. ಆತ ಈ ಬಗೆಗಿನ ತನ್ನ ಪುರುಷಾಧಿಕಾರವನ್ನು ಬಿಟ್ಟುಕೊಡಲು ಸಿದ್ಧನಿಲ್ಲ. ಇಂಥ ಬಿಕ್ಕಟ್ಟಿನ ಸ್ಥಿತಿಯಲ್ಲಿ ಕಾರಿಕಾಲಮ್ಮೆ ದಿಕ್ಕೆಟ್ಟವಳಂತಾಗುತ್ತಾಳೆ. ಭಕ್ತನಿಗೆ ಕೊಟ್ಟ ಹಣ್ಣಿನ ಸ್ಥಾನದಲ್ಲಿ ಮತ್ತೊಂದು ಹಣ್ಣಿತ್ತು ಎಂದು ಹರಿಹರ ವರ್ಣಿಸುತ್ತಾನೆ. ಆಗ

ಮಾಣಿಕಶೆಟ್ಟಿಗೆ ಕಾರಿಕಾಲಮ್ಮೆ ಒಬ್ಬ ಸಾಧಕಿ ಎಂಬುದು ಅರಿವಿಗೆ ಬರುತ್ತದೆ. ಇದು ಹೇಗೆ ಮೂರ್ತ ರೂಪ ಪಡೆಯಿತು ಎಂಬುದನ್ನು ಹರಿಹರ ಅನುಭಾವದ ವರ್ಣನೆಯಾಗಿ ಮಾಡಿದ್ದಾನೆ. ಇದರಿಂದ ಮಾಣಿಕಶೆಟ್ಟಿ 'ಮುನ್ನವೇ ಸಂದೇಹಿಸುತ್ತಿದ್ದೆ ನೆಲೆ ತಾಯೆ' ಎಂದು ಹೇಳಿ, 'ಇನಿತು ಕಾಲದೊಳುದಾಸೀನಮಂ ಮಾಡಿತಕೆ ಕರುಣಿಪುದು ಕಾಮುದೆಮ್ಮಂ ಕಾರಿಕಾಲಮ್ಮೆ' ಎಂದು ಬೇಡುತ್ತಾನೆ. ಅಷ್ಟೇ ಅಲ್ಲದೆ 'ಉಪದೇವಂ ಮಾಳ್ಪುದಿನ್ನೆನಗೆ ಪರಮಾರ್ಥ ಮೂರ್ತಿ' ಎಂದು ಕೇಳಿಕೊಳ್ಳುತ್ತಾನೆ. ಕಾರಿಕಾಲಮ್ಮೆಯ ತಿಳುವಳಿಕೆ ಒಮ್ಮೆ ಪ್ರದರ್ಶನವಾದ ಮಾತ್ರಕ್ಕೆ ಪುರುಷ ಅಹಂ ಮತ್ತು ಪುರುಷ ಸಮಾಜದ ಸ್ತ್ರೀ ಕುರಿತ ಕೃತಕ ಕಟ್ಟುಗಳೆಲ್ಲ ಹೇಗೆ ಕಳಚಿ ಬೀಳುತ್ತವೆ ಎಂಬುದನ್ನು ಮಾಣಿಕ ಶೆಟ್ಟಿಯ ಅಂಗಲಾಚುವಿಕೆಯ ಮೂಲಕ ಹರಿಹರ ಕಟ್ಟಿಕೊಡುತ್ತಾನೆ. ಪುರುಷ ಪ್ರಜ್ಞೆಗೆ ತಾನು ಹೆಣ್ಣನ್ನು ಉದಾಸೀನತೆಯಿಂದ ನಡೆದುಕೊಳ್ಳುವುದು ತಪ್ಪೆಂದು ತಿಳಿದಿದ್ದರೂ ಅವನ ನಡವಳಿಕೆಯಲ್ಲಿ ಬದಲಾವಣೆ ಕಂಡು ಬರುವುದಿಲ್ಲ. ಹೆಣ್ಣು ತನ್ನ ಅರಿವನ್ನು ಪ್ರಕಟ ಪಡಿಸುವುದೆ ತನ್ನ ಶಕ್ತಿ ಪ್ರದರ್ಶನ ಮಾಡಿದ ಹಾಗೆ ಆಗುತ್ತದೆ. ಇಷ್ಟು ಮಾತ್ರದಿಂದಲೆ ಪುರುಷನ ಪಾಪ ಪ್ರಜ್ಞೆಯನ್ನು ಎಚ್ಚರವಾಗಿರುವಂತೆ ಮಾಡಬಲ್ಲುದಾಗಿದೆ ಎಂಬುದು ಕಾರಿಕಾಲಮ್ಮೆಯ ರಗಳೆಯ ಈ ಮೊದಲ ಹಂತದಿಂದ ತಿಳಿದು ಬರುತ್ತದೆ.

2. ಸಾಮಾಜಿಕ ದೃಷ್ಟಿಕೋನ ಮೀರಿನಿಂತ ಸ್ತ್ರೀಪ್ರಜ್ಞೆಯ ಬಗೆ

ಮೊದಲ ಹಂತದಲ್ಲಿ ಕರಿಕಾಲಮ್ಮೆಯು ಪುರುಷ ಸಮಾಜ ಹೆಣ್ಣನ್ನು ವಿವಾಹ, ಕುಟುಂಬ, ಸಂಸಾರ ಮುಂತಾದ ಮೂಲಕ ದಮನಿತ ಸ್ಥಿತಿಯಲ್ಲಿಟ್ಟು ಕೌಟುಂಬಿಕ ಕಟ್ಟು ಪಾಡುಗಳನ್ನು ಮೀರಿ ಬೆಳೆದ ಕ್ರಮ ಕಾಣಲಾಗಿದೆ. ಎರಡನೆಯ ಹಂತದಲ್ಲಿ ಆಕೆ ಸ್ತ್ರೀ ಕುರಿತ ಸಾಮಾಜಿಕ ದೃಷ್ಟಿಕೋನವನ್ನು ಮೀರಿ ಬೆಳೆದು ನಿಂತ ಬಗೆಯನ್ನು ಅರಿಯ ಬಹುದು.

ಸಾಧನೆಯ ಮಾರ್ಗದಲ್ಲಿ ಸಂಸಾರ ತೆಗೆದು ಹೊರನಡೆದ ಕಾರಿಕಾಲಮ್ಮೆಯನ್ನು ಸಮಾಜವು ಕೇವಲ ಒಂದು ಹೆಣ್ಣಾಗಿ, ಕಾಮದ ಗೊಂಬೆಯಾಗಿ ನಡೆಸಿಕೊಂಡಿರುವ ವಿವರಗಳು ಇವೆ. ಹೆಣ್ಣು ಪುರುಷರ ಉಪಭೋಗದ ವಸ್ತು ಎಂಬ ಪುರುಷ ವ್ಯವಸ್ಥೆಯು ಹುಟ್ಟು ಹಾಕಿದ ಲಿಂಗವ್ಯವಸ್ಥೆಯ ದೃಷ್ಟಿಕೋನದ ವಿವರಗಳನ್ನು ರಗಳೆಯಲ್ಲಿ ಕಟ್ಟಿಕೊಡಲಾಗಿದೆ. ಸಾಮಾಜಿಕರ ನಡವಳಿಕೆಯನ್ನು ಹರಿಹರನು 'ಪಾಪವುಳ್ಳರ್ಗೆ ಸಿಂಗರ ದಂತೆ ತೋರುತಂ' ಎಂದು ಬಣ್ಣಿಸಿದ್ದಾನೆ. ಹರಿಹರನು 'ಪಾಪ' ಎಂದು ಬಳಸಿರುವ ಪದಕ್ಕೆ 'ಕಾಮ' ಎಂದು ಅರ್ಥ ಹಚ್ಚಿದರೆ ಇಲ್ಲಿನ ಸಾಮಾಜಿಕ ಆಯಾಮದ ಅರ್ಥ ಸ್ಪಷ್ಟವಾಗುತ್ತದೆ. ಅಲ್ಲದೆ ಪಾಪ ಎಂಬ ಪದದ ಅರ್ಥವನ್ನು ಸಾಮಾಜಿಕ ಪಿಡುಗು ಉಂಟು ಮಾಡುವ ಕಾರ್ಯವೆಂದೂ ಗ್ರಹಿಸಬಹುದು. ಹೆಣ್ಣು ಯಾವುದೇ ಒಬ್ಬ ಪುರುಷನ

ಆಸ್ತಿಯಾಗದಿದ್ದಲ್ಲಿ ಆಕೆಯನ್ನು ಸಮಾಜದ ಹಲವಾರು ಜನರು ತಮ್ಮ ಆಸ್ತಿಯಂತೆ ನಡೆಸಿಕೊಳ್ಳುವ ಸಾಮಾಜಿಕ ಪರಿಸರವನ್ನು ಇದು ಕಟ್ಟಿಕೊಡುತ್ತದೆ. ಹಾಗಾಗಿ ಕಾರಿಕಾಲಮ್ಮೆಯನ್ನು ಸಮಾಜದ ಪುರುಷರು ವ್ಯಭಿಚಾರದ ಕಣ್ಣಲ್ಲಿ ಕಾಣವುದನ್ನು ಹರಿಹರ ಹೀಗೆ ವಿವರಿಸಿದ್ದಾನೆ:

ಕಾಮನ ದೊಣ್ಣೆಗೆ ತೊಣೆಯೆನಿಪ್ಪ ಕಿರುದೊಡೆ ಕರಂ
ಕಾಮಹರನಲ್ಲಿಗೆಯ್ಯುದಕೆ ನೆರವನೆ ಕರಂ
ಕದಳಿಯಂ ಪಳಿಪುತಿಪ್ಪೂರು ದಂಡಂ ನೋಡೆ
ಮದನ ವೈರಿಯ ನಮಸ್ಕಾರ ದಂಡಂ ನೋಡೆ
ಮದನ ಕೃತಕಾಚಲ ನಿತಂಬ ಬಿಂಬಂ ತಾನೆ
ಒದವಿ ಪದುಮಾಸನದ ತಳವೃತ್ತ ಮುಂ ತಾನೆ
ಸರಿಸಿಯುಂ ಪಳಿಕೆಯ್ಯ ನಾಭಿಮಂಡಲದಲ್ಲಿ
....
ಮುಗಿದ ಸರಸಿಜವನೇಳಿಸುವ ಕುಚವೊಪ್ಪಿರಲು
....
ಪಂಚಶರವಂ ಪಳಿವ ನುಣ್ಬೆರಲ ವಿಸ್ತರಂ
ಪಂಚಮುಖ ಪರಿಚಾರಕರ ತೆರೆದೊಳಿರೆ ಕರಂ
ಪದೆಕೊರಳು ಕೇಳಿಸುವ ಕಂಬುವಿನ ತೆರದೊಳಿರೆ
ಕದಪು ಶರ್ವಂ ನೋಳ್ಪ ದರ್ಪಣದ ತೆರದೊಳಿಗೆ
ಕಣ್ಣಲ್ಲಿ ಚೆಲ್ವಿಂಗೆ ಕಣ್ಮೂಡಿದಂತೆಯಿರೆ
....
ಅಳಿಕುಳದ ಬಣ್ಣಮಂ ಬಳಿಕೆಯ್ವ ಕುಂತಳಂ
ತಲೆಯೂರಿ ನಡೆವಲ್ಲಿಯಾಧಾರ ವರ್ತುಳಂ
ಇಂತು ಸೌಂದರ್ಯಮಂ ಪಾವನತ್ವವ ನೀವ
ಸಂತತಂ ಶೃಂಗಾರರಸದ ಲಹರಿಯನೀವ
ಕಾರಿಕಾಲಮ್ಮೆಯರ ರೂಪಿಂಗೆ ಬಹುಜನಂ
ಸಾರುತ್ತೆ ಬೆಂಬಿಡದೆ ಬರೆ ಕಷ್ಟತರ ಜನಂ

ಕಾರಿಕಾಲಮ್ಮೆಯ ದೇಹವನ್ನು ಸಮಾಜದ ಕಣ್ಣಲ್ಲಿ ಕಂಡ ಈ ಬಗೆಯ ವರ್ಣನೆಯು ಜಾವಳಿಗಳಲ್ಲಿ ವರ್ಣಿತವಾಗಿರುವಂತೆ ಇದೆ. ಪುರುಷ ಸಮಾಜ ದಿಟ್ಟಿಸಿ ನೋಡುವ ಕಾಮದೃಷ್ಟಿಯ ಕ್ರಮವು ಹೆಣ್ಣು ಕಾಮದ ವಸ್ತು ಎಂಬ ವಿಚಾರವನ್ನು ಬಿಂಬಿಸುತ್ತದೆ. ಹೆಣ್ಣಿಗೆ ತನ್ನ ಮನಸ್ಸು ಮತ್ತು ದೇಹದ ಮೇಲೆ ಅಧಿಕಾರ ಹೊಂದಿರಲು ಪುರುಷ

ಸಮಾಜದ ಲಿಂಗ ವ್ಯವಸ್ಥೆಯು ನಿರಾಕರಿಸಿರುವುದನ್ನು ಇಲ್ಲಿ ಕಾಣಿಸಲಾಗಿದೆ. ಪುರುಷರ ವಿಷಯ ಲಂಪಟತನ ಮತ್ತು ಸ್ತ್ರೀ ಕುರಿತ ಲೈಂಗಿಕ ಪ್ರಜ್ಞೆಯು ಹೆಣ್ಣನ್ನು ಕೇವಲ ಕಾಮದ ಮುದ್ದೆಯಂತೆ ಗ್ರಹಿಸಿರುವುದನ್ನು ತೋರಿಸುತ್ತದೆ. ಇದಕ್ಕೆ ಕಾರಿಕಾಲಮ್ಮೆಯ ಪ್ರತಿಕ್ರಿಯೆಯನ್ನು ಹರಿಹರ ಹೀಗೆ ದಾಖಲಿಸಿದ್ದಾನೆ:

> ಖಂಡದಿಂಡೆಗೆ ಮರುಳ್ಗೊಂಡಿರಯ್ಯೋ ಎಂದು
> ಅವಿಚಾರ ಮಣೀಯವೆಂದರಿಯಿರಕ್ಕಟಾ
> ಸುವಿಚಾರವೆಳ್ಳನಿತ್ತಿಲ್ಲ ನಿಮಗಕ್ಕಟಾ
> ಒಳಗು ಹೊರಗಾಗಿ ನೋಡಿರೆಯೆನ್ನ ದೇಹಮಂ
> ಬಳಿಕ ಹೇಸಲ್ಬೇಳ್ಳುಮರಿಯಿರೇ ಚೋಹಮಂ

ರಗಳೆಯ ಮುಂದಿನ ಭಾಗದಲ್ಲಿ ಕಾರಿಕಾಲಮ್ಮೆ ತನ್ನ ಸ್ಥೂಲ ದೇಹವನ್ನು ಬಿಟ್ಟು ಸೂಕ್ಷ್ಮದೇಹ ಧರಿಸುವ ವಿವರಗಳಿವೆ. ಇದು ಸ್ವಯಂ ದೇಹ ದಂಡನೆಯ ಕ್ರಮದಿಂದ ಉಂಟಾಗುವ ಪರಿಣಾಮವಾಗಿದ್ದು, ಆಕೆ ಹೆಣ್ಣಿನ ಬಗೆಗಿನ ಸಾಮಾಜಿಕ ದೃಷ್ಟಿಕೋನವನ್ನು ಮೀರುವ ಬಗೆಯಾಗಿದೆ.ದೇಹ ದಂಡನೆಯಿಂದ ದೇಹದ ಸೌಂದರ್ಯವನ್ನು ನಾಶ ಮಾಡಿ ಸಾಮಾಜಿಕ ದೃಷ್ಟಿಕೋನದ ಗ್ರಹಿಕೆಯಿಂದ, ಹಿಡಿತದಿಂದ, ಅಪಾಯದಿಂದ ಪಾರಾಗುವ ಕ್ರಮವನ್ನು ಕಾರಿಕಾಲಮ್ಮೆ ಅನುಸರಿಸಿದ್ದಾಳೆ. ಈ ಮೂಲಕ ಆಕೆ ಕುರೂಪತೆ ಪಡೆದು ರಕ್ಷಣಾತ್ಮಕ ನಿಲುವು ಪ್ರಕಟಿಸಿರುವುದು ಕಾಣುತ್ತದೆ. ಇದೊಂದು ಬಗೆಯಲ್ಲಿ ಸ್ವನಿಯಂತ್ರಣ ಮಾರ್ಗವಾಗಿದೆ. ಪರರ ಲೈಂಗಿಕ ಆಕ್ರಮಣಕ್ಕೆ ತಡೆಯೊಡ್ಡಲು ಮತ್ತು ಅದರಿಂದ ತನ್ನನ್ನು ಕಾಪಾಡಿಕೊಳ್ಳಲು ಕಾರಿಕಾಲಮ್ಮೆ ಈ ಬಗೆಯ ಉಪಾಯ ಮಾಡಿರುವುದು ಕಂಡು ಬರುತ್ತದೆ. ಇದರಿಂದ ಆಕೆ ತನ್ನ ಸಾಧನೆಯ ಮಾರ್ಗದಲ್ಲಿ ಸ್ವಾತಂತ್ರ್ಯವನ್ನು ಮತ್ತೆ ಮರಳಿ ಪಡೆದುಕೊಂಡಳೆಂಬುದು ಇಲ್ಲಿ ಮುಖ್ಯವಾಗಿದೆ. ಸಮಾಜವು ಸ್ವತಂತ್ರ ಆಲೋಚನೆಯ ಹೆಣ್ಣನ್ನು ಕೂಡ ಪುರುಷ ಲಿಂಗವ್ಯವಸ್ಥೆಯ ಚಿಂತನಾಕ್ರಮ ಮತ್ತದರ ಆಚರಣಾ ಕ್ರಮಗಳಿಂದ ಕಟ್ಟಿಹಾಕಲು ಪ್ರಯತ್ನಿಸುತ್ತದೆ, ಹೆಣ್ಣಿನ ಹಾದಿಯನ್ನು ದುರ್ಗಮವನ್ನಾಗಿಸುತ್ತದೆ. ಪುರುಷ ಸಮಾಜದ ಇಂಥ ಕಟ್ಟುಪಾಡುಗಳ ಮಿತಿಯನ್ನು ಮೀರುವುದು ಭಕ್ತಿ ಚಳವಳಿಯ ಸ್ತ್ರೀ ಸಾಧಕಿಯ ಸಾಮಾನ್ಯ ಲಕ್ಷಣವಾಗಿದೆ. ಕಾರಿಕಾಲಮ್ಮೆ ಕೂಡ ಅದೇ ಹಾದಿ ಹಿಡಿದಿರುವುದು ಕಂಡು ಬರುತ್ತದೆ. ಆದರೆ ಆಕೆ ಹಿಡಿದ ಮಾರ್ಗ ಕಠಿಣ ಹಾಗೂ ಕಠೋರತಮವಾಗಿದೆ. ಸೌಂದರ್ಯವು ಸ್ತ್ರೀ ಶಕ್ತಿಯನ್ನು ಹೆಚ್ಚಿಸದೆ ಪುರುಷೋಪಭೋಗಕ್ಕೆ ಸೀಮಿತಗೊಳಿಸುವುದು ಪುರುಷ ಚಿಂತನಾಕ್ರಮದ ಮಿತಿಯಾಗಿದೆ ಎಂಬ ವಿವೇಚನಾಪರ ದೃಷ್ಟಿಕೋನದವಳಂತೆ ಕಾಣುವ ಕಾರಿಕಾಲಮ್ಮೆ ಸಹಜವಾಗಿ ಅದನ್ನು ಮೀರಲು ತನ್ನ ಸೌಂದರ್ಯವನ್ನು ಬಲಿಪಶುವನ್ನಾಗಿ

ಮಾಡುತ್ತಾಳೆ. ಭಕ್ತಿ ಚಳವಳಿಯ ಸ್ತ್ರೀ ಸಾಧಕಿಯರು ತಾವು ಸಾಧಿಸಬೇಕಾದ ಮಾರ್ಗ ಮತ್ತು ಉದ್ದೇಶದಲ್ಲಿ ಸ್ವಾತಂತ್ರ್ಯದ ಪರಿಸರವನ್ನು ಪ್ರತಿಪಾದನೆ ಮಾಡಿರುವುದು ಅವರ ಉಸಿರಾಟದಷ್ಟೇ ಸಹಜವಾಗಿರುವಂತೆ ಕಾಣಿಸಲಾಗಿದೆ. ಅದಕ್ಕೆ ಎದುರಾಗುವ ಪುರುಷ ಸಮಾಜದ ಎಲ್ಲ ಬಗೆಯ ಅಡೆತಡೆಗಳನ್ನು ಯಾವ ಮುಲಾಜು, ಹಂಗು, ಅಭಿಮಾನಕ್ಕೆ ಒಳಗಾಗದೆ ತೊಡೆದುಹಾಕುವ ದಿಟ್ಟತನ ತಳೆದಿರುವುದುನ್ನು ಚಿತ್ರಿಸಲಾಗಿದೆ. ಇದರ ಒಂದು ಭಾಗವಾಗಿ ಕಾರಿಕಾಲಮ್ಮೆ ತನ್ನ ಸೌಂದರ್ಯವನ್ನು ದೇಹದಂಡನೆಯ ಮೂಲಕ ಕಳೆದುಕೊಳ್ಳುವ, ಕುರೂಪತನವನ್ನು ಧರಿಸುವ ಕ್ರಮ ಕಂಡು ಬರುತ್ತದೆ. ಪುರುಷತ್ವವನ್ನು ಮೀರುವುದು ಸ್ತ್ರೀತ್ವದ ಪ್ರತಿಪಾದನೆಯಾಗಿದೆ. ಈ ಕಾರ್ಯವನ್ನು ಕಾರಿಕಾಲಮ್ಮೆ ತುಂಬ ಸಮರ್ಥವಾಗಿ, ಪರಿಣಾಮಕಾರಿಯಾಗಿ ಮಾಡಿರುವುದನ್ನು ಹರಿಹರ ಕಟ್ಟಿಕೊಟ್ಟಿದ್ದಾನೆ.

3. ಇಷ್ಟ ದೇವನ ನಾಟ್ಯ - ಆಕಸ್ಮಿಕವಲ್ಲದ ಸಾಧಿತ ಮಾರ್ಗ

ಹರಿಹರನ ಪ್ರಕಾರ ಕಾರಿಕಾಲಮ್ಮೆಗೆ ತನ್ನ ಮೈಯೆಲ್ಲ ಕಣ್ಣಾಗಿ ಶಿವನ ನಾಟ್ಯವನ್ನು ನೋಡಿ ನಲಿಯಬೇಕೆಂಬ ಆಸೆ ಬಹುದಿನಗಳಿಂದ ತುಡಿಯುತ್ತಿದ್ದಿತು. ಅದನ್ನು ಈಡೇರಿಸುವಂತೆ ಕೋರಿ ಕಾರಿಕಾಲಮ್ಮೆಯು ಶಿವನನ್ನು 'ತೋರಯ್ಯ ಘನತಾಂಡವ ವಾಡಂಬರವನೆನಗೆ' ಎಂದು ಬೇಡಿದಳು. ಹರನು ತನ್ನ ಭವ್ಯ ಭಯಂಕರವಾದ ನಾಟ್ಯವನ್ನು ಮಾಡಿದನು. ಆ ನಾಟ್ಯವನ್ನು ನೋಡುತ್ತ ಅಂಜಿದ ಕಾರಿಕಾಲಮ್ಮೆಯು 'ಕಂತು ಮದಹರ ಸಾಕುಸಾಕಮ್ಮೆ ನಾನೆನುತೆ' ಕಣ್ಮುಚ್ಚಿ ನಡುಗುತ್ತಿದ್ದಳು. 'ಕಂಡವ್ವ ಕಂಡಿರೇಯೆನ್ನ ಚೆಲುವಾಟಮಂ' ಎಂದು ಹರನು ಕೇಳಲು 'ಎನ್ನಪುಣ್ಯದ ಫಲಕೆ ಸರಿಯುಂಟೆ, ನಿಮ್ಮ ನಾಟ್ಯಕ್ಕಿನ್ನು ಸಿರಿಯುಂಟೆ' ಎಂದು ಕಾರಿಕಾಲಮ್ಮ ಉತ್ತರಿಸುತ್ತಾಳೆ. ಹರುಷಗೊಂಡ ಹರನು 'ನಡೆತಾಯೆಕೈಲಾಸ ಪುರಕೆ' ಎಂದೆನ್ನುತ್ತಾನೆ.

ಭಕ್ತಿ ಚಳವಳಿಯಲ್ಲಿ ಮೇಲಿಂದ ಮೇಲೆ ಪ್ರಸ್ತಾಪವಾಗಿರುವ ಹರಿ-ಹರ ದೈವ - ಗಳೆಲ್ಲ ಭಕ್ತಸಾಧಕರು ತಲುಪಬೇಕಾದ ಗುರಿಗಳಾಗಿರುತ್ತವೆ. ಭಿನ್ನ ಭಿನ್ನ ಧರ್ಮ ಪಂಥಗಳು ಭಿನ್ನ ಭಿನ್ನ ದೈವಗಳ ಆರಾಧನೆಯನ್ನು ತನ್ನ ಸ್ವಧರ್ಮ ರಾಜಕಾರಣಕ್ಕಾಗಿ ಆಚರಣೆಗೆ ತಂದಿರುತ್ತವೆ. ಭಕ್ತ ಸಾಧಕನು ಯಾವ ಮತ ಪಂಥಗಳಿಗೆ ಸೇರಿದ್ದರೂ ಆತನು ಸಾಧಿಸಬೇಕಾದ ಗುರಿ ಒಂದೇ ಆಗಿರುತ್ತದೆ. ದೈವ ಸ್ವರೂಪಗಳಲ್ಲಿನ ಭಿನ್ನತೆಯು ಮತಧರ್ಮಗಳ ಭಿನ್ನತೆಯನ್ನು ಸೂಚಿಸುತ್ತದೆಯಷ್ಟೆ. ಆದ್ದರಿಂದ ಎಲ್ಲ ಮತಧರ್ಮಗಳ ದೈವಗಳು ಭಕ್ತಸಾಧಕರ ಇಷ್ಟದೈವವಾಗಿರುತ್ತವೆ. ಇಷ್ಟ ದೈವವೆಂಬುದು ಸಾಧಿತವಾಗ ಬೇಕಾದ ಗುರಿಯಾಗಿದ್ದು, ಭಕ್ತ ತಲುಪಬೇಕಾದ ಅರಿವಿನ ತಾಣವಾಗಿರುತ್ತದೆ. ಹೀಗೆ ಭಕ್ತಿ ಚಳವಳಿಯ ಭಾಷೆಯನ್ನು ಜ್ಞಾನ ಸಾಧನೆಯ ಭಾಷೆಯಾಗಿ ಬದಲಾವಣೆ ಮಾಡಿ ಕೊಂಡಾಗ ಭಕ್ತಿ ಚಳವಳಿಯು ಹುಟ್ಟು ಹಾಕಿದ ಪೌರಾಣಿಕ ಪರಿಸರ ಕಳಚಿ ಬೀಳುತ್ತದೆ.

ಅದರ ಅಮೂರ್ತಸ್ಥಿತಿ ಮಾತ್ರ ಉಳಿಯುತ್ತದೆ. ಹರಿಹರ ನಿರೂಪಿಸಿರುವ ಕಾರಿಕಾಲಮ್ಮೆಯ ಈ ಹಂತದ ಮನಸ್ಥಿತಿಯನ್ನು ಇಂಥ ಅಮೂರ್ತ ಸ್ಥಿತಿಯಲ್ಲಿರಿಸಿ ವಿವೇಚಿಸುವುದು ಹೆಚ್ಚು ಉಪಯುಕ್ತ. ಇಲ್ಲದಿದ್ದರೆ ಪೌರಾಣಿಕ ಪರಿಸರದಲ್ಲಿ ಅರ್ಥಗಳು ಢಿಕ್ಕಿ ಹೊಡೆದು ಗೊಂದಲವಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ.

ಕಾರಿಕಾಲಮ್ಮೆ ಪುರುಷ ಸಮಾಜದ ಪರಿಕಲ್ಪನೆಗಳನ್ನೆಲ್ಲ ಈಗಾಗಲೆ ಮೀರಿ ಬಂದಿದ್ದಾಳೆ. ವಿವಾಹ, ಕುಟುಂಬ, ಸಂಸಾರ, ಸ್ತ್ರೀಯ ದಮನಿತ ಸ್ಥಿತಿ, ಸ್ತ್ರೀಕುರಿತು ಸಮಾಜದ ಪುರುಷಪರ ದೃಷ್ಟಿಕೋನ ಎಲ್ಲವನ್ನು ಮೀರಿದ್ದಾಳೆ. ಬಹುಶಃ ಈಕೆಗೆ ಇದು ತನ್ನಿಂದ ಸಾಧಿತವಾದ ಕಾರ್ಯವೇ ಎಂದು ಸಂದೇಹ ಬಂದಿರಬಹುದು. ಆಗ ಆಕೆ ಸಾಧನೆಯ ಮಾರ್ಗದಲ್ಲಿ ತನ್ನ ಅರಿವನ್ನು ಪ್ರಮಾಣಿಸಿ ಕಂಡುಕೊಂಡ ಬಗೆಯನ್ನು ಶಿವನಾಟ್ಯ ಅಥವಾ ಇಷ್ಟದೈವದ ನಾಟ್ಯರೂಪದಲ್ಲಿ ಹರಿಹರ ಚಿತ್ರಿಸಿದ್ದಾನೆ ಎಂದು ಬಗೆಯ ಬಹುದಾಗಿದೆ. ನಡೆ ತಾಯೆ ಕೈಲಾಸಪುರಕೆ ಎಂದು ಹರನು ಸಂತೃಪ್ತನಾಗಿ ಕರೆಕೊಡುವುದು, ಕಾರಿಕಾಲಮ್ಮೆಗೆ ತನ್ನ ಸಾಧಿತ ಮಾರ್ಗದ ಬಗ್ಗೆ ಉಂಟಾದ ಭರವಸೆ ಮತ್ತು ಆತ್ಮವಿಶ್ವಾಸವನ್ನು ಸಂಕೇತಿಸುತ್ತದೆ. ಸಾಧನೆಯ ಮಾರ್ಗದಲ್ಲಿ ತಾನು ತಲುಪಿದ ಹಂತ ಆಕಸ್ಮಿಕವೂ ಅಲ್ಲ ಅಚ್ಚರಿಯದೂ ಅಲ್ಲ ಎಂಬ ಮನವರಿಕೆ ಮಾಡಿಕೊಂಡ ಕ್ರಮವಾಗಿ ಶಿವನಾಟ್ಯವು ಕಂಡುಬರುತ್ತದೆ. ಪುರುಷ ಸಮಾಜದ ತನ್ನ ಕಟ್ಟುಪಾಡುಗಳಿಂದ ಹೆಣ್ಣನ್ನು ನಿರಾಶ್ರಿತಳನ್ನಾಗಿ ಮಾಡಿದುದರ ಪರಿಣಾಮದ ಹಿನ್ನೆಲೆಯಲ್ಲಿ ಕಾರಿಕಾಲಮ್ಮೆ ತನ್ನನ್ನು ತಾನು ಸಂದೇಹಿಸಿಕೊಳ್ಳುವ ಮನಸ್ಥಿತಿ ತಲುಪಿರಬೇಕು ಎಂದು ವಿವರಿಸಬಹುದು. ಅಲ್ಲದೆ ಇದು ಆಕೆಯ ಸಾಧಿತವಾಗಬೇಕಿರುವ ಗುರಿಯ ಬಗೆಗಿನ ಉತ್ಕಟತೆಯನ್ನು ಹೇಳುತ್ತದೆ. ಅಂಥ ಉತ್ಕಟತೆಯ ಹಿಂದಿರುವ ಆತಂಕವನ್ನು ಪರಿಚಯಿಸುತ್ತದೆ.

4. ತಲೆಕೆಳಗು ನಡಿಗೆ -ಸಾಮಾನ್ಯರ ಮತ್ತು ಸಾಧಕರ ನಡುವಿನ ನಡವಳಿಕೆಯಲ್ಲಿ ಅಂತರ

ಕಾರಿಕಾಲಮ್ಮೆಗೆ ಕೈಲಾಸ ಮಾರ್ಗದಲ್ಲಿ ಶರಣರ ಹೆಜ್ಜೆಗಳನ್ನು ಕಂಡು ಕಾತುರವಾಗುತ್ತದೆ. 'ಆಹಾ ಶರಣರೆಲ್ಲ ನಡೆದ ದಾರಿಯ ಹೆಜ್ಜೆ, ಆಹಾ ಎನ್ನೊಡೆಯರೆಂಲವಿಂ ನಡೆದ ಹೊಸ ಹೆಜ್ಜೆ' ಎಂದು ಚಿಂತಿಸಿ ಇವು ತನಗೆ ಆದರ್ಶ ಪ್ರಾಯವಾಗಿದ್ದು ತನ್ನ ಶಿರದ ಮೇಲಿರಬೇಕಾದವು ಎಂದು ಭಾವಿಸುತ್ತಾಳೆ. 'ಅವರೆಲ್ಲ ನಡೆದಂತೆ ಆಂ ನಡೆಯಬಲ್ಲೆನೇ' ಅವರ ಸಾಮರ್ಥ್ಯ ತನಗೆಲ್ಲಿಯದು ಎಂದು ವಿನೀತಳಾಗುತ್ತಾಳೆ. 'ಎನ್ನ ಕೈ ಕಾಲಾಗಿ ನಡೆವೆ ನಾ ನಿಂತಿಲ್ಲಿ, ಎನ್ನ ತಲೆಯಡಿಯಾಗಿ ನಡೆದು ತೋರುವೆನಿಲ್ಲಿ' ಎಂದು ತಲೆಕೆಳಗಾಗಿ ನಡೆಯತೊಡಗುತ್ತಾಳೆ. 'ಎಲೆ ಶರಣರಡಿಗಳಿರ ಶಿವನಲ್ಲಿ ಗೊಯ್ಯಿರೇ, ಎಲೆ ಹೆಜ್ಜೆಗಳಿರ ಕೈಲಾಸಕ್ಕೆ ಕಳುಹಿರೇ' ಎಂಬುದು ಆಗಿನ ಅವಳ ಪ್ರಾರ್ಥನೆಯಾಗುತ್ತದೆ. ಈ ನಡಿಗೆಯನ್ನು

ಹರಿಹರನು 'ಶಿವಭಕ್ತಿಯುಕ್ಕಿ ತಲೆಕೆಳಗಾದ ಛಂದದಿಂ, ಶಿವನಿಷ್ಠೆ ಸೊಕ್ಕಿ ತಲೆವೂರಿ ತೆಂಬಂದದಿಂ' ಎಂದು ವ್ಯಾಖ್ಯಾನಿಸುತ್ತಾನೆ. ಹರಿಹರ ಒಬ್ಬ ಭಕ್ತಿ ಕವಿಯಾಗಿ ತನ್ನ ಮನೋಧರ್ಮವನ್ನು ಅಭಿವ್ಯಕ್ತಿಸಿದ್ದಾನೆ. ಅವುಗಳಿಗೆ ಪೂರಕವಾಗಿ ಹರಿಹರ ಇನ್ನೆರಡು ಸಾಲುಗಳನ್ನು ಹೀಗೆ ರಚಿಸಿದ್ದಾನೆ.

ಎಲ್ಲಾ ನರಾಳಿ ಬೇರ್ಮೇಲಾಗಿ ನಡೆವು ತಿರೆ
ಇಲ್ಲಿ ಬೇರ್ಕೆಳಗಾಗಿ ಸಸಿನದೊಳು ನಡೆವುತಿರೆ

ನರಮನುಜರೆಲ್ಲ ಬೇರು ಮೇಲಾಗಿ ನಡೆಯುತ್ತಿದ್ದರೆ ಕಾರಿಕಾಲಮ್ಮೆ ಬೇರು ಕೆಳಗಾಗಿ ನಡೆಯುತ್ತಿದ್ದಾಳೆ ಎಂಬ ಹರಿಹರನ ವರ್ಣನೆಯು ಸಾಮಾನ್ಯರ ಮತ್ತು ಸಾಧಕರ ನಡುವಿನ ನಡವಳಿಕೆಯಲ್ಲಿನ ಅಂತರವನ್ನು ಎತ್ತಿಹೇಳುತ್ತದೆ. ಸಸ್ಯ ಜೀವಿಗಳೆಲ್ಲ ಬೇರನ್ನು ಕೆಳಗೆ ಬಿಡುತ್ತವೆ. ಅವಕ್ಕೆ ಅಗತ್ಯವಾದ ಎಲ್ಲ ಬಗೆಯ ಪೋಷಕಾಂಶಗಳನ್ನು ಮತ್ತು ಜೀವಜಲ ಕೆಳಗಿನಿಂದ ದೊರಕುತ್ತವೆ. ಅಂಥ ಬೆಳವಣಿಗೆಯ ಮೂಲಾಂಶಗಳಾದ ನೀರು, ಪೋಷಕಾಂಶಗಳನ್ನು ಪಡೆಯುವ ಅಂಗವೆ ಬೇರು. ಸಾಧಕರಲ್ಲಿ ಸದಾ ಬೆಳವಣಿಗೆಗೆ ಯೋಗ್ಯವಾದ ರೀತಿಯಲ್ಲಿ ಅವರ ಬೇರು ಕೆಳಗಾಗಿದ್ದು, ಸಾಧನೆಯ ಹಾದಿಯ ವಿನಯಶೀಲತೆಯನ್ನು ಪ್ರಕಟಿಸುತ್ತಿರುತ್ತದೆ. ಅವರು ತಮ್ಮ ಕಲಿಕೆಗೆ ಅಗತ್ಯವಾದ ಪೋಷಕಾಂಶ, ಜೀವಜಲವನ್ನು ತಮ್ಮ ಪರಂಪರೆಗೆ ಸೇರಿದ ಹಿರಿಯ ತಲೆಮಾರಿನ ಸಾಧಕರು, ಜ್ಞಾನಿಗಳಿಂದ ಸೌಹಾರ್ದ ಸಂಬಂಧದ ಮೂಲಕ ಪಡೆಯುತ್ತಾರೆ. ಅಲ್ಲದೆ ಗಗನ ಚುಂಬಿ ಮರಗಳ ಹಾಗೆ ಸಾಧನೆಯ ಮುಗಿಲೆತ್ತರಕ್ಕೆ ಬೆಳೆಯುತ್ತಾರೆ. ಕಾರಿಕಾಲಮ್ಮೆ ಅಂಥ ಸಾಧಕಿಯಾಗಿದ್ದಳೆಂಬುದನ್ನು ಹರಿಹರನ ಈ ಮಾತುಗಳು ಸೂಚಿಸುತ್ತವೆ. ಹಾಗೆಯೇ ಸಾಮಾನ್ಯ ಜನ ತಮ್ಮ ಬೇರುಗಳನ್ನು ಮೇಲೆ ಮಾಡಿ ಬದುಕುತ್ತಾರೆ, ತಮ್ಮ ವಿಸಂಗತಿ ತುಂಬಿದ ನಡವಳಿಕೆಯಿಂದ ತಮ್ಮ ನಾಶವನ್ನು ತಾವೇ ಬೇಗ ತಂದುಕೊಳ್ಳುವವರೂ ಆಗಿರುತ್ತಾರೆ ಎಂದು ಹೇಳುತ್ತದೆ. ಹಾಗಾಗಿ ಕಾರಿಕಾಲಮ್ಮೆ ಸಾಧಕರಲ್ಲೆಲ್ಲ ಯೋಗ್ಯ, ಸಾಧಕಿಯಾಗಿದ್ದಳು, ಸ್ತ್ರೀಸಾಧಕಿಯೂ ಆಗಿದ್ದಳು ಎಂಬುದು ಈ ಸಾಲುಗಳು ಸಾರುತ್ತವೆ.

5. ಸಾಧಕರ ಭೇಟಿ - ಸಾಧಕಿಯ ಸ್ವಸಾಧನೆಯ ವಿವೇಚನಾ ಪ್ರಜ್ಞೆ

ಕೈಲಾಸ ಮಾರ್ಗದಲ್ಲಿ ಮದಿಸಿದಾನೆ ಕುದುರೆಗಳನ್ನೇರಿ ಬಂದ ನಂಬಿಯಣ್ಣ 'ಚೇರಮರು' ಎಂದಿಂಗೆ ಒಪ್ಪಿರೆ ಅಮ್ಮೆ ಎಂದು ಕೇಳಿದರು. ನಂಬಿಯಣ್ಣ ಮತ್ತು ಚೇರಮರು ಭಕ್ತಸಾಧಕರಲ್ಲಿ ಹಿರಿಮೆ ಸಾಧಿಸಿದ ಪ್ರಮುಖರು. ಅವರು ಕೂಡ ಕೈಲಾಸ ಮಾರ್ಗಾವಲಂಬಿಗಳಾಗಿದ್ದರು. ಅವರಿಗೆ ತಾವು ಕೈಲಾಸಕ್ಕೆ ಖಂಡಿತವಾಗಿ ಹೋಗುತ್ತೇವೆ ಎಂಬ ಆತ್ಮವಿಶ್ವಾಸ ಖಚಿತವಾಗಿತ್ತು. ಅದು ಪರರ ವಿಷಯದಲ್ಲಿ ಅಹಂಕಾರವಾಗಿ

ರೂಪತಳೆದಿತ್ತು. ಹಾಗಾಗಿ ಅವರು ಕಾರಿಕಾಲಮ್ಮೆಗೆ ಮಾತನಾಡಿಸಿದ ರೀತಿ ಕಟಕಿಯಾಗಿ ಬದಲಾಗಿತ್ತು. ಅವರ ಮಾತಿನ ಧಾಟಿ ಕಾರಿಕಾಲಮ್ಮೆಗೆ ನೋವನ್ನು ಉಂಟು ಮಾಡಿತ್ತು. ಇದರಿಂದ ಆಕೆ ತನ್ನ ಸಾಧನೆಯ ಬಗ್ಗೆ ನಾಚಿಕೆ ಪಟ್ಟುಕೊಳ್ಳುವಂತಾಯಿತು. ಬೇರೆ ಸಾಧಕರಂತೆ ತಾನು ತನ್ನ ಸಾಧಿತ ಗುರಿ ಮುಟ್ಟುವುದರ ಬಗ್ಗೆ, ಬೇಗ ತಲುಪುವುದರ ಬಗ್ಗೆ ಶಂಕೆಯುಂಟಾಯಿತು. ಈ ದಿಸೆಯಲ್ಲಿ ಆಕೆಯಲ್ಲಿ ರೂಪತಳೆದ ಉತ್ಕಟತೆ, ತೀವ್ರತೆ ಮತ್ತು ಹಂಬಲವು ತನ್ಮಯತೆಯಲ್ಲಿ ಏಕವಾದವು. ಇದು ಉತ್ತಮ ಪರಿಣಾಮ ಬೀರಿತು ಹಾಗೂ ಸಾಧಿಸುವ ಮಾರ್ಗವನ್ನು ತಲುಪಿಸಿತು. ನಂಬಿ ಮತ್ತು ಚೇರಮರ ಮಾತುಗಳು ನಾವು ಸಾಧಿಸದೆ ಮತ್ತೆ ಯಾರು ಸಾಧಿಸುವವರು ಎಂಬ ಅಹಂನಿಂದ ಕೂಡಿತ್ತು. ಇದು ತಮ್ಮಿಂದ ಮಾತ್ರ ಸಾಧ್ಯವಾಗಬಹುದಾದ ಸಾಧನೆ ಎಂಬ ಪುರುಷ ಅಹಂಕಾರ ಅವರಲ್ಲಿ ತುಂಬಿತ್ತು. ಪುರುಷ ಅಹಂಕಾರದ ಬಗ್ಗೆ ನಿರ್ಲಿಪ್ತವಾಗುಳಿಯುವುದು ಕಾರಿಕಾಲಮ್ಮೆಯ ರೀತಿ. ತನ್ನ ಅದಮ್ಯ ಹಂಬಲವನ್ನು ಸಾಧನೆಯ ಮಾರ್ಗದಲ್ಲಿ ಹೆಚ್ಚು ಕ್ರಿಯಾಶೀಲ ವಾಗಿರುವಂತೆ ಮಾಡುವುದು ಆಕೆಯ ಕಾರ್ಯಸ್ವರೂಪ. ನಂಬಿಯಣ್ಣನ ಹಂಗಿಸುವ ಮಾತನ್ನು ಸುಳ್ಳಾಗಿಸುವಂತೆ ಕಾರಿಕಾಲಮ್ಮೆಯ ಆತನಿಗಿಂತ ಮೊದಲು ಸಾಧಿತವಾಗ ಬೇಕಾದ ಗುರಿ (ಕೈಲಾಸ) ತಲುಪಿದ್ದು ಆಕೆಯ ಸ್ತ್ರೀಶಕ್ತಿಯನ್ನು ಹರಿಹರನ ರಗಳೆ ಪರಿಚಯಿಸುತ್ತದೆ.

6. ಸಾಧಿತ ಸ್ಥಿತಿಗಿಂತ ಸಾಧಕಿ ಹೆಚ್ಚಿನವಳಾದ ಬಗೆ

ಕಾರಿಕಾಲಮ್ಮೆ ಮೈಯೆಲ್ಲ ಎಲುವಾಗಿ, ಅರಿವಿನ ಕಣ್ಣಾಗಿ ಕೈಲಾಸದಲ್ಲಿ ಬರುತ್ತಿದ್ದು ದನ್ನು ಕಂಡ ಪಾರ್ವತಿಯು ಆಕೆ ಮರುಳಿ ಇರಬೇಕೆಂದು ಬೆದರಿ ಶಿವನನ್ನು ಬಿಗಿದಪ್ಪಿ ತ್ತಾಳೆ. ಆಗ ಶಿವನು 'ಅಲ್ಲಲ್ಲ ಎಲೆ ಗಿರಿಜೆ ಕಾರಿಕಾಲಮ್ಮೆಯರು, ಅಲ್ಲಲ್ಲ ಗೌರಿ ನಿಮ್ಮತ್ತೆ ನಮ್ಮಗವ್ವೆಯರು, ಎನ್ನಯ ಜನನಿ ಎನ್ನ ಹಣ್ಣೆತ್ತ ಹಿತವೆಯರು, ಎನ್ನವ್ವೆ, ಎನ್ನಮ್ಮೆ ಕಾರಿಕಾಲಮ್ಮೆಯರು' ಎಂದು ಹೇಳುತ್ತಾನೆ. ಗೌರಿಯ ಭಯ ನಿವಾರಿಸುತ್ತಾನೆ.

ತನ್ನ ಇಷ್ಟದೈವವನ್ನುಸಾಕ್ಷಾತ್ತಾಗಿಸಿಕೊಳ್ಳುವ ಹಂಬಲವು ಭಕ್ತರನ್ನು ಸಾಧಕರನ್ನಾಗಿ ಮಾಡುತ್ತದೆ. ಕಾರಿಕಾಲಮ್ಮೆಯ ಸ್ಥಿತಿಯೂ ಅದೇ ಬಗೆಯದೆಂದು ಹರಿಹರ ನಿರೂಪಿಸಿ ದ್ದಾನೆ. ಅಷ್ಟೇ ಅಲ್ಲದೆ ಒಂದು ಹೆಜ್ಜೆ ಮುಂದೆ ಹೋಗಿ ಭಕ್ತರ ಸಾಧಿತ ಗುರಿ ತಲುಪಿದ ನಂತರ ಅವರಿಗೆ ಅದೇ ಸ್ಥಿತಿ ಉಳಿಯುವುದಿಲ್ಲವೆಂದೂ ಹೇಳಿದ್ದಾನೆ. ಕಾರಿಕಾಲಮ್ಮೆ ಗುಪ್ತಸಾಧಕಿಯಾಗಿ ಶಿವಪಾರ್ವತಿಯರನ್ನು ತನ್ನ ತಂದೆ ತಾಯಿಯರಂತೆ ಸೇವಿಸಿದ್ದಳು. ಈಗ ಕಾರಿಕಾಲಮ್ಮೆಯು ಸಾಧಿತಗುರಿ ತಲುಪಿದ್ದಾಳೆ. ಆಕೆ ಶಿವಪಾರ್ವತಿಯರಿಗೆ ತಾಯಿಯಾಗಿ ಪರಿವರ್ತನೆ ಹೊಂದಿರುವ ಸ್ಥಿತಿಯನ್ನು ಹರಿಹರ ನಿರೂಪಿಸಿದ್ದಾನೆ. ಇದು ಕಲಿಕೆಯ ಹಂತವಿಡೀ ವಿದ್ಯಾರ್ಥಿಯಾಗಿದ್ದು, ಅದೇ ವಿದ್ಯಾರ್ಥಿ ಕಲಿಕೆಯ ನಂತರ ಅರಿವಿನ

ತಾಣವಾದಾಗ ಗುರುವಾಗುವ ಹಾಗೆ ಎಂಬ ತರ್ಕದ ನೆಲೆಯದಾಗಿದೆ. ಅರಿವಿನ ಹಾದಿಯಲ್ಲಿ ತನಗೆ ತಾನೇ ಗುರುವಾದ ಮೇಲೆ ಗುರುಶಿಷ್ಯ ಸಂಬಂಧ ಅಳಿದು ಅರಿವಿನ ಅನಂತ ಹಾದಿ ಮಾತ್ರ ಉಳಿಯುತ್ತದೆ. ಅದರ ಹಾಗೆ ಇಲ್ಲಿ ಕಾರಿಕಾಲಮ್ಮೆ ಸಾಧಿತ ಸ್ಥಿತಿಗಿಂತ ಹೆಚ್ಚಿನ ಸಾಧಕಿಯಾಗಿ ಹರಿಹರ ಕಂಡರಸಿ ನಿರೂಪಿಸಿರುವಂತೆ ಕಂಡು ಬರುತ್ತದೆ.

7. ಸಾಧಕಿಯ ವಿನಯಶೀಲತೆ

ಶಿವನ ಮಾತಿನಿಂದ ನೊಂದ ಕಾರಿಕಾಲಮ್ಮೆ 'ಎನಗೆ ನೀವಿರ್ಬರುಂ ಜೀವದುನ್ನತಿ ದೇವ' ಎಂದು ಹೇಳಿ ವಿನಯವನ್ನು ಪ್ರಕಟಿಸುತ್ತಾಳೆ. ಸಾಧಕರು ತಮಗೆ ತಾನೆ ಗುರುಗಳು, ಗೆಳೆಯರು ಆಗಿದ್ದರೂ ಕೂಡ ಅವರ ಮುಂದಿನ ಸಾಧನೆಗೆ ಗುರಿಯೊಂದು ಅತ್ಯಗತ್ಯವಾಗಿರುತ್ತದೆ. ವಿನಯವು ಅರಿವಿನ ಹಾದಿಯಲ್ಲಿರುವ ಸಾಧಕರ ಕಲಿಕೆಯ ಪ್ರವೃತ್ತಿಯನ್ನು ಸದಾ ಜೀವಂತವಾಗಿಡುತ್ತದೆ. ಹಾಗಾಗಿಯೇ ಸಾಧಕಿ ಕಾರಿಕಾಲಮ್ಮೆಯ ವಿನಯವು ಅರಿವಿನ ಹಾದಿಯ ಶೋಧದ ಅಗತ್ಯವಾಗಿ ಉಳಿದಿದೆ ಎಂದು ಸೂಚಿಸಲು ನಿರೂಪಿತವಾಗಿರುವಂತೆ ಕಂಡು ಬರುತ್ತದೆ.

ಹರಿಹರ ನಿರೂಪಿತ ಕಾರಿಕಾಲಮ್ಮೆಯ ಸಾಧನೆ ಪುರುಷ ಸಮಾಜದಲ್ಲಿ ಸಾಮಾನ್ಯ ಮಹಿಳೆಗೆ ಸಾಧ್ಯವಾಗುವಂಥದ್ದಲ್ಲ, ಆಕೆ ಪುರುಷ ಸಮಾಜದ ವೈಚಾರಿಕ ಆಕೃತಿಗಳನ್ನು ಮೀರಿ ಬೆಳೆಯುವ ರೀತಿಯನ್ನು ಮಾತ್ರ ಹರಿಹರ ಅಸಾಮಾನ್ಯವಾಗಿ ಚಿತ್ರಿಸಿದ್ದಾನೆ. ಪರರ ಆಕ್ರಮಣವನ್ನು ತಡೆಗಟ್ಟಿ ತನ್ನನ್ನು ಕಾಪಾಡಿಕೊಳ್ಳುವ ಹಾಗೂ ತನ್ನನ್ನು ಮರಳಿ ಸ್ಥಾಪಿಸಿಕೊಳ್ಳುವ ಕಾರಿಕಾಲಮ್ಮೆಯ ಮಾದರಿಯನ್ನು ಹರಿಹರ ಸ್ತ್ರೀಲೋಕಕ್ಕೆ ಒಂದು ಅಸ್ತ್ರವಾಗಿ ನೀಡಿದ್ದಾನೆ. ಈ ರಗಳೆ ಹದಿಮೂರನೆಯ ಶತಮಾನದಲ್ಲೆ ಹರಿಹರ ಸ್ತ್ರೀಪರ ದನಿ ಎತ್ತಿದ ರೀತಿಯ ವಿಶಿಷ್ಟತೆಯನ್ನು ಸಾರುತ್ತದೆ.

೪೦. ಹಂಪಿಯಲ್ಲಿ ಯಾಪನೀಯ ಜೈನ ಧರ್ಮ

ಡಾ. ಎಚ್.ಎಸ್. ಗೋಪಾಲರಾವ್

ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಬುಕ್ಕರಾಯನ ಶ್ರವಣಬೆಳಗೊಳದ ಶಾಸನವು ಮಹತ್ವ ಪಡೆದಿದೆ.[1] ಆ ಶಾಸನದಿಂದ ತಿಳಿಯುವ ಪ್ರಕಾರ, ಕ್ರಿ.ಶ. 1368ರ ವೇಳೆಗಾಗಲೇ ಜೈನರು ಶ್ರೀ ವೈಷ್ಣವರೊಡನೆ ಸಂಘರ್ಷಕ್ಕಿಳಿದಿದ್ದರು ಅಥವಾ ಶ್ರೀವೈಷ್ಣವರು ಜೈನರಿಗೆ ಕಿರುಕುಳ ನೀಡುತ್ತಿದ್ದರು. ಒಟ್ಟಾರೆ, ಜೈನ ಧರ್ಮವು ದುರ್ಬಲ ವಾಗುತ್ತಿತ್ತು.

ವಿಜಯನಗರದ ಅರಸರ ಕಾಲದಲ್ಲಿ ಜೈನಧರ್ಮಕ್ಕೆ ವಿಶೇಷ ನೆರವು ದೊರೆತ ಸುಳಿವುಗಳು ಕಡಿಮೆ. ಬುಕ್ಕರಾಯನ ಪ್ರಮುಖ ಶಾಸನವನ್ನು ಹೊರತುಪಡಿಸಿದರೆ, ಮತ್ತಾವ ವಿಷಯವೂ ಜೈನ ಧರ್ಮೀಯರ ಸ್ಥಿತಿ - ಗತಿಗಳ ಬಗ್ಗೆ ಹೆಚ್ಚಿನ ಮಾಹಿತಿ ಗಳನ್ನೇನೂ ಕೊಡುವುದಿಲ್ಲ. ಹಂಪಿಯಲ್ಲಿ ನಮಗೆ ಈವರೆಗೆ ಜೈನಧರ್ಮಕ್ಕೆ ಸಂಬಂಧಿಸಿ ದಂತೆ ಕೇವಲ ನಾಲ್ಕು ಶಾಸನಗಳು ಮಾತ್ರ ದೊರೆತಿದ್ದುವು. ಅದರಲ್ಲಿ ಮೊದಲ ಶಾಸನದ ಕಾಲವು ಕ್ರಿ.ಶ. 1386. ಗಾಣಿಗಿತ್ತಿ ಬಸದಿಯ ಮುಂದಿನ ಮಾನಸ್ತಂಭದಲ್ಲಿರುವ ಈ ಶಾಸನದಲ್ಲಿ[2] ಮೂಲ ಸಂಘದಿಂದ ಜನಿಸಿದ ನಂದಿ ಸಂಘದ, ಬಲಾತ್ಕಾರ ಗಣದ, ಸಾರಸ್ವತಿ ಗಚ್ಛಕ್ಕೆ ಸೇರಿದ ಪದ್ಮನಂದಿ ಮುನಿಯ ಪ್ರಸ್ತಾಪವಿದೆ. ಇದರಲ್ಲಿ ಜೈನ ಗುರುಗಳ ಪಟ್ಟಾವಳಿಯನ್ನು ನೀಡಲಾಗಿದೆ. ಬುಕ್ಕರಾಯನ ಮಗ ಹರಿಹರನ ಮಂತ್ರಿ ಬೈಚಪ. ಬೈಚಪನ ಮಗ ಇರುಗಪನು ವಿಜಯನಗರದಲ್ಲಿ ಕುಂಥು ಜಿನಾಲಯವನ್ನು ಕಟ್ಟಿಸಿದ್ದನ್ನು ದಾಖಲಿಸುವುದು ಶಾಸನದ ಉದ್ದೇಶವಾಗಿದೆ.

ಹಂಪಿಯ ಆನೆಸಾಲಿನ (ಗಜಶಾಲೆ) ಹಿಂದೆ ಇರುವ ಜೈನಬಸದಿಯ ಗೋಡೆಯಲ್ಲಿ ರುವ ಶಾಸನದ ಕಾಲ. ಕ್ರಿ.ಶ. 1426.[3] ಇದರಲ್ಲಿ ದೇವರಾಯನು ವಿಜಯನಗರದ ಕ್ರಮುಕಪರ್ಣಾಪಣ ಬೀದಿಯಲ್ಲಿ ಕಲ್ಲಿನ ಪಾರ್ಶ್ವ ಚೈತ್ಯಾಲಯವನ್ನು ಕಟ್ಟಿಸಿದ ಉಲ್ಲೇಖ ಇದೆ. ಹಂಪಿಯಲ್ಲಿ ಜೈನ ಧರ್ಮಕ್ಕೆ ಸಂಬಂಧಿಸಿದಂತೆ ಇರುವ ಮತ್ತೊಂದು ಶಾಸನದ ಕಾಲ ಕ್ರಿ.ಶ. 1557.[4] ಇದರಲ್ಲಿ ಸದಾಶಿವರಾಯನ ಆಳ್ವಿಕೆಯ ಕಾಲದಲ್ಲಿ ಮಹಾ ಮಂಡಲೇಶ್ವರ ರಾಮರಾಜ ಅಯ್ಯನು ಚಿಕ್ಕದೇವರ ಬಸದಿಗೆ ದೀವಟಿಗೆಗಾಗಿ ಅಂಗಡಿ ಯನ್ನು ದಾನವಾಗಿ ನೀಡಿದ ವಿವರಗಳಿವೆ. ಇವುಗಳಲ್ಲದೆ, ಒಂದು ಸಾಲಿನ ಒಂದು ಶಾಸನವು ಶ್ರೀ ಶಾಂತಿನಾಥದೇವರು ಎಂದು ಮಾತ್ರ ಉಲ್ಲೇಖಿಸಿದೆ.[5] ಇದು ಒಬ್ಬ ಜೈನ ಗುರುವಿನ ಹೆಸರು ಎಂದು ಭಾವಿಸಲು ಅವಕಾಶಗಳಿವೆ. ಈವರೆಗೆ ಜೈನ ಧರ್ಮಕ್ಕೆ

ಸಂಬಂಧಿಸಿದಂತೆ, ಮೇಲೆ ಪ್ರಸ್ತಾಪಿಸಿದ ನಾಲ್ಕು ಶಾಸನಗಳು ಮಾತ್ರ ಹಂಪಿಯಲ್ಲಿ ವಿದ್ವಾಂಸರ ಗಮನಕ್ಕೆ ಬಂದಿದ್ದವು.

ಕೆಲವು ತಿಂಗಳ ಹಿಂದೆ, ನಾನು ಬೇರೊಂದು ಕ್ಷೇತ್ರ ಕಾರ್ಯದ ನಿಮಿತ್ತ ಹಂಪಿಗೆ ಹೋಗಿದ್ದಾಗ, ಆಕಸ್ಮಾತ್ತಾಗಿ, ತುಂಗಭದ್ರಾ ನದಿಯ ದಂಡೆಯ ಮೇಲಿರುವ ಪುರಂಧರ ಮಂಟಪದ ಹಿಂಭಾಗದಲ್ಲಿ ವಿಠ್ಠಲ ದೇವಾಲಯಕ್ಕೆ ಹೋಗುವ ಕಾಲು ದಾರಿಗೆ ಹೊಂದಿ ಕೊಂಡಂತಿರುವ ಕಲ್ಲಿನ ಮೇಲೆ ಇರುವ ಎರಡು ಜೋಡಿ ಪಾದಗಳ ಕೆತ್ತನೆಯನ್ನು ಗಮನಿಸಲಾಯಿತು. ಸ್ಥಳೀಯರು ಇದನ್ನು 'ವಿಷ್ಣುಪಾದ' ಎನ್ನುತ್ತಾರೆ. ವಿಷ್ಣುಪಾದ ಎಂದು ಗುರುತಿಸಲಾಗಿರುವ ಪಾದಗಳು ಪರಸ್ಪರ ಅಕ್ಕ ಪಕ್ಕದಲ್ಲಿದ್ದರೂ ಸಹ, ಒಂದು ಪಾದವು ಉತ್ತರದ ಕಡೆಗೂ, ಮತ್ತೊಂದು ದಕ್ಷಿಣದ ಕಡೆಗೂ ಚಲಿಸಲು ಅನುವಾಗಿರುವಂತೆ ಕೆತ್ತಲಾಗಿದೆ. ಕುಳಿಯಂತೆ ಕಾಣುವ ಕಲ್ಲಿನಲ್ಲಿ ಆಯತಾಕಾರದ ಚೌಕಟ್ಟನ್ನು ಸಿದ್ಧಪಡಿಸಿ, ಆದರ ದಕ್ಷಿಣ ಭಾಗದಲ್ಲಿ ನಾಗರಹಾವಿನ ಹೆಡೆಯನ್ನು ಕೆತ್ತಲಾಗಿದೆ. ಹೆಡೆ ಇರುವ ನಾಗರಹಾವು ಇಡಿಯಾಗಿ ಎರಡೂ ಪಾದಗಳನ್ನು ಸುತ್ತುವರಿದಂತಿದೆ. ಚೌಕಟ್ಟಿನ ಒಂದು ಬದಿಯಲ್ಲಿ (ಪಶ್ಚಿಮ) ತ್ರಿಶೂಲವನ್ನೂ, ಮತ್ತೊಂದು ಬದಿಯಲ್ಲಿ (ಪೂರ್ವ) ಚಕ್ರವನ್ನೂ ಕೆತ್ತಲಾಗಿದೆ. ತ್ರಿಶೂಲದ ಪಕ್ಕದಲ್ಲಿರುವ ಪಾದದ ಒಳಗಡೆ ಯಾವ ಪ್ರತ್ಯೇಕ ಚಿಹ್ನೆಯೂ ಇಲ್ಲ. ಅದು ದಕ್ಷಿಣಾಭಿಮುಖವಾಗಿದೆ. ಉತ್ತರಾಭಿಮುಖವಾಗಿರುವ ಪಾದದ ಬದಿಯಲ್ಲಿ ಚಕ್ರದ ಕೆತ್ತನೆ ಇದೆ. ವಿಶೇಷವೆಂದರೆ, ಈ ಪಾದದ ಒಳಗಡೆ ಚಕ್ರದ ಕೆತ್ತನೆ ಇದೆ. ಪಾದಗಳಲ್ಲಿ ಒಂದು ಹರನನ್ನೂ ಮತ್ತೊಂದು ಹರಿಯನ್ನೂ ಸಂಕೇತಿಸುತ್ತಿವೆ ಎಂಬುದು ಸ್ಪಷ್ಟ. ಹರ ಶಿಲ್ಪಗಳಲ್ಲಿ ಬಲ ಭಾಗವು ಹರನನ್ನೂ ಎಡ ಭಾಗವು ಹರಿಯನ್ನೂ ಪ್ರತಿನಿಧಿಸುತ್ತವೆ ಎಂದು ತಿಳಿದಿದೆ. ಶಿಲ್ಪದಲ್ಲಿ ಒಂದೇ ಮುಖ ಇರುವುದರಿಂದ ಪಾದಗಳು ಒಂದೇ ದಿಕ್ಕಿಗೆ ಇರುವುದು ಸಹಜ. ಹರಿಹರರ ಪಾದಗಳನ್ನು ಮಾತ್ರವೇ ಕೆತ್ತಿದರೆ, ಅವುಗಳನ್ನೂ ಒಂದೇ ದಿಕ್ಕಿಗೆ, ಆದರೆ, ಅವುಗಳ ಚಿಹ್ನೆಗಳೊಂದಿಗೆ ಕೆತ್ತಲಾಗುತ್ತದೆ ಎಂಬುದು ಸಾಮಾನ್ಯ ತಿಳುವಳಿಕೆ. ಆದರೆ, ಇಲ್ಲಿ ಹರಹರನ ಪಾದಗಳನ್ನು ವಿರುದ್ಧ ದಿಕ್ಕುಗಳಿಗೆ ಮುಖ ಮಾಡಿರುವಂತೆ ಕೆತ್ತಲಾಗಿದೆ. ಅವು ಹರಿ ಮತ್ತು ಹರನ ಪಾದಗಳೇ ಎಂದು ಸ್ಪಷ್ಟಪಡಿಸಲು ತ್ರಿಶೂಲ ಮತ್ತು ಚಕ್ರಗಳ ಸಂಕೇತವನ್ನು ಕೆತ್ತಲಾಗಿದೆ. ಉತ್ತರ ದಿಕ್ಕಿಗೆ ಹರಿಯೂ ದಕ್ಷಿಣ ದಿಕ್ಕಿಗೆ ಶಿವನೂ ಚಲಿಸುತ್ತಾರೆ ಎಂಬ ನಂಬಿಕೆಯಿಂದ ಹರಿಹರರನ್ನು ಪಾದಗಳ ಮೂಲಕ ಪ್ರತಿನಿಧಿಸುವ ವಿಧಾನ ಇದಾಗಿರಬೇಕು. ಈ ಪಾದಗಳನ್ನು ವಿಷ್ಣುಪಾದ ಎನ್ನುವುದರ ಬದಲು ಹರಿಹರ ಪಾದ ಎನ್ನಬಹುದು.

ಈ ಹರಿಹರ ಪಾದದ ಕೆತ್ತನೆಗೆ ಕೆಲವೇ ಅಡಿಗಳ ದೂರದಲ್ಲಿ ಮತ್ತೊಂದು ಜೊತೆ ಪಾದಗಳನ್ನು ವೃತ್ತಾಕಾರದ ಪದ್ಮದ ಕೆತ್ತನೆಯ ನಡುವೆ ಕೆತ್ತಲಾಗಿದೆ. ಈ ಪಾದಗಳು ಉತ್ತರಾಭಿಮುಖವಾಗಿದ್ದು, ಇವುಗಳ ಕೆಳಗೆ ಮೂರು ಸಾಲಿನ ಶಾಸನ ಇದೆ. ಶಾಸನ ಪಾಠ ಈ ಕೆಳಕಂಡಂತಿದೆ.

1. ಶ್ರೀಯಾಪನೀಯ ಸಂ
2. ಘದ ಶ್ರೀ ಶಾಂತಿ ವಿಷ್ಣು
3. ಭಟ್ಟಾರಕ ಪಾದ

ಲಿಪಿ ಸ್ವರೂಪವನ್ನು ಆಧರಿಸಿ, ಆ ಶಾಸನದ ಕಾಲವನ್ನು ಕ್ರಿ.ಶ. ಸು.13ನೆಯ ಶತಮಾನಕ್ಕೆ ಸೇರಿಸಬಹುದು. ಇದರಿಂದ ಕ್ರಿ.ಶ.13ನೆಯ ಶತಮಾನದಲ್ಲೂ, ವಿಜಯನಗರದಲ್ಲಿ ಯಾಪನೀಯ ಗುರುಗಳು ವಾಸವಾಗಿದ್ದರು ಎಂದು ಸ್ಪಷ್ಟವಾಗುತ್ತದೆ. ಶಾಸನದ ಪಾಠವು ವಿಶೇಷ ವ್ಯಾಖ್ಯಾನವನ್ನೇನೂ ಅಪೇಕ್ಷಿಸದಷ್ಟು ಸರಳವಾಗಿದೆ. ಈ ಶಾಸನದ ವಿಶೇಷವೆಂದರೆ, ಹಂಪಿಯಲ್ಲಿ 13ನೆಯ ಶತಮಾನದಲ್ಲೂ ಯಾಪನೀಯರು ಅಸ್ತಿತ್ವದಲ್ಲಿದ್ದರು ಎಂಬ ಮಾಹಿತಿ. ಜೈನ ಧರ್ಮದಲ್ಲಿ ಪ್ರಮುಖವಾದ ದಿಗಂಬರ ಮತ್ತು ಶ್ವೇತಾಂಬರ ಪಂಗಡಗಳಲ್ಲದೆ, ಯಾಪನೀಯ ಎಂಬ ಒಂದು ಪಂಗಡವೂ ಇದೆ. ಇದನ್ನು ಗೋಪ್ಯ ಸಂಘ ಎಂದೂ ಕರೆಯಲಾಗುತ್ತದೆ. ಎಂಬುದು ಶ್ರೀ ಮಿರ್ಜಿ ಅಣ್ಣಾರಾಯರ ಅಭಿಪ್ರಾಯ.[6] ಯಾಪನೀಯ ಸಂಘವೂ ಪ್ರಾಚೀನ ಎಂಬ ಅಭಿಪ್ರಾಯ ವಿದೆ. ಕ್ರಿ.ಶ. 2ನೆಯ ಶತಮಾನದ ವೇಳಗಾಗಲೇ ಯಾಪನೀಯ ಸಂಘ ಅಸ್ತಿತ್ವದಲ್ಲಿ ಇತ್ತೆಂದು ತಿಳಿಯಲಾಗಿದೆ. ಯಾಪನೀಯ, ಯಾಪನ, ಅರ್ಧಫಾಲಕ, ಗೋಪ್ಯ ಇತ್ಯಾದಿ ಹೆಸರುಗಳಿಂದಲೂ ಪರಿಚಿತವಾಗಿರುವ ಯಾಪನೀಯ ಸಂಘದ ಉಗಮದ ಬಗ್ಗೆ ಹಲವು ಅಭಿಪ್ರಾಯಗಳಿವೆ. ದಿಗಂಬರತ್ವವನ್ನು ಬಿಟ್ಟು ವಸ್ತ್ರ ಧರಿಸಿದರೂ, ದಿಗಂಬರ ಪಂಥದ ತತ್ವ ಮತ್ತು ಸಿದ್ಧಾಂತಗಳನ್ನು ಅಳವಡಿಸಿಕೊಂಡ ಜೈನರೇ ಮುಂದೆ ಯಾಪನೀಯರು. ಒಂದೆಡೆ ನಿಲ್ಲದೆ ಸಂಚರಿಸುತ್ತಿದ್ದವರು ಎಂಬ ಹೇಳಿಕೆಯೂ ಇದೆ. 'ಯಾಪನೀಯ ಸಂಘವು ಒಂದು ರೀತಿಯಿಂದ ಕರ್ನಾಟಕದ ಸಂದರ್ಭದಲ್ಲಿ ಹುಟ್ಟಿದ ಇಲ್ಲಿಯ ಪರಿಸರದ ಕೂಸು' ಎಂಬ ಅಭಿಪ್ರಾಯ ಡಾ.ಹಂ.ಪ.ನಾ. ಅವರದು.[7]' ಚಾಳುಕ್ಯರ ಆಳ್ವಿಕೆಯಲ್ಲಿ ಯಾಪನೀಯಸಂಘ ಸುವರ್ಣ ಯುಗದ ವ್ಯಾಪ್ತಿ ವೈಭವಗಳನ್ನು ಪಡೆಯಿತೆಂಬ ಪ್ರೊ. ಕಮಲಾ ಹಂಪನಾ ಅವರ ಅಂದಿನ ಕಾಲದ ಶಾಸನಗಳು ಪುಷ್ಟಿಕರಿಸುತ್ತವೆ' ಎಂಬ ಡಾ. ಹಂಪನಾ ಅವರ ಮಾತುಗಳನ್ನು [8] ಒಪ್ಪಬೇಕು. ಕರ್ನಾಟಕದಲ್ಲಿ ಕ್ರಿ.ಶ. 5ನೆಯ ಶತಮಾನದಿಂದ [9] 12 ನೆಯ ಶತಮಾನದವರೆಗೆ ಯಾಪನೀಯ ಸಂಘಕ್ಕೆ ಸಂಬಂಧಿಸಿದ ಶಾಸನಗಳು ಲಭ್ಯವಿದ್ದರೂ, ಈ ಪಂಗಡವು ಅತ್ಯಂತ ಪ್ರಬಲವಾಗಿದ್ದುದು ಕಲ್ಯಾಣ ಚಾಲುಕ್ಯರ ಆಳ್ವಿಕೆಯಲ್ಲಿ ಎಂದು ಖಚಿತವಾಗಿ ಹೇಳಬಹುದು. ಕಾಗವಾಡದ ಒಂದು ನಿಸಿದಿ ಶಾಸನವು ಕ್ರಿ.ಶ. 1394ಕ್ಕೆ ಸೇರಿದ್ದು, ಇದರಲ್ಲಿ ಯಾಪನೀಯ ಸಂಘದ ಪೊನ್ನಾಗವೃಕ್ಷಮೂಲ ಗಣದ ನೇಮಿಚಂದ್ರ, ಧರ್ಮಕೀರ್ತಿ ಮತ್ತು ನಾಗಚಂದ್ರ ಎಂಬ ಗುರುಗಳನ್ನು ಪ್ರಸ್ತಾಪಿಸಿದೆ ಎಂದು ಡಾ. ಆ.ನೇ. ಉಪಾಧ್ಯೆ ತಿಳಿಸುತ್ತಾರೆ.[10] ಯಾಪನೀಯ ಸಂಘದ ಉಲ್ಲೇಖ ಇರುವ ಮತ್ತು ಸಧ್ಯಕ್ಕೆ ಕೊನೆಯದು ಎಂದು ತಿಳಿಯಬಹುದಾದ

ಶಾಸನ ಇದೇ ಎಂದು ಪರಿಗಣಿಸಬಹುದಾದರೆ, ಯಾಪನೀಯರು 14ನೆಯ ಶತಮಾನದ ಕೊನೆಯವರೆಗೆ ಅಲ್ಪ ಸಂಖ್ಯೆಯಲ್ಲಾದರೂ ಉಳಿದಿದ್ದರು. ಕ್ರಿ.ಶ.11ನೆಯ ಶತಮಾನದ ವೇಳೆಗೆ ಯಾಪನೀಯರು ಸಮಾಜದಲ್ಲಿ ವಿಶಿಷ್ಟ ಸ್ಥಾನವನ್ನೂ ಗಳಿಸಿದ್ದರೂ ಸಹ, ಅನಂತರದ ಕಾಲದಲ್ಲಿ ಅವರು ಸಮಾಜದಲ್ಲಿ ಪ್ರಾಮುಖ್ಯತೆಯನ್ನು ಕಳೆದುಕೊಂಡರು. ಅರಸೀಕೆರೆಯಲ್ಲಿ ದೊರೆತಿರುವ ಒಂದು ಶಾಸನವು ಯಾಪನೀಯ ಸಂಘದ ಮಡುವಗಣದ ಜಿನಾಲಯದ ಬಗ್ಗೆ ಪ್ರಸ್ತಾಪಿಸಿದೆ.[11] ಡಾ.ಎಸ್. ಶೆಟ್ಟರ್ ಈ ಶಾಸನವನ್ನು ಪ್ರಕಟಿಸಿದ್ದಾರೆ. ಆ ಶಾಸನದಲ್ಲಿ ಎಲ್ಲೆಲ್ಲಿ ಯಾಪನೀಯ ಪದ ಇದೆಯೋ ಅಲ್ಲೆಲ್ಲಾ ಕಲ್ಲನ್ನು ಕೆತ್ತಿ, ಶಾಸನ ಪಾಠಕ್ಕೆ ಹಾನಿ ಮಾಡುವ ಪ್ರಯತ್ನ ನಡೆದಿದೆ ಎನ್ನುವುದನ್ನು ಗಮನಿಸಿರುವ ಡಾ. ಎಸ್. ಶೆಟ್ಟರ್ ಅವರು ಹೇಳುವಂತೆ, ಈ ಹಾನಿಯು ಆಕಸ್ಮಿಕವೇನೂ ಆಗಿರದೆ, ಯಾಪನೀಯ ಸಂಘದ ಬಗ್ಗೆ ಅಸಹನೆ ಇದ್ದ ಯಾರೋ ಉದ್ದೇಶ ಪೂರ್ವಕವಾಗಿಯೇ ಈ ಹಾನಿಯನ್ನು ಮಾಡಿರುವಂತಿದೆ. ಅಂದರೆ, ಯಾಪನೀಯ ಸಂಘದ ಬಗೆಗಿದ್ದ ಅಸಹನೆಯನ್ನು ಪ್ರತ್ಯಕ್ಷವಾಗಿಯೂ ವ್ಯಕ್ತಪಡಿಸಲಾಗುತ್ತಿತ್ತು ಎಂದು ತಿಳಿಯುತ್ತದೆ. ಐಹೊಳೆಯ ಪ್ರಸಿದ್ಧ ಮೇಗುತಿ ಶಾಸನದ ಕರ್ತೃ ರವಿಕೀರ್ತಿಯು ಜೈನ ಎಂದು ಆ ಶಾಸನ ಬಲ್ಲ ಎಲ್ಲರಿಗೂ ತಿಳಿದಿದೆ. ಅವನು ಜೈನ ಧರ್ಮದ ಯಾಪನೀಯ ಸಂಘಕ್ಕೆ ಸೇರಿದವನೆಂದು, ಆ.ನೇ. ಉಪಾಧ್ಯೆ ಅವರ ಲೇಖನವೊಂದನ್ನು ಉಲ್ಲೇಖಿಸಿ, ಪಿ.ಬಿ. ದೇಸಾಯಿ ಅವರು ದಾಖಲಿಸಿದ್ದಾರೆ.[12] ಇಂತಹ ಮುಖ್ಯವಾದ ವಿಷಯವನ್ನು ಆ.ನೇ. ಉಪಾಧ್ಯೆ ಅವರು ನಂತರದ ಅವರ ಪ್ರಮುಖ ಲೇಖನದಲ್ಲಿ[13] ಏಕೆ ಪ್ರಸ್ತಾಪಿಸಿಲ್ಲ ಎಂದು ಅನುಮಾನವಾಗುತ್ತದೆ.

ಯಾಪನೀಯರು ಉತ್ತರ ಕರ್ನಾಟಕದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದರು ಎಂಬುದು ಪಿ.ಬಿ.ದೇಸಾಯಿ ಅವರ ಅಭಿಪ್ರಾಯ.[14] ಆಡಕಿ, ಸೇಡಂ, ತೇಂಗಲಿ, ಹೊನ್ನೂರು, ಕಾಗವಾಡ, ಕೊಲ್ಹಾಪುರ ಸವದತ್ತಿ ಇತ್ಯಾದಿ ಸ್ಥಳಗಳಲ್ಲಿ, ಅಂದರೆ ಉತ್ತರ ಕರ್ನಾಟಕದ ಬಹುತೇಕ ಪ್ರದೇಶಗಳಲ್ಲಿ ಯಾಪನೀಯ ಸಂಘದ ಜನ ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿದ್ದರು. ಯಾಪನೀಯ ಗುರುಗಳ ಎರಡು ಪ್ರಬಲ ನೆಲೆಗಳೆಂದರೆ, ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಹೊಸೂರು ಮತ್ತು ಮನೋಲಿ ಎಂದು ಪಿ.ಬಿ. ದೇಸಾಯಿ ತಿಳಿಸಿದ್ದಾರೆ.[15] ಕೊಪ್ಪಳವೂ ಒಂದು ಮುಖ್ಯ ಯಾಪನೀಯ ಸ್ಥಾನವಾಗಿತ್ತು ಎಂದು ತಿಳಿದಿದೆ. ಇತರ ಜೈನ ಶಾಖೆಗಳಂತೆ ಯಾಪನೀಯ ಶಾಖೆಯಲ್ಲೂ ತಮ್ಮದೇ ಆದ ಗಣ, ಗಚ್ಛ, ಅನ್ವಯ, ಆಮ್ನಾಯ ಇತ್ಯಾದಿ ಕುರಿತು ವಿಪುಲ ಮಾಹಿತಿಗಳಿವೆ.

ಮೇಲಿನ ಎಲ್ಲಾ ವಿಚಾರಗಳನ್ನು ಗಮನಿಸಿದಾಗ ಕರ್ನಾಟಕದಲ್ಲಿ ಯಾಪನೀಯ ಸಂಘದ ಅನುಯಾಯಿಗಳ ಸಂಖ್ಯೆ ಹೆಚ್ಚಾಗಿಯೇ ಇತ್ತು ಮತ್ತು ಆ ಸಂಘದ ಮುನಿಗಳೂ ಈ ಭಾಗದಲ್ಲಿ ಅಧಿಕ ಸಂಖ್ಯೆಯಲ್ಲೇ ಇದ್ದರು ಎಂದು ವೇದ್ಯವಾಗುತ್ತದೆ. ಸಂಘವನ್ನು

ಸ್ಥಾಪಿಸಿಕೊಂಡಿದ್ದ ಯಾಪನೀಯ ಗುರುಗಳು, ಕಾಳಾಮುಖ ಗುರುಗಳು ಶಿವಾಲಯಗಳನ್ನು ನೋಡಿಕೊಂಡಂತೆ, ಬಸದಿಗಳನ್ನು ನೋಡಿಕೊಂಡರು ಎಂಬುದು ಡಾ.ಆ.ನೇ. ಉಪಾಧ್ಯೆ ಅವರ ಅಭಿಮತ. ಕರ್ನಾಟಕದ ವಾಸ್ತು ಶಿಲ್ಪ ಮತ್ತು ಮೂರ್ತಿ ಶಿಲ್ಪಗಳಿಗೆ ಯಾಪನೀಯರ ಕೊಡುಗೆ ಗಟ್ಟಿಯಾದುದು ಎಂದು ಗುರುತಿಸಿರುವ ಡಾ.ಹಂ. ಪ. ನಾ. ಜಿನಾಲಯಗಳ ನಿರ್ಮಾಣ, ವಾಸ್ತು-ಕಲೆಗೆ ಪ್ರೋತ್ಸಾಹ ಅಲ್ಲದೆ ಸಾಹಿತ್ಯ ನಿರ್ಮಿತಿಗೂ ಯಾಪನೀಯರ ಕೊಡುಗೆ ಇದೆ ಎಂದು ಅಭಿಪ್ರಾಯ ಪಡುತ್ತಾರೆ.[16] ಹೀಗೆ ಕರ್ನಾಟಕದ ಒಟ್ಟು ಸಂಸ್ಕೃತಿಯ ಮೇಲೆ ವಿಶೇಷ ಪ್ರಭಾವ ಬೀರಿದ ಯಾಪನೀಯರು ಕ್ರಿ.ಶ. 5ನೆಯ ಶತಮಾನದಿಂದ ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತಾರೆ. ಅವರು ಅತ್ಯಂತ ಪ್ರಬಲರಾಗಿ ಗೋಚರಿಸುವುದು ಕ್ರಿ.ಶ. 11ನೆಯ ಶತಮಾನದಲ್ಲಿ. ನಂತರ ಕ್ರಮೇಣ ದುರ್ಬಲರಾಗುತ್ತಾ, ಕ್ರಿ.ಶ.13ನೆಯ ಶತಮಾನದಿಂದ ಆಚೆಗೆ ಅಪರೂಪವೇ ಆಗಿಬಿಡುತ್ತಾರೆ. ಆದರೆ, ಅವರು ಪೂರ್ಣವಾಗಿ ಕಾಣೆಯಾಗಿರಲಿಲ್ಲ ಎಂಬುದಕ್ಕೆ ಈ ಹಿಂದೆಯೇ ಉಲ್ಲೇಖಿಸಿರುವ ಕಾಗವಾಡದ ಒಂದು ಶಾಸನ ಮಾತ್ರವಲ್ಲದೆ, ಪ್ರಸ್ತುತ ಪ್ರಕಟಿಸುತ್ತಿರುವ ಹಂಪಿಯ ಶಾಸನವು ಮಹತ್ವದ ಉದಾಹರಣೆಗಳಾಗಿವೆ.

ಹಂಪಿಯಲ್ಲಿ ಕ್ರಿ.ಶ. 14ನೆಯ ಶತಮಾನದಿಂದ 16ನೆಯ ಶತಮಾನದವರೆಗೂ ಜೈನ ಧರ್ಮವು ಆಶ್ರಯ ಪಡೆದಿತ್ತು. ಜೈನ ಧರ್ಮವು ಹಂಪಿಯಲ್ಲಿ ಅತ್ಯಂತ ಪ್ರಬಲವಾಗಿ ಅಸ್ತಿತ್ವದಲ್ಲಿರಲಿಲ್ಲವಾದರೂ, ತೀರಾ ಮೂಲೆಗುಂಪಾಗಿರಲಿಲ್ಲ. ಕ್ರಿ.ಶ. 13ನೆಯ ಶತಮಾನವರೆಗೆ ಯಾಪನೀಯ ಸಂಘದ ಮುನಿಗಳಿಗೂ ಹಂಪಿ ಆಶ್ರಯ ನೀಡಿತ್ತು ಎಂಬುದು ಮುಖ್ಯವಾದ ವಿಷಯವಾಗಿದೆ.

1. ಎ.ಕ.2 (ಪ.ಆ.) ಶ್ರ.ಬೆ.475(344)ಕ್ರಿ.ಶ.1368
2. ಹಂಪಿ ಶಾಸನಗಳು, ಕ.ವಿ.ಶಾ.ಸಂ:3, ಶಾಸನ ಸಂ. 350, ಹಂಪಿ,2000,
3. ಹಂಪಿ ಶಾಸನಗಳು, ಕ.ವಿ.ಶಾ.ಸಂ:3,ಶಾಸನ ಸಂ.327, ಹಂಪಿ, 2000,
4. ಹಂಪಿ ಶಾಸನಗಳು, ಕ.ವಿ.ಶಾ.ಸಂ:3,ಶಾಸನ ಸಂ.351, ಹಂಪಿ,2000,
5. ಹಂಪಿ ಶಾಸನಗಳು, ಕ.ವಿ.ಶಾ.ಸಂ:3, ಶಾಸನ ಸಂ.97, ಹಂಪಿ, 2000,
6. ಮಿರ್ಜಿ ಅಣ್ಣಾರಾಯ, ಜೈನಧರ್ಮ, ಮೈಸೂರು 1969, ಪು. 83
7. ಹಂಪ. ನಾಗರಾಜಯ್ಯ, ಯಾಪನೀಯ ಸಂಘ, ಹಂಪಿ, 1999,ಪು.26.
8. ಅದೇ ಪು. 32
9. Dr. B.R. Gopal, Corpus of Kadamba Inscriptions, vol I, Sirsi, 1985, pp. 91-97.

10. Dr. A.N. Upadhye, UPADHYE : PAPERS, Mysore,1983
11. ಡಾ.ಎಸ್. ಶೆಟ್ಟರ್, ಜರ್ನಲ್ ಆಫ್ ದಿ ಕರ್ನಾಟಕ್ ಯೂನಿವರ್ಸಿಟಿ, ಸಂV, ಧಾರವಾಡ,1966, ಪು.159-171
12. ಪಿ.ಬಿ. ದೇಸಾಯಿ, ಜೈನಿಸಮ್ ಇನ್ ಸೌತ್ ಇಂಡಿಯಾ ಅಂಡ್ ಸಮ್ ಜೈನ್ ಎಪಿಗ್ರಾಫ್ಸ್ ಶೋಲಾಪುರ್, 2001, ಪು. 104 (ಅವರು ಉಲ್ಲೇಖಿಸುವ ಎ.ಎನ್. ಉಪಾಧ್ಯೆ ಅವರ ಲೇಖನದ ಆಕರದ ವಿವರ ಹೀಗಿದೆ. Journal of Bombay Univ., 1933, May, p.230)
13. Dr. A.N. Upadhye, UPADHYE : PAPERS, Mysore, 1983
14. ಪಿ.ಬಿ. ದೇಸಾಯಿ, ಜೈನಿಸಮ್ ಇನ್ ಸೌತ್ ಇಂಡಿಯಾ ಅಂಡ್ ಸಮ್ ಜೈನ್ ಎಪಿಗ್ರಾಫ್ಸ್, ಶೋಲಾಪುರ್,2001,ಪು.164
15. ಅದೇ, ಪು.165
16. ಹಂಪ. ನಾಗರಾಜಯ್ಯ, ಯಾಪನೀಯ ಸಂಘ, ಹಂಪಿ, 1999, ಪು.76.

೪೧. ವಿಜಯನಗರ ಅರಸರು ಮತ್ತು ವ್ಯಾಸರಾಜರು

ಸಂತೇಬೆನ್ನೂರು ಸುಮತೀಂದ್ರನಾಡಿಗ್

ವಿಜಯನಗರ ಸಾಮ್ರಾಜ್ಯದ ಸ್ಥಾಪಕರಾದ ಹರಿಹರರಾಯ ಬುಕ್ಕರಾಯರಿಗೆ ಗುರು ವಿದ್ಯಾರಣ್ಯರು, ಕ್ರಿಯಾಶಕ್ತಿ ಪಂಡಿತರು ಪ್ರೇರಣೆ ನೀಡಿ ಭದ್ರ ಬುನಾದಿ ಹಾಕಿದರು ಎಂಬ ನಂಬಿಕೆ ನಮ್ಮಲ್ಲಿದೆ. ಈ ಬಗ್ಗೆ ವಿವಾದಗಳಿದ್ದರೂ ಶ್ರೀ ವ್ಯಾಸರಾಯ ಸ್ವಾಮಿಗಳು ವಿಜಯನಗರದ ಅರಸೊತ್ತಿಗೆಯ ಆರು ಜನ ಚಕ್ರವರ್ತಿಗಳಿಗೆ ರಾಜಗುರುಗಳಾಗಿ, ಆಪ್ತರಾಗಿ, ಸಲಹೆಗಾರರಾಗಿ, ಮಾರ್ಗದರ್ಶಕರಾಗಿ ವಿಜಯನಗರದ ಆಳಿಗಾಲದ ಅಂಚಿನ ವರೆಗೂ ಆ ಕರ್ನಾಟಕ ಸಾಮ್ರಾಜ್ಯ ವೈಭವದ ಪರಮೋಚ್ಚ ಶಿಖರ ಮುಟ್ಟಲು ಕಾರಣೀ ಭೂತರಲ್ಲಿ ವ್ಯಾಸರಾಯರೂ ಒಬ್ಬರಾಗಿದ್ದರು ಎಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ.

ವ್ಯಾಸರಾಯರು ಶ್ರೀ ಮಧ್ವಾಚಾರ್ಯರಿಂದ ಈ ನಾಡಿನಲ್ಲಿಯೇ ಸ್ಥಾಪನೆಗೊಂಡ ದ್ವೈತ ಪಂಥದ ಓರ್ವ ಮಾಧ್ವ ಮಠಾಧೀಶರಾಗಿದ್ದು ಮಧ್ವಾಚಾರ್ಯರಿಂದ ಆರನೇಯತಿ ಗಳಾದ ರಾಜೇಂದ್ರತೀರ್ಥರಿಂದ ಮುಂದುವರೆದ ಪೂರ್ವಾದಿ ಮಠ ಪರಂಪರೆಗೆ ಸೇರಿದವರಾಗಿದ್ದಾರೆ. ರಾಜೇಂದ್ರ ತೀರ್ಥರ ನಂತರ ನಾಲ್ಕನೆಯವರಾದ ವ್ಯಾಸರಾಯ ಯತಿಗಳ ಮಹಿಮೆ, ಪಾಂಡಿತ್ಯ, ತಪಶ್ಶಕ್ತಿ, ಸಿದ್ಧಿ, ಪ್ರಭಾವ, ಹೆಸರುಗಳಿಂದ, ಈ ಪೂರ್ವಾದಿ ಪರಂಪರೆಗೆ ಮುಂದೆ ವ್ಯಾಸರಾಯಮಠ ಎಂದೇ ಗುರುತಿಸಿ ಕರೆಯಲ್ಪಟ್ಟಿತು.

ವಿಜಯನಗರ ಸಾಮ್ರಾಟರಿಗೂ, ವ್ಯಾಸರಾಯರಿಗೂ ಬಹಳ ಅನ್ಯೋನ್ಯತೆ ಇದ್ದು, ಈ ಬಗ್ಗೆ ಅವರ ಸಮಕಾಲೀನ ಕವಿ ಸೋಮನಾಥ ಬರೆದ ವ್ಯಾಸಯೋಗಿ ಚರಿತಂ, ಸ್ವತಃ ಅರಸು ಕೃಷ್ಣದೇವರಾಯನೇ ಬರೆದ ರಾಯವಾಚಕಮು, ಜಾಂಬವತೀ ಕಲ್ಯಾಣ, ಗ್ರಂಥಗಳಿಂದಲೂ, ಅವರ ಕಾಲದಲ್ಲಿ ವಿಜಯನಗರಕ್ಕೆ ಭೇಟಿ ಇತ್ತಿದ್ದ ವಿದೇಶಿ ಪ್ರವಾಸಿ ಗಳಾದ ಪಯಾಜ್, ನ್ಯೂನಿಜ್ ಮುಂತಾದವರ ಬರಹಗಳಿಂದಲೂ, ದೊಡ್ಡಬಳ್ಳಾಪುರದ ರಾಘುವೇಂದ್ರಪ್ಪ ಕವಿಯ ಸಾಂಸ್ಕೃತ ಪರಿಣಯ ಮುಂತಾದ ಗ್ರಂಥಗಳಿಂದಲೂ, ವಿಜಯನಗರ ಅರಸರು ಹಾಕಿಸಿದ ಅನೇಕ ಶಿಲಾಶಾಸನಗಳು, ಬರೆಸಿಕೊಟ್ಟ ತಾಮ್ರ ಶಾಸನಗಳು ಮತ್ತಿತರ ಚಾರಿತ್ರಿಕ ದಾಖಲೆಗಳಿಂದ ವಿಜಯನಗರ ಸಾಮ್ರಾಜ್ಯಾಧಿಪತಿ ಗಳಿಗೂ ವ್ಯಾಸರಾಯ ತೀರ್ಥರಿಗೂ ಇರುವ ಸಂಬಂಧದ ಬಗ್ಗೆ ಹೆಚ್ಚು ವಿವರ ತಿಳಿಯಬಹುದಾಗಿದೆ.

ವಿಜಯನಗರ ಸಂಸ್ಥಾನವು ಒಂದು ಹಿಂದೂ ಸಾಮ್ರಾಜ್ಯವಾಗಿದ್ದು, ಇಲ್ಲಿನ ಜನತೆಯ ಜೀವನದಲ್ಲಿ ತಲೆ ತಲಾಂತರದಿಂದ ಬಂದಿದ್ದು, ಭಾರತೀಯ ಸಂಸ್ಕೃತಿ, ರೀತಿ-ನೀತಿಗಳ ಸಂವರ್ಧನೆಗೆ ಹುಟ್ಟಿಕೊಂಡ ಸಾಮ್ರಾಜ್ಯವಾಗಿ, ಕರ್ನಾಟಕ ಇತಿಹಾಸಕ್ಕೆ ತನ್ನದೇ ಆದ ವಿಶೇಷ ಕೊಡುಗೆ ನೀಡಿದೆ.

ಈ ಅರಸೊತ್ತಿಗೆಯ ಸಂಗಮವಂಶದ ವಿರೂಪಾಕ್ಷ ಮೂಲೆ ಗುಂಪಾಗಿ, ಸಾಮ್ರಾಜ್ಯದ ಅಸ್ತಿತ್ವವೇ ಅಲುಗಾಡುತ್ತಿದ್ದಾಗ, ಸಾಳುವ ವಂಶದ ನರಸಿಂಹ ಅಧಿಕಾರ ಚುಕ್ಕಾಣಿ ಹಿಡಿದು ಅಧಿಪತಿಯಾದನು. ನಂತರ ನರಸನಾಯಕ, ಅನಂತರ ವೀರ ನರಸಿಂಹ, ಚಕ್ರವರ್ತಿಗಳಾದರು. ಇವನ ಕಾಲದಲ್ಲಿ ಮುಳುಬಾಗಿಲು ಶ್ರೀಪಾದರಾಜರ ವಿದ್ಯಾ ಶಿಷ್ಯರಾಗಿದ್ದ ವ್ಯಾಸರಾಯರು ವಿಜಯನಗರಕ್ಕೆ ಬಂದು ರಾಜಗುರುಗಳಾಗಿ ನಿಂತರು. ಕೃಷ್ಣದೇವರಾಯನ ಕಾಲದಲ್ಲಿ ಸಾಮ್ರಾಟನಿಗೆ ಒದಗಿದ ಕುಹೂಯೋಗವನ್ನು ಸ್ವತಃ ಶ್ರೀ ವ್ಯಾಸರಾಯರೇ ಮೂರು ಮುಕ್ಕಾಲು ಘಳಿಗೆ ಅಂದರೆ ಒಂದೂವರೆ ಘಂಟೆಗಳ ಕಾಲ ವಿಜಯನಗರದ ಸಿಂಹಾಸನವನ್ನೇರಿ, ಸಾಮ್ರಾಜ್ಯ ಪರಿಪಾಲಿಸಿ, ದೊರೆಗೆ ಬಂದ, ದುಷ್ಟ ಗ್ರಹಬಾಧೆಯನ್ನು ನಿವಾರಿಸಿ, ಮರಳಿ ಅವರಿಗೆ ಸಿಂಹಾಸನ ಹಿಂತಿರುಗಿಸಿದರೆಂದು ಹೇಳಲಾಗುತ್ತದೆ. ವ್ಯಾಸತೀರ್ಥರು ಕುಹೂಯೋಗ ಕಾಲದಲ್ಲಿ ವಿಜಯನಗರ ಸಿಂಹಾಸನ ಅಲಂಕರಿಸಿದ ಕಾರಣ ಮುಂದೆ ಇವರಿಗೆ ವ್ಯಾಸರಾಜರೆಂದೇ ಹೆಸರಾಯಿತು.




ಆನೆಗೊಂದಿಯ ಬಳಿ ತುಂಗಾಭದ್ರಾ ನದಿಯ ನಡುಗಡ್ಡೆಯ ನವ ವೃಂದಾವನದಲ್ಲಿರುವ ವ್ಯಾಸರಾಯರ ಮೂಲ ವೃಂದಾವನ

ಈ ಕುಹೂಯೋಗ ಎಂದರೇನು ಎಂಬ ಬಗ್ಗೆ ಅನೇಕ ಭಿನ್ನಾಭಿಪ್ರಾಯವಿದ್ದು, ಬಹುಜನ ಜ್ಯೋತಿಷಿಗಳ ಹೇಳಿಕೆಯಂತೆ ಅಮಾವಸ್ಯೆ ಕಳೆದು, ಶುಕ್ಲಪಕ್ಷ ಪಾಡ್ಯ, ಆರಂಭವಾಗುವ ಸಂಧಿ ಕಾಲದಲ್ಲಿ, ಚಂದ್ರನ ಕಲೆಗಳು ನಷ್ಟವಾಗಿ ವಿಷಗಳಿಗೆಯಿಂದ ಉಕ್ತಪಾದಾಗ ಲಗ್ನದಿಂದ ಹನ್ನೆರಡೇ ಸ್ಥಾನದಲ್ಲಿ ನಾಲ್ಕು ಗ್ರಹಗಳು ಒಟ್ಟಿಗೆ ಸೇರಿ ಚಂಡಾಲತ್ವವನ್ನು ಪಡೆದು ಕ್ರೂರರಾಗಿ, ದುಷ್ಫಲವನ್ನು ಕೊಡುವುದಕ್ಕೆ ಕುಹೂಯೋಗ ವೆನ್ನುತ್ತಾರೆ ಎನ್ನಲಾಗಿದೆ. ಅದರಂತೆ ಈ ಕುಹೂಯೋಗ ಕಾಲದಲ್ಲಿ ಶನಿ, ಸೂರ್ಯ, ಅಂಗಾರಕ ಮತ್ತು ರಾಹು ಒಂದೇ ಮನೆಯಲ್ಲಿ, ಅಂದರೆ ಲಗ್ನದಲ್ಲಿ ದ್ವಾದಶ ಸ್ಥಾನ ಸೇರಿ ಚಂಡಾಲತ್ವ ಪಡೆದಿರುತ್ತಾರೆ. ಹೀಗೆ ನಾಲ್ಕು ಗ್ರಹಗಳು ಲಗ್ನದಿಂದ ೧೨ನೇ ಸ್ಥಾನ ದಲ್ಲಿ ಕುಹೂಯೋಗ ಬಂದಾಗ ದೇಶದ ಅಧಿಪತಿಯಾದ ರಾಜನು ತಕ್ಷಣ ಮೃತನಾಗು ತ್ತಾನೆ ಎಂಬ ಧೃಢವಾದ ನಂಬಿಕೆಯಿದೆ. ಅದರಂತೆ ಜಾತಕ ಪ್ರಕಾರ ಕೃಷ್ಣದೇವರಾಯನದು ಕುಂಭಲಗ್ನವಾಗಿರುವುದರಿಂದ ಸ್ವಭಾನು ಸಂವತ್ಸರದ ಮಾಘಕೃಷ್ಣ ಅಮವಾಸ್ಯೆ ಗುರುವಾರ ತಾ. 4.2.1524 ನಾಲ್ಕು ದುಷ್ಟ ಗ್ರಹಗಳು ಒಂದೆಡೆ ಸೇರಿ ಅವನಿಗೆ ಪ್ರಾಣಾಪಾಯವಿತ್ತೆಂದೂ, ಶ್ರೀ ವ್ಯಾಸತೀರ್ಥರು ಆ ಸಮಯದಲ್ಲಿ ಕನ್ನಡ ಸಿಂಹಾಸನ ವನ್ನೇರಿ ಕುಹೂಯೋಗದಿಂದಾಗುವ ವಿಪತ್ತನ್ನು ಪರಿಹರಿಸಿ ಕೃಷ್ಣದೇವರಾಯನನ್ನು ರಕ್ಷಿಸಿದರೆಂದು ತಿಳಿದುಬರುತ್ತದೆ.

ಈ ಕುಹೂಯೋಗ ಘಟಿಸಿದ ದಿನಾಂಕದ ಬಗ್ಗೆ ವಿವಿಧಾಭಿಪ್ರಾಯವಿದ್ದರೂ, ಕೃಷ್ಣ ದೇವರಾಯನ ಕಾಲದಲ್ಲಿ ಕುಹೂಯೋಗ ಬಂದಾಗ ವ್ಯಾಸತೀರ್ಥರು ಅದರಿಂದ ಪಾರು ಮಾಡಿದ ಬಗ್ಗೆ ಭಿನ್ನಾಭಿಪ್ರಾಯ ಕಂಡು ಬರುವುದಿಲ್ಲ. ಈ ಕುಹೂಯೋಗದಿಂದ ವಿಜಯ ನಗರ ಅರಸನನ್ನು ವ್ಯಾಸರಾಯರು ಪಾರು ಮಾಡಿದ್ದಕ್ಕೆ, ಕೃಷ್ಣದೇವರಾಯ ಅನೇಕ ಶಾಸನ ಬರೆಸಿ, ದತ್ತಿ ದಾನ ನೀಡಿ ಶ್ರೀಗಳವರನ್ನು ರತ್ನಾಭರಣಗಳಿಂದ ಅಭಿಷೇಕ ಮಾಡಿದ ಬಗ್ಗೆ ತಿರುಪತಿ - ತಿರುಮಲದಲ್ಲಿರುವ ಅನೇಕ ಶಾಸನಗಳು ನಮಗೆ ಮಾಹಿತಿ ಒದಗಿಸುತ್ತವೆ.

ಮಾಧ್ವಮತ ಅನುಯಾಯಿಗಳ ಪ್ರಕಾರ ವ್ಯಾಸರಾಯರ ಪೂರ್ವ ಜನ್ಮ ವೃತ್ತಾಂತ ಹೀಗಿದೆ. ವೈಕುಂಠದಲ್ಲಿ ರಮಾ-ಮಾಧವರ ಸೇವೆಯನ್ನು ಮಾಡುತ್ತಿದ್ದ ಶಂಕ ಕರ್ಣ ಎಂಬ ದೇವತೆಯು, ಮುಂದೆ ಬ್ರಹ್ಮದೇವರ ಪೂಜೆಗೆ ನಿಯುಕ್ತನಾಗಿ, ಆ ಸೇವೆಯಲ್ಲಿ ಏನೋ ದೋಷ, ಕಾಣಿಸಿಕೊಂಡು ಶಾಪಗ್ರಸ್ತನಾಗಿ, ಭೂಮಿಯಲ್ಲಿ ಹಿರಣ್ಯ ಕಶಪುವಿನ ಪತ್ನಿ ಕಯಾದುವಿನಲ್ಲಿ ಪ್ರಹ್ಲಾದನಾಗಿ ಕೃತಯುಗದಲ್ಲಿ ಅವತರಿಸಿದನೆಂದೂ, ಇವನೇ ತ್ರೇತಾಯುಗದಲ್ಲಿ ವಿಭೀಷಣಾಗಿಯೂ, ದ್ವಾಪರಯುಗದಲ್ಲಿ ಬಾಹ್ಲೀಕ ರಾಜನಾಗಿಯೂ ಜನಿಸಿ, ಈಗ ವ್ಯಾಸತೀರ್ಥರಾಗಿದ್ದರೆಂದೂ, ಮುಂದೇ ಇವರೇ ಮಂತ್ರಾಲಯದ ರಾಘ ವೇಂದ್ರ ಸ್ವಾಮಿಗಳಾಗಿ ಜನ್ಮ ಪಡೆದವರೆಂದೂ, ಇವರು ಶೇಷಾಂಶ ಸಂಭವರೆಂದೂ ನಂಬಿಕೆಯಿದೆ.



ವಿಜಯನಗರ ಸಿಂಹಾಸನರೋಹಣ ವ್ಯಾಸರಾಯರು ಮಾಡಿದ್ದರು ಎಂಬುದನ್ನು ತೋರಿಸುವ ಒಂದು ಚಿತ್ರ

ಕಾವೇರಿ ದಡದಲ್ಲಿರುವ ಬನ್ನೂರಿನಲ್ಲಿ ರಾಮವಲ್ಲಭ ಸುಮತಿ (ರಾಮಾಚಾರ್) ಲಕ್ಷಮ್ಮ ಎಂಬ ದಂಪತಿಗಳಿಗೆ ಅಬ್ಬೂರಿನ ಬ್ರಹ್ಮಣ್ಯತೀರ್ಥರ ವರಪ್ರಸಾದದಿಂದ ಕ್ರಿ.ಶ.1369ನೇ ಪ್ರಭವ ಸಂವತ್ಸರದ ಅಧಿಕ ವೈಶಾಖ ಶುಕ್ಲಸಪ್ತಮಿ ಭಾನುವಾರ (22-4-1447) ದಲ್ಲಿ ಓರ್ವ ಗಂಡು ಮಗು ಜನನವಾಯಿತು. ಯತಿರಾಜನೆಂಬ ಜನ್ಮ ನಾಮ ಪಡೆದ ಈ ಮಗುವೇ ಮುಂದೆ ತನ್ನ 8ನೇ ವಯಸ್ಸಿಲ್ಲಿ ಕ್ರಿ.ಶ.1375ನೇ ಶ್ರೀಮುಖ ಸಂವತ್ಸದಲ್ಲಿ (1454), ಬ್ರಹ್ಮಣ್ಯತೀರ್ಥರ ಶಿಷ್ಯರಾಗಿ ಸನ್ಯಾಸ ದೀಕ್ಷೆ ಪಡೆದು ವ್ಯಾಸ ತೀರ್ಥರೆಂಬ ಅಭಿಧಾನ ಪಡೆದರು. ವ್ಯಾಸತೀರ್ಥರು ಕ್ರಿ.ಶ.1461ನೇ ವಿಳಂಬಿ ಸಂವತ್ಸರದ ಫಾಲ್ಗುಣ ಬಹಳ ಚತುರ್ಥಿ ಸ್ಥಿರವಾರ (8-3-1539)ರಂದು ಹಂಪಿ

ಬಳಿಯಿರುವ ನವ ಬೃಂದಾವನದ ತುಂಗಾಭದ್ರನದಿ ನಡುಗಡ್ಡೆಯಲ್ಲಿ ಬೃಂದಾವನಸ್ಥರಾದರು. ಒಟ್ಟು 92 ವರ್ಷ ಸುಧೀರ್ಘ ಕಾಲ ಬದುಕಿದ್ದ ವ್ಯಾಸರಾಯರು ವಿಜಯನಗರದ ಸಾಳುವ ನಾರಸಿಂಹ, ವೀರ ನಾರಸಿಂಹ, ಕೃಷ್ಣದೇವರಾಯ, ಅಚ್ಯುತದೇವರಾಯ, ಸದಾಶಿವರಾಯ ಮೊದಲಾದ ಆರುಜನ ದೊರೆಗಳಿಗೆ ರಾಜಗುರುಗಳಾಗಿದ್ದರು. ಶ್ರೀ ಪುರಂದರದಾಸರು, ಕನಕದಾಸರಿಗೆ ದಾಸ ದೀಕ್ಷೆ ನೀಡಿದ್ದಲ್ಲದೆ, ಶ್ರೀ ವಾದಿರಾಜರು, ವಿಜಯೀಂದ್ರರು, ಶ್ರೀನಿವಾಸತೀರ್ಥರು ಮುಂತಾದ ಶಿಷ್ಯರನ್ನೊಳಗೊಂಡು ಮಧ್ವಾಚಾರ್ಯರು ಅದ್ವೈತ ಸಿದ್ಧಾಂತವನ್ನು ಅಸೇತು ಹಿಮಾಚಲದವರೆಗೆ ಎರಡು ಬಾರಿ ಸಂಚರಿಸಿ, ಪ್ರಚಾರ, ಪ್ರಸಾರ ಮಾಡಿದರು. ವಿಜಯನಗರದಲ್ಲಿ ಲೋಕಪಾವನ ಮಠ ಎಂಬ ಹೆಸರಿನಲ್ಲಿ ಒಂದು ಸಂಸ್ಕೃತ ವಿಶ್ವವಿದ್ಯಾನಿಲಯವನ್ನೇ ಸ್ಥಾಪಿಸಿ, ದೇಶದಾದ್ಯಂತ ಒಟ್ಟು 8 ವಿದ್ಯಾಕೇಂದ್ರಗಳನ್ನು ಮಾಡಿ ಹರಿದ್ವಾರಕ್ಕೆ ಸತ್ಯನಾಥ, ಗಯಾಕ್ಕೆ ಹರಿಮಿಶ್ರ, ಕಾಶಿಗೆ ಜಯದೇವ, ಬಂಗಾಳಕ್ಕೆ ಈಶ್ವರಸೂರಿ, ಕುಂಭಕೋಣಕ್ಕೆ ವಿಜಯೀಂದ್ರ, ಉಡುಪಿಗೆ ವಾದಿರಾಜ, ಕಂಚಿಗೆ ಶ್ರೀನಿವಾಸ ತೀರ್ಥರನ್ನು, ಅದರ ಮುಖ್ಯಸ್ಥರನ್ನಾಗಿ ನಿಯಮಿಸಿ, ತಾವೇ ಸ್ವತಃ ಈ ವಿಶ್ವವಿದ್ಯಾನಿಲಯಕ್ಕೆ ಕುಲಪತಿಗಳಾಗಿ 50 ವರ್ಷಗಳ ಕಾಲ ವಿದ್ಯಾಪ್ರಸಾರ ಮಾಡಿದರು. ಇದಕ್ಕೆ ವಿಜಯನಗರದ ಅರಸರು ತುಂಬಾ ಪ್ರೋತ್ಸಾಹ ಸಹಾಯ ಸಹಕಾರ ನೀಡಿ ವಿದ್ಯಾಭಿವೃದ್ಧಿಗೆ ಕಾರಣರಾದರು.

ಸಾಳುವ ನರಸಿಂಹನ ಕಾಲದಲ್ಲಿ ವಿಜಯನಗರಕ್ಕೆ ಸೇರಿದ್ದು ತಿರುಪತಿ ತಿರುಮಲೆ ದೇವಸ್ಥಾನದ ಅರ್ಚಕ ಕುಟುಂಬದವರು ದೇವರ ಒಡುವೆ-ವಸ್ತ್ರಗಳನ್ನು ಕದ್ದು, ತಮ್ಮ ಸ್ವಂತಕ್ಕೆ ದುರುಪಯೋಗಿಸಿಕೊಳ್ಳುತ್ತಿದ್ದುದು ತಿಳಿದಾಗ, ಅವರನ್ನು ಪೂಜಾ ಕೈಂಕರ್ಯದಿಂದ ಬಿಡಿಸಿದರು. ಇದರಿಂದ ಅಪಮಾನಗೊಂಡು ಇಡೀ ಅರ್ಚಕರ ಕುಟುಂಬವೇ ಆತ್ಮಹತ್ಯೆ ಮಾಡಿಕೊಂಡಿತು. ಹೀಗಾಗಿ ದೈನಂದಿನ ವೆಂಕಟೇಶ್ವರನ ಪೂಜಾಕೈಂಕರ್ಯವೇ ಕೆಲಕಾಲ ನಿಂತು ಹೋಯಿತು. ಆಗ ನರಸಿಂಹನು ವ್ಯಾಸರಾಯರನ್ನು ಪ್ರಾರ್ಥಿಸಲು, ಇವರು ತಿರುಪತಿ-ತಿರುಮಲೆಯಲ್ಲಿಗೆ ಹೋಗಿ 1486-1498ರ ವರೆಗೆ 12 ವರ್ಷಗಳ ಕಾಲ ತಿರುಪತಿ ಶ್ರೀನಿವಾಸನನ್ನು ಅರ್ಚಿಸಿದರು. ಈ ಬಗ್ಗೆ ದೇವಾಲಯದ ಗೋಡೆ ಮೇಲಿರುವ ವಿಜಯನಗರ ಅರಸರ ಶಿಲಾಶಾಸನಗಳು ಮಾಹಿತಿ ಒದಗಿಸುತ್ತವೆ. 12 ವರ್ಷಗಳ ನಂತರ ಪೂರ್ವದ ತಿರುಪತಿ-ತಿರುಮಲೆ ಅರ್ಚಕರಾಗಿದ್ದ ತಾತಾಚಾರ್ಯರ ವಂಶಿಕರು ಇರುವುದು ತಿಳಿದು ಅವರಿಗೆ ವೆಂಕಟೇಶ್ವರ ಸ್ವಾಮಿಯ ಪೂಜಾಧಿಕಾರ ವಹಿಸಿ ವ್ಯಾಸರಾಯರು ವಿಜಯನಗರಕ್ಕೆ ವಾಪಸ್ಸು ಬಂದರು. ಅನಂತರ ಮತ್ತೆ ತಿರುಪತಿಯ ವೆಂಕಟೇಶ್ವರ ದೇವಾಲಯದಲ್ಲಿ ಶ್ರೀ ವೈಷ್ಣವ ಪದ್ಧತಿಯಂತೆ ವೈಖಾನಸಾಗಮದಂತೆ ಪೂಜೆ ಮುಂದುವರೆದುಕೊಂಡು ಬಂದಿತು. 12 ವರ್ಷ ಪೂಜೆ ಸಲ್ಲಿಸಿದರ ದ್ಯೋತಕವಾಗಿ, ಇಂದಿಗೂ ವ್ಯಾಸರಾಯರ ಮಠದ ಸ್ವಾಮಿಗಳು ತಿರುಪತಿ -ತಿರುಮಲೆಗೆ ಭೇಟಿ ಕೊಟ್ಟಾಗ,

ಅವರನ್ನು ಪೂರ್ಣಕುಂಭದೊಂದಿಗೆ ಸ್ವಾಗತಿಸಿ ಅವರಿಗೆ ಸ್ವಾಮಿಯ ಪೂಜೆ ಸಲ್ಲಿಸುವ ಅವಕಾಶ ಮಾಡಿಕೊಡುವ ಪದ್ಧತಿ ಇದೆ.

1513-1521ರವರೆಗೆ ಏಳು ಬಾರಿ ವಿಜಯನಗರ ಕೃಷ್ಣದೇವರಾಯ ತಿರುಪತಿ ಬೆಟ್ಟಕ್ಕೆ ಭೇಟಿಕೊಟ್ಟ ಬಗ್ಗೆ ಶಾಸನಗಳು ಮಾಹಿತಿ ಒದಗಿಸುತ್ತವೆ ಅವುಗಳಿಂದ ಆತ ದೇವರಿಗೆ ಸಮರ್ಪಿಸಿದ ವಜ್ರ, ವೈಢೂರ್ಯ, ರತ್ನಾಭರಣಗಳ ವಿವರ ತಿಳಿಯುತ್ತದೆ. 1521ರ ಫೆಬ್ರುವರಿ 18ರಂದು ಹಾಕಿಸಿದ ಹಲವಾರು ಶಾಸನಗಳಲ್ಲಿ ವ್ಯಾಸರಾಯರಿಗೆ ಅನೇಕ ಗ್ರಾಮಗಳನ್ನು ದಾನವಾಗಿ ಕೊಟ್ಟ ಉಲ್ಲೇಖವಿದೆ. ಅದೇ ದಿನ ಬರೆಸಿದ ಇನ್ನೊಂದು ಶಾಸನ ಕೃಷ್ಣದೇವರಾಯ ರಾಯಚೂರು ಯುದ್ಧದಲ್ಲಿ ಪ್ರಚಂಡ ಜಯ ಗಳಿಸಿ ಸ್ವಾಮಿ ದರ್ಶನಕ್ಕೆ ಬಂದ ವಿಚಾರ ತಿಳಿಸುತ್ತದೆ.

1511ರ ಒಂದು ಶಾಸನ ವ್ಯಾಸರಾಯ ಸ್ವಾಮಿಗಳು ಪಡ್ಯೆವೀಡು ರಾಜ್ಯದ ಪುಲಂ ಬಾಕ್ಕಮ್ ಎಂಬ ಗ್ರಾಮವನ್ನು ರಾಜನಿಂದ ದತ್ತಿ ಪಡೆದು. ಕಂಚಿಯ ವರದರಾಜ ಸ್ವಾಮಿಯ ಅವನಿ ಉತ್ಸವಕ್ಕೆ ಶೇಷವಾಹನ ಅರ್ಪಿಸಿದ ವಿಚಾರ ತಿಳಿಸುತ್ತದೆ.

1524 ಜನವರಿ 12ರಂದು ತಿರುಪತಿ ವ್ಯಾಸರಾಜ ಮಠದ ಎದುರಿನ ಬಂಡೆ ಮೇಲೆ ಒಂದು ಶಾಸನ ಹಾಕಿಸಿದ್ದು, ತಮಿಳು ಭಾಷೆಯ ಈ ಶಾಸನ ವ್ಯಾಸರಾಯರಿಗೆ ಕೊಟ್ಟ ವಿವಿಧ ದಾನಗಳ ಬಗ್ಗೆ ಮಾಹಿತಿ ಒದಗಿಸುತ್ತದೆ.

ಶಕ1449ನೇ ಸರ್ವಜಿತು ಸಂವತ್ಸರದ ಕಾರ್ತಿಕ ಶುದ್ಧ ದ್ವಾದಶಿ (5-11-1527) ಯಂದು ಬರೆಸಿ ಕೊಟ್ಟ ಒಂದು ತಾಮ್ರ ಶಾಸನ (ಶಿವಮೊಗ್ಗ-85) ಶ್ರೀ ಕೃಷ್ಣದೇವರಾಯ ಶ್ರೀಗಳವರಿಗೆ, ಬಂಕಾಪುರ, ಹಾನಗಲ್ಲು, ಕಾಮನಹಳ್ಳಿ, ಕಡೆಕೊಪ್ಪ, ಸಿರುಮಾಪುರ, ಗಡಿಯಂಕನಹಳ್ಳಿ, ಗೌರಾಪುರ ಮುಂತಾದ ಗ್ರಾಮಗಳನ್ನು ದಾನ ನೀಡಿದ್ದನ್ನು ತಿಳಿಸುತ್ತದೆ. ಹೀಗೆ ಕೃಷ್ಣದೇವರಾಯರಿಂದ ತಮಗೆ ಬಂದ ದಾನವಾಗಿ ಬಂದ ಭೂಮಿಯನ್ನು ವ್ಯಾಸ ರಾಯರು ಅನೇಕ ವೃತ್ತಿಯಾಗಿ ವಿಂಗಡಿಸಿ, ಅದರಲ್ಲಿ ಬಾಳಗಾರು ಆರ್ಯ ಅಕ್ಷೋಭ್ಯ ತೀರ್ಥಸಂಸ್ಥಾನದ ಪೀಠಾಧಿಪತಿಗಳೂ, ತಮ್ಮ ವಿದ್ಯಾಶಿಷ್ಯರೂ ಆದ ನಾರಾಯಣ ಯತಿ ಗಳಿಗೆ ಒಂದು ವೃತ್ತಿ ಕಲ್ಪಿಸಿದುದನ್ನು ತಿಳಿಸುತ್ತದೆ.

ಶಕ 1445ನೇ ಸ್ವಭಾನು ಸಂವತ್ಸರದ ಕಾರ್ತಿಕ ದ್ವಾದಶಿ (21-10-1523) ಯಂದು ಕೃಷ್ಣದೇವರಾಯ ಬರೆಸಿಕೊಟ್ಟ ತಾಮ್ರಶಾಸನದಿಂದ ವ್ಯಾಸತೀರ್ಥರಿಗೆ ಚೆನ್ನಪಟ್ಟಣ ಸೀಮೆಯಲ್ಲಿ ಹೊಂಗನೂರು ಸ್ಥಳದಲ್ಲಿ ಬೆಳಕಲ್ಲು, ಸಣಬಿನಹಳ್ಳಿ, ಹೊಸಹಳ್ಳಿ, ಬ್ರಹ್ಮಾಣ್ಯತೀರ್ಥಪುರ ಇವುಗಳನ್ನು ದಾನ ನೀಡಿದ ವಿಚಾರ ತಿಳಿಯಬಹುದಾಗಿದೆ.

ಶಕ 1438ನೇ ಧಾತು ಸಂವತ್ಸರದ ಶುಕ್ಲ ದ್ವಾದಶಿ (6.12.1526) ಕೃಷ್ಣ ದೇವರಾಯ ಬರೆಸಿಕೊಟ್ಟ ಒಂದು ತಾಮ್ರಶಾಸನ ಹಂಪೆ ವಿರೂಪಾಕ್ಷನ ಸನ್ನಿಧಿಯಲ್ಲಿ

ವ್ಯಾಸರಾಯರಿಗೆ ಶ್ರೀರಂಗಪಟ್ಟಣ ತಾಲ್ಲೂಕಿನ ಚಿಕ್ಕಬ್ಬೆಹಳ್ಳಿ, ಹಲವು ಮಾರಾಡಿ ಹೊಸಳ್ಳಿ ಮತ್ತು ವೆಂಗಿಹಳ್ಳಿ ಗ್ರಾಮಗಳನ್ನು ದಾನ ಕೊಟ್ಟಿರುವುದನ್ನು ತಿಳಿಸುತ್ತದೆ.

ಶಕ1442ನೇ ವಿಕ್ರಮ ಸಂವತ್ಸರದ ಫಾಲ್ಗುಣಶುದ್ಧ12 (18-2-1521) ರಂದು ಕೃಷ್ಣದೇವರಾಯ ತಿರುಪತಿ ವೆಂಕಟೇಶ್ವರನ ಸನ್ನಿಧಿಯಲ್ಲಿ ಬರೆಸಿಕೊಟ್ಟ ಒಂದು ತಾಮ್ರ ಶಾಸನ ಕನಕಗಿರಿ ದೇಶದ ಕನ್ನೇರು ಮಡುಗ ಎಂಬ ಗ್ರಾಮವನ್ನು ವ್ಯಾಸರಾಯರಿಗೆ ದಾನ ಕೊಟ್ಟಿದ್ದನ್ನು ತಿಳಿಸುತ್ತದೆ. ಅದೇ ದಿನ ಬರೆಯಿಸಿಕೊಟ್ಟ ಇನ್ನೊಂದು ಶಾಸನ ಪೆರಂಕೋಟೆ ರಾಜ್ಯದ ನೆಡುಮಾವಿಟ್ಟು ಸೀಮೆಯ ಜಕ್ಕರಾಯನಹಳ್ಳಿಗೆ ಕೃಷ್ಣರಾಯಪುರ ವೆಂಬ ಹೆಸರಿಟ್ಟು ವ್ಯಾಸರಾಯ ರಾಯರಿಗೆ ಕೃಷ್ಣದೇವರಾಯ ಕೊಟ್ಟಿದ್ದನ್ನು ತಿಳಿಸುತ್ತಾರೆ.

ವಿಜಯನಗರದ ಅರಸರಲ್ಲದೆ ಅವರ ಅಧೀನರಾಗಿದ್ದ ಬಾರಕೂರು ರಾಜರು, ಸೋದೆಯ ಅರಸರು ಅನೇಕ ದತ್ತಿ ದಾನ ನೀಡಿದ್ದು, ವ್ಯಾಸರಾಯರು ಬಹಳ ಪ್ರಭಾವಿ ಗಳಾಗಿದ್ದರೆಂದು ತಿಳಿಯಬಹುದಾಗಿದೆ. ಇದಲ್ಲದೆ ತಮಿಳುನಾಡಿನಲ್ಲಿ, ಆಂಧ್ರಪ್ರದೇಶ ದಲ್ಲಿರುವ ತಮಿಳು, ತೆಲುಗು ಶಾಸನಗಳು ವ್ಯಾಸರಾಯರ ವ್ಯಾಪಕತೆ ಬಗ್ಗೆ ಹೆಚ್ಚು ಬೆಳಕನ್ನು ನೀಡುತ್ತವೆ. ವಿಜಯನಗರ ಅರಸರ ಮತ್ತು ವ್ಯಾಸರಾಯರಿಗೆ ಸಂಬಂಧಿಸಿದಂತೆ 50ಕ್ಕು ಹೆಚ್ಚು ಶಾಸನಗಳು ಇದ್ದು, ಇವರೀರ್ವರ ಮಧ್ಯೆ ಇರುವ ಅನ್ಯೋನ್ಯತೆ ಅರಿವಾಗು ತ್ತದೆ.

ವ್ಯಾಸರಾಯರು ಒಮ್ಮೆ ತಮ್ಮ ವಿದ್ಯಾಗುರುಗಳಾಗಿದ್ದ ಶ್ರೀಪಾದರಾಜರ (ಲಕ್ಷ್ಮೀನಾರಾಯಣ ತೀರ್ಥ) ದರ್ಶನಕ್ಕೆ ಮುಳುಬಾಗಿಲ ಗ್ರಾಮಕ್ಕೆ ಬಂದು ತಂಗಿದ್ದ ರಂತೆ. ಆ ಸಮಯದಲ್ಲಿ ಅವರಿಗೆ ಒಂದು ರಾತ್ರಿ ಸ್ವಪ್ನದಲ್ಲಿ ಅವರು ಮುಖ್ಯ ಪ್ರಾಣ ನನ್ನು ಪೂಜಿಸುತ್ತಿರುವಂತೆಯೇ, ಅದು 732 ಮೂರ್ತಿಗಳಾದಂತೆ ಭಾಸವಾಯಿತಂತೆ. ಸ್ವಪ್ನದಿಂದ ಎಚ್ಚೆತ್ತ ಶ್ರೀಗಳು ನಂತರ 732 ಮುಖ್ಯ ಪ್ರಾಣನ ವಿಗ್ರಹ ಪ್ರತಿಷ್ಠಾಪಿಸಲು ಸಂಕಲ್ಪ ಕೈಗೊಂಡು ತಾವು ಸಂಚರಿಸಿದಲೆಲ್ಲಾ ತಾವೇ ಸ್ವತಃ ಕಲ್ಲಿನಲ್ಲಿ ಆಂಜನೇಯ ವಿಗ್ರಹ ಕಡೆದು 732 ಸ್ಥಳದಲ್ಲಿ ಆಂಜನೇಯ ವಿಗ್ರಹ ಪ್ರತಿಷ್ಠಾಪಿಸಿದರಂತೆ. ಅವರು ಪ್ರತಿಷ್ಠಾಪಿಸಿದ ವಿಗ್ರಹದ ಬಾಲದ ತುದಿಯಲ್ಲಿ ಗಂಟೆಯಿದ್ದು, ಅವು ವ್ಯಾಸಾಂಜನೇಯ ಸ್ವಾಮಿ ಎಂದೇ ಪ್ರಸಿದ್ಧಿಯಾಗಿವೆ. ವಿಜಯನಗರ ಅರಸರು ಈ ವ್ಯಾಸಾಂಜನೇಯ ದೇವಾಲಯಗಳಿಗೂ ಅವುಗಳ ಪೂಜೆ-ಸೇವೆಗಾಗಿ ದತ್ತಿ - ದಾನ ಬಿಟ್ಟಿರುವುದು ಕಾಣಬಹುದಾಗಿದೆ. ವ್ಯಾಸರಾಯರು ಮೊಟ್ಟ ಮೊದಲು ಪ್ರತಿಷ್ಠಾಪಿಸಿದ ಪ್ರಾಣದೇವರು, ಹಂಪೆಯ ಚಕ್ರತೀರ್ಥ ಸಮೀಪದಲ್ಲಿರುವ ಇಂದಿಗೂ ವಿಶೇಷ ಸನ್ನಿಧಾನದಿಂದ ಪೂಜೆ ಗೊಳ್ಳುತ್ತಿರುವ ಯಂತ್ರೋದ್ಧಾರ ಪ್ರಾಣದೇವರು.

ವ್ಯಾಸರಾಯರು ವಿಜಯನಗರದಲ್ಲಿದ್ದ ಕಾಲದಲ್ಲಿ ಪ್ರತಿನಿತ್ಯವೂ ಚಕ್ರತೀರ್ಥ ಬಳಿಯಿರುವ ಒಂದು ಪ್ರಶಾಂತವಾದ ಬಂಡೆ ಮೇಲೆ ಧ್ಯಾನಕ್ಕೆ ಕುಳಿತುಕೊಳ್ಳುತ್ತಿದ್ದರು.

ಹೀಗೆ ಅವರು ಒಮ್ಮೆ ಧ್ಯಾನಕ್ಕೆ ಕುಳಿತಾಗ ಮಧ್ವಾಚಾರ್ಯರು ಆಂಜನೇಯ ರೂಪದಲ್ಲಿ ಕಾಣಿಸಿಕೊಂಡು, ಅಲ್ಲಿ ತನ್ನ ಮೂರ್ತಿ ಪ್ರತಿಷ್ಠಾಪಿಸುವಂತೆ ಪ್ರೇರಣೆ ನೀಡಿದಂತಾಯಿತು. ಯೋಗ ದೃಷ್ಟಿಯಿಂದ ವ್ಯಾಸರಾಯರು ಆ ಸ್ಥಳ ಹಿಂದೆ ತ್ರೇತಾಯುಗದಲ್ಲಿ ಶ್ರೀ ರಾಮಚಂದ್ರ, ಆಂಜನೇಯನನ್ನು ಪ್ರಥಮ ಬಾರಿ ಸಂದರ್ಶಿಸಿದ ಸ್ಥಳ ಎಂದು ತಿಳಿದು ಕೊಂಡು, ಆ ಬಂಡೆ ಮೇಲೆ ಅಂಗಾರದಿಂದ ಪ್ರಾಣ ದೇವರನ್ನು ಬರೆದು, ಧ್ಯಾನಿಸಿದರು. ಕಣ್ಣು ಮುಚ್ಚಿ ಧ್ಯಾನಮಾಡಿ, ಕಣ್ಣು ತೆಗೆಯುವ ವೇಳೆಗೆ ಅವರು ಅಂಗಾರದಲ್ಲಿ ಮೂಡಿಸಿದ್ದ ಆ ಆಂಜನೇಯ ಮೂರ್ತಿ ಜೀವ ತಳೆದು, ಬಂಡೆಯ ಮೇಲಿಂದ ಹಾರಿ ಹೋಗುತ್ತಿತ್ತಂತೆ. ಹೀಗೆ 12 ಸಲ ಪುನರಾವರ್ತಿತವಾಗಲು, ನಂತರ ಷಟ್ಕೋಣವನ್ನೂ, ಅದರ ಸುತ್ತ ವರ್ತುಲಾಕಾರವಾಗಿ ಯಂತ್ರವನ್ನು ರಚಿಸಿ ಪದ್ಮದಳದಿಂದ ದಿಗ್ಬಂಧನ ಮಾಡಿ, ಮಧ್ಯದಲ್ಲಿಯೋಗಾಸನಾರೂಢರಾಗಿರುವಂತೆ ಜಪಮಾಲೆ ಹಿಡಿದು ಧ್ಯಾನ ಮಗ್ನನಾಗಿರುವಂತ ಪ್ರಾಣದೇವರನ್ನು, ಅದರ ಸುತ್ತಲೂ ಮೊದಲು ಹಾರಿ ಹೋದ 12 ಕಪಿಗಳ ಚಿತ್ರವನ್ನು, ಒಂದರ ಬಾಲ ಇನ್ನೊಂದಕ್ಕೆ ಗಂಟು ಹಾಕಿದಂತೆ ಕಪಿ ಬಂಧದಿಂದ ಹೆಣೆದರು. ಈ ಯಂತ್ರದಲ್ಲಿ ಒಂದು ಕೋಟಿ ಬೀಜಾಕ್ಷರ ಮಂತ್ರ ಜಪಿಸಿ, ಪ್ರಾಣ ದೇವರ ಸನ್ನಿಧಾನ ಸ್ಥಿರವಾಗಿ ನಿಲ್ಲುವಂತೆ ಮಾಡಿದರು. ಈ ವಿಚಾರ ನಮಗೆ ವಿಜಯದಾಸರು ಸುಳಾದಿ ಯಿಂದ ತಿಳಿದು ಬರುತ್ತಿದ್ದು, ಈ ಯಂತ್ರೋದ್ಧಾರ ಪ್ರಾಣ ದೇವರ ಸೇವೆ ಮಾಡುವ ಭಕ್ತರ ಸಕಲ ಅಭಿಷ್ಟ ನೆರವೇರುವುದೆಂಬ ನಂಬಿಕೆಯಿದೆ. ಈ ಪ್ರಾಣದೇವರಿಗೆ ಸಾಳ್ವ ತಿಮ್ಮರಾಯ ಗುಡಿ ಕಟ್ಟಿಸಿ, ದತ್ತಿಬಿಟ್ಟಿದ್ದಾನೆ. ವ್ಯಾಸರಾಯರು ಸ್ವತಃ ಸ್ಥಾಪಿಸಿದ 732 ವ್ಯಾಸಾಂಜನೇಯ ವಿಗ್ರಹಗಳು ನಮ್ಮ ದೇಶದಾದ್ಯಂತ ಇದ್ದು, ಅವು ವಿಜಯನಗರ ಸಾಮ್ರಾಜ್ಯದ ಗಡಿ ಎಲ್ಲೆಗಳನ್ನು ತೋರಿಸುವ ಸೂಚಕಗಳಾಗಿಯೂ ಇತಿಹಾಸಜ್ಞರು ಗುರಿತಿಸುತ್ತಾರೆ.

ಈ ವ್ಯಾಸಾಂಜನೇಯ ಮೂರ್ತಿಗಳಲ್ಲದೆ ಅನೇಕ ವಿಷ್ಣು ಮೂರ್ತಿಗಳನ್ನು ವಿಜಯ ನಗರದ ಅರಸರು ವ್ಯಾಸರಾಯರಿಂದ ಪ್ರತಿಷ್ಠಾಪಿಸಿದ ಬಗ್ಗೆ ಶಾಸನಗಳು ನಮಗೆ ಮಾಹಿತಿ ನೀಡುತ್ತದೆ. ಶಾ.ಶ.1513 ನೆಯ ಶ್ರೀ ಮುಖ ಸಂವತ್ಸರದ ಚೈತ್ರ ಶುದ್ಧ 5 ಹಂಪಿಯಲ್ಲಿ ವಿಜಯ ವಿಠಲ ದೇವಾಲಯ ನಿರ್ಮಿಸಿ, ವಿಠಲಮೂರ್ತಿಯನ್ನು ವ್ಯಾಸರಾಯರಿಂದ ಶ್ರೀ ಕೃಷ್ಣದೇವರಾಯ ಪ್ರತಿಷ್ಠಾಪಿಸಿದ. ಮುಸಲ್ಮಾನರ ಧಾಳಿಯಿಂದ ಇಲ್ಲಿದ್ದ ವಿಠಲ ಮೂರ್ತಿಯನ್ನೇ ಮುಂದೆ ಪಂಡರಾಪುರಕ್ಕೆ ತೆಗೆದುಕೊಂಡು ಹೋಗಿ ಸ್ಥಾಪಿಸಲಾಗಿದೆ ಎನ್ನಲಾಗುತ್ತದೆ.

ಉದಯಗಿರಿಯನ್ನು ಕೃಷ್ಣದೇವರಾಯ ಗೆದ್ದಾಗ, ಅಲ್ಲಿದ್ದ ಶ್ರೀ ಕೃಷ್ಣ ವಿಗ್ರಹವನ್ನು ಹಂಪಿಗೆ ತಂದು, ದೇವಾಲಯ ನಿರ್ಮಿಸಿ ಶಕ 1514ನೇಯ ಭಾವ ಸಂವತ್ಸರದ ಫಾಲ್ಗುಣ ಶುದ್ಧ ತದಿಗೆ ತನ್ನ ಗುರುಗಳಾದ ವ್ಯಾಸರಾಯರಿಂದ ಪ್ರತಿಷ್ಠಾಪಿಸಿದ. 18-7-1532 ರ

ಒಂದು ಶಾಸನ ಯೋಗ ನರಸಿಂಹಸ್ವಾಮಿ ದೇವಾಲಯ ಪ್ರತಿಷ್ಠಾಪಿಸಿದ್ದನ್ನು ತಿಳಿಸುತ್ತದೆ. ಹಾಗೆಯೇ ಹಜಾರ ರಾಮಸ್ವಾಮಿ ದೇವಾಲಯವನ್ನು ಇದೇ ಸಮಯದಲ್ಲಿ ನಿರ್ಮಿಸಲಾಯಿತೆನ್ನಲಾಗುತ್ತದೆ.

ಹಂಪಿಯ ವಿಠಲ ದೇವರ ಸನ್ನಿಧಿಯಲ್ಲಿರುವ ಒಂದು ಶಾಸನ ಕೃಷ್ಣದೇವರಾಯ ವ್ಯಾಸ ಸಮುದ್ರವನ್ನು ವ್ಯಾಸರಾಜ ಗುರುಗಳ ನೆನಪಿಗಾಗಿ ನಿರ್ಮಿಸಿ, ಅದರ ನಿರ್ವಹಣೆಗೆ ಬೆಟ್ಟಕೊಂಡ ಎಂಬ ಗ್ರಾಮವನ್ನು ಸರ್ವಮಾನ್ಯವಾಗಿ ಬಿಟ್ಟ ವಿಚಾರ ತಿಳಿಸಿದರೆ, ಈ ದತ್ತಿ ಸ್ವೀಕರಿಸಿದ ವ್ಯಾಸರಾಯರು ಅದನ್ನು 308 ವಿದ್ವಾಂಸರಿಗೆ ವೃತ್ತಿಗಳಾಗಿ ಹಂಚಿದಾಗ, ಅದರಲ್ಲಿ ಮೂರು ಜನ ಪುರಂದರದಾಸರ ಮಕ್ಕಳೂ ಸೇರಿರುವುದು ಗಮನಾರ್ಹ. 1526 ಫೆಬ್ರವರಿ 24 ರಂದು ಹಾಕಿಸಿದ ಈ ಶಾಸನ ಪುರಂದರದಾಸರಿಗೆ ಲಕ್ಷ್ಮಣದಾಸ, ಹೇಖಣದಾಸ, ಮಧ್ವಪತಿ ದಾಸ ಎಂಬ ಮೂವರು ಮಕ್ಕಳಿದ್ದುದು, ಅವರು ಯಜು ಶ್ಯಾಖೆಯ ವಸಿಷ್ಠ ಗೋತ್ರದವರು ಎಂಬುದಾಗಿ ಸ್ಪಷ್ಟವಾಗಿ ತಿಳಿಸುತ್ತಿದ್ದು, ಈ ಶಾಸನವೇ ಪುರಂದರ ದಾಸರ ಬಗೆಗೆ ದೊರೆಯುವ ಪ್ರಥಮ ಅಧಿಕೃತ ದಾಖಲೆಯೂ ಆಗಿದೆ. ಮುಂದೆ ವ್ಯಾಸರಾಯರು ಕೃಷ್ಣದೇವರಾಯನ ಮೂಲಕ ಪುರಂದರ ದಾಸರ ಧ್ಯಾನ-ಆಹ್ನಿಕಗಳಿಗಾಗಿ ಪುರಂದರ ಮಂಟಪ ಎಂಬ ಶಿಲಾ ಮಂಟಪವನ್ನು ತುಂಗಭದ್ರೆಯ ದಡದಲ್ಲಿ ನಿರ್ಮಿಸಿದ್ದು, ಇದು ವಿಜಯನಗರ ಅರಸರು ಹರಿದಾಸರಿಗೆ ತೋರಿಸುತ್ತಿದ್ದ ಗೌರವದ ಪ್ರತೀಕವೂ ಆಗಿದೆ.

ಕಳಿಂಗ ದೇಶದ ಪ್ರತಾಪರುದ್ರ ಗಜಪತಿಯನ್ನು ಯುದ್ಧದಲ್ಲಿ ಕೃಷ್ಣದೇವರಾಯ ಜಯಿಸಿದಾಗ, ಮದನಪಲ್ಲಿ ಬಳಿ ಇರುವ ಕಂದಕೂರು ಗ್ರಾಮವನ್ನು ವ್ಯಾಸರಾಯರಿಗೆ ದಾನ ಮಾಡಿದನು. ಆ ಗ್ರಾಮದ ನೀರಿನ ಬವಣೆ ಕಂಡು ಅಲ್ಲಿ ಒಂದು ವಿಸ್ತಾರವಾದ ಕೆರೆಯನ್ನು ವ್ಯಾಸರಾಯರು ನಿರ್ಮಿಸಿದರು. ಇದು ವ್ಯಾಸರ ಘಟ್ಟ ಎಂದೇ ಪ್ರಸಿದ್ಧಿಯಾಗಿದೆ. ದೊಡ್ಡ ಬಳ್ಳಾಪುರ ಪ್ರದೇಶ ಒಂದರಲ್ಲಿಯೇ ವ್ಯಾಸರಾಯರು ವಿಜಯನಗರ ಅರಸರ ಸಹಕಾರದಿಂದ 36 ಕೆರೆಗಳನ್ನು ನಿರ್ಮಿಸಿದರು ಎನ್ನಲಾಗಿದೆ. ಹಂಪೆಯ ಸಮೀಪವೂ ಒಂದು ಕೆರೆಯನ್ನು ವ್ಯಾಸರಾಯರು ನಿರ್ಮಿಸಿದ್ದು, ಅದು ವ್ಯಾಸನಕೆರೆ ಎಂದೇ ಕರೆಯಲ್ಪಟ್ಟಿದೆ.

ಪರಮ ಭಾಗವತಾಗ್ರಣಿಗಳಾದ ವ್ಯಾಸರಾಜ ಗುರು ಸಾರ್ವಭೌಮರು ಶ್ರೀ ಮಧ್ವಾಚಾರ್ಯ ಮಹಾ ಸಂಸ್ಥಾನದ ರಾಜೇಂದ್ರ ತೀರ್ಥರ ಪೂರ್ವಾದಿಮಠದಲ್ಲಿ ಸುಮಾರು 85 ವರ್ಷಗಳ ಕಾಲ ಪೀಠಾಧಿಕಾರಿಗಳಾಗಿ, ಅಖಂಡ ಭಾರತದಾದ್ಯಂತ ಎರಡು ಬಾರಿ ಸಂಚರಿಸಿ ಪ್ರಕಾಂಡ ಪಂಡಿತರಾದ ಕಳಿಂಗದ ಬಸವಾಭಟ್ಟ, ಮಿಥಿಲೆಯ ಪಕ್ಷಧರ ಮಿಶ್ರ, ರಾಜಸ್ಥಾನದ ವಲ್ಲಭಚಾರ್ಯ ಮುಂತಾದ ನೂರಾರು ಜನ ಪರವಾದಿಗಳನ್ನು ವಾದದಲ್ಲಿ ಜಯಸಿ, ವಿಜಯನಗರದ ವಿಜಯ ದುಂಧುಭಿಯನ್ನು ಹೋದೆಡೆಯೆಲ್ಲಾ ಮೊಳಗಿಸಿ,

ಚಂದ್ರಿಕಾ, ನ್ಯಾಯಾಮೃತ. ತರ್ಕತಾಂಡವಾದಿ ಮುಂತಾದ ಅಸಾಧಾರಣ ಗ್ರಂಥ ರಚಿಸಿದ್ದಲ್ಲದೆ, ಕರ್ನಾಟಕದ ದಾಸ ಸಾಹಿತ್ಯದ ಅಗ್ರಗಣ್ಯರಲ್ಲಿ ಒಬ್ಬರಾಗಿ, ಸ್ವತಃ ಕನ್ನಡದಲ್ಲಿ ಕೀರ್ತನೆ, ಉಗಾಭೋಗ ರಚಿಸಿ, ಪುರಂದರದಾಸ, ಕನಕದಾಸರಂತರ ಅಪರೋಕ್ಷ ಜ್ಞಾನಿಗಳನ್ನು ನಾಡಿಗೆ ನೀಡಿ, ವಿಜಯೀಂದ್ರ ವಾದಿರಾಜ, ಗೋವಿಂದ ಒಡೆಯರ್, ನಾರಾಯಣಯತಿ, ಶ್ರೀನಿವಾಸ ತೀರ್ಥರಂತಹ ಸಂತರನ್ನು ನಮಗೆ ನೀಡಿ, ವಿಜಯನಗರ ಸಾಮ್ರಾಜ್ಯ ಸುವರ್ಣಯುಗವಾಗಲು ತಾವೂ ಹರಿಕಾರರಾಗಿ ಕನ್ನಡದ ಧ್ರುವತಾರೆಯಂತೆ ಬೆಳಗಿ, ರಾಜಕೇಸರಿಯಂತೆ ಬಾಳಿ ಇಂದಿಗೂ ಚಿರಸ್ಮರಣೀಯರಾಗಿದ್ದರೆ.

ಪರಾಮರ್ಶನ ಗ್ರಂಥಗಳು

1. ಕರ್ನಾಟಕ ಶಾಸನ ಸಂಪುಟಗಳು (ರೈಸ್)
2. ತಿರುಪತಿ- ತಿರುಮಲೆ ದೇವಸ್ಥಾನದ ಶಾಸನಗಳು
3. ದಕ್ಷಿಣ ಭಾರತದ ಶಾಸನ ಸಂಪುಟ
4. Insciptions of Madras Presidency. Vol I
5. ಮಾಧ್ವ ಮಠದ ಶಾಸನಗಳು. ಸಂ.1. - ಶ್ರೀ ರಾಘವೇಂದ್ರಸ್ವಾಮಿಗಳ ಮಠ. ಮಂತ್ರಾಲಯ
6. ಹಂಪೆಯ ಶಾಸನಗಳು-ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.
7. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ. ಮೈಸೂರು ವಿಶ್ವವಿದ್ಯಾನಿಲಯ
8. ವ್ಯಾಸಯೋಗಿ ಚರಿತಂ- ಸೋಮನಾಥಕವಿ. ಸಂ| ಬಿ. ವೆಂಕೋಬರಾವ್.
9. ಶ್ರೀ ವ್ಯಾಸರಾಜ ಸಂಪುಟ ಗುರುಸಾರ್ವಭೌಮ ಚರಿತಂ, ಶ್ರೀ ಮದ್ವಿದ್ಯಾ ರತ್ನಾಕರ ತೀರ್ಥ
10. ಕಲಿಯುಗದ ಕಲ್ಪತರು. ರಾಜಾ. ಎಸ್. ಗುರುರಾಯಾಚಾರ್.
11. ಶ್ರೀ ವ್ಯಾಸರಾಜ ಸಂಪುಟ. ಡಾ|| ಅರಳು ಮಲ್ಲಿಗೆ ಪಾರ್ಥಸಾರಥಿ
12. ಶ್ರೀ ವ್ಯಾಸರಾಜರು. ಕೊರಟಿ ಶ್ರೀನಿವಾಸರಾವ್
13. ಮಾಧ್ವ ವಾಙ್ಮಯ ತಪಸ್ವಿಗಳು. ಪಂಡರಿನಾಥಾ ಚಾರ್ಯ ಗಲಗಲಿ
14. ವಿಜಯನಗರ ಅಧ್ಯಯನ ಸಂ.6, ಪ್ರಾಚ್ಯವಸ್ತು ಸಂಗ್ರಹಾಲಯ ನಿರ್ದೇಶನಾಲಯ ಹೊಸಪೇಟೆ
15. ಸಪ್ತಗಿರಿ- ತಿರುಪತಿ ತಿರುಮಲೆ ದೇವಸ್ಥಾನದ ಮಾಸಿಕ.

೪೨. ಶ್ರವಣ ಬೆಳಗೊಳದಲ್ಲಿರುವ ವಿಜಯನಗರ ಕಾಲದ ಶಾಸನಗಳು

ಪಿ. ಯಶೋದಾ ರಾಜಶೇಖರಪ್ಪ

ಶ್ರವಣಬೆಳಗೊಳ ಕರ್ನಾಟಕದ ಧಾರ್ಮಿಕ ಇತಿಹಾಸದಲ್ಲಿ ಅತ್ಯಂತ ಮಹತ್ತ್ವದ ಸ್ಥಾನ ಪಡೆದಿದ್ದು, 6-7ನೇ ಶತಮಾನದಿಂದಲೇ ಅನೇಕ ಶಾಸನಗಳು ಇಲ್ಲಿ ಸಿಗುತ್ತವೆ. ಕರ್ನಾಟಕ ವನ್ನಾಳಿದ ಗಂಗ, ರಾಷ್ಟ್ರಕೂಟ, ಹೊಯ್ಸಳ, ವಿಜಯನಗರ, ಮೈಸೂರು ಒಡೆಯರು ಮುಂತಾದ ರಾಜವಂಶದವರು ಹಾಕಿಸಿದ ನೂರಾರು ಶಾಸನಗಳು ಸಾಮಾಜಿಕ, ಧಾರ್ಮಿಕ, ರಾಜಕೀಯ ವಿಷಯಗಳನ್ನು ತಿಳಿಸುತ್ತವೆ. ವಿಜಯನಗರದ ಅರಸರ ಕಾಲದಲ್ಲಿ ಕೂಡಾ ಶ್ರವಣಬೆಳಗೊಳದಲ್ಲಿ ಶಾಸನಗಳನ್ನು ಹಾಕಿಸಿದ್ದು ಅವು ಕಡಿಮೆ ಸಂಖ್ಯೆಯಲ್ಲಿವೆ. ಒಟ್ಟು ಆರು ಶಾಸನಗಳಿದ್ದು, ಅವುಗಳಲ್ಲಿ ಮೂರು ಸಂಸ್ಕೃತ ಮೂರು ಕನ್ನಡ ಭಾಷೆಯಲ್ಲಿವೆ. ಇವೆಲ್ಲ ಧಾರ್ಮಿಕ ಶಾಸನಗಳಾಗಿದ್ದು ರಾಜಕೀಯ ಮಹತ್ತ್ವವನ್ನು ಪಡೆದಂತಹವಲ್ಲ. ಇದರಲ್ಲಿ ಬುಕ್ಕರಾಯನ ಒಂದು ಶಾಸನವು ಮಾತ್ರ ಬಹಳ ಮಹತ್ತ್ವ ಪಡೆದಿದ್ದು ಅದು ಧಾರ್ಮಿಕ ಸಮನ್ವಯದ. ಕರ್ನಾಟಕದ ಪರಂಪರೆಯ ದ್ಯೋತಕವೆಂದು ಭಾವಿಸಲ್ಪಟ್ಟಿದೆ.

ಕ್ರಿ.ಶ. 1368ಕ್ಕೆ ಸೇರಿದ ಬುಕ್ಕರಾಯನ ಆ ಶಾಸನ [E.C.Vol II (New Edu) No. 475] ವಿಶಿಷ್ಟ ವಾದದ್ದು. ಭವ್ಯರೆಂದು ಉಲ್ಲೇಖಿತರಾಗಿರುವ ಜೈನರು, ಭಕ್ತರೆಂದು ಕರೆಯಲಾಗಿರುವ ಶ್ರೀವೈಷ್ಣವರ ನಡುವೆ ಧಾರ್ಮಿಕ ಘರ್ಷಣೆಯಾಗಿ ಕೆಲವು ಪಟ್ಟಣ ಗಳಲ್ಲಿ ಜೈನ ಬಸದಿಗಳು ಜೈನರ ಮೇಲೆ ಹಲ್ಲೆಯಾಗಿ ಜೈನರು ಶ್ರೀವೈಷ್ಣವರ ಅನ್ಯಾಯ ಗಳ ಬಗ್ಗೆ ರಾಜನಲ್ಲಿ ದೂರಿತ್ತಾಗ ರಾಜನು ಎರಡೂ ಧರ್ಮೀಯರನ್ನು ಕರೆಯಿಸಿ, ನಾಡ ಸಮಸ್ತರ ಸಮ್ಮುಖದಲ್ಲಿ ಎರಡೂ ಧರ್ಮೀಯರ ಕೈಯಲ್ಲಿ ಕೈಯನ್ನಿಡಿಸಿ ಎರಡೂ ಮತಗಳ ನಡುವೆ ಯಾವ ಭೇದವೂ ಇಲ್ಲ ಮತ್ತು ಅವೆರಡನ್ನೂ ಬೇರೆಯೆಂದು ಪರಿಗಣಿಸಬಾರದೆಂದೂ ಇಬ್ಬರಿಗೂ ತಿಳಿಹೇಳಿ ಶಾಂತಿಯನೇರ್ಪಡಿಸಿದ್ದಲ್ಲದೆ ಮುಂದೆ ಬೆಳಗೊಳದ ತೀರ್ಥದಲ್ಲಿ ಜೈನರ ಮತ್ತು ಅವರ ಬಸದಿಗಳ ರಕ್ಷಣೆಯನ್ನು ವೈಷ್ಣವರು ಮಾಡಬೇಕೆಂದು ಅವರ ಅಂಗರಕ್ಷೆಯ ವೆಚ್ಚಕ್ಕೆ ಇಡೀ ರಾಜ್ಯದಲ್ಲಿ ಜೈನರ ಪ್ರತಿ ಮನೆಯಿಂದ ಒಂದು ಹಣವನ್ನು ಸಂಗ್ರಹಿಸಿ ಆ ಹಣದಲ್ಲಿ ಇಪ್ಪತ್ತಾಳುಗಳ ವೆಚ್ಚಕ್ಕೂ ಉಳಿದ ಹಣವನ್ನು ಜೈನ ಬಸದಿಗಳ ಜೀರ್ಣೋದ್ಧಾರಕ್ಕೂ ವ್ಯಯಿಸಬೇಕೆಂದು ನಿರ್ಣಯಿಸಲಾಯಿತು.

ಇದೊಂದು ಧಾರ್ಮಿಕ ಸಮನ್ವಯದ ಶಾಸನದಂತೆ ಕಂಡರೂ ಸೂಕ್ಷ್ಮವಾಗಿ ಗಮನಿಸಿದಾಗ, ಇದರಲ್ಲಿ ಶ್ರೀವೈಷ್ಣವರ ಪ್ರಭಾವ ಹೆಚ್ಚು ಇರುವುದೂ ಜೈನಧರ್ಮಿಯರಿಗೆ ಪೂರ್ಣ ನ್ಯಾಯ ದೊರಕಿಲ್ಲದಿರುವುದೂ ಕಂಡುಬರುತ್ತದೆ. ರಾಜ್ಯವನ್ನು ಆಳುವ, ಶಾಂತಿಯನ್ನು ಕಾಪಾಡುವ, ಹಿನ್ನೆಲೆಯಲ್ಲಿ ಇಂಥದೊಂದು ಸೌಹಾರ್ದವನ್ನು ಏರ್ಪಡಿಸುವ ಅವಶ್ಯಕತೆ ಇದೆಯಾದ್ದರಿಂದ ಬುಕ್ಕರಾಯನು ಧಾರ್ಮಿಕ ಸಮನ್ವಯದ ನೀತಿಯನ್ನು ಅನುಸರಿಸಬೇಕಾಗಿ ಬಂದಿರಬಹುದು.

14ನೇ ಶತಮಾನದ ಮಧ್ಯಭಾಗ, 1ನೇ ಬುಕ್ಕರಾಯನ ಆಳ್ವಿಕೆಯ ಕಾಲ. ಜೈನಧರ್ಮಕ್ಕೆ 'ಅವಸರ್ಪಣೀಕಾಲ'. ಜೈನಧರ್ಮ ನಿಧಾನವಾಗಿ ಇಳಿಮುಖವಾಗುತ್ತಿತ್ತು. ವಿಶೇಷವಾಗಿ ರಾಮಾನುಜರು ಪ್ರತಿಪಾದಿಸಿದ ವಿಶಿಷ್ಟಾದ್ವೈತ ಪಂಥ ಕರ್ನಾಟಕದಲ್ಲಿ ಅನುಕೂಲ ನೆಲೆಕಂಡುಕೊಂಡು ರಾಜಮಹಾರಾಜರ ಆಶ್ರಯ ಪಡೆದು ರಾಜರ ಮೇಲೆ ಹೆಚ್ಚಿನ ಪ್ರಭಾವ ಬೀರಿದ್ದರು. ಬಸವಣ್ಣ ಮೊದಲಾದ ಶರಣರು ಪ್ರತಿಪಾದಿಸಿದ ವೀರಶೈವ ಧರ್ಮವೂ ಆಗ ಬೆಳವಣಿಗೆಯಲ್ಲಿತ್ತು. ಅನೇಕ ಜೈನರೂ ಮತಾಂತರ ಹೊಂದುತ್ತ ಅಲ್ಪಸಂಖ್ಯಾತರಾಗುತ್ತ ಪ್ರಭಾವ ಕಳೆದುಕೊಳ್ಳುತ್ತಿದ್ದರು. ಅದರಲ್ಲೂ ರಾಜಕೀಯದ ಮೇಲಿನ ಅವರ ಪ್ರಭಾವವೂ ಬಹಳಷ್ಟು ಕಡಿಮೆಯಾಗಿತ್ತು. ಈ ಅಂಶವನ್ನು ಕೂಡಾ ಈ ಶಾಸನ ಹೇಳುತ್ತದೆ. ಹಾಗಾಗಿಯೇ ದೊರೆ ಮೇಲೆ ಹೇಳಿದಂತೆ ಧಾರ್ಮಿಕ ಸಮನ್ವಯ ಮಾಡಿದ ನಂತರ, ರಾಜ್ಯದ ಎಲ್ಲ ಬಸದಿಗಳಲ್ಲಿ ಧಾರ್ಮಿಕ ಸಮನ್ವಯ ಮಾಡಿದ ನಂತರ, ಈ ಶಾಸನವನ್ನು ಹಾಕಿಸುವ ಅಧಿಕಾರವನ್ನು ಶ್ರೀವೈಷ್ಣವ ಗುರುಗಳಾದ ತಿರುಮಲೆಯ ತಾತಯ್ಯನವರಿಗೆ ಕೊಟ್ಟನು!

ಬುಕ್ಕರಾಯನು ಜೈನದರ್ಶನಕ್ಕೂ ವೈಷ್ಣವ ದರ್ಶನಕ್ಕೂ ಭೇದವಿಲ್ಲ ಎಂದು ಹೇಳಿದನಾದರೂ, ತಿರುಮಲೆ ತಾತಯ್ಯನವರು ಶ್ರವಣಬೆಳಗೊಳ ಭಂಡಾರ ಬಸದಿಯಲ್ಲಿ ಶಾಸನ ಹಾಕಿಸುವಾಗ ಆರಂಭದಲ್ಲಿ ಮಾಡಿರುವುದು ರಾಮಾನುಜರ ಸ್ತುತಿಯನ್ನು ಶಾಸನ ಹಾಕಿಸಿದ್ದು ಬಸದಿಯಲ್ಲೇ ಆದರೂ ಜೈನತೀರ್ಥಂಕರರ ಸ್ತುತಿಯೇ ಅಲ್ಲಿ ಇಲ್ಲ. ಹಾಗೇ ಶಾಸನ ಶಿಲ್ಪದಲ್ಲಿ ಜಿನನ ಬದಲಾಗಿ ಕಲಶದ ಚಿತ್ರವನ್ನು ಕೆತ್ತಲಾಗಿದೆ. ಇದನ್ನು ಧಾರ್ಮಿಕ ಸಮನ್ವಯ ಎಂದು ಭಾವಿಸಬಹುದೇ?

ಇನ್ನು ಎರಡನೆಯ ಅಂಶ: ಶ್ರೀವೈಷ್ಣವರ ಅನ್ಯಾಯದಿಂದ ಜೈನಬಸದಿಗಳಿಗಾದ ನಷ್ಟವನ್ನು ವೈಷ್ಣವರಿಂದ ಅಥವಾ ರಾಜ ಬೊಕ್ಕಸದಿಂದ ತುಂಬಿಕೊಡಬೇಕಾಗಿತ್ತು. ಜೈನ ಬಸದಿಗಳನ್ನು ರಕ್ಷಿಸುವ ಕೆಲಸ ರಾಜ್ಯಾಡಳಿತದಿಂದ ಮಾಡಿಸಬೇಕಾಗಿತ್ತು. ಆದರೆ ಇಲ್ಲಿ ಜೈನಬಸದಿಗಳನ್ನು ರಕ್ಷಿಸುವ ಕೆಲಸವನ್ನು ಶ್ರೀವೈಷ್ಣವರಿಗೆ ಒಪ್ಪಿಸಿ ಅವರ ಅಂಗರಕ್ಷೆಯ ವೆಚ್ಚವನ್ನು ರಾಜ್ಯದ ಪ್ರತಿಯೊಂದು ಜೈನಕುಟುಂಬವೂ ಹೊರುವಂತೆ ಮಾಡಿರುವುದು, ವೈಷ್ಣವರಿಂದಾದ ನಷ್ಟಕ್ಕೆ ಜೈನರೇ ಪರಿಹಾರ ಕಟ್ಟಿಕೊಡುವ ಮುಂದೂಡುತ್ತ ಹೋಗಬೇಕಾದ ಕಟ್ಟಳೆ ವಿಧಿಸಿದ್ದು ನ್ಯಾಯವೆಂದೇನೂ ತೋರುವುದಿಲ್ಲ.

ಶಾಸನದಲ್ಲಿ "ಪೂರ್ವ ಮರ್ಯಾದೆಯಲು, ಪಂಚಮಹಾವಾದ್ಯಗಳೂ ಕಲಶಉ ಸಲ್ಲುಉದು" ಎಂದು ತೀರ್ಮಾನಿಸಿ, ಈ ಮಾಡಿದ ಕಟ್ಟಳೆಯನ್ನು 'ಆವನೊಬ್ಬನು ಮೀರಿದರೆ ರಾಜದ್ರೋಹಿ ಸಂಘ ಸಮುದಾಯಕ್ಕೆ ದ್ರೋಹಿ' ಎಂದು ಹೇಳಲಾಗಿದೆ. ಬಹುಶಃ ಪಂಚ ಮಹಾವಾದ್ಯಗಳ, ಕಲಶದ ಗೌರವಕ್ಕೆ ಶ್ರೀವೈಷ್ಣವರು ಅಡ್ಡಿ ಪಡಿಸಿರ ಬೇಕು. ಅದರಿಂದ ಅದು ಪೂರ್ವದಿಂದ ಬಂದದ್ದರಿಂದ ಅವರು ಅದನ್ನು ಮುಂದುವರಿಸಿ ಕೊಡು ಹೋಗಬೇಕು ಎಂದಿದೆ. ಏಕೆಂದರೆ 19ನೇ ಶತಮಾನದಲ್ಲಿ ಚಿತ್ರದುರ್ಗದ ಶ್ರೀ ಮುರುಘರಾಜೇಂದ್ರ ಬೃಹನ್ಮಠದ ಪೀಠಾಧ್ಯಕ್ಷರುಗಳು ಅಡ್ಡಪಲ್ಲಕ್ಕಿ ಮತ್ತು ಬಿರುದಾ ವಳಿಗಳು ವ್ಯಾಸನತೋಳು ಮುಂತಾದ ಗೌರವವನ್ನು ಹೊಂದಬಾರದೆಂದು ಶೃಂಗೇರಿ ಮಠದ ಅನುಯಾಯಿಗಳು ಅಡ್ಡಪಡಿಸಿದಾಗ, ಮೈಸೂರು ಅರಸರಿಂದ ರಹದಾರಿ ಪತ್ರ (ಅನುಮತಿ ಪತ್ರ) ಪಡೆದು ತಂದು ಅಡ್ಡಪಲ್ಲಕ್ಕಿ ಉತ್ಸವ ಮಾಡಬೇಕಾಯಿತು ಎಂಬು ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಶ್ರೀವೈಷ್ಣವ ಮತಾನುಯಾಯಿಗಳು ಪಂಚ ಮಹಾವಾದ್ಯ, ಛತ್ರಿ, ಚಾಮರ ಕಳಶದ ಗೌರವದ ಹಕ್ಕು ತಮಗೆ ಮಾತ್ರವೇ ಎನ್ನುವ ಭಾವನೆಯಿಂದ ಅನ್ಯಧರ್ಮಿಯರ ಮೆರವಣಿಗೆ ಉತ್ಸವಗಳಿಗೆ ಅಡ್ಡಿಪಡಿಸುವ, ಹಲ್ಲೆ ಮಾಡುವ ಕೆಲಸ ಮಾಡುತ್ತಿದ್ದರೆಂದು ತೋರುತ್ತದೆ. ಬಹುಶಃ ಇದೇ ಕಾರಣದಿಂದ ಘರ್ಷಣೆಯಾಗಿ ರಾಜನು ಪೂರ್ವಮರ್ಯಾದೆಯಿಂದ ಬಂದ ಈ ಗೌರವವು ಸಲ್ಲಬೇಕು ಎಂದು ತೀರ್ಪುಕೊಟ್ಟಾಗ ಅಷ್ಟರಮಟ್ಟಿಗೆ ತಮಗೆ ನ್ಯಾಯ ದೊರೆಯಿತೆಂದು ಉಳಿದ ಅನ್ಯಾಯಗಳನ್ನು ಒಪ್ಪಿಕೊಂಡು, ತಮ್ಮ ತಮ್ಮ ಬಸದಿಗಳ ರಕ್ಷಣೆಯನ್ನು ಶ್ರೀವೈಷ್ಣವರಿಗೆ ಒಪ್ಪಿಸಿಕೊಡುವ ಅನಿವಾರ್ಯತೆ ಅಸಹಾಯಕತೆ ಜೈನರಿಗೆ ಒದಗಿ ಬಂದಂತೆ ಕಾಣುತ್ತದೆ.

ರಾಜನು ಸಮಸ್ತರನ್ನೂ ಒಂದು ಗೂಡಿಸಿದಾಗ ಕೋವಿಲ್ ತಿರುಮಲೆ, ಪೆರುಮಾಳ್ ಕೋವಿಲ್ ತಿರುನಾರಾಯಣಪುರ ಮುಖ್ಯವಾದ ನಕಳಾಚಾರ್ಯರು ಸಾತ್ವಿಕರು ವೈಷ್ಣವ ದೇವಾಲಯದಲ್ಲಿರುವ ತಿರುಪಣಿಯವರು (ದೇವಸ್ಥಾನದ ಸೇವೆ ಮಾಡುವರು) ತಿರುವಡಿ ಯವರು (ದೇವರ ಶ್ರೀಪಾದವನ್ನು ನಿರ್ವಹಿಸುವರು) ಮೋಷ್ಟಿತರು (ಮುಷ್ಟಿಧಾನ್ಯವನ್ನು ದಾನವಾಗಿ) ಪಡೆದು ಅದರಿಂದ ಜೀವಿಸುವವರು, ತಣ್ಣೀರವರು (ದೇವರ ಸೇವೆಗೆ ಮಡಿಯಿಂದ ನೀರು ತರುವವರು) ಸಾವಂತ ಬೋವಕ್ಕಳು (ಪಲ್ಲಕ್ಕಿಹೊರುವವರು, ತಿರುತುಲ ಆದಿ ಜಾಂಬುಲದವರು (ಅಸ್ಪೃಶ್ಯರು) ನಲವತ್ತೆಂಟು ಜನಗಳು ಸೇರಿದರೆಂದು ಹೇಳುವಾಗ ಎಲ್ಲಿಯೂ ಜೈನ ಬಸದಿಗಳ ಪರಿವಾರದವರನ್ನು ಉಲ್ಲೇಖಿಸುವುದೇ ಇಲ್ಲ. ಇಲ್ಲಿ ಶ್ರೀವೈಷ್ಣವ ದೇವಾಲಯಗಳ ಸಿಬ್ಬಂದಿಯು ವಿಜೃಂಭಿಸಿರುವುದನ್ನು ಕಾಣಬಹುದು. ನಂತರ ಶಾಸನದ ಕೊನೆಯಲ್ಲಿ, ಕಳೆಹದೆ ಹವ್ವಿಸೆಟ್ಟಿಯ ಸುಪುತ್ರ ಬುಸುವಿ ಶೆಟ್ಟಿಯು ದೊರೆ ಬುಕ್ಕರಾಯನಿಗೆ ಮನವಿ ಮಾಡಿಕೊಂಡು ತಿರುಮಲೆ ತಾತಯ್ಯನವರನ್ನು ಬೆಳಗೊಳಕ್ಕೆ 'ವಿಜಯಂಗೈಸಿ ಕರೆತಂದು' ಬಸದಿಯ ಜೀರ್ಣೋದ್ಧಾರ ಮಾಡಿಸಿದರು. ಉಭಯ ಸಮಯದವರೂ ಸೇರಿ ಬಸುವಿ ಸೆಟ್ಟಿಗೆಯವರಿಗೆ ನಾಯ್ಕ ಪಟ್ಟವ ಕಟ್ಟಿದರು

ಎನ್ನುವುದೂ ಕೂಡಾ ತಿರುಮಲೆ ತಾತಯ್ಯನವರು ಎಷ್ಟು ಪ್ರಭಾವ ಶಾಲಿಯಾಗಿದ್ದರು ಎನ್ನುವುದನ್ನು ಹೇಳುತ್ತದೆ. ಹೀಗೆ ಇಡೀ ಶಾಸನದ ಉದ್ದಕ್ಕೂ ಶ್ರೀವೈಷ್ಣವ ಪ್ರಭಾವ ಎಷ್ಟಿತ್ತು ಎಂಬುದನ್ನು ಕಾಣಬಹುದು.

ಇನ್ನೊಂದು ಕನ್ನಡ ಶಾಸನ ಕ್ರಿ.ಶ 1404ರ ಅವಧಿಯದು. (ಅದೇ EC ಸಂಪುಟ ನಂ. 446) ಅಕ್ಕನ ಬಸದಿಯಲ್ಲಿ ಹಾಕಿಸಿರುವ ಇದು ತಾರಣ ಸಂವತ್ಸರದಲ್ಲಿ ಭಾದ್ರಪದ ಬಹುಳ ದಶಮಿಯ ಸೋಮವಾರ ವಿಜಯನಗರದ ದೊರೆ ೨ನೇ ಹರಿಹರನು ಸ್ವರ್ಗಸ್ಥನಾದುದನ್ನು ಹೇಳುತ್ತದೆ. ಇದು ೨ನೇ ಹರಿಹರನು ಶ್ರವಣಬೆಳಗೊಳದಲ್ಲಿ ಮರಣ ಹೊಂದಿರುವುದನ್ನು ತಿಳಿಸುತ್ತಿರಬಹುದೆ? ಇದರಿಂದ ತನ್ನ ಕೊನೆಯ ಸಮಯದಲ್ಲಿ ಜೈನಧರ್ಮ ದಿಂದ ಅವನು ಆಕರ್ಷಿತವಾಗಿರಬಹುದು ಎಂದು ಊಹಿಸಬಹುದಾಗಿದೆ.

ಕ್ರಿ.ಶ. 1422ರ ಅವಧಿಯ ಇನ್ನೊಂದು ಶಾಸನ (ಅದೇ EC ಸಂಪುಟ ಅದೇ ಸಂಪುಟ ನಂ. 387) ಇರುಗಪ್ಪನಾಯಕನದ್ದು. ಅದು ಸಂಸ್ಕೃತ ಭಾಷೆಯಲ್ಲಿದೆ. ಬುಕ್ಕರಾಯನ ದಂಡ ನಾಯಕನೂ ಅತ್ಯಂತ ಪ್ರಸಿದ್ಧನೂ, ಜಿನಭಕ್ತನೂ ಆಗಿದ್ದ ಬೈಚಂದಂಡನಾಯಕನ ಮೊಮ್ಮಗ ಇರುಗಪ್ಪದಣ್ಣಾಯಕನು ಶ್ರವಣಬೆಳಗೊಳದ ಗೊಮ್ಮಟೇಶ್ವರನ ಸನಾತನ ಭೋಗಕ್ಕೆಂದು ಬೆಳುಗುಳ ಗ್ರಾಮವನ್ನು ದಾನಮಾಡಿ, ಒಂದು ಉದ್ಯಾನವನ್ನು ಹೊಸ ತಟಾಕವನ್ನೂ ನಿರ್ಮಿಸಿ, ದೇವರ ಸೇವೆಗೈದನೆಂದು ಹೇಳುತ್ತದೆ. ಅತ್ಯಂತ ಕಾವ್ಯಮಯವಾದ ಈ ಶಾಸನ ತನ್ನ ಶತ್ರುಗಳಿಂದಲೂ ಮೆಚ್ಚುಗೆ ಪಡೆದಿದ್ದ ಬೈಚದಂಡ ನಾಯಕನನ್ನು ಅವನ ಮಕ್ಕಳಾದ ಇರುಗಪ್ಪ ಬುಕ್ಕಣ್ಣ ಮಂಗಪ್ಪ ಇವರನ್ನು ರತ್ನತ್ರಯ ದಂತಿದ್ದರೆಂದೂ ಮಂಗಪನ ಪತ್ನಿ ಜಾನಕಿ ಆ ಶ್ರೀರಾಮನ ಜಾನಕಿಯಂತೆ ಅತ್ಯಂತ ಸುಶೀಲೆಯೂ ಜನಪದ ಪಂಕಜೆಯೂ ಆಗಿದ್ದಳು. ಅವಳ ಇಬ್ಬರು ಮಕ್ಕಳಲ್ಲಿ ಇರುಗಪ್ಪನೇ ಈ ದಾನವನ್ನು ಮಾಡಿದವನು ಎಂದು ಹೇಳುತ್ತದೆ. ಆ ಇರುಗಪ್ಪನನ್ನು ಅವನ ಶಾಸನವು ವ್ಯಕ್ತಿತ್ವವನ್ನು ಅತ್ಯಂತ ಕಾವ್ಯಮಯುವಾಗಿ ವರ್ಣಿಸುತ್ತದೆ.

ಇರುಗಪ್ಪ ದಂಡನಾಯಕನ ಸಾಹಸವನ್ನು ಆದಿಶೇಷನು ತನ್ನ ಸಹಸ್ರನಾಲಿಗೆಯ ಮೂಲಕ ಪ್ರಶಂಶಿಸಿ ಸಂತೋಷಿಸುತ್ತಿದ್ದನಂತೆ. ಈ ಇರುಗಪ್ಪನು ಯಥೇಚ್ಛ ಆಹಾರ ಅಭಯ, ಔಷಧ ಮತ್ತು ಶಾಸ್ತ್ರದಾನವನ್ನು ನಿತ್ಯವೂ ಮಾಡುತ್ತಿದ್ದನಲ್ಲದೆ, ಹಿಂಸೆ, ಹುಸಿ, ಪರಸ್ತ್ರೀ ವ್ಯಸನ, ಚೋರತನ, ದುರಾಸೆ ಇವನ್ನು ದೂರವಿಟ್ಟಿದ್ದನಂತೆ. ಅಂದರೆ ಜೈನಧರ್ಮಾ ಚತುರ್ದಾನ, ಪಂಚವ್ರತಗಳನ್ನು ಅವನು ನಿಷ್ಠೆಯಿಂದ ಪಾಲಿಸುತ್ತಿದ್ದನು).

ಸುಪಾತ್ರದಲ್ಲಿ ದಾನ, ದೀನರಲ್ಲಿ ಕರುಣೆ, ಜೀನನಲ್ಲಿ ದೃಷ್ಟಿ, ಧರ್ಮಪಥದಲ್ಲಿ ಭಕ್ತಿ, ಜಿನಸ್ತುತಿಯನ್ನು ಕೇಳುವಲ್ಲಿ ಕಿವಿ, ಜಿನಸ್ತುತಿ ಮಾಡುವಲ್ಲಿ ತನ್ನ ನಾಲಗೆ, ಜೀನನಿಗೆ ವಂದಿಸುವಲ್ಲಿ ತನ್ನ ಶರೀರ, ಜಿನಪದ ಕಮಲ ಸುವಾಸನೆಯಲ್ಲಿ ತನ್ನ ಮೂಗು, ಸೇವೆಯಲ್ಲಿ ತನ್ನ ಸರ್ವಸ್ವ ಎಂಬಂತೆ ಪಂಚೇಂದ್ರಿಯಗಳೂ ಜಿನನಿಗಾಗಿಯೇ ಇದ್ದು

ಶೌರ್ಯ ದಕ್ಷತೆಗಳಿಂದ ರಾಜ್ಯಸಂರಕ್ಷಣ ಕಾರ್ಯದಲ್ಲಿ ಅವನು ನಿರತನಾಗಿದ್ದನು. ಅಂಥ ವನು ಆ ಬೆಳಗುಳ ಗ್ರಾಮವನ್ನು ಆಚಂದ್ರಾರ್ಕವಾಗಿ ಇರಲೆಂದು ಆಶಿಸಿ ದಾನಮಾಡಿದನು ಎಂದು ಇರುಗಪ್ಪನ ವ್ಯಕ್ತಿತ್ವವನ್ನು ಸುಂದರವಾಗಿ ವರ್ಣಿಸುತ್ತದೆ.

ಮತ್ತೊಂದು ಸಂಸ್ಕೃತ ಶಾಸನ ಕ್ರಿ.ಶ. 1446 (ಅದೇ E.C. ಅದೇ ಸಂಪುಟ, ನಂ.445) ರ ಅವಧಿಯದು, 2ನೇ ದೇವರಾಯನು 24 ಮೇ 1446 ರಂದು ಮಂಗಳವಾರ ಅಮಾವಾಸ್ಯೆಯಂದು ಮರಣಹೊಂದಿದನೆಂದು ಮನೋವೇದಕ ನುಡಿಗಳಲ್ಲಿ ಹೇಳುತ್ತದೆ. ಇದೇ ವಿಷಯವನ್ನು ಹೇಳುವ ಇದೇ ಪಾಠವಿರುವ ಸಂಸ್ಕೃತದ ಅಪೂರ್ಣ ಶಾಸನವೂ ಒಂದು ಇಲ್ಲಿದೆ. (ಅದೇ EC ಸಂಪುಟ, ಸಂ. 447) ದುಷ್ಟ ಕ್ಷಯ ಸಂವತ್ಸರದಲ್ಲಿ, ದುರಂತದ ದ್ವಿತೀಯ ವೈಶಾಖ ಮಾಸದಲ್ಲಿ, ಅಮಂಗಳದ ಮಂಗಳವಾರದಲ್ಲಿ, ಕೃಷ್ಣ ಪಕ್ಷದ ಚತುರ್ದಶಿಯಂದು, ಅಪ್ರತಿಮವೀರ ಪ್ರತಾಪದೇವರಾಯನು ಪರಂಧಾಮವನ್ನು ಸೇರಿದನು ಅಯ್ಯೋ ವಿಧಿಯೇ! ಎಂಬ ಉದ್ಗಾರವನ್ನು ಅದು ಮಾಡುತ್ತಿದೆ. ಈ 2ನೇ ದೇವರಾಯನು ಎಲ್ಲರಿಗೂ ಗೊತ್ತಿರುವ ಹಾಗೆ ವಿಜಯನಗರದ ಅರಸರಲ್ಲಿ ಅತ್ಯಂತ ಶ್ರೇಷ್ಠನು ಕಟ್ಟುನಿಟ್ಟಾದ ರಾಜಧರ್ಮಾನುಷ್ಠಾನದಿಂದ ಸಂಸ್ಕೃತಿ ವರ್ಧನ ಕಾರ್ಯ ಗಳಿಂದ, ಅವನ ಕಾಲ ಅತ್ಯಂತ ಸಾಂಸ್ಕೃತಿಕ ವೈಭವದಿಂದ ಕೂಡಿದ್ದಿತು. ಪ್ರಜಾನು ರಾಗಿಯೂ ಧರ್ಮಸಹಿಷ್ಣುವೂ ಆಗಿದ್ದ ಹಲವಾರು ಶಾಸನಗಳು ಅವನ ಉದಾತ್ತ ಗುಣಗಳನ್ನು ರಾಜೋಚಿತ ರೀತಿನೀತಿಗಳನ್ನು ಹಲವು ಬಗೆಯಲ್ಲಿ ಕೊಂಡಾಡಿವೆ. ಅನೇಕ ಸಂಸ್ಕೃತ, ಕನ್ನಡ, ತೆಲುಗು, ತಮಿಳು ಕವಿಗಳು ಅವನ ಗುಣಗಾನ ಮಾಡಿದ್ದಾರೆ. ಚಂದ್ರ ಗುಪ್ತ 18 ಕಂಪಣದ ಗುರಿಕಾರನಾದ ಪೃಥ್ವೀ ಸೆಟ್ಟಿ ಎಂಬುವನು ಇಮ್ಮಡಿ ದೇವರಾಯನ ಮರಣ ವಾರ್ತೆಯಿಂದ ಎದೆಬಿರಿದು, ಕೋಡು ಕಣಿಗೆ ತೆರಳಿ ಅಲ್ಲಿ ದೇವಸನ್ನಿಧಿಯಲ್ಲಿ ಆತ್ಮಾರ್ಪಣೆ ಮಾಡಿಕೊಂಡನೆಂದು ಕ್ರಿ.ಶ 1448 ರ ಶಾಸನವೊಂದು ಹೇಳಿದೆ. ಪೃಥ್ವೀಸೆಟ್ಟಿಗೆ ತನ್ನ ಒಡೆಯನ ಮೇಲಿದ್ದ ಅಪಾರ ಭಕ್ತಿಗೌರವವು ಇದರಿಂದ ವ್ಯಕ್ತ ವಾಗುತ್ತದೆ. ಇಂಥ ಇಮ್ಮಡಿದೇವರಾಯನು ಈ ಶ್ರವಣಬೆಳಗೊಳದಲ್ಲಿ ಮರಣ ಹೊಂದಿರಬಹುದಾದ ಸಾಧ್ಯತೆಯನ್ನು ಮತ್ತು ತನ್ನ ಕೊನೆಯ ದಿನಗಳಲ್ಲಿ ಜೈನಧರ್ಮದ ಬಗ್ಗೆ ಒಲವನ್ನು ತೋರಿಸಿರುವ ಸಾಧ್ಯತೆಯನ್ನು ಇದು ಹೇಳುತ್ತದೆ. ಏಕೆಂದರೆ ಈತನ ಪತ್ನಿ ಭೀಮಾದೇವಿಯು ಇದೇ ಪ್ರದೇಶದಲ್ಲಿ ಶಾಂತಿನಾಥನ ಪ್ರತಿಮೆಯನ್ನು ಮಾಡಿಸಿದಳೆಂದು ಶಾಸನವೊಂದು ಹೇಳುತ್ತದೆ. 2ನೇ ದೇವರಾಯನು ತನ್ನ ಕೊನೆಯ ದಿನಗಳಲ್ಲಿ ಪತ್ನಿಯ ಜೊತೆಯಲ್ಲಿ ಬಂದು ಇಲ್ಲಿ ಕೆಲಕಾಲ ತಂಗಿರಬಹುದೇ? ಅವನು ವಿಜಯನಗರದಲ್ಲಿಯೂ ತನ್ನ ಅರಮನೆಯ ಹತ್ತಿರ ಒಂದು ಬಸದಿಯನ್ನು ಕಟ್ಟಿಸಿದ್ದನೆಂದೂ ಹೇಳುತ್ತಾರೆ.

ಇಮ್ಮಡಿ ದೇವರಾಯನ ಮತವಿಚಾರವು ಕುತೂಹಲಕಾರಿಯಾದದು. "ಕನ್ನಡದ ಕವಿ ಚಾಮರಸನ ಪ್ರಭುಲಿಂಗ ಲೀಲೆಯು ದೇವರಾಯನು ವೀರಶೈವನಾಗಿ ಮತಾಂತರ

ಹೊಂದಿರಬೇಕೆಂಬ ಊಹೆಗೆ ಅವಕಾಶಕೊಟ್ಟಿದೆ". ಅವನ ರಾಜ್ಯಭಾರ ಕಾಲ ವೀರಶೈವ ಮತದ ಪ್ರಾದುರ್ಭಾವ ಕಾಲವಾಗಿದ್ದಿತು ಎಂಬ ಅಭಿಪ್ರಾಯವೂ ಇದೆ. ಒಟ್ಟಿನಲ್ಲಿ ಅವನ ಮತಧರ್ಮ, ಇನ್ನೂ ಚರ್ಚೆಯ ವಿಷಯವೇ ಆಗಿದ್ದು ಈ ಶಾಸನವೂ ಈ ಚರ್ಚೆಗೆ ಅವಕಾಶ ನೀಡುವುದರಲ್ಲಿ ಒಂದಾಗಿದೆ.

ಮತ್ತೊಂದು ಕನ್ನಡ ಶಾಸನ 15 ನೇ ಶತಮಾನದ್ದು (ಅದೇ E.C. ಸಂಪುಟ ನಂ. 447) ಅದರಲ್ಲಿ ಕಾಲವನ್ನು ಸೂಚಿಸಿಲ್ಲ. ಶ್ರೀಮತ್ಪಂಡಿತಾಚಾರ್ಯರ ಶಿಷ್ಯೆ ದೇವರಾಯನ ಪತ್ನಿ ರಾಣಿ ಭೀಮಾದೇವಿ ಮಾಡಿಸಿದ ಶಾನ್ತಿನಾಥಸ್ವಾಮಿ ಶ್ರೀ ಎಂಬುದಾಗಿ ಈ ಶಾಸನ ಹೇಳುತ್ತದೆ. ಈ ಭೀಮಾದೇವಿಯನ್ನು ಶ್ರೀ ಆರ್. ನರಸಿಂಹಾಚಾರ್ಯರು ಮೊದಲನೇ ದೇವರಾಯನ ಪತ್ನಿ ಇರಬೇಕೆಂದು ಊಹಿಸಿದ್ದಾರೆ. ಆದರೆ ಎಂ.ವಿ. ಕೃಷ್ಣರಾವ್ ಮತ್ತು ಎಂ. ಕೇಶವಭಟ್ಟರು ರಚಿಸಿದ 'ಕರ್ನಾಟಕದರ್ಶನದಲ್ಲಿ' ಇಮ್ಮಡಿ ದೇವರಾಯನಿಗೆ ಇಬ್ಬರು ಪತ್ನಿಯರೆಂದೂ ಪೊನ್ನಾಲದೇವಿ ಮತ್ತು ಭೀಮಾದೇವಿ ಎಂದು ಅವರ ಹೆಸರು. ಭೀಮಾದೇವಿಗೆ ಮಕ್ಕಳಿರಲಿಲ್ಲವೆಂದು ಹೇಳಿದ್ದಾರೆ. ಬಹುಶಃ ಮೇಲೆ ಹೇಳಿದ ಶಾಸನದಲ್ಲಿ ಬರುವ ಶ್ರೀಪಂಡಿತಾಚಾರ್ಯರ ಗುಡ್ಡಿ ಅಥವಾ ಶಿಷ್ಯೆ ಇದೇ ಭೀಮಾದೇವಿಯೇ ಇರಬೇಕು ಆಕೆ ಪುತ್ರವತಿಯಾಗಿದ್ದಳು. ಜಿನಧರ್ಮಾವಲಂಬಿಯಾಗಿದ್ದು ಆಕೆ ಇಲ್ಲಿಗೆ ಆಗಾಗ್ಗೆ ಬರುತ್ತಾ ಹೋಗುತ್ತಾ ಇದ್ದಿರಬೇಕು ಅಥವಾ ತನ್ನ ಪತಿಯೊಂದಿಗೆ ಬಂದು ಕೊನೆಯ ದಿನಗಳಲ್ಲಿ ಇಲ್ಲಿಯೇ ನೆಲಸಿರಬೇಕು. 2 ನೇ ದೇವರಾಯ ಮರಣ ಹೊಂದಿದ ವಿಷಯ ವನ್ನು ತಿಳಿಸುವ ಶಾಸನವು ಇಲ್ಲೇ ಇರುವುದು, ಇದಕ್ಕೆ ಪುಷ್ಟಿ ಕೊಡುತ್ತದೆ. ಈ ಶಾಂತಿನಾಥ ಮೂರ್ತಿಯನ್ನು ಪತಿಯ ಮರಣಾ ನಂತರ ಅಥವಾ ಇದ್ದಾಗಲೆ ಮಾಡಿಸಿ ಅವನ ನೆನಪಲ್ಲಿ ಇಲ್ಲಿಯೇ ನೆಲಸಿರಲೂ ಬಹುದು.

ಒಟ್ಟಿನಲ್ಲಿ ವಿಜಯನಗರದ ರಾಜರ ಈ ಎಲ್ಲಾ ಶಾಸನಗಳು ವಿಜಯನಗರದ ರಾಜರ ಅವರ ಕುಟುಂಬದ ದಂಡಾಧಿಕಾರಿಗಳ ಧಾರ್ಮಿಕ ಸಾಮಾಜಿಕ ಒಲವು ನಿಲುವುಗಳನ್ನು ತಿಳಿಸುತ್ತದೆ. ಹಾಗೆಯೇ ಇಬ್ಬರು ಪ್ರಖ್ಯಾತ ರಾಜರ ಮರಣವಿಚಾರವನ್ನು ಹೇಳುತ್ತದೆ. ನಮ್ಮ ಕರ್ನಾಟಕ ಧಾರ್ಮಿಕ ಸಹಿಷ್ಣುತೆಯ ಪರಂಪರೆಯನ್ನೂ ಕೆಲಮಟ್ಟಿಗೆ ರಾಜಕೀಯ ಸಂದರ್ಭಗಳನ್ನೂ ಕುರಿತು ಹೇಳುವ ಮಹತ್ವ ಶಾಸನಗಳಾಗಿವೆ.

೪೩. ಹಿರೆ ಜಂತಕಲ್ಲಿನ ಒಂದು ಅಪೂರ್ವ ಪರಿಕಲ್ಪನೆಯ (ಭಾರತಿ ರಮಣ ಮುಖ್ಯ ಪ್ರಾಣ?) ದೇವರ ರೇಖಾ ಚಿತ್ರ

ಡಾ. ಅ. ಸುಂದರ

ಹಂಪೆಯ ಸಮೀಪದ ಗಂಗಾವತಿ ನಗರ (ಕೊಪ್ಪಳ ಜಿಲ್ಲೆ)ಕ್ಕೆ ಹೊಂದಿಕೊಂಡಿರುವ ಹಿರೆ ಜಂತಕಲ್ ಗ್ರಾಮದ ಪಕ್ಕದಲ್ಲಿಯೆ ಒಂದು ಕಲ್ಲು ಗುಡ್ಡವಿದೆ. ೧೯೭೩ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಕನ್ನಡ ಸಂಶೋಧನೆ ಸಂಸ್ಥೆಯ ಶಾಸನಗಳ ಅನ್ವೇಷಣೆ ಕಾರ್ಯಕ್ರಮ ದಡಿಯಲ್ಲಿ ಗಂಗಾವತಿ ತಾಲ್ಲೂಕಿನಲ್ಲಿ ಕ್ಷೇತ್ರ ಕಾರ್ಯವನ್ನು ನಡೆಸುತ್ತಿದ್ದಾಗ ಈ ಗುಡ್ಡದ ತಪ್ಪಲಿನಲ್ಲಿ ಒಂದು ನೂತನ ಶಿಲಾಯುಗ ಜನ ವಾಸ್ತವ್ಯ ನೆಲೆಯನ್ನು[೧], ಗುಡ್ಡದ ಮೇಲಿನ ಬಂಡೆಗಳ ಮೇಲೆ ವಿಜಯನಗರ ಕಾಲದ ಕೆಲವು ರೇಖಾ ಚಿತ್ರಗಳನ್ನು ಮತ್ತು ಶಿಲ್ಪಗಳನ್ನು ಪರಿಶೀಲಿಸಿದ್ದೆ. ಉಳಿಯಿಂದ ಬಿಡಿಸಿದ ರೇಖಾ ಚಿತ್ರಗಳಲ್ಲಿ, ಪ್ರಸ್ತುತ ಪಡಿಸುತ್ತಿರುವ ದೇವರ ಆಕೃತಿಯು ತುಲನಾತ್ಮಕವಾಗಿ ಅಪೂರ್ವವಾದುದು.

ವಿಜಯನಗರ ಕಾಲದ ಸಮಭಂಗದಲ್ಲಿಯ ದೇವರ ರೇಖಾಕೃತಿಯು ಅಲ್ಲಲ್ಲಿ ಅಸ್ಪಷ್ಟವಾಗಿದೆ. ಐದು ಮುಖಗಳಿರುವಂತೆ ಕಾಣುತ್ತದೆ. ಮುಂಬದಿಯ ರೇಖಾಕೃತಿ ಯಾದುದರಿಂದ ಮುಂದಿನ ಮತ್ತು ಬಲ - ಎಡ ಮುಖಗಳು ಮಾತ್ರ ತಕ್ಕಮಟ್ಟಿಗೆ ಸ್ಪಷ್ಟವಾಗಿವೆ. ಬಲ, ಎಡ ಮತ್ತು ಮುಂಬದಿಯವುಗಳು ಕ್ರಮವಾಗಿ ಬಹುಮಟ್ಟಿಗೆ ಆಂಜನೇಯ, ಗರುಡ ಮತ್ತು ನರಸಿಂಹನೆಂದು ಮತ್ತು ಮುಂಡವನ್ನು ಗುರುತಿಸಬಹುದು. ೨೦ ಕೈಗಳಲ್ಲಿ ಶಂಖ ಚಕ್ರ ಗದೆ, ತ್ರಿಶೂಲ ಮೊದಲಾದ ನಾನಾ ವಿಧದ ಶಸ್ತ್ರಗಳಿವೆ. ಮುಂದಿನ ಎರಡು ಕೈಗಳಲ್ಲಿ ಕೆಳಮುಖವಾಗಿ ಹಿಡಿದಿರುವ ಉದ್ದನೆಯ ಕತ್ತಿಗಳಿವೆ. ಮುಂಡದ ಕೆಳಗೆ ಎದುರು ಬದುರಾಗಿ ಬಾಲವೆತ್ತಿ ನಿಂತಿರುವ ಎರಡು ಸಿಂಹಗಳ ತಲೆಗಳ ಭಾಗದಿಂದ ಮುಂಡ ಮತ್ತು ಸಿಂಹದ ತಲೆ ಉದ್ಭವಿಸಿರುವುದು ಮತ್ತು ಸಿಂಹಗಳ ಮುಂದಿನ ಕಾಲುಗಳು ದೇವರ ಕಾಲುಗಳಾಗಿರುವುದು ಏಕಮೇವಾ ದ್ವಿತೀಯ. ದೇವರ ಎಡಬದಿಯಲ್ಲಿ ಪಗಡಿ ಪೇಟವನ್ನು ಧರಿಸಿದ ಕೈ ಮುಗಿದು ನಿಂತ ಒಬ್ಬ ಗಣ್ಯ ಭಕ್ತನ ಚಿತ್ರವಿದೆ. ಒಟ್ಟಿನಲ್ಲಿ ಇದೊಂದು ದೇವರ ಅತ್ಯಂತ ಅಪರೂಪದ ಪರಿಕಲ್ಪನೆಯ ರೇಖಾ ಚಿತ್ರ.

ಇದೇ ತಾಲ್ಲೂಕಿನ ಬೆಣ್ಣೂರು ಗ್ರಾಮದಲ್ಲಿ ಕರಿಶಿಲೆಯ ದೇವಿ ಸಹಿತ ಸವ್ಯಲಲಿತಾ ಸನದಲ್ಲಿ ಆದಿಶೇಷನ ಮೇಲೆ ಕುಳಿತ ಪಂಚಮುಖಿ ಆಂಜನೇಯನಂತೆ ಕಾಣುವ ಮಧ್ವ



ಸಂಪ್ರದಾಯದ ಭಾರತಿ ರಮಣ ಮುಖ್ಯ ಪ್ರಾಣ ದೇವರ ಶಿಲ್ಪವನ್ನು[೨] ಈ ಅನ್ವೇಷಣೆಯ ಕಾಲದಲ್ಲಿ ಶೋಧಿಸಿದ್ದೆ. ಸುಮಾರಾಗಿ ಇದೇ ಸಮಯದಲ್ಲಿ ಹಳೆ ನಗರ (ಹೊಸ ನಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ)ದಲ್ಲೂ ಕೆಳದಿ ಅರಸುಮನೆತನ ಕಾಲದ ಪಂಚಮುಖಿ ಆಂಜನೇಯ ದೇವರ ದೇವಾಲಯವನ್ನು ಶೋಧಿಸಿದ್ದೆ[೩]. ಇದರಲ್ಲಿಯ ನಿಂತ ಭಂಗಿಯ ಸುಂದರ ಆಂಜನೇಯ ಮೂರ್ತಿಗೆ ಐದು ಮುಖಗಳು : ಮಧ್ಯ ಮತ್ತು ಎಡ - ಬಲಕ್ಕೆ ಕ್ರಮವಾಗಿ ವರಾಹ ಮತ್ತು ನರಸಿಂಹ ಮುಖಗಳಿವೆ. ಮುಂದಿನದು ಕಪಿಮುಖ. ಮಂತ್ರಾಲಯ ಕ್ಷೇತ್ರದ ಸಮೀಪ ಘಾಣದಾಳದ ಪಂಚಮುಖೀ ಮುಖ್ಯಪ್ರಾಣದೇವರ ದೇವಾಲಯವು ಪ್ರಸಿದ್ಧ. ಇಲ್ಲಿಯ ನಿಂತ ಭಂಗಿಯಲ್ಲಿರುವ ಮೂರ್ತಿಯಲ್ಲಿ ಒಂದೊಂದು ದಿಕ್ಕಿಗೆ ಮುಂದಿನಿಂದ ಪ್ರದಕ್ಷಿಣಾಪೂರ್ವಕವಾಗಿ ವಿಷ್ಣು, ನರಸಿಂಹ, ಆಂಜನೇಯ ಮತ್ತು ಗರುಡ ಮೇಲೆ ಹಯಗ್ರೀವ ಮುಖಗಳಿವೆ. ಆದರೆ ಬೆಣ್ಣೂರಿನ ಐದೂ ಕಪಿಮುಖಗಳೆ ಇರುವ ಮೂರ್ತಿಯು ಆದಿಶೇಷನ ಮೇಲೆ ಸವ್ಯ ಲಲಿತಾಸನದ ಭಂಗಿಯಲ್ಲಿದೆ. ಕಿರೀಟದ ಮೇಲೆ ಆದಿಶೇಷನ ಏಳು ಹೆಡೆಗಳು ಛತ್ರಿಯಂತೆ ಬಿಚ್ಚಿವೆ. ಮೇಲಕ್ಕೆತ್ತಲ್ಪಟ್ಟ ಬಾಲವು ಕಿರೀಟದ ಮೇಲೆ ಸುರುಳಿಯಾಗಿದೆ. ಎಡ ತೊಡೆಯ ಮೇಲೆ ವಾಮ ಲಲಿತಾಸನ ಭಂಗಿಯಲ್ಲಿ (ಭಾರತಿ)ದೇವಿಯ ಮೂರ್ತಿಯಿದೆ. ಈ ಮೂರ್ತಿಯ ಛಾಯಾಚಿತ್ರವನ್ನು ಧಾರವಾಡದ ಸುಪ್ರಸಿದ್ಧ ಘನ ವಿದ್ವಾಂಸರೂ, ಶ್ರೋತ್ರೀಯ ಮಾಧ್ವ ಬ್ರಾಹ್ಮಣರೂ ಆದ ಶ್ರೀ ಜಾಲಿಹಾಳ ಆಚಾರ್ಯರಿಗೆ ತೋರಿಸಿ ವಿಚಾರಿಸಿದಾಗ ಅವರು ಚಿತ್ರವನ್ನು ಪರಿಶೀಲಿಸಿ ಅದು ಬಹುಶಃ ಮಧ್ವ ಸಿದ್ಧಾಂತದ ಪ್ರಕಾರ ದೇವ - ದೇವತೆಗಳ ಸ್ಥಾನಗಳಲ್ಲಿ

ಮೂರನೆಯದಲ್ಲಿರುವ ಭಾರತೀ ರಮಣ ಮುಖ್ಯಪ್ರಾಣ ದೇವರೆಂದು ಅಭಿಪ್ರಾಯ ಪಟ್ಟರು. ಮಧ್ವ ಸಂಪ್ರದಾಯದ ಪ್ರಕಾರ ಎಲ್ಲ ಧಾರ್ಮಿಕ ಕಾರ್ಯಗಳನ್ನು ಈ ದೇವರ ಮೂಲಕವೇ ಸರ್ವೋತ್ತಮನಾದ ಲಕ್ಷ್ಮೀ-ನಾರಾಯಣ ದೇವರಿಗೆ ಅರ್ಪಿಸಲಾಗುವುದು ("ಭಾರತೀ ರಮಣ ಮುಖ್ಯಪ್ರಾಣಾಂತರ್ಗತ ಶ್ರೀ ಲಕ್ಷ್ಮೀರಮಣಃ ಪ್ರೀಯತಾಂ")

ಈ ಮೂರ್ತಿಗಳ ರೂಪಣವು ಸು. ೧೧-೧೨ನೆ ಶತಮಾನದ ಅಪರೂಪವಾಗಿ ಕಾಣಬರುವ ವಿಶ್ವರೂಪ ವಿಷ್ಣುಮೂರ್ತಿಗಳನ್ನು[೪] ನೆನಪಿಗೆ ತರುತ್ತದೆ. ಉದಾಹರಣೆಗೆ ಬಸವ ಕಲ್ಯಾಣದ ಜಗದಂಬಾ ದೇವಾಲಯದಲ್ಲಿರುವ ಔತ್ತರೇಯ ಶೈಲಿಯ ಗರುಡಾ ರೂಢ ತ್ರಿಮುಖ ಲಕ್ಷ್ಮೀನಾರಾಯಣ ಮತ್ತು ಹೂಲಿಯ ಅಂಧಾಸುರ ದೇವಾಲಯ ದಲ್ಲಿಯ ಮಕರ ತೋರಣದಲ್ಲಿರುವ ಸವ್ಯ ಲಲಿತಾಸನದಲ್ಲಿರುವ ತ್ರಿಮುಖ ವಿಷ್ಣು. ಇವೆರಡರಲ್ಲಿಯೂ ಮುಂದಿನ ಮುಖ ವಿಷ್ಣು, ಬಲ ಮತ್ತು ಎಡ ಬದಿಯದು ಕ್ರಮವಾಗಿ ನರಸಿಂಹ ಮತ್ತು ವರಾಹ ಪರಮಾತ್ಮನ ವಿಶ್ವರೂಪವನ್ನು ಸಾಂಕೇತಿಕವಾಗಿ ಸಂಕ್ಷಿಪ್ತ ಸ್ವರೂಪದ ಈ ಪ್ರಕಾರದ ಶಿಲ್ಪಗಳಲ್ಲಿ ಗರುಡ ಆಂಜನೇಯನನ್ನಾಗಲಿ ತೋರಿಸಿರು ವುದಿಲ್ಲ.

ಇವೆಲ್ಲವನ್ನು ಗಮನಿಸಿದಾಗ ಬಹುಮಟ್ಟಿಗೆ ಮೇಲೆ ವಿವರಿಸಿದ ಮಧ್ವ ಸಂಪ್ರದಾಯದ ಶಿಲ್ಪ ಪರಂಪರೆಗೆ ಪ್ರಸ್ತುತ ಪಡಿಸಿದ ರೇಖಾಕೃತಿಯೂ ಸೇರಿದ್ದಾಗಿರ ಬಹುದಾಗಿದೆ. ತುಲನಾತ್ಮಕವಾಗಿ ಇದರಲ್ಲಿ ಕೆಲವೊಂದು ವಿಶಿಷ್ಟ ಲಕ್ಷಣಗಳಿದ್ದು ಇದು ಅಪರೂಪದ್ದಾಗಿದೆ. ಮೊದಲನೆಯದಾಗಿ ಇದು ಬಯಲು ಬಂಡೆಯಮೇಲಿರುವುದು. ಎರಡನೆಯದಾಗಿ ಇದೊಂದು ರೇಖಾ ಚಿತ್ರ. ಮೂರನೆಯದಾಗಿ ೨೪ ಬಾಹುಗಳಿರುವುದು. ನಾಲ್ಕನೆಯದಾಗಿ ಕಾಲುಗಳ ಬದಿಯಲ್ಲಿ ಸಿಂಹವಿರುವುದು. ಮತ್ತು ಐದನೆಯದಾಗಿ ಎಡಕ್ಕೆ ಒಬ್ಬ ಭಕ್ತನು ಕೈ ಮುಗಿದು ನಿಂತುಕೊಂಡಿರುವುದು.

ವಿಜಯನಗರ ಸಾಮ್ರಾಜ್ಯದ ಚಕ್ರವರ್ತಿ ಕೃಷ್ಣದೇವರಾಯನ ಕಾಲ (೧೫೦೯-೨೯)ದಲ್ಲಿಸೋಂದಾ ಮಧ್ವ ಮಠದ ಶ್ರೀ ವ್ಯಾಸರಾಯರು ಕೆಲವು ಕಾಲ ಹಂಪಿಯಲ್ಲಿ ವಾಸ್ತವ್ಯವಿದ್ದ ಕಾಲದಲ್ಲಿ ಚಕ್ರವರ್ತಿಗೆ ಸ್ವಲ್ಪ ಕಾಲ ಒದಗಿದ್ದ 'ಕುಹು' ಯೋಗದ ಅನಿಷ್ಟವನ್ನು ಪರಿಹರಿಸಿದರೆಂಬ ಪ್ರತೀತಿಯಿದೆ. ದಾಸವರೇಣ್ಯರಾದ ಶ್ರೀ ಪುರಂದರ ದಾಸರು ಈ ಕಾಲದವರೆ. ಇವರ ಕಾಲದಿಂದ ಮಧ್ವ ಸಂಪ್ರದಾಯವು ಹೆಚ್ಚು ವ್ಯಾಪಕವಾಗಿ ಜನಪ್ರಿಯವಾಯಿತೆಂದು ತೋರುವುದು. ಆನೆಗೊಂದಿಯ ತುಂಗಭದ್ರ ನದಿಯ ನಡುಗಡ್ಡೆಯಲ್ಲಿರುವ ಮಧ್ವ ಯತಿಗಳ ಬೃಂದಾವನಗಳು, ಹಂಪಿಯ ಶ್ರೀ ಸೀತಾರಾಮ ಚಂದ್ರ ಮತ್ತು ಯಂತ್ರೋದ್ಧಾರಕ ಶ್ರೀ ಹನುಮಂತದೇವರ ದೇವಾಲಯಗಳು ಸ್ವಲ್ಪ ಹೆಚ್ಚು ಕಡಿಮೆ ಈ ಕಾಲದ ಸುತ್ತಮುತ್ತ ಅವಧಿಗೆ ಸೇರಿದವು. ಹೀಗೆ ಮಧ್ವ ಸಿದ್ಧಾಂತ ಮತ್ತು ಸಂಪ್ರದಾಯದ ಪ್ರಭಾವದಿಂದ ಹೊಸ ಮೂರ್ತಿ ಪರಿಕಲ್ಪನೆಗಳಿಗೆ ಎಡೆಯಾಗಿ

ಹೊಸ ಹೊಸ ಮೂರ್ತಿ ಶಿಲ್ಪಗಳನ್ನು ಆರಾಧನೆಗೆ ರೂಪಿಸಲಾಯಿತು. ಮೇಲೆ ಪರಿಶೀಲಿಸಿದ ಪಂಚಮುಖಿ ಆಂಜನೇಯ (ಅಥವ ಭಾರತೀ ರಮಣ ಮುಖ್ಯಪ್ರಾಣ) ದೇವರ ಮೂರ್ತಿಗಳು ಶೈಲಿಯಿಂದ ವಿಜಯನಗರ ಉತ್ತರ ಕಾಲೀನ ಹಾಗು ಅನಂತರ ಕಾಲದವಾಗಿದ್ದು ಈ ಸಂಪ್ರದಾಯಕ್ಕೆ ಸೇರಿದವೆಂದು ಹೇಳಬಹುದು. ಪ್ರಪ್ರಥಮ ಬಾರಿಗೆ ಕಾಣಿಸಿಕೊಳ್ಳುವ ವಿವಿಧ ಪ್ರಕಾರಗಳ ಈ ಮೂರ್ತಿಗಳು ವಿಜಯನಗರ ಕಾಲದ ಮೂರ್ತಿ ಶಿಲ್ಪ ಪರಂಪರೆಗೆ ವಿಶಿಷ್ಟ ಕಾಣಿಕೆಯಾಗಿವೆ.

ಗ್ರಂಥಸೂಚಿ

೧. ಸುಂದರ, ಅ.; ೧೯೭೩ :"ಗಂಗಾವತಿ ತಾಲ್ಲೂಕಿನ ಪುರಾತತ್ವ ಅವಶೇಷಗಳು" ಕರ್ನಾಟಕ ಭಾರತಿ, ಸಂಪುಟ ೬, ಸಂಚಿಕೆ ೧. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨. " ; ೧೯೭೪ : "ಎ ರೇರ್ ಭಾರತಿ ರಮಣ ಮುಖ್ಯಪ್ರಾಣ (ವಾಯು ದೇವ) ಇಮೇಜ್ ಫ್ರಮ್ ಬೆಣ್ಣೂರ್ "ಸ್ಟಡೀಸ್ ಇನ್ ಇಂಡಾಲಜಿ ಅಂಡ್ ಮೆಡಿಯೆವಲ್ ಹಿಸ್ಟ್ರಿ, (ಜಿ.ಹೆಚ್.ಖರೆ ಫೆಲಿಸಿಟೇಶನ್ ವಾಲ್ಯೂಮ್) ಜೋಶಿ ಅಂಡ್ ಲೋಖಂಡೆ ಪ್ರಕಾಶನ, ಪುಣೆ.

೩. " ; ೧೯೭೯ :"ಸಮ್ ಆಸ್ಪೆಕ್ಟ್ಸ್ ಆಫ್ ನಿಯೋಲಿಥಿಕ್ ಸೈಟ್ಸ್ ಇನ್ ದಿ ಮಲ್ನಾಡ್ ಏರಿಯ", ಕ್ವಾರ್ಟರ್ಲಿ ಜರ್ನಲ್ ಆಫ್ ಮಿಥಿಕ್ ಸೊಸೈಟಿ, ಬೆಂಗಳೂರು

೪. " ; ೧೯೯೩ :"ಸಮ್ ವಿಷ್ಣು ಸ್ಕಲ್ಪ್ಚರ್ಸ್ ಆಫ್ ದಿ ಅರ್ಲಿ ಕದಂಬ ಅಂಡ್ ಮಾಧವ ವಿಶ್ವರೂಪ ಫಾರ್ಮ್ಸ್ ಆಫ್ ದಿ ಮೆಡಿಯೆವಲ್ ಪೀರಿಯಡ್" ವಿಷ್ಣು ಇನ್ ಆರ್ಟ್, ಥಾಟ್ ಅಂಡ್ ಲಿಟರೇಚರ್, ಬಿರ್ಲ ಆರ್ಕಿಯಾಲಾಜಿಕಲ್ ಅಂಡ್ ಕಲ್ಚರಲ್ ರಿಸರ್ಚ್ ಇನ್ಸ್ಟಿಟ್ಯೂಟ್, ಹೈದಾರಾಬಾದ್.

44. THE MYSTERY OF STONE AGES - THE VINCINITY OF CITY OF VIJAYANAGARA

B. ABDUL MANNAN

A SHORT HISTROY OF THE EARLIEST MAN

It has come to light that Man has been living on this earth for the past 2.2 million years. The earliest skeletal remains found is of a woman from Africa. This skeletal remains was named as "Luci" and she belongs to the Australopithecus, the earliest species of mankind, a slightly bend forward with a height of less than one and half a meter. The modern species of man belongs to Homo - sapians and had been living since past around 30,000 years.

Man came to know the making of metal since past 5,000 years only, earlier to that he was living on other materilas and stone. Stone, tools and implements were made which were simple in nature like hand cleavers, axes, throwing stones, sling stones, hammers etc., They were not of the modern metal ones. Earlier period they were crude and later on chipped and further in New stone age or mesolithic periods they were polished and nearing the modern type of materilas. In the early stone ages people were living in caves, with fear of rain, thunder and wild animals. The quest for water and food was continuous and making of stone implements for hunting was their life. Giving birth to a child and bringing up was difficult task.

Alas, they were our ancesstars without any modern facilies.

MUSIC OUT OF STONES DURING STONE AGES

An Article appeared in `Vijaya Times' Hubli on 16th June 2004 about the Rock Art. The source of the article was BBC London U.K. This is titled as `INDIAN ROCK MUSIC FROM THE HOARY PAST". That the site of Kuppagal had remained silent since 1892". Dr. Nicole Boivin, of the university of Cambridge, U.K., also created Web site report on the Rock Art at Kuppagal dyke hill, Sanganakal, Sanna Rasamma Hillock and Musical stones of Kuppagal Dyke Hill.

It was Bruce Foote who in 1884 explored the stone - age sites. He explored many sites and ashmounts and recorded that there are more than 100 sites in Bellary district alone and said that Bellary District is one the richest in the world and in 1892. Fawcett red this paper before the congress of Orientalists and published in Asiatic Quaterly review.

On 19th June 2004 another article appeared in the 'VIJAYA TIMES' from Yelburga says 'The Musical notes produced by the pillars at Vijaya Vittala temple in Hampi are well known. There are some rocks lying at Linganabandi village which is a wonder of nature which is producing Musical Notes when struck with small stones'.

A SETTLEMENT SITE OF NEOLETHIC PEOPLE AT MASUALANAGUDDA

In the vicinity of the glorious past of Vijayanagara city there are many centres of rock Arts, in the hills and on the roadside boulders, namely behind Virupaksha temple in the boulder on he roadside, infront of Krishna temple, near Malevantha, near Endatapura, in the hills near Kariganur, Papinayakanahalli and in the hillocks to the east of Achutaraya temple. One of the important red-oachre painting in Masulayanagudda. This hillock is situated on the North - Eastern side of Vijaya Vittala temple. It is an habitation site of the stone age people, there is a way to cross this bouluders by a slight climbing. Crossing these boulders we land into a spacious plain ground of about 300 feet in diameter. All around this ground are rocks raising to a height of almost 100 feet., and there are caves in these rocks. Looking to the right after entering we see a granite rock of about 8 feet in height facing east on which a bullock is bruisied. Above this rock another rock stands like an arrow head pointing east. It is a large natural stone rock and on the left side i.e. in the Southern side of this arrow head rock, there is a painting of red oachre. It is a hunting scene of a crocodile in form of few lines and this might have been the reason that hillock is named after this scene as Musulayanagudda. The drawings belong to the stone-age man. The red oachre paintings are of Megalithic ages or of much earlier than Megalithic, that of stone ages and like that of Bhimbetka and other pintings at Anegundi etc.,

On this rock there are marks at several places. When we strike on the same point each of the spot gives a different note of sound. Thus each place produces different note which is listened clearly. In this picture of red oachre there are two persons standing as though they are enacting the hunting scene of killing a crocodile. The legs of the crocodile are pointed upwards as though it is dead. The two others are like coming from other side and one is standing near a live crocodle. A Neolithic axe was also found on the suface of the site clearly showing that this place was a habitation site of the Neolithic people. It would not be unjustifiable to imagine that the stone of the stone pillars of Vijaya Vittala temple in it were meant to create music must have been quarried from the near by places. The thought of Musical pillars of the temple must have been derived from the Neolithic or Palaeolithic people's deed of creating music from the stones.

CONCLUSION

Simaltaneoulsy I would like to bring to notice that such Musical stones are present not only in Kuppagal dyke hills or near Linganabandi but near all Neolithic places at Alakundi, Kariganur, Papinayakanahalli etc., Probably it was one of the best amusement, of those people. In Kuppagal the stone is of 8 feet in length and is lying on the boulders. It has been extensively used as a Musical stone and almost on all dyke rocks in the lower area have marks to show that they have been used as stones to create Musical sounds. In a hillock near Kariganur they are as big as more than 10 feet in height and flat which produce sound which can be heard from far off places.

When closely oberserving a granite it is seen that it is made of black and white material; the black is dotted in the white material. The dots of Musical stones are smaller and closer when compared to the normal granite. The contents and the shape of rock produces different notes of sound when it is hit with another smaller stone. The dyke stone is heavy and there are more metallic contents as such they produece matallic sound.

An exhibition of photographs on Rock Art was conducted at Hampi Utsav in 1998. The photographs of Masualayangudda and interior habitation sites and painting, caves and musical stones were shown with a note below the photographs. Then Hon'ble Minister for Kannada and Culture Govt. of Karnataka, Bangalore

opened the Exhibition and suggested the authorities to document the photographs of the Exhibition.

The idea of conducting such an exhibition was explained by the scholar Melanie Blackmore who conducted the exhibition of photographs of Kuppagal, Alakundi, Sanganakal and Tekkalakota at Ailington, U.K. during 1998 and encouraged me to do so. Further, it was in the company of Dr. Manjunath that I had visited the site of Masulayanagudda and photographed for the exhibition.

The South Indian Culture is very rich which is derived from the past thousands of years and the development is a continous process. The study of such a subject rests with the writers and scholars. It is better if it reaches the common man who can understand the importance of drawings, bruisings, caves etc., The quarying of such important rocks and places may not take place in future.

SOURCES

* The report on Ashmound excavations at Kuppagal by Ganesh Gangadhar Mujumdar and Narhar Rajguru.
* Journal of Asiatic society Bengal volume V page 670 by Newbold
* Madras Journal of Literature and Science, volume VIII page 130.
* Saganakal excavations 1964-65 by Z.D. Ansari and M.S. Nagaraja Rao.
* The Bellary District Gazetteer.
* The early chamber and tombs of South India by Dr. A.Sundara.

ವಿಜಯನಗರ ಎಂಬ ಹೆಸರನ್ನು ಕೇಳಿದ ಕೂಡಲೇ, ಕನ್ನಡಿಗರಿಗೆ, ಕರ್ನಾಟಕದ ಜನಗಳಿಗೆ ಮೈನವಿರೇಳುತ್ತದೆ. ರೋಮಾಂಚನವಾಗುತ್ತದೆ ಮತ್ತು ಧನ್ಯತೆಯ ಭಾವ ಹೊರಹೊಮ್ಮುತ್ತದೆ. ಇದಕ್ಕೆ ಮುಖ್ಯ ಕಾರಣ ಆ ಕಾಲದ ಸಾಂಸ್ಕೃತಿಕ ಸಂಪತ್ತು. ಐದು ಶತಮಾನಗಳಿಂದ ದೇಶೀಯ ಹಾಗೂ ವಿದೇಶೀಯರು ಇದನ್ನು ಮೆಚ್ಚಿಕೊಳ್ಳುತ್ತಿದ್ದಾರೆ. ಇದು ನಮಗೆ ಸ್ಫೂರ್ತಿಯ ನೆಲೆಯಾಗಿದೆ. ಇದಕ್ಕಾಗಿ ಕರ್ನಾಟಕ ಸರ್ಕಾರ ಪ್ರತಿ ವರ್ಷವೂ ಹಂಪಿಯ ಉತ್ಸವವನ್ನು ಆಚರಿಸುತ್ತಿದೆ. ಇದರ ಅಂಗವಾಗಿ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆ ವಿಚಾರ ಸಂಕಿರಣವನ್ನು ಪ್ರತಿವರ್ಷವೂ ಏರ್ಪಡಿಸುತ್ತಿದೆ. ಇದರಲ್ಲಿ ಇತಿಹಾಸ ಸಾಹಿತ್ಯಗಳ ವಿದ್ವಾಂಸರು, ವಿಜಯನಗರವನ್ನು ಕುರಿತಾದ ಸಂಶೋಧನ ಲೇಖನಗಳನ್ನು ಮಂಡಿಸುತ್ತಾ ಬಂದಿದ್ದಾರೆ. ಈ ಮಾಲಿಕೆಯಲ್ಲಿ ಇದು ಹನ್ನೊಂದನೆಯ ಸಂಪುಟ. ಸಂಸ್ಕೃತಿಯಲ್ಲಿ ಆಸಕ್ತಿ ಇರುವ ಎಲ್ಲರಿಗೂ ಇದು ರೋಚಕವೆನಿಸುತ್ತದೆ.



ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ
ಅರಮನೆ ಆವರಣ, ಮೈಸೂರು - 560 001